ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ನಂ—೧೦

ಶ್ರೀ ವ್ಯಾಸಮಹರ್ಷಿಪ್ರಣೀತಂ

ಶ್ರೀ ಕಾಲಿಕಾಪುರಾಣಂ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದವಿವರಣೆಗಳೊಡನೆ)

ಮೊದಲನೆಯ ಭಾಗ

(೧—೨೯ ಅಧ್ಯಾಯಗಳು)

ಅನುವಾದಕ:

ಹಾಸನದ ಪಂಡಿತ್ ವೆಂಕಟೆರಾವ್

ಮೈಸೂರು

ಶ್ರೀ ಬಸವೇಶ್ವರ ಎಲೆಕ್ಟ್ರಿಕ್ ಪ್ರೆಸ್

೧೯೪೪

ಬಾಲಾರ್ಕಾಯುತಸುಪ್ರಭಾಂ ತ್ರಿನಯನಾಂ ಭಾಸ್ವತ್ಸರೋಜೈರ್ಯುತಾಂ
ಮಾಲಾಂ ಸಂದಧತೀಂ ಮನೋಹರತನುಂ ಮಂದಸ್ಮಿತೋದ್ಯನ್ಮುಖೀಂ ।
ಮಂಪಂ ಮಂದಮುಪೇಯುಷೀಂ ವರಯುತಾಂ ಶಂಭುಂ ಜಗನ್ಮೋಹಿನೀಂ
ವಂದೇ ದೇವಸುರೇಂದ್ರವಂದಿತಪದಾಮಿಷ್ಟಾರ್ಥದಾಂ ಪಾರ್ವತೀಂ ॥

ಪುಸ್ತಾವನಾ.

ಸಂಸ್ಕೃತ ಸಾಹಿತ್ಯದಲ್ಲಿ ಪುರಾಣಗಳಿಗೆ ಒಂದು ಗಣ್ಯಸ್ಥಾನವಿರುವುದು ಸರ್ವರಿಗೂ ವಿದಿತವಾಗಿಯೇ ಇದೆ. ಸ್ಥಾನವಿರುವುದು ಮಾತ್ರವಲ್ಲ. ಈ ವಿಧವಾದ ಗ್ರಂಥಗಳು ಮತ್ತಾವ ಭಾಷೆಯಲ್ಲಿಯೂ ಇಲ್ಲವೆಂದೇ ಹೇಳಬಹುದು. ಅಲ್ಪಸ್ವಲ್ಪವಿದ್ದರೂ ಸಂಸ್ಕೃತ ಪುರಾಣಗಳ ಅನುಕರಣದಿಂದಲೇ ಅವುಗಳನ್ನು ಬರೆದಿರುವುದರಿಂದ, ವಿಷಯ ನಿರೂಪಣೆಯಲ್ಲಿಯೂ, ಭಾಷಾಶೈಲಿಯಲ್ಲಿಯೂ ಸಂಸ್ಕೃತ ಗ್ರಂಥಗಳನ್ನು ಎಂದಿಗೂ ಸರಿಗಟ್ಟಲಾರವು. ಇದಲ್ಲದೆ ಅನೇಕ ಶತಮಾನಗಳಿಂದ ಈ ಪುರಾಣಗಳೂ ಅವುಗಳಲ್ಲಿ ಹೇಳಿರುವ ವಿಷಯಗಳೂ ಈ ದೇಶದ ಜನರ ಸಂಸ್ಕೃತಿಯ ಮೇಲೆ ತಮ್ಮ ಪ್ರಭಾವವನ್ನು ಬೀರಿ, ಜನರ ನಡೆನುಡಿಗಳು ಸನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡಲು ಬಹುಮಟ್ಟಿಗೆ ಸಹಕಾರಿಯಾಗಿರುವವು.

ಹದಿನೆಂಟು ಮಹಾಪುರಾಣಗಳೂ, ಹದಿನೆಂಟು ಉಪಪುರಾಣಗಳೂ ಸೇರಿ ಒಟ್ಟು ಮೂವತ್ತಾರು ಪುರಾಣಗಳಿರುವವು. ಉಪಪುರಾಣಗಳಿಂದ ಮಾತ್ರಕ್ಕೆ ಅವು ವಿಷಯನಿರೂಪಣೆಯಲ್ಲಾಗಲಿ, ಗ್ರಂಥಪ್ರಮಾಣದಲ್ಲಾಗಲಿ ಮಹಾಪುರಾಣಗಳಿಗಿಂತ ಕಡಿಮೆಯೆಂದು ಭಾವಿಸಬಾರದು. ವ್ಯಾಸಮಹರ್ಷಿಯು ಹದಿನೆಂಟು ಮಹಾಪುರಾಣಗಳನ್ನು ರಚಿಸಿ, ಹೇಳಬೇಕಾದ ವಿಷಯಗಳು ಇನ್ನೂ ಉಳಿದಿದ್ದರಿಂದ ಮತ್ತೆ ಹದಿನೆಂಟು ಪುರಾಣಗಳನ್ನು ರಚಿಸಿ ಅವಕ್ಕೆ ಉಪಪುರಾಣಗಳೆಂದು ಹೆಸರಿಟ್ಟಿರಬಹುದು. ಏಕೆಂದರೆ, ಉಪಪುರಾಣಗಳಲ್ಲಿ ಪ್ರತಿಪಾದಿತವಾಗಿರುವ ಗಹನವಿಷಯಗಳು ಈ ವಿಷಯಗಳನ್ನು ಸಮರ್ಥನೆಮಾಡುವವು. ಈ ಕಾಲಿಕಾಪುರಾಣವು ಉಪಪುರಾಣಗಳಲ್ಲಿ ಒಂದಾಗಿದೆ. ಜಗನ್ಮಾತೆಯಾದ ಕಾಲಿಯ ಅವತಾರಕಥನವೂ ಮತ್ತು ದೇವಿಯ ನಾನಾಮೂರ್ತಿಗಳನ್ನು ಆರಾಧಿಸುವ ವಿಶೇಷವಿಧಿನಿಯಮಗಳೂ, ಜಗತ್ಸೃಷ್ಟಿ, ಪರಬ್ರಹ್ಮಸ್ವರೂಪ ಮೊದಲಾದ ತತ್ತ್ವವಿವರಣೆಯೂ, ರಾಜನೀತಿ ಮತ್ತು ಸದಾಚಾರಗಳೂ ಈ ಪುರಾಣದಲ್ಲಿ ಪ್ರತಿಪಾದಿತವಾಗಿವೆ. ೧-೨ ಭಾಗಗಳಲ್ಲಿ ಉಕ್ತವಾಗಿರುವ ದೇವಿಯ ಅವತಾರಕಥನವು ಶಿವಪುರಾಣಾದಿ ಇತರ ಪುರಾಣಗಳಲ್ಲಿ ಹೇಳಿದ್ದರೂ ದೇವಿಯನ್ನು ವಿವಿಧರೀತಿಯಿಂದ ಆರಾಧಿಸುವ ಕ್ರಮವೂ, ಮಂತ್ರತಂತ್ರಗಳೂ, ಕವಚ, ಸ್ತೋತ್ರ, ಧ್ಯಾನ, ನ್ಯಾಸ ಮೊದಲಾದ ಪೂಜಾವಿಧಾನಗಳು ಮತ್ತೆಲ್ಲಿಯೂ ಇಷ್ಟು

ವಿಸ್ತಾರವಾಗಿ ವಿವರಿಸಿರುವುದಿಲ್ಲ. ಆದುದರಿಂದ ದೇವಿಯನ್ನು ಉಪಾಸನೆಮಾಡು ವವರಿಗೆ ಈ ಗ್ರಂಥವಿಂದ ಬಹುಸಹಾಯವಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ಈ ಗ್ರಂಥರಚನೆಯಲ್ಲಿ, ಬೊಂಬಾಯಿನ ವೆಂಕಟೇಶ್ವರ ಪ್ರೆಸ್ಸಿನಲ್ಲಿ ದೇವನಾಗರೀ ಲಿಪಿಯಲ್ಲಿ ಪ್ರಿಂಟಾದ ಪುಸ್ತಕವನ್ನೇ ಮಾತೃಕೆಯಾಗಿ ಉಪಯೋಗಿಸಿದೆ. ಈ ಪುಸ್ತಕ ದಲ್ಲಿ ಮುದ್ರಣಸ್ಖಾಲಿತ್ಯಗಳು ಹೆಚ್ಚಾಗಿರುವವು. ಬೇರೆ ಪ್ರತಿ ಇಲ್ಲದ್ದರಿಂದ ಇದನ್ನೇ ಸಾಧ್ಯವಾದಮಟ್ಟಿಗೂ ಶೋಧಿಸಿ ಬರೆದಿರುತ್ತೇನೆ. ಶ್ರೀ ವಿದ್ಯಾರ್ಣವ, ಶಾರದಾತಿಲಕ, ಕಾಲೀತಂತ್ರ, ಮಂತ್ರಾಭಿಧಾನ, ಮಂತ್ರಮಹೋದಧಿ, ಕುಲಾರ್ಣವತಂತ್ರ ಮೊದಲಾದ ಗ್ರಂಥಗಳನ್ನು ಸಹಾಯಗ್ರಂಥಗಳನ್ನಾಗಿ ಉಪಯೋಗಿಸಿರುತ್ತೇನೆ. ತಂತ್ರಗಳಲ್ಲಿ, ಮಹಾಮಾಯಾಕಲ್ಪತಂತ್ರ, ದುರ್ಗಾತಂತ್ರ, ವೈಷ್ಣವೀತಂತ್ರ, ಕಾಲೀತಂತ್ರ ಮೊದ ಲಾದ ಅನೇಕ ತಂತ್ರಗಳಿರುವವು. ಇವುಗಳಲ್ಲಿ ಹೇಳಿರುವ ಪೂಜಾದಿಕ್ರಮಗಳಲ್ಲಿ ಸ್ವಲ್ಪ ವ್ಯತ್ಯಾಸವಿದ್ದರೂ ಮುಖ್ಯವಿಷಯಗಳಲ್ಲಿ ವಿಶೇಷ ಭೇದವೇನೂ ಇರುವುದಿಲ್ಲ.

ಪುರಾಣಗಳ ಮೂಲಕ ಜನರಿಗೆ ಸದ್ಧರ್ಮವನ್ನು ಬೋಧಿಸಲು ಪೂರ್ವೀಕರು ಹಲವು ಮಾರ್ಗಗಳನ್ನು ಅನುಸರಿಸುತ್ತಿದ್ದರು. ವಿದ್ಯಾವಂತರಾದವರು ಸಂಸ್ಕೃತ ಭಾಷೆಯಲ್ಲಿರುವ ಮೂಲಗ್ರಂಥಗಳನ್ನೇ ಓದಿ ತಿಳಿದುಕೊಳ್ಳುತ್ತಿದ್ದರು. ಎಷ್ಟೇ ವಿದ್ಯಾ ವಂತನಾದರೂ ಪುರಾಣಪರಿಚಯವಿಲ್ಲದಿದ್ದರೆ ಅಂತಹ ಪುರುಷನು ಪಂಡಿತನೆಂದು ಗಣಿಸಲ್ಪಡುತ್ತಿರಲಿಲ್ಲ. ಆದುದರಿಂದ ಪುರಾಣವ್ಯಾಸಂಗವು ವಿದ್ವತ್ತಿಗೆ, ಅದರಲ್ಲೂ ವೇದಾಂತವ್ಯಾಸಂಗಕ್ಕೆ ಅತ್ಯವಶ್ಯಕವಾಗಿರುವುದು. ಸಂಸ್ಕೃತವನ್ನು ತಿಳಿಯದ ಸ್ತ್ರೀ ಬಾಲಕರಾದಿಯಾದ ಸಾಮಾನ್ಯಜನರ ಅನುಕೂಲತೆಗಾಗಿ ದೇಶಭಾಷೆಯಲ್ಲಿ ಪುರಾಣ ವನ್ನು ವಿವರಿಸಿ ಹೇಳುವ ಪದ್ಧತಿಯು ಹಿಂದಿನಿಂದಲೂ ಬಂದಿರುವುದು. ಈಗಲೂ ಅಲ್ಲಲ್ಲಿ ಈ ಪದ್ಧತಿಯು ನಡೆದುಬರುತ್ತಿರುವುದು. ಈಚಿಗೆ ಸಂಸ್ಕೃತಭಾಷಾಭ್ಯಾಸವು ವಿರಳವಾಗುತ್ತಿರುವುದರಿಂದಲೂ, ಸಂಸ್ಕೃತಭಾಷೆಯನ್ನು ತಿಳಿಯದ ಸಾಮಾನ್ಯ ಜನರಿಗೆ ಈ ಗ್ರಂಥಗಳು ಕನ್ನಡಭಾಷೆಯಲ್ಲಿ ಮುದ್ರಿತವಾಗಿ ದೊರೆಯದೇ ಇರುವುದ ರಿಂದಲೂ ಇಂತಹ ಉತ್ಕೃಷ್ಟಗ್ರಂಥಗಳ ಪ್ರಯೋಜನವು ಸಾಮಾನ್ಯಜನರಿಗೆ ಲಭಿಸು ತ್ತಿಲ್ಲ. ತತ್ತ್ವವಿಚಾರವನ್ನೂ, ಸತ್ಕರ್ಮಾಚರಣೆಯನ್ನೂ, ದೇವತೋಪಾಸನಕ್ರಮ ವನ್ನೂ ತಿಳಿದುಕೊಳ್ಳಬೇಕೆಂದು ಸಜ್ಜನರಿಗೆ ಯಾವಾಗಲೂ ಆಸೆಯಿದ್ದೇ ಇರುವುದು. ಇಂತಹ ಸಜ್ಜನರ ಸದುದ್ದೇಶವನ್ನು ನೆರವೇರಿಸುವುದಕ್ಕಾಗಿಯೂ, ಸನಾತನಧರ್ಮ

ರಹಸ್ಯಗಳನ್ನು ತಿಳಿದುಕೊಂಡು ಜನರು ಸತ್ಪ್ರಜೆಗಳಾಗಲೆಂದೂ ಉದ್ದೇಶಿಸಿ, ವಿದ್ಯಾ ವಿನಯಸಂಪನ್ನರೂ, ಗುಣೈಕಪಕ್ಷಪಾತಿಗಳೂ, ಪ್ರಜಾವತ್ಸಲರೂ, ದೈವಭಕ್ತಿಯುತರೂ ಆದ ನಮ್ಮನ್ನಾಳುವ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಅಪ್ಪಣೆಮಾಡಿರುವಂತೆ ಈ ಗ್ರಂಥವನ್ನು ಯಥಾಮತಿ ಬರೆದಿರುತ್ತೇನೆ. ಈ ಗ್ರಂಥಪಠನದಿಂದ ಜನರಲ್ಲಿ ದೈವಭಕ್ತಿಯೂ, ರಾಜಭಕ್ತಿಯೂ ಉಂಟಾದಲ್ಲಿ ನನ್ನ ಶ್ರಮವು ಸಾರ್ಥಕವಾಯಿತೆಂದು ಭಾವಿಸುತ್ತೇನೆ.

ಮೇಲೆ ಹೇಳಿದ ವಿಧಾನಗಳಲ್ಲದೆ, ಜನರಿಗೆ ದೇವಿಯಲ್ಲಿ ಭಕ್ತಿಯುಂಟಾಗುವಂತೆ ಮಾಡಲು ಆಧುನಿಕವಾದ ಮತ್ತೊಂದು ಮಾರ್ಗವಿರುವುದು. ಚಲನಚಿತ್ರದ ಮೂಲಕ ದೇವಿಯ ಅದ್ಭುತಲೀಲೆಗಳನ್ನು ರಮ್ಯವಾದ ಕಥೆಗಳಿಂದ ಸೇರಿಸಿ ಪ್ರದರ್ಶಿಸಿದರೆ, ಬಾಲಕರು, ಸ್ತ್ರೀಯರು, ವಿದ್ಯಾವಂತರು, ಅವಿದ್ಯಾವಂತರು, ಇತರರು ಎಲ್ಲರೂ ಇದನ್ನು ನೋಡಿ ಆನಂದಪಡುವುದಲ್ಲದೆ, ಅವರಲ್ಲಿ ದೈವಭಕ್ತಿಯು ಹುಟ್ಟಿ ಅಭಿವೃದ್ಧಿಯಾಗುವುದು. ಪುರಾಣಕಥೆಗಳನ್ನು ಪ್ರದರ್ಶಿಸುವ ಹಲಕೆಲವು ಚಿತ್ರಗಳಿದ್ದರೂ ದೇವಿಯ ಲೀಲೆಗಳನ್ನು ತಿಳಿಸುವ ಚಿತ್ರವೊಂದೂ ಇದುವರಿಗೆ ಪ್ರಕಟವಾಗಿಲ್ಲ. ಚಲನಚಿತ್ರ ನಿರ್ಮಾಣದಲ್ಲಿ ತಕ್ಕಮಟ್ಟಿಗೆ ಪರಿಶ್ರಮವಿರುವುದರಿಂದ ಯುದ್ಧಪರಿಸ್ಥಿತಿಯು ಉತ್ತಮಗೊಂಡು, ದೇವಿಯ ಅನುಗ್ರಹವೂ, ದೊಡ್ಡವರ ಆಶ್ರಯವೂ ದೊರೆತಲ್ಲಿ ಇಂತಹ ಒಂದೆರಡು ಚಿತ್ರಗಳನ್ನು ತಯಾರಿಸಬೇಕೆಂದು ಉದ್ದೇಶವಿರುತ್ತೆ.

ಈ ಪುರಾಣದಲ್ಲಿ ಸ್ಕಂಧ, ಕಾಂಡ ಮೊದಲಾದ ವಿಭಾಗಗಳಿಲ್ಲದ್ದರಿಂದಲೂ ಒಂದೇ ಸಂಚಿಕೆಯಲ್ಲಿ ಮುದ್ರಿಸಲು ಸಾಧ್ಯವಿಲ್ಲವಾದುದರಿಂದಲೂ ಇದನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ಮುದ್ರಿಸಿರುತ್ತೆ. ಒಂದೆರಡನೆಯ ಭಾಗಗಳಲ್ಲಿ ದೇವಿಯ ಅವತಾರಕಥಾಭಾಗವೂ, ಮೂರು ನಾಲ್ಕನೆಯ ಭಾಗಗಳಲ್ಲಿ ದೇವಿಯನ್ನು ಉಪಾಸನೆ ಮಾಡುವ ವಿವಿಧಕ್ರಮಗಳೂ, ರಾಜನೀತಿ ಸದಾಚಾರಗಳೂ ವರ್ಣಿತವಾಗಿವೆ.

ಈ ಗ್ರಂಥದ ಅನುವಾದದಲ್ಲಿ ಕಂಡುಬರುವ ನ್ಯೂನತೆಗಳನ್ನೂ ದೋಷಗಳನ್ನೂ ಪ್ರಾಜ್ಞರು ಮನ್ನಿಸಬೇಕೆಂದು ವಿನಯದಿಂದ ಪ್ರಾರ್ಥಿಸುವೆನು.

ಮೈಸೂರು
ತಾರಣ ಸಂ॥ ಆಷಾಢಶುಕ್ಲ ದ್ವಾದಶಿ
ತಾ॥ 3-7-1944

ಹಾಸನದ ಪಂಡಿತ್ ವೆಂಕಟರಾವ್

ಶ್ರೀ ಕಾಲಿಕಾಪುರಾಣದಲ್ಲಿ ಮೊದಲನೆಯ ಭಾಗದ
ವಿಷಯಾನುಕ್ರಮಣಿಕೆ.

ಮೊದಲನೆಯ ಅಧ್ಯಾಯ— ಪುಟ ಸಂಖ್ಯೆ

ಮಂಗಳಾಚರಣೆ—ಜಗನ್ಮಾತೆಯು ಸತೀರೂಪವನ್ನು ಕೈಕೊಂಡು ಶಿವನನ್ನು ಹೇಗೆ ಮೋಹಗೊಳಿಸಿದಳು ? ದಕ್ಷಬ್ರಹ್ಮನ ಮೇಲಿನ ಕೋಪದಿಂದ ಶರೀರಪರಿತ್ಯಾಗಮಾಡಿ, ಪರ್ವತರಾಜನ ಪುತ್ರಿಯಾಗಿ ಜನಿಸಿ ಈಶ್ವರನ ಅರ್ಧಾಂಗಿಯು ಹೇಗಾದಳು? ಈ ಮೊದಲಾದ ಪ್ರಶ್ನೆಗಳನ್ನು ಮಾಡಿದ ಕಮಠಾದಿಋಷಿಗಳಿಗೆ ಮಾರ್ಕಂಡೇಯಮುನಿಯು ಪ್ರತ್ಯುತ್ತರರೂಪವಾಗಿ ಕಾಲಿಕಾಪುರಾಣವನ್ನು ಹೇಳಲು ಪ್ರಾರಂಭಿಸುವುದು—ಬ್ರಹ್ಮನ ಮನಸ್ಸಿನಿಂದ ಸಂಧ್ಯೆಯ ಉತ್ಪತ್ತಿ—ಅವನ ಮನಸ್ಸಿನಿಂದಲೇ ಕಾಮನ ಪ್ರಾದುರ್ಭವವು. 1-17

ಎರಡನೆಯ ಅಧ್ಯಾಯ—

ಸಂಧ್ಯೆಯಲ್ಲಿ ಬ್ರಹ್ಮಾದಿಗಳು ಅನುರಕ್ತರಾಗಿ ಕಾಮಪರವಶರಾಗುವುದು—ಇವರ ಕಾಮವಿಕಾರವನ್ನು ನೋಡಿ ಈಶ್ವರನು ಇವರನ್ನು ಎಚ್ಚರಿಸುವುದು—ಬ್ರಹ್ಮನು ಕಾಮನಮೇಲೆ ಕೋಪಗೊಳ್ಳುವುದು. 18-31

ಮೂರನೆಯ ಅಧ್ಯಾಯ—

ಕಾಮನಿಗೆ ಬ್ರಹ್ಮನ ಶಾಪವು—ದಕ್ಷಬ್ರಹ್ಮನು ತನ್ನ ಸ್ವೇದದಿಂದ ಜನಿಸಿದ ರತಿಯನ್ನು ಕಾಮನಿಗೆ ಭಾರ್ಯಾರ್ಥವಾಗಿ ಕೊಟ್ಟು ತನ್ನ ಸ್ಥಾನಕ್ಕೆ ಹೊರಟುಹೋಗುವುದು. 32-44

ನಾಲ್ಕನೆಯ ಅಧ್ಯಾಯ—

ಶಿವನನ್ನು ಮೋಹಗೊಳಿಸೆಂದು ಕಾಮನಿಗೆ ಬ್ರಹ್ಮನ ಆಜ್ಞೆಯು—ಬ್ರಹ್ಮನ ನಿಃಶ್ವಾಸದಿಂದ ವಸಂತನ ಆವಿರ್ಭಾವವು—ಶಿವನನ್ನು

ಮೋಹಗೊಳಿಸಬಲ್ಲ ಸ್ತ್ರೀಯು ಯಾವಳಿರುವಳೆಂದು ಬ್ರಹ್ಮನು ವಿಚಾರಮಾಡುವುದು.

ಐದನೆಯ ಅಧ್ಯಾಯ—

ಬ್ರಹ್ಮನ ಮಾತಿನಂತೆ, ವಿಷ್ಣುಮಾಯೆಯು ತನಗೆ ಮಗಳಾಗಿ ಹರನನ್ನು ಮೋಹಗೊಳಿಸುವಂತೆ ದೇವಿಯನ್ನು ಪ್ರಾರ್ಥಿಸಬೇಕೆಂದು ಆಲೋಚಿಸಿ ದಕ್ಷನು ತಪಸ್ಸನ್ನಾರಂಭಿಸುವುದು—ಮಂದರಪರ್ವತದಲ್ಲಿ ದಕ್ಷಬ್ರಹ್ಮನ ತಪಸ್ಸು—ತಪಸ್ಸಿನಿಂದ ಸಂತುಷ್ಟಳಾದ ವಿಷ್ಣುಮಾಯೆಯನ್ನು, ಹರನನ್ನು ಮೋಹಗೊಳಿಸಬೇಕೆಂದು ಪ್ರಾರ್ಥಿಸುವುದು. 55-75

ಆರನೆಯ ಅಧ್ಯಾಯ—

ದಕ್ಷಪತ್ನಿಯಲ್ಲಿ ಅವತರಿಸಿ ಹರನ ಪತ್ನಿಯಾಗುವೆನೆಂದು ವಿಷ್ಣುಮಾಯೆಯು ದಕ್ಷನಿಗೆ ವರವನ್ನು ಕೊಟ್ಟು ಅಂತರ್ಧಾನಳಾಗುವುದು—ಹರಮೋಹನಕಾರ್ಯದಲ್ಲಿ ಮದನನಿಗೆ ಬ್ರಹ್ಮನ ಆಜ್ಞೆಯು—ಮದನನ ಪರಿವಾರಗಣಗಳ ಉತ್ಪತ್ತಿ—ಮದನನಿಗೆ ಯೋಗಮಾಯೆಯ ಸ್ವರೂಪವನ್ನು ಬ್ರಹ್ಮನು ವರ್ಣಿಸುವುದು. 76-93

ಏಳನೆಯ ಅಧ್ಯಾಯ—

ತನ್ನ ಪರಿವಾರಗಳಿಂದ ಕೂಡಿ ಹರನನ್ನು ಎಷ್ಟುವಿಧವಾಗಿ ಅನುಸರಿಸಿದರೂ ಮೋಹಗೊಳಿಸಲು ಸಾಧ್ಯವಾಗಲಿಲ್ಲವೆಂದೂ, ಆದರೆ ಈಗ ಯೋಗನಿದ್ರಾದೇವಿಯ ಮಾತನ್ನಂಗೀಕರಿಸಿ ಪುನಃ ಪ್ರಯತ್ನಮಾಡಿ ನೋಡುವೆನೆಂದು ಮದನನ ವಚನವು. 94-102

ಎಂಟನೆಯ ಅಧ್ಯಾಯ—

ದಕ್ಷನು ಯೋಗಮಾಯೆಯನ್ನು ಸ್ತೋತ್ರಮಾಡುವುದು—ದೇವಿಯು ಸಂತುಷ್ಟಳಾಗಿ, ನಾನೇ ನಿನ್ನ ಪುತ್ರಿಯಾಗಿ ಜನಿಸುವೆನೆಂದು ದಕ್ಷನಿಗೆ ವರಪ್ರದಾನವು—ದಕ್ಷಪತ್ನಿಯಾದ ವೀರಿಣೀದೇವಿಯಲ್ಲಿ

ಪುಟ ಸಂಖ್ಯೆ

ದೇವಿಯು ಅವತರಿಸಿದ ವಿವರ—ದಕ್ಷಪುತ್ರಿಯಾದ ಸತೀದೇವಿಯ ಬಾಲ್ಯವರ್ಣನೆ. 130-120

ಒಂಭತ್ತನೆಯ ಅಧ್ಯಾಯ—

ಶಿವನು ತನಗೆ ಪತಿಯಾಗಬೇಕೆಂದು ಸತಿಯು ಆಚರಿಸುವ ವ್ರತಾಚರಣೆಗಳ ವರ್ಣನೆ—ಪತ್ನಿಯನ್ನು ಸ್ವೀಕಾರಮಾಡಬೇಕೆಂದು ವಿಷ್ಣುಬ್ರಹ್ಮರು ಶಿವನನ್ನು ಪ್ರಾರ್ಥಿಸುವುದು. 121-126

ಹತ್ತನೆಯ ಅಧ್ಯಾಯ—

ಶಿವಸತಿಯರ ಸಂವಾದವು—ಸತೀದೇವಿಗೆ ಶಿವನ ವರಪ್ರದಾನ—ಶಿವನ ಆಜ್ಞೆಯಿಂದ ಬ್ರಹ್ಮನು ಕನ್ಯಾವರಣಕ್ಕಾಗಿ ದಕ್ಷನಬಳಿಗೆ ಹೋಗುವುದು—ವಿವಾಹ ನಿಶ್ಚಯವನ್ನು ಮಾಡಿಕೊಂಡು ಬ್ರಹ್ಮನು ಶಿವನ ಸಮೀಪಕ್ಕೆ ಹಿಂತಿರುಗಿಬರುವುದು. 137-154

ಹನ್ನೊಂದನೆಯ ವಿಧ್ಯಾಯ—

ಸತೀಶಿವರ ವಿವಾಹವರ್ಣನೆಯು—ಸತಿಯನ್ನು ಕಾಮಭಾವನೆಯಿಂದ ಬ್ರಹ್ಮನು ನೋಡಿದನೆಂದು ಅವನನ್ನು ಕೊಲ್ಲಲು ಶಿವನು ಯತ್ನಿಸುವುದು—ವಿಷ್ಣುವು ಶಿವನನ್ನು ಸಮಾಧಾನಪಡಿಸಿ, ತ್ರಿಮೂರ್ತಿಗಳಲ್ಲಿ ಒಬ್ಬರಿಗೊಬ್ಬರಿಗೆ ಭೇದವಿಲ್ಲವೆಂದು ನಿರೂಪಿಸುವುದು. 155-169

ಹನ್ನೆರಡನೆಯ ಅಧ್ಯಾಯ—

ಶಿವಸನ್ನಿಧಿಯಲ್ಲಿ ವಿಷ್ಣುವು ತ್ರಿಮೂರ್ತಿಗಳ ಅಭೇದಸ್ವರೂಪವನ್ನು ವಿಶದಪಡಿಸುವುದು—ವಿಷ್ಣುವು ಸಮಾಧಿಯೋಗದಲ್ಲಿರುವ ಶಿವನ ಹೃದಯವನ್ನು ಪ್ರವೇಶಿಸಿ ಪ್ರಕೃತಿಪುರುಷಾದಿಗಳ ಸ್ವರೂಪವನ್ನು ತೋರಿಸುವುದು. 170 186

ಹದಿಮೂರನೆಯ ಅಧ್ಯಾಯ—

ಶಿವನ ಹೃದಯದಲ್ಲಿ ವಿಷ್ಣುಶಕ್ತಿಯಿಂದ ನಾನಾವಿಧ ಬ್ರಹ್ಮಾಂಡಗಳ ಪ್ರದರ್ಶನವು—ಮಾಯಾಸಾಮರ್ಥ್ಯಪರಿಜ್ಞಾನಕಥನವು. 187 200

ಪುಟ ಸಂಖ್ಯೆ

ಹದಿನಾಲ್ಕನೆಯ ಅಧ್ಯಾಯ—

ವಿವಾಹವಿಧಿಯನ್ನು ಮುಗಿಸಿ ಶಿವನು ಸತಿಯೊಡನೆ ಹಿಮವತ್ಪರ್ವತದಲ್ಲಿ ನಾನಾವಿಧ ಕಾಮಕೇಳಿಗಳಲ್ಲಿ ಆಸಕ್ತನಾಗಿ ವಿಹರಿಸುವುದು—ಅದರ ವರ್ಣನೆಯು. 201-213

ಹದಿನೈದನೆಯ ಅಧ್ಯಾಯ—

ವರ್ಷಾಕಾಲವರ್ಣನೆಯು—ಹಿಮಾಚಲಶಿಖರದಲ್ಲಿ ನಿವಾಸವನ್ನು ಕಲ್ಪಿಸೆಂದು ಸತಿಯು ಶಿವನನ್ನು ಪ್ರಾರ್ಥಿಸುವುದು. 214-227

ಹದಿನಾರನೆಯ ಅಧ್ಯಾಯ—

ತನ್ನ ತಂದೆಯಾದ ದಕ್ಷನು ತಾನು ಮಾಡುವ ಯಜ್ಞಕ್ಕೆ ಶಿವನನ್ನು ಕರೆಯದೆ ತನ್ನಪತಿಗೆ ಅವಮಾನಮಾಡಿದನೆಂದು ಕೋಪಗೊಂಡು ಸತಿಯು ಪ್ರಾಣತ್ಯಾಗಮಾಡುವುದು. 228-243

ಹದಿನೇಳನೆಯ ಅಧ್ಯಾಯ—

ಸತಿಯ ಪ್ರಾಣತ್ಯಾಗವನ್ನು ನೋಡಿ ಕೋಪಗೊಂಡು ಶಿವನು ವೀರಭದ್ರಾದಿ ಗಣಗಳಿಂದಕೂಡಿ ದಕ್ಷನ ಯಜ್ಞಮಂಟಪವನ್ನು ಪ್ರವೇಶಿಸುವುದು—ದಕ್ಷನ ಯಕ್ಷವಿಧ್ವಂಸನವು—ಶಿವನು ಸತಿಯ ಮೃತಶರೀರದ ಸಮೀಪವನ್ನೈದಿ ಪ್ರಲಾಪಿಸುವುದು. 244-256

ಹದಿನೆಂಟನೆಯ ಅಧ್ಯಾಯ—

ಶಿವನು ಸತಿಯ ಮೃತಶರೀರವನ್ನು ಹೆಗಲಿನಮೇಲೆ ಹೊತ್ತುಕೊಂಡು ಶೋಕಿಸುತ್ತಾ ತಿರುಗುವುದು—ಶಿವನ ಹೆಗಲಿನಿಂದ ಸತಿಯ ಅವಯವಗಳು ಒಂದೊಂದಾಗಿ ಬೀಳುವುದು—ಶಿವನ ಶೋಕ ಸಮಾಧಾನಮಾಡುವುದಕ್ಕಾಗಿ ಬ್ರಹ್ಮನ ಉಪದೇಶವು. 257-285

ಹತ್ತೊಂಭತ್ತನೆಯ ಅಧ್ಯಾಯ—

ಸತಿಯನ್ನು ನೆನೆನೆನೆದು ದುಃಖಪಡುತ್ತಿರುವ ಹರನನ್ನು ಬ್ರಹ್ಮನು ಸಮಾಧಾನಪಡಿಸುವುದು—ಶಿವನು ಬ್ರಹ್ಮನನ್ನೂ, ತನ್ನ ಗಣ

ಪುಟ ಸಂಖ್ಯೆ

ಗಳನ್ನೂ ಕರೆದುಕೊಂಡು ಸಿಪ್ರವೆಂಬ ಸರೋವರದ ತೀರಕ್ಕೆ ಪ್ರಯಾಣಮಾಡುವುದು—ಸಿಪ್ರವೆಂಬ ಸರೋವರವರ್ಣನೆಯು—ಸಂಧ್ಯೆಯಲ್ಲಿ ಬ್ರಹ್ಮನೂ, ಅವನ ಮಾನಸಪುತ್ರರೂ ಮೋಹಗೊಂಡು ಅನುರಕ್ತರಾದ ಹಿಂದಿನ ವೃತ್ತಾಂತವು—ಮದನನು ಶಾಪವನ್ನು ಹೊಂದಿದ ಬಳಿಕ ಸಂಧ್ಯೆಯು ಪಾಪಪರಿಹಾರಕ್ಕಾಗಿ ತಪಸ್ಸನ್ನು ಮಾಡಲು ಚಂದ್ರಭಾಗಗಿರಿಗೆ ಹೋಗುವುದು. 286-304

ಇಪ್ಪತ್ತನೆಯ ಅಧ್ಯಾಯ—

ತನ್ನ ತಂದೆಯಾದ ಬ್ರಹ್ಮನಲ್ಲಿಯೂ ಸಹೋದರರಾದ ಮಾನಸಪುತ್ರರಲ್ಲಿಯೂ ಅನುರಕ್ತಳಾಗಿ ಮೋಹಗೊಂಡ ಪಾಪಪ್ರಾಯಶ್ಚಿತ್ತಕ್ಕಾಗಿ ತಪಸ್ಸನ್ನು ಮಾಡಲು ಹೊರಟುಬಂದಿರುವ ಸಂಧ್ಯೆಗೆ ಬ್ರಹ್ಮನ ಮಾತಿನಂತೆ ವಸಿಷ್ಠನು ತಪಶ್ಚರ್ಯೆಯ ವಿಧಾನವನ್ನು ಉಪದೇಶಿಸಲು ಚಂದ್ರಭಾಗಪರ್ವತಕ್ಕೆ ಹೋಗುವುದು—ಚಂದ್ರಭಾಗಪರ್ವತದ ಪೂರ್ವೇತಿಹಾಸವು—ಚಂದ್ರನು ತನ್ನ ಪತ್ನಿಯರಲ್ಲಿ ಒಬ್ಬಳಾದ ರೋಹಿಣಿಯಲ್ಲಿ ಮಾತ್ರ ಅನುರಕ್ತನಾಗಿ ಇತರ ಪತ್ನಿಯರನ್ನು ಉದಾಸೀನಮಾಡಿದಕಾರಣ ಚಂದ್ರನಿಗೆ ದಕ್ಷನ ಶಾಪವು—ಆ ಶಾಪದಿಂದ ಚಂದ್ರನಿಗೆ ಕ್ಷಯರೋಗಪ್ರಾಪ್ತಿಯು—ಚಂದ್ರನ ಕ್ಷಯದಿಂದ ಕ್ರಮಕ್ರಮವಾಗಿ ಜಗತ್ಪೀಡೆಯು—ದೇವತೆಗಳು ಈ ಬಾಧೆಯನ್ನು ಬ್ರಹ್ಮನಿಗೆ ನಿವೇದಿಸುವುದು. 305-307

ಇಪ್ಪತ್ತೊಂದನೆಯ ಅಧ್ಯಾಯ—

ಚಂದ್ರನ ಕ್ಷಯಪರಿಹಾರಕ್ಕಾಗಿ ಬ್ರಹ್ಮನ ಮಾತಿನಂತೆ ದೇವತೆಗಳು ದಕ್ಷನನ್ನು ಪ್ರಾರ್ಥಿಸುವುದು—ಚಂದ್ರನು ತನ್ನ ಪತ್ನಿಯರಲ್ಲೆಲ್ಲ ಸಮನಾಗಿ ವರ್ತಿಸಿದರೆ, ಒಂದು ಪಕ್ಷ ವೃದ್ಧಿಯೂ, ಒಂದು ಪಕ್ಷ ಕ್ಷಯವೂ ಆಗಲೆಂದು ದಕ್ಷನ ವಚನವು—ಚಂದ್ರನ ಕ್ಷಯನಿವೃತ್ತಿಗಾಗಿ ದೇವತೆಗಳು ಚಂದ್ರಭಾಗಪರ್ವತದಲ್ಲಿರುವ ಸರಸ್ಸಿ

ಪುಟ ಸಂಖ್ಯೆ

ನಲ್ಲಿ ಚಂದ್ರನಿಗೆ ಸ್ನಾನಮಾಡಿಸುವುದು—ಆ ಸ್ನಾನಜಲದಿಂದ ಚಂದ್ರಭಾಗಸರಸ್ಸಿನ ಉತ್ಪತ್ತಿಯು—ಪರ್ವತಕ್ಕೂ ಚಂದ್ರಭಾಗ ವೆಂದು ಹೆಸರುಂಟಾಗುವುದು. 338-336

ಇಪ್ಪತ್ತೆರಡನೆಯ ಅಧ್ಯಾಯ—

ಚಂದ್ರಭಾಗಪರ್ವತವರ್ಣನೆಯು—ವಸಿಷ್ಠನು ಸಂಧ್ಯೆಗೆ ತಪಶ್ಚರ್ಯದ ವಿಧಿನಿಯಮಗಳನ್ನು ಉಪದೇಶಿಸುವುದು—ಸಂಧ್ಯೆಯ ತಪಸ್ಸಿನಿಂದ ಸಂತುಷ್ಟನಾದ ವಿಷ್ಣುವು ವರವನ್ನು ಕೊಡುವುದು—ವಿಷ್ಣುವಿನ ಮಾತಿನಂತೆ ಸಂಧ್ಯೆಯು ಮೇಧಾತಿಥಿಮುನಿಯ ಯಜ್ಞಕುಂಡದಲ್ಲಿ ಶರೀರ ತ್ಯಾಗಮಾಡುವುದು —ಅಗ್ನಿಕುಂಡದಿಂದ ಸಂಧ್ಯೆಯ ಪುನರುತ್ಪತ್ತಿಯು. 364-399

ಇಪ್ಪತ್ತಮೂರನೆಯ ಅಧ್ಯಾಯ—

ಅಗ್ನಿಕುಂಡದಲ್ಲಿ ಉತ್ಪನ್ನಳಾದ ಕನ್ಯೆಗೆ ಅರುಂಧತಿಯೆಂದು ನಾಮಕರಣವು—ಸ್ತ್ರೀ ಧರ್ಮಶಿಕ್ಷಣಾರ್ಥವಾಗಿ ಸಾವಿತ್ರೀದೇವಿಯ ಸಮೀಪದಲ್ಲಿ ಅರುಂಧತಿಯ ವಾಸವು—ವಸಿಷ್ಠಾರುಂಧತಿಯರ ಸಂದರ್ಶನ ಮತ್ತು ಪರಸ್ಪರ ಅನುರಾಗವು—ಅವರ ವಿವಾಹ ಕಥನವು—ಆ ದಂಪತಿಗಳ ವಿವಾಹಕಾಲದಲ್ಲಿ ಮಂತ್ರಸೇಚನಜಲದಿಂದ ಆದ ಸಿಪ್ರವೆಂಬ ಸರಸ್ಸಿನ ಉತ್ಪತ್ತಿಕಥನವು—ಆ ಸರಸ್ಸಿನ ಮಾಹಾತ್ಮ್ಯವು. 391-421

ಇಪ್ಪತ್ತನಾಲ್ಕನೆಯ ಅಧ್ಯಾಯ—

ಸಿಪ್ರಸರೋವರದ ತೀರದಲ್ಲಿ ಶಿವನ ಶೋಕನಿವೃತ್ತಿಗಾಗಿ ಬ್ರಹ್ಮಾದಿ ದೇವತೆಗಳು ಮಹಾಮಾಯೆಯನ್ನು ಸ್ತೋತ್ರಮಾಡುವುದು—ಹರನ ಶೋಕನಿವೃತ್ತಿಯಾಗಲು ಬ್ರಹ್ಮಾದಿಗಳು ಸ್ವಸ್ಥಾನಕ್ಕೆ ತೆರಳುವುದು. 422-431

ಪುಟ ಸಂಖ್ಯೆ

ಇಪ್ಪತ್ತೈದನೆಯ ಅಧ್ಯಾಯ—

ಸೃಷ್ಟಿಕರ್ಮವನ್ನು ವಿವರಿಸುವುದಕ್ಕಾಗಿ ಪ್ರಕೃತಿಸ್ವರೂಪವರ್ಣನೆಯು— 432-439

ಇಪ್ಪತ್ತಾರನೆಯ ಅಧ್ಯಾಯ—

ಆದಿಸೃಷ್ಟಿವರ್ಣನೆಯು. 450-463

ಇಪ್ಪತ್ತೇಳನೆಯ ಅಧ್ಯಾಯ—

ಪ್ರತಿಸರ್ಗಕಥನವು. 464-471

ಇಪ್ಪತ್ತೆಂಟನೆಯ ಅಧ್ಯಾಯ—

ಸೃಷ್ಟಿ, ಸಂಹಾರ, ಕಲ್ಪ, ಇವುಗಳ ನಿರೂಪಣೆಯು. 472-484

ಇಪತ್ತೊಂಭತ್ತನೆಯ ಅಧ್ಯಾಯ—

ಸಾರಾಸಾರವಸ್ತುಗಳ ನಿರೂಪಣೆಯು—ಉತ್ಪನ್ನವಾದ ವಸ್ತುಗಳೆಲ್ಲ ಅಸಾರಗಳು. ಬ್ರಹ್ಮವಸ್ತುವೊಂದೇ ಸಾರವು. 485-490

॥ ಶ್ರೀಃ ॥

॥ ಶ್ರೀಕಾಲಿಕಾಯೈ ನಮಃ ॥

॥ ಅಥ ಶ್ರೀಕಾಲಿಕಾಪುರಾಣೇ ಪ್ರಥಮೋಽಧ್ಯಾಯಃ ॥

ಬಾಲಾರ್ಕಾಯುತಸುಪ್ರಭಾಂ ತ್ರಿನಯನಾಂ ಭಾಸ್ವತ್ಸರೋಜೈರ್ಯುತಾಂ
ಮಾಲಾಂ ಸಂದಧತೀಂ ಮನೋಹರತನುಂ ಮಂದಸ್ಮಿತೋದ್ಯನ್ಮುಖೀಂ ।
ಮುಂಡಂ ಮುಂದಮುಪೇಯುಷೀಂ ವರಯುತಾಂ ಶಂಭುಂ ಜಗನ್ಮೋಹಿನೀಂ
ವಂದೇ ದೇವಸುರೇಂದ್ರವಂದಿತಪದಾಮಿಷ್ಟಾರ್ಥದಾಂ ಪಾರ್ವತೀಂ ॥

॥ ಮೊದಲನೆಯ ಅಧ್ಯಾಯವು ॥

ಯದ್ಯೋಗಿಭಿರ್ಭವಭಯಾರ್ತಿವಿನಾಶಯೋಗ್ಯ-
ಮಾಸಾದ್ಯ ವಂದಿತಮತೀವ ವಿವಿಕ್ತಚಿತ್ತೈಃ ।
ತದ್ವಃ ಪುನಾತು ಹರಿಪಾದಸರೋಜಯುಗ್ಮ-
ಮಾವಿರ್ಭವತ್ಕ್ರಮವಿಲಂಘಿತಭೂರ್ಭುವಸ್ಸ್ವಃ ॥ ೧ ॥

॥ ಶ್ರೀಃ ॥

ಸರ್ವವಿದ್ಯಾತ್ಮಿಕಾಂ ಶುದ್ಧಾಂ ಶಿವಾಂ ನಿತ್ಯಾಂ ಜಗನ್ಮಯಾಂ ।
ಪ್ರಣಮಾಮಿ ಮಹಾಮಾಯಾಂ ಲೋಕೇ ವೇದೇ ಚ ಕೀರ್ತಿತಾಂ ॥

॥ ಕನ್ನಡ ಅನುವಾದವು ॥

೧. ಈ ಅಧ್ಯಾಯದಲ್ಲಿ ಒಂದೆರಡನೆಯ ಶ್ಲೋಕಗಳು ಮಂಗಳ ಶ್ಲೋಕಗಳು. ಗ್ರಂಥಕರ್ತೃವಾದವನು ತನ್ನ ಇಷ್ಟದೇವತೆಯನ್ನು ಸ್ತೋತ್ರ

ಸಾ ಪಾತು ವಃ ಸಕಲಯೋಗಿಜನಸ್ಯ ಚಿತ್ತೇ೬
ವಿದ್ಯಾತಮಿಸ್ರತರಣೀರ್ಯತಿಮುಕ್ತಿಹೇತುಃ ।
ಯಾ ಚಾಸ್ಯ ಜಂತುನಿವಹಸ್ಯ ವಿಮೋಹಿನೀತಿ
ಮಾಯಾವಿಭೋರ್ಜನುಷಿಶುದ್ಧಸುಬುದ್ಧಿಹಂತ್ರೀ ॥ ೨ ॥

ನಮಸ್ಕಾರಾದಿಗಳಿಂದ ಆರಾಧಿಸಿ ಗ್ರಂಥರಚನೆಯನ್ನು ಆರಂಭಿಸುವುದು ಪದ್ಧತಿಯಾಗಿದೆ. ಅದರಂತೆ ಮಹರ್ಷಿಯಾದ ವ್ಯಾಸಮುನಿಯು ಈ ಕಾಲಿಕಾಪುರಾಣವನ್ನು ಹೇಳಲು ಪ್ರಾರಂಭಿಸಿ ಪರಬ್ರಹ್ಮಸ್ವರೂಪಿಣಿಯಾದ ದೇವಿಯನ್ನು ಸ್ತೋತ್ರಮಾಡಿ ಗ್ರಂಥಾರಂಭವನ್ನು ಮಾಡುವನು. ದೇವತಾ ಪೂಜಾದಿಗಳಲ್ಲಿ ಪ್ರಧಾನ ದೇವತೆಯನ್ನು ಪೂಜಿಸುವ ಮೊದಲು ಪರಿವಾರ ದೇವತೆಗಳನ್ನು ಪೂಜಿಸುವುದು ಶಾಸ್ತ್ರವಿಹಿತವಾಗಿರುವುದರಿಂದ, ದೇವತೆಗಳಲ್ಲಿ ಶ್ರೇಷ್ಠನಾಗಿಯೂ, ದೇವಿಯ ಭಕ್ತರಲ್ಲಿ ಅಗ್ರಗಣ್ಯನಾಗಿಯೂ ಇರುವ ಶ್ರೀಮಹಾವಿಷ್ಣುವನ್ನು ಮೊದಲನೆಯ ಶ್ಲೋಕದಲ್ಲಿ ಸ್ತುತಿಸಿ ಎರಡನೆಯ ಶ್ಲೋಕದಲ್ಲಿ ದೇವಿಯನ್ನು ಸ್ತೋತ್ರಮಾಡುವನು.

ಏಕಾಗ್ರಮನಸ್ಸುಳ್ಳ ಯೋಗಿಗಳು ಈ ಸಂಸಾರದ ಕರ್ತೃತ್ವ ಜನನ ಮರಣಗಳ ಭಯದುಃಖಗಳನ್ನು ನಿವಾರಣೆ ಮಾಡಬಲ್ಲ ಯಾವ ವಿಷ್ಣುವಿನ ಪಾದಪದ್ಮವನ್ನು ಮನಸ್ಸಿನಲ್ಲಿ ಧ್ಯಾನದಿಂದ ಪಡೆದು ಸ್ತುತಿಸುತ್ತಿರುವರೋ, ಮತ್ತು ತ್ರಿವಿಕ್ರಮಾವತಾರಕಾಲದಲ್ಲಿ, ಕ್ರಮವಾಗಿ ಬೆಳೆಯುತ್ತ ಭೂಃ ಭುವಃ ಸುವಃ ಎಂದರೆ ಭೂಮ್ಯಂತರಿಕ್ಷಸ್ವರ್ಗಗಳನ್ನು ಯಾವ ಪಾದವು ವ್ಯಾಪಿಸಿತೋ ಅಂತಹ ವಿಷ್ಣುವಿನ ಕಮಲದಂತಿರುವ ಪಾದಯುಗ್ಮವು ನಮ್ಮನ್ನು ಪವಿತ್ರರನ್ನಾಗಿ ಮಾಡಲಿ.

೨. ಯಾವ ದೇವಿಯು ಸಮಸ್ತ ಯೋಗಿಗಳ ಮನಸ್ಸಿನಲ್ಲಿರುವ ಅಜ್ಞಾನವೆಂಬ ಕತ್ತಲೆಗೆ ಸೂರ್ಯರೂಪಳಾಗಿರುತ್ತಾ, ಅವರ ಅಜ್ಞಾನವನ್ನು ಹೋಗಲಾಡಿಸಿ ಯಮನಿಯಮಾದಿಗಳಲ್ಲಿ ಪ್ರವೃತ್ತರಾಗಿರುವ ಅವರಿಗೆ ಮುಕ್ತಿಯನ್ನು ಕೊಡಬಲ್ಲಳೋ ಮತ್ತು ಯಾವ ದೇವಿಯು ಈ ಪ್ರಪಂಚದಲ್ಲಿರುವ ಸಮಸ್ತ ಪ್ರಾಣಿಗಳ ಬುದ್ಧಿಯನ್ನು ಮೋಹಗೊಳಿಸುತ್ತಾ ಮೋಹಿನೀ ಮತ್ತು ಮಾಯೆಯೆಂದು ಪ್ರಸಿದ್ಧಳಾಗಿರುವಳೋ ಆ ಆದಿಶಕ್ತಿಯು ನಮ್ಮೆಲ್ಲರನ್ನೂ ರಕ್ಷಿಸಲಿ.

ಈಶ್ವರಂ ಜಗತಾಮಾದ್ಯಂ ಪ್ರಣಮ್ಯ ಪುರುಷೋತ್ತಮಂ ।
ನಿತ್ಯಂ ಜ್ಞಾನಮಯಂ ವಕ್ಷ್ಯೇ ಪುರಾಣಂ ಕಾಲಿಕಾಹ್ವಯಂ ॥ ೩ ॥
ಮಾರ್ಕಂಡೇಯಂ ಮುನಿಶ್ರೇಷ್ಠಂ ಸ್ಥಿತಂ ಹಿಮಧರಾಂತಿಕೇ ।
ಮುನಯಃ ಪರಿಪಪ್ರಚ್ಛುಃ ಪ್ರಣಮ್ಯ ಕಮಠಾದಯಃ ॥ ೪ ॥
ಭಗವನ್ ಸರ್ವಮಾಖ್ಯಾತಂ ಸರ್ವಶಾಸ್ತ್ರಾಣಿ ತತ್ತ್ವತಃ ।
ವೇದಾನ್ ಸರ್ವಾನ್ ತಥಾ ಸಾಂಗಾನ್ ಸಾರಭೂತಂ ಪ್ರಮಥ್ಯ ಚ ॥೫॥
ಸರ್ವವೇದೇಷು ಶಾಸ್ತ್ರೇಷು ಯೋ ಯೋ ನಃ ಸಂಶಯೋಽಭವತ್ ।
ಸ ಸ ಚ್ಛಿನ್ನಸ್ತ್ವಯಾ ಬ್ರಹ್ಮನ್ ಸವಿತ್ರೇವ ತಮಶ್ಚಯಃ ॥ ೬ ॥

---

೩. ಈ ಪುರಾಣಕರ್ತೃವಾದ ವ್ಯಾಸಮಹರ್ಷಿಯು ಮೇಲಿನ ಎರಡು ಶ್ಲೋಕಗಳಲ್ಲಿ ವಿಷ್ಣುವನ್ನೂ ಆದಿಶಕ್ತಿಯನ್ನೂ ಸ್ತೋತ್ರಮಾಡಿ, ಈ ಶ್ಲೋಕದಲ್ಲಿ ಪರಮೇಶ್ವರನನ್ನು ನಮಸ್ಕರಿಸಿ, ಮಂಗಳಾಚರಣೆಯನ್ನು ಮುಗಿಸಿ ಅನಂತರ ಈ ಪುರಾಣವನ್ನು ಹೇಳಲು ಪ್ರಾರಂಭಮಾಡುವನು.

ಈ ಜಗತ್ತಿಗೆ ಒಡೆಯನೂ ಆದಿಕಾರಣನೂ ಆದ ಮತ್ತು ನಿತ್ಯನೂ ಜ್ಞಾನ ಸ್ವರೂಪನೂ ಪುರುಷರಲ್ಲಿ ಶ್ರೇಷ್ಠನೂ ಆದ ಪರಮೇಶ್ವರನನ್ನು ನಮಸ್ಕರಿಸಿ ಕಾಲಿಕಾಪುರಾಣವನ್ನು ಹೇಳುತ್ತೇನೆ.

೪. ಒಂದು ದಿವಸ ಕಮಠನೇ ಮೊದಲಾದ ಋಷಿಗಳು ಹಿಮವತ್ಪರ್ವತದ ತಪ್ಪಲಿನಲ್ಲಿ ವಾಸಮಾಡುತ್ತಲಿದ್ದ ಮುನಿಶ್ರೇಷ್ಠನಾದ ಮಾರ್ಕಂಡೇಯ ಮುನಿಯನ್ನು ನಮಸ್ಕರಿಸಿ ಹೀಗೆ ಪ್ರಶ್ನೆ ಮಾಡಿದರು.

೫. ಪೂಜ್ಯನಾದ ಓ ಮಾರ್ಕಂಡೇಯ ಮುನಿಯೇ, ನೀನು ಎಲ್ಲ ಶಾಸ್ತ್ರಗಳನ್ನೂ ವೇದವೇದಾಂಗಗಳನ್ನೂ ತತ್ತ್ವದೃಷ್ಟಿಯಿಂದ ಆಲೋಡನೆ ಮಾಡಿ ಅವುಗಳ ಸಾರವನ್ನು ನಮಗೆ ಹೇಳಿರುತ್ತೀಯೆ.

೬. ಮತ್ತು ಓ ಬ್ರಾಹ್ಮಣಶ್ರೇಷ್ಠನೇ, ನಮಗೆ ಎಲ್ಲ ವೇದ ಮತ್ತು ಶಾಸ್ತ್ರಗಳಲ್ಲ ಯಾವ ಯಾವ ಸಂಶಯಗಳುಂಟಾದವೋ ಅವೆಲ್ಲವನ್ನೂ, ಸೂರ್ಯನು ಕತ್ತಲೆಯನ್ನು ಹೋಗಲಾಡಿಸುವಂತೆ, ಹೋಗಲಾಡಿಸಿರುತ್ತೀಯೆ.

ಜೈವಾತೃಕಾಗ್ರ್ಯ ಭವತಃ ಪ್ರಸಾದಾದ್ದ್ವಿಜಸತ್ತಮ ।
ನಿಃಸಂಶಯಾ ವಯಂ ಜಾತಾ ವೇದಶಾಸ್ತ್ರೇ ಚ ಸರ್ವಶಃ ॥ ೭ ॥

ಕೃತಕೃತ್ಯಾ ವಯಂ ಬ್ರಹ್ಮನ್ ತ್ವತ್ತೋೇಽಧೀತ್ಯ ಸಮಂತತಃ ।
ಸರಹಸ್ಯಂ ಧರ್ಮಶಾಸ್ತ್ರಂ ಯದಂಗಾದಿ ಸ್ವಯಂಭುವಾ ॥ ೮ ॥

ಭೂಯಸ್ತಚ್ಛ್ರೋತುಮಿಚ್ಛಾಮೋ ಹರಂ ಕಾಲೀ ಪುರಾ ಕಥಂ ।
ಮೋಹಯಾಮಾಸ ಯತಿನಂ ಸತೀರೂಪೇಣ ಚೇಶ್ವರಂ ॥ ೯ ॥

ಸರ್ವದಾ ಧ್ಯಾನನಿಲಯಂ ಯಮಿನಂ ಯತಿನಾಂ ವರಂ ।
ಸಂಕ್ಷೋಭಯಾಮಾಸ ಕಥಂ ಸಂಸಾರವಿಮುಖಂ ಹರಂ ॥ ೧೦ ॥

---

೭. ಚಿರಂಜೀವಿಗಳಲ್ಲಿ ಉತ್ತಮನಾದ ಎಲೈ ಬ್ರಾಹ್ಮಣಶ್ರೇಷ್ಠನೇ, ನಿನ್ನ ಅನುಗ್ರಹದಿಂದ ನಾವು ಸಮಸ್ತ ವೇದಶಾಸ್ತ್ರಗಳಲ್ಲಿ ಯಾವ ಬಗೆಯ ಸಂದೇಹವೂ ಇಲ್ಲದವರಾಗಿರುತ್ತೇವೆ.

೮. ಮತ್ತು ಎಲೈ ಬ್ರಹ್ಮಜ್ಞಾನಿಯೇ, ಚತುರ್ಮುಖಬ್ರಹ್ಮನಂತಿರುವ ನಿನ್ನಿಂದ ಸಮಸ್ತ ವೇದಗಳನ್ನೂ, ಧರ್ಮಶಾಸ್ತ್ರಗಳನ್ನೂ, ಅವುಗಳ ರಹಸ್ಯಾರ್ಥ ಮತ್ತು ವಿವರಣೆಗಳೊಡನೆ ಅಧ್ಯಯನ ಮಾಡಿ ನಾವು ಎಲ್ಲ ರೀತಿಯಿಂದಲೂ ಕೃತಕೃತ್ಯರಾದೆವು.

೯. ಈಗ ಪುನಃ ನಾವು, ಹಿಂದೆ ಕಾಳಿಕಾದೇವಿಯು, ಸತೀದೇವಿಯ ರೂಪದಿಂದ, ವಿರಕ್ತನಾಗಿ ಯತಿಧರ್ಮಾಚರಣೆಯಲ್ಲಿದ್ದ ಜಗತ್ತಿಗೇ ಒಡೆಯನಾದ ಆ ಹರನನ್ನು ಹೇಗೆ ಮೋಹಗೊಳಿಸಿದಳು? ಎಂಬುದನ್ನು ಕೇಳಲು ಇಚ್ಛಿಸುತ್ತೇವೆ.

೧೦. ಮತ್ತು ಸಂಸಾರದಲ್ಲಿ ವಿರಕ್ತನಾಗಿ ಯಾವಾಗಲೂ ಅಂತರ್ಧ್ಯಾನದಲ್ಲಿಯೇ ಇರುವ, ಜಿತೇಂದ್ರಿಯನಾಗಿಯೂ ಯತಿಗಳಲ್ಲಿ ಶ್ರೇಷ್ಠನಾಗಿಯೂ ಇರುವ ಆ ಹರನನ್ನು ಕಾಳಿಯು ಹೇಗೆ ಚಂಚಲಗೊಳಿಸಿದಳು?

ಸತೀ ವಾ ಕಥಮುತ್ಪನ್ನಾ ದಕ್ಷದಾರೇಷು ಶೋಭನಾ ।
ಕಥಂ ಹರೋ ಮನಶ್ಚಕ್ರೇ ದಾರಗ್ರಹಣಕರ್ಮಣಿ ॥ ೧೧ ॥

ಕಥಂ ವಾ ದಕ್ಷಕೋಪೇನ ತ್ಯಕ್ತದೇಹಾ ಸತೀ ಪುರಾ ।
ಹಿಮವತ್ತನಯಾ ಜಾತಾ ಭೂಯೋ ವಾ ಕಥಮಾಗತಾ ॥ ೧೨ ॥

ಕಥಮರ್ಧಶರೀರಂ ಸಾऽಹರತ್ಸ್ಮರರಿಪೋಃ ಪುನಃ ।
ಏತತ್ಸರ್ವಂ ಸಮಾಚಕ್ಷ್ವ ವಿಸ್ತರೇಣ ದ್ವಿಜೋತ್ತಮ ॥ ೧೩ ॥

ನಾನ್ಯೋऽಸ್ತಿ ಸಂಶಯಚ್ಛೇತ್ತಾ ತ್ವತ್ಸಮೋ ನ ಭವಿಷ್ಯತಿ ।
ಯಥಾ ಜಾನೀಮ ವಿಪ್ರೇಂದ್ರ ತತ್ಕುರುಷ್ವೈತದಾತ್ಮವಿತ್ ॥ ೧೪ ॥

---

೧೧. ಮಂಗಳಸ್ವರೂಪಳಾದ ಆ ಕಾಳಿಯು ದಕ್ಷಬ್ರಹ್ಮನ ಪತ್ನಿಯಲ್ಲಿ ಸತೀದೇವಿಯ ರೂಪದಿಂದ ಹೇಗೆ ಹುಟ್ಟಿದಳು? ವಿರಕ್ತನಾದ ಹರನು ವಿವಾಹಮಾಡಿ ಕೊಳ್ಳುವುದರಲ್ಲಿ ಮನಸ್ಸುಳ್ಳವನು ಹೇಗೆ ಆದನು?

೧೨. ಮುಂದೆ ಆ ಸತೀದೇವಿಯು ತನ್ನ ತಂದೆಯಾದ ದಕ್ಷಬ್ರಹ್ಮನ ಮೇಲಿನ ಕೋಪದಿಂದ ಶರೀರವನ್ನು ತ್ಯಜಿಸಿ ತಿರುಗಿ ಹಿಮವಂತನ ಮಗಳು ಪಾರ್ವತಿಯಾಗಿ ಹೇಗೆ ಹುಟ್ಟಿದಳು?

೧೩. ಮುಂದೆ ಆ ಪಾರ್ವತಿಯು ಮನ್ಮಥನ ವೈರಿಯಾದ ಪರಮೇಶ್ವರನ ಅರ್ಧ ಶರೀರವನ್ನು ಹೇಗೆ ಆಕ್ರಮಿಸಿ ತನ್ನದಾಗಿ ಮಾಡಿಕೊಂಡಳು? ಓ ಬ್ರಾಹ್ಮಣ ಶ್ರೇಷ್ಠನಾದ ಮಾರ್ಕಂಡೇಯ ಮುನಿಯೇ, ಇದೆಲ್ಲವನ್ನು ವಿಸ್ತಾರವಾಗಿ ನಮಗೆ ಹೇಳು.

೧೪. ಓ ವಿಪ್ರೋತ್ತಮನೇ, ನಿನ್ನನ್ನು ಬಿಟ್ಟರೆ ಸಂಶಯವನ್ನು ಹೋಗಲಾಡಿಸುವವರು ಬೇರೆ ಯಾರೂ ಇಲ್ಲ. ನಿನ್ನಂತೆ ಸಂಶಯಗಳನ್ನು ಪರಿಹರಿಸುವವರು ಮುಂದೆಯೂ ಆಗಲಾರರು. ಆದುದರಿಂದ ಆತ್ಮಜ್ಞಾನಿಯಾದ ಓ ಮುನಿಯೇ, ನಾವು ಮೇಲೆ ಕೇಳಿದ ವಿಷಯಗಳ ತಿಳಿವಳಿಕೆಯನ್ನು ನಮಗೆ ಉಂಟುಮಾಡು.

॥ ಮಾರ್ಕಂಡೇಯ ಉವಾಚ ॥

ಶೃಣುಧ್ವಂ ಮುನಯಃ ಸರ್ವೇ ಗುಹ್ಯಾದ್ಗುಹ್ಯತರಂ ಮಮ ।
ಪುಣ್ಯಂ ಶುಭಕರಂ ಸಮ್ಯಗ್ಜ್ಞಾನದಂ ಕಾಮದಂ ಪರಂ ॥ ೧೫ ॥
ಏತದ್ಬ್ರಹ್ಮಾ ಪುರೋವಾಚ ನಾರದಾಯ ಮಹಾತ್ಮನೇ ।
ಪೃಷ್ಟಸ್ತೇನ ತತಃ ಸೋಽಪಿ ವಾಲಖಿಲ್ಯೇಭ್ಯ ಉಕ್ತವಾನ್ ॥ ೧೬ ॥
ವಾಲಖಿಲ್ಯಾ ಮಹಾತ್ಮಾನಸ್ತತ ಆಚಕ್ಷಿರೇ ಪುನಃ ।
ಯವಕ್ರೀತಾಯ ಮುನಯೇ ಸ ಪ್ರೋವಾಚಾಸಿತಾಯ ಚ ॥ ೧೭ ॥
ಅಸಿತೋ ಮೇ ಸಮಾಚಷ್ಟ ಏತದ್ವಿಸ್ತರತೋ ದ್ವಿಜಾಃ ।
ಅಹಂ ವಃ ಕಥಯಿಷ್ಯಾಮಿ ಕಥಾಮೇತಾಂ ಪುರಾತನೀಂ ॥ ೧೮ ॥

---

೧೫. ಮಾರ್ಕಂಡೇಯಮುನಿಯು ಹೇಳಿದನು :—ಎಲೈ ಋಷಿಗಳೇ, ನಾನು ಈಗ ಅತ್ಯಂತ ರಹಸ್ಯವಾದ ಆ ಕಥೆಯನ್ನು ಹೇಳುತ್ತೇನೆ. ಆ ಕಥೆಯಾದರೋ ಪರಮಪವಿತ್ರವಾದುದು, ಕೇಳುವವರಿಗೆ ಮಂಗಳವನ್ನುಂಟು ಮಾಡುವುದು. ಒಳ್ಳೆಯ ಜ್ಞಾನವನ್ನು ಉಂಟುಮಾಡಿ ಇಷ್ಟಾರ್ಥವನ್ನು ಕೊಡುವುದು. ಈ ವಿಧವಾದ ಕಥೆಯನ್ನು ನೀವು ಕೇಳುವವರಾಗಿರಿ.

೧೬. ಮಹಾತ್ಮನಾದ ನಾರದನು ಈ ಕಥೆಯನ್ನು ಹೇಳಬೇಕೆಂದು ಬ್ರಹ್ಮನನ್ನು ಕೇಳಲು ಅದರಂತೆ ಬ್ರಹ್ಮನು ನಾರದನಿಗೆ ಇದನ್ನು ಹೇಳಿದನು. ಅನಂತರ ನಾರದನು ಈ ಕಥೆಯನ್ನು ವಾಲಖಿಲ್ಯರೆಂಬ ಋಷಿಗಳಿಗೆ ಹೇಳಿದನು.

೧೭. ಮಹಾ ಪ್ರಭಾವಶಾಲಿಗಳಾದ ಆ ವಾಲಖಿಲ್ಯ ಋಷಿಗಳು ಅದನ್ನು ಯವಕ್ರೀತನೆಂಬ ಋಷಿಗೆ ಹೇಳಿದರು. ಆಮೇಲೆ ಯವಕ್ರೀತ ಮುನಿಯು ಅಸಿತನೆಂಬ ಋಷಿಗೆ ಈ ಕಥೆಯನ್ನು ಹೇಳಿದನು.

೧೮. ಅಸಿತಋಷಿಯು ಇದನ್ನು ನನಗೆ ವಿಸ್ತಾರವಾಗಿ ಹೇಳಿದನು. ಎಲೈ ಬ್ರಾಹ್ಮಣರೇ ನಾನೂ ಸಹ, ಜಗತ್ತಿಗೆ ಒಡೆಯನಾಗಿಯೂ ಚಕ್ರಧಾರಿಯಾಗಿಯೂ ಇರುವ ಪರಮಾತ್ಮನನ್ನು ನಮಸ್ಕರಿಸಿ, ಬಹಳ ಹಿಂದೆ ನಡೆದ ಈ ಕಥೆಯನ್ನು ನಿಮಗೆ ಹೇಳುತ್ತೇನೆ.

ಪ್ರಣಮ್ಯ ಪರಮಾತ್ಮಾನಂ ಚಕ್ರಪಾಣಿಂ ಜಗತ್ಪತಿಂ ॥

ವ್ಯಕ್ತಾವ್ಯಕ್ತಸ್ವರೂಪಾಯ ಸದಸದ್ವ್ಯಕ್ತಿರೂಪಿಣೇ ॥ ೧೯ ॥
ಸ್ಥೂಲಾಯ ಸೂಕ್ಷ್ಮರೂಪಾಯ ವಿಶ್ವರೂಪಾಯ ವೇಧಸೇ ।

ನಿತ್ಯಾಯ ನಿತ್ಯಜ್ಞಾನಾಯ ನಿರ್ವಿಕಾರಾಯ ತೇಜಸೇ ॥ ೨೦ ॥
ವಿದ್ಯಾಽ ವಿದ್ಯಸ್ವರೂಪಾಯ ಕಾಲರೂಪಾಯ ವೈ ನಮಃ ॥

ನಿರ್ಮಲಾಯೋರ್ಮಿಷಟ್ಕಾದಿರಹಿತಾಯ ವಿರಾಗಿಣೇ ॥ ೨೧ ॥
ವ್ಯಾಪಿನೇ ವಿಶ್ವರೂಪಾಯ ಸೃಷ್ಟಿಸ್ಥಿತ್ಯಂತಕಾರಿಣೇ ।

---

೧೯ - ೨೦. ಮಾರ್ಕಂಡೇಯ ಮುನಿಯು ಪರಮಾತ್ಮನನ್ನು ಈ ರೀತಿ ಸ್ತೋತ್ರ ಮಾಡಿದನು:—ಎಲೈ ಪರಮಪುರುಷನೇ, ನೀನು ಇಂದ್ರಿಯಗಳಿಗೆ ಗೋಚರವಾಗುವ ಕಾರ್ಯಸ್ವರೂಪನೂ ಮತ್ತು ಇಂದ್ರಿಯಗಳಿಗೆ ಗೋಚರವಾಗದೇ ಇರುವ ಪರಮಕಾರಣ ಸ್ವರೂಪನೂ ಆಗಿರುವೆ; ಅಸತ್ ಎಂಬ ನಿತ್ಯವಾಗಿಯೂ ನಿರ್ಗುಣಸ್ವರೂಪವಾಗಿಯೂ ಇರುವ ನಿರ್ವಿಶೇಷ ಬ್ರಹ್ಮ ಸ್ವರೂಪನೂ ಮತ್ತು ಕಾರ್ಯರೂಪವಾಗಿ ಮಾರ್ಪಟ್ಟು ದೃಷ್ಟಿಗೆ ಗೋಚರವಾಗುವ ಅನಿತ್ಯರೂಪವುಳ್ಳವನೂ ಆಗಿರುವೆ. ಇದೇ ನಿನ್ನ ಸದ್ರೂಪವು; ಕಾರ್ಯರೂಪವಾದ ಈ ಸ್ಥೂಲಜಗದ್ರೂಪನೂ, ಇದಕ್ಕೆ ಕಾರಣಭೂತವಾದ ಸೂಕ್ಷ್ಮರೂಪನೂ ನೀನೇ ಆಗಿರುವೆ. ಈ ಸಮಸ್ತ ಪ್ರಪಂಚವನ್ನೂ ನೀನೇ ಸೃಷ್ಟಿಸುವವನು ಮತ್ತು ಆರೀತಿ ಸೃಷ್ಟಿಸಿದ ಪ್ರಪಂಚವೂ ಸಹ ನಿನ್ನ ಸ್ವರೂಪವಾಗಿಯೇ ಇರುವುದು. ನೀನು ಯಾವಾಗಲೂ ಎಂದರೆ ಎಲ್ಲ ಕಾಲಗಳಲ್ಲಿಯೂ ಇರುವವನು. ನಿನ್ನ ಜ್ಞಾನವೂ ಸಹ ಯಾವಾಗಲೂ ನಾಶರಹಿತವಾಗಿ ಇರುವುದು. ನೀನು ಉತ್ಪತ್ತಿಯೇ ಮೊದಲಾದ ವಿಕಾರಗಳಿಲ್ಲದವನು. ಪ್ರಕಾಶಸ್ವರೂಪನಾದವನು. ನೀನು ಜ್ಞಾನ ಮತ್ತು ಅಜ್ಞಾನಕಾರ್ಯವಾದ ಪ್ರಪಂಚದ ಸ್ವರೂಪನೂ ಭೂತಭವಿಷ್ಯದ್ವರ್ತಮಾನಕಾಲಸ್ವರೂಪನೂ ಆಗಿರುವವನು. ಇಂತಹ ನಿನಗೆ ನಮಸ್ಕಾರವು.

೨೧. ಅವಿದ್ಯಾದೋಷವಿಲ್ಲದವನೂ, ಸಂಸಾರಸಾಗರದಲ್ಲಿ ಅಲೆಗಳಂತಿರುವ ಜನ್ಮ, ಸ್ಥಿತಿ, ಉಪಚಯ, ಪರಿಣಾಮ, ಅಪಚಯ, ನಾಶ ಎಂಬ ಆರು ವಿಧವಾದ ವಿಕಾರಗಳಿಲ್ಲದವನೂ—ರಾಗರಹಿತನಾದವನೂ ಎಂದರೆ ಯಾವ

ಯೋಗಿಭಿಶ್ಚಿಂತ್ಯತೇ ಯೋಽಸೌ ವೇದಾಂತಾಂತಗಚಿಂತಗೈಃ ॥ ೨೨ ॥
ಅಂತರಂತಃ ಪರಂಜ್ಯೋತಿಃಸ್ವರೂಪಂ ಪ್ರಣಮಾಮಿ ತಂ ।
ತಮೇವಾರಾಧ್ಯ ಭಗವಾನ್ ಬ್ರಹ್ಮಾ ಲೋಕಪಿತಾಮಹಃ ॥ ೨೩ ॥
ಪ್ರಜಾಃ ಸಸರ್ಜ ಸಕಲಾಃ ಸುರಾಸುರನರಾದಿಕಾಃ ।
ಸೃಷ್ಟ್ವಾ ಪ್ರಜಾಪತೀನ್ದಕ್ಷಪ್ರಮುಖಾನ್ಸ ಯಥಾವಿಧಿ ॥ ೨೪ ॥
ಮರೀಚಿಮತ್ರಿಂ ಪುಲಹಂ ತಥೈವಾಂಗಿರಸಂ ಕ್ರತುಂ ।
ಪುಲಸ್ತ್ಯಂ ಚ ವಸಿಷ್ಠಂ ಚ ನಾರದಂ ಚ ಪ್ರಚೇತಸಂ ॥ ೨೫ ॥
ಭೃಗುಂ ಚ ಮಾನಸಾನ್ಪುತ್ರಾನ್ಯದಾ ದಶ ಸಸರ್ಜ ಸಃ ।
ತದಾ ತನ್ಮನಸೋ ಜಾತಾ ಚಾರುರೂಪಾ ವರಾಂಗನಾ ॥ ೨೬ ॥

ವಿಧವಾದ ಅಪೇಕ್ಷೆಯೂ ಇಲ್ಲದೆ ಪೂರ್ಣಕಾಮನಾದವನೂ, ಸಮಸ್ತ ಪ್ರಪಂಚ ಸ್ವರೂಪನೂ ಮತ್ತು ಅದರಲ್ಲಿ ವ್ಯಾಪಿಸಿರುವವನೂ, ಜಗತ್ತಿನ ಸೃಷ್ಟಿಸ್ಥಿತಿ ನಾಶಗಳನ್ನು ಮಾಡುವವನೂ ಆದ ನಿನಗೆ ನಮಸ್ಕಾರವು.

೨೨. ಉಪನಿಷದ್ರಹಸ್ಯವನ್ನು ಬಲ್ಲವರೂ ಧ್ಯಾನಶೀಲರೂ ಆದ ಯೋಗಿಗಳು ಯಾವ ವಸ್ತುವನ್ನು ಸದಾ ಧ್ಯಾನಿಸುವರೋ, ಉತ್ಕೃಷ್ಟವಾದ ಪ್ರಕಾಶ ಸ್ವರೂಪನಾದ ಆ ಪರಮಾತ್ಮನನ್ನು ಮನಸ್ಸಿನಲ್ಲಿಯೇ ನಮಸ್ಕರಿಸುತ್ತೇನೆ.

೨೩. ಷಡ್ಗುಣೈಶ್ವರ್ಯಸಂಪನ್ನನೂ, ಜಗತ್ತಿಗೆ ತಾತನೆಂದು ಪ್ರಸಿದ್ಧನಾದವನೂ ಆದ ಬ್ರಹ್ಮನು ಹಿಂದೆ ಆ ಪರಮಾತ್ಮನನ್ನೇ ಆರಾಧಿಸಿ, ದೇವರಾಕ್ಷಸ ಮನುಷ್ಯರೇ ಮೊದಲಾದ ಸಮಸ್ತ ಪ್ರಜೆಗಳನ್ನೂ ಸೃಷ್ಟಿಸಿದನು.

೨೪. - ೨೫. ಆಮೇಲೆ ದಕ್ಷನೇ ಮೊದಲಾದ ನವಬ್ರಹ್ಮರನ್ನು ಕ್ರಮವಾಗಿ ಸೃಷ್ಟಿಸಿ, ಮುಂದೆ ಮರೀಚಿ, ಅತ್ರಿ, ಪುಲಹ, ಅಂಗಿರಸ, ಕ್ರತುಮುನಿ, ಪುಲಸ್ತ್ಯ, ವಸಿಷ್ಠ, ನಾರದ, ವರುಣ, ಭೃಗು ಮಹರ್ಷಿಗಳೆಂಬ ಹತ್ತುಜನ ಮಾನಸಪುತ್ರರನ್ನು ಸೃಜಿಸಿದನು.

೨೬. ಹೀಗೆ ಮಾನಸಪುತ್ರರು ಜನಿಸಿದ ಬಳಿಕ, ಬ್ರಹ್ಮನ ಮನಸ್ಸಿನಿಂದ ಸುಂದರವಾದ ರೂಪವುಳ್ಳ, ಸಂಧ್ಯೆಯೆಂದು ಪ್ರಸಿದ್ಧಳಾದ ರಮಣಿಯೋರ್ವಳು ಹುಟ್ಟಿದಳು. ಇವಳಿಗೆ ಸಾಯಂಸಂಧ್ಯೆಯೆಂದೂ ಜಯಂತಿಕೆಯೆಂದೂ ಹೆಸರುಂಟು.

ನಾಮ್ನಾ ಸಂಧ್ಯೇತಿ ವಿಖ್ಯಾತಾ ಸಾಯಂಸಂಧ್ಯಾ ಜಯಂತಿಕಾ ।
ನ ತಾದೃಶೀ ದೇವಲೋಕೇ ನ ಮರ್ತ್ಯೇ ನ ರಸಾತಲೇ ॥ ೨೭ ॥
ಕಾಲತ್ರಯೇಽಪಿ ಭವಿತಾ ಸಂಪೂರ್ಣಗುಣಶಾಲಿನೀ ।
ನಿಸರ್ಗಚಾರುನೀಲೇನ ಕಚಭಾರೇಣ ರಾಜತೇ ॥ ೨೮ ॥
ಮಯೂರೀವ ವಿಚಿತ್ರೇಣ ವರ್ಷಾಸು ದ್ವಿಜಸತ್ತಮಾಃ ।
ಆರಕ್ತಗೌರಮಲಿನಮಾಕರ್ಣಾಂತಂ ತಥಾಲಕೈಃ ॥ ೨೯ ॥
ರೇಜೇ ಸುರಾಧಿಪಧನುಶ್ಚಾರು ಬಾಲೇಂದುಸನ್ನಿಭಂ ।
ಪ್ರಫುಲ್ಲನೀಲನಲಿನಶಾ ಮಲಂ ನಯನದ್ವಯಂ ॥ ೩೦ ॥
ಚಕಾಶೇ ಚಕಿತಾಯಾಸ್ತು ಕುರಂಗ್ಯಾಃ ಸದೃಶಂ ಚಲಂ ।
ನಿಸರ್ಗಚಂಚಲಂ ಚಾರು ಭ್ರೂಯುಗ್ಮಂ ಶ್ರವಣಾಯತಂ ॥ ೩೧ ॥

---

೨೭. ಅಂತಹ ಸುಂದರಿಯು ಸ್ವರ್ಗದಲ್ಲಿಯೂ, ಭೂಲೋಕದಲ್ಲಿಯೂ, ಪಾತಾಳದಲ್ಲಿಯೂ ಇರುವುದಿಲ್ಲ. ಅವಳೇ ಎಲ್ಲ ಗುಣಗಳಿಂದ ಕೂಡಿದವಳಾಗಿ ಬೆಳಿಗ್ಗೆ ಮಧ್ಯಾಹ್ನ ಸಾಯಂಕಾಲ—ಈ ಮೂರು ಕಾಲಗಳಲ್ಲಿಯೂ ಸಂಧ್ಯೆಯ ರೂಪದಿಂದ ಬೆಳಗುತ್ತಾಳೆ.

೨೮. ಓ ಬ್ರಾಹ್ಮಣೋತ್ತಮರೇ, ಅವಳು ಸ್ವಭಾವವಾಗಿ ಸುಂದರವಾಗಿಯೂ ಕಪ್ಪಾಗಿಯೂ ಪುಷ್ಪಾದಿಗಳಿಂದ ಅಲಂಕರಿಸಲ್ಪಟ್ಟು ವಿಚಿತ್ರವಾಗಿಯೂ ಇರುವ ಕೇಶಪಾಶಗಳಿಂದ, ಮಳೆಗಾಲದಲ್ಲಿ ವಿಚಿತ್ರವರ್ಣದ ಗರಿಗಳಿಂದ ಕೂಡಿದ ನವಿಲಿನಂತೆ, ಪ್ರಕಾಶಿಸುತ್ತಾಳೆ.

೨೯. - ೩೦. ಅಗಲವಾದ, ಮತ್ತು ಮುಂಗುರುಗಳಿಂದ ಸ್ವಲ್ಪ ಮಲಿನವಾದ, ಅರಳಿದ ಕನ್ನೈದಿಲೆಗಳಂತೆ ಕಪ್ಪಾದ ಅವಳ ಕಣ್ಣುಗಳು ಕಾಮನ ಬಿಲ್ಲಿನಂತೆ ಸುಂದರವಾಗಿಯೂ ಬಾಲಚಂದ್ರನಂತೆಯೂ ಪ್ರಕಾಶಿಸಿತು.

೩೧. ಮತ್ತು ಹೆದರಿದ ಹೆಣ್ಣು ಜಿಂಕೆಯಂತೆ ಸ್ವಾಭಾವಿಕವಾಗಿ ಚಟುವಟಿಕೆಯಿಂದ ಚಂಚಲವಾದ, ಕಿವಿಯವರೆಗೆ ವ್ಯಾಪಿಸಿ ಅಗಲವಾದ, ಸುಂದರವಾಗಿರುವ ಅವಳ ಹುಬ್ಬುಗಳೆರಡು ತುಂಬ ಪ್ರಕಾಶಿಸಿದವು.

ವಿಾನಾಂಕಕೋದಂಡಸಮಂ ನೀಲಂ ತಸ್ಯಾ ದ್ವಿಜೋತ್ತಮಾಃ
ಭ್ರೂಮಧ್ಯಾಧೋ ನಿಮ್ನಭಾಗಾದಾಯತಪ್ರಾಂಶುನಾಸಿಕಾ ॥ ೩೨ ॥
ಲಾವಣ್ಯಾನಿ ದ್ರವಂತೀವ ಲಲಾಟಾತ್ತಿಲಪುಷ್ಪವತ್ ।
ತದ್ವಕ್ತ್ರಂ ಶೋಣಪದ್ಮಾಭಂ ಪೂರ್ಣಚಂದ್ರಸಮಪ್ರಭಂ ॥ ೩೩ ॥
ಬಿಂಬಾಧರಾರುಣೈರ್ಮ್ನಾಭಿರೇಜೇ ರಾಗಿಮನೋಹರಂ ।
ಸೌಂದರ್ಯಲಾವಣ್ಯಗುಣೈರಾಪೂರ್ಣವದನಂ ಪುನಃ ॥ ೩೪ ॥
ಅಭಿತಶ್ಚಿಬುಕಂ ಯಾತುಮುದ್ಯತಾವಿವ ತತ್ಕುಚೌ ।
ರಾಜೀವಕುಡ್ಮಲಾಕಾರೌ ಪೀನೋತ್ತುಂಗೌ ನಿರಂತರೌ ॥ ೩೫ ॥
ಶ್ಯಾಮಾಸ್ಯೌ ತತ್ಕುಚೌ ವಿಪ್ರಾ ಮುನೀನಾಮಪಿ ಮೋಹನೌ ।

---

೩೨. ಎಲೈ ಬ್ರಾಹ್ಮಣೋತ್ತಮರೇ ಅವಳ ಭ್ರೂದ್ವಯವು ತುಂಬಾ ಕಪ್ಪಾಗಿದ್ದು ಮನ್ಮಥನ ಧನುಸ್ಸಿನಂತೆ ಇತ್ತು. ಅವಳ ಹುಬ್ಬುಗಳ ಮಧ್ಯಭಾಗವು ಅಲ್ಲಿಂದಲೇ ಹೊರಟು ಕೆಳಗೆ ಕೊನೆಯಲ್ಲಿ ಸ್ವಲ್ಪ ವಿಸ್ತಾರವಾದ ನಾಸಿಕೆಯಿಂದ ಕೂಡಿದುದಾಗಿತ್ತು.

ಲಲಾಟದೇಶದಿಂದ ಸೌಂದರ್ಯವು ನಾಸಿಕೆಯ ರೂಪದಿಂದ ಕೆಳಗಿಳಿಯುವಂತೆ ತೋರುತ್ತಿತ್ತು. ಮತ್ತು ಆ ಭ್ರೂಮಧ್ಯವು ತಿಲಪುಷ್ಪಾಕಾರವುಳ್ಳದ್ದಾಗಿ ಶೋಭಿಸುತ್ತಲಿತ್ತು.

೩೩. - ೩೪. ಮತ್ತು ಕೆಂಪು ಪದ್ಮದಂತಿರುವ, ಉದಯಿಸುತ್ತಿರುವ ಪೂರ್ಣಚಂದ್ರನ ಪ್ರಭೆಯುಳ್ಳ, ಅವಳ ಮುಖವು, ನಸುಗೆಂಪಾಗಿರುವುದರಿಂದ ಬಿಂಬಫಲದಂತಿರುವ ಅವಳ ಕೆಂದುಟಿಯ ಕೆಂಪಿನಿಂದ ಇನ್ನಷ್ಟು ಮನೋಹರವಾಗಿ ಕಾಣಿಸುತ್ತಲಿತ್ತು.

೩೫. ಪದ್ಮಕೋಶದಂತೆ ಆಕಾರವುಳ್ಳ ಮತ್ತು ಮುಂದಕ್ಕೆ ಉಬ್ಬಿ ವಿಸ್ತಾರವಾಗಿ ಬೆಳೆದಿದ್ದ ಅವಳ ಸ್ತನಗಳು ಗಂಡಸ್ಥಳವನ್ನು ಪಡೆಯಲೋಸುಗವೋ ಎಂಬಂತೆ ತುಂಬ ಉನ್ನತವಾಗಿದ್ದವು.

ಓ ಬ್ರಾಹ್ಮಣರೇ, ಕಪ್ಪಾದ ತುದಿಯುಳ್ಳ ಅವಳಾ ಕುಚಗಳು ವಿರಕ್ತರಾದ ಮುನಿಗಳನ್ನೂ ಮೋಹಗೊಳಿಸುವಂತಿದ್ದವು.

ವಲಿಭಾಜಿಕ್ಷೀಣಮಧ್ಯಮುಷ್ಟಿಗ್ರಾಹ್ಯಮಿವಾಶುಗಂ ॥ ೩೬ ॥
ತನ್ಮಧ್ಯಂ ದದೃಶುಃ ಸರ್ವೇ ಶಕ್ತಿತುಲ್ಯಂ ಮನೋಭುವಃ ।
ತಸ್ಯಾಶ್ಚೋರುಯುಗಂ ರೇಜೇ ಸ್ಥೂಲೋರ್ಧ್ವಂ ಕರಭಾಯತಂ ॥ ೩೭ ॥
ಆನಮದ್ವಾರಣಕರಪ್ರತಿಮಂ ಮೃದುಮುಂಥರಂ ॥
ಸ್ಥಲಾಂಬುಜಾರುಣಂ ಪಾದಯುಗ್ಮಂ ಸತ್ಪಾರ್ಷ್ಣಿರಾಜಿತಂ ॥ ೩೮ ॥
ಅಂಗುಲೀದಲಸಂಕೀರ್ಣಂ ಕುಸುಮಾಯುಧಬಾಣವತ್ ॥
ತಾಂ ಚಾರುದರ್ಶನಾಂ ತನ್ವೀಂ ತನುರೋಮಾವಲೀವೃತಾಂ ॥ ೩೯ ॥
ಸಸ್ವೇದವದನಾಂ ದೀರ್ಘನಯನಾಂ ಚಾರುಹಾಸಿನೀಂ ।
ಚಾರುಕರ್ಣಯುಗಾಂ ಕಾಂತಾಂ ತ್ರಿಗಂಭೀರಾಂ ಷಡುನ್ನತಾಂ ॥ ೪೦ ॥
ದೃಷ್ಟ್ವಾ ಧಾತಾ ಸಮುತ್ಥಾಯ ಚಿಂತಯಾಮಾಸ ಹೃದ್ಗತಂ ।

---

೩೬. ಅವಳ ನಡುವು ತ್ರಿವಳಿಗಳಿಂದ ಕೂಡಿದುದಾಗಿಯೂ, ತುಂಬ ಕ್ಷೀಣವಾಗಿಯೂ ಇದ್ದು, ಒಂದು ಮುಷ್ಟಿಯಿಂದ ಹಿಡಿಯುವಷ್ಟು ಚಿಕ್ಕ ದಾಗಿತ್ತು. ಮನ್ಮಥನ ಶಕ್ತ್ಯಾಯುಧದಂತಿರುವ ಕಾಮಿಗಳ ಹೃದಯವನ್ನು ಶೀಘ್ರವಾಗಿ ಭೇದಿಸುವ ಅವಳ ಆ ನಡುವನ್ನು ಎಲ್ಲರೂ ಆಗ ನೋಡಿದರು.

೩೭. ದಪ್ಪವಾಗಿಯೂ ಉದ್ದವಾಗಿಯೂ ವಿಶಾಲವಾಗಿಯೂ ಇದ್ದ ಅವಳ ತೊಡೆಗಳು ಸ್ವಲ್ಪ ಬಗ್ಗಿರುವ ಆನೆಯ ಸೊಂಡಿಲಿನಂತೆ ಮೃದುವಾಗಿಯೂ ಪುಷ್ಟವಾಗಿಯೂ ಇದ್ದವು.

೩೮. ಅವಳ ಹೆಜ್ಜೆಗಳು, ಸ್ಥಳಕಮಲದಂತೆ ಕೆಂಪಾಗಿದ್ದು ಸುಂದರವಾದ ಹಿಮ್ಮಡಿಯಿಂದಲೂ ಬೆರಳುಗಳಿಂದಲೂ ಕೂಡಿ ಮನ್ಮಥನ ಬಾಣಗಳಂತೆ ಪ್ರಕಾಶಿಸುತ್ತಿದ್ದವು.

೩೯. - ೪೦. ಈ ರೀತಿಯಾಗಿ ಸುಂದರವಾದ ನೋಟದಿಂದ ಒಪ್ಪುತ್ತಲಿರುವ, ಕೃಶಾಂಗಿಯಾದ, ಸೂಕ್ಷ್ಮವಾದ ರೋಮರಾಜಿಗಳುಳ್ಳ, ಮುತ್ತಿ ನಂತಿರುವ ಬೆವರು ಹನಿಗಳಿಂದ ಕೂಡಿದ ಮುಖವುಳ್ಳ, ಸುಂದರವಾದ ಮಂದಹಾಸದಿಂದ ಯುಕ್ತಳಾಗಿಯೂ ಮನೋಹರವಾದ ಕರ್ಣದ್ವಯದಿಂದ

ದಕ್ಷಾದಯಸ್ತೇ ಸ್ವಷ್ಟಾರೋ ಮರೀಚ್ಯಾದ್ಯಾಸ್ತು ಮಾನಸಾಃ ॥ ೪೧ ॥
ದಧ್ಯುಃ ಸಮುತ್ಸುಕಾಃ ಸರ್ವೇ ತಾಂ ದೃಷ್ಟ್ವಾ ವರವರ್ಣಿನೀಂ ।
ಕಿಂ ಕರ್ಮಾಸ್ಯಾ ಭವೇತ್ಸೃಷ್ಟಾ ಕಸ್ಯ ವಾ ವರವರ್ಣಿನೀ ॥ ೪೨ ॥
ಭವಿಷ್ಯತೀತಿ ತೇ ಸರ್ವೇ ಚಿಂತಯಾಮಾಸುರುತ್ಸುಕಾಃ ।
ಏವಂ ಚಿಂತಯತಸ್ತಸ್ಯ ಬ್ರಹ್ಮಣೋ ಮುನಿಸತ್ತಮಾಃ ॥ ೪೩ ॥
ಮನಸಃ ಪುರುಷೋ ವಲ್ಗುರಾವಿರ್ಭೂತೋ ವಿನಿಃಸೃತಃ ।
ಕಾಂಚನೀಚೂರ್ಣಪೀತಾಭಃ ಪೀನೋರಸ್ಕಃ ಸುನಾಸಿಕಃ ॥ ೪೪ ॥
ಸುವೃತ್ತೋರುಕಟೀಜಂಘೋ ನೀಲವೇಷ್ಟಿತಕೇಶರಃ ॥

ಕ್ಷೋಭಿಸುತ್ತಲೂ ಇರುವ, ಗಮನದಲ್ಲಿಯೂ, ನಾಭಿಯಲ್ಲಿಯೂ, ಆಭಿಪ್ರಾಯದಲ್ಲಿಯೂ ಗಂಭೀರಳಾದ, ಜಘನ, ಸ್ತನಗಳು ಮತ್ತು ನಿತಂಬಭಾಗ ಸೌಂದರ್ಯಗಳಲ್ಲಿ ಉನ್ನತಳಾದ ಆ ಸಂಧ್ಯೆಯನ್ನು ನೋಡಿ ಬ್ರಹ್ಮನು ಎದ್ದು ನಿಂತು ತನ್ನಲ್ಲಿಯೇ ಯೋಚಿಸಿದನು.

೪೧. ದಕ್ಷನೇ ಮೊದಲಾದ ಬ್ರಹ್ಮರೂ, ಮರೀಚಿಮುನಿಯೇ ಮೊದಲಾದ ಮಾನಸಪುತ್ರರೂ ಸಹ, ಸುಂದರವಾದ ಮಂದಹಾಸವುಳ್ಳ ಆ ಸಂಧ್ಯೆಯನ್ನು ನೋಡಿ ತುಂಬಾ ಕುತೂಹಲದಿಂದ ಕೂಡಿದವರಾಗಿ ಹೀಗೆ ಆಲೋಚಿಸಿದರು:—

೪೨. ಈ ಸುಂದರಿಯು ಎಂತಹ ಪುಣ್ಯಕರ್ಮದಿಂದ ಸೃಷ್ಟಳಾಗಿರುತ್ತಾಳೆ ಮತ್ತು ಉತ್ತಮಸ್ತ್ರೀಯಾದ ಇವಳು ಯಾವ ಪುಣ್ಯಾತ್ಮನ ಪತ್ನಿಯಾಗತಕ್ಕವಳು? ಎಂದು ಅವರೆಲ್ಲರೂ ಕುತೂಹಲದಿಂದ ಯೋಚಿಸಿದರು.

೪೩. ಓ ಮುನಿಶ್ರೇಷ್ಠರೇ, ಹೀಗೆ ಆ ಬ್ರಹ್ಮನು ಯೋಚಿಸುತ್ತಲಿರಲು ಅವನ ಮನಸ್ಸಿನಿಂದ ಸುಂದರನಾದ ಓರ್ವ ಪುರುಷನು ಆವಿರ್ಭವಿಸಿ ಹೊರಹೊಮ್ಮಿದನು.

೪೪. ಆ ಪುರುಷನು ಹರಿದ್ರಾಚೂರ್ಣದಂತೆ ಹಳದಿಯ ಬಣ್ಣವುಳ್ಳವನೂ, ಉಬ್ಬಿದ ಭುಜಗಳುಳ್ಳವನೂ, ಸುಂದರವಾದ ನಾಸಿಕೆಯುಳ್ಳವನೂ, ತುಂಬಿದ ದುಂಡನೆಯ ತೊಡೆಗಳು ಸೊಂಟ, ಮೊಳಕಾಲುಗಳುಳ್ಳವನೂ, ಮತ್ತು ಕಪ್ಪಾದ ಕೇಶಪಾಶವುಳ್ಳವನೂ ಆಗಿದ್ದನು.

ಲಗ್ನಭ್ರೂಯುಗಲೋ ಲೋಲಃ ಪೂರ್ಣಚಂದ್ರನಿಭಾನನಃ ॥ ೪೫ ॥
ಕಪಾಟವಿಸ್ತೀರ್ಣಹೃದಿ ರೋಮರಾಜಿವಿರಾಜಿತಃ ॥

ಶುಭ್ರಮಾತಂಗಕರವತ್ಪೀನನಿಸ್ತಲಬಾಹುಕಃ ॥ ೪೬ ॥
ಆರಕ್ತಪಾಣಿನಯನಮುಖಪಾದಕರೋದ್ಭವಃ ॥

ಕ್ಷೀಣಮಧ್ಯಶ್ಚಾರುದಂತಃ ಪ್ರಮತ್ತಗಜಬಂಧನಃ ॥ ೪೭ ॥
ಪ್ರಫುಲ್ಲಪದ್ಮಪತ್ರಾಕ್ಷಃ ಕೇಶರಘ್ರಾಣತರ್ಪಣಃ ॥

ಕಂಬುಗ್ರೀವೋ ಮೀನಕೇತುಃ ಪ್ರಾಂಶುರ್ಮಕರವಾಹನಃ ॥ ೪೮ ॥
ಪಂಚಪುಷ್ಪಾಯುಧೋ ವೇಗೀ ಪುಷ್ಪಕೋದಂಡಮಂಡಿತಃ ॥

---

೪೫. ಅಲ್ಲದೆ ಅವನು ಸುಂದರವಾದ ಹುಬ್ಬುಗಳಿಂದ ಚಂಚಲನೂ, ಪೂರ್ಣಚಂದ್ರನಂತಿರುವ ಮುಖವುಳ್ಳವನೂ ಹಲಗೆಯಂತೆ ವಿಸ್ತಾರವಾದ ಎದೆಯಲ್ಲಿ ಸುಂದರವಾದ ರೋಮಪಂಕ್ತಿಯಿಂದ ಶೋಭಿಸುವವನೂ ಆಗಿದ್ದನು.

೪೬. ಮತ್ತು ಶುಭ್ರವಾದ ಆನೆಯ ಸೊಂಡಿಲಿನಂತೆ ದಪ್ಪವೂ ದುಂಡಾಗಿಯೂ ಉದ್ದವಾಗಿಯೂ, ಇರುವ ಸಾಟಿಯಿಲ್ಲದ ಬಾಹುಗಳಿಂದ ಕೂಡಿದವನೂ, ನಸುಗೆಂಪಾದ ಅಂಗೈ, ನೇತ್ರಗಳ ಕೊನೆ, ಮುಖ, ಅಂಗಾಲು, ಉಗುರುಗಳುಳ್ಳವನೂ ಆಗಿದ್ದನು.

೪೭. ಅವನ ನಡುವು ಚಿಕ್ಕದಾಗಿಯೂ ಸುಂದರವಾಗಿಯೂ ಇತ್ತು. ಅವನ ಹಲ್ಲುಗಳು ಮನೋಹರವಾಗಿದ್ದವು. ಅವನ ಶರೀರವು ಕೊಬ್ಬಿ ಬೆಳೆದ ಸಲಗದಂತೆ ತುಂಬಿಕೊಂಡು ಪುಷ್ಟವಾಗಿತ್ತು. ಮತ್ತು ಅವನು ಕಮಲದಂತೆ ಅರಳಿದ ಸುಂದರವಾದ ಕಣ್ಣುಗಳಿಂದಲೂ ಸಂಪಿಗೆಯ ಮೊಗ್ಗಿನಂತೆ ಕೋಮಲವಾದ ನಾಸಿಕೆಯಿಂದಲೂ ಒಪ್ಪುತ್ತ ಎಲ್ಲರ ಮನಸ್ಸನ್ನೂ ಸಂತೋಷಗೊಳಿಸುತ್ತಲಿದ್ದನು.

೪೮. ಮತ್ತು ಮೀನವೇ ಧ್ವಜವಾಗಿವುಳ್ಳ ಆ ಪುರುಷನು ಶಂಖದಂತೆ ಸುಂದರವಾದ ಕತ್ತಿನಿಂದಲೂ, ಉನ್ನತವಾದ ಶರೀರದಿಂದಲೂ ಒಪ್ಪುತ್ತ ಮಕರವನ್ನು ಏರಿ ಕುಳಿತುಕೊಂಡು, ಐದುಪುಷ್ಪಗಳ ಬಾಣಗಳನ್ನೂ ಹೂವಿನ ಧನುಸ್ಸನ್ನೂ ಹಸ್ತದಲ್ಲಿ ಧರಿಸಿ ಶೋಭಿಸುತ್ತಿದ್ದನು.

ಕಾಂತಃ ಕಟಾಕ್ಷಪಾತೇನ ಭ್ರಾಮಯನ್ನಯನದ್ವಯಂ ॥ ೪೯ ॥
ಸುಂಗಧಿಮುರುತಾ ಭಾಂತಂ ಶೃಂಗಾರರಸಸೇವಿತಂ ।

ತಂ ವೀಕ್ಷ್ಯ ತಾದೃಶಂ ದಕ್ಷಪ್ರಮುಖಾ ಮಾನಸಾಶ್ಚತೇ ॥ ೫೦ ॥
ಮರೀಚ್ಯಾದ್ಯಾ ದಶ ತತೋ ವಿಸ್ಮಯಾವಿಷ್ಟಚೇತಸಃ ।

ಔತ್ಸುಕ್ಯಂ ಪರಮಂ ಜಗ್ಮುರಾಪುರ್ನೈಕಾರಿಕಂ ಮನಃ ॥ ೫೧ ॥
ಸ ಚಾಪಿ ವೇಧಸಂ ವೀಕ್ಷ್ಯ ಸ್ರಷ್ಟಾರಂ ಜಗತಾಂ ಪತಿಂ ।
ಪ್ರಣಮ್ಯ ಪುರುಷಃ ಪ್ರಾಹ ವಿನಯಾನತಕಂಧರಃ ॥ ೫೨ ॥

॥ ಪುರುಷ ಉವಾಚ ॥

ಕಿಂ ಕರಿಷ್ಯಾಮ್ಯಹಂ ಕರ್ಮ ಬ್ರಹ್ಮಂಸ್ತತ್ರ ನಿಯೋಜಯ ।
ಮಾ ನ್ಯಾಯ್ಯೇ ಪುರುಷೋ ಯಸ್ಮಾದುಚಿತೇ ಶೋಭತೇ ವಿಧೇ ॥ ೫೩ ॥

೪೯-೫೦-೫೧. ಸುಂದರವಾದ ಅವನು ತನ್ನ ನಗುಮೊಗದ ದೃಷ್ಟಿಯಿಂದ ಕಣ್ಣುಗಳನ್ನು ಅತ್ತಿತ್ತ ತಿರುಗಿಸುತ್ತ ಸುವಾಸನೆಯ ಗಾಳಿಯಿಂದಲೂ, ಶೃಂಗಾರರಸದಿಂದಲೂ ಕೂಡಿ ನಯನಮನೋಹರವಾಗಿ ಒಪ್ಪುತ್ತಿದ್ದನು. ಈ ವಿಧವಾಗಿರುವ ಸುಂದರಪುರುಷನನ್ನು ನೋಡಿ ದಕ್ಷನೇ ಮೊದಲಾದ ಪ್ರಜಾಪತಿಗಳೂ, ಮರೀಚಿಯೇ ಮೊದಲಾದ ಮಾನಸಪುತ್ರರೂ ಸಹ ತುಂಬ ಆಶ್ಚರ್ಯಗೊಂಡು ಕುತೂಹಲ ಯುಕ್ತರಾಗಿ ಒಂದು ಬಗೆಯ ವಿಕಾರವನ್ನು ಹೊಂದಿದವರಾದರು.

೫೨. ಆಮೇಲೆ ಆ ಪುರುಷನೂ ಸಹ, ಸೃಷ್ಟಿಕರ್ತನಾಗಿಯೂ ಜಗತ್ತಿಗೆ ಒಡೆಯನಾಗಿಯೂ ಇರುವ ಬ್ರಹ್ಮನನ್ನು ನೋಡಿ, ವಿನಯದಿಂದ ಕತ್ತನ್ನು ಬಗ್ಗಿಸಿ, ನಮಸ್ಕರಿಸಿ, ಈ ರೀತಿ ಹೇಳಿದನು.

೫೩. ಆ ಪುರುಷನು ಹೀಗೆ ಹೇಳಿದನು—ಓ ಬ್ರಹ್ಮನೇ, ನಾನಾವ ಕೆಲಸವನ್ನು ಮಾಡಬೇಕೋ ಅದರಲ್ಲಿ ನನ್ನನ್ನು ನಿಯೋಜಿಸು. ಆದರೆ ನನಗೆ ಯೋಗ್ಯವಲ್ಲದ ಕೆಲಸವನ್ನು ಮಾಡುವಂತೆ ಮಾತ್ರ ಹೇಳಬೇಡ. ಏಕೆಂದರೆ, ಪ್ರತಿಯೊಬ್ಬನೂ ತನಗೆ ಯೋಗ್ಯವಾದ ಕೆಲಸದಲ್ಲಿ ನಿರತನಾದರೆ ಶೋಭಿಸುತ್ತಾನೆ.

ಅಭಿಧಾನಂ ಚ ಯದ್ಯೋಗ್ಯಂ ಸ್ಥಾನಂ ಪತ್ನೀ ಚ ಯಾವಮು ।
ತನ್ಮೇ ಕುರುಷ್ವ ಲೋಕೇಶ ತ್ವಂ ಸೃಷ್ಟಾ ಜಗತಾಂ ಯತಃ ॥ ೫೪ ॥

॥ ಮಾರ್ಕಂಡೇಯ ಉವಾಚ ॥

ಏವಂ ತಸ್ಯ ವಚಃ ಶ್ರುತ್ವಾ ಪುರುಷಸ್ಯ ಮಹಾತ್ಮನಃ ।
ಕ್ಷಣಂ ನ ಕಿಂಚಿತ್ಪ್ರೋವಾಚ ಸ್ವಸೃಷ್ಟಾವಪಿ ವಿಸ್ಮಿತಃ ॥ ೫೫ ॥
ತತೋ ಮನಃ ಸುಸಂಯಮ್ಯ ಸಮ್ಯಗುತ್ಸೃಜ್ಯ ವಿಸ್ಮಯಂ ।
ಉವಾಚ ಪುರುಷಂ ಬ್ರಹ್ಮಾ ತತ್ಕರ್ಮೋದ್ದೇಶಮಾವಹನ್ ॥ ೫೬ ॥

॥ ಬ್ರಹ್ಮೋವಾಚ ॥

ಅನೇನ ಚಾರುರೂಪೇಣ ಪುಷ್ಪಬಾಣೈಶ್ಚ ಪಂಚಭಿಃ ।
ಮೋಹಯನ್ಪುರುಷಾಂಸ್ತ್ರೀಶ್ಚ ಕುರು ಸೃಷ್ಟಿಂ ಸನಾತನೀಂ ॥ ೫೭ ॥

---

೫೪. ಜಗದೊಡೆಯನಾದ ಓ ಬ್ರಹ್ಮನೇ, ನೀನೇ ಎಲ್ಲ ಜಗತ್ತನ್ನೂ ಸೃಷ್ಟಿಸುವವನು. ಆದುದರಿಂದ ಈಗ ನನಗೆ ಯೋಗ್ಯವಾದ ಹೆಸರೇನು? ನನ್ನ ಸ್ಥಾನಮಾನಗಳೇನು? ಇವುಗಳನ್ನೂ ನನಗೆ ಅನುರೂಪಳಾದ ಹೆಂಡತಿಯನ್ನೂ ಕಲ್ಪಿಸು.

೫೫ ಮಾರ್ಕಂಡೇಯ ಮುನಿಯು ಹೇಳಿದನು—ಈ ರೀತಿಯಾಗಿ ಹೇಳುತ್ತಲಿರುವ ಮಹಾತ್ಮನಾದ ಆಪುರುಷನ ಮಾತನ್ನು ಕೇಳಿ ಬ್ರಹ್ಮನು, ತಾನೇ ಅವನನ್ನು ಸೃಷ್ಟಿಸಿದ್ದರೂ, ವಿಸ್ಮಯಗೊಂಡು ಸ್ವಲ್ಪಹೊತ್ತು ಏನನ್ನೂ ಹೇಳದೆ ಸುಮ್ಮನಿದ್ದನು.

೫೬. ಆಮೇಲೆ ಬ್ರಹ್ಮನು ತನ್ನ ಮನಸ್ಸನ್ನು ಸಮಾಧಾನಕ್ಕೆ ತಂದು ಕೊಂಡು, ಆಶ್ಚರ್ಯವನ್ನು ಬಿಟ್ಟು, ಆ ಪುರುಷನು ಮಾಡಬೇಕಾದ ಕೆಲಸವನ್ನೂ ಉದ್ದೇಶವನ್ನೂ ಮನಸ್ಸಿನಲ್ಲಿ ನಿಶ್ಚಯಿಸಿ, ಅವನನ್ನು ಕುರಿತು ಹೀಗೆ ಹೇಳಿದನು.

೫೭. ಬ್ರಹ್ಮನು ಹೇಳಿದನು—ಓ ಪುರುಷನೇ, ಈ ನಿನ್ನ ಸುಂದರವಾದ ರೂಪದಿಂದಲೂ, ಐದು ಕುಸುಮಬಾಣಗಳಿಂದಲೂ ಪುರುಷರನ್ನೂ ಯುವತಿಯರನ್ನೂ ಮೋಹಗೊಳಿಸುತ್ತಾ ಅನಾದಿಯಾಗಿ ಬಂದ ಈ ಸೃಷ್ಟಿಯನ್ನು ಬೆಳೆಯಿಸುವವನಾಗು.

ನ ದೇವೋ ನ ಚ ಗಂಧರ್ವೋ ನ ಕಿನ್ನರಮಹೋರಗಾಃ ।
ನಾಸುರೋ ನ ಚ ದೈತ್ಯೋ ವಾ ನ ವಿದ್ಯಾಧರರಾಕ್ಷಸಾಃ ॥ ೫೮ ॥

ನ ಯಕ್ಷಾ ನ ಪಿಶಾಚಾಶ್ಚ ನ ಭೂತಾ ನ ವಿನಾಯಕಾಃ ।
ನ ಗುಹ್ಯಕಾ ನ ವಾ ಸಿದ್ಧಾ ನ ಮನುಷ್ಯಾ ನ ಪಕ್ಷಿಣಃ ॥ ೫೯ ॥

ಪಶವೋ ನ ಮೃಗಾಃ ಕೀಟಪತಂಗಾ ಲಜಜಾಶ್ಚ ಯೇ ।
ನ ತೇ ಸರ್ವೇ ಭವಿಷ್ಯಂತಿ ನ ಲಕ್ಷ್ಯಾ ಯೇ ಶರಸ್ಯ ತೇ ॥ ೬೦ ॥

ಅಹಂ ವಾ ವಾಸುದೇವೋ ವಾ ಸ್ಥಾಣುರ್ವಾ ಪುರುಷೋತ್ತಮ ।
ಭವಿಷ್ಯಾಮಸ್ತವ ವಶೇ ಕಿಮನ್ಯೈಃ ಪ್ರಾಣಧಾರಿಭಿಃ ॥ ೬೧ ॥

ಪ್ರಚ್ಛನ್ನರೂಪೀ ಜಂತೂನಾಂ ಪ್ರವಿಶನ್ ಹೃದಯಂ ಸದಾ ।
ಸುಖಹೇತುಃ ಸ್ವಯಂ ಭೂತ್ವಾ ಕುರು ಸೃಷ್ಟಿಂ ಸನಾತನೀಂ ॥ ೬೨ ॥

ತ್ವತ್ಪುಷ್ಪಬಾಣಸ್ಯ ಸದಾ ಮುಖ್ಯಂ ಲಕ್ಷ್ಯಂ ಮನೋಽಸ್ತು ಚ ।
ಸರ್ವೇಷಾಂ ಪ್ರಾಣಿನಾಂ ನಿತ್ಯಂ ಮುದನೋದಕರೋ ಭವಾನ್ ॥ ೬೩ ॥

೫೮-೫೯-೬೦. ದೇವತೆಗಳು, ಗಂಧರ್ವರು, ಕಿನ್ನರರು, ದೊಡ್ಡ ಸರ್ಪಗಳು, ಅಸುರರು ರಾಕ್ಷಸರು, ವಿದ್ಯಾಧರರು, ದೈತ್ಯರು, ಯಕ್ಷರು, ಪಿಶಾಚಗಳು, ಭೂತಗಳು ವಿನಾಯಕಗ್ರಹಗಳು, ಗುಹ್ಯಕರು, ಸಿದ್ಧರು, ಮನುಷ್ಯರು, ಪಕ್ಷಿಗಳು, ಪಶುಗಳು, ಮೃಗಗಳು, ಕ್ರಿಮಿಕೀಟಗಳು, ಭ್ರಮರಗಳು, ಜಲಚರಪ್ರಾಣಿಗಳು ಇವರೆಲ್ಲರೂ ನಿನ್ನ ಬಾಣಗಳಿಗೆ ಗುರಿಯಾಗದೆ ಇರಲಾರರು.

೬೧. ಓ ಪುರುಷನೇ, ನಾನೂ, ವಿಷ್ಣುವೂ ಈಶ್ವರನೂ ಸಹ ನಿನ್ನ ಅಧೀನರಾಗುವೆವು. ಇನ್ನುಳಿದ ಇತರ ಪ್ರಾಣಿಗಳ ಮಾತೇನು?

೬೨. ನೀನು ಕಣ್ಣಿಗೆ ಕಾಣದವನಾಗಿ ಸೂಕ್ಷ್ಮರೂಪದಿಂದ ಪ್ರಾಣಿಗಳ ಮನಸ್ಸನ್ನು ಪ್ರವೇಶಿಸಿ, ಅವರಿಗೆ ಸುಖವನ್ನುಂಟುಮಾಡುತ್ತಾ ಅನಾದಿಯಾಗಿ ಬಂದ ಈ ಸೃಷ್ಟಿಯನ್ನು ಮುಂದುವರಿಸು.

೬೩. ಮತ್ತು ನಿನ್ನ ಪುಷ್ಪಬಾಣಗಳಿಗೆ ಮುಖ್ಯವಾದ ಗುರಿಯು ಮನಸ್ಸಾಗಲಿ. ನೀನು ಸಮಸ್ತ ಪ್ರಾಣಿಗಳಿಗೂ ಮದವನ್ನೂ, ಸಂತೋಷವನ್ನೂ ಯಾವಾಗಲೂ ಉಂಟುಮಾಡುತ್ತಿರುವವನಾಗು.

ಇತಿ ತೇ ಕರ್ಮ ಕಥಿತಂ ಸೃಷ್ಟಿಪ್ರಾವರ್ತಕಂ ಪುನಃ ।
ನಾಮಾಪಿ ಚ ಗದಿಷ್ಯಾಮಿ ಯತ್ತೇ ಯೋಗ್ಯಂ ಭವಿಷ್ಯತಿ ॥ ೬೪ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಚ ಸುರಶ್ರೇಷ್ಠೋ ಮಾನಸಾನಾಂ ಮುಖಾನಿ ಚ ।
ಆಲೋಕ್ಯ ಸ್ವಾಸನೇ ಪದ್ಮೇ ಸೂಪವಿಷ್ಟೋಽಭವತ್ಕ್ಷಣಾತ್ ॥ ೬೫ ॥

॥ ಇತಿ ಶ್ರೀ ಕಾಲಿಕಾಪುರಾಣೇ ಪ್ರಥಮೋಽಧ್ಯಾಯಃ ॥

---

೬೪. ಹೀಗೆ ಸೃಷ್ಟಿಗೆ ಅನುಕೂಲವಾದ ನಿನ್ನ ಕೆಲಸವನ್ನು ಹೇಳಿದು ದಾಯಿತ್ತು. ಇನ್ನು ನಿನಗೆ ಯೋಗ್ಯವಾದ ಹೆಸರನ್ನು ಹೇಳುತ್ತೇನೆ.

೬೫. ಮಾರ್ಕಂಡೇಯ ಮುನಿಯು ಹೇಳಿದನು:—ಹೀಗೆ ಹೇಳಿ ದೇವೋತ್ತಮನಾದ ಆ ಬ್ರಹ್ಮನು ಮಾನಸಪುತ್ರರಾದ ಮರೀಚಿಮುನಿಯೇ ಮೊದಲಾದವರ ಮುಖವನ್ನು ನೋಡಿ, ಬಳಿಕ ತನ್ನ ಆಸನವಾದ ಕಮಲದಲ್ಲಿ ಸ್ವಸ್ಥವಾಗಿ ಕುಳಿತು ಕೊಂಡನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಮೊದಲನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಅಥ ಶ್ರೀಕಾಲಿಕಾಪುರಾಣೇ ದ್ವಿತೀಯೋಽಧ್ಯಾಯಃ ॥

॥ ಎರಡನೆಯ ಅಧ್ಯಾಯವು ॥

॥ ಮಾರ್ಕಂಡೇಯ ಉವಾಚ ॥

ತತಸ್ತೇ ಮುನಯಸ್ಸರ್ವೇ ತದಭಿಪ್ರಾಯವೇದಿನಃ ।
ಚಕ್ರುಸ್ತದುಚಿತಂ ನಾಮ ಮರೀಚ್ಯತ್ರಿಮುಖಾಸ್ತದಾ ॥ ೧ ॥

ಮುಖಾವಲೋಕನಾದೇವ ಜ್ಞಾತ್ವಾ ವೃತ್ತಾಂತಮನ್ಯತಃ ।
ದಕ್ಷಾದಯಸ್ತು ಸ್ರಷ್ಟಾರಃ ಸ್ಥಾನಂ ಪತ್ನೀಂ ಚ ತೇ ದದುಃ ॥ ೨ ॥

ತತೋ ನಿಶ್ಚಿತ್ಯ ನಾಮಾನಿ ಮರೀಚಿಪ್ರಮುಖಾ ದ್ವಿಜಾಃ ।
ಊಚುಃ ಸಂಗತಮೇತಸ್ಮೈ ಪುರುಷಾಯ ದ್ವಿಜೋತ್ತಮಾಃ ॥ ೩ ॥

ಎರಡನೆಯ ಅಧ್ಯಾಯವು

೧. ಮಾರ್ಕಂಡೇಯ ಮುನಿಯು ಹೇಳಿದನು:– ಆ ಬಳಿಕ ಮರೀಚಿಯೇ ಮೊದಲಾದ ಮುನಿಗಳು ಆ ಬ್ರಹ್ಮನ ಅಭಿಪ್ರಾಯವನ್ನು ತಿಳಿದವರಾಗಿ ಆ ಪುರುಷನಿಗೆ ಯೋಗ್ಯವಾದ ಹೆಸರನ್ನಿಟ್ಟರು.

೨. ಆ ಬ್ರಹ್ಮನು ತಮ್ಮ ಮುಖವನ್ನು ನೋಡಿದ್ದರಿಂದಲೇ, ದಕ್ಷನೇ ಮೊದಲಾದ ಬ್ರಹ್ಮರು ಸಕಲಸಮಾಚಾರವನ್ನೂ ತಿಳಿದವರಾಗಿ, ಆ ಪುರುಷನಿಗೆ ಯೋಗ್ಯವಾದ ಸ್ಥಾನವ (ಪದವಿಯ)ನ್ನೂ, ಪತ್ನಿಯನ್ನೂ ಕೊಟ್ಟರು.

೩. ಓ ಬ್ರಾಹ್ಮಣೋತ್ತಮರೇ, ಆಮೇಲೆ ಮರೀಚಿಯೇ ಮೊದಲಾದ ಮುನಿಗಳು ಆ ಪುರುಷನಿಗೆ ಯೋಗ್ಯವಾದ ಹೆಸರನ್ನು ನಿಶ್ಚಯಿಸಿ ಅವನನ್ನು ಕುರಿತು ಹೀಗೆ ಹೇಳಿದರು.

॥ ಋಷಯ ಊಚುಃ ॥

ಯಸ್ಮಾತ್ತ್ವಮಥ್ಯ ಚೇತಸ್ತ್ವಂ ಜಾತೋऽಸ್ಮಾಕಂ ತಥಾ ವಿಧೇಃ ।
ತಸ್ಮಾನ್ಮನ್ಮಥನಾಮ್ನಾ ತ್ವಂ ಲೋಕೇ ಖ್ಯಾತೋ ಭವಿಷ್ಯಸಿ ॥ ೪ ॥
ಜಗತ್ಸು ಕಾಮರೂಪಸ್ತ್ವಂ ತ್ವತ್ಸಮೋ ನ ಹಿ ವಿದ್ಯತೇ ।
ಅತಸ್ತ್ವಂ ಕಾಮನಾಮ್ನಾಪಿ ಖ್ಯಾತೋ ಭವ ಮನೋಭವ ॥ ೫ ॥
ಮದನಾನ್ಮದನಾಖ್ಯಸ್ತ್ವಂ ಶಂಭೋರ್ದರ್ಪಾಚ್ಚ ದರ್ಪಕಃ ।
ತಥಾ ಕಂದರ್ಪನಾಮ್ನಾಪಿ ಲೋಕೇ ಖ್ಯಾತೋ ಭವಿಷ್ಯಸಿ ॥ ೬ ॥
ತ್ವದಾಶುಗಾನಾಂ ಯದ್ವೀರ್ಯಂ ತದ್ವೀರ್ಯಂ ನ ಭವಿಷ್ಯತಿ ।
ವೈಷ್ಣವಾನಾಂ ಚ ರೌದ್ರಾಣಾಂ ಬ್ರಹ್ಮಾಸ್ತ್ರಾಣಾಂ ಚ ತಾದೃಶಂ ॥ ೭ ॥

---

೪. ಮರೀಚ್ಯಾದಿ ಮುನಿಗಳು ಆ ಪುರುಷನನ್ನು ಕುರಿತು ಹೀಗೆ ಹೇಳಿದರು:—ಓ ಪುರುಷನೇ, ನೀನು ಹುಟ್ಟುವಾಗಲೇ ನಮ್ಮೆಲ್ಲರ ಮತ್ತು ಬ್ರಹ್ಮನ ಮನಸ್ಸನ್ನು ಮಥಿಸಿ ಎಂದರೆ ಕಲಕಿ ವಶಗೊಳಿಸಿಕೊಳ್ಳುತ್ತಾ ಉತ್ಪನ್ನನಾದ ಕಾರಣ ಇನ್ನು ಮುಂದೆ ನೀನು ಮನ್ಮಥನೆಂಬ ಹೆಸರಿನಿಂದ ಲೋಕದಲ್ಲಿ ಪ್ರಸಿದ್ಧನಾಗುವೆ.

೫. ಪ್ರಾಣಿಗಳ ಮನಸ್ಸಿನಲ್ಲಿ ಉದಯಿಸಿ ಅವರನ್ನು ಮೋಹವಿಕಾರಗೊಳಿಸುವ ಓ ಮನ್ಮಥನೇ, ಜಗತ್ತಿನಲ್ಲಿ ಅತ್ಯಂತ ಸುಂದರವಾದ ರೂಪವುಳ್ಳವನು ನಿನ್ನಂತೆ ಮತ್ತೊಬ್ಬನಿಲ್ಲವು. ಆದುದರಿಂದ ನೀನು ಕಾಮನೆಂಬ ಹೆಸರಿನಿಂದಲೂ ಪ್ರಸಿದ್ಧನಾಗು.

೬. ಮತ್ತು ಎಲ್ಲರಿಗೂ ಮದವನ್ನುಂಟುಮಾಡುವವನಾದುದರಿಂದ ಮದನನೆಂದೂ ಈಶ್ವರನಂತೆ ದರ್ಪವುಳ್ಳವನಾದಕಾರಣ ದರ್ಪಕನೆಂದೂ, ಮತ್ತು ಕಂದರ್ಪನೆಂದೂ ಲೋಕದಲ್ಲಿ ಪ್ರಸಿದ್ಧನಾಗುವೆ.

೭. ಮತ್ತು ನಿನ್ನ ಬಾಣಗಳಲ್ಲಿ ಯಾವ ಸಾಮರ್ಥ್ಯವಿರುವುದೋ ಅಂತಹ ಸಾಮರ್ಥ್ಯವು ವಿಷ್ಣುವಿನ ಬಾಣಗಳಿಗಾಗಲಿ, ಶಿವನ ಬಾಣಗಳಿಗಾಗಲಿ, ಬ್ರಹ್ಮನ ಅಸ್ತ್ರಗಳಿಗಾಗಲಿ ಇರುವುದಿಲ್ಲವು.

ಸ್ವರ್ಗೇ ಮರ್ತ್ಯೇ ಚ ಪಾತಾಲೇ ಬ್ರಹ್ಮಲೋಕೇ ಸನಾತನೇ ।
ತವ ಸ್ಥಾನಾನಿ ಸರ್ವಾಣಿ ಸರ್ವವ್ಯಾಪೀ ಭವಾನ್ಯತಃ ॥ ೮ ॥

ಕಂ ವಾ ಚಾತಿವಿಶೇಷೇಣ ಸಾಮಾನ್ಯೇ ನಾಸ್ತಿ ತೇ ಸಮಃ ।
ಯತ್ರ ಯತ್ರ ಭವೇತ್ಪ್ರಾಣೀ ಶಾದ್ವಲಾಸ್ತರವೋಽಥವಾ ॥ ೯ ॥

ತತ್ರ ತತ್ರ ತವ ಸ್ಥಾನಮಸ್ತ್ವಬ್ರಹ್ಮಸದೋದಯಂ ॥

ದಕ್ಷೋಽಯಂ ಭವತಃ ಪತ್ನೀಂ ಸ್ವಯಂ ದಾಸ್ಯತಿ ಶೋಭನಾಂ ॥ ೧೦ ॥
ಆದ್ಯಃ ಪ್ರಜಾಪತಿರ್ಯೋ ಹಿ ಯಥೇಷ್ಟಂ ಪುರುಷೋತ್ತಮ ॥

ಏಷಾ ಚ ಕನ್ಯಕಾ ಚಾರುರೂಪಾ ಬ್ರಹ್ಮಮನೋಭವಾ ॥ ೧೧ ॥
ಸಂಧ್ಯಾನಾಮೇತಿ ವಿಖ್ಯಾತಾ ಸರ್ವಲೋಕೇ ಭವಿಷ್ಯತಿ ॥

---

೮. ಸ್ವರ್ಗಲೋಕದಲ್ಲಿಯೂ, ಮನುಷ್ಯಲೋಕದಲ್ಲಿಯೂ, ಅನಾದಿಯಾದ ಬ್ರಹ್ಮಲೋಕದಲ್ಲಿಯೂ ನಿನಗೆ ಅಧಿಕಾರವ್ಯಾಪ್ತಿಯಿರುವುದರಿಂದ ನೀನು ಸರ್ವ ಸ್ಥಳಗಳಲ್ಲಿಯೂ ವ್ಯಾಪಿಸಿರುವವನಾಗುವೆ.

೯. ಹೆಚ್ಚು ಹೇಳಿಯೇನು? ಜನಸಾಮಾನ್ಯದಲ್ಲಿ ನಿನಗೆ ಸಮಾನನಾದವನು ಯಾರೂ ಇರುವುದಿಲ್ಲ. ಎಲ್ಲೆಲ್ಲಿ ಪ್ರಾಣಿಗಳು, ಸರೋವರಗಳು, ವೃಕ್ಷಗಳು ಇರುವವೋ ಅಲ್ಲೆಲ್ಲಾ ನಿನಗೆ ಅಧಿಕಾರಸ್ಥಾನವುಂಟು. ಮತ್ತು ಬ್ರಹ್ಮಲೋಕ ಪರ್ಯಂತವೂ ನಿನಗೆ ಅಧಿಕಾರವ್ಯಾಪ್ತಿಯ ಸ್ಥಾನವುಂಟು.

೧೦. ಎಲೈ ಪುರುಷಶ್ರೇಷ್ಠನಾದ ಕಾಮನೇ, ಮೊದಲನೆಯ ಪ್ರಜಾಪತಿಯಾದ ಈ ದಕ್ಷಬ್ರಹ್ಮನು ನಿನಗೆ ಯೋಗ್ಯಳಾದ ಸುಂದರಿಯಾದ ಪತ್ನಿಯನ್ನು ತಾನೇ ಕೊಡುತ್ತಾನೆ.

೧೧. ಅಲ್ಲದೆ, ಎದುರಿಗಿರುವ ಸುಂದರವಾದ ರೂಪವುಳ್ಳ ಈ ಹುಡುಗಿಯೂ ನಿನ್ನಂತೆ ಬ್ರಹ್ಮನ ಮನಸ್ಸಿನಿಂದ ಜನಿಸಿದವಳು. ಇವಳು ಮುಂದೆ ಸಂಧ್ಯೆ ಎಂಬ ಹೆಸರಿನಿಂದ ಪ್ರಸಿದ್ಧಳಾಗುತ್ತಾಳೆ.

ಬ್ರಹ್ಮಣೋ ಧ್ಯಾಯತೋ ಯಸ್ಮಾತ್ಸಮ್ಯಗ್ಜಾತಾ ವರಾಂಗನಾ ॥ ೧೨ ॥
ಅತಃ ಸಂಧ್ಯೇತಿ ಲೋಕೇಽಸ್ಮಿನ್ನಸ್ಯಾಃ ಖ್ಯಾತಿರ್ಭವಿಷ್ಯತಿ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಮುನಯಃ ಸರ್ವೇ ತೂಷ್ಣೀಂ ತಸ್ಥುರ್ದ್ವಿಜೋತ್ತಮಾಃ ॥೧೩॥
ಅವೇಕ್ಷ್ಯ ಬ್ರಹ್ಮವದನಂ ವಿನಯಾವನತಾಃ ಪುರಃ ॥

ತತಃ ಕಾಮೋಽಪಿ ಕೋದಂಡಮಾದಾಯ ಕುಸುಮೋದ್ಭವಂ ॥ ೧೪ ॥
ಉನ್ಮಾದನೇತಿ ವಿಖ್ಯಾತಂ ಕಾಂತಾಭ್ರೂತುಲ್ಯವೇಲ್ಲಿತಂ ॥

ಕೌಸುಮಾನಿ ತಥಾಸ್ತ್ರಾಣಿ ಪಂಚಾದಾಯ ದ್ವಿಜೋತ್ತಮಾಃ ॥ ೧೫ ॥
ಹರ್ಷಣಂ ರೋಚನಾಖ್ಯಂ ಚ ಮೋಹನಂ ಶೋಷಣಂ ತಥಾ ।

ಮಾರಣಂ ಚೇತಿ ಸಂಜ್ಞಾಭಿರ್ಮುನಿಮೋಹಕರಾಣ್ಯಪಿ ॥ ೧೬ ॥

---

೧೨. ಬ್ರಹ್ಮನು ಏಕಾಗ್ರವಾದ ಮನಸ್ಸಿನಿಂದ ಧ್ಯಾನಮಾಡುತ್ತಿರುವಾಗ ಉತ್ತಮ ಸ್ತ್ರೀಯಾದ ಇವಳು ಜನಿಸಿದುದರಿಂದ ಇವಳಿಗೆ ಸಂಧ್ಯೆಯೆಂದು ಹೆಸರು. ಆ ಹೆಸರಿನಿಂದಲೇ ಇವಳು ಈ ಲೋಕದಲ್ಲಿ ಪ್ರಸಿದ್ಧಳಾಗುತ್ತಾಳೆ.

೧೩. ಮಾರ್ಕಂಡೇಯ ಮುನಿಯು ಹೇಳಿದನು:—ಓ ಬ್ರಾಹ್ಮಣೋತ್ತಮರೇ, ಆ ಮರೀಚಿಯೇ ಮೊದಲಾದ ಮೂವರು ಮುನಿಗಳೂ ಹೀಗೆ ಹೇಳಿ ಬ್ರಹ್ಮನ ಮುಖವನ್ನು ನೋಡಿ ವಿನಯದಿಂದ ನಮ್ರರಾಗಿ ಸುಮ್ಮನಾದರು.

೧೪-೧೫-೧೬. ಎಲೈ ದ್ವಿಜಶ್ರೇಷ್ಠರೇ ಆಮೇಲೆ ಆ ಮನ್ಮಥನು, ಸುಂದರಿಯರ ಭ್ರೂಲತೆಯಂತೆ ಬಗ್ಗಿ ಪುಷ್ಪಗಳಿಂದಲೇ ರಚಿತವಾದ ಉನ್ಮಾದನಿಯೆಂಬ,—ಕಾಮಿಗಳಿಗೆ ಮದವನ್ನುಂಟುಮಾಡುವುದರಿಂದ ಉನ್ಮಾದನಿಯೆಂದು ಹೆಸರನ್ನು ಪಡೆದಿರುವ,—ತನ್ನ ಧನುಸ್ಸನ್ನು ಹಿಡಿದುಕೊಂಡು, ಆದರಲ್ಲಿ, ಹರ್ಷಣ, ರೋಚನ, ಮೋಹನ, ಶೋಷಣ, ಮಾರಣಗಳೆಂಬ,—ಮುನಿಗಳನ್ನೂ ಮೋಹಗೊಳಿಸಬಲ್ಲ,—ಐದು ಪುಷ್ಪಬಾಣಗಳನ್ನು ಹೂಡಿ,

ಪ್ರಚ್ಛನ್ನರೂಪೀ ತತ್ರೈವ ಚಿಂತಯಾಮಾಸ ನಿಶ್ಚಯಂ ।
ಬ್ರಹ್ಮಣಾ ಮಮ ಯತ್ಕಾರ್ಯಂ ಸಮುದ್ದಿಷ್ಟಂ ಸನಾತನಂ ॥ ೧೭ ॥
ತದಿಹೈವ ಕರಿಷ್ಯಾಮಿ ಮುನೀನಾಂ ಸನ್ನಿಧೌ ವಿಧೇಃ ।
ತಿಷ್ಠಂತಿ ಮುನಯಶ್ಚಾತ್ರ ಸ್ವಯಂ ಚಾಪಿ ಪ್ರಜಾಪತಿಃ ॥ ೧೮ ॥
ಏಷಾ ಸಂಧ್ಯಾ ವರಸ್ತ್ರೀ ಚ ದಕ್ಷೋಽಪ್ಯತ್ರ ಪ್ರಜಾಪತಿಃ ।
ಏತೇ ಶರವ್ಯಭೂತಾ ಮೇ ಭವಿಷ್ಯಂತ್ಯದ್ಯ ನಿಶ್ಚಯಂ ॥ ೧೯ ॥
ಸಂಧ್ಯಾಪಿ ಬ್ರಹ್ಮಣಾ ಪ್ರೋಕ್ತಮಿದಾನೀಮೇವ ಯದ್ವಚಃ ।
ಅಹಂ ವಿಷ್ಣುರ್ಹರಶ್ಚಾಪಿ ತವಾಸ್ತ್ರವಶವರ್ತಿನಃ ॥ ೨೦ ॥
ಕಿಮನ್ಯೈರ್ಜಂತುಭಿರಿತಿ ತತ್ಸಾರ್ಥಂ ಕರವಾಣ್ಯಹಂ ॥

---

೧೭. ಕಣ್ಣಿಗೆ ಕಾಣದ ರೂಪವುಳ್ಳವನಾಗಿ ಮನ್ಮಥನು ಅಲ್ಲಿಯೇ ಹೀಗೆ ಆಲೋಚಿಸಿದನು:—ನಾನು ನಿತ್ಯವೂ ಮಾಡಬೇಕಾಗಿರುವ ಕಾರ್ಯವನ್ನು ಬ್ರಹ್ಮನು ತೋರಿಸಿರುವನು.

೧೮. ಆದುದರಿಂದ, ಬ್ರಹ್ಮನು ಹೇಳಿರುವ ಆ ಕಾರ್ಯವನ್ನು ಇಲ್ಲಿಯೇ ಮುನಿಗಳ ಮತ್ತು ಬ್ರಹ್ಮನ ಸಮೀಪದಲ್ಲಿ ಮಾಡಿನೋಡುತ್ತೇನೆ. ಇಲ್ಲಿ ಮರೀಚಿಯೇ ಮೊದಲಾದ ಮುನಿಗಳೂ, ಸಾಕ್ಷಾತ್ತಾಗಿ ಬ್ರಹ್ಮನೂ ಇರುವರು.

೧೯. ಉತ್ತಮಸ್ತ್ರೀಯಾದ ಈ ಸಂಧ್ಯೆಯೂ ಇರುವಳು. ದಕ್ಷ ಬ್ರಹ್ಮನೂ ಇಲ್ಲಿಯೇ ಇರುವನು. ಇವರೆಲ್ಲರೂ ಈಗ ನನ್ನ ಬಾಣಗಳಿಗೆ ನಿಶ್ಚಯವಾಗಿಯೂ ಗುರಿಯಾಗುತ್ತಾರೆ.

೨೦. ಅಲ್ಲದೇ ಈ ಸಂಧ್ಯೆಯೂ ನನ್ನ ಬಾಣಗಳಿಗೆ ಗುರಿಯಾಗುವಳು. ಅಷ್ಟೇ ಏಕೆ? "ನಾನೂ, ವಿಷ್ಣುವೂ, ಶಿವನೂ ಸಹ ನಿನ್ನ ಬಾಣಕ್ಕೆ ಅಧೀನರಾಗಿರುತ್ತೇವೆಂದು" ಬ್ರಹ್ಮನು ಈಗತಾನೇ ಹೇಳಿರುತ್ತಾನೆ.

"ಅಲ್ಲದೆ ಬ್ರಹ್ಮವಿಷ್ಣುಮಹೇಶ್ವರರಾದ ನಾವುಗಳೇ ನಿನ್ನ ಬಾಣಕ್ಕೆ ಅಧೀನರಾಗಿರುವಾಗ ಇತರ ಪ್ರಾಣಿಗಳ ವಿಷಯದಲ್ಲಿ ಹೇಳಬೇಕಾದುದೇನು?" ಎಂದು ಸಹ ಬ್ರಹ್ಮನು ಹೇಳಿರುವುದರಿಂದ ಅವನ ಮಾತಿನ ನಿಶ್ಚಯಾನಿಶ್ಚಯವನ್ನು ಪರೀಕ್ಷಿಸಲು ಆ ಮಾತನ್ನು ನಿಜವಾದುದನ್ನಾಗಿಯೇ ಮಾಡುತ್ತೇನೆ.

॥ ಮಾರ್ಕಂಡೇಯ ಉವಾಚ ॥

ಇತಿ ಸಂಚಿಂತ್ಯ ಮನಸಾ ನಿಶ್ಚಿತ್ಯ ಚ ಮನೋಭವಃ ॥ ೨೧ ॥
ಪುಷ್ಪಜ್ಯಾಂ ಪುಷ್ಪಚಾಪಸ್ಯ ಯೋಜಯಾಮಾಸ ಮಾರ್ಗಣೈಃ ॥

ಆಲೀಢಸ್ಥಾನಮಾಸಾದ್ಯ ಧನುರಾಕೃಷ್ಯ ಯತ್ನತಃ ॥ ೨೨ ॥
ಚಕಾರ ವಲಯಾಕಾರಂ ಕಾಮೋ ಧನ್ವಿವರಸ್ತದಾ ॥

ಸಂಹಿತೇ ತೇನ ಕೋದಂಡೇ ಮಾರುತಾಶ್ಚ ಸಗಂಧಯಃ ॥ ೨೩ ॥
ವವುಸ್ತತ್ರ ಮುನಿಶ್ರೇಷ್ಠಾಃ ಸಮ್ಯಗಾಹ್ಲಾದಕಾರಿಣಃ ॥

ತತಸ್ತಾನಥ ಧಾತ್ರಾದೀನ್ಸರ್ವಾನೇವ ಚ ಮಾನಸಾನ್ ॥ ೨೪ ॥
ಪೃಥಕ್ಪೃಥಕ್ಪುಷ್ಪ ಶರೈರ್ಮೋಹಯಾಮಾಸ ಮೋಹನಃ ॥

ತತಸ್ತೇ ಮುನಯಃ ಸರ್ವೇ ಮೋಹಿತಾಶ್ಚತುರಾನನಃ ॥ ೨೫ ॥
ಮೋಹಿತೋ ಮನಸಾ ಕಂಚಿದ್ವಿಕಾರಂ ಪ್ರಾಪುರಾದಿತಃ ॥

---

೨೧. ಮಾರ್ಕಂಡೇಯ ಮುನಿಯು ಹೇಳಿದನು:—ಹೀಗೆ ಮನಸ್ಸಿನಲ್ಲಿ ಆಲೋಚಿಸಿ, ಮನ್ಮಥನು ತನ್ನ ಪುಷ್ಪಧನುಸ್ಸಿನ ಹೆದೆಯನ್ನು ಸಜ್ಜುಗೊಳಿಸಿ ಅದರಲ್ಲಿ ಪುಷ್ಪ ಬಾಣಗಳನ್ನು ಹೂಡಿದನು.

೨೨. ಉತ್ತಮ ಬಿಲ್ಲುಗಾರನಾದ ಆ ಮನ್ಮಥನು ಬಾಣಪ್ರಯೋಗಕ್ಕೆ ಅನುಕೂಲವಾಗುವಂತೆ ಮುಂಡಿಯೂರಿ ನಿಂತು ಧನುಸ್ಸನ್ನು ಹಿಡಿದೆಳೆದು ಅದನ್ನು ಮಂಡಲಾಕಾರವಾಗುವಂತೆ ಮಾಡಿದನು.

೨೩. ಓ ಶ್ರೇಷ್ಠ ಮುನಿಗಳೇ, ಹೀಗೆ ಆ ಮನ್ಮಥನು ತನ್ನ ಧನುಸ್ಸಿನಲ್ಲಿ ಬಾಣ ಸಂಧಾನವಾಡಲು, ಅಲ್ಲಿ ಒಳ್ಳೆಯ ಪರಿಮಳಯುಕ್ತವಾಗಿ ಮನಸ್ಸಿಗೆ ಸಂತೋಷವನ್ನುಂಟುಮಾಡುವಂತೆ ಮಂದಮಾರುತಗಳು ಬೀಸತೊಡಗಿದವು.

೨೪. ಆಮೇಲೆ ಮೋಹವನ್ನುಂಟುಮಾಡುವ ಮನ್ಮಥನು ಬ್ರಹ್ಮನೇ ಮೊದಲಾದವರನ್ನೂ, ಎಲ್ಲ ಮಾನಸಪುತ್ರರನ್ನೂ ಬೇರೆಬೇರೆಯಾಗಿ ತನ್ನ ಪುಷ್ಪಬಾಣಗಳಿಂದ ಹೊಡೆದು ಮೋಹಗೊಳಿಸಿದನು

೨೫. ಆಮೇಲೆ ಆ ಎಲ್ಲ ಮುನಿಗಳೂ, ಚತುರ್ಮುಖನಾದ ಬ್ರಹ್ಮನೂ ಮೋಹಗೊಂಡವರಾಗಿ, ಮೊದಲು ಮನಸ್ಸಿನಲ್ಲಿ ಸ್ವಲ್ಪ ವಿಕಾರವುಳ್ಳವರಾದರು.

ಸಂಧ್ಯಾಂ ಸರ್ವೇ ನಿರೀಕ್ಷಂತಃ ಸವಿಕಾರಾ ಮುಹುರ್ಮುಹುಃ ।
ಅಸನ್ಪ್ರವೃದ್ಧಮದನಾಃ ಸ್ತ್ರೀ ಯಸ್ಮಾನ್ಮದವರ್ಧಿನೀ ॥ ೨೬ ॥
ತತಃ ಸರ್ವಾನ್ಸ ಮದನೋ ಮೋಹಯಿತ್ವಾ ಪುನಃ ಪುನಃ ।
ಯಥೇಂದ್ರಿಯವಿಕಾರಾಂಸ್ತೇ ಪ್ರಾಪುಸ್ತಾನಕರೋತ್ತಥಾ ॥ ೨೭ ॥
ಉದೀರಿತೇಂದ್ರಿಯೋ ಧಾತಾ ವೀಕ್ಷ್ಯಾಂಚಕ್ರೇ ಯದಾಥ ತಾಂ ।
ತದೈವ ಹ್ಯೂನಪಂಚಾಶದ್ಭಾವಾ ಜಾತಾಃ ಶರೀರತಃ ॥ ೨೮ ॥
ಬಿಭ್ಯೋಕಾದ್ಯಾಸ್ತಥಾ ಹಾವಾಶ್ಚತುಃಷಷ್ಟಿಕಲಾಸ್ತಥಾ ।
ಕಂದರ್ಪಶರವಿದ್ಧಾಯಾಃ ಸಂಧ್ಯಾಯಾ ಅಭವನ್ದ್ವಿಜಾಃ ॥ ೨೯ ॥

---

೨೬. ಹೀಗೆ ವಿಕಾರವನ್ನು ಹೊಂದಿದ ಅವರು ಸುಂದರಿಯಾದ ಆ ಸಂಧ್ಯೆಯನ್ನು ಮತ್ತೆಮತ್ತೆ ನೋಡುತ್ತಾ ಹೆಚ್ಚಾದ ಕಾಮವಿಕಾರವುಳ್ಳವರಾದರು. ಏಕೆಂದರೆ ಸ್ತ್ರೀಯರು ತಮ್ಮ ರೂಪಲಾವಣ್ಯಾದಿಗಳಿಂದ ಪುರುಷರಿಗೆ ಮದನವಿಕಾರವನ್ನು ಹೆಚ್ಚಿಸುವ ಸ್ವಭಾವವುಳ್ಳವರು.

೨೭. ಆಮೇಲೆ ಆ ಮನ್ಮಥನು ಅವರೆಲ್ಲರನ್ನೂ ಪುನಃಪುನಃ ಮೋಹಗೊಳಿಸಿ ಕಾಮವಿಕಾರದಿಂದ ಚಂಚಲರಾಗಿ ತಮ್ಮ ಇಂದ್ರಿಯಗಳನ್ನು ತೃಪ್ತಿಪಡಿಸಬೇಕೆಂಬ ಅಭಿಲಾಷೆಯುಳ್ಳವರಾಗುವ ಹಾಗೆ ಮಾಡಿದನು.

೨೮. ಆಗ ಕಾಮೇಚ್ಛೆಯಿಂದ ಉದ್ರಿಕ್ತವಾಗಿ ಭೋಗಾತುರವಾದ ಇಂದ್ರಿಯಗಳುಳ್ಳವನಾಗಿ ಬ್ರಹ್ಮನು ಆ ಸಂಧ್ಯೆಯನ್ನು ಯಾವಾಗ ನೋಡಿದನೋ ಆಗಲೇ ಅವನ ಶರೀರದಿಂದ ಮನ್ಮಥವಿಕಾರಾವಸ್ಥೆಯಲ್ಲಿ ಆಗುವ ನಲವತ್ತೊಂಭತ್ತು ಮನೋವೃತ್ತಿವಿಶೇಷರೂಪವಾದ ವಿಕಾರಗಳು ಉತ್ಪನ್ನವಾದವು.

೨೯. ಓ ಬ್ರಾಹ್ಮಣರೇ, ಹಾಗೆಯೇ ಮನ್ಮಥಬಾಣಗಳಿಂದ ಹೊಡೆಯಲ್ಪಟ್ಟು, ಕಾಮ ಪರವಶಳಾದ ಆ ಸಂಧ್ಯೆಯ ಶರೀರದಿಂದಲೂ ಬಿಬ್ಯೋಕ ಎಂದರೆ, ಗರ್ವ ಮತ್ತು ಅಭಿಮಾನದಿಂದ ಇಷ್ಟವಸ್ತುವಿನಲ್ಲಿಯೂ ಅನಾದರಣೆ, ಇದೇ ಮೊದಲಾದ ಸ್ತ್ರೀಯರಿಗೆ ಮದನಾವಸ್ಥೆಯಲ್ಲಾಗತಕ್ಕ ವಿಕಾರಗಳೂ ಅರವತ್ತುನಾಲ್ಕು ಕಲೆಗಳೂ ಜನಿಸಿದವು.

ಸಾಪಿ ತೈರ್ವೀಕ್ಷ್ಯಮಾಣಾಥ ಕಂದರ್ಪಶರಪಾತಜಾನ್ ।
ಚಕ್ರೇ ಮುಹುರ್ಮುಹುರ್ಭಾವಾನ್ ಕಟಾಕ್ಷಾವರಣಾದಿಕಾನ್ ॥೩೦॥

ನಿಸರ್ಗಸುಂದರೀ ಸಂಧ್ಯಾ ತಾನ್ಭಾವಾನ್ಮದನೋದ್ಭವಾನ್ ।
ಕುರ್ವಂತ್ಯತಿತರಾಂ ರೇಜೇ ಸ್ವರ್ಣದೀವ ತನೂರ್ಮಿಭಿಃ ॥ ೩೧ ॥

ಅಥ ಭಾವಯುತಾಂ ಸಂಧ್ಯಾಂ ವೀಕ್ಷಮಾಣಃ ಪ್ರಜಾಪತಿಃ ।
ಘರ್ಮಾಂಭಃಪೂತತನುರಭಿಲಾಷಮಥಾಽಕರೋತ್ ॥ ೩೨ ॥

ತತಸ್ತೇ ಮುನಯಃ ಸರ್ವೇ ಮರೀಚ್ಯತ್ರಿಮುಖಾ ಅಪಿ ।
ದಕ್ಷಾದ್ಯಾಶ್ಚ ದ್ವಿಜಶ್ರೇಷ್ಠಾಃ ಪ್ರಾಪುರ್ವೈಕಾರಿಕೇಂದ್ರಿಯಂ ॥ ೩೩ ॥

ದೃಷ್ಟ್ವಾ ತಥಾವಿಧಾನ್ದಕ್ಷಮರೀಚಿಪ್ರಮುಖಾನ್ವಿಧಿಂ ।
ಸಂಧ್ಯಾಂ ಚ ಕರ್ಮಣಿ ನಿಜೇ ಶ್ರದ್ದಧೇ ಮದನಸ್ತದಾ ॥ ೩೪ ॥

---

೩೦. ಆಗ ಆ ಸಂಧ್ಯೆಯೂ, ಅವರೆಲ್ಲರಿಂದಲೂ ನೋಡಲ್ಪಟ್ಟವಳಾಗಿ, ಮನ್ಮಥನ ಬಾಣಪ್ರಹಾರದಿಂದುಂಟಾದ ಕಡೆಗಣ್ಣಿನ ಕುಡಿನೋಟವುಳ್ಳವಳೂ ಮತ್ತು ಲಜ್ಜೆಯಿಂದ ಶರೀರವನ್ನು ಮುಚ್ಚಿಕೊಳ್ಳುವುದೇ ಮೊದಲಾದ ಶೃಂಗಾರಚೇಷ್ಟೆಯ ಭಾವಗಳನ್ನು ಪ್ರಕಟಮಾಡುವವಳೂ ಆದಳು.

೩೧. ಸ್ವಭಾವವಾಗಿ ಸುಂದರಿಯಾದ ಆ ಸಂಧ್ಯೆಯು ಮದನವಿಕಾರದಿಂದುಂಟಾದ ಆ ಶೃಂಗಾರಚೇಷ್ಟೆಗಳನ್ನು ಮಾಡುತ್ತಾ ಸಣ್ಣಸಣ್ಣ ಅಲೆಗಳಿಂದ ಕೂಡಿದ ಗಂಗಾನದಿಯಂತೆ ಶೋಭಿಸುತ್ತಿದ್ದಳು.

೩೨. ಆಮೇಲೆ ಹೀಗೆ ಶೃಂಗಾರಚೇಷ್ಟೆಗಳಿಂದ ಕೂಡಿ ಒಪ್ಪುತ್ತಿರುವ ಆ ಸಂಧ್ಯೆಯನ್ನು ನೋಡುತ್ತಾ ಬ್ರಹ್ಮದೇವನು ಬೆವರಿನಿಂದ ಕೂಡಿದ ಶರೀರವುಳ್ಳವನಾಗಿ ಆವಳೊಡನೆ ಭೋಗದಲ್ಲಿ ಅಭಿಲಾಷೆಯುಳ್ಳವನಾದನು.

೩೩. ಓ ಬ್ರಾಹ್ಮಣೋತ್ತಮರೇ, ಆಮೇಲೆ ಆ ಮರೀಚಿಯೇ ಮೊದಲಾದ ಮುನಿಗಳೂ ದಕ್ಷನೇ ಮೊದಲಾದ ಪ್ರಜಾಪ್ರತಿಗಳೂ ಸಹ ಮದನವಿಕಾರವನ್ನು ಹೊಂದಿದ ಇಂದ್ರಿಯಗಳುಳ್ಳವರಾದರು.

೩೪. ಆಗ ಮನ್ಮಥನು, ಆ ರೀತಿ ದಕ್ಷ ಮತ್ತು ಮರೀಚಿಯೇ ಮೊದಲಾದವರೂ, ಬ್ರಹ್ಮನೂ, ಸಂಧ್ಯೆಯೂ ಸಹ ಮದನವಿಕಾರವುಳ್ಳವರಾದುದನ್ನು ನೋಡಿ ತಾನು ಮಾಡುವ ಕೆಲಸದಲ್ಲಿ ತನಗೆ ಸಾಮರ್ಥ್ಯವಿರುವುದೆಂದು ನಂಬಿಕೆಯುಳ್ಳವನಾದನು.

ಯದಿದಂ ಬ್ರಹ್ಮಣಾ ಕರ್ಮ ನುನೋದ್ದಿಷ್ಟಂ ಮಯಾಪಿ ತತ್
ಕರ್ತುಂ ಶಕ್ಯಮಿತಿ ಶ್ರದ್ಧಾ ಭಾವಿತಾತ್ಮಾಭವತ್ತದಾ ॥ ೩೫ ॥

ತತೋ ವಿಯದ್ಗತಃ ಶಂಭುರ್ವಿಧಿಂ ದೃಷ್ಟ್ವಾ ತಥಾವಿಧಂ ।
ಸದಕ್ಷಾನ್ಮಾನಸಾನ್ವಾಪಿ ಜಹಾಸೋಪಜಹಾಸ ಚ ॥ ೩೬ ॥

ಸ ಸಾಧುವಾದಂ ತಾನ್ಸರ್ವಾನ್ವಿಹಸ್ಯ ಚ ಪುನಃ ಪುನಃ ।
ಉವಾಚೇದಂ ದ್ವಿಜಶ್ರೇಷ್ಠಾ ಲಜ್ಜಯಂಸ್ತಾನ್ವೃಷಧ್ವಜಃ ॥ ೩೭ ॥

॥ ಈಶ್ವರ ಉವಾಚ ॥

ಅಹೋ ಬ್ರಹ್ಮಂಸ್ತವ ಕಥಂ ಕಾಮುಭಾವಃ ಸಮುದ್ಗತಃ ।
ದೃಷ್ಟ್ವಾ ಸ್ವತನಯಾಂ ನೈತದ್ಯೋಗ್ಯಂ ವೇದಾನುಸಾರಿಣಾಂ ॥ ೩೮ ॥

---

೩೫. ಬ್ರಹ್ಮನು ನನಗೆ ಯಾವ ಕೆಲಸವನ್ನು ಮಾಡಬೇಕೆಂದು ನಿಯಮಿಸಿರುವನೋ ಆ ಕೆಲಸವನ್ನು ನಿರ್ವಹಿಸಲು ನನಗೆ ಶಕ್ತಿಯಿದೆಯೆಂದು ಮನ್ಮಥನು ಆಗ ದೃಢವಾದ ನಂಬಿಕೆಯುಳ್ಳವನಾದನು.

೩೬. ಆಮೇಲೆ ಪರಮೇಶ್ವರನು ಆಕಾಶದಲ್ಲಿ ಬಂದು ದಕ್ಷಪ್ರಜಾಪತಿಯೇ ಮೊದಲಾದ ಮಾನಸಪುತ್ರರೂ ಬ್ರಹ್ಮನೂ ಸಹ ಆ ರೀತಿ ಮದನ ವಿಕಾರವುಳ್ಳವರಾಗಿರುವುದನ್ನು ನೋಡಿ ತುಂಬಾ ನಕ್ಕು ಹಾಸ್ಯಮಾಡಿದನು.

೩೭. ಓ ಬ್ರಾಹ್ಮಣೋತ್ತಮರೇ, ಈಶ್ವರನು ಅವರನ್ನು ಕುರಿತು "ಬಹು ಚೆನ್ನಾಗಿದೆ, ಒಳ್ಳೆಯ ಕೆಲಸವನ್ನು ಮಾಡುತ್ತಲಿರುವಿರಿ" ಎಂದು ಮತ್ತಷ್ಟು ಹಾಸ್ಯವನ್ನು ಮಾಡಿ ಅವರಿಗೆ ನಾಚಿಕೆಯನ್ನುಂಟುಮಾಡುತ್ತಾ ಹೀಗೆ ಹೇಳಿದನು:—

೩೮. ಎಲೈ ಬ್ರಹ್ಮನೇ, ಇದೇನಾಶ್ಚರ್ಯವು? ನಿನಗೂ ಈ ಮದನ ವಿಕಾರವುಂಟಾಯಿತೇ? ತನ್ನ ಸ್ವಂತ ಮಗಳನ್ನು ನೋಡಿ ಈ ರೀತಿ ಭೋಗಾಭಿಲಾಷೆಯುಳ್ಳವರಾಗುವುದು ವೇದಮಾರ್ಗವನ್ನನುಸರಿಸಿ ನಡೆಯುವ ನಿಮ್ಮಂಥವರಿಗೆ ಯೋಗ್ಯವಲ್ಲವು.

ಯಥಾ ಮಾತಾ ತಥಾ ಜಾಮಿರ್ಯಥಾ ಜಾಮಿಸ್ತಥಾ ಸುತಾ ।
ಏಷ ವೈ ವೇದಮಾರ್ಗಸ್ಯ ನಿಶ್ಚಯಸ್ತ್ವನ್ಮುಖೋತ್ಥಿತಃ ॥ ೩೯ ॥
ಕಥಂ ತು ಕಾಮುಮಾತ್ರೇಣ ತತ್ತೇ ವಿಸ್ಮಾರಿತಂ ವಿಧೇ ।
ಧೈರ್ಯೇ ಜಗದಿದಂ ಬ್ರಹ್ಮನ್ ಸಮಸ್ತಂ ಚತುರಾನನ ॥ ೪೦ ॥
ಕಥಂ ಕ್ಷುದ್ರೇಣ ಕಾಮೇನ ತತ್ತೇ ವಿಘಟಿತಂ ವಿಧೇ ।
ಏಕಾಂತಯೋಗಿನಸ್ತಸ್ಮಾತ್ಸರ್ವದಾ ದಿವ್ಯದರ್ಶನಾಃ ॥ ೪೧ ॥
ಕಥಂ ದಕ್ಷಮರೀಚ್ಯಾದ್ಯಾ ಲೋಲುಪಾಃ ಸ್ತ್ರೀಷು ಮಾನಸಾಃ ।
ಕಥಂ ಕಾಮೋಽಪಿ ಮಂದಾತ್ಮಾ ಪ್ರಾಪ್ತಕರ್ಮಾಽಧುನೈವ ತು ॥ ೪೨ ॥

---

೩೯. ತಾಯಿಯು ಹೇಗೆ ಕಾಮಿಸಲಯೋಗ್ಯಳೋ ಅದರಂತೆ ಅಕ್ಕ ತಂಗಿಯರೂ, ಅವರಂತೆ ಮಗಳೂ ಕಾಮಿಸಲಯೋಗ್ಯರು. ಎಂದರೆ ಅವರನ್ನು ಕಾಮದೃಷ್ಟಿಯಿಂದ ನೋಡಬಾರದು. ವೇದಾನುಸಾರಿಯಾದ ಈ ಮಾರ್ಗವು ನಿನ್ನಿಂದಲೇ ಉಪದೇಶಿಸಲ್ಪಟ್ಟಿರುವುದಲ್ಲವೇ?

೪೦. ಎಲೈ ಬ್ರಹ್ಮನೇ, ನಿನ್ನ ಕರ್ತವ್ಯಾಕರ್ತವ್ಯಜ್ಞಾನವು ಮರೆತು ಹೋಗುವಂತೆ ಕೇವಲ ಅಲ್ಪವಾದ ಈ ಕಾಮನಿಂದ ಹೇಗೆ ಮಾಡಲ್ಪಟ್ಟಿತು? ಎಲೈ ಚತುರ್ಮುಖಬ್ರಹ್ಮನೇ, ಈ ಸಮಸ್ತ ಪ್ರಪಂಚವೂ ಧೈರ್ಯದಿಂದಲೇ ನಡೆಯುತ್ತಿರುವುದು. ಆದುದರಿಂದ ನೀನು ಈಗ ಧೈರ್ಯವನ್ನವಲಂಬಿಸು.

೪೧. ಆ ನಿನ್ನ ಧೈರ್ಯವು ನೀಚನಾದ ಮನ್ಮಥನಿಂದ ಹೇಗೆ ನಷ್ಟವಾಯಿತು? ಈ ಕಾರಣದಿಂದಲೇ ದಿವ್ಯದೃಷ್ಟಿಯುಳ್ಳ ಮುನಿಗಳು ಸ್ತ್ರೀಸಂಬಂಧವಿಲ್ಲದ ನಿರ್ಜನ ಪ್ರದೇಶದಲ್ಲಿ ವಾಸಮಾಡುತ್ತಾರೆ.

೪೨. ದಕ್ಷಪ್ರಜಾಪತಿಯೂ, ಮರೀಚಿಯೇ ಮೊದಲಾದ ಮಾನಸ ಪುತ್ರರೂ ಸಹ ಈ ಸ್ತ್ರೀಯಲ್ಲಿ ಹೇಗೆ ಆಸಕ್ತಿಯುಳ್ಳವರಾದರು? ಯುಕ್ತಾಯುಕ್ತ ವಿವೇಚನೆಯಿಲ್ಲದೆ, ಮಂದಬುದ್ಧಿಯುಳ್ಳ ಮನ್ಮಥನೂ ಸಹ ತನ್ನ ಈ ನೀಚಕಾರ್ಯವನ್ನು ನಿರ್ವಹಿಸಿ ನಿಮ್ಮೆಲ್ಲರನ್ನೂ ಈಗ ತನ್ನ ಬಾಣಕ್ಕೆ ಹೇಗೆ ಗುರಿಮಾಡಿದನು?

ಯುಷ್ಮಾಞ್ಛರವ್ಯಾನ್ಕೃತವಾನಕಾಲಜ್ಞೋಽಲ್ಪಚೇತನಃ ।
ಧಿಗಸ್ತು ತಂ ಮುನಿಶ್ರೇಷ್ಠಾ ಯಸ್ಯ ಕಾಂತಾಜನೋ ಹಠಾತ್ ॥ ೪೩ ॥
ಧೈರ್ಯಮಾಕೃಷ್ಯ ಲೌಲ್ಯೇಷು ಮಜ್ಜಯತ್ಯಪಿ ತನ್ಮನಃ ॥

॥ ಮಾರ್ಕಂಡೇಯ ಉವಾಚ ॥

ಇತಿ ತಸ್ಯ ವಚಃ ಶ್ರುತ್ವಾ ಲೋಕೇಶೋ ಗಿರಿಶಸ್ಯ ಚ ॥ ೪೪ ॥
ವ್ರೀಡಯಾ ದ್ವಿಗುಣೀಭೂತಸ್ವೇದಾರ್ದ್ರೋ ಹ್ಯಭವತ್ಕ್ಷಣಾತ್ ॥
ತತೋ ನಿಗೃಹ್ಯೇಂದ್ರಿಯಕವಿಕಾರಂ ಚತುರಾನನಃ ॥ ೪೫ ॥
ಜಿಘೃಕ್ಷುರಪಿ ತತ್ಯಾಜ ತಾಂ ಸಂಧ್ಯಾಂ ಕಾಮರೂಪಿಣೀಂ ॥
ತಚ್ಛರೀರಾತ್ತು ಘರ್ಮಾಂಭೋ ಯತ್ಪಪಾತ ದ್ವಿಜೋತ್ತಮಾಃ ॥ ೪೬ ॥
ಅಗ್ನಿಷ್ವಾತ್ತಾ ಬರ್ಹಿಷದೋ ಜಾತಾಃ ಪಿತೃಗಣಾಸ್ತತಃ ॥

---

೪೩. ತಿಳಿವಳಿಕೆಯಿಲ್ಲದ ಈ ಮನ್ಮಥನು ಕಾಲಾಕಾಲವನ್ನು ತಿಳಿಯದೆ ನಿಮ್ಮೆಲ್ಲರನ್ನೂ ತನ್ನ ಬಾಣಕ್ಕೆ ಗುರಿಮಾಡಿದನು. ಓ ಮುನಿಶ್ರೇಷ್ಠರೇ, ಸುಂದರಿಯರಾದ ಸ್ತ್ರೀಯರು ಬಲಾತ್ಕಾರದಿಂದ ಪುರುಷರ ಧೈರ್ಯವನ್ನು - ಎಂದರೆ ಸ್ಥಿರಬುದ್ಧಿಯನ್ನು, ನಾಶಮಾಡಿ ಅವರ ಮನಸ್ಸನ್ನು ಚಂಚಲಪಡಿಸಿ ಕಾಮಕೇಳಿಗಳಲ್ಲಿ ಅವರ ಮನಸ್ಸು ಆಸಕ್ತವಾಗುವಂತೆ ಮಾಡುವ ಮನ್ಮಥನ ಈ ವಿಧವಾದ ದುರ್ವರ್ತನೆಯನ್ನು ಎಷ್ಟು ನಿಂದಿಸಿದರೂ ಸ್ವಲ್ಪವೇ.

೪೪. ಮಾರ್ಕಂಡೇಯ ಮುನಿಯು ಹೇಳಿದನು:—ಆ ಶಂಕರನ ಈ ರೀತಿಯಾದ ಮಾತುಗಳನ್ನು ಕೇಳಿ ಜಗದೊಡೆಯನಾದ ಬ್ರಹ್ಮನು ಆ ಕೂಡಲೇ ನಾಚಿಕೆಯಿಂದ ಇನ್ನಷ್ಟು ಹೆಚ್ಚಾದ ಬೆವರಿನಿಂದ ನೆನೆದ ಶರೀರವುಳ್ಳವನಾದನು.

೪೫. ಆಮೇಲೆ ಬ್ರಹ್ಮನು ಆ ಸಂಧ್ಯೆಯೊಡನೆ ಭೋಗಾಪೇಕ್ಷೆಯುಳ್ಳವನಾಗಿದ್ದರೂ, ತನ್ನ ಮನಸ್ಸಿನ ಮನ್ಮಥವಿಕಾರವನ್ನು ತಡೆದುಕೊಂಡು ಸುಂದರಾಂಗಿಯಾದ ಆವಳಲ್ಲಿ ಕಾಮಾಭಿಲಾಷೆಯನ್ನು ಬಿಟ್ಟುಬಿಟ್ಟನು.

೪೬. ಓ ಬ್ರಾಹ್ಮಣೋತ್ತಮರೇ, ಕೇಳಿ. ಆಗ ಬ್ರಹ್ಮನ ಶರೀರದಿಂದ ಬೆವರುನೀರು ಭೂಮಿಯ ಮೇಲೆ ಬಿದ್ದು ಆದರಿಂದ ಅಗ್ನಿಷ್ವಾತ್ತ ಮತ್ತು ಬರ್ಹಿಷದ ಎಂಬ ಪಿತೃದೇವತೆಗಳು ಹುಟ್ಟಿದರು.

ಭಿನ್ನಾಂಜನನಿಭಾಃ ಸರ್ವೇ ಫುಲ್ಲರಾಜೀವಲೋಚನಾಃ ॥ ೪೭ ॥
ನಿತಾಂತಯತಯಃ ಪುಣ್ಯಾಃ ಸಂಸಾರವಿಮುಖಾಃ ಪರಾಃ ।

ಸಹಸ್ರಾಣಾಂ ಚತುಃಷಷ್ಟಿರಗ್ನಿಷ್ವಾತ್ತಾಃ ಪ್ರಕೀರ್ತಿತಾಃ ॥ ೪೮ ॥
ಷಡಶೀತಿಸಹಸ್ರಾಣಿ ತಥಾ ಬರ್ಹಿಷದೋ ದ್ವಿಜಾಃ ॥

ಘರ್ಮಾಂಭಃ ಪತಿತಂ ಭೂಮೌ ಯದ್ದಕ್ಷಸ್ಯ ಶರೀರತಃ ॥ ೪೯ ॥
ಸಮುಸ್ತಗುಣಸಂಪನ್ನಾ ತಸ್ಮಾಜ್ಜಾತಾ ವರಾಂಗನಾ ।

ತನ್ವಂಗೀ ತನುಮಧ್ಯಾ ಚ ತನುರೋಮಾವಲೀ ಶುಭಾ ॥ ೫೦ ॥
ಮೃದ್ವಂಗೀ ಚಾರುದಶನಾ ತಪ್ತಕಾಂಚನಸುಪ್ರಭಾ ॥

---

೪೭. ಆ ಪಿತೃದೇವತೆಗಳೆಲ್ಲರೂ ಅಂಜನಪರ್ವತದ ತುಂಡಿನಂತೆ ಕಪ್ಪು ಬಣ್ಣವುಳ್ಳವರಾಗಿ, ಅರಳಿದ ಕಮಲದಂತಿರುವ ಕಣ್ಣುಗಳುಳ್ಳವರೂ, ಜಿತೇಂದ್ರಿಯರೂ, ಶುದ್ಧರೂ, ಸಂಸಾರದಲ್ಲಿ ವಿರಕ್ತರೂ, ಉತ್ತಮರೂ ಆಗಿದ್ದರು.

೪೮. ಆ ಪಿತೃಗಣಗಳಲ್ಲಿ ಅಗ್ನಿಷ್ವಾತ್ತರೆಂಬ ಪಿತೃದೇವತೆಗಳು ಅರವತ್ತು ನಾಲ್ಕು ಸಾವಿರಜನಗಳೂ, ಬರ್ಹಿಷದರೆಂಬ ಪಿತೃದೇವತೆಗಳು ಎಂಭತ್ತಾರು ಸಾವಿರ ಜನಗಳೂ ಇರುತ್ತಾರೆ.

೪೯. ಆಗ ದಕ್ಷ ಪ್ರಜಾಪತಿಯ ಶರೀರದಿಂದ ಭೂಮಿಯಲ್ಲಿ ಬಿದ್ದ ಬೆವರುನೀರಿನಿಂದ ಸೌಂದರ್ಯಾದಿ ಗುಣಗಳಿಂದ ಕೂಡಿದ ಓರ್ವ ಉತ್ತಮ ಸ್ತ್ರೀಯು ಉತ್ಪನ್ನಳಾದಳು.

೫೦. ಅವಳು ಕೃಶವಾದ ತೆಳ್ಳನೆ ಬಳುಕುತ್ತಿರುವ ಶರೀರವುಳ್ಳವಳೂ, ಸಣ್ಣದಾದ ನಡುವುಳ್ಳವಳೂ, ಸೂಕ್ಷ್ಮವಾದರೋಮಪಂಕ್ತಿಯಿಂದ ಮನೋಹರಳಾಗಿ ಒಪ್ಪುತ್ತಿರುವಳೂ, ಕೋಮಲವಾದ ಶರೀರವುಳ್ಳವಳೂ, ಸುಂದರವಾದ ದಂತಪಂಕ್ತಿಯುಳ್ಳವಳೂ, ಪುಟಕ್ಕೆ ಹಾಕಿದ ಚಿನ್ನದಂತೆ ಶರೀರಕಾಂತಿಯುಳ್ಳವಳೂ ಆಗಿದ್ದಳು.

ಮರೀಚಿಪ್ರಮುಖೈಃ ಷಡ್ಭಿರ್ನಿರ್ಗೃಹೀತೇಂದ್ರಿಯಕ್ರಿಯಾ ॥ ೫೧ ॥
ಋತೇ ಕ್ರತುಂ ವಸಿಷ್ಠಂ ಚ ಪುಲಸ್ತ್ಯಾಂಗಿರಸೌ ತದಾ ॥

ಕ್ರತ್ವಾದೀನಾಂ ಚತುರ್ಣಾಂ ಚ ಯೋ ಭೂಮೌ ನಿಪಪಾತ ಹ ॥ ೫೨ ॥
ತತಃ ಪಿತೃಗಣಾ ಜಾತಾ ಹ್ಯಪರೇ ದ್ವಿಜಸತ್ತಮಾಃ ॥

ಸೋಮಪಾ ಆಜ್ಯಪಾ ನಾಮ್ನಾ ತಥೈವಾನ್ಯೇ ಸ್ವಕಾಲಿನಃ ॥ ೫೩ ॥
ಹವಿರ್ಭುಜಸ್ತು ತೇ ಸರ್ವೇ ಕವ್ಯವಾಹಾಃ ಪ್ರಕೀರ್ತಿತಾಃ ॥

ಕ್ರತೋಸ್ತು ಸೋಮಪಾಃ ಪುತ್ರಾ ವಸಿಷ್ಠಸ್ಯ ಸ್ವಕಾಲಿನಃ ॥ ೫೪ ॥
ಆಜ್ಯಪಾಖ್ಯಾಃ ಪುಲಸ್ತ್ಯಸ್ಯ ಹವಿಷ್ಮಂತೋಂsಗಿರಸ್ಸುತಾಃ ॥

ಜಾತೇಷು ತೇಷು ವಿಪ್ರೇಂದ್ರಾ ಅಗ್ನಿಷ್ವಾತ್ತಾದಿಕೇಷ್ವಥ ॥ ೫೫ ॥
ಲೋಕಾನಾಂ ಪಿತೃವರ್ಗೇಷು ಕವ್ಯವಾಹಾಃ ಸಮುಂತತಃ ॥

---

೫೧. ಮತ್ತು ಆಗ ವಸಿಷ್ಠಮುನಿ, ಕ್ರತುಮುನಿ, ಪುಲಸ್ತ್ಯಋಷಿ, ಅಂಗಿರಸಋಷಿ, ಈ ನಾಲ್ಕು ಜನಗಳನ್ನು ಬಿಟ್ಟು ಉಳಿದ ಮರೀಚಿಯೇ ಮೊದಲಾದ ಆರು ಜನ ಮಾನಸಪುತ್ರರು ತಮ್ಮ ಮನೋವಿಕಾರವನ್ನು ನಿಗ್ರಹಿಸಿದರು.

೫೨. ಎಲೈ ಬ್ರಾಹ್ಮಣೋತ್ತಮರೇ, ಕ್ರತು, ವಸಿಷ್ಠ, ಪುಲಸ್ತ್ಯ, ಅಂಗಿರಸ, ಈ ನಾಲ್ಕು ಜನಗಳ ಶರೀರದಿಂದ ಭೂಮಿಯಲ್ಲಿ ಬಿದ್ದ ಬೆವರು ನೀರಿನಿಂದ ಇನ್ನೂ ಕೆಲವರು ಪಿತೃದೇವತೆಗಳು ಜನಿಸಿದರು.

೫೩. ಅವರಲ್ಲಿ ಕೆಲವರಿಗೆ ಸೋಮಪ ಎಂತಲೂ, ಕೆಲವರಿಗೆ ಆಜ್ಯಪ ಎಂತಲೂ, ಮತ್ತೆ ಕೆಲವರಿಗೆ ಸ್ವಕಾಲಿಗಳೆಂತಲೂ ಹೆಸರಾಯಿತು. ಇವರೆಲ್ಲರೂ ಶ್ರಾದ್ಧಾದಿಗಳಲ್ಲಿ ಜನಗಳು ಹೋಮಮಾಡುವ ಹವಿಸ್ಸನ್ನು ಭುಜಿಸುವುದರಿಂದ ಕವ್ಯವಾಹರೆಂದು ಪ್ರಸಿದ್ಧರಾದರು.

೫೪. ಅವರಲ್ಲಿ ಸೋಮಪರು ಕ್ರತುಮುನಿಯಿಂದಲೂ, ಸ್ವಕಾಲಿಗಳು ವಸಿಷ್ಠಮುನಿಯಿಂದಲೂ, ಆಜ್ಯಪರೆಂಬುವರು ಪುಲಸ್ತ್ಯಮುನಿಯಿಂದಲೂ, ಹವಿಷ್ಮಂತ ಅಥವಾ ಹವಿರ್ಭುಜರೆಂಬುವರು ಅಂಗಿರಸ ಮುನಿಯಿಂದಲೂ ಜನಿಸಿದವರು.

೫೫-೫೬. ಓ ಬ್ರಾಹ್ಮಣೋತ್ತಮರೇ, ಹೀಗೆ ಪ್ರಪಂಚಕ್ಕೆ ಪಿತೃದೇವತೆಗಳನ್ನಿಸಿದ ಅಗ್ನಿಷ್ವಾತ್ತರೇ ಮೊದಲಾದ ದೇವತೆಗಳೂ, ಕವ್ಯವಾಹರೂ

ಸರ್ವೇಷಾಮೇವ ಭೂತಾನಾಂ ಬ್ರಹ್ಮಾ ಭೂತಃ ಪಿತಾಮಹಃ ॥ ೫೬ ॥
ಸಂಧ್ಯಾ ಪಿತೃಪ್ರಸೂರ್ಭೂತಾ ತದುದ್ದೇಶಾದ್ಯತೋಽಭವತ್ ॥
ಅಥ ಶಂಕರವಾಕ್ಯೇನ ಲಜ್ಜಿತಃ ಸ ಪಿತಾಮಹಃ ॥ ೫೭ ॥
ಕಂದರ್ಪಾಯ ಚುಕೋಪಾಶು ಭ್ರುಕುಟೀಕುಟಿಲಾನನಃ ॥
ಪುರೈನ ತದಭಿಪ್ರಾಯಂ ವಿದಿತ್ವಾ ಸೋಽಪಿ ಮನ್ಮಥಃ ॥ ೫೮ ॥
ಸ್ವಬಾಣಾನ್ ಸಂಜಹಾರಾಶು ಭೀತಃ ಪಶುಪತೇರ್ವಿಧೇಃ ॥
ತತಃ ಕ್ರೋಧಸಮಾವಿಷ್ಟೋ ಬ್ರಹ್ಮಾ ಲೋಕಪಿತಾಮಹಃ ।
ಯಚ್ಚಕಾರ ದ್ವಿಜೇಂದ್ರಾಸ್ತಚ್ಛೃಣುಧ್ವಂ ಸುಸಮಾಹಿತಾಃ ॥ ೫೯ ॥

॥ ಇತಿ ಶ್ರೀ ಕಾಲಿಕಾಪುರಾಣೇ ದ್ವಿತೀಯೋಽಧ್ಯಾಯಃ ॥

॥ ಶ್ರೀರಸ್ತು ॥

ಜನಿಸಿದ ಮೇಲೆ, ಇವರೇ ಮೊದಲಾದ ಸಮಸ್ತ ಪ್ರಾಣಿಗಳಿಗೂ ಬ್ರಹ್ಮನು ಪಿತಾಮಹನೆಂದು (ತಾತ) ಪ್ರಸಿದ್ಧಿಯಾದನು. ಸಂಧ್ಯೆಯೂ ಸಹ ಈ ಪಿತೃದೇವತೆಗಳಿಗೆ ತಾಯಿಯಾದಳು. ಏಕೆಂದರೆ ಇವಳ ನಿಮಿತ್ತವಾಗಿಯೇ ಬ್ರಹ್ಮನಿಗೂ ಅವನ ಮಾನಸಪುತ್ರರಿಗೂ ಕಾಮವಿಕಾರದಿಂದ ಶರೀರದಲ್ಲಿ ಬೆವರುಂಟಾಗಿ ತನ್ಮೂಲಕ ಪಿತೃಗಳು ಜನಿಸಿದರಲ್ಲವೇ ?

೫೬. ಆಮೇಲೆ ಹಿಂದೆ ಹೇಳಿದ ಶಂಕರನ ಮಾತಿನಿಂದ ಲಜ್ಜೆಗೊಂಡ ಬ್ರಹ್ಮನು ಇದಕ್ಕೆಲ್ಲಾ ಕಾರಣಭೂತನಾದ ಮನ್ಮಥನ ಮೇಲೆ, ಹುಬ್ಬನ್ನು ಗಂಟಿಕ್ಕಿ ಬಹಳವಾಗಿ ಕೋಪಗೊಂಡನು.

೫೮. ಆಗ ಬ್ರಹ್ಮನ ಅಭಿಪ್ರಾಯವನ್ನು ತಿಳಿದು ಆ ಮನ್ಮಥನೂ ಕೂಡ, ಪ್ರಾಣಿಗಳಿಗೆಲ್ಲಾ ಒಡೆಯನಾದ ಆ ಬ್ರಹ್ಮನಿಗೆ ಹೆದರಿ ತನ್ನ ಬಾಣಗಳನ್ನು ಕೂಡಲೇ ಉಪಸಂಹಾರ ಮಾಡಿದನು.

೫೯. ಎಲೈ ಬ್ರಾಹ್ಮಣೋತ್ತಮರೇ, ಆಮೇಲೆ ಜಗತ್ತಿಗೇ ಪಿತಾಮಹನೆನಿಸಿದ ಆ ಬ್ರಹ್ಮನು ಮನ್ಮಥನ ಮೇಲೆ ಕೋಪಗೊಂಡು ಮುಂದೆ ಏನು ಮಾಡಿದನೆಂಬುವುದನ್ನು ಹೇಳುತ್ತೇನೆ. ಸಾವಧಾನವಾಗಿ ಕೇಳಿರಿ.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಅಥ ಶ್ರೀಕಾಲಿಕಾಪುರಾಣೇ ತೃತೀಯೋಽಧ್ಯಾಯಃ ॥

॥ ಮೂರನೆಯ ಅಧ್ಯಾಯವು ॥

॥ ಮಾರ್ಕಂಡೇಯ ಉವಾಚ ॥

ತತಃ ಕೋಪಸಮಾವಿಷ್ಟಃ ಪದ್ಮಯೋನಿರ್ಜಗತ್ಪತಿಃ ।
ಪ್ರಜಜ್ವಾಲಾತಿಬಲವದ್ದಿಧಕ್ಷುರಿವ ಪಾವಕಃ ॥ ೧ ॥

ಉವಾಚ ಚೇಶ್ವರಂ ಕಾಮೋ ಭವತಃ ಪುರತೋ ಯತಃ ।
ಪುಷ್ಪೇಷುಭಿರ್ಮಾಮಭಜತ್ತತ್ಫಲಸ್ಯಾಪ್ನುಯಾದ್ಧರ ॥ ೨ ॥

---

೧. ಮಾರ್ಕಂಡೇಯ ಮುನಿಯು ಹೇಳಿದನು :—ಎಲೈ ಬ್ರಾಹ್ಮಣ ಶ್ರೇಷ್ಠರೇ, ಕೇಳ್. ಆಮೇಲೆ ಜಗದೊಡೆಯನಾದ ಪದ್ಮಸಂಭವನು ಮನ್ಮಥನ ಮೇಲೆ ಕೋಪಗೊಂಡು ಸರ್ವವನ್ನೂ ದಹಿಸುವ ದೊಡ್ಡದಾದ ಅಗ್ನಿಯಂತೆ ಮಹಾಕೋಪದಿಂದ ಉರಿಯತೊಡಗಿದನು.

೨. ಮತ್ತು ಆ ಬ್ರಹ್ಮನು ಈಶ್ವರನನ್ನು ಕುರಿತು ಹೀಗೆ ಹೇಳಿದನು : ಓ ಶಂಕರನೇ, ಈ ಮನ್ಮಥನು ನಿನ್ನ ಎದುರಿಗೇ ನನ್ನನ್ನು ತನ್ನ ಕುಸುಮ ಶರಗಳಿಂದ ಪ್ರಹರಿಸಿದ ಕಾರಣ, ಮುಂದೆ ಅದಕ್ಕೆ ತಕ್ಕ ಫಲವನ್ನು ಅವನು ಅನುಭವಿಸಲಿ.

ತವ ನೇತ್ರಾಗ್ನಿನಿರ್ದಗ್ಧಃ ಕಂದರ್ಪೋ ದರ್ಪಮೋಹಿತಃ ।
ಭವಿಷ್ಯತಿ ಮಹಾದೇವ ಕೃತ್ವಾ ಕರ್ಮಾತಿದುಷ್ಕರಂ ॥ ೪ ॥

ಇತಿ ವೇಧಾಃ ಸ್ವಯಂ ಕಾಮಂ ಶಶಾಪ ದ್ವಿಜಸತ್ತಮಾಃ।
ಸಮಕ್ಷಂ ವ್ಯೋಮಕೇಶಸ್ಯ ಮುನೀನಾಂ ಚ ಯತಾತ್ಮನಾಂ ॥ ೪ ॥

ಅಥ ಭೀತೋ ರತಿಪತಿಸ್ತತ್ಕ್ಷಣಾತ್ಯಕ್ತಮಾರ್ಗಣಃ ।
ಪ್ರಾದುರ್ಬಭೂವ ಪ್ರತ್ಯಕ್ಷಂ ಶಾಪಂ ಶ್ರುತ್ವಾತಿದಾರುಣಂ ॥ ೫ ॥

ಉವಾಚ ಚೇದಂ ಬ್ರಹ್ಮಾಣಂ ಸದಕ್ಷಂ ಸಮರೀಚಿಕಂ ।
ತಥ್ಯಂ ಚ ಗದ್ಗದಂ ಭೀತ್ಯಾ ಭೀತಿರ್ಹಿ ಗುಣಹಾನಿಕೃತ್ ॥ ೬ ॥

---

೩. ಓ ಮಹಾದೇವನೇ, ಅಹಂಕಾರದಿಂದ ಕೊಬ್ಬಿದ ಈ ಮದನನು, ನನ್ನನ್ನೇ ತನ್ನ ಕುಸುಮಬಾಣಗಳಿಂದ ಪ್ರಹರಿಸುವಂತಹ ನೀಚಕಾರ್ಯವನ್ನು ಮಾಡಿರುವುದರಿಂದ, ಮುಂದೆ ನಿನ್ನ ಮೂರನೆಯ ಕಣ್ಣಿನಿಂದ ಹೊರಡುವ ಅಗ್ನಿಯಿಂದ ದಹಿಸಲ್ಪಡುವನು.

೪. ಓ ಬ್ರಾಹ್ಮಣೋತ್ತಮರೇ, ಹೀಗೆ ಆ ಬ್ರಹ್ಮನು ಈಶ್ವರನ ಮತ್ತು ಜಿತೇಂದ್ರಿಯರಾದ ಮುನಿಗಳ ಎದುರಿನಲ್ಲಿ ಮನ್ಮಥನನ್ನು ಶಪಿಸಿದನು.

೫. ಆಮೇಲೆ ಬ್ರಹ್ಮನು ಕೊಟ್ಟ ಈ ಭಯಂಕರವಾದ ಶಾಪವನ್ನು ಕೇಳಿ, ಭಯಗೊಂಡ ಮನ್ಮಥನು ಕೂಡಲೇ ತನ್ನ ಬಾಣಗಳನ್ನು ಬಿಸುಟು, ಪ್ರಚ್ಛನ್ನರೂಪವನ್ನು ಬಿಟ್ಟು, ಅವರೆಲ್ಲರಿದುರಿಗೆ ಕಾಣಿಸಿಕೊಂಡನು.

೬. ಅವನು ಮುಂದೆ ಬಂದು, ದಕ್ಷ ಮತ್ತು ಮರೀಚಿಮುನಿ ಇವರುಗಳೊಂದಿಗಿರುವ ಬ್ರಹ್ಮನನ್ನು ಕುರಿತು ಸತ್ಯವಾಗಿಯೂ. ಹೆದರಿಕೆಯಿಂದ ತೊದಲುತ್ತಲೂ ಇರುವ ಮಾತಿನಿಂದ ಈ ರೀತಿ ನುಡಿದನು. ಭಯವೆಂಬುವುದು ಮಾತಿನ ಸ್ಪಷ್ಟತೆಯೆಂಬ ಗುಣವನ್ನು ನಾಶಮಾಡುವ ಸ್ವಭಾವವುಳ್ಳದ್ದು.

॥ ಮನ್ಮಥ ಉವಾಚ ॥

ಬ್ರಹ್ಮನ್ ಕಮರ್ಥಂ ಭವತಾ ಶಪ್ತೋಽಹಮತಿದಾರುಣಂ ।
ಅನಾಗಾಸ್ತವ ಲೋಕೇಶ ನ್ಯಾಯಮಾರ್ಗಾನುಸಾರಿಣಃ ॥ ೭ ॥

ತ್ವಯೈವೋಕ್ತಂ ತು ತತ್ಕರ್ಮ ಯತ್ತು ಕುರ್ಯಾಮಹಂ ವಿಭೋ ॥೮॥
ತತ್ರ ಯೋಗ್ಯೋ ನ ಶಾಪೋ ಮೇ ಯತೋ ನಾನ್ಯನ್ಮಯಾ ಕೃತಂ ॥

ಅಹಂ ವಿಷ್ಣುಸ್ತಥಾ ಶಂಭುಃ ಸರ್ವೇ ತ್ವಚ್ಛರಗೋಚರಾಃ ।
ಇತಿ ಯದ್ಭವತಾ ಪ್ರೋಕ್ತಂ ತನ್ಮಯಾಪಿ ಪರೀಕ್ಷಿತಂ ॥ ೯ ॥

ನಾಪರಾಧೋ ಮಮಾಸ್ತ್ಯತ್ರ ಬ್ರಹ್ಮನ್ಮಯಿ ನಿರಾಗಸಿ ।
ದಾರುಣಂ ಶಮಯಸ್ವೈನಂ ಶಾಪಂ ಮಮ ಜಗತ್ಪತೇ ॥ ೧೦ ॥

---

೭. ಮನ್ಮಥನು ಹೇಳಿದನು:—ಲೋಕಕ್ಕೆ ಒಡೆಯನಾದ ಓ ಬ್ರಹ್ಮನೇ, ನ್ಯಾಯವಾದ ಮಾರ್ಗದಲ್ಲಿ ನಡೆಯುವ ನೀನು, ಯಾವ ತಪ್ಪೂ ಇಲ್ಲದ ನನ್ನನ್ನು ಈರೀತಿ ಅತಿಕ್ರೂರವಾಗಿ ಏಕೆ ಶಪಿಸಿದೆ?

೮. ಓ ಸ್ವಾಮಿಯೇ, ನೀನು ಹೇಳಿದ ಕಾರ್ಯವನ್ನೇ ನಾನು ಮಾಡಿರುತ್ತೇನಾದುದರಿಂದ ಆದಕ್ಕಾಗಿ ಈ ರೀತಿ ನನ್ನನ್ನು ಶಪಿಸುವುದು ಯೋಗ್ಯವಲ್ಲವು. ಈಗಲೂ ನೀನು ನಿಯಮಿಸಿದ ಕಾರ್ಯವನ್ನು ಬಿಟ್ಟು ಬೇರೆ ಕಾರ್ಯವನ್ನು ನಾನು ಮಾಡಲಿಲ್ಲವು.

೯. "ನಾನೂ (ಬ್ರಹ್ಮನು), ವಿಷ್ಣುವೂ, ಶಂಕರನೂ ಮತ್ತು ಎಲ್ಲರೂ ನಿನ್ನ ಕುಸುಮ ಬಾಣಗಳಿಗೆ ಆಧೀನರು" ಎಂದು ನೀನು ಯಾವುದನ್ನು ಹೇಳಿದೆಯೋ ಅದನ್ನು ಈಗ ಪರೀಕ್ಷೆಮಾಡಿ ನೋಡಿದೆನು.

೧೦. ಓ ಬ್ರಹ್ಮನೇ ನಿರಪರಾಧಿಯಾದ ನನ್ನಲ್ಲಿ ಯಾವ ತಪ್ಪೂ ಇರುವುದಿಲ್ಲವು. ಆದುದರಿಂದ ಎಲೈ ಜಗದೊಡೆಯನೇ ನನಗೆ ಕೊಟ್ಟಿರುವ ಈ ಭಯಂಕರವಾದ ಶಾಪವನ್ನು ಹೋಗಲಾಡಿಸು.

॥ ಮಾರ್ಕಂಡೇಯ ಉವಾಚ ॥

ಇತಿ ತಸ್ಯ ವಚಃ ಶ್ರುತ್ವಾ ವಿಧಾತಾ ಜಗತಾಂ ಪತಿಃ ।
ಪ್ರತ್ಯುವಾಚ ಯತಾತ್ಮಾನಂ ಮದನಂ ಸದಯಂ ಮುಹುಃ ॥ ೧೧ ॥

॥ ಬ್ರಹ್ಮೋವಾಚ ॥

ಆತ್ಮಜಾ ಮಮ ಸಂಧ್ಯೇಯಂ ಯಸ್ಮಾದೇತತ್ಸಕಾಶತಃ ।
ಲಕ್ಷೀಕೃತೋಽಹಂ ಭವತಾ ತತಃ ಶಾಪೋ ಮಯಾ ಕೃತಃ ॥ ೧೨ ॥

ಅಧುನಾ ಶಾಂತರೋಷೋಽಹಂ ತ್ವಾಂ ವದಾಮಿ ಮನೋಭವ ।
ಭವತಃ ಶಾಪಶಮನಂ ಭವಿಷ್ಯತಿ ಯಥಾ ತಥಾ ॥ ೧೩ ॥

ತ್ವಂ ಭಸ್ಮ ಭೂತ್ವಾ ಮದನ ಭರ್ಗಲೋಚನವಹ್ನಿನಾ ।
ತಸ್ಯೈವಾನುಗ್ರಹಾತ್ಪಶ್ಚಾಚ್ಛರೀರಂ ಸಮವಾಪ್ಸ್ಯಸಿ ॥ ೧೪ ॥

---

೧೧. ಮಾರ್ಕಂಡೇಯ ಮುನಿಯು ಹೇಳಿದನು:—ಜಗದೊಡೆಯನಾದ ಬ್ರಹ್ಮನು ಈ ರೀತಿಯಾಗಿ ಹೇಳುವ ಮನ್ಮಥನ ಮಾತುಗಳನ್ನು ಕೇಳಿ, ಸಮಾಧಾನಸ್ವಭಾವದಿಂದ ವರ್ತಿಸುತ್ತಿರುವ ಅವನನ್ನು ಕುರಿತು ಕರುಣಾ ಪೂರ್ವಕವಾಗಿ ಪುನಃ ಹೀಗೆ ಹೇಳಿದನು.

೧೨. ಬ್ರಹ್ಮನು ಹೇಳಿದನು:—ಎಲೈ ಮದನನೇ, ಈ ಸಂಧ್ಯೆಯು ನನ್ನ ಮಗಳು. ಇವಳನ್ನುದ್ದೇಶಿಸಿ ನೀನು ನನ್ನನ್ನು ನಿನ್ನ ಬಾಣಗಳಿಗೆ ಗುರಿ ಮಾಡಿದ್ದೀಯೆ; ಎಂದರೆ ಮಗಳಾದ ಇವಳಲ್ಲಿ ಮೋಹಗೊಳ್ಳುವಂತೆ ನನ್ನನ್ನು ಪ್ರೇರಿಸಿದ್ದೀಯೆ. ಇದು ಯುಕ್ತವಲ್ಲ. ಈ ನೀಚಕಾರ್ಯಕ್ಕಾಗಿ ನಿನಗೆ ಶಾಪವನ್ನು ಕೊಟ್ಟಿರುತ್ತೇನೆ.

೧೩. ಎಲೈ ಮನ್ಮಥನೇ, ಈಗ ನಾನು ನಿನ್ನಲ್ಲಿ ಕೋಪವನ್ನು ಬಿಟ್ಟು ಶಾಂತಮನಸ್ಕನಾಗಿದ್ದೇನೆ. ನಿನಗೆ ಶಾಪನಿವೃತ್ತಿಯು ಯಾವಾಗ ಹೇಗೆ ಆಗುವುದೆಂಬುದನ್ನು ಹೇಳುತ್ತೇನೆ.

೧೪. ಎಲೈ ಮದನನೇ, ನೀನು ಈಶ್ವರನ ತೃತೀಯನೇತ್ರಾಗ್ನಿಯಿಂದ ದಹಿಸಲ್ಪಟ್ಟು, ತಿರುಗಿ ಮುಂದೆ ಆ ಈಶ್ವರನ ಅನುಗ್ರಹದಿಂದಲೇ ಶರೀರವನ್ನು ಪಡೆಯುತ್ತೀಯೆ.

ಯದಾ ಹರೋ ಮಹಾದೇವಃ ಕುರ್ಯಾದ್ದಾರಪರಿಗ್ರಹಂ ।
ತದಾ ಸ ಏವ ಭವತಾ ಶರೀರಂ ಪ್ರಾಪಯಿಷ್ಯತಿ ॥ ೧೫ ॥

॥ ಮಾರ್ಕಂಡೇಯ ಉವಾಚ ॥

ಏವಮುಕ್ತ್ವಾಥ ಮದನಂ ಬ್ರಹ್ಮಾ ಲೋಕಪಿತಾಮಹಃ ।
ಅಂತರ್ದಧೇ ಮುನೀಂದ್ರಾಣಾಂ ಮಾನಸಾನಾಂ ಚ ಪಶ್ಯತಾಂ ॥ ೧೬ ॥

ತಸ್ಮಿನ್ನಂತರ್ಹಿತೇ ಶಂಭುಃ ಸರ್ವೇಷಾಂ ಚ ವಿಧಾತರಿ ।
ಯಥೇಷ್ಟದೇಶಂ ಗತವಾನ್ಬ್ರಹ್ಮನ್ ಮಾರುತರಂಹಸಾ ॥ ೧೭ ॥

ವೇಧಸ್ಯಂತರ್ಹಿತೇ ತಸ್ಮಿನ್ ಗತೇ ಶಂಭೌ ನಿಜಾಸ್ಪದಂ ।
ದಕ್ಷಃ ಪ್ರಾಹಾಥ ಕಂದರ್ಪಂ ಪತ್ನೀಂ ತಸ್ಯ ನಿದೇಶಯನ್ ॥ ೧೮ ॥

---

೧೫. ದೇವದೇವನಾದ ಶಂಕರನು ಯಾವಾಗ ವಿವಾಹವನ್ನು ಮಾಡಿಕೊಳ್ಳುವನೋ ಆಗ ಅವನೇ ನಿನಗೆ ಶರೀರವನ್ನು ಪುನಃ ಅನುಗ್ರಹಿಸಿ ಕೊಡುವನು.

೧೬. ಮಾರ್ಕಂಡೇಯ ಮುನಿಯು ಹೇಳಿದನು:—ಜಗತ್ತಿಗೆ ಪಿತಾಮಹನೆನಿಸಿದ ಬ್ರಹ್ಮನು ಮನ್ಮಥನಿಗೆ ಈ ರೀತಿಯಾಗಿ ಹೇಳಿ, ಮರೀಚಿಯೇ ಮೊದಲಾದ ಋಷಿಗಳೂ ಮಾನಸಪುತ್ರರೂ ನೋಡುತ್ತಿರುವಂತೆಯೇ ಅಲ್ಲಿಯೇ ಅದೃಶ್ಯನಾದನು.

೧೭. ಓ ಬ್ರಾಹ್ಮಣರೇ, ಈ ರೀತಿಯಾಗಿ ಜಗತ್ತಿನ ಸೃಷ್ಟಿಕರ್ತನಾದ ಬ್ರಹ್ಮನು ಅಂತರ್ಧಾನವಾಗಲು, ಶಂಕರನೂ ಸಹ ತನ್ನ ಇಷ್ಟಬಂದೆಡೆಗೆ ವಾಯುವೇಗದಿಂದ ಹೊರಟು ಹೋದನು.

೧೮. ಹೀಗೆ ಬ್ರಹ್ಮನು ಅಂತರ್ಧಾನವಾಗಲು, ಮತ್ತು ಶಂಕರನೂ ತನ್ನ ಸ್ಥಾನಕ್ಕೆ ಹೊರಟುಹೋದ ಮೇಲೆ, ದಕ್ಷಪ್ರಜಾಪತಿಯು ಮನ್ಮಥನಿಗೆ ಅವನ ಹೆಂಡತಿಯು ಯಾರು ಎಂಬುದನ್ನು ನಿರ್ದೇಶಿಸಲು ಅವನನ್ನು ಕುರಿತು ಹೀಗೆ ಹೇಳಿದನು.

॥ ದಕ್ಷ ಉವಾಚ ॥

ಮದ್ದೇಹಜೇಯಂ ಕಂದರ್ಪ ಮದ್ರೂಪಗುಣಸಂಯುತಾ ।
ಏನಾಂ ಗೃಹ್ಣೀಷ್ವ ಭಾರ್ಯಾರ್ಥಂ ಭವತಃ ಸದೃಶೀಂ ಗುಣೈಃ ॥ ೧೯ ॥
ಏಷಾ ತವ ಮಹಾತೇಜಾಃ ಸರ್ವದಾ ಸಹಚಾರಿಣೀ ।
ಭವಿಷ್ಯತಿ ಯಥಾಕಾಮಂ ಧರ್ಮತೋ ವಶವರ್ತಿನೀ ॥ ೨೦ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಪ್ರದದೌ ದಕ್ಷೋ ದೇಹಸ್ವೇದಾಂಬುಸಂಭವಾಂ ।
ಕಂದರ್ಪಾಯಾಗ್ರತಃ ಕೃತ್ವಾ ನಾಮ ಕೃತ್ವಾ ಏರತೀತಿ ತಾಂ ॥ ೨೧ ॥
ತಾಂ ವೀಕ್ಷ್ಯ ಮದನೋ ರಾಮಾಂ ರತ್ಯಾಖ್ಯಾಂ ಸುಮನೋಹರಾಂ ।
ಆತ್ಮಶುಗೇನ ವಿದ್ಧೋಽಸೌ ಮುಮೋಹ ರತಿರಂಜಿತಃ ॥ ೨೨ ॥

---

೧೯. ದಕ್ಷಪ್ರಜಾಪತಿಯು ಹೇಳಿದನು:—ಎಲೈ ಮದನನೇ, ನನ್ನ ಶರೀರದಿಂದ ಜನಿಸಿದ ಈ ಸುಂದರಿಯು ನನ್ನಂತೆ ರೂಪಶೀಲಾದಿಗಳಿಂದ ಕೂಡಿರುತ್ತಾಳೆ. ಸೌಂದರ್ಯವೇ ಮೊದಲಾದ ಗುಣಗಳಿಂದ ನಿನಗೆ ಅನುರೂಪಳಾದ ಇವಳನ್ನು ನೀನು ಪತ್ನಿಯನ್ನಾಗಿ ಸ್ವೀಕರಿಸು.

೨೦. ತುಂಬಾ ಕಾಂತಿಮತಿಯಾದ ಇವಳು ನಿನಗೆ ಯಾವಾಗಲೂ ಒಡನಾಡಿಯಾಗಿದ್ದು, ಧರ್ಮದಿಂದ ನಿನಗೆ ಅಧೀನಳಾಗಿದ್ದು ನಿನ್ನ ಇಷ್ಟದಂತೆ ನಡೆದುಕೊಳ್ಳುತ್ತಾಳೆ.

೨೧. ಮಾರ್ಕಂಡೇಯ ಮುನಿಯು ಹೇಳಿದನು:—ಹೀಗೆ ಹೇಳಿ ದಕ್ಷಪ್ರಜಾಪತಿಯು ತನ್ನ ಶರೀರದ ಬೆವರುನೀರಿನಿಂದ ಜನಿಸಿದ ಆ ಸ್ತ್ರೀಯನ್ನು ರತಿಯೆಂದು ಹೆಸರಿಟ್ಟು ಮನ್ಮಥನಿಗೆ ಎಲ್ಲರ ಎದುರಿನಲ್ಲಿಯೇ ಕೊಟ್ಟನು.

೨೨. ತುಂಬಾ ಮನೋಹರಳಾದ ಆ ರತಿಯನ್ನು ನೋಡಿ ಮನ್ಮಥನು ತನ್ನ ಕುಸುಮ ಬಾಣಗಳಿಂದಲೇ ಹೊಡೆಯಲ್ಪಟ್ಟು ಆ ರತಿಯಲ್ಲಿ ಮೋಹಗೊಂಡು ಅವಳೊಡನೆ ಕ್ರೀಡಿಸಬೇಕೆಂದು ಇಚ್ಛಿಸಿದನು.

ಕ್ಷಣಪ್ರಭಾವದೇಕಾಂತಗೌರೀ ಮೃಗದೃಶೀ ಸದಾ
ಲೋಲಾಪಾಂಗ್ಯಥ ತಸ್ಯೈವ ಮೃಗೀವ ಸದೃಶೀ ಬಭೌ ॥ ೨೩ ॥

ತಸ್ಯಾ ಭ್ರೂಯುಗಲಂ ವೀಕ್ಷ್ಯ ಸಂಶಯಂ ಮದನೋಽಕರೋತ್ ।
ಉನ್ಮಾದಕೃನ್ಮೇ ಕೋದಂಡಂ ಕಂ ಧಾತ್ರ್ಯಾಸ್ಯಾಂ ನಿವೇಶಿತಂ ॥ ೨೪ ॥

ಕಟಾಕ್ಷಾಣಾಮಾಶುಗತಿಂ ದೃಷ್ಟ್ವಾ ತಸ್ಯಾ ದ್ವಿಜೋತ್ತಮಾಃ ।
ಆಶುಗತ್ವಂ ನಿಜಾಸ್ತ್ರಾಣಾಂ ಶ್ರದ್ದಧತೇ ಚ ಚಾರುತಾಂ ॥ ೨೫ ॥

ತಸ್ಯಾಃ ಸ್ವಭಾವಸುರಭಿಂ ಧೀರಂ ಶ್ವಾಸಾನಿಲಂ ತಥಾ ।
ಆಘ್ರಾಯ ಮದನಃ ಶ್ರದ್ಧಾಂ ತ್ಯಕ್ತವಾನ್ಮಲಯಾನಿಲೇ ॥ ೨೬ ॥

---

೨೩. ವಿದ್ಯುತ್ತಿನಂತೆ ಬಿಳುಪಾದ ವರ್ಣವುಳ್ಳ ಮತ್ತು ಹರಿಣಿಯಂತೆ ಚಂಚಲವಾದ ನೋಟವುಳ್ಳ ಆ ರತಿಯು ಅವನಿಗೆ ಚಂಚಲವಾದ ನೋಟವುಳ್ಳ ಹರಿಣಿಯಂತೆಯೇ ಕಂಡಳು.

೨೪. ಅವಳ ಹುಬ್ಬುಗಳೆರಡನ್ನು ನೋಡಿ ಮನ್ಮಥನು—ಇದೇನು, ಬ್ರಹ್ಮನು ಕಾಮಿಗಳಿಗೆ ಉದ್ವೇಗವನ್ನುಂಟುಮಾಡುವ ನನ್ನ ಧನುಸ್ಸನ್ನು ಈ ರತಿಯಲ್ಲಿಟ್ಟಿರುವನೇನು ಎಂದು ಸಂಶಯಗೊಂಡನು.

೨೫. ಓ ಬ್ರಾಹ್ಮಣೋತ್ತಮರೇ, ಆ ರತಿಯ ನೋಟಗಳ ವೇಗವಾದ ಗತಿಯನ್ನು ನೋಡಿ, ಮನ್ಮಥನು ಅದು ತನ್ನ ಬಾಣದ್ದೆಂದು ತಿಳಿದು, ತನ್ನ ಬಾಣಗಳ ವೇಗದಲ್ಲಿಯೂ ರಮಣೀಯತೆಯಲ್ಲಿಯೂ ಹೆಚ್ಚಾದ ನಂಬಿಕೆಯುಳ್ಳವನಾದನು.

೨೬. ಆ ರತಿಯ, ಸ್ವಾಭಾವಿಕವಾಗಿ ಸುವಾಸನೆಯುಳ್ಳದ್ದಾಗಿರತಕ್ಕ ನಿಃಶ್ವಾಸವಾಯುವನ್ನು ಸೇವಿಸಿ ಮನ್ಮಥನು ಮಲಯ ಪರ್ವತದಿಂದ ಬರುವ ಚಂದನವಾಸನೆಯುಳ್ಳ ಗಾಳಿಯಲ್ಲಿ ಪ್ರೀತಿಯಿಲ್ಲದವನಾದನು.

ಪೂರ್ಣೇಂದುಸದೃಶಂ ವಕ್ತ್ರಂ ದೃಷ್ಟ್ವಾ ಭ್ರೂಲಕ್ಷ್ಮಲಕ್ಷಿತಂ ।
ನ ನಿಶ್ಚಿಕಾಯ ಮದನೋ ಭೇದಂ ತನ್ಮುಖಚಂದ್ರಯೋಃ ॥ ೨೭ ॥

ಸುವರ್ಣಪದ್ಮಕಲಿಕಾತುಲ್ಯಂ ತಸ್ಯಾಃ ಕುಚದ್ವಯಂ ।
ರೇಜೇ ಚೂಚುಕಯುಗ್ಮೇನ ಭೃಮರೇಣೇವ ಸೇವಿತಂ ॥ ೨೮ ॥

ದೃಢಪೀನೋನ್ನತಘನಸ್ತನಮಧ್ಯಾದ್ವಿಲಂಬಿನೀಂ ।
ಆನಾಭಿತೋ ರೋಮರಾಜೀಂ ತನ್ವೀಂ ಚಾವಾರ್ಯತಾಂ ಶುಭಾಂ॥೨೯॥

ಜ್ಯಾಂ ಪುಷ್ಯಧನುಷಃ ಕಾಮಃ ಷಟ್ಪದಾವಲಿಸಂಭೃತಾಂ ।
ವಿಸಸ್ಮಾರ ಚ ಯಸ್ಮಾತ್ತಾಂ ವಿಗೃಹ್ಯೈನಾಂ ನಿರೀಕ್ಷತೇ ॥ ೩೦ ॥

ಗಂಭೀರನಾಭಿರಂಧ್ರಾಂತಶ್ಚತುಃಪಾರ್ಶ್ವತ್ವಗಾವೃತಾಂ ॥
ಆನನಾಬ್ಜೇಕ್ಷಣದ್ವಂದ್ವಮಾರಕ್ತಕಮಲಂ ಯಥಾ ॥ ೩೧ ॥

---

೨೭. ಕಪ್ಪಾದ ಹುಬ್ಬುಗಳೆಂಬ ಚಿಹ್ನೆಯಿಂದ ಕೂಡಿ, ಹುಣ್ಣಿಮೆಯ ಚಂದ್ರನಂತಿರುವ ಆವಳ ಮುಖವನ್ನು ನೋಡಿ ಮನ್ಮಥನು ಅವಳ ಮುಖಕ್ಕೂ ಚಂದ್ರನಿಗೂ ಇರುವ ವ್ಯತ್ಯಾಸವನ್ನೇ ತಿಳಿಯಲಾರದವನಾದನು.

೨೮. ನೀಲವಾದ ಅಗ್ರಭಾಗದಿಂದ ಕೂಡಿದ ಆ ರತಿಯ ಸ್ತನಗಳೆರಡು ದುಂಬಿಯೊಡನಿರುವ ಸುವರ್ಣಮಯವಾದ ಕಮಲದ ಮೊಗ್ಗಿನಂತೆ ರಮಣೀಯವಾಗಿ ತೋರುತ್ತಿದ್ದವು.

೨೯–೩೦. ಕಠಿಣವೂ, ಉಬ್ಬಿದುಂಡಾಗಿಯೂ ಆಗಿ ಒಂದಕ್ಕೊಂದು ಸೇರಿಕೊಂಡಿರುವ ಕುಚಗಳ ಮಧ್ಯಪ್ರದೇಶದಿಂದ ಹೊರಟು, ನಾಭಿಯವರೆಗೂ ಹೋಗಿ, ಆಳವಾದ ಆ ನಾಭಿರಂಧ್ರದಲ್ಲಿ ನಾಲ್ಕು ಕಡೆಗಳಲ್ಲಿ ಚರ್ಮದಿಂದ ಕೂಡಿದ ಸೂಕ್ಷ್ಮವೂ, ಸುಂದರವೂ, ನೀಳವೂ, ಮನೋಹರವೂ ಆದ ರೋಮ ಪಂಕ್ತಿಯನ್ನು ನೋಡಿ ಮನ್ಮಥನು ದುಂಬಿಗಳಿಂದ ಮುತ್ತಿರುವ ತನ್ನ ಕುಸುಮ ಧನುಸ್ಸಿನ ಮೌರ್ವಿಯೆಂದು ತಿಳಿದು ಅದನ್ನೇ ಎಡಬಿಡದೆ ನೋಡುತ್ತಿದ್ದನು.

೩೧. ಆ ರತಿಯ ಕಮಲದಂತಿರುವ ಮುಖದಲ್ಲಿರುವ ಕಣ್ಣುಗಳು ರಕ್ತ ಕಮಲಗಳಂತೆ ಪ್ರಕಾಶಿಸುತ್ತಿದ್ದವು.

ಕ್ಷೀಣಾ ಮಧ್ಯೇನ ವಪುಷಾ ನಿಸರ್ಗಾಷ್ಟಾಪದಪ್ರಭಾ ।
ರತ್ನವೇದೀವ ದದೃಶೇ ಕಾಮೇನ ದ್ವಿಜಸತ್ತಮಾಃ ॥ ೩೨ ॥

ರಂಭಾಸ್ತಂಭಾಯತಸ್ನಿಗ್ಧಂ ತದೂರುಯುಗಲಂ ಮೃದು ।
ನಿಜಶಕ್ತಿಸಮಂ ಕಾಮೋ ವೀಕ್ಷ್ಯಾಂಚಕ್ರೇ ಮನೋಹರಂ ॥ ೩೩ ॥

ಆರಕ್ತಪಾಷ್ಣಿಪಾದಾಗ್ರಪ್ರಾಂತಭಾಗಂ ಪದದ್ವಯಂ ।
ಅನುರಾಗಮಿವಾಮೇನೇ ಸ್ಥಿತಂ ತಸ್ಯಾಂ ಮನೋಭವಃ ॥ ೩೪ ॥

ತಸ್ಯಾಃ ಕರಯುಗಂ ರಕ್ತನಖರೈಃ ಕಿಂಶುಕೋಪಮೈಃ ।
ವೃತಾಭಿರಂಗುಲೀಭಿಶ್ಚ ಸೂಕ್ಷ್ಮಾಗ್ರಾಭಿರ್ಮನೋಹರಂ ॥ ೩೫ ॥

ಇತಿ ದೃಷ್ಟ್ವಾ ಸ್ಮರೋ ಮೇನೇ ಮಮಾಸ್ತ್ರೈರ್ದ್ವಿಗುಣೈಃ ಕೃತಃ ।
ಮಾಂ ಮೋಹಯಿತುಮುದ್ಯುಕ್ತಾ ಕಿಮೇಷಾ ದ್ವಿಜಸತ್ತಮಾಃ ॥ ೩೬ ॥

---

೩೨. ಓ ಬ್ರಾಹ್ಮಣೋತ್ತಮರೇ, ಶರಭಮೃಗದಂತೆ ಸಣ್ಣ ದಾದ ನಡುವುಳ್ಳ ಆ ರತಿದೇವಿಯು ಮನ್ಮಥನಿಗೆ ರತ್ನಮಯವಾದ ವೇದಿಕೆಯಂತೆ ಕಂಡಳು.

೩೩. ಮತ್ತು ಆ ಮದನನು, ಬಾಳೆಯ ಮರದಂತೆ ದಪ್ಪನಾಗಿಯೂ ನುಣುಪಾಗಿಯೂ ಇದ್ದು, ಮೃದುವೂ, ಸುಂದರವೂ ಆಗಿರುವ ಅವಳ ತೊಡೆ ಗಳನ್ನು ತನ್ನ ಶಕ್ತಿಗೆ ಸಮಾನವಾದವುಗಳೆಂದು ತಿಳಿದು ನೋಡುತ್ತಿದ್ದನು.

೩೪. ತುಂಬ ಕೆಂಪಾದ ಹಿಮ್ಮಡಿ, ಮುಂಭಾಗ ಮತ್ತು ಕೊನೆಯ ಭಾಗವುಳ್ಳ ಅವಳ ಹೆಜ್ಜೆಗಳನ್ನು, ಮನ್ಮಥನು ತನಗೆ ಆ ರತಿಯಲ್ಲಿರುವ ಅನುರಾಗ (ಪ್ರೀತಿ) ವೆಂದು ತಿಳಿದನು.

೩೫. ಸುರಹೊನ್ನೆಯ ಚಿಗುರಿನಂತಿರುವ ಉಗುರುಗಳಿಂದ ಕೆಂಪಾದ ಅವಳ ಕೈಗಳು ಚಿಕ್ಕದಾದ ಕೊನೆಯುಳ್ಳ ಬೆರಳುಗಳಿಂದ ತುಂಬ ಸುಂದರ ವಾಗಿದ್ದವು.

೩೬. ಓ ಬ್ರಾಹ್ಮಣೋತ್ತಮರೇ, ರತಿಯ ಹತ್ತು ಬೆರಳುಗಳಿಂದ ಕೂಡಿದ ಎರಡು ಕೈಗಳನ್ನು ನೋಡಿ ಇವಳು ನನ್ನ ಐದು ಬಾಣಗಳನ್ನು ಎರಡರಷ್ಟಾಗಿ ಎಂದರೆ ಹತ್ತನ್ನಾಗಿ ಮಾಡಿಕೊಂಡು ನನ್ನನ್ನು ಮೋಹ ಗೊಳಿಸಲು ಉದ್ಯುಕ್ತಳಾಗಿರುವಳೇ? ಎಂದು ಸಂಶಯಗೊಂಡನು. (ಚಿಗುರಿ ನಂತೆ ಕೋಮಲವಾಗಿರುವ ಬೆರಳುಗಳೇ ಬಾಣಗಳೆಂದು ಅವನ ಭ್ರಾಂತಿಯು.)

ತದ್ಬಾಹುಯುಗಲಂ ಕಾಂತಂ ಮೃಣಾಲಯುಗಲಾಯತಂ ।
ಮೃದುಸ್ನಿಗ್ಧಂ ರರಾಜಾತಿಕಾಂತಿತೋಯಪ್ರವಾಹವತ್ ॥ ೩೭ ॥

ನೀಲನೀರದಸಂಕಾಶಃ ಕೇಶಪಾಶೋ ಮನೋಹರಃ ।
ಚಮರೀಬಾಲಭರವದ್ವಿಭಾತಿಸ್ಮ ಸ್ಮರಪ್ರಿಯಃ ॥ ೩೮ ॥

ತಾಂ ವೀಕ್ಷ್ಯ ಮದನೋ ದೇವೀಂ ರತೀವಮತಿಮನೋಹರಾಂ ।
ಕಾಂತಿತೋಯೌಘಸಂಪೂರ್ಣಾಂ ಕುಚವಕ್ತ್ರಾಬ್ಜಕುಡ್ಮಲಾಂ ॥ ೩೯॥

ವಕ್ತ್ರಪದ್ಮಾಂ ಚಾರುಬಾಹುಮೃಣಾಲೀಶಕಲಾನ್ವಿತಾಂ ।
ಭ್ರೂಯುಗ್ಮವಿಭ್ರಮವ್ಯಾತತನೂರ್ಮಿಪರಿರಾಜಿತಾಂ ॥ ೪೦ ॥

ಕಟಾಕ್ಷಪಾತಭೃಂಗೌಘಾನ್ನೇತ್ರನೀಲೋತ್ಪಲಾನ್ವಿತಾಂ ।
ತನುಲೋಮಾಲಿಶೈವಾಲಾಂ ಮನೋದ್ರುಮ ವಿನಾಶಿನೀಂ ॥ ೪೧ ॥

---

೩೭. ತಾವರೆನಾಳದಂತೆ ನೀಳವೂ, ಮೃದುವೂ, ನುಣುಪೂ ಆಗಿರುವ ಆ ರತಿಯ ಸುಂದರವಾದ ತೋಳುಗಳು ಸೌಂದರ್ಯವೆಂಬ ಜಲದ ಪ್ರವಾಹದಂತೆ ಶೋಭಿಸುತ್ತಲಿದ್ದವು.

೩೮. ನೀಲಮೇಘದಂತೆ ಕಪ್ಪಾದ ಆವಳ ಸುಂದರವಾದ ಜಡೆಯು ಚಮರೀ ಮೃಗದ ಬಾಲಸಮೂಹದಂತೆ ಪ್ರಕಾಶಿಸುತ್ತಲಿದ್ದು ಮನ್ಮಥನಿಗೆ ಪ್ರಿಯವಾಗಿತ್ತು.

೩೯. ಆ ರತಿಯಾದರೋ ಅತಿಮನೋಹರಳಾಗಿ, ಶರೀರಕಾಂತಿಯೆಂಬ ಜಲದಿಂದ ಪೂರ್ಣವಾಗಿ ಆವರಿಸಲ್ಪಟ್ಟಿರುವಳು. ಅವಳ ಸ್ತನಗಳು ಆ ಕಾಂತಿಯೆಂಬ ಜಲದಲ್ಲಿ ಕಮಲದ ಮೊಗ್ಗುಗಳಂತೆ ಇರುವವು.

೪೦. ಇವಳ ಶರೀರಕಾಂತಿಯೆಂಬ ಜಲದಲ್ಲಿ ಇವಳ ಮುಖವೇ ಪದ್ಮದಂತಿರುವುದು. ಸುಂದರವಾದ ಇವಳ ತೋಳುಗಳೇ ತಾವರೆಯ ನಾಳಗಳು. ಇವಳು ತೋರುವ ಭ್ರೂವಿಲಾಸಗಳೇ ಆ ನೀರಿನಲ್ಲಿ ಚಿಕ್ಕಚಿಕ್ಕ ಅಲೆಗಳಂತೆ ತೋರಿ ಪ್ರಕಾಶವನ್ನುಂಟುಮಾಡುತ್ತಿರುವವು.

೪೧. ಮತ್ತು ಆ ಕಾಂತಿಜಲದಲ್ಲಿ ಇವಳ ಕುಡಿನೋಟಗಳೇ ದುಂಬಿಗಳಾಗಿಯೂ, ನೇತ್ರಗಳೇ ಕನ್ನೈದಿಲೆಗಳಾಗಿಯೂ, ಸೂಕ್ಷ್ಮವಾದ ರೋಮಪಂಕ್ತಿಯೇ ಪಾಚಿಯಾಗಿಯೂ, ಮನಸ್ಸೇ ದಡದಲ್ಲಿದ್ದು ನಾಶವಾಗುವ ವೃಕ್ಷಗಳಾಗಿಯೂ ಇದ್ದವು.

ನಿಮ್ನನಾಭಿಹ್ರದಾಂ ದಕ್ಷಪ್ರಾಲೇಯಾದ್ರಿಸಮುದ್ಭವಾಂ ।
ಗಂಗಾಮಿವ ಮಹಾದೇವೋ ಜಗ್ರಾಹೋತ್ಫುಲ್ಲಲೋಚನಃ ॥ ೪೨ ॥

ಉವಾಚ ಚ ತದಾ ದಕ್ಷಂ ಕಾಮೋ ಮೋದಭರಾನ್ವಿತಃ ।
ವಿಸೃಜ್ಯ ಶಾಪಂ ಚ ತದಾ ವಿಧಿದತ್ತಂ ಸುದಾರುಣಂ ॥ ೪೩ ॥

॥ ಮದನ ಉವಾಚ ॥

ಅನಯಾ ಸಹಚಾರಿಣ್ಯಾ ಸಮ್ಯಕ್ಸುಂದರರೂಪಯಾ ।
ಸಮರ್ಥೋಽಹಂ ಮೋಹಿತುಂ ಶಂಭುಂ ಕಿಮನ್ಯೈರ್ಜಂತುಭಿರ್ವಿಭೋ ॥೪೪॥

ಯತ್ರ ಯತ್ರ ಮಯಾ ಲಕ್ಷ್ಯಂ ಕ್ರಿಯತೇ ಧನುಷೋಽನಘ ।
ತತ್ರಾನಯಾಪಿ ಚೇಷ್ಟವ್ಯಂ ಮಾಯಯಾ ರಮಣಾಹ್ವಯಾ ॥ ೪೫ ॥

---

೪೨. ಆಳವಾದ ಇವಳ ನಾಭಿಯೇ ಆ ಕಾಂತಿಜಲದಲ್ಲಿ ಮಡುವು. ದಕ್ಷಪ್ರಜಾಪತಿಯೇ ಹಿಮವತ್ಪರ್ವತವು. ಈ ರೀತಿ ಗಂಗಾನದಿಯಲ್ಲಿರುವ ಗುಣಗಳಿಂದ ಶೋಭಿಸುವ ಆ ರತಿದೇವಿಯನ್ನು ಮದನನು ನೋಡಿ, ಈಶ್ವರನು ಗಂಗಾನದಿಯನ್ನು ಸ್ವೀಕರಿಸಿದಂತೆ ಆ ರತಿಯನ್ನು ಆನಂದದಿಂದ ಅರಳಿದ ಕಣ್ಣುಗಳುಳ್ಳವನಾಗಿ ಸ್ವೀಕರಿಸಿದನು.

೪೩. ಆಗ ಮನ್ಮಥನು ತುಂಬ ಸಂತೋಷದಿಂದ ಕೂಡಿ, ಬ್ರಹ್ಮನು ಕೊಟ್ಟ ಭಯಂಕರವಾದ ಶಾಪವನ್ನು ಸಹ ಮರೆತು ದಕ್ಷಬ್ರಹ್ಮನನ್ನು ಕುರಿತು ಹೀಗೆ ಹೇಳಿದ.

೪೪. ಮನ್ಮಥನು ದಕ್ಷಬ್ರಹ್ಮನನ್ನು ಕುರಿತು ಹೇಳಿದನು:— ಓ ಸ್ವಾಮಿಯೇ, ತುಂಬ ಸುಂದರವಾದ ರೂಪವುಳ್ಳ, ನನ್ನೊಡನಾಡಿಯಾದ ಈ ರತೀದೇವಿಯೊಡನೆ ನಾನು ಈಶ್ವರನನ್ನು ಸಹ ಮೋಹಗೊಳಿಸಲು ಸಮರ್ಥನಾಗಿರುವೆನು. ಇನ್ನುಳಿದ ಪ್ರಾಣಿಗಳ ಪಾಡೇನು?

೪೫. ಪೂಜ್ಯನಾದ ಓ ದಕ್ಷಬ್ರಹ್ಮನೇ, ನಾನು ಯಾರಲ್ಲಿ ನನ್ನ ಧನುಸ್ಸಿನ ಗುರಿಯನ್ನಿಡುವೆನೋ ಅಲ್ಲಿ ಮೋಹಗೊಳಿಸುವ ಸ್ವಭಾವವುಳ್ಳ ರತೀದೇವಿಯೂ ಸಹ ತನ್ನ ಚೇಷ್ಟೆಯನ್ನು ಮಾಡಬೇಕು.

ಯದಾ ದೇವಾಲಯಂ ಯಾಮಿ ಪೃಥಿವೀಂ ವಾ ರಸಾತಲಂ ।
ತದೈಷಾऽಪ್ಯಸ್ತು ಸಧ್ರೀಚೀ ಸರ್ವದಾ ಚಾರುಹಾಸಿನೀ ॥ ೪೬ ॥

ಯಥಾ ಪದ್ಮಾಲಯಾ ವಿಷ್ಣೋರ್ಜಲದಾನಾಂ ಯಥಾ ತಡಿತ್ ।
ತಥಾ ಮಮೈಷಾ ಭವಿತಾ ಪ್ರಜಾಧ್ಯಕ್ಷ ಸಹಾಯಿನೀ ॥ ೪೭ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಮದನೋ ದೇವೀಂ ರತೀಂ ಜಗ್ರಾಹ ಸೋತ್ಸುಕಃ ।
ಸಾಗರಾದುತ್ಥಿತಾಂ ಲಕ್ಷ್ಮೀಂ ಹೃಷೀಕೇಶ ಇವೋತ್ತಮಾಂ ॥ ೪೯ ॥

ರರಾಜ ಸ ತಯಾ ಸಾರ್ಧಂ ಭಿನ್ನಪೀತಪ್ರಭಃ ಸ್ಮರಃ ।
ಜೀಮೂತ ಇವ ಸಂಧ್ಯಾಯಾಂ ಸೌದಾಮಿನ್ಯಾ ಮನೋಜ್ಞಯಾ ॥೪೯॥

---

೪೬. ಮತ್ತು ನಾನು ಸ್ವರ್ಗಕ್ಕಾಗಲೀ, ಭೂಲೋಕಕ್ಕಾಗಲೀ, ಪಾತಾಳಕ್ಕಾಗಲೀ ಎಲ್ಲೆಲ್ಲಿ ಹೋದರೂ ಅಲ್ಲೆಲ್ಲಾ ಸುಂದರವಾದ ಮಂದಹಾಸವುಳ್ಳ ಈ ರತೀದೇವಿಯು ಯಾವಾಗಲೂ ನನ್ನೊಡನಿರತಕ್ಕದ್ದು.

೪೭. ಓ ದಕ್ಷಬ್ರಹ್ಮನೇ, ವಿಷ್ಣುವಿಗೆ ಲಕ್ಷ್ಮಿಯು ಹೇಗೋ, ಮೇಘಗಳಿಗೆ ವಿದ್ಯುತ್ತು (ಮಿಂಚು) ಹೇಗೋ ಹಾಗೆ ಈ ರತಿಯೂ ನನಗೆ ಎಲ್ಲ ಕಾರ್ಯಗಳಲ್ಲಿಯೂ ಸಮೀಪದಲ್ಲಿದ್ದು ಸಹಾಯಕಳಾಗಿರತಕ್ಕದ್ದು.

೪೯. ಮಾರ್ಕಂಡೇಯ ಮುನಿಯು ಹೇಳಿದನು:—ಹೀಗೆ ಹೇಳಿ ಆ ಮನ್ಮಥನು ಸಂಭ್ರಮದಿಂದ, ಸಮುದ್ರದಿಂದುತ್ಪನ್ನಳಾದ ಲಕ್ಷ್ಮಿಯನ್ನು ವಿಷ್ಣುವು ಸ್ವೀಕರಿಸಿದಂತೆ, ಆ ರತಿದೇವಿಯನ್ನು ಸ್ವೀಕರಿಸಿದನು.

೪೯. ಮಿಶ್ರವಾದ ಹಳದೀವರ್ಣದ ಕಾಂತಿಯುಳ್ಳ ಆ ಮನ್ಮಥನು ಆ ರತೀದೇವಿಯೊಡಗೂಡಿ, ಸಂಜೆಯಲ್ಲಿ ಮನೋಹರವಾದ ಮಿಂಚಿನಿಂದ ಕೂಡಿರುವ ಮೇಘದಂತೆ ಪ್ರಕಾಶಿಸಿದನು.

ಇತಿ ರತಿಪತಿರುಚ್ಚೈ ರ್ನೋದಯುಕ್ತೋ ರತೀಂ ತಾಂ ।
ಹೃದಿ ಪರಿಜಗೃಹೇऽಯಂ ಯೋಗದರ್ಶೀವ ವಿದ್ಯಾಂ ।
ರತಿರಪಿ ಪತಿಮಗ್ರ್ಯಂ ಪ್ರಾಪ್ಯ ತೋಷಂ ಚ ಲೇಭೇ ।
ಹರಿಮಿವ ಕಮಲೋತ್ಥಾ ಪೂರ್ಣಚಂದ್ರೋಪಮಾಸ್ಯಾ ॥ ೫೦ ॥

॥ ಇತಿ ಶ್ರೀ ಕಾಲಿಕಾಪುರಾಣೇ ತೃತೀಯೋऽಧ್ಯಾಯಃ ॥

---

೫೦. ಹೀಗೆ ಮನ್ಮಥನು ತುಂಬ ಸಂತೋಷಗೊಂಡು ಆ ರತಿಯನ್ನು ತನ್ನ ಹೃದಯದಲ್ಲಿ, ಯೋಗಿಯು ವಿದ್ಯೆಯನ್ನು ಧರಿಸುವಂತೆ ಧರಿಸಿದನು. ಹುಣ್ಣಿಮೆಯ ಚಂದ್ರನಂತಿರುವ ಮುಖವುಳ್ಳ ಆ ರತಿದೇವಿಯೂ ಸಹ ಉತ್ತಮನಾದ ಪತಿಯನ್ನು ಪಡೆದು, ವಿಷ್ಣುವನ್ನು ಪತಿಯಾಗಿ ಪಡೆದ ಕಮಲಸಂಭೂತಳಾದ ಲಕ್ಷ್ಮಿಯಂತೆ, ತುಂಬ ಸಂತೋಷವನ್ನು ಪಡೆದಳು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಅಥ ಶ್ರೀಕಾಲಿಕಾಪುರಾಣೇ ಚತುರ್ಥೋಽಧ್ಯಾಯಃ ॥

ನಾಲ್ಕನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ತತಃ ಪ್ರಭೃತಿ ಧಾತಾಪಿ ಯದೈವಾಂತರ್ಹಿತಃ ಪುರಾ ।
ಚಿಂತಯಾಮಾಸ ಸತತಂ ಶಂಭುವಾಕ್ಯವಿಷಾದಿತಃ ॥ ೧ ॥

ಕಾಂತಾಭಿಲಾಷಮಾತ್ರಂ ಮೇ ದೃಷ್ಟ್ವಾ ಶಂಭುರಗರ್ಹಯತ್ ।
ಮುನೀನಾಂ ಪುರತಃ ಕಸ್ಮಾತ್ಸ ದಾರಾನ್ ಸಂಗ್ರಹಿಷ್ಯತಿ ॥ ೨ ॥

ಕಾ ವಾ ಭವಿತ್ರೀ ತಜ್ಜಾಯಾ ಕಾ ಚ ತನ್ಮನಸಿ ಸ್ಥಿತಾ ।
ಯೋಗಮಾರ್ಗಮವಜ್ಞಾಪ್ಯ ತಸ್ಯ ಮೋಹಂ ಕರಿಷ್ಯತಿ ॥ ೩ ॥

---

೧. ಮಾರ್ಕಂಡೇಯ ಮುನಿಯು ಹೇಳಿದನು:—ಓ ಮುನಿಗಳೇ, ಹಿಂದೆ ಹೇಳಿದಂತೆ ಬ್ರಹ್ಮನು ಯಾವಾಗ ಅಂತರ್ಧಾನನಾದನೋ ಆದು ಮೊದಲು ಗೊಂಡು ಅವನು, ತನಗೆ ಈಶ್ವರನು ಹೇಳಿದ ಮಾತಿನಿಂದ ತುಂಬ ಖೇದ ಗೊಂಡವನಾಗಿ ಹೀಗೆ ಚಿಂತಿಸತೊಡಗಿದನು.

೨. ಸ್ತ್ರೀಯಲ್ಲಿ ನನಗೆ ಉಂಟಾದ ಅಭಿಲಾಷೆಯನ್ನು ನೋಡಿದ ಮಾತ್ರಕ್ಕೆ ಈಶ್ವರನು ನನ್ನನ್ನು ಮುನಿಗಳಿದುರಿನಲ್ಲಿ ನಿಂದಿಸಿದನು. ಆದರೆ ಅಂತಹ ಶಂಕರನೇ ಮುಂದೆ ಮದುವೆಯನ್ನು ಮಾಡಿಕೊಳ್ಳುವನು.

೩. ಅವನಿಗೆ ಹೆಂಡತಿಯಾಗತಕ್ಕವಳು ಯಾರು? ಯಾವ ಸ್ತ್ರೀಯು ಆ ಶಂಕರನ ಮನಸ್ಸನ್ನಪಹರಿಸಿ ಅವನ ತಪಸ್ಸು ಮತ್ತು ವೈರಾಗ್ಯವನ್ನು ತಪ್ಪಿಸಿ ಅವನನ್ನು ಮೋಹಗೊಳಿಸುವಳು?

ಮನ್ಮಥೋಽಪಿ ಸಮರ್ಥೋ ನೋ ಭವಿಷ್ಯತ್ಯಸ್ಯ ಮೋಹನೇ ।
ನಿತಾಂತಯೋಗೀ ರಾಮಾಣಾಂ ನಾಮಾಪಿ ಸಹತೇ ನ ಸಃ ॥ ೪ ॥

ಅಗೃಹೀತೇಷು ದಾರೇಷು ಹರೇಣ ಕಥಮಾದಿತಃ ।
ಮಧ್ಯೇ ಚೈವ ಭವೇತ್ಸೃಷ್ಟಿಸ್ತದ್ವಧೋ ನಾನ್ಯಕಾರಿತಃ ॥ ೫ ॥

ಕೇಚಿದ್ಭವಿಷ್ಯಂತಿ ಭುವಿ ಮಯಾ ವಧ್ಯಾ ಮಹಾಬಲಾಃ ।
ಕೇಚಿದ್ವಿಷ್ಣೋರ್ಬಾಧನೀಯಾಃ ಕೇಚಿಚ್ಛಂಭೋರುಪಾಯತಃ ॥ ೬ ॥

ಸಂಸಾರವಿಮುಖೇ ಶಂಭೌ ತಥೈಕಾಂತವಿರಾಗಿಣಿ ।
ಅಸ್ಮಾದೃತೇ ನ ಕರ್ಮಾನ್ಯತ್ಕರಿಷ್ಯತಿ ನ ಸಂಶಯಃ ॥ ೭ ॥

ಚಿಂತಯನ್ನಿತಿ ಲೋಕೇಶೋ ಬ್ರಹ್ಮಾ ಲೋಕಪಿತಾಮಹಃ ।
ಪುನರ್ದದರ್ಶ ಭೂಮಿಷ್ಠಾನ್ದಕ್ಷಾದೀನ್ವಿಯತಿ ಸ್ಥಿತಃ ॥ ೮ ॥

---

೪. ಮನ್ಮಥನೂ ಇವನನ್ನು ಮೋಹಗೊಳಿಸಲಾರನು. ತುಂಬಾ ವಿರಕ್ತನಾದ ಈ ಶಂಕರನು ಹೆಂಗಸರ ಹೆಸರನ್ನು ಸಹ ಕೇಳಲಿಚ್ಛಿಸುವುದಿಲ್ಲ.

೫. ಹರನು ಪತ್ನಿಯನ್ನು ಪರಿಗ್ರಹಿಸದಿದ್ದಲ್ಲಿ ಮೊದಲಾಗಲೀ, ಮಧ್ಯದಲ್ಲಾಗಲೀ ಯಾವ ಸೃಷ್ಟಿಯೂ ಆಗುವಂತಿಲ್ಲವು. ಆದು ಹೇಗೆ ತಾನೇ ಆದೀತು? ಆ ಸೃಷ್ಟಿಯ ನಾಶವೂ ಇನ್ನೊಬ್ಬರಿಂದ ಆಗತಕ್ಕದ್ದಲ್ಲವು.

೬. ಮುಂದೆ ಮಹಾಬಲಿಷ್ಠರಾದ ರಾಕ್ಷಸರೇ ಮೊದಲಾದವರು ನನ್ನಿಂದ ಈ ಭೂಮಿಯಲ್ಲಿ ಸೃಷ್ಟಿಸಲ್ಪಡುವರು. ಅವರುಗಳು ನಾಶಮಾಡಲ್ಪಡಬೇಕಾಗಿರುವುದರಿಂದ, ಕೆಲವರನ್ನು ವಿಷ್ಣುವೂ ಕೆಲವರನ್ನು ಈಶ್ವರನೂ ಉಪಾಯಾಂತರಗಳಿಂದ ನಾಶಮಾಡುವರು.

೭. ಹೀಗೆ ಶಂಕರನು ಸಂಸಾರದಲ್ಲಿ ಆಸಕ್ತಿಯಿಲ್ಲದೆ ತುಂಬಾ ವೈರಾಗ್ಯವುಳ್ಳವನಾಗಿದ್ದರೆ, ಅವನು ಅದನ್ನು ಹೊರತು ಮತ್ತಾವ ಕೆಲಸವನ್ನೂ ಮಾಡಲಾರನು. ಇದರಲ್ಲಿ ಸಂದೇಹವಿಲ್ಲವು.

೮. ಹೀಗೆ ಜಗತ್ತಿಗೆ ಒಡೆಯನೂ, ಲೋಕಪಿತಾಮಹನೂ ಆದ ಆ ಬ್ರಹ್ಮನು ಈ ರೀತಿ ಯೋಚಿಸುತ್ತಾ ಅಂತರಿಕ್ಷದಲ್ಲಿದ್ದುಕೊಂಡೇ ಭೂಮಿಯಲ್ಲಿರುವ ದಕ್ಷಬ್ರಹ್ಮನೇ ಮೊದಲಾದವರನ್ನು ಮತ್ತೆ ನೋಡಿದನು.

ರತಿದ್ವಿತೀಯಂ ಮದನಂ ಮೋದಯುಕ್ತಂ ನಿರೀಕ್ಷ್ಯ ಚ ।
ಪುನಸ್ತತ್ರ ಗತಃ ಪ್ರಾಹ ಸಾಂತ್ವಯನ್ ಪುಷ್ಪಸಾಯಕಂ ॥ ೯ ॥

॥ ಬ್ರಹ್ಮೋವಾಚ ॥

ಅನಯಾ ಸಹಚಾರಿಣ್ಯಾ ರಾಜಸೇ ತ್ವಂ ಮನೋಭವ ।
ಏಷಾ ಚ ಭವತಾ ಪತ್ಯಾ ಯುಕ್ತಾ ಸಂಶೋಭತೇ ಭೃಶಂ ॥ ೧೦ ॥

ಯಥಾ ಶ್ರಿಯಾ ಹೃಷೀಕೇಶೋ ಯಥಾ ತೇನ ಹರಿಪ್ರಿಯಾ ।
ಕ್ಷಣದಾ ವಿಧುನಾ ಯುಕ್ತಾ ತಯಾ ಯುಕ್ತೋ ಯಥಾ ವಿಧುಃ ॥೧೧॥

ತಥೈವ ಯುವಯೋಃ ಶೋಭಾ ದಾಂಪತ್ಯಂ ಚ ಪುರಸ್ಕೃತಂ ।
ಅತಸ್ತ್ವಂ ಜಗತಃ ಕೇತುರ್ವಿಶ್ವಕೇತುರ್ಭವಿಷ್ಯಸಿ ॥ ೧೨ ॥

---

೯. ರತಿದೇವಿಯಿಂದ ಕೂಡಿ ಸಂತೋಷದಿಂದಿರುವ ಮನ್ಮಥನನ್ನು ನೋಡಿ ಬ್ರಹ್ಮನು ಮತ್ತೆ ಅಲ್ಲಿಗೆ ಹೋಗಿ ಮನ್ಮಥನನ್ನು ಸಮಾಧಾನಕರವಾದ ಮಾತುಗಳಿಂದ ಹೀಗೆ ಹೇಳಿದನು.

೧೦. ಬ್ರಹ್ಮನು ಹೇಳಿದನು:— ಓ ಮನ್ಮಥನೇ, ನಿನ್ನ ಸಹಚಾರಿಣಿಯಾದ ಈ ರತಿಯಿಂದೊಡಗೂಡಿ ನೀನು ಚನ್ನಾಗಿ ಶೋಭಿಸುತ್ತಲಿರುವೆ. ಈ ರತಿಯೂ ಸಹ ತನಗೆ ಅನುರೂಪನಾದ ನಿನ್ನನ್ನು ಪತಿಯಾಗಿ ಪಡೆದು ತುಂಬ ಪ್ರಕಾಶಿಸುತ್ತಿದ್ದಾಳೆ.

೧೧ – ೧೨ ಲಕ್ಷ್ಮಿಯಿಂದ ವಿಷ್ಣುವೂ, ವಿಷ್ಣುವಿನಿಂದ ಲಕ್ಷ್ಮಿಯೂ ಅನ್ಯೋನ್ಯವಾಗಿ ಹೇಗೆ ಶೋಭಿಸುವರೋ, ಮತ್ತು ರಾತ್ರಿಯಿಂದ ಚಂದ್ರನೂ, ಚಂದ್ರನಿಂದ ರಾತ್ರಿಯೂ ಹೇಗೆ ಪ್ರಕಾಶಿಸುವರೋ ಅದರಂತೆ ನೀವೀರ್ವರೂ ಶೋಭಿಸುತ್ತಲಿರುವಿರಿ. ಮತ್ತು ಅವರಂತೆಯೇ ನಿಮ್ಮ ದಂಪತಿಭಾವವು ಉತ್ತಮವಾಗಿದೆ. ಆದುದರಿಂದ, ಓ ಮನ್ಮಥನೇ, ನೀನು ಜಗತ್ತಿಗೇ ಆಲಂಕಾರ ಪ್ರಾಯನಾಗಿರುತ್ತೀಯೆ.

ಜಗದ್ಧಿತಾಯ ವತ್ಸ ತ್ವಂ ಮೋಹಯಸ್ವ ಪಿನಾಕಿನಂ ।
ಯಥಾ ಸುಖಮನಾಃ ಶಂಭುಃ ಕುರ್ಯಾದ್ದಾರಪರಿಗ್ರಹಂ ॥ ೧೩ ॥

ವಿಜನೇ ಸ್ನಿಗ್ಧದೇಶೇ ಚ ಪರ್ವತೇಷು ಸರಿತ್ಸು ಚ ।
ಯತ್ರ ಯತ್ರ ಪ್ರಯಾತೀಶಸ್ತತ್ರ ತತ್ರಾನಯಾ ಸಹ ॥ ೧೪ ॥

ಮೋಹಯಸ್ವ ಯತಾತ್ಮಾನಂ ವನಿತಾವಿಮುಖಂ ಹರಂ ॥
ತ್ವದೃತೇ ವಿದ್ಯತೇ ನಾನ್ಯಃ ಕಶ್ಚಿದಸ್ಯ ವಿಮೋಹಕಃ ॥ ೧೫ ॥

ಭೂತೇ ಹರೇ ಸಾನುರಾಗೇ ಭವತೋಽಪಿ ಮನೋಭವ ।
ಶಾಪೋಪಶಾಂತಿರ್ಭವಿತಾ ತಸ್ಮಾದಾತ್ಮಹಿತಂ ಕುರು ॥ ೧೬ ॥

ಸಾನುರಾಗೋ ವರಾರೋಹಾಂ ಯದೀಚ್ಛತಿ ಮನೋಭವ ।
ತದಾ ತವೋಪಭೋಗಾಯ ಸ ತ್ವಾಂ ಸಂಭಾವಯಿಷ್ಯತಿ ॥ ೧೭ ॥

---

೧೩. ಎಲೈ ವತ್ಸ ಮನ್ಮಥನೇ, ಜಗತ್ತಿನ ಶ್ರೇಯಸ್ಸಿಗಾಗಿ ಪರಮೇಶ್ವರನನ್ನು ಮೋಹಗೊಳಿಸು. ಆ ಶಂಕರನು ಸಂಸಾರಸುಖದಲ್ಲಿ ಮನಸ್ಸುಳ್ಳವನಾಗಿ ಮದುವೆಯನ್ನು ಮಾಡಿಕೊಳ್ಳುವಂತೆ ಪ್ರಯತ್ನವನ್ನು ಮಾಡು.

೧೪ – ೧೫. ನಿರ್ಜನವಾದ ಮತ್ತು ಮನೋಹರವಾದ ಸ್ಥಳಗಳಲ್ಲಿಯೂ, ಬೆಟ್ಟಗಳಲ್ಲಿಯೂ, ನದಿಗಳಲ್ಲಿಯೂ ಮತ್ತು ಎಲ್ಲೆಲ್ಲಿ ಆ ಶಂಕರನು ಸಂಚರಿಸುವನೋ ಅಲ್ಲೆಲ್ಲಾ ನೀನು ಈ ರತಿಯೊಂದಿಗಿದ್ದು, ಜಿತೇಂದ್ರಿಯನೂ ಸ್ತ್ರೀಯರಲ್ಲಿ ಆಸಕ್ತಿಯಿಲ್ಲದವನೂ ಆದ ಅವನನ್ನು ಮೋಹಗೊಳಿಸು. ನಿನ್ನನ್ನು ಬಿಟ್ಟರೆ ಇನ್ನಾರೂ ಆ ಶಂಕರನನ್ನು ಮೋಹಗೊಳಿಸುವವರಿಲ್ಲವು.

೧೬. ಎಲೈ ಮದನನೇ, ಶಂಕರನು ಅನುರಾಗವುಳ್ಳವನಾದರೆ ಆಗ ನಿನ್ನ ಶಾಪದ ನಿವೃತ್ತಿಯೂ ಆಗುವುದು. ಆದಕಾರಣ ನಿನಗೂ ಹಿತವನ್ನುಂಟು ಮಾಡುವ ಈ ಕಾರ್ಯವನ್ನು ಮಾಡು.

೧೭. ಈಶ್ವರನು ಅನುರಾಗವುಳ್ಳವನಾಗಿ ಉತ್ತಮಸ್ತ್ರೀಯನ್ನು ಯಾವಾಗ ಅಪೇಕ್ಷಿಸುವನೋ ಆಗ ಅವನು ನಿನ್ನನ್ನು ಸಂತೋಷಗೊಳಿಸಲು ನಿನ್ನ ಶಾಪ ನಿವೃತ್ತಿಯನ್ನು ಮಾಡುವನು.

ತಸ್ಮಾಜ್ಜಗದ್ಧಿತಾಯ ತ್ವಂ ಯತಸ್ವ ಹರಮೋಹನೇ ।
ಶಿವಸ್ಯ ಭವ ಕೇತುಸ್ತ್ವಂ ಮೋಹಯಿತ್ವಾ ಮಹೇಶ್ವರಂ ॥ ೧೮ ॥

॥ ಮಾರ್ಕಂಡೇಯ ಉವಾಚ ॥

ಇತಿ ಶ್ರುತ್ವಾ ವಚಸ್ತಸ್ಯ ಬ್ರಹ್ಮಣಃ ಪರಮಾತ್ಮನಃ ।
ಉವಾಚ ಮನ್ಮಥಸ್ತಥ್ಯಂ ಬ್ರಹ್ಮಾಣಂ ಜಗತೋ ಹಿತಂ ॥ ೧೯ ॥

॥ ಮನ್ಮಥ ಉವಾಚ ॥

ಕರಿಷ್ಯೇಽಹಂ ತವ ವಿಭೋ ವಚನಾಚ್ಛಂಭುಮೋಹನಂ ।
ಕಿಂತು ಯೋಷಿನ್ಮಹಾಸ್ತ್ರಂ ಮೇ ತತ್ರ ಕಾಂತಾಂ ಪ್ರಭೋ ಸೃಜ ॥ ೨೦ ॥
ಮಯಾ ಸಂಮೋಹಿತೇ ಶಂಭೌ ಯಯಾ ತಸ್ಯಾನುಮೋಹನಂ ।
ಕಾರ್ಯಂ ಮನೋರಮಾಂ ರಾಮಾಂ ತಾಂ ನಿದೇಶಯ ಲೋಕಭೃತ್ ॥೨೧॥

---

೧೮. ಆದುದರಿಂದ ನೀನು ಜಗತ್ತಿನ ಕಲ್ಯಾಣಕ್ಕಾಗಿ ಈಶ್ವರನನ್ನು ಮೋಹಗೊಳಿಸುವ ಪ್ರಯತ್ನವನ್ನು ಮಾಡು. ಆ ರೀತಿ ಪರಮೇಶ್ವರನನ್ನು ಮೋಹಗೊಳಿಸಿ ನೀನು ಪ್ರಪಂಚಕ್ಕೆ ಆಲಂಕಾರಪ್ರಾಯನಾಗು.

೧೯. ಮಾರ್ಕಂಡೇಯ ಮುನಿಯು ಹೇಳಿದನು: — ಪರಮಾತ್ಮನಾದ ಬ್ರಹ್ಮನ ಈ ವಿಧವಾದ ಮಾತನ್ನು ಕೇಳಿ ಮನ್ಮಥನು ಜಗತ್ತಿಗೆ ಶ್ರೇಯಸ್ಸನ್ನುಂಟುಮಾಡುವ ಆ ಬ್ರಹ್ಮನನ್ನು ಕುರಿತು ಸತ್ಯವಾದ ಮಾತನ್ನು ಹೀಗೆ ಹೇಳಿದನು.

೨೦. ಮನ್ಮಥನು ಬ್ರಹ್ಮನನ್ನು ಕುರಿತು ಹೇಳಿದನು:—ಓ ಪ್ರಭುವೇ, ನಿನ್ನಾಜ್ಞೆಯಂತೆ ಈಶ್ವರನನ್ನು ಮೋಹಗೊಳಿಸುವೆನು. ಆದರೆ ನನಗೆ ಸ್ತ್ರೀಯೇ ಶ್ರೇಷ್ಠವಾದ ಆಯುಧವು. ಆದುದರಿಂದ ಈಶ್ವರನನ್ನು ಮೋಹಿಸಲು ಯೋಗ್ಯಳಾದ ಸುಂದರಸ್ತ್ರೀಯನ್ನು ಸೃಷ್ಟಿಸು.

೨೧. ನಿನ್ನಿಂದ ಶಂಭವು ಮೋಹಗೊಂಡಮೇಲೆ ಅವಳೂ ಸಹ ಅವನನ್ನು ಮನ್ಮಥವಿಕಾರವುಳ್ಳವನಾಗುವಂತೆ ಮಾಡಬೇಕು. ಓ ಬ್ರಹ್ಮನೇ ಅಂತಹ ಸುಂದರಿಯಾದ ಸ್ತ್ರೀಯನ್ನು ತೋರಿಸು.

ತಾಮಹಂ ನಹಿ ಪಶ್ಯಾಮಿ ಯಯಾ ತಸ್ಯಾನುಮೋಹನಂ ।
ಕರ್ತವ್ಯಮಧುನಾ ಧಾತಸ್ತ್ವೋಪಾಯಂ ತಥಾ ಕುರು ॥ ೨೨ ॥

॥ ಮಾರ್ಕಂಡೇಯ ಉವಾಚ ॥

ಏವಂ ವಾದಿನಿ ಕಂದರ್ಪೇ ಧಾತಾ ಲೋಕಪಿತಾಮಹಃ ।
ಕುರ್ಯಾಂ ಸಂಮೋಹಿನೀಂ ಯೋಷಾಮಿತಿ ಚಿಂತಾಂ ಜಗಾಮ ಹ ॥೨೩॥

ಚಿಂತಾವಿಷ್ಟಸ್ಯ ತಸ್ಯಾಥ ನಿಃಶ್ವಾಸೋ ಯೋ ವಿನಿಃಸೃತಃ ।
ತಸ್ಮಾದ್ವಸಂತಃ ಸಂಜಾತಃ ಪುಷ್ಪವಾತವಿಭೂಷಿತಃ ॥ ೨೪ ॥

ಚೂತಾಂಕುರಾನ್ಕುಲಿತಾನ್ಬಿಭ್ರದ್ಭ್ರಮರಸಂಹತಿಂ ।
ಕಿಂಶುಕಾನ್ ಸಾರಸಾನ್ರೇಜೇ ಪ್ರಫುಲ್ಲ ಇವ ಪಾದಪಃ ॥ ೨೫ ॥

---

೨೨. ಆ ಶಂಕರನನ್ನು ಮೋಹಗೊಳಿಸುವಷ್ಟು ಸುಂದರಿಯಾದ ಸ್ತ್ರೀಯನ್ನು ನಾನು ಎಲ್ಲಿಯೂ ನೋಡಿಲ್ಲವು. ಆದುದರಿಂದ ಓ ಬ್ರಹ್ಮನೇ ಈ ವಿಷಯದಲ್ಲಿ ಮಾಡಬೇಕಾದ ಉಪಾಯವನ್ನು ಮಾಡು.

೨೩. ಮಾರ್ಕಂಡೇಯ ಮುನಿಯು ಹೇಳಿದನು:— ಮನ್ಮಥನು ಹೀಗೆ ಹೇಳಲು ಪ್ರಪಂಚಕ್ಕೆ ತಾತನೆನಿಸಿದ ಬ್ರಹ್ಮನು ಈಶ್ವರನನ್ನು ಮೋಹಗೊಳಿಸುವಂತಹ ಸ್ತ್ರೀಯನ್ನು ಸೃಷ್ಟಿಸುತ್ತೇನೆ ಎಂದು ಆಲೋಚಿಸಿದನು.

೨೪. ಹೀಗೆ ಆಲೋಚಿಸುತ್ತಿರುವ ಆ ಬ್ರಹ್ಮನ ಮುಖದಿಂದ ಹೊರ ಹೊರಟ ನಿಃಶ್ವಾಸವಾಯುವಿನಿಂದ ಹೂಗಳ ಪರಿಮಳದಿಂದ ಕೂಡಿ ಮನಸ್ಸಿಗೆ ಆಹ್ಲಾದಕರವಾದ ಮಂದಮಾರುತದಿಂದ ಶೋಭಿತನಾದ ವಸಂತನು (ವಸಂತ ಋತುವು) ಹುಟ್ಟಿದನು.

೨೫. ಆವನು ಅರಳಿದ ಮಾವಿನ ಚಿಗರುಗಳನ್ನೂ, ದುಂಬಿಗಳ ಗುಂಪನ್ನೂ ಸುರಹೊನ್ನೆ ಪುಷ್ಪಗಳನ್ನೂ, ಸಾರಸಪಕ್ಷಿಗಳನ್ನೂ ಧರಿಸಿ ಅರಳಿದ ಹುವ್ವು ಮತ್ತು ಚಿಗರುಗಳುಳ್ಳ ವೃಕ್ಷದಂತೆ ಶೋಭಿಸುತ್ತಲಿದ್ದನು.

ಶೋಣರಾಜೀವಸಂಕಾಶಃ ಫುಲ್ಲತಾಮರಸೇಕ್ಷಣಃ ।
ಸಂಧ್ಯೋದಿತಾಖಂಡಶಶಿಪ್ರತಿಮಾಸ್ಯಃ ಸುನಾಸಿಕಃ ॥ ೨೬ ॥

ಶಂಖವಚ್ಛ್ರವಣಾವರ್ತಃ ಶ್ಯಾಮಕುಂಚಿತಮೂರ್ಧಜಃ ।
ಸಂಧ್ಯಾಂಶುಮಾಲಿಸದೃಶಕುಂಡಲದ್ವಯಮಂಡಿತಃ ॥ ೨೭ ॥

ಪ್ರಮತ್ತಮಾತಂಗಗತಿರ್ವಿಸ್ತೀರ್ಣಹೃದಯಸ್ಥಲಃ ।
ಪೀನಸ್ಥೂಲಾಯತಭುಜಃ ಕಠೋರಕರಯುಗ್ಮಕಃ ॥ ೨೮ ॥

ಸುವೃತ್ತೋರುಕಟೀಜಂಘಃ ಕಂಬುಗ್ರೀವೋನ್ನತಾಂಸಕಃ ।
ಗೂಢಜತ್ರುಃ ಪೀನವಕ್ಷಾಃ ಸಂಪೂರ್ಣಃ ಸರ್ವಲಕ್ಷಣೈಃ ॥ ೨೯ ॥

ತಾದೃಶೇಽಥ ಸಮುತ್ಪನ್ನೇ ಸಂಪೂರ್ಣೇ ಕುಸುಮಾಕರೇ ।
ವವೌ ವಾಯುಃ ಸಸುರಭಿಃ ಪಾದಪಾ ಅಪಿ ಪುಷ್ಪಿತಾಃ ॥ ೩೦ ॥

---

೨೬. ಆಲ್ಲದೆ ಅವನು ರಕ್ತಕಮಲದಂತಿರುವ ಕಾಂತಿಯುಳ್ಳವನೂ, ಅರಳಿದ ಕಮಲದಂತಿರುವ ಕಣ್ಣುಗಳುಳ್ಳವನೂ, ಸಂಜೆಯಲ್ಲಿ ಉದಯಿಸುತ್ತಿರುವ ಹುಣ್ಣಿಮೆಯ ಚಂದ್ರನಂತಿರುವ ಮುಖವುಳ್ಳವನೂ, ಸುಂದರವಾದ ನಾಸಿಕೆಯುಳ್ಳವನೂ ಆಗಿದ್ದನು.

೨೭. ಮತ್ತು ಅವನು ಶಂಖದಂತಿರುವ ಕಿವಿಯ ಕುಹರಗಳುಳ್ಳವನೂ ನೀಲವೂ ವಕ್ರವೂ ಆದ ಕೇಶಪಾಶಗಳುಳ್ಳವನೂ, ಸಂಜೆಯ ಸೂರ್ಯನಂತೆ ಪ್ರಕಾಶಮಾನವಾದ ಕುಂಡಲಗಳಿಂದ ಶೋಭಿಸುವವನೂ ಆಗಿದ್ದನು.

೨೮. ಮದಿಸಿದ ಆನೆಯಂತೆ ನಡಿಗೆಯುಳ್ಳವನೂ, ವಿಶಾಲವಾದ ಎದೆಯುಳ್ಳವನೂ ದುಂಡಾಗಿ, ದಪ್ಪನಾಗಿ ಉದ್ದವಾದ ಬಾಹುಗಳುಳ್ಳವನೂ ಕಠಿಣವಾದ ಕೈಗಳುಳ್ಳವನೂ ಆಗಿದ್ದನು.

೨೯. ದುಂಡಾಗಿರುವ ತೊಡೆ, ನಡು ಮತ್ತು ಮೊಳಕಾಲುಗಳುಳ್ಳವನೂ ಶಂಖದಂತಿರುವ ಕಂಠವುಳ್ಳವನೂ, ಉಬ್ಬಿದ ಭುಜಶಿರಸ್ಸುಳ್ಳವನೂ, ಮೂಳೆಗಳು ಕಾಣದಂತೆ ಪುಷ್ಟವಾಗಿ ಬೆಳೆದಿರುವ ಶರೀರದಿಂದಲೂ, ಉಬ್ಬಿದ ಎದೆ ಮುಂತಾದ ಎಲ್ಲ ವಿಧವಾದ ಪುರುಷಲಕ್ಷಣಗಳಿಂದ ಕೂಡಿದವನೂ ಆಗಿದ್ದನು.

೩೦. ಹೀಗೆ ಎಲ್ಲ ಲಕ್ಷಣಗಳಿಂದ ಸಂಪೂರ್ಣನಾದ ವಸಂತನು ಜನಿಸಲು, ಸುವಾಸನೆಯುಳ್ಳ ಮಂದಮಾರುತವು ಬೀಸಿತು. ವೃಕ್ಷಗಳಲ್ಲೆಲ್ಲಾ ಹೂವುಗಳು ಅರಳಿದವು.

ಪಿಕಾಶ್ಚ ನೇದುಃ ಶತಶಃ ಪಂಚಮಂ ಮಧುರಸ್ವರಾಃ ।
ಪ್ರಫುಲ್ಲಪದ್ಮಾ ಅಭವನ್ಸರಸ್ಯಃ ಪುಷ್ಪಪುಷ್ಕರಾಃ ॥ ೩೧ ॥

ತಮುತ್ಪನ್ನಮವೇಕ್ಷ್ಯಾಥ ತಥಾ ಭೃಶಮನುತ್ತಮಂ ।
ಹಿರಣ್ಯಗರ್ಭೋ ಮದನಂ ಜಗಾದ ಮಧುರಂ ವಚಃ ॥ ೩೨ ॥

॥ ಬ್ರಹ್ಮೋವಾಚ ॥

ಏಷ ಮನ್ಮಥ ತೇ ಮಿತ್ರಂ ಸದಾ ಸಹಚರೋ ಭವೇತ್ ।
ಅನುಕೂಲ್ಯಂ ತವ ಕೃತೌ ಸರ್ವದೈವ ಕರಿಷ್ಯತಿ ॥ ೩೩ ॥

ಯಥಾಗ್ನೇಃ ಶ್ವಸನೋ ಮಿತ್ರಂ ಸರ್ವತ್ರೋಪಕರೋತಿ ಚ ।
ತಥಾಯಂ ಭವತೋ ಮಿತ್ರಂ ಸದಾ ತ್ವಾಮನುಯಾಸ್ಯತಿ ॥ ೩೪ ॥

ವಸತೇ ಬತ ಹೇತುತ್ವಾದ್ವಸಂತಾಖ್ಯೋ ಭವತ್ವಯಂ ।
ತವಾನುಗಮನಂ ಕರ್ಮ ತಥಾ ಲೋಕಾನುರಂಜನಂ ॥ ॥ ೩೫ ॥

---

೩೧. ಇಂಪಾದ ಧ್ವನಿಯಿಂದ ಕೋಗಿಲೆಗಳು ಪಂಚಮಸ್ವರವನ್ನು ಹಾಡಿದವು. ಸರೋವರಗಳಲ್ಲಿ ಕಮಲಗಳು ಅರಳಿ ಕಂಗೊಳಿಸಿದವು.

೩೨. ಆಮೇಲೆ ತುಂಬ ಕಾಂತಿಶಾಲಿಯಾದ ವಸಂತನು ಜನಿಸಿದುದನ್ನು ನೋಡಿ, ಬ್ರಹ್ಮನು ಮನ್ಮಥನನ್ನು ಕುರಿತು ಮನೋಹರವಾದ ಈ ಮಾತನ್ನು ಆಡಿದನು.

೩೩, ಬ್ರಹ್ಮನು ಹೇಳಿದನು — ಎಲೈ ಮನ್ಮಥನೇ, ಈ ವಸಂತನು ನಿನಗೆ ಸ್ನೇಹಿತನು. ಇವನು ಯಾವಾಗಲೂ ನಿನ್ನೊಡನಾಡಿಯಾಗಿದ್ದು ನಿನ್ನ ಕಾರ್ಯದಲ್ಲಿ ಸಹಾಯವನ್ನು ಮಾಡುತ್ತಾನೆ.

೩೪. ಅಗ್ನಿಯ ಸ್ನೇಹಿತನಾದ ವಾಯುವು ಹೇಗೆ ಎಲ್ಲೆಡೆಯಲ್ಲಿಯೂ ಅವನಿಗೆ ಸಹಾಯವನ್ನು ಮಾಡುವನೋ, ಹಾಗೆ ಈ ನಿನ್ನ ಮಿತ್ರನಾದ ವಸಂತನೂ ನಿನ್ನನ್ನು ಯಾವಾಗಲೂ ಅನುಸರಿಸಿಯೇ ಇದ್ದು ಸಹಾಯ ಮಾಡುತ್ತಾನೆ.

೩೫. ವಿರಹಿಗಳಿಗೆ ಖೇದವನ್ನುಂಟುಮಾಡುತ್ತಾ ಇರುವವನಾದುದರಿಂದ ಇವನು ವಸಂತನೆಂಬ ಹೆಸರುಳ್ಳವನಾಗಲಿ ಇವನು ನಿನಗೆ ಸಹಾಯವನ್ನೂ ಜನಗಳಿಗೆ ಸಂತೋಷವನ್ನೂ ಮಾಡುತ್ತಾನೆ.

ಅಸಾ ವಸಂತೇ ಶೃಂಗಾರೋ ವಸಂತೇ ಮಲಯಾನಿಲಃ ।
ಭವಂತು ಸುಹೃದೋ ಭಾವಾಃ ಸದಾ ತ್ವದ್ವಶವರ್ತಿನಃ ॥ ೩೬ ॥

ಬಿಬ್ಬೋಕಾದ್ಯಾಸ್ತಥಾ ಹಾವಾಶ್ಚತುಃಷಷ್ಟಿಕಲಾಸ್ತಥಾ ।
ಕುರ್ವಂತು ರತ್ಯಾಃ ಸೌಹೃದ್ಯಂ ಸುಹೃದಸ್ತೇ ಯಥಾ ತವ ॥ ೩೭ ॥

ಏಭಿಃ ಸಹಚರೈಃಕಾಮ ವಸಂತಪ್ರಮುಖೈರ್ಭವಾನ್ ।
ಅನಯಾ ಸಹಚಾರಿಣ್ಯಾ ತ್ವಂ ಯುಕ್ತಃ ಪರಿವಾರಯಾ ॥ ೩೮ ॥

ಮೋಹಯಸ್ವ ಮಹಾದೇವಂ ಕುರು ಸೃಷ್ಟಿಂ ಸನಾತನೀಂ ॥
ಯಥೇಷ್ಟದೇಶಂ ಗಚ್ಛ ತ್ವಂ ಸರ್ವೈಃ ಸಹಚರೈರ್ವೃತಃ ॥ ೩೯ ॥
ಅಹಂ ತಾಂ ಭಾವಯಿಷ್ಯಾಮಿ ಯಾ ಹರಂ ಮೋಹಯಿಷ್ಯತಿ ।

---

೩೬. ವಸಂತಕಾಲದಲ್ಲಿ, ಈ ವಸಂತನೂ, ಶೃಂಗಾರರಸವೂ, ಮಲಯ ಪರ್ವತದ ಗಾಳಿಯೂ, ಸ್ವಾಭಾವಿಕವಾಗಿ ಯೌವನದಲ್ಲಿ ಜನಿಸುವ ಶೃಂಗಾರ ಚೇಷ್ಟೆಗಳೂ ನಿನ್ನ ಅಧೀನವಾಗಿರುತ್ತವೆ.

೩೭. ಗರ್ವದಿಂದ, ಇಷ್ಟವಾದ ವಸ್ತುವಿನಲ್ಲಿಯೂ ಅನಾದರವೇ ಮೊದಲಾದ ಶರೀರ ವಿಕಾರವನ್ನುಂಟುಮಾಡುವ ಶೃಂಗಾರಚೇಷ್ಟೆಗಳೂ, ಅರವತ್ತುನಾಲ್ಕು ಕಲೆಗಳೂ ನಿನಗೂ ನಿನ್ನ ಸಹಚಾರಿಣಿಯಾದ ರತಿಗೂ ಸಹಾಯಕವಾಗಿರಲಿ.

೩೮. ವಸಂತನೇ ಮೊದಲಾದ ಸಹಾಯಕರುಗಳಿಂದಲೂ, ನಿನ್ನ ಪರಿವಾರಕಳಾದ ಮತ್ತು ಸಹಚರಿಯಾದ ರತಿಯಿಂದಲೂ ಕೂಡಿ, ಪರಮೇಶ್ವರನನ್ನು ಮೋಹಗೊಳಿಸು ಎಂದರೆ ಶೃಂಗಾರಾದಿ ವಿಷಯಭೋಗಗಳಲ್ಲಿ ಆಸಕ್ತನಾಗುವಂತೆ ಮಾಡು, ಅನಾದಿಯಾದ ಸೃಷ್ಟಿಪರಂಪರೆಯನ್ನೂ ಬೆಳಸು.

೩೯. ಆ ಕಾರ್ಯಕ್ಕೆ ನಿನಗೆ ಇಷ್ಟವಾದ ಸ್ಥಳವಾವುದೋ ಅಲ್ಲಿಗೆ ಈ ಎಲ್ಲ ಪರಿವಾರದೊಂದಿಗೆ ಹೋಗು. ನಾನು ಆ ಈಶ್ವರನನ್ನು ಮೋಹಗೊಳಿಸಲು ಸಮರ್ಥಳಾದ ಸ್ತ್ರೀಯನ್ನು ಆಲೋಚಿಸುತ್ತೇನೆ.

ಏವಮುಕ್ತೋಽಥ ಮದನಃ ಸುರಜ್ಯೇಷ್ಠೇನ ಹರ್ಷಿತಃ ।
ಜಗಾಮ ಸಗಣಸ್ತತ್ರ ಸಪತ್ನ್ಯನುಚರಸ್ತದಾ ॥ ೪೦ ॥

ದಕ್ಷಂ ಪ್ರಣಮ್ಯ ತಾನ್ಸರ್ವಾನ್ಮಾನಸಾನಭಿವಾದ್ಯ ಚ ।
ಯತ್ರಾಸ್ತಿ ಶಂಭುರ್ಗತವಾಂಸ್ತತ್ಸ್ಥಾನಂ ಮನ್ಮಥಸ್ತದಾ ॥ ೪೧ ॥

ತಸ್ಮಿನ್ಗತೇ ಸಾನುಚರೇಽಥ ಮನ್ಮಥೇ
ಶೃಂಗಾರಭಾವಾದಿಯುತೇ ದ್ವಿಜೋತ್ತಮಾಃ ।
ಪ್ರೋವಾಚ ದಕ್ಷಂ ಮಧುರಂ ಪಿತಾಮಹಃ
ಸಾರ್ಧಂ ಮರೀಚ್ಯತ್ರಿಮುಖೈರ್ಮುನೀಶ್ವರೈಃ ॥

॥ ಇತಿ ಶ್ರೀಕಾಲಿಕಾಪುರಾಣೇ ಚತುರ್ಥೋಽಧ್ಯಾಯಃ ॥

---

೪೦. ದೇವೋತ್ತಮನಾದ ಬ್ರಹ್ಮನು ಹೀಗೆ ಹೇಳಲು, ಮನ್ಮಥನು ಸಂತೋಷದಿಂದ ರತಿ, ವಸಂತ ಮತ್ತು ತನ್ನ ಇತರ ಪರಿವಾರಜನಗಳಿಂದ ಕೂಡಿ, ದಕ್ಷಬ್ರಹ್ಮನನ್ನೂ, ಉಳಿದ ಮಾನಸಪುತ್ರರನ್ನೂ ನಮಸ್ಕರಿಸಿ, ಷಡ್ಗುಣೈಶ್ವರ್ಯಸಂಪನ್ನನಾದ ಶಂಕರನು ಎಲ್ಲಿರುವನೋ ಆ ಸ್ಥಳವನ್ನು ಕುರಿತು ಹೊರಟುಹೋದನು.

೪೧. ಓ ಬ್ರಾಹ್ಮಣೋತ್ತಮರೇ, ಆ ಮನ್ಮಥನು ಹೀಗೆ ಶೃಂಗಾರ ಸಾಮಗ್ರಿಗಳಿಂದ ಕೂಡಿ, ಪರಿವಾರಯುಕ್ತನಾಗಿ ಹೊರಟುಹೋಗಲು, ಬ್ರಹ್ಮನು ಮರೀಚಿ ಮತ್ತು ಅತ್ರಿಯೇ ಮೊದಲಾದ ಮುನಿಗಳೊಡನಿರುವ ದಕ್ಷಬ್ರಹ್ಮನನ್ನು ಕುರಿತು ಮೃದುಮಧುರವಾದ ವಾಕ್ಯದಿಂದ ಹೀಗೆ ಹೇಳಿದನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ ಅಥ ತ್ರೀಕಾಲಿಕಾಪುರಾಣೆ ಪಂಚಮೋಽಧ್ಯಾಯಃ ॥

ಐದನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ಅಥ ಬ್ರಹ್ಮಾ ತದೋವಾಚ ದಕ್ಷಾಯ ಸುಮಹಾತ್ಮನೇ ।
ಮರೀಚಿಪ್ರಮುಖೇಭ್ಯಶ್ಚ ವಚನಂ ಚೇದಮುಂಜಸಾ ॥ ೧ ॥

॥ ಬ್ರಹ್ಮೋವಾಚ ॥

ಭವಿತ್ರೀ ಶಂಭುಪತ್ನೀ ಕಾ ಕಾ ತಂ ಸಂಮೋಹಯಿಷ್ಯತಿ ।
ಇತಿ ಸಂಚಿಂತಯನ್ ಕಾಂತಾಂ ನ ಸ್ಥಿರೀಕರ್ತುಮುತ್ಸಹೇ ॥ ೨ ॥

---

೧. ಮಾರ್ಕಂಡೇಯ ಮುನಿಯು ಹೇಳಿದನು:—ಆಮೇಲೆ ಆಬ್ರಹ್ಮನು ಮಹಾತ್ಮನಾದ ದಕ್ಷಬ್ರಹ್ಮನಿಗೂ ಮರೀಚಿಯೇ ಮೊದಲಾದ ಮುನಿಗಳಿಗೂ ಈ ಮಾತನ್ನು ಹೇಳಿದನು.

೨. ಬ್ರಹ್ಮನು ಹೇಳಿದನು:— ಓ ದಕ್ಷನೇ, ಯಾವ ಸ್ತ್ರೀಯು ಶಂಕರನ ಪತ್ನಿಯಾಗುವಳು? ಯಾವ ಸ್ತ್ರೀಯು ಅವನನ್ನು ಮೋಹಗೊಳಿಸುವಳು? ಹೀಗೆಂದು ಆಲೋಚಿಸುತ್ತಾ ಅಂತಹ ಸುಂದರಿ ಯಾವಳಿರುವಳೆಂದು ನಿಶ್ಚಯಿಸಲಾರದವನಾಗಿರುವೆನು.

ವಿಷ್ಣುಮಾಯಾಮೃತೇ ದಕ್ಷ ಮಹಾಮಾಯಾಂ ಜಗನ್ಮಯಾಂ ।
ನಾನ್ಯಾ ತನ್ಮೋಹಕರ್ತ್ರೀ ಸ್ಯಾತ್ಸಂಧ್ಯಾಸಾವಿತ್ರ್ಯಮಾಮೃತೇ ॥ ೩ ॥
ತಸ್ಮಾದಹಂ ವಿಷ್ಣುಮಾಯಾಂ ಯೋಗನಿದ್ರಾಂ ಜಗತ್ಪ್ರಸೂಂ ।
ಸ್ತೌಮಿ ಸಾ ಚಾರುರೂಪೇಣ ಶಂಕರಂ ಮೋಹಯಿಷ್ಯತಿ ॥ ೪ ॥
ಭವಾಂಸ್ತು ದಕ್ಷ ತಾಮೇವ ಯಜತಾಂ ವಿಶ್ವರೂಪಿಣೀಂ ।
ಯಥಾ ತವ ಸುತಾ ಭೂತ್ವಾ ಹರಜಾಯಾ ಭವಿಷ್ಯತಿ ॥ ೫ ॥

॥ ಮಾರ್ಕಂಡೇಯ ಉವಾಚ ॥

ಏವಂ ವಚನಮಾಕರ್ಣ್ಯ ಬ್ರಹ್ಮಣಃ ಪರಮಾತ್ಮನಃ ।
ಉವಾಚ ದಕ್ಷಃ ಸ್ರಷ್ಟಾರಂ ಮರೀಚ್ಯಾದಿಭಿರೀರಿತಃ ॥ ೬ ॥

---

೩. ಎಲೈ ದಕ್ಷಬ್ರಹ್ಮನೇ, ಜಗತ್ತನ್ನು ವ್ಯಾಪಿಸಿರುವ ಆದಿಶಕ್ತಿಯಾದ ವಿಷ್ಣುಮಾಯೆಯನ್ನೂ, ಅವಳ ಅಂಶವಾದ ಸಂಧ್ಯೇ, ಸಾವಿತ್ರೀ, ಪಾರ್ವತೀ ಇವರನ್ನು ಬಿಟ್ಟರೆ, ಇನ್ನಾವಳೂ ಆ ಶಂಕರನನ್ನು ಮೋಹಗೊಳಿಸಲಾರಳು

೪. ಆದುದರಿಂದ ನಾನು ಜಗತ್ತಿಗೆ ಮಾತೃಸ್ವರೂಪಳಾದ, ಯೋಗ ನಿದ್ರೆಯೆಂದು ಪ್ರಸಿದ್ಧಳಾದ ವಿಷ್ಣುಮಾಯೆಯನ್ನು ಸ್ತುತಿಸುತ್ತೇನೆ. ಅವಳು, ಸುಂದರವಾದ ರೂಪದಿಂದ ಶಂಕರನನ್ನು ಮೋಹಗೊಳಿಸುವಳು.

೫. ಎಲೈ ದಕ್ಷನೇ, ನೀನೂ ಸಹ ಜಗದ್ರೂಪಿಣಿಯಾದ ಆ ಮಾಯೆಯನ್ನು, ಅವಳು ನಿನ್ನ ಮಗಳಾಗಿ ಈಶ್ವರನ ಹೆಂಡತಿಯಾಗುವಂತೆ ಆಗಬೇಕೆಂದು ಆರಾಧಿಸು.

೬. ಮಾರ್ಕಂಡೇ ಮುನಿಯು ಕಮಠಾದಿ ಮುನಿಗಳಿಗೆ ಹೀಗೆ ಹೇಳಿದನು:— ಪರಮಾತ್ಮನಾದ ಬ್ರಹ್ಮನ ಈ ರೀತಿಯಾದ ಮಾತುಗಳನ್ನು ಕೇಳಿ ದಕ್ಷಬ್ರಹ್ಮನು ಮರೀಚಿಯೇ ಮೊದಲಾದವರ ಅಭಿಪ್ರಾಯದಂತೆ, ಬ್ರಹ್ಮನನ್ನು ಕುರಿತು ಹೀಗೆ ಹೇಳಿದನು.

॥ ದಕ್ಷ ಉವಾಚ ॥

ಯಥಾತ್ಥ ಭಗವಂಸ್ತಥ್ಯಂ ತ್ವಂ ಲೋಕೇಶ ಜಗದ್ಧಿತಂ ।
ತತ್ಕರಿಷ್ಯಾಮಹೇ ಸಮ್ಯಗ್ಯಥಾ ಸ್ಯಾತ್ತನ್ಮನೋಹರಾ ॥ ೭ ॥
ತಥಾ ತಥಾ ಯತಿಷ್ಯಾಮಿ ಯಥಾ ಮಮ ಸುತಾ ಸ್ವಯಂ ।
ವಿಷ್ಣುಮಾಯಾ ಭವೇತ್ಪತ್ನೀ ಭೂತ್ವಾ ಶಂಭೋರ್ಮಹಾತ್ಮನಃ ॥ ೮ ॥

॥ ಮಾರ್ಕಂಡೇಯ ಉವಾಚ ॥

ಏವಮೇವೇತಿ ತೈರುಕ್ತಂ ಮರೀಚಿಪ್ರಮುಖೈಸ್ತದಾ ।
ಯಷ್ಟುಂ ದಕ್ಷಃ ಸಮಾರೇಭೇ ಮಹಾಮಾಯಾಂ ಜಗನ್ಮಯಾಂ ॥ ೯ ॥
ಕ್ಷೀರೋದೋತ್ತರತೀರಸ್ಥಸ್ತಾಂ ಕೃತ್ವಾ ಹೃದಯಸ್ಥಿತಾಂ ।
ತಪಸ್ತಪ್ತುಂ ಸಮಾರೇಭೇ ದ್ರಷ್ಟುಂ ಪ್ರತ್ಯಕ್ಷತೋಽಮ್ಬಿಕಾಂ ॥ ೧೦ ॥

---

೭. ದಕ್ಷಬ್ರಹ್ಮನು ಹೇಳಿದನು — ಓ ಭಗವಂತನೇ, ನೀನು, ಜಗತ್ತಿಗೆ ಕಲ್ಯಾಣವಾಗುವಂತಹ ಯಾವ ಮಾತನ್ನಾಡಿದೆಯೋ ಅದು ನಿಜವು. ನಾವೂ ಸಹ ಆ ಶಂಕರನ ಮನಸ್ಸನ್ನಪಹರಿಸುವಂತಹ ಸ್ತ್ರೀಯು ಜನಿಸುವಂತೆ ಯತ್ನಿಸುತ್ತೇವೆ

೮. ಆ ಆದಿಮಾಯೆಯು ನನ್ನ ಮಗಳಾಗಿ ಹುಟ್ಟಿ ಮಹಾತ್ಮನಾದ ಶಂಕರನ ಪತ್ನಿಯಾಗುವಂತೆ ಯತ್ನಿಸುತ್ತೇನೆ.

೯. ಮಾರ್ಕಂಡೇಯ ಮುನಿಯು ಹೇಳಿದನು — "ಹಾಗೆಯೇ ಮಾಡ ಬೇಕು" ಎಂದು ಮರೀಚಿಯೇ ಮೊದಲಾದವರು ಹೇಳಲು, ದಕ್ಷಬ್ರಹ್ಮನು ಜಗದ್ರೂಪಿಣಿಯಾದ ಆದಿಶಕ್ತಿಯನ್ನು ಆರಾಧಿಸಲು ಪ್ರಾರಂಭಿಸಿದನು.

೧೦. ಬಳಿಕ ಆ ದಕ್ಷಬ್ರಹ್ಮನು ಕ್ಷೀರಸಮುದ್ರದ ಉತ್ತರದಡವನ್ನು ಸೇರಿ ಅಲ್ಲಿ ಆದಿಶಕ್ತಿಯನ್ನು ಪ್ರತ್ಯಕ್ಷಮಾಡಿಕೊಳ್ಳಲು, ಅವಳನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ ತಪಸ್ಸನ್ನು ಮಾಡಿದನು.

ದಿವ್ಯವರ್ಷೇಣ ದಕ್ಷೋಽಪಿ ಸಹಸ್ರಾಣಾಂ ತ್ರಯಂ ಸಮಾಃ ।
ತಪಶ್ಚಚಾರ ನಿಯತಃ ಸಂಯತಾತ್ಮಾ ದೃಢವ್ರತಃ ॥ ೧೧ ॥
ಮಾರುತಾಶೀ ನಿರಾಹಾರೋ ಜಲಹಾರೀ ಚ ಪರ್ಣಭುಕ್ ।
ಏವಂ ನಿನಾಯ ತತ್ಕಾಲಂ ಚಿಂತಯಂಸ್ತಾಂ ಜಗನ್ಮಯಿಾಂ ॥ ೧೨ ॥
ಗತೇ ದಕ್ಷೇ ತಪಃ ಕರ್ತುಂ ಬ್ರಹ್ಮಾ ಸರ್ವಜಗತ್ಪತಿಃ ।
ಜಗಾಮ ನುಂದರಾಭ್ಯಾಶಂ ಪುಣ್ಯಾತ್ಪುಣ್ಯತರಂ ವರಂ ॥ ೧೩ ॥
ತತ್ರ ತತ್ರ ಜಗದ್ಧಾತ್ರೀಂ ವಿಷ್ಣುಮಾಯಾಂ ಜಗನ್ಮಯಿಾಂ ।
ತುಷ್ಟಾವ ವಾಗ್ಭಿರುಗ್ರಾಭಿರೇಕತಾನಂ ಶತಂ ಸಮಾಃ ॥ ೧೪ ॥

---

೧೧. ಆ ದಕ್ಷನು ಅಲ್ಲಿ, ಜಿತೇಂದ್ರಿಯನಾಗಿ, ದೃಢವಾದ ನಿಯಮದಿಂದ ದೇವಮಾನದ ಪ್ರಕಾರವಾಗಿ ಮೂರುಸಾವಿರ ವರ್ಷಗಳವರೆಗೆ ತಪಸ್ಸನ್ನು ಮಾಡಿದನು.

೧೨. ದಕ್ಷಬ್ರಹ್ಮನು ಹೀಗೆ ತಪಸ್ಸನ್ನು ಮಾಡುತ್ತಿರುವಾಗ ಕೆಲವೊಮ್ಮೆ ಆಹಾರಾರ್ಥವಾಗಿ ವಾಯುವನ್ನು ಮಾತ್ರ ಸೇವಿಸುತ್ತಲೂ, ಕೆಲವೊಮ್ಮೆ ನೀರನ್ನು ಮಾತ್ರ ಕುಡಿಯುತ್ತಲೂ, ಕೆಲವೊಮ್ಮೆ ಜೀರ್ಣವಾದ ಎಲೆಗಳನ್ನು ತಿನ್ನುತ್ತಲೂ ಕೆಲವೊಮ್ಮೆ ಯಾವ ವಿಧವಾದ ಆಹಾರವನ್ನೂ ಸೇವಿಸದೆ ಉಪವಾಸ ಮಾಡುತ್ತಲೂ, ಜಗದ್ರೂಪಿಣಿಯಾದ ಆ ದೇವಿಯನ್ನು ಧ್ಯಾನಿಸುತ್ತಾ ಕಾಲವನ್ನು ಕಳೆಯುತ್ತಲಿದ್ದನು.

೧೩. ದಕ್ಷಬ್ರಹ್ಮನು ತಪಸ್ಸನ್ನಾಚರಿಸಲು ಹೊರಟು ಹೋದ ಮೇಲೆ ಜಗದೊಡೆಯನಾದ ಬ್ರಹ್ಮನು ಅತ್ಯಂತಪವಿತ್ರವಾದ ಮಂದರಪರ್ವತದ ಸಮೀಪಕ್ಕೆ ಬಂದನು.

೧೪. ಅಲ್ಲಿ ಆ ಬ್ರಹ್ಮನು ಈ ಜಗತ್ತನ್ನು ರಕ್ಷಿಸುವವಳೂ, ಜಗತ್ಸ್ವರೂಪಿಣಿಯೂ ಆದ ಆ ವಿಷ್ಣುಮಾಯೆಯನ್ನು ಉತ್ತಮವಾದ ವಾಕ್ಯಗಳಿಂದ ಒಂದೇ ಸಮನಾಗಿ ನೂರು ವರ್ಷಗಳವರೆಗೆ ಸ್ತೋತ್ರಮಾಡಿದನು.

॥ ಬ್ರಹ್ಮೋವಾಚ ॥

ವಿದ್ಯಾವಿದ್ಯಾತ್ಮಿಕಾಂ ಶುದ್ಧಾಂ ನಿರಾಲಂಬಾಂ ನಿರಾಕುಲಾಂ ।
ಸ್ತೌಮಿ ದೇವೀಂ ಜಗದ್ಧಾತ್ರೀಂ ಸ್ಥೂಲಾಣೀಯಸ್ಸ್ವರೂಪಿಣೀಂ ॥ ೧೫ ॥

ಯಸ್ಯಾ ಉದೇತಿ ಚ ಜಗತ್ಪ್ರಧಾನಾಖ್ಯಂ ಜಗತ್ಪರಂ ।
ಯಸ್ಯಾಸ್ತದಂಶಭೂತಂ ತಾಂ ಸ್ತೌಮಿ ನಿದ್ರಾಂ ಸನಾತನೀಂ ॥ ೧೬ ॥

ತ್ವಂ ಚಿತಿಃ ಪರಮಾನಂದಪರಮಾತ್ಮಸ್ವರೂಪಿಣೀ ।
ಶಕ್ತಿಸ್ತ್ವಂ ಸರ್ವಭೂತಾನಾಂ ತ್ವಂ ಸರ್ವೇಷಾಂ ಚ ಪಾವನೀ ॥ ೧೭ ॥

---

೧೫. ಬ್ರಹ್ಮನು ಹೀಗೆ ಸ್ತೋತ್ರಮಾಡಿದನು — ಎಲೈ ದೇವಿಯೇ ನಿನ್ನನ್ನು ಸ್ತೋತ್ರ ಮಾಡುತ್ತೇನೆ. ನೀನು ಜ್ಞಾನಸ್ವರೂಪಳೂ, ಅಜ್ಞಾನ ಸ್ವರೂಪಳೂ ಆಗಿರುವೆ. ಎಂದರೆ ನೀನು ಶುದ್ಧ ಜ್ಞಾನಸ್ವರೂಪಳಾಗಿದ್ದು ಪ್ರಾಣಿಗಳನ್ನು ಮೋಹಗೊಳಿಸುವ ಅವಿದ್ಯೆಯ ಸ್ವರೂಪಳೂ ಆಗಿರುವೆ. ಯಾವ ವಿಕಾರವೂ ಇಲ್ಲದೆ ಶುದ್ಧವಾಗಿರುವವಳು. ಶಾಂತಸ್ವರೂಪಳು; ನಿನಗೆ ಇನ್ನೊಂದು ವಸ್ತುವಿನ ಆಧಾರವಿಲ್ಲ, ನೀನೇ ಎಲ್ಲಾ ವಸ್ತುಗಳಿಗೂ ಮತ್ತು ಪ್ರಪಂಚಕ್ಕೂ ಆಧಾರವಾಗಿರುವೆ, ಜಗತ್ತನ್ನು ಕಾಪಾಡುವವಳೂ ನೀನೇ. ಅಲ್ಲದೆ ಸ್ಥೂಲಸೂಕ್ಷ್ಮಸ್ವರೂಪಳಾಗಿದ್ದು ಪ್ರಪಂಚವನ್ನೆಲ್ಲಾ ವ್ಯಾಪಿಸಿ ಜಗತ್ತನ್ನು ನೀನೇ ಧರಿಸಿರುವೆ.

೧೬. ಯಾವ ದೇವಿಯಿಂದ ಈ ಜಗತ್ತು ಜನಿಸುವುದೋ, ಮತ್ತು ಸಾಂಖ್ಯರು ಹೇಳುವಂತೆ ಜಗತ್ತಿಗೆ ಕಾರಣಭೂತವಾದ ಪ್ರಧಾನವೂ ಯಾವ ದೇವಿಯ ಅಂಶಭೂತವಾದುದೋ ಅಂತಹ ಅನಾದಿಯಾದ ಯೋಗನಿದ್ರೆಯನ್ನು ನಮಸ್ಕರಿಸುತ್ತೇನೆ.

೧೭. ಎಲೈ ದೇವಿಯೇ, ಸತ್ಯ ಆನಂದ ಮತ್ತು ಜ್ಞಾನಸ್ವರೂಪವಾದ ಬ್ರಹ್ಮವಸ್ತುವೂ ನೀನೇ. ನೀನು ಎಲ್ಲಾ ಪ್ರಾಣಿಗಳಿಗೂ ಬಲವನ್ನು ಕೊಡ ತಕ್ಕ ಶಕ್ತಿಯಾಗಿರುವೆ ಮತ್ತು ಎಲ್ಲರಿಗೂ ಪವಿತ್ರತೆಯನ್ನುಂಟುಮಾಡುವವಳು.

ತ್ವಂ ಸಾವಿತ್ರೀ ಜಗದ್ಧಾತ್ರೀ ತ್ವಂ ಸಂಧ್ಯಾ ತ್ವಂ ರತಿರ್ಧೃತಿಃ ।
ತ್ವಂ ಹಿ ಜ್ಯೋತಿಃಸ್ವರೂಪೇಣ ಸಂಸಾರಸ್ಯ ಪ್ರಕಾಶಿನೀ ॥ ೧೮ ॥

ತಥಾ ತಮಃಸ್ವರೂಪೇಣ ಛಾದಯಂತೀ ಸದಾ ಜಗತ್ ।
ತ್ವಮೇವ ಸೃಷ್ಟಿರೂಪೇಣ ಸಂಸಾರಪರಿಪೂರಣೇ ॥ ೧೯ ॥

ಸ್ಥಿತಿರೂಪೇಣ ಚ ಹರೇರ್ಜಗತಾಂ ಚ ಹಿತೈಷಿಣೀ ।
ತಥೈವಾಂತಸ್ವರೂಪೇಣ ಜಗತಾಮಂತಕಾರಿಣೀ ॥ ೨೦ ॥

ತ್ವಂ ಮೇಧಾ ತ್ವಂ ಮಹಾಮಾಯಾ ತ್ವಂ ಸ್ವಧಾ ಪಿತೃಮೋದಿನೀ ।
ತ್ವಂ ಸ್ವಾಹಾ ತ್ವಂ ನಮಸ್ಕಾರವಷಟ್ಕಾರಾ ತಥಾ ಸ್ಮೃತಿಃ ॥ ೨೧ ॥

---

೧೮. ಜಗತ್ಸೃಷ್ಟಿಕರ್ತಳಾದ ನೀನೇ ಗಾಯತ್ರಿಯೂ, ನೀನೇ ಧ್ಯಾನ ಯೋಗ್ಯಳೂ, ಸುಖಸ್ವರೂಪಳೂ, ಧೈರ್ಯಸ್ವರೂಪಳೂ ಆಗಿರುವೆ. ಸೂರ್ಯನೇ ಮೊದಲಾದ ಜ್ಯೋತಿಸ್ಸ್ವರೂಪದಿಂದ ಈ ಜಗತ್ತನ್ನು ನೀನೇ ಬೆಳಗುತ್ತೀಯೆ.

೧೯. ಮತ್ತು ಕತ್ತಲೆಯ ಸ್ವರೂಪದಿಂದ ನೀನೇ ಜಗತ್ತನ್ನು ಆವರಿಸುತ್ತೀಯೆ. ಸೃಷ್ಟಿಯ ರೂಪದಿಂದ ಜಗತ್ತನ್ನು ತುಂಬತಕ್ಕವಳೂ ನೀನೇ ಆಗಿರುವೆ. (ಇಲ್ಲಿ ಜ್ಯೋತಿಃ ಮತ್ತು ತಮಃ ಈ ಶಬ್ದಗಳಿಗೆ ಬೆಳಕು ಮತ್ತು ಕತ್ತಲೆ ಎಂಬ ಅರ್ಥವಲ್ಲದೆ ಜ್ಞಾನ, ಅಜ್ಞಾನಗಳೆಂದು ಸಹಾ ಬೋಧವಾಗುವುದು.)

೨೦. ಸ್ಥಿತಿ ಎಂದರೆ ಜಗತ್ತನ್ನು ಪಾಲನೆ ಮಾಡುವ ರೂಪದಿಂದ ವಿಷ್ಣುವಿಗೂ ಜಗತ್ತಿಗೂ ಹಿತವನ್ನು ಬಯಸುವವಳು ನೀನೇ. ಹಾಗೆಯೇ ಪ್ರಲಯ ರೂಪದಿಂದ ಜಗತ್ತನ್ನು ನಾಶಮಾಡುವವಳೂ ನೀನೇ.

೨೧. ಬುದ್ಧಿಯೂ, ಪ್ರಾಣಿಗಳನ್ನು ಮೋಹಗೊಳಿಸುವ ಮಹಾಮಾಯೆಯೂ, ಪಿತೃಗಳನ್ನು ಸಂತೋಷಗೊಳಿಸುವ ಸ್ವಧಾಕಾರವೂ, ದೇವತೆಗಳನ್ನು ತೃಪ್ತಿಗೊಳಿಸುವ ಸ್ವಾಹಾಕಾರವೂ ಸಹ ನೀನೇ. ಮತ್ತು ನೀನು ನಮಸ್ಕಾರ ಮತ್ತು ವಷಟ್ಕಾರಸ್ವರೂಪಳೂ ಸ್ಮರಣಸ್ವರೂಪಳೂ ಆಗಿರುವೆ.

ತ್ವಂ ಪುಷ್ಟಿಸ್ತ್ವಂ ಧೃತಿರ್ಮೈತ್ರೀ ಕರುಣಾ ಮುದಿತಾ ತಥಾ ।
ತ್ವಮೇವ ಲಜ್ಜಾ ತ್ವಂ ಶಾಂತಿಸ್ತ್ವಂ ಕಾಂತಿರ್ಜಗದೀಶ್ವರೀ ॥ ೨೨ ॥
ಮಹಾಮಾಯಾ ತ್ವಂ ಚ ಸ್ವಾಹಾ ಸ್ವಧಾ ಚ ಪಿತೃದೇವತಾ ।
ಯಾ ಸೃಷ್ಟಿಶಕ್ತಿರಸ್ಮಾಕಂ ಸ್ಥಿತಿಶಕ್ತಿಶ್ಚ ಯಾ ಹರೇಃ ।
ಅಂತಶ್ಶಕ್ತಿಸ್ತಥೇಶಾನೀ ಸಾತ್ವಂ ಶಕ್ತಿಃ ಸನಾತನೀ ॥ ೨೩ ॥
ಏಕಾ ತ್ವಂ ದ್ವಿವಿಧಾ ಭೂತ್ವಾ ಮೋಕ್ಷಸಂಸಾರಕಾರಿಣೀ
ವಿದ್ಯಾವಿದ್ಯಾಸ್ವರೂಪೇಣ ಸ್ವಪ್ರಕಾಶಾ ಪ್ರಕಾಶತಃ ॥ ॥ ೨೪ ॥

---

೨೨. ನೀನು ಪುಷ್ಟಿಸ್ವರೂಪಳೂ, ಧೈರ್ಯ ಮತ್ತು ಸ್ನೇಹಸ್ವರೂಪಳೂ, ದಯೆ ಮತ್ತು ಸಂತೋಷರೂಪಳೂ ಆಗಿರುತ್ತೀಯೆ. ಮತ್ತು ನೀನು ಲಜ್ಜಾ (ನಾಚಿಕೆ) ಸ್ವರೂಪಳೂ, ಶಾಂತಿ ಮತ್ತು ಕಾಂತಿ ಇವುಗಳ ಸ್ವರೂಪಳೂ ಆಗಿರುವುದಲ್ಲದೆ ಜಗತ್ತಿಗೆ ಒಡೆಯಳಾಗಿರುತ್ತಿ.

೨೩. ಆದಿಮಾಯೆಯೂ, ಸ್ವಾಹಾದೇವಿಯೂ, ಪಿತೃದೇವತಾರೂಪಳಾದ ಸ್ವಧೆಯೂ ನೀನೇ. ಅನಾದಿಯಾಗಿ ನಡೆದುಬರುತ್ತಿರುವ ಸೃಷ್ಟಿಸ್ಥಿತಿ ನಾಶಶಕ್ತಿಗಳು ಎಂದರೆ, ಬ್ರಹ್ಮನಾದ ನನ್ನಲ್ಲಿರುವ ಸೃಷ್ಟಿಶಕ್ತಿಯೂ, ವಿಷ್ಣುವಿನ ಪಾಲನಾಶಕ್ತಿಯೂ, ರುದ್ರನ ಸಂಹಾರ ಶಕ್ತಿಯೂ ಸಹ ನೀನೇ ಆಗಿರುವೆ.

೨೪. ನೀನೊಬ್ಬಳೇ ಆದರೂ ಜ್ಞಾನ ಮತ್ತು ಅಜ್ಞಾನಗಳೆಂಬ ಎರಡು ರೂಪಗಳನ್ನು ತಾಳಿ ಪ್ರಾಣಿಗಳಿಗೆ ಮುಕ್ತಿಯನ್ನೂ ಸಂಸಾರವನ್ನೂ ಉಂಟು ಮಾಡುತ್ತಿರುವೆ. ಎಂದರೆ ನಿನ್ನ ಸ್ವರೂಪವಾದ ಜ್ಞಾನದಿಂದ ಪ್ರಾಣಿಗಳು ಮುಕ್ತಿಯನ್ನು ಎಂದರೆ ಸಂಸಾರದಿಂದ ಬಿಡುಗಡೆಯನ್ನು ಪಡೆಯುವವು. ಅಜ್ಞಾನದಿಂದ ಸಂಸಾರದಲ್ಲಿ ಬಂಧನವುಂಟಾಗುವುದು. ಇವೆರಡಕ್ಕೂ ನೀನೇ ಕಾರಣಳು. ಮತ್ತು ನೀನು ಸ್ವಯಂಪ್ರಕಾಶರೂಪಳು ಎಂದರೆ, ನಿನಗಿರುವ ಶಕ್ತಿಸಾಮರ್ಥ್ಯಾದಿಗಳು ಇತರ ವಸ್ತುವಿನಿಂದ ನಿನಗೆ ಉಂಟಾಗದೇ ನೀನೇ ಎಲ್ಲಾ ವಸ್ತುಗಳನ್ನು ಪ್ರೇರಿಸಿ ಅವುಗಳಿಗೆ ಎಲ್ಲ ವಿಧವಾದ ಶಕ್ತಿಗಳನ್ನೂ ಕೊಡುವವಳು.

ತ್ವಂ ಲಕ್ಷ್ಮೀಃ ಸರ್ವಭೂತಾನಾಂ ತ್ವಂ ಛಾಯಾ ತ್ವಂ ಸರಸ್ವತೀ ।
ತ್ರಯೀಮಯೀ ತ್ರಿಮಾತಾ ತ್ವಂ ತ್ವಂ ಚತುಃಸ್ವರರೂಪಿಣೀ ॥ ೨೫ ॥
ಉದ್ಗೀತಿಃ ಸಾಮವೇದಸ್ಯ ಯಾ ಪಿತೃಗಣರಂಜಿನೀ ।
ತ್ವಂ ವೇದಿಃ ಸರ್ವಯಜ್ಞಾನಾಂ ಸಾಮಿಧೇನೀ ತಥಾ ಹವಿಃ ॥ ೨೬ ॥
ಯದವ್ಯಕ್ತಮನಿರ್ದೇಶ್ಯಂ ನಿಷ್ಕಲಂ ಪರಮಾತ್ಮನಃ ।
ರೂಪಂ ತಥೈವ ತನ್ಮಾತ್ರಂ ಸಕಲಂ ಚ ಜಗನ್ಮಯಂ ॥ ೨೭ ॥

---

೨೫. ನೀನು ಐಶ್ವರ್ಯಸ್ವರೂಪಳು ಮತ್ತು ಎಲ್ಲ ಪ್ರಾಣಿಗಳಿಗೂ ಛಾಯಾಸ್ವರೂಪಳು ಎಂದರೆ ಯಾವ ವಸ್ತುವಾಗಲಿ ತನ್ನ ನೆರಳಿಲ್ಲದೆ ಯಾವಾಗಲೂ ಹೇಗೆ ಇರುವುದಿಲ್ಲವೋ ಅದರಂತೆ ಎಲ್ಲ ಪ್ರಾಣಿಗಳಿಗೂ ಶಕ್ತಿರೂಪಳಾದ ನೀನು ನೆರಳಿನಂತೆ ಅವರೊಡನೆ ಇದ್ದು ಅವರಿಗೆ ಶಕ್ತಿಯನ್ನು ಕೊಡುತ್ತಿರುವಿಯೆಂದಭಿಪ್ರಾಯವು. ನೀನೇ ಸರಸ್ವತಿಯು, ಮೂರು ವೇದಗಳ ಸ್ವರೂಪಳು, ಮೂರು ಲೋಕಕ್ಕೂ ತಾಯಿಯು. ಮತ್ತು ನೀನೇ ವೇದಗಳ ಉದಾತ್ತ, ಅನುದಾತ್ತ, ಸ್ವರಿತ, ಪ್ರಚಯಗಳೆಂಬ ನಾಲ್ಕು ಸ್ವರಗಳ ಸ್ವರೂಪಳೂ ಆಗಿರುತ್ತೀಯೆ.

೨೬. ಸಾಮವೇದದಲ್ಲಿರುವ ಪಿತೃದೇವತೆಗಳನ್ನು ಸಂತೋಷಗೊಳಿಸುವ ಉದ್ಗೀತಿಯೆಂಬ ಗಾನವೂ ನೀನೇ, ಮತ್ತು ನೀನು ಎಲ್ಲ ಯಜ್ಞಗಳಲ್ಲಿಯೂ ಯಜ್ಞವೇದಿಕೆಯಾಗಿಯೂ, ಸಾಮಿಧೇನೀ ಎಂಬ ಮಂತ್ರರೂಪಳೂ, ಹೋಮವನ್ನು ಮಾಡುವ ಹವಿಸ್ಸ್ವರೂಪಳೂ ಆಗಿರುತ್ತೀಯೆ.

೨೭. ಚರ್ಮಚಕ್ಷುಸ್ಸುಗಳಿಗೆ ಕಾಣದೇ ಇರುವ ಇಂತಹುದೆಂದು ಸ್ಪಷ್ಟವಾಗಿ ಹೇಳಲಸಾಧ್ಯವಾದ, ಪರಮಾತ್ಮನ ಯಾವ ಅವ್ಯಕ್ತರೂಪವಿರುವುದೋ ಅದೂ ನೀನೇ. ಆಲ್ಲದೆ ಅದೇ ಅವ್ಯಕ್ತವು ರೂಪವನ್ನು ಹೊಂದಿ ಪಂಚಭೂತಗಳಿಗೆ ಕಾರಣಗಳಾದ ತನ್ಮಾತ್ರಗಳೆಂಬ ಭೂತಸೂಕ್ಷ್ಮಗಳ ಸ್ವರೂಪಳೂ ನೀನೇ ಆಗಿರುವೆ. ಮತ್ತು ಈ ಸ್ಥೂಲವಾದ ಜಗತ್ತೆಲ್ಲವೂ ನಿನ್ನ ಸ್ವರೂಪವೇ ಆಗಿರುವುದು.

ಇಲ್ಲಿ ಬ್ರಹ್ಮನು ವ್ಯಕ್ತಾವ್ಯಕ್ತ ಸ್ವರೂಪಿಣಿಯಾದ ಪರಬ್ರಹ್ಮನನ್ನು ಧ್ಯಾನಿಸುತ್ತಾನೆ. ಮೊದಲು ಎಂದರೆ ಸೃಷ್ಟಿಗೆ ಪೂರ್ವದಲ್ಲಿ ದೃಷ್ಟಿಗೆ ಅಗೋಚರ

ಯಾ ಮೂರ್ತಿರ್ವಿತತಾಂ ಸರ್ವಧರಿತ್ರೀಂ ಬಿಭ್ರತೀ ಕ್ಷಿತಿಂ ।
ಸಾ ತ್ವಂ ವಿಶ್ವಂಭರೇ ಲೋಕೇ ಶಕ್ತಿಭೂತಿಪ್ರದಾ ಸದಾ ॥
ತ್ವಂ ಲಕ್ಷ್ಮೀಶ್ಚೇತನಾ ಕಾಂತಿಸ್ತ್ವಂ ಪುಷ್ಟಿಸ್ತ್ವಂ ಸನಾತನೀ ॥ ೨೯ ॥

ವಾದ, ಯಾವ ಇಂದ್ರಿಯಗಳಿಂದಲೂ ತಿಳಿಯಲಸಾಧ್ಯವಾದ ಪರಬ್ರಹ್ಮನ ನಿರ್ಗುಣಾತ್ಮಕವಾದ ಅವ್ಯಕ್ತಸ್ವರೂಪವಿರುವುದು. ಈ ಸ್ವರೂಪದಲ್ಲಿ ಗುಣತ್ರಯಗಳು ಹೆಚ್ಚುಕಡಿಮೆಯಿಲ್ಲದೆ ಸಮತಾವಸ್ಥೆಯಲ್ಲಿರುವವು. ಸೃಷ್ಟಿಕಾಲದಲ್ಲಿ ಈ ಗುಣತ್ರಯಗಳ ಸಮತಾವಸ್ಥೆಯಲ್ಲಿ ಬದಲಾವಣೆಯಿಂದ ಅವ್ಯಕ್ತರೂಪವು ವ್ಯಕ್ತರೂಪವಾಗಿ ಪರಿಣಮಿಸುವುದು. **"ನಾಸದಾಸಿನ್ನೋ ಸದಾಸೀತ್ತದಾನೀಂ"** ಎಂಬ ಶ್ರುತಿಯು ಸೃಷ್ಟಿಗೆ ಪೂರ್ವದಲ್ಲಿರುವ ಸ್ಥಿತಿಯನ್ನೂ **"ಅಸದ್ವಾ ಇದಮಗ್ರ ಆಸೀತ್। ತತೋವೈಸದಜಾಯತ"** ಎಂಬ ಶ್ರುತಿಯು, ಸೃಷ್ಟಿಗೆ ಪೂರ್ವದಲ್ಲಿ ಅವ್ಯಕ್ತರೂಪದಲ್ಲಿದ್ದ ಪರಬ್ರಹ್ಮವು ಸೃಷ್ಟಿಕಾಲದಲ್ಲಿ ವ್ಯಕ್ತರೂಪವನ್ನು ಹೊಂದಿತೆಂಬುವುದನ್ನು ಸ್ಪಷ್ಟಪಡಿಸುತ್ತವೆ. ಮತ್ತು **"ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಸ್ಸಂಭೂತಃ"** ಎಂಬ ಶ್ರುತಿಯು ಪರಬ್ರಹ್ಮನಿಂದ ಪಂಚಭೂತಗಳ ಮತ್ತು ಪ್ರಪಂಚದ ಉತ್ಪತ್ತಿಕ್ರಮವನ್ನು ತಿಳಿಸುತ್ತದೆ. ಸೃಷ್ಟಿಗೆ ಪೂರ್ವದಲ್ಲಿ ಇರುವ ಅವ್ಯಕ್ತಸ್ವರೂಪವೂ, ಸೃಷ್ಟಿಕಾಲದಲ್ಲಿ ಇರುವ ವ್ಯಕ್ತಸ್ವರೂಪವೂ, ಆ ವ್ಯಕ್ತಸ್ವರೂಪದಿಂದ ಉತ್ಪತ್ತಿಯಾಗುವ ಪಂಚಭೂತಗಳ ಸೂಕ್ಷ್ಮಸ್ಥೂಲರೂಪಗಳೂ, ಕಡೆಗೆ ಇವುಗಳ ಪರಿಣಾಮರೂಪವಾಗಿ ಉಂಟಾಗುವ ಈ ಜಗತ್ತೂ ಸಹ ಪರಬ್ರಹ್ಮಸ್ವರೂಪಳಾದ ನಿನ್ನಿಂದಲೇ ಉಂಟಾಗುವುದರಿಂದ ಅವುಗಳ ಸ್ವರೂಪಳೂ ನೀನೇ ಎಂದು ಅಭಿಪ್ರಾಯವು.

೨೯. ಯಾವ ಆದಿವರಾಹರೂಪವಾದ ಮೂರ್ತಿಯು ಎಲ್ಲ ಸ್ರಪಂಚವನ್ನೂ ಒಳಗೊಂಡಿರುವ ಈ ವಿಶಾಲವಾದ ಭೂಮಂಡಲವನ್ನು ಧರಿಸಿರುವುದೋ ಆ ಮೂರ್ತಿಯೂ ನೀನೇ ಆಗಿರುವೆ. ಆದುದರಿಂದ ಎಲೈ ದೇವಿಯೇ ನೀನು ಸಮಸ್ತ ಜಗತ್ತನ್ನೂ ಧರಿಸಿರುವುದಲ್ಲದೆ ಈ ಲೋಕದಲ್ಲಿ ಎಲ್ಲ ಪ್ರಾಣಿಗಳಿಗೂ ಯಾವಾಗಲೂ ಶಕ್ತಿಯನ್ನೂ ಐಶ್ವರ್ಯವನ್ನೂ ಕೊಡುವವಳು. ಮತ್ತು ನೀನೇ ಲಕ್ಷ್ಮೀಸ್ವರೂಪಳೂ, ಜ್ಞಾನ ಅಥವಾ ಚೈತನ್ಯಸ್ವರೂಪಳೂ, ಕಾಂತಿಯೂ, ಪುಷ್ಟಿಯೂ ಆಗಿರುತ್ತೀಯೆ. ಮತ್ತು ನಾಶರಹಿತವಾದ ಅನಾದಿಯಾದ ಸ್ವರೂಪವುಳ್ಳವಳಾಗಿರುತ್ತೀಯೆ.

ತ್ವಂ ಕಾಲರಾತ್ರಿಸ್ತ್ವಂ ಮುಕ್ತಿಃ ಶಾಂತಿಃ ಪ್ರಜ್ಞಾ ತಥಾ ಧೃತಿಃ ।
ಸಂಸಾರಸಾಗರೋತ್ತಾರತರಣಿಃ ಸುಖಮೋಕ್ಷದೇ ॥ ೩೦ ॥

ಪ್ರಸೀದ ಸರ್ವಜಗತಾಂ ತ್ವಂ ಗತಿಸ್ತ್ವಂ ಮತಿಃ ಸದಾ ।
ತ್ವಂ ನಿತ್ಯಾ ತ್ವಮನಿತ್ಯಾ ಚ ತ್ವಂ ಚರಾಚರಮೋಹಿನೀ ॥ ೩೧ ॥

ತ್ವಂ ಸಂಧಿನೀ ಸರ್ವಯೋಗಸಾಂಗೋಪಾಂಗವಿಭಾವಿನೀ ।
ಚಿಂತಾ ಕೀರ್ತಿರ್ಯತೀನಾಂ ತ್ವಂ ತ್ವಂ ತದಷ್ಟಾಂಗಸಂಯುತಾ ॥ ೩೨ ॥

ತ್ವಂ ಖಡ್ಗಿನೀ ಶೂಲಿನೀ ಚ ಚಕ್ರಿಣೀ ಘೋರರೂಪಿಣೀ ।
ತ್ವಮೀಶ್ವರೀ ಜನಾನಾಂ ತ್ವಂ ಸರ್ವಾನುಗ್ರಹಕಾರಿಣೀ ॥ ೩೩ ॥

---

೩೦. ಪ್ರಳಯರಾತ್ರಿಯೂ ಎಂದರೆ ಜಗತ್ತನ್ನು ಉಪಸಂಹರಿಸುವ ಕಾಲದಲ್ಲಿ ಧರಿಸುವ್ಯರೂಪವ್ವು,'ಮುಕ್ತಿಸ್ವರೂಪಳೂ, ಶಾಂತಿಯೂ, ಪ್ರಜ್ಞೆಯೂ, ಧೈರ್ಯವೂ ನೀನೇ. ಸುಖ ಮತ್ತು ಮುಕ್ತಿಯನ್ನು ಕೊಡುವ ಓ ದೇವಿಯೇ ನೀನು ಈ ಸಂಸಾರವೆಂಬ ಸಾಗರವನ್ನು ದಾಟುವುದಕ್ಕೆ ಹರಿಗೋಲಿನಂತಿರುವೆ.

೩೧. ಓ ದೇವಿಯೇ, ಪ್ರಸನ್ನಳಾಗು. ಎಲ್ಲ ಜಗತ್ತಿಗೂ ನೀನೇ ಗತಿಯು ಮತ್ತು ಬುದ್ಧಿ ಸ್ವರೂಪಳು. ನೀನು ಯಾವಾಗಲೂ ಇರುವವಳು. ಅನಿತ್ಯವಾದ ಎಂದರೆ ನಾಶವನ್ನು ಹೊಂದುವ ಜಗದ್ರೂಪಳೂ, ಚಲಿಸುವ ಪ್ರಾಣಿಗಳು, ಚಲಿಸದಿರುವ ವೃಕ್ಷಾದಿಗಳು ಇವುಗಳನ್ನೊಳಗೊಂಡ ಸಮಸ್ತಪ್ರಪಂಚವನ್ನೂ ಮೋಹಗೊಳಿಸುವವಳೂ ಆಗಿರುತ್ತೀಯೆ.

೩೨. ನೀನು ಯೋಗಶಾಸ್ತ್ರದಲ್ಲಿ ಹೇಳಿರುವಂತೆ ಎಲ್ಲ ಅವಯವಗಳಿಗೂ ಶಕ್ತಿಯನ್ನು ಕೊಡುವ ಸಂಧಿನೀ ಎಂಬ ಯೋಗಾಸನ ಸ್ವರೂಪಳಾಗಿರುವೆ. ಮತ್ತು ತಪಸ್ವಿಗಳ ಧ್ಯಾನ ಮತ್ತು ಜಪಗಳ ಸ್ವರೂಪಳೂ, ಯೋಗಶಾಸ್ತ್ರದ ಅಷ್ಟಾಂಗಗಳು ಎಂದರೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿಗಳೆಂಬ ಎಂಟು ಅಂಗಗಳ ಸ್ವರೂಪಳೂ ನೀನೇ ಆಗಿರುವೆ.

೩೩. ನೀನು ಕತ್ತಿಯನ್ನು ಧರಿಸಿರುವವಳೂ, ಶೂಲಾಯುಧವನ್ನು ಹಿಡಿದಿರುವವಳೂ ಚಕ್ರಾಯುಧವನ್ನು ಧರಿಸಿರುವವಳೂ, ಭಯಂಕರವಾದ ರೂಪವುಳ್ಳವಳೂ ಆಗಿರುವೆ. ನೀನು ಸಮಸ್ತಜನಗಳಿಗೆ ಒಡೆಯಳಾಗಿದು ಅವರುಗಳಿಗೆ ಅನುಗ್ರಹವನ್ನು ಮಾಡತಕ್ಕವಳು.

ವಿಶ್ವಾದಿಸ್ತ್ವಮನಾದಿಸ್ತ್ವಂ ವಿಶ್ವಯೋನಿರಯೋನಿಜಾ ।
ಅನಂತಾ ಸರ್ವಜಗತಸ್ತ್ವಮೇವೈಕಾಂತಕಾರಿಣೀ ॥ ೩೪ ॥

ನಿತಾಂತನಿರ್ಮಲಾ ತ್ವಂ ಹಿ ತಾಮಸೀತಿ ಚ ಗೀಯತೇ ।
ತ್ವಂ ಹಿಂಸಾ ತ್ವಮಹಿಂಸಾ ಚ ತ್ವಂ ಕಾಲೀ ಚತುರಾನನಾ ॥ ೩೫ ॥

ತ್ವಂ ಪರಾ ಸರ್ವಜನನೀ ದಮನೀ ದಾಮಿನೀ ತಥಾ ।
ತ್ವಯ್ಯೇವ ಲೀಯತೇ ವಿಶ್ವಂ ಭಾತಿ ತತ್ತದ್ಬಿಭರ್ತಿ ಚ ॥ ೩೬ ॥

---

೩೪. ನೀನು ಜಗತ್ತಿಗೆ ಆದಿಯು, ನಿನಗೆ ಮಾತ್ರ ಆದಿಯಿಲ್ಲವು ; ನೀನು ಜಗತ್ತಿಗೆ ಕಾರಣಳು, ನಿನಗೆ ಕಾರಣರೂಪವಾದ ವಸ್ತುವಿಲ್ಲವು ; ನೀನು ನಾಶವಿಲ್ಲದವಳು, ನೀನೊಬ್ಬಳೇ ಈ ಜಗತ್ತಿನ ನಾಶವನ್ನುಂಟುಮಾಡುವವಳು. ನಿನ್ನಿಂದಲೇ ಈ ಜಗತ್ತು ಉತ್ಪತ್ತಿಯಾಗಿ ನಿನ್ನಿಂದಲೇ ಕಡೆಗೆ ಲಯವನ್ನು ಹೊಂದುವುದು. ಆದುದರಿಂದ ಎಲ್ಲಕ್ಕಿಂತಲೂ ನೀನೇ ಆದಿಯು. ನಿನಿಗಿಂತ ಆದಿಯಾದ ಯಾವ ವಸ್ತುವೂ ಇಲ್ಲವು. ಸಮಸ್ತ ಪ್ರಪಂಚವನ್ನೂ ಪ್ರಳಯ ಕಾಲದಲ್ಲಿ ಉಪಸಂಹರಿಸುವವಳಾದರೂ ನಿನಗೆ ಅಂತ ಎಂದರೆ ನಾಶವೆಂಬುದೇ ಇಲ್ಲವು. ಆದುದರಿಂದ ನೀನು ಆದ್ಯಂತರಹಿತಳೆಂದು ತಾತ್ಪರ್ಯವು.

೩೫. ಪರಮ ಶುದ್ಧಳಾದ ನೀನು ಪ್ರಳಯಕಾಲದಲ್ಲಿ ತಾಮಸೀ ಎಂದರೆ ಜಗತ್ಸಂಹಾರ ಮಾಡಲು ಯೋಗ್ಯವಾದ ಮತ್ತು ತಮೋಗುಣ ಪ್ರಧಾನವಾದ ರೂಪವನ್ನು ಧರಿಸುವವಳು ಎಂದು ಕರೆಯಲ್ಪಡುತ್ತೀಯೆ. ನೀನು ಹಿಂಸೆಯ ಮತ್ತು ಅಹಿಂಸೆಯ ಸ್ವರೂಪಳು. ಮತ್ತು ನೀನು ಚತುರಾನನ ಮತ್ತು ಕಾಲಿ ಇವರ ಸ್ವರೂಪಳು. ಎಂದರೆ, ಸೃಷ್ಟಿಕರ್ತನ ಮತ್ತು ಸಂಹಾರಕರ್ತನ ಸ್ವರೂಪಳು. ಸೃಷ್ಟಿಮಾಡುವವಳೂ, ಸಂಹಾರಮಾಡುವವಳೂ ನೀನೇ ಎಂದು ಅಭಿಪ್ರಾಯವು.

೩೬. ನೀನು ಸರ್ವೋತ್ಕೃಷ್ಟಳು, ನೀನು ಎಲ್ಲರಿಗೂ ತಾಯಿಯಾದವಳು, ದುಷ್ಟರನ್ನು ಶಿಕ್ಷಿಸುವವಳೂ, ಶಿಕ್ಷೆಮಾಡಿಸುವವಳೂ ನೀನೇ. ನಿನ್ನಲ್ಲಿಯೇ ಈ ಜಗತ್ತು ಲಯವನ್ನು ಹೊಂದುವುದು, ಮತ್ತು ನಿನ್ನಲ್ಲಿಯೇ ಯಾವಾಗಲೂ ಇರುವುದು. ಮತ್ತು ನೀನೇ ಈ ಜಗತ್ತನ್ನು ರಕ್ಷಿಸುವವಳು. ನಿನ್ನ ವ್ಯಕ್ತ

ತ್ವಂ ಸೃಷ್ಟಿಹೀನಾ ತ್ವಂ ಸೃಷ್ಟಿಸ್ತ್ವಮಕರ್ಣಾಪಿ ಸಶ್ರುತಿಃ ।
ತರಸ್ವಿನೀ ಪಾಣಿಪಾದಹೀನಾ ತ್ವಂ ನಿತರಾಂ ಗ್ರಹಾ ॥ ೩೭ ॥

ಸ್ವರೂಪವೇ ಸೃಷ್ಟಿಕಾಲದಲ್ಲಿ ಈ ಜಗತ್ತಿನಂತೆ ತೋರಿ, ನಿನ್ನಿಂದಲೇ ಪಾಲಿಸಲ್ಪಟ್ಟು, ಪ್ರಳಯ ಕಾಲದಲ್ಲಿ ನಿನ್ನಲ್ಲೇ ಲಯವನ್ನು ಹೊಂದುವುದೆಂದು ತಾತ್ಪರ್ಯವು.

೩೭. ನೀನು ಸೃಷ್ಟಿಯಿಲ್ಲದವಳಾದರೂ ಮಾಯಿಕವಾದ ಸೃಷ್ಟಿಯುಳ್ಳವಳು; ಕಿವಿಗಳಿಲ್ಲದವಳಾದರೂ, ಕೇಳುವವಳು; ಕೈಕಾಲುಗಳಿಲ್ಲದವಳಾದರೂ ವೇಗವಾಗಿ ಚಲನವುಳ್ಳವಳು ಮತ್ತು ನೀನು ಎಲ್ಲವನ್ನೂ ಗ್ರಹಿಸುವವಳು ಎಂದರೆ ತಿಳಿಯುವವಳು. ಮನುಷ್ಯಾದಿ ಪ್ರಾಣಿಗಳಿಗೆ, ಕಿವಿ, ಕೈಕಾಲು ಮೊದಲಾದ ಇಂದ್ರಿಯಗಳು ವಿಷಯಗಳನ್ನು ಗ್ರಹಿಸಲು ಸಾಧಕವಾಗಿರುತ್ತವೆ. ಈ ಸಾಧನಗಳಿಲ್ಲದಿದ್ದರೆ ಅವುಗಳು ವಿಷಯಗ್ರಹಣ ಮಾಡಲಾರವು. ಕಣ್ಣಿಲ್ಲದ ಕುರುಡನು ತನ್ನ ಎದುರಿಗೇ ಇರುವ ವಸ್ತುವಿನ ಸ್ವಭಾವವನ್ನು ನೋಡಿ ತಿಳಿಯಲಾರನು. ಕಾಲಿಲ್ಲದ ಕುಂಟನು ಇನ್ನೊಬ್ಬರ ಸಹಾಯವಿಲ್ಲದೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಲಾರನು. ಆದುದರಿಂದ ಪ್ರಾಣಿಗಳಿಗೆ ಅವಯವಗಳ ಸಹಾಯವಿಲ್ಲದೆ ಯಾವ ಕೆಲಸವೂ ನಡೆಯುವುದಿಲ್ಲ. ಮತ್ತು ಆ ಅವಯವಗಳಿಗೆ ಇರುವ ಶಕ್ತಿಗೂ ಒಂದು ಪರಿಮಿತಿಯುಂಟು. ಆ ಶಕ್ತಿಗೆ ಮೀರಿದ ಕೆಲಸವು ಆ ಅವಯವಗಳಿಗೆ ಸಾಧ್ಯವಾಗುವುದಿಲ್ಲ. ಆದರೆ ಪರವಸ್ತು ಸ್ವರೂಪಳಾದ ದೇವಿಗೆ ಈ ವಿಧವಾದ ಅವಯವಗಳ ಸಹಾಯವೇ ಬೇಕಾಗಿರುವುದಿಲ್ಲ. ಆ ದೇವಿಯ ಶಕ್ತಿಗೆ ಪರಿಮಿತಿಯೇ ಇರುವುದಿಲ್ಲ. ಎಂದರೆ ಶ್ರೋತ್ರಾದಿ ಇಂದ್ರಿಯಗಳ ಸಹಾಯವಿಲ್ಲದೆ ಅವುಗಳಿಂದಾಗುವ ವಿಷಯಗ್ರಹಣವನ್ನೂ ಮಾಡಬಲ್ಲಳು. ಮತ್ತು ಅವಳು ಸರ್ವಜ್ಞಳಾಗಿರುವುದರಿಂದ ವಿಷಯಗ್ರಹಣ ಶಕ್ತಿಗೆ ಪರಿಮಿತಿಯೇ ಇರುವುದಿಲ್ಲ. ಆದುದರಿಂದ ಬಾಹ್ಯಾಂತರ ಸಾಧನಗಳೊಂದೂ ಆ ದೇವಿಗೆ ಬೇಕಾಗಿರುವುದಿಲ್ಲ. ಅವಳು ಸರ್ವಜ್ಞಳು ಮತ್ತು ಸರ್ವಶಕ್ತಳು ಎಂದು ತಾತ್ಪರ್ಯವು.

ತ್ವಂ ದ್ಯೌಸ್ತ್ವಮಾಪಸ್ತ್ವಂ ಜ್ಯೋತಿರ್ವಾಯುಸ್ತ್ವಂ ಚ ನಭೋ ಮನಃ ।
ಅಹಂಕಾರೋऽಪಿ ಜಗತಾಮುಷ್ಟಧಾ ಪ್ರಕೃತಿಃ ಕೃತಿಃ ॥ ೩೮ ॥

ಜಗನ್ನಾಭಿರ್ಮೇರುರೂಪಧಾರಿಣೀ ನಾಲಿಕಾ ಪರಾ ।
ಪರಾಪರಾತ್ಮಿಕಾ ಶುದ್ಧಾ ಮಾಯಾ ಮೋಹಾತಿಕಾರಿಣೀ ॥ ೩೯ ॥

ಕಾರಣಂ ಕಾರ್ಯಭೂತಂ ಚ ಸತ್ಯಂ ಶಾಂತಂ ಶಿವಾಶಿವೇ ।
ರೂಪಾಣಿ ತವ ವಿಶ್ವಾರ್ಥೇ ರಾಗವೃಕ್ಷಫಲಾನಿ ಚ ॥ ೪೦ ॥

ನಿತಾಂತಹ್ರಸ್ವಾ ದೀರ್ಘಾ ಚ ನಿತಾಂತಾಣುರ್ಬೃಹತ್ತನುಃ ।
ಸೂಕ್ಷ್ಮಾಪ್ಯಖಿಲಲೋಕಸ್ಯ ವ್ಯಾಪಿನೀ ತ್ವಂ ಜಗನ್ಮಯಿ ॥ ೪೧ ॥

---

೩೮. ನೀನೇ ಸ್ವರ್ಗವು, ನೀನೇ ಜಲವು, ನೀನೇ ಜ್ಯೋತಿಯು, ನೀನೇ ವಾಯುವು, ನೀನೇ ಆಕಾಶವು, ನೀನೇ ಮನಸ್ಸು "ನಾನೇ ಮಾಡುವವನು" ಎಂಬ ಅಹಂಕಾರವೂ ನೀನೇ, ಭೂಮಿಯೂ ನೀನೇ. ಹೀಗೆ ನೀನು ಜಗತ್ತಿಗೆ ಕಾರಣವಾದ ಎಂಟು ವಸ್ತುಗಳ ಸ್ವರೂಪಳು.

೩೯. ನೀನು, ಜಗತ್ತೇ ನಾಭಿಯಾಗಿರುವುಳ್ಳವಳು, ಜಗತ್ತೆಂಬ ಕಮಲವನ್ನು ಧರಿಸಿರುವ ಮೇರುಪರ್ವತಕ್ಕೆ ಆಧಾರವಾದ ನಾಳವೂ ನೀನೇ. ನೀನು ಪರಮಾತ್ಮ ಸ್ವರೂಪಳೂ, ಜಡಸ್ವರೂಪಳೂ, ಶುದ್ಧಳೂ, ಮೋಹವನ್ನುಂಟು ಮಾಡುವ ಮಾಯೆಯೂ ಆಗಿರುವೆ.

೪೦. ಕಾರಣ, ಕಾರ್ಯ, ಸತ್ಯ, ಶಾಂತಿ, ಮಂಗಳ, ಅಮಂಗಳ ಇವುಗಳು ನಿನ್ನಸ್ವರೂಪಗಳು. ಇವುಗಳು ಪ್ರಾಣಿಗಳ ಮನೋರಥವೆಂಬ ವೃಕ್ಷಕ್ಕೆ ಅನುರೂಪವಾದ ಫಲಗಳಾಗಿರುತ್ತವೆ.

೪೧. ನೀನು ತುಂಬ ಹ್ರಸ್ವಾಕಾರವುಳ್ಳವಳು ಮತ್ತು ದೀರ್ಘವಾದ ಶರೀರವುಳ್ಳವಳು; ಅತಿಸಣ್ಣದಾದ ಶರೀರವುಳ್ಳವಳು ಮತ್ತು ಬಹು ದೊಡ್ಡದಾದ ಶರೀರವುಳ್ಳವಳು. ನೀನು ಸೂಕ್ಷ್ಮಳಾಗಿದ್ದರೂ ಸಮಸ್ತ ಲೋಕವನ್ನೂ ವ್ಯಾಪಿಸಿರುವವಳು ಮತ್ತು ಜಗದ್ರೂಪಳು.

ಮಾನಹೀನಾ ವಿಮಾನಾತಿವಿಮಾನೋನ್ಮಾನಸಂಭವಾ ।
ಯದಷ್ಟಿವ್ಯಷ್ಟಿಸಂಭೋಗರಾಗಾದಿಗಲಿಕಾಶಯಾ ॥ ೪೨ ॥
ತತ್ತೇ ಮಹಿಮ್ನಿ ತದ್ರೂಪಂ ತವ ಭ್ರಾಂತ್ಯಾದಿಕಂ ಚ ಯತ್ ।
ಇಷ್ಟಾನಿಷ್ಟವಿಪಾಕಜ್ಞಾ ಯಥೇಷ್ಟಾನಿಷ್ಟಕಾರಣಂ ॥ ೪೩ ॥
ಸರ್ಗಾದಿಮಧ್ಯಾಂತಮಯಂ ನಿಮ್ನಂ ರೂಪಸ್ತಥೈವ ಚ ।
ವಿಚಾರಾಷ್ಟಾಂಗಯೋಗೇನ ಸಂಸಾದ್ಯೈವ ಮುಹರ್ಮುಹುಃ ॥ ೪೪ ॥
ಯತ್ಸ್ಥಿರೀಕ್ರಿಯತೇ ತತ್ತ್ವಂ ತತ್ತೇ ರೂಪಂ ಸನಾತನಂ ॥
ಬಾಹ್ಯಾಬಾಹ್ಯೇ ಸುಖಂ ದುಃಖಂ ಜ್ಞಾನಾಜ್ಞಾನೇ ಲಯಾಲಯೌ
ಉಪತಾಪಸ್ತಥಾ ಶಾಂತಿರ್ಭೂತಿಸ್ತ್ವಂ ಜಗತಃ ಪತೇಃ ॥ ೪೫ ॥

---

೪೨. ನೀನು ಅಳತೆಗೆ ಅಸಾಧ್ಯವಾದ ಮತ್ತು ಅಳತೆಯಿಲ್ಲದ ಸ್ವರೂಪವುಳ್ಳವಳು; ಅಳತೆಯಿಲ್ಲದ ಮತ್ತು ಹೆಚ್ಚಾದ ತೂಕ (ಮಹಿಮೆ) ವುಳ್ಳ ವಸ್ತುಗಳಿಗೆ ನೀನು ಕಾರಣಳು; ಸಮೂಹವಾಗಿಯೂ ಮತ್ತು ಪ್ರತ್ಯೇಕವಾಗಿಯೂ ಇರುವ ವಸ್ತುಗಳ ಕಾಮ, ಸುಖ, ಇಚ್ಛೆ ಮೊದಲಾದವುಗಳಿಲ್ಲದವಳು.

೪೩. ನಿನ್ನ ಸ್ವರೂಪವು ನಿನ್ನ ಮಹಿಮೆಯಲ್ಲಿಯೇ ಇರುವುದು, ಬೇರೆ ಆಧಾರವಿಲ್ಲವು. ಭ್ರಮೆ ಮೊದಲಾದವುಗಳೂ ನಿನ್ನಲ್ಲಿಯೇ ಇರುತ್ತವೆ. ಪ್ರಾಣಿಗಳನ್ನು ಮೋಹಗೊಳಿಸುವ ಮಾಯಾಸ್ವರೂಪವು ನಿನ್ನ ಮಹಿಮೆಯೇ ಹೊರತು ಆ ಕಾರ್ಯವು ಇತರರಿಂದ ಸಾಧ್ಯವಿಲ್ಲ. ನೀನು ಪ್ರಾಣಿಗಳ ಇಷ್ಟಾನಿಷ್ಟಗಳನ್ನೂ ಪುಣ್ಯಪಾಪಗಳನ್ನೂ ತಿಳಿದವಳಾಗಿ ಅದಕ್ಕನುಸಾರವಾಗಿ ಅವರವರಿಗೆ ಸುಖದುಃಖಗಳನ್ನು ಕೊಡುತ್ತೀಯೆ.

೪೪. ಯೋಗಿಗಳು ಅಷ್ಟಾಂಗ ಯೋಗಗಳ ಬಲದಿಂದ ಅನೇಕವೇಳೆ ಚೆನ್ನಾಗಿ ವಿಮರ್ಶೆಮಾಡಿ, ಸೃಷ್ಟಿಸ್ಥಿತಿ ಲಯಕಾರಣಭೂತವಾದ ಅತಿಸೂಕ್ಷ್ಮವಾದ ಯಾವ ಆತ್ಮತತ್ತ್ವವು ಉಂಟೆಂದು ಸಿದ್ಧಾಂತಮಾಡಿರುವರೋ ಆ ಸೂಕ್ಷ್ಮವಾದ ರೂಪವೇ ನಿನ್ನ ಸನಾತನ ರೂಪು ಎಂದರೆ ಆದ್ಯಂತರಹಿತವಾದ ನಿತ್ಯರೂಪವು.

೪೫. ಬಹಿರಂಗವೂ, ಅಂತರಂಗವೂ, ಸುಖವೂ, ದುಃಖವೂ, ಜ್ಞಾನವೂ, ಅಜ್ಞಾನವೂ, ಉತ್ಪತ್ತಿಯೂ, ನಾಶವೂ ಬಾಧೆಯೂ ಇವುಗಳಿಲ್ಲದರ ಸ್ವರೂಪವೂ ನೀನೇ ಆಗಿರುವೆ. ಮತ್ತು ಪರಮಾತ್ಮನ ಶಾಂತಿಯೂ, ಐಶ್ವರ್ಯವೂ ನೀನೇ.

ಯಸ್ಯ ಪ್ರಭಾವಂ ನೋ ವಕ್ತುಂ ಶಕ್ನೋತಿ ಭುವನತ್ರಯೇ ।
ತಸ್ಯೈವಂ ಸಂಮೋಹಕರೀ ಸಾ ತ್ವಂ ಕಿಂ ಸ್ತೂಯಸೇ ಮಯಾ ॥ ೪೬ ॥
ಯೋಗನಿದ್ರಾ ಮಹಾನಿದ್ರಾ ಮೋಹನಿದ್ರಾ ಜಗನ್ಮಯಿ ।
ವಿಷ್ಣುಮಾಯಾ ಚ ಪ್ರಕೃತಿಃ ಕಸ್ತ್ವಾಂ ಸ್ತುತ್ಯಾ ವಿಭಾವಯೇತ್ ॥ ೪೭ ॥
ಮಮ ವಿಷ್ಣೋಃ ಶಂಕರಸ್ಯ ಯಾ ವಪುರ್ವಹನಾತ್ಮಿಕಾ ।
ತಸ್ಯಾಃ ಪ್ರಭಾವಂ ಕೋ ವಕ್ತುಂ ಗುಣಾನ್ವೇತ್ತುಂ ಚ ಕಃ ಕ್ಷಮಃ ॥ ೪೮ ॥
ಪ್ರಕಾಶಕರಣಜ್ಯೋತಿಃ ಸ್ವರೂಪಾಂತರಗೋಚರಾ ।
ತ್ವಮೇವ ಜಂಗಮಸ್ಥೇಯರೂಪೈಕಾ ಬಾಹ್ಯಗೋಚರಾ ॥ ೪೯ ॥

---

೪೬. ಯಾವನ ಮಹಿಮೆಯನ್ನು ಹೇಳಲು ಸಮರ್ಥರಾದವರು ಮೂರು ಲೋಕದಲ್ಲಿಯೂ ಯಾರೂ ಇಲ್ಲವೋ ಅಂತಹ ಪರಮೇಶ್ವರನನ್ನೇ ನೀನು ಮೋಹಗೊಳಿಸುತ್ತೀಯೆ. ಇಂತಹ ನಿನ್ನನ್ನು ನಾನೇನು ಸ್ತೋತ್ರ ಮಾಡಲಿ?

೪೭. ನೀನು ಪ್ರಪಂಚವನ್ನು ರಕ್ಷಿಸುವುದರಲ್ಲಿ ಎಚ್ಚರವುಳ್ಳ ಯೋಗ ನಿದ್ರೆಯ ಸ್ವರೂಪಳು; ಎಲ್ಲ ಪ್ರಾಣಿಗಳ ನಿದ್ರೆಯ (ಅಜ್ಞಾನ) ಸ್ವರೂಪಳು; ಎಲ್ಲ ಪ್ರಾಣಿಗಳನ್ನೂ ಮೋಹಗೊಳಿಸುವ ಮಹಾನಿದ್ರಾಸ್ವರೂಪಳು; ಜಗದ್ರೂಪಳು, ವಿಷ್ಣುಮಾಯೆಯು, ಜಗತ್ತಿಗೆಲ್ಲ ಕಾರಣಳು. ಇಂತಹ ನಿನ್ನನ್ನು ಸ್ತೋತ್ರಮಾಡುವ ಸಾಮರ್ಥ್ಯವುಳ್ಳವರಾರು?

೪೮. ಬ್ರಹ್ಮನಾದ ನನ್ನ, ವಿಷ್ಣುವಿನ, ಮತ್ತು ಶಂಕರನ ಕಾರ್ಯಗಳಾದ ಸೃಷ್ಟಿಸ್ಥಿತಿ ಲಯಾದಿಗಳನ್ನು ನಿರ್ವಹಿಸಲು ನೀನು ಯಾವ ಶರೀರವನ್ನು ಧರಿಸುವೆಯೋ ಅಂತಹ ಶರೀರಧಾರಿಣಿಯಾದ ನಿನ್ನ ಮಹಿಮೆಯನ್ನೂ ಗುಣಗಳನ್ನೂ ವರ್ಣಿಸಲು ಆದಾರು ಸಮರ್ಥರು?

೪೯. ಸೂರ್ಯಾದಿಗಳ ಮೂಲಕ ಜಗತ್ತಿಗೆ ಪ್ರಕಾಶವನ್ನುಂಟು ಮಾಡುವ ಸ್ವರೂಪಳಾದ ನೀನು ಸ್ವಸ್ವರೂಪದಿಂದ (ಅವ್ಯಕ್ತರೂಪ) ಕಾಣಿಸದೇ ಇರುವಳಾದರೂ, ಚರಾಚರಾತ್ಮಕವಾದ ವಸ್ತುಗಳ ರೂಪವಾಗಿ ಬಾಹ್ಯದೃಷ್ಟಿಗೆ ಕಾಣಿಸುತ್ತೀಯೆ.

ಪ್ರಸೀದ ಸರ್ವಜಗತಾಂ ಜನನೀ ಸ್ತ್ರೀಸ್ವರೂಪಿಣೀ ।
ವಿಶ್ವರೂಪಿಣಿ ವಿಶ್ವೇಶೇ ಪ್ರಸೀದ ತ್ವಂ ಸನಾತನಿ ॥ ೫೦ ॥

॥ ಮಾರ್ಕಂಡೇಯ ಉವಾಚ ॥

ಏವಂ ಸಂಸ್ತೂಯಮಾನಾ ಸಾ ಯೋಗನಿದ್ರಾ ವಿರಂಚಿನಾ ।
ಆವಿರ್ಬಭೂವ ಪ್ರತ್ಯಕ್ಷಂ ಬ್ರಹ್ಮಣಃ ಪರಮಾತ್ಮನಃ ॥ ೫೧ ॥

ಸ್ನಿಗ್ಧಾಂಜನದ್ಯುತಿಶ್ಚಾರುರೂಪೋತ್ತುಂಗಾ ಚತುರ್ಭುಜಾ ।
ಸಿಂಹಸ್ಥಾ ಖಡ್ಗನೀಲಾಬ್ಜಹಸ್ತಾ ಮುಕ್ತಕಚೋತ್ಕರಾ ॥ ೫೨ ॥

ಸಮುಕ್ಷಮುಥ ತಾಂ ವೀಕ್ಷ್ಯ ಸ್ರಷ್ಟಾ ಸರ್ವಜಗದ್ಗುರುಃ ।
ಭಕ್ತ್ಯಾ ವಿನಮ್ರತುಂಗಾಂ ಸಸ್ತುಷ್ಟಾವ ಚ ನನಾಮ ಚ ॥ ೫೩ ॥

---

೫೦. ಓ ದೇವಿಯೇ, ಪ್ರಸನ್ನಳಾಗು. ನೀನು ಎಲ್ಲ ಪ್ರಾಣಿಗಳಿಗೂ ಮಾತೆಯಾದ ಸ್ತ್ರೀರೂಪಳು. ಎಲೈ ಜಗದ್ರೂಪಳೇ, ಜಗದೊಡೆಯಳೇ, ಅನಾದಿಯಾದ ಸ್ವರೂಪವುಳ್ಳ ಓ ದೇವಿಯೇ ನನಗೆ ಪ್ರಸನ್ನಳಾಗು.

೫೧. ಮಾರ್ಕಂಡೇಯ ಮುನಿಯು ಹೇಳಿದನು :—ಹೀಗೆ ಬ್ರಹ್ಮನು ಸ್ತೋತ್ರ ಮಾಡಲು ಆ ವಿಷ್ಣುಮಾಯೆಯು ಮಹಾಮಹಿಮನಾದ ಆ ಬ್ರಹ್ಮನ ಎದುರಿಗೆ ಪ್ರತ್ಯಕ್ಷಳಾದಳು.

೫೨. ಹೀಗೆ ಪ್ರತ್ಯಕ್ಷಳಾದ ಆ ದೇವಿಯು ಸುಂದರವಾದ ಕಾಡಿಗೆಯಂತೆ ಕಪ್ಪಾದ ಕಾಂತಿಯುಳ್ಳವಳೂ ಸುಂದರವಾದ ಮತ್ತು ಎತ್ತರವಾದ ರೂಪವುಳ್ಳವಳೂ, ನಾಲ್ಕು ಬಾಹುಗಳುಳ್ಳವಳೂ, ಸಿಂಹದ ಮೇಲೆ ಕುಳಿತು ಕೈಗಳಲ್ಲಿ ಕತ್ತಿ, ಕನ್ನೈದಿಲೆ ಹೂಗಳನ್ನು ಧರಿಸಿದವಳೂ, ತಲೆಕೂದಲನ್ನು ಬಿಚ್ಚಿಕೊಂಡಿರುವವಳೂ ಆಗಿ ಆ ಬ್ರಹ್ಮನ ದೃಷ್ಟಿಗೆ ಗೋಚರಳಾದಳು.

೫೩. ಪ್ರಪಂಚಕ್ಕೆಲ್ಲಾ ಗುರುವಾದ ಬ್ರಹ್ಮನು ತನ್ನ ಎದುರಿನಲ್ಲಿಯೇ ಪ್ರತ್ಯಕ್ಷವಾಗಿ ನಿಂತಿರುವ ದೇವಿಯನ್ನು ನೋಡಿ ಭಕ್ತಿಯಿಂದ ಬಗ್ಗಿ ನಮಸ್ಕರಿಸಿ ಸ್ತೋತ್ರಮಾಡಿದನು.

॥ ಬ್ರಹ್ಮೋವಾಚ ॥

ನಮೋ ನಮಸ್ತೇ ಜಗತಃ ಪ್ರವೃತ್ತಿ-
ನಿವೃತ್ತಿರೂಪೇ ಸ್ಥಿತಿಸರ್ಗರೂಪೇ । ॥ ೫೪ ॥
ಚರಾಚರಾಣಾಂ ಭವತೀ ಚ ಶಕ್ತಿಃ
ಸನಾತನೀ ಸರ್ವವಿಮೋಹನೀತಿ ॥ ೫೫ ॥
ಯಾ ಶ್ರೀಃ ಸದಾ ಕೇಶವಮೂರ್ತಿಮಾಯಾ
ವಿಶ್ವಂಭರಾ ಯಾ ಸಕಲಂ ಬಿಭರ್ತಿ ।
ಹ್ರೀರ್ಯೋಗಿನೀ ಯಾ ಮಹಿತಾ ಮನೋಜ್ಞಾ
ಸಾ ತ್ವಂ ನಮಸ್ತೇ ಪರಮಾರ್ಥಸಾರೇ ॥ ೫೬ ॥
ಯಮಾದಿಪೂತೇ ಹೃದಿ ಯೋಗಿನೋ ಯಾಂ
ವಿಭಾವಯಂತಿ ಪ್ರಮಿತಿಪ್ರತೀತಾಂ ।
ಪ್ರಕಾಶಶುದ್ಧಾದಿಯುತಾಂ ವಿರಾಗಾಂ
ಸಾತ್ವಂ ಹಿ ವಿದ್ಯಾ ವಿವಿಧಾ ಬಲಂ ವಾ ॥ ೫೭ ॥

೫೪—೫೫. ಬ್ರಹ್ಮನು ಹೇಳಿದನು :—ಓ ದೇವಿಯೇ, ನಿನಗೆ ಅನೇಕ ನಮಸ್ಕಾರಗಳು. ಪ್ರಾಣಿಗಳು ಜನ್ಮಮರಣರೂಪವಾದ ಸಂಸಾರಬಂಧನದಲ್ಲಿ ಅಜ್ಞಾನದಿಂದ ತೊಳಲುತ್ತಿರುವ ಪ್ರವೃತ್ತಿಯೆಂಬ ಸ್ಥಿತಿಯೂ, ಆ ಪ್ರಾಣಿಗಳು ನಿನ್ನ ಸ್ವರೂಪವನ್ನು ತಿಳಿಸುವ ಜ್ಞಾನದಿಂದ ಸಂಸಾರ ಬಂಧನವನ್ನು ನೀಗಿ ಮುಕ್ತಿಯನ್ನು ಪಡೆಯಲು ಅನುಸರಿಸುತ್ತಿರುವ ನಿವೃತ್ತಿಯೆಂಬ ಸ್ಥಿತಿಗಳ ಸ್ವರೂಪವೂ ನೀನೇ ಆಗಿರುವೆ. ಜಗತ್ತಿನ ಸೃಷ್ಟಿ ಮತ್ತು ಪಾಲನೆಗಳ ರೂಪಳೂ ನೀನೇ. ಸಮಸ್ತ ಚರಾಚರ ಪ್ರಾಣಿಗಳಿಗೆ ನೀನು ಆದಿಶಕ್ತಿಯು, ನೀನು ಸರ್ವರನ್ನೂ ಮೋಹಗೊಳಿಸುವವಳು. ಇಂತಹ ನಿನಗೆ ನಮಸ್ಕಾರವು.

೫೬. ನೀನು ವಿಷ್ಣುವನ್ನು ಮೋಹಗೊಳಿಸುವ ಲಕ್ಷ್ಮಿಯು, ಜಗತ್ತನ್ನು ಧರಿಸುವ ಆದಿಮಾಯೆಯು, ಹ್ರೀಂಕಾರರೂಪಳು, ಯೋಗದಿಂದ ಲಭ್ಯಳು. ಪೂಜ್ಯಳು, ಸುಂದರಿಯು, ಜಗತ್ತಿನಲ್ಲಿ ಪರಮಾರ್ಥ ತತ್ವ ಸ್ವರೂಪಳು. ಇಂತಹ ನಿನಗೆ ನಮಸ್ಕಾರವು.

೫೭. ಯೋಗಿಗಳು ಯಮನಿಯಮಾದಿಗಳಿಂದ ಶುದ್ಧವಾದ ತಮ್ಮ ಹೃದಯದಲ್ಲಿ, ನಿರ್ಮಲ ಪ್ರಕಾಶಸ್ವರೂಪವಾದ, ಅವಿದ್ಯೆಯೇ ಮೊದಲಾದ ದೋಷವಿಲ್ಲದ ಯಾವ ವಸ್ತುವನ್ನು ಸಾಕ್ಷಾತ್ಕರಿಸುವರೋ ಆ ವಸ್ತುವೂ ನೀನೇ. ಮತ್ತು ನೀನು ಅನೇಕ ಬಗೆಯ ವಿದ್ಯೆಗಳ ಮತ್ತು ಶಕ್ತಿಗಳಸ್ವರೂಪಳು.

ಕೂಟಸ್ಥಮವ್ಯಕ್ತಮಚಿಂತ್ಯರೂಪಂ
ತ್ವಂ ಬಿಭ್ರತೀ ಕಾಲಮಯಂ ಜಗಂತಿ ।
ವಿಕಾರಬೀಜಂ ಪ್ರಕರೋಷಿ ನಿತ್ಯಂ
ಪ್ರುತ್ಸಾನಿ ನ್ಯೂನಾನ್ಯಥ ಮಧ್ಯಮಾನಿ ॥ ೫೪ ॥

ಸತ್ತ್ವಂ ರಜೋಽಥೋ ತಮ ಇತ್ಯಮೀಷಾಂ
ವಿಕಾರಹೀನಾ ಸಮವಸ್ಥಿತಿರ್ಯಾ ।
ಸಾ ತ್ವಂ ಗುಣಾನಾಂ ಜಗದೇಕಹೇತು-
ರ್ಬಾಹ್ಯಾಂತರಾಲಂ ಭವತೀವ ಯಾತಿ ॥ ೫೫ ॥

ಅಶೇಷಜಗತಾಂ ಬೀಜೇ ಜ್ಞೇಯಜ್ಞಾನಸ್ವರೂಪಿಣಿ ॥
ಜಗದ್ಧಿತಾಯೈ ಜಗತಾಂ ವಿಷ್ಣುಮಾಯೇ ನಮೋಽಸ್ತುತೇ ॥

---

೫೪. ನೀನು ಯಾವ ವಿಕಾರವೂ ಇಲ್ಲದ, ಕಣ್ಣಿಗೆ ಕಾಣಿಸದಿರುವಂತಹ ಮತ್ತು ಊಹಿಸಲಸಾಧ್ಯವಾದ ಸ್ವರೂಪವುಳ್ಳವಳು. ಮತ್ತು ಕಾಲಸ್ವರೂಪ. ಳಾದ ನೀನು ಜಗತ್ತಿಗೆ ಕಾರಣವಾದ ಕಾಲವನ್ನೂ, ಹೊಸದು, ಮಧ್ಯ ಮರೀತಿಯದು, ಹಳೆಯದು ಎಂಬ ಜಗತ್ತುಗಳನ್ನೂ ಸೃಷ್ಟಿಮಾಡುತ್ತೀಯೆ.

೫೫. ಮತ್ತು ನಿನ್ನಲ್ಲಿ ಸತ್ತ್ವರಜಸ್ತಮೋಗುಣಗಳು ಯಾವ ವಿಕಾರ ವನ್ನೂ ಹೊಂದದೇ, ಎಂದರೆ ಹೆಚ್ಚು ಕಡಮೆಯಿಲ್ಲದೆ, ಸಮವಾಗಿರುತ್ತವೆ. ಈ ಸಮತಾಸ್ಥಿತಿಯಲ್ಲಿರುವ ನೀನು ಜಗತ್ತಿಗೆ ಕಾರಣವಾದ ಸತ್ತ್ವರಜಸ್ತ ಮೋಗುಣಗಳ ಮೂಲಕ, ಎಂದರೆ ಅವುಗಳನ್ನು ವಿಷಮಾವಸ್ಥೆಗೆ ತರುವುದರ ಮೂಲಕ, ಜಗತ್ತನ್ನು ಸೃಷ್ಟಿಮಾಡಿ ಅದರ ಒಳಗೂ ಹೊರಗೂ ವ್ಯಾಪಿಸಿ ಪ್ರಕಾಶಿಸುತ್ತೀಯೆ.

ಓ ಸಮಸ್ತ ಜಗತ್ತಿಗೂ ಕಾರಣಸ್ವರೂಪಳೇ, ನಿನಗೆ ನಮಸ್ಕಾರವು; ವಿಷಯ ಮತ್ತು ಜ್ಞಾನ ಇವುಗಳ ಸ್ವರೂಪಳೇ, ಜಗತ್ತಿಗೆ ಕಲ್ಯಾಣವನ್ನುಂಟು ಮಾಡುವ ಓ ವಿಷ್ಣುಮಾಯೆಯೇ, ನಿನಗೆ ನಮಸ್ಕಾರವು.

॥ ಮಾರ್ಕಂಡೇಯ ಉವಾಚ ॥

ಇತ್ಯಾಕರ್ಣ್ಯ ವಚಸ್ತಸ್ಯ ಕಾಲೀ ಲೋಕವಿಮೋಹಿನೀ ।
ಬ್ರಹ್ಮಾಣಮೂಚೇ ಜಗತಾಂ ಸ್ರಷ್ಟಾರಂ ಘನಶಬ್ದವತ್ ॥ ೬೦ ॥

॥ ದೇವ್ಯುವಾಚ ॥

ಬ್ರಹ್ಮನ್ ಕಿಮರ್ಥಂ ಭವತಾ ಸ್ತುತಾಹಮವಧಾರಯ ।
ಉಚ್ಯತಾಂ ಯದಧೃಷ್ಯೋಽಸ್ತಿ ತಚ್ಛೀಘ್ರಂ ಪುರತೋ ಮಮ ॥ ೬೧ ॥

ಪ್ರತ್ಯಕ್ಷಂ ಮಯಿ ಜಾತಾಯಾಂ ಸಿದ್ಧಿಃ ಕಾರ್ಯಸ್ಯ ನಿಶ್ಚಿತಾ ।
ತಸ್ಮಾತ್ತ್ವೇ ವಾಂಛಿತಂ ಬ್ರೂಹಿ ಯತ್ಕರಿಷ್ಯಾಮಿ ಭಾವಿತಾ ॥ ೬೨ ॥

॥ ಬ್ರಹ್ಮೋವಾಚ ॥

ಏಕಶ್ಚರತಿ ಭೂತೇಶೋ ನ ದ್ವಿತೀಯಾಂ ಸಮೀಹತೇ ।
ತಂ ಮೋಹಯ ಯಥಾ ದಾರಾನ್ಸ್ವಯಂ ಸ ಚ ಜಿಘೃಕ್ಷತಿ ॥ ೬೩ ॥

---

೬೦. ಮಾರ್ಕಂಡೇಯ ಮುನಿಯು ಹೇಳಿದನು:— ಬ್ರಹ್ಮನ ಈ ರೀತಿಯಾದ ಮಾತುಗಳನ್ನು ಕೇಳಿ, ಲೋಕಕ್ಕೆ ಮೋಹವನ್ನುಂಟುಮಾಡುವ ಕಾಲಿಯು ಸೃಷ್ಟಿಕರ್ತನಾದ ಬ್ರಹ್ಮನನ್ನು ಕುರಿತು ಮೇಘದಂತೆ ಗಂಭೀರವಾದ ಧ್ವನಿಯಿಂದ ಹೀಗೆ ಹೇಳಿದಳು.

೬೧. ದೇವಿಯು ಹೇಳಿದಳು:— ಓ ಬ್ರಹ್ಮನೇ, ನೀನು ನನ್ನನ್ನು ಏತಕ್ಕೋಸ್ಕರ ಸ್ತುತಿಸುತ್ತಿರುವೆ? ಅಸಾಧ್ಯವಾದ ಯಾವ ಕಾರ್ಯವು ಒದಗಿರುವುದು? ಅದನ್ನು ಬೇಗ ನನ್ನೆದುರಿನಲ್ಲಿ ಹೇಳು.

೬೨. ನಾನು ಪ್ರತ್ಯಕ್ಷಳಾದ ಮೇಲೆ ಕಾರ್ಯಸಿದ್ಧಿಯು ಆಗಿಯೇ ಆಗುತ್ತದೆ. ಆದುದರಿಂದ ನಿನಗೆ ಬೇಕಾದುದೇನು? ಅದನ್ನು ಹೇಳು, ಮಾಡಿಕೊಡುತ್ತೇನೆ.

೬೩. ಬ್ರಹ್ಮನು ಹೇಳಿದನು:—ಓ ದೇವಿಯೇ, ಶಂಕರನು ಒಂಟಿಯಾಗಿ ತಿರುಗುತ್ತಿರುವನು. ಅವನು ಹೆಂಡತಿಯನ್ನು ಅಪೇಕ್ಷಿಸುವುದಿಲ್ಲವು. ಆದುದರಿಂದ ಅವನು ತಾನಾಗಿಯೇ ಪತ್ನಿಯನ್ನು ಅಪೇಕ್ಷಿಸುವಂತೆ ಅವನನ್ನು ಮೋಹಗೊಳಿಸು.

ತ್ವದೃತೇ ತಸ್ಯ ನೋ ಕಾಚಿದ್ಭವಿಷ್ಯತಿ ಮನೋಹರಾ ।
ತಸ್ಮಾತ್ತ್ವಮೇಕರೂಪೇಣ ಭವಸ್ಯ ಭವ ಮೋಹಿನೀ ॥ ೬೪ ॥

ಯಥಾ ಧೃತಶರೀರಾ ತ್ವಂ ಲಕ್ಷ್ಮೀರೂಪೇಣ ಕೇಶವಂ ।
ಆಮೋದಯಸಿ ವಿಶ್ವಸ್ಯ ಹಿತಾಯೈತಂ ತಥಾ ಕುರು ॥ ೬೫ ॥

ಕಾಂತಾಭಿಲಾಷಮಾತ್ರಂ ಮೇ ನಿನಿಂದ ವೃಷಭಧ್ವಜಃ ।
ಕಥಂ ಪುನಃ ಸ ವನಿತಾಂ ಸ್ವೇಚ್ಛಯಾ ಸಂಗ್ರಹಿಷ್ಯತಿ ॥ ೬೬ ॥

ಹರೇಽಗೃಹೀತಕಾಂತೇ ತು ಕಥಂ ಸೃಷ್ಟಿಃ ಪ್ರವರ್ತತೇ ।
ಆದ್ಯಂತಮಧ್ಯಹೇತೌಚ ತಸ್ಮಿಞ್ಛಂಭೌ ವಿರಾಗಿಣಿ ॥ ೬೭ ॥

ಇತಿ ಚಿಂತಾಪರೋ ನಾಹಂ ತ್ವದನ್ಯಂ ಶರಣಂ ತ್ವಿಹ ।
ಲಬ್ಧವಾಂಸ್ತೇನ ವಿಶ್ವಸ್ಯ ಹಿತಾಯೈತತ್ಕುರುಷ್ವ ಮೇ ॥ ೬೮ ॥

---

೬೪. ನೀನು ಹೊರತು ಇನ್ನಾವಳೂ ಆ ಶಂಕರನ ಮನಸ್ಸನ್ನು ಅಪಹರಿಸಲಾರಳು. ಆದಕಾರಣ ನೀನೇ ನಿನ್ನ ರೂಪದಿಂದ ಅವನನ್ನು ಮೋಹಗೊಳಿಸು.

೬೫. ನೀನು ಲಕ್ಷ್ಮಿಯ ರೂಪವನ್ನು ಧರಿಸಿ ವಿಷ್ಣುವನ್ನು ಹೇಗೆ ಮೋಹಗೊಳಿಸಿದೆಯೋ, ಅದರಂತೆ ಶಂಕರನನ್ನು ಮೋಹಗೊಳಿಸಿ ಜಗತ್ತಿಗೆ ಮಂಗಳವನ್ನುಂಟುಮಾಡು.

೬೬. ನನ್ನಲ್ಲಿ ಉಂಟಾದ ಸ್ತ್ರೀಯಲ್ಲಿಯ ಅಭಿಲಾಷೆಯನ್ನೇ ಆ ಶಂಕರನು ನಿಂದಿಸಿದನು. ಅಂಥವನು ತನ್ನ ಸ್ವಂತ ಇಚ್ಛೆಯಿಂದ ಸ್ತ್ರೀಯನ್ನು ಹೇಗೆ ಪರಿಗ್ರಹಿಸುವನು ?

೬೭. ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣಕರ್ತನಾದ ಆ ಶಂಕರನು ಹೀಗೆ ವಿರಕ್ತನಾಗಿ ಪತ್ನಿಯನ್ನು ಸ್ವೀಕರಿಸದಿದ್ದರೆ, ಮುಂದೆ ಸೃಷ್ಟಿಯು ನಡೆಯುವುದೆಂತು ?

೬೮. ಈ ರೀತಿಯಾಗಿ ಚಿಂತೆಯಲ್ಲಿ ಮುಳುಗಿ ನಾನು ನಿನ್ನ ಹೊರತು ಇನ್ನಾರೂ ಗತಿಯಿಲ್ಲವೆಂದು ನಿನ್ನ ಬಳಿಗೆ ಬಂದು ನಿನ್ನ ಮರೆಹೊಕ್ಕಿರುತ್ತೇನೆ. ನೀನು ಜಗತ್ತಿನ ಕಲ್ಯಾಣಕ್ಕಾಗಿ ನಾನು ಹೇಳಿದ ಕಾರ್ಯವನ್ನು ಮಾಡು.

ನ ವಿಷ್ಣುರಸ್ಯ ಮೋಹಾಯ ನ ಲಕ್ಷ್ಮೀರ್ನ ಮನೋಭವಃ ।
ನ ಚಾಸ್ಯಹಂ ಜಗನ್ಮಾತಸ್ತಸ್ಮಾತ್ತ್ವಂ ಮೋಹಯೇಶ್ವರಂ ॥ ೯೯ ॥

ಕೀರ್ತಿಸ್ತು ಸರ್ವಭೂತಾನಾಂ ಯಥಾ ತ್ವಂ ಹ್ರೀ ಯಥಾತ್ಮನಾಂ ।
ಯಥಾ ವಿಷ್ಣೋಃ ಪ್ರಿಯೈಕಾ ತ್ವಂ ತಥಾ ಸಂಮೋಹಯೇಶ್ವರಂ ॥ ೭೦॥

॥ ಮಾರ್ಕಂಡೇಯ ಉವಾಚ ॥

ಅಥ ಬ್ರಹ್ಮಾಣಮಾಭಾಷ್ಯ ಕಾಲೀ ಯೋಗಮಯೀ ಪುನಃ ।
ಯದುವಾಚ ಮಹಾಭಾಗಾಸ್ತಚ್ಛೃಣ್ವಂತು ದ್ವಿಜೋತ್ತಮಾಃ ॥ ೭೧ ॥

॥ ಇತಿ ಶ್ರೀಕಾಲಿಕಾಪುರಾಣೇ ಪಂಚಮೋಽಧ್ಯಾಯಃ ॥

---

೯೯. ವಿಷ್ಣುವೂ, ಲಕ್ಷ್ಮಿಯೂ, ಮನ್ಮಥನೂ, ನಾನೂ ಆ ಶಂಕರನನ್ನು ಮೋಹಗೊಳಿಸಲಾರೆವು. ಆದುದರಿಂದ, ಓ ಜಗನ್ಮಾತೆಯೇ, ನೀನೇ ಆ ಶಂಕರನನ್ನು ಮೋಹಗೊಳಿಸು.

೭೦. ಸಮಸ್ತ ಪ್ರಾಣಿಗಳೂ ಹೇಗೆ ಕೀರ್ತಿಗೆ ವಶವರ್ತಿಗಳೋ, ಜಿತೇಂದ್ರಿಯರಾದ ತಪಸ್ವಿಗಳು ಹ್ರೀಂಕಾರ ರೂಪಳಾದ ನಿನಗೆ ಹೇಗೆ ವಶವರ್ತಿಗಳೋ, ವಿಷ್ಣುವು ಹೇಗೆ ಲಕ್ಷ್ಮಿಗೆ ವಶವರ್ತಿಯೋ, ಹಾಗೆ ನೀನು ಈಶ್ವರನನ್ನು ಮೋಹಗೊಳಿಸಿ ನಿನ್ನ ವಶವರ್ತಿಯಾಗುವಂತೆ ಮಾಡು.

೭೧. ಮಾರ್ಕಂಡೇಯಮುನಿಯು ಹೇಳಿದನು:—ಎಲೈ ಪೂಜ್ಯರಾದ ಕಮಠನೇ ಮೊದಲಾದ ಬ್ರಾಹ್ಮಣೋತ್ತಮರೇ, ಆಮೇಲೆ ಯೋಗ ನಿದ್ರಾ ರೂಪಳಾದ ಕಾಳಿಯು ಬ್ರಹ್ಮನನ್ನು ಕುರಿತು ಮತ್ತೇನನ್ನು ಹೇಳಿದಳೆಂಬುದನ್ನು ಹೇಳುವೆನು, ಕೇಳಿ.

ಇಲ್ಲಿಗೆ ಕಾಲಿಕಾಪುರಾಣದಲ್ಲಿ ಐದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಅಥ ಶ್ರೀಕಾಲಿಕಾಪುರಾಣೇ ಷಷ್ಠೋಽಧ್ಯಾಯಃ ॥

॥ ಆರನೆಯ ಅಧ್ಯಾಯವು ॥

॥ ದೇವ್ಯುವಾಚ ॥

ಯದುಕ್ತಂ ಭವತಾ ಬ್ರಹ್ಮನ್ ಸಮಸ್ತಂ ಸತ್ಯಮೇವ ತತ್ ।
ಮದ್ಭತೇ ಮೋಹಯಿತ್ರೀಹ ಶಂಕರಸ್ಯ ನ ವಿದ್ಯತೇ ॥ ೧ ॥

ಹರೇಽಗೃಹೀತದಾರೇ ತು ಸೃಷ್ಟಿರ್ನೈಷಾ ಸನಾತನೀ ।
ಭವಿಷ್ಯತೀತಿ ತತ್ಸತ್ಯಂ ಭವತಾ ಪ್ರತಿಪಾದಿತಂ ॥ ೨ ॥

ಮಮಾಪಿ ಮೋಹನೇ ಯತ್ನೋ ವಿದ್ಯತೇಽಸ್ಯ ಜಗತ್ಪತೇಃ ।
ತ್ವದ್ವಾಕ್ಯಾದ್ದ್ವಿಗುಣೋ ಮೇಽದ್ಯ ಪ್ರಯತ್ನೋಽಭೂತ್ಸನಿರ್ಭರಃ ॥ ೩ ॥

---

೧. ದೇವಿಯು ಬ್ರಹ್ಮನಿಗೆ ಹೀಗೆ ಹೇಳಿದಳು:—ಎಲೈ ಬ್ರಹ್ಮನೇ, ನೀನು ಹೇಳಿದುದೆಲ್ಲವೂ ನಿಜವಾದುದು; ನನ್ನ ಹೊರತು ಶಂಕರನನ್ನು ಮೋಹಗೊಳಿಸುವವರು ಯಾರೂ ಇಲ್ಲವು.

೨. ಶಂಕರನು ಪತ್ನಿಯನ್ನು ಸ್ವೀಕರಿಸದಿದ್ದರೆ, ಆನಾದಿಯಾಗಿ ನಡೆದು ಬರುತ್ತಿರುವ ಈ ಸೃಷ್ಟಿಯು ಮುಂದೆ ನಡೆಯಲಾರದೆಂದು ನೀನು ಹೇಳಿದ ಮಾತೂ ನಿಜವು.

೩. ನಾನೂ ಸಹ ಜಗದೊಡೆಯನಾದ ಆ ಶಂಕರನನ್ನು ಮೋಹ ಗೊಳಿಸಬೇಕೆಂಬ ಯತ್ನವುಳ್ಳವಳಾಗಿದ್ದೆನು. ಈಗ ನಿನ್ನ ಮಾತಿನಿಂದ ಆ ನನ್ನ ಯತ್ನವು ದ್ವಿಗುಣವಾಗಿರುತ್ತದೆ.

ಅಹಂ ತಥಾ ಯತಿಷ್ಯಾಮಿ ಯಥಾ ದಾರಪರಿಗ್ರಹಂ ।
ಹರಃ ಕರಿಷ್ಯತ್ಯವಶಃ ಸ್ವಯಮೇವ ವಿಮೋಹಿತಃ ॥ ೪ ॥

ಚಾರ್ವೀಂ ಮೂರ್ತಿಮಹಂ ಧೃತ್ವಾ ತಸ್ಯೈವ ವಶವರ್ತಿನೀ ।
ಭವಿಷ್ಯಾಮಿ ಮಹಾಭಾಗ ಯಥಾ ವಿಷ್ಣೋರ್ಹರಿಪ್ರಿಯಾ ॥ ೫ ॥

ಯಥಾ ಸೋಽಪಿ ಮಮೈವೇಹ ವಶವರ್ತೀ ಸದಾಭವೇತ್ ।
ತಥಾ ಚಾಹಂ ಕರಿಷ್ಯಾಮಿ ಯಥೇತರಜನಂ ಹರಂ ॥ ೬ ॥

ಪ್ರತಿಸರ್ಗಾದಿಮಧ್ಯಂತಮಹಂ ಶಂಭುಂ ನಿರಾಕುಲಂ ।
ಸ್ತ್ರೀರೂಪೇಣಾನುಯಾಸ್ಯಾಮಿ ವಿಶೇಷೇಣಾನ್ಯತೋ ವಿಧೇ ॥ ೭ ॥

ಉತ್ಪನ್ನಾ ದಕ್ಷಜಾಯಾಯಾಂ ಚಾರುರೂಪೇಣ ಶಂಕರಂ ।
ಅಹಂ ಸಭಾಜಯಿಷ್ಯಾಮಿ ಪ್ರತಿಸರ್ಗಂ ಪಿತಾಮಹ ॥ ೮ ॥

---

೪. ಶಂಕರನು ಮೋಹಗೊಂಡವನಾಗಿ ಮತ್ತೊಬ್ಬರ ಪ್ರೇರಣೆಯಿಲ್ಲದೆ ತಾನೇ ಪತ್ನೀಪರಿಗ್ರಹವನ್ನು ಮಾಡುವಂತೆ ನಾನು ಯತ್ನಿಸುತ್ತೇನೆ.

೫. ಎಲೈ ಭಾಗ್ಯಶಾಲಿಯಾದ ಬ್ರಹ್ಮನೇ ನಾನು ಸುಂದರವಾದ ರೂಪವನ್ನು ಧರಿಸಿ, ವಿಷ್ಣುವಿಗೆ ಲಕ್ಷ್ಮಿಯಿರುವಂತೆ ಆ ಶಂಕರನ ಅಧೀನಳಾಗಿರುತ್ತೇನೆ.

೬. ಆ ಶಂಕರನೂ ಸಹ ಸಾಮಾನ್ಯಜನರಂತೆ ಯಾವಾಗಲೂ ನನ್ನ ವಶದಲ್ಲಿರುವಂತೆ ಮಾಡುತ್ತೇನೆ.

೭. ಎಲೈ ಬ್ರಹ್ಮನೇ ಸೃಷ್ಟಿಸ್ಥಿತಿಲಯಗಳಿಗೆ ಕರ್ತನಾದ ಮತ್ತು ಚಿಂತಾರಹಿತನಾದ ಆ ಶಂಕರನನ್ನು ನಾನು ಸ್ತ್ರೀರೂಪದಿಂದ ವಿಶೇಷವಾಗಿ ಅನುಸರಿಸುತ್ತೇನೆ.

೮. ಎಲೈ ಬ್ರಹ್ಮನೇ, ಪ್ರತಿಯೊಂದು ಕಲ್ಪದಲ್ಲಿಯೂ ನಾನು, ದಕ್ಷ ಬ್ರಹ್ಮನ ಪತ್ನಿಯಲ್ಲಿ ಸುಂದರವಾದ ರೂಪವುಳ್ಳವಳಾಗಿ ಜನಿಸಿ, ಆ ಶಂಕರನನ್ನು ಪತ್ನೀರೂಪದಿಂದ ಉಪರಿಚರಿಸುತ್ತೇನೆ.

ತತಸ್ತು ಯೋಗನಿದ್ರಾಂ ಮಾಂ ವಿಷ್ಣುಮಾಯಾಂ ಜಗನ್ಮಯಾಂ ।
ಶಾಂಕರೀತಿ ವದಿಷ್ಯಂತಿ ರುದ್ರಾಣೀತಿ ದಿವೌಕಸಃ ॥ ೯ ॥

ಉತ್ಪನ್ನಮಾತ್ರಂ ಸತತಂ ಮೋಹಯೀ ಪ್ರಾಣಿನಂ ಯಥಾ ।
ತಥಾ ಸಂಮೋಹಯಿಷ್ಯಾಮಿ ಶಂಕರಂ ಪ್ರಮುಥಾಧಿಪಂ ॥ ೧೦ ॥

ಯಥಾನ್ಯಜಂತುರವನೌ ವರ್ತತೇ: ವನಿತಾವಶೇ ।
ತತೋಽಪ್ಯತಿ ಹರೋ ನಾಮಾವಶವರ್ತೀ ಭವಿಷ್ಯತಿ ॥ ೧೧ ॥

ವಿಭಿದ್ಯ ಭುವನಾಧೀನಾಂ ಲೀನಾಂ ಸ್ವಹೃದಯಾಂತರೇ ।
ಮಾಂ ವಿದ್ಯಾಚ್ಚ ಮಹಾದೇವೋ ಮೋಹಾತ್ಪ್ರತಿಗ್ರಹೀಷ್ಯತಿ ॥ ೧೨ ॥

---

೯. ಆ ಮೇಲೆ, ಯೋಗನಿದ್ರೆಯೂ, ಜಗದ್ರೂಪಳೂ, ವಿಷ್ಣು ಮಾಯೆಯೂ ಆದ ನನ್ನನ್ನು ದೇವತೆಗಳು ಶಂಕರೀ ಎಂದರೆ ಶಂಕರನ ಪತ್ನಿಯೆಂದೂ, ರುದ್ರಾಣೀ ಎಂದರೆ ರುದ್ರನ ಹೆಂಡತಿಯೆಂದೂ ಕರೆಯುತ್ತಾರೆ.

೧೦. ಹುಟ್ಟಿದೊಡನೆಯೇ ಪ್ರಾಣಿಗಳನ್ನು ಹಿಂದುಮುಂದಿನ ತಿಳಿವಳಿಕೆಯಿಲ್ಲದಂತೆ ಹೇಗೆ ಮೋಹಗೊಳಿಸುವೆನೋ ಅದರಂತೆ ಭೂತಾಧಿಪತಿಯಾದ ಶಂಕರನನ್ನೂ ಮೋಹಗೊಳಿಸುತ್ತೇನೆ.

೧೧. ಭೂಮಿಯಲ್ಲಿ ಮನುಷ್ಯರು ಹೇಗೆ ಸ್ತ್ರೀಯರ ಅಧೀನರಾಗಿರುವರೋ ಅದಕ್ಕಿಂತಲೂ ಹೆಚ್ಚಾಗಿ ಹರನು ಸ್ತ್ರೀಯ ಅಧೀನನಾಗಿರುವಂತೆ ಮಾಡುತ್ತೇನೆ.

೧೨. ಅವನ ವೈರಾಗ್ಯ ಬುದ್ಧಿಯನ್ನು ನಾಶಪಡಿಸಿ ಅವನ ಹೃದಯವನ್ನು ಸೂರೆ ಮಾಡಿದ ನನ್ನನ್ನು ಆ ಮಹಾದೇವನು ಮೋಹದಿಂದ ಹೆಂಡತಿಯಾಗಿ ಸ್ವೀಕರಿಸುತ್ತಾನೆ.

ಇತಿ ತಸ್ಮೈ ಸಮಾಭಾಷ್ಯ ಬ್ರಹ್ಮಣೇ ದ್ವಿಜಸತ್ತಮಾಃ ।
ವೀಕ್ಷ್ಯಮಾಣಾ ಜಗತ್ಸ್ರಷ್ಟಾ ತತ್ರೈವಾಂತರ್ದಧೇ ತತಃ ॥ ೧೩ ॥

ತಸ್ಯಾಮಂತರ್ಹಿತಾಯಾಂ ತು ಧಾತಾ ಲೋಕಪಿತಾಮಹಃ ।
ಜಗಾಮ ತತ್ರ ಭಗವಾನ್ ಸ್ಥಿತೋ ಯತ್ರ ಮನೋಭವಃ ॥ ೧೪ ॥

ಮುದಿತೋಽತ್ಯರ್ಥಮಭವನ್ಮಹಾಮಾಯಾವಚಃ ಸ್ಮರನ್ ।
ಕೃತಕೃತ್ಯಂ ತದಾತ್ಮಾನಂ ಮೇನೇ ಚ ಮುನಿಪುಂಗವಃ ॥ ೧೫ ॥

ಅಥ ದೃಷ್ಟ್ವಾ ಮಹಾತ್ಮಾನಂ ವಿರಿಂಚಿಂ ಮುದನಸ್ತಥಾ ।
ಗಚ್ಛಂತಂ ಹಂಸಯಾನೇನ ಚಾಭ್ಯುತ್ತಸ್ಥೌ ತ್ವರಾನ್ವಿತಃ ॥ ೧೬ ॥

ಆಸನ್ನಂ ತಮುಪಾಸಾದ್ಯ ಹರ್ಷೋತ್ಫುಲ್ಲವಿಲೋಚನಃ ।
ನನಂದೇ ಸರ್ವಲೋಕೇಶಂ ಮೋದಯುಕ್ತಂ ಮನೋಭವಃ ॥ ೧೭ ॥

---

೧೩. ಮಾರ್ಕಂಡೇಯ ಮುನಿಯು ಹೇಳಿದನು: —ಎಲೈ ಬ್ರಾಹ್ಮಣೋತ್ತಮರೇ, ಆ ದೇವಿಯು ಬ್ರಹ್ಮನಿಗೆ ಹೀಗೆ ಹೇಳಿ, ಅವನು ನೋಡುತ್ತಿರುವಂತೆಯೇ ಅಲ್ಲಿಯೇ ಅಂತರ್ಧಾನಳಾದಳು.

೧೪. ಆ ದೇವಿಯು ಅಂತರ್ಧಾನಳಾದಮೇಲೆ ಜಗತ್ತಿಗೆ ಪಿತಾಮಹನೆನಿಸಿದ ಬ್ರಹ್ಮನು ಮನ್ಮಥನಿರುವಲ್ಲಿಗೆ ಹೊರಟು ಹೋದನು.

೧೫. ಓ ಮುನಿಶ್ರೇಷ್ಠರೇ, ಆ ಆದಿಶಕ್ತಿಯಾದ ದೇವಿಯು ಆಡಿದ ಮಾತುಗಳನ್ನು ಸ್ಮರಿಸುತ್ತಾ ಆ ಬ್ರಹ್ಮನು ಬಹಳ ಸಂತೋಷಗೊಂಡು ತಾನು ಕೃತಕೃತ್ಯನಾದೆನೆಂದು ತಿಳಿದನು.

೧೬. ಆ ಮೇಲೆ ಮಹಾತ್ಮನಾದ ಬ್ರಹ್ಮನು ಹಂಸದ ಮೇಲೆ ಕುಳಿತು ಆಕಾಶಮಾರ್ಗವಾಗಿ ಬರುತ್ತಿರುವುದನ್ನು ನೋಡಿ ಮನ್ಮಥನು ಬೇಗನೆ ಎದ್ದು ನಿಂತುಕೊಂಡನು.

೧೭. ತನ್ನೆದುರಿಗೆ ಬಂದು ನಿಂತು ಸಂತೋಷದಿಂದಿರುವ ಆ ಬ್ರಹ್ಮನನ್ನು ನೋಡಿ ಮನ್ಮಥನು ಸಂತೋಷದಿಂದ ಅರಳಿದ ಕಣ್ಣುಗಳುಳ್ಳವನಾಗಿ ಅವನಿಗೆ ನಮಸ್ಕರಿಸಿದನು.

ಅಥಾಹ ಭಗವಾನ್ಧಾತಾ ಪ್ರೀತ್ಯಾ ಮಧುರಗದ್ಗದಂ ।
ಮದನಂ ಮೋದಯನ್ಸೂಕ್ತಂ ಯದ್ದೇವ್ಯಾ ವಿಷ್ಣುಮಾಯಯಾ ॥೧೮॥

॥ ಬ್ರಹ್ಮೋವಾಚ ॥

ಯದಾಹ ವತ್ಸ ಶರ್ವಸ್ಯ ಮೋಹನೇ ತ್ವಂ ಪುರಾ ವಚಃ ।
ಅನುಮೋಹನಕರ್ತ್ರೀ ಯಾ ತಾಂ ಸೃಜೇತಿ ಮನೋಭವ ॥ ೧೯ ॥

ತದರ್ಥಂ ಸಂಸ್ತುತಾ ದೇವೀ ಯೋಗನಿದ್ರಾ ಜಗನ್ಮಯಾ ।
ಏಕತಾನೇನ ಮನಸಾ ಮಯಾ ಮಂದರಕಂದರೇ ॥ ೨೦ ॥

ಸ್ವಯಮೇವ ತಯಾ ವತ್ಸ ಪ್ರತ್ಯಕ್ಷೀಭೂತಯಾ ಮಮ ।
ತುಷ್ಟ್ಯಾಂಗೀಕೃತಂ ಶಂಭುರ್ಮೋಹನೀಯೋ ಮಯೇತಿ ವೈ ॥ ೨೧ ॥

ತಯಾಚ ದಕ್ಷಭವನೇ ಸ ಸಮುತ್ಪನ್ನಯಾ ಹರಃ ।
ಮೋಹನೀಯಸ್ತು ನ ಚಿರಾದಿತಿ ಸತ್ಯಂ ಮನೋಭವ ॥ ೨೨ ॥

---

೧೮. ಆ ಮೇಲೆ ಪೂಜ್ಯನಾದ ಬ್ರಹ್ಮನು, ಪ್ರೀತಿಯಿಂದ ಕೂಡಿ ಮಧುರವೂ, ತೊದಲುತ್ತಿರುವುದೂ ಆದ ಮಾತಿನಿಂದ ಮನ್ಮಥನನ್ನು ಸಂತೋಷಗೊಳಿಸುತ್ತಾ ವಿಷ್ಣುಮಾಯೆಯು ಹೇಳಿದುದನ್ನು ಹೇಳಿದನು.

೧೯–೨೦. ಬ್ರಹ್ಮನು ಹೇಳಿದನು:—ಎಲೈ ಮನ್ಮಥನೇ ಹಿಂದೆ ನೀನು—ಈಶ್ವರನನ್ನು ಮೋಹಗೊಳಿಸಲು ಸಹಾಯಕಳಾದ ಸ್ತ್ರೀಯನ್ನು ಸೃಷ್ಟಿಸು ಎಂದು ಹೇಳಿದೆಯಷ್ಟೆ? ಆದಕ್ಕಾಗಿಯೇ ನಾನು ಮಂದರಪರ್ವತದ ಗುಹೆಯಲ್ಲಿ ಯೋಗನಿದ್ರಾರೂಪಳಾದ ಆ ದೇವಿಯನ್ನು ಒಂದೇ ಮನಸ್ಸಿನಿಂದ ಸ್ತೋತ್ರ ಮಾಡಿದೆನು.

೨೧. ಆ ಮೇಲೆ ನನ್ನ ಸ್ತೋತ್ರದಿಂದ ಸಂತುಷ್ಟಳಾಗಿ ಆ ದೇವಿಯು ನನ್ನೆದುರಿಗೆ ಪ್ರತ್ಯಕ್ಷವಾಗಿ—ತಾನೇ ಈಶ್ವರನನ್ನು ಮೋಹಗೊಳಿಸುವೆನೆಂದು ಒಪ್ಪಿಕೊಂಡಳು.

೨೨. ಎಲೈ ಮನ್ಮಥನೇ ಆವಳು ದಕ್ಷಬ್ರಹ್ಮನ ಮಗಳಾಗಿ ಜನಿಸಿ ಸ್ವಲ್ಪ ಕಾಲದಲ್ಲಿಯೇ ಶಂಕರನನ್ನು ಮೋಹಗೊಳಿಸುವಳು. ಇದು ನಿಜವು.

॥ ಮದನ ಉವಾಚ ॥

ಬ್ರಹ್ಮನ್ ಕಾ ಯೋಗನಿದ್ರೇತಿ ವಿಖ್ಯಾತಾ ಯಾ ಜಗನ್ಮಯೀ ।
ಕಥಂ ತಯಾ ಹರೋ ವಶ್ಯಃ ಕಾರ್ಯಸ್ತಪಸಿ ಸಂಸ್ಥಿತಃ ॥ ೨೩ ॥

ಕಿಂ ಪ್ರಭಾವಾಥ ಸಾ ದೇವೀ ಕಾ ವಾ ಸಾ ಕುತ್ರ ಸಂಸ್ಥಿತಾ ।
ತದಹಂ ಶ್ರೋತುಮಿಚ್ಛಾಮಿ ತ್ವತ್ತೋ ಲೋಕಪಿತಾಮಹ ॥ ೨೪ ॥

ಯಸ್ಯ ತ್ಯಕ್ತಸಮಾಧೇಸ್ತು ನ ಕ್ಷಣಂ ದೃಷ್ಟಿಗೋಚರೇ ।
ಶಕ್ನುಮೋಽಪಿ ವಯಂ ಸ್ಥಾತುಂ ತಂ ಕಸ್ಮಾತ್ಸಾ ವಿಮೋಹಯೇತ್ ॥೨೫॥

ಜ್ವಲದಗ್ನಿಪ್ರಕಾಶಾಕ್ಷಂ ಜಟಾರಾಜಿಕರಾಲಿತಂ ।
ಶೂಲಿನಂ ವೀಕ್ಷ್ಯ ಕಃ ಸ್ಥಾತುಂ ಬ್ರಹ್ಮಞ್ಛಕ್ನೋತಿ ತತ್ಪುರಃ ॥ ೨೬ ॥

ತಸ್ಯ ತಾದೃಕ್ಸ್ವರೂಪಸ್ಯ ಸಮ್ಯಜ್ಮೋಹನವಾಂಛಯಾ ।
ಯಯಾಭ್ಯುಪೇತಂ ತಾಂ ಶ್ರೋತುಮಹಮಿಚ್ಛಾಮಿ ತತ್ತ್ವತಃ ॥ ೨೭ ॥

---

೨೩. ಮನ್ಮಥನು ಹೇಳಿದನು:—ಎಲೈ ಬ್ರಹ್ಮನೇ, ಜಗದ್ರೂಪಿಣಿಯಾಗಿ ಯೋಗ ನಿದ್ರೆಯೆಂದು ಪ್ರಸಿದ್ಧಳಾದವಳಾರು? ಆವಳು ವಿರಕ್ತಿಯಿಂದ ತಪಸ್ಸನ್ನು ಮಾಡುತ್ತಲಿರುವ ಶಂಕರನನ್ನು ಹೇಗೆ ವಶೀಕರಿಸುತ್ತಾಳೆ?

೨೪. ಆ ದೇವಿಯ ಮಹಿಮೆಯೆಂತಹುದು? ಆವಳಾರು? ಎಲ್ಲಿರುವಳು ಎಂಬುದನ್ನು ಎಲೈ ಪಿತಾಮಹನೇ ನಿನ್ನಿಂದ ಕೇಳಿ ತಿಳಿದುಕೊಳ್ಳಲು ನಾನು ಇಚ್ಛಿಸುತ್ತೇನೆ.

೨೫. ತಪಸ್ಸಮಾಧಿಯಿಂದ ಬಹಿರ್ಮುಖನಾಗಿರುವ ಯಾವ ಶಂಕರನನ್ನು ಒಂದು ಕ್ಷಣಕಾಲಮಾತ್ರವೂ ನಾವು ನೋಡಲಸಮರ್ಥರೋ ಅಂತಹ ಅವನನ್ನು ಆ ದೇವಿಯು ಆದೆಂತು ಮೋಹಗೊಳಿಸುವಳು?

೨೬. ಬೆಂಕಿಯನ್ನು ಗುಳುತ್ತಿರುವಂತೆ ಪ್ರಕಾಶಮಾನನಾದ ಕಣ್ಣುಗಳುಳ್ಳ ಮತ್ತು ಜಟೆಗಳ ಸಮೂಹದಿಂದ ಭಯಂಕರನಾಗಿ ಕಾಣುತ್ತಿರುವ ಆ ಶಂಕರನನ್ನು ನೋಡಿ ಅವನೆದುರು ನಿಲ್ಲಲು ಆದಾರು ಶಕ್ತರು?

೨೭. ಹೀಗೆ ನೋಡಲಸಾಧ್ಯವಾದ ರೂಪವುಳ್ಳ ಆ ಶಂಕರನನ್ನು, ತಾನು ಮೋಹಗೊಳಿಸುವೆನೆಂದು ಒಪ್ಪಿಗೊಂಡಿರುವ ಆ ದೇವಿಯು ಯಾರೆಂದು ಕೇಳಲಿಚ್ಛಿಸುತ್ತೇನೆ.

॥ ಮಾರ್ಕಂಡೇಯ ಉವಾಚ ॥

ಮುನೋಭವಸ್ಯ ವಚನಂ ಶ್ರುತ್ವಾಥ ಚತುರಾನನಃ
ವಿವಕ್ಷುರಪಿ ತದ್ವಾಕ್ಯಂ ಶ್ರುತ್ವಾ ಜೋತ್ಸಾಹಕಾರಕಂ ॥ ೨೮ ॥

ಶರ್ವಸ್ಯ ಮೋಹನೇ ಬ್ರಹ್ಮಾ ಚಿಂತಾವಿಷ್ಟೋಽಭವನ್ನ ಹಿ ।
ಸಮರ್ಥೋ ಮೋಹಿತುಮಿತಿ ನಿಶಶ್ವಾಸ ಮುಹುರ್ಮುಹುಃ ॥ ೨೯ ॥

ನಿಃಶ್ವಾಸಮಾರುತಾತ್ತಸ್ಯ ನಾನಾರೂಪಾ ಮಹಾಬಲಾಃ ।
ಜಾತಾ ಗಣಾ ಲೋಲಜಿಹ್ವಾ ಲೋಲಾಶ್ಚಾತಿಭಯಂಕರಾಃ ॥ ೩೦ ॥

ತುರಂಗವದನಾಃ ಕೇಚಿತ್ಕೇಚಿದ್ಗಜಮುಖಾಸ್ತಥಾ ।
ಸಿಂಹವ್ಯಾಘ್ರಮುಖಾಶ್ಚಾನ್ಯೇ ಶ್ವವರಾಹಖರಾನನಾಃ ॥ ೩೧ ॥

೨೮–೨೯. ಮಾರ್ಕಂಡೇಯ ಮುನಿಯು ಹೇಳಿದನು: — ಮನ್ಮಥನ ಉತ್ಸಾಹಜನಕವಾದ ಈ ರೀತಿಯ ಮಾತುಗಳನ್ನು ಕೇಳಿ ಬ್ರಹ್ಮನು ಅವನಿಗೆ ಪ್ರತ್ಯುತ್ತರವನ್ನು ಹೇಳಲು ಇಚ್ಛೆಯಿದ್ದರೂ, ಸಾಮಾನ್ಯಜನರು ಈಶ್ವರನನ್ನು ಮೋಹಿಸಲಸಮರ್ಥರೆಂದು ಚಿಂತೆಯಿಂದ ಬಾರಿಬಾರಿಗೂ ನಿಟ್ಟುಸುರನ್ನು ಬಿಟ್ಟನು.

೩೦. ಆ ಬ್ರಹ್ಮನ ನಿಟ್ಟುಸುರಿನ ಗಾಳಿಯಿಂದ ಕೆಲವು ಪರಿವಾರಗಣಗಳು ಹುಟ್ಟಿದವು. ಅವರು ಅನೇಕ ರೂಪವುಳ್ಳವರೂ, ಮಹಾಬಲಿಷ್ಠರೂ, ಜೋಲು ತ್ತಿರುವ ನಾಲಿಗೆಯುಳ್ಳವರೂ, ನೋಡುವವರಿಗೆ ತುಂಬ ಭಯವನ್ನುಂಟು ಮಾಡುವವರೂ ಆಗಿದ್ದರು.

೩೧. ಅವರಲ್ಲಿ ಕೆಲವರು ಕುದುರೆಯ ಮುಖವುಳ್ಳವರು, ಕೆಲವರು ಆನೆಯ ಮುಖವುಳ್ಳವರು. ಇನ್ನು ಕೆಲವರು ಸಿಂಹ ಮತ್ತು ಹುಲಿಗಳ ಮುಖ ವುಳ್ಳವರು ಮತ್ತೆ ಕೆಲವರು ನಾಯಿ, ಹಂದಿ ಮತ್ತು ಒಂಟೆಗಳ ಮುಖ ವುಳ್ಳವರು.

ಋಕ್ಷಮಾರ್ಜಾರವದನಾಃ ಶರಭಾಸ್ಯಾಃ ಶುಕಾನನಾಃ ।
ಪ್ಲವಗೋವಮಾಯುವಕ್ತ್ರಾಶ್ಚ ಸರೀಸೃಪಮುಖಾಃಪರೇ ॥ ೩೨ ॥

ಗೋರೂಪಾ ಗೋಮುಖಾಃ ಕೇಚಿತ್ತಥಾ ಪಕ್ಷಿಮುಖಾಃ ಪರೇ ।
ಮಹಾದೀರ್ಘಾ ಮಹಾಹ್ರಸ್ವಾ ಮಹಾಸ್ಥೂಲಾ ಮಹಾಕೃಶಾಃ ॥ ೩೩ ॥

ಪಿಂಗಾಕ್ಷಾ ವಿರಲಾಕ್ಷಾಶ್ಚ ತೃಪ್ತೈಕಾಕ್ಷಾ ಮಹೋದರಾಃ ।
ಏಕಕರ್ಣಾಸ್ತ್ರಿಕರ್ಣಾಶ್ಚ ಚತುಃ ಕರ್ಣಾಸ್ತಥಾ ಪರೇ ॥ ೩೪ ॥

ಸ್ಥೂಲಕರ್ಣಾ ಮಹಾಕರ್ಣಾ ಬಹುಕರ್ಣಾ ವಿಕರ್ಣಕಾಃ ।
ದೀರ್ಘಾಕ್ಷಾಃ ಸ್ಥೂಲನೇತ್ರಾಶ್ಚ ಸೂಕ್ಷ್ಮನೇತ್ರಾ ವಿದೃಷ್ಟಯಃ ॥ ೩೫ ॥

---

೩೨. ಆವರಲ್ಲಿ ಕರಡಿ ಮತ್ತು ಬೆಕ್ಕುಗಳ ಮುಖದವರೂ, ಶರಭಮುಖದವರೂ, ಗಿಳಿಯ ಮುಖದವರೂ, ಕೋತಿ ಮತ್ತು ನರಿಗಳ ಮುಖದವರೂ ಸರ್ಪ ಮುಖದವರೂ ಇದ್ದರು.

೩೩. ಮತ್ತೂ ಕೆಲವರು ಹಸುವಿನಂತೆ ರೂಪವುಳ್ಳವರು, ಹಸುವಿನ ಮುಖವುಳ್ಳವರು, ಪಕ್ಷಿಗಳ ಮುಖವುಳ್ಳವರು, ಮತ್ತೆ ಕೆಲವರು ತುಂಬಾ ಎತ್ತರವಾದವರು, ತುಂಬಾ ಕುಳ್ಳರು, ತುಂಬ ದಪ್ಪನಾದವರು, ತುಂಬಾ ಕೃಶರು.

೩೪. ಬಿಳಿಯ ಕಣ್ಣಿನವರು, ಮೆಳ್ಳಗಣ್ಣಿನವರು, ಒಂದು ಕಣ್ಣಿನವರು, ಮೂರು ಕಣ್ಣಿನವರು, ದೊಡ್ಡ ಹೊಟ್ಟೆಯವರು, ಒಂದು ಕಿವಿಯವರು. ಮೂರು ಕಿವಿಯವರು, ನಾಲ್ಕು ಕಿವಿಯವರು, ಇವರೆಲ್ಲರೂ ಅಲ್ಲಿದ್ದರು

೩೫. ಅಲ್ಲಿ ಕೆಲವರಿಗೆ ದಪ್ಪನಾದ ಕಿವಿಗಳೂ, ಕೆಲವರಿಗೆ ದೊಡ್ಡದಾದ ಕಿವಿಗಳೂ ಕೆಲವರಿಗೆ ಅನೇಕ ಕಿವಿಗಳೂ ಇದ್ದವು. ಕಿವಿಗಳಿಲ್ಲದವರೂ ಕೆಲವರಿದ್ದರು. ಕೆಲವರಿಗೆ ಉದ್ದವಾದ ಕಣ್ಣುಗಳೂ, ಕೆಲವರಿಗೆ ದೊಡ್ಡದಾದ ಕಣ್ಣುಗಳೂ, ಕೆಲವರಿಗೆ ಚಿಕ್ಕದಾದ ಕಣ್ಣುಗಳೂ ಇದ್ದವು. ಕಣ್ಣುಗಳೇ ಇಲ್ಲದವರೂ ಕೆಲವರಿದ್ದರು.

ಚತುಷ್ಪಾದಾಃ ಪಂಚಪಾದಾಸ್ತ್ರಿಪಾದ್ಯೇಕಪದಾಸ್ತಥಾ ।
ಹ್ರಸ್ವಪಾದಾ ದೀರ್ಘಪಾದಾ ಸ್ಥೂಲಪಾದಾ ಮಹಾಪದಾಃ ॥ ೩೬ ॥
ಏಕಹಸ್ತಾಶ್ಚತುರ್ಹಸ್ತಾ ದ್ವಿಹಸ್ತಾಸ್ತ್ರಿಶಯಾಸ್ತಥಾ ।
ವಿಹಸ್ತಾಶ್ಚ ವಿರೂಪಾಕ್ಷಾ ಗೋಧಿಕಾಕೃತಯಃ ಪರೇ ॥ ೩೭ ॥
ಮನುಷ್ಯಾಕೃತಯಃ ಕೇಚಿಚ್ಛಿಶುಮಾರಮುಖಾಸ್ತಥಾ ।
ಕ್ರೌಂಚಾಕಾರಾ ಬಕಾಕಾರಾ ಹಂಸಸಾರಸರೂಪಿಣಃ ॥ ೩೮ ॥
ತಥೈವ ಮದ್ಗುಕುರರಕಂಕಕಾಕಮುಖಾಸ್ತಥಾ ।
ಅರ್ಧನೀಲಾ ಅರ್ಧರಕ್ತಾಃ ಕಪಿಲಾಃ ಪಿಂಗಲಾಸ್ತಥಾ ॥ ೩೯ ॥

---

೩೬. ಅಲ್ಲಿ ನಾಲ್ಕು ಕಾಲಿನವರೂ, ಐದುಕಾಲಿನವರೂ, ಮೂರು ಕಾಲಿನವರೂ ಒಂದು ಕಾಲಿನವರೂ, ಗಿಡ್ಡಾದ ಕಾಲುಳ್ಳವರೂ, ಉದ್ದವಾದ ಕಾಲುಳ್ಳವರೂ, ದಪ್ಪನಾದ ಕಾಲುಳ್ಳವರೂ, ದೊಡ್ಡದಾದ ಹೆಜ್ಜೆಯುಳ್ಳವರೂ ಹಲವರಿದ್ದರು.

೩೭. ಇನ್ನೂ ಅಲ್ಲಿ ಒಂದು ಕೈಯ್ಯುಳ್ಳವರೂ, ನಾಲ್ಕು ಕೈಗಳುಳ್ಳವರೂ, ಎರಡು ಕೈಗಳುಳ್ಳವರೂ, ಮೂರು ಕೈಗಳುಳ್ಳವರೂ, ಕೈಗಳೇ ಇಲ್ಲದವರೂ, ಇದ್ದರು. ಇನ್ನು ಕೆಲವರು ವಿಕಾರವಾದ ಕಣ್ಣುಗಳುಳ್ಳವರೂ, ಕೆಲವರು ಗೋಧಿಕೆಯಂತಿರುವ (ನೀರಿನಲ್ಲಿರುವ ಪ್ರಾಣಿ) ಆಕಾರವುಳ್ಳವರೂ ಆಗಿದ್ದರು.

೩೮. ಮನುಷ್ಯರ ಆಕಾರವುಳ್ಳವರೂ, ಕೆಂಪು ಮಾನಿನಂತೆ ಮುಖವುಳ್ಳವರೂ ಅಲ್ಲಿದ್ದರು. ಕೆಲವರು ಕೊಕ್ಕರೆಯಂತೆಯೂ ಕೆಲವರು ಬಕದಂತೆ ಆಕಾರವುಳ್ಳವರಾಗಿಯೂ ಇದ್ದರು. ಇನ್ನು ಕೆಲವರು ಹಂಸ, ಸಾರಸ ಮೊದಲಾದ ನೀರು ಹಕ್ಕಿಗಳ ರೂಪದಂತೆ ಇದ್ದರು.

೩೯. ಹಾಗೆಯೇ ಇನ್ನು ಕೆಲವರು ನೀರುಕಾಗೆ, ಕುರರಹಕ್ಕಿ, ಹದ್ದು, ಕಾಗೆ ಇವುಗಳಂತೆ ಮುಖವುಳ್ಳವರು. ಕೆಲವರು ಅರ್ಧಕಪ್ಪಾಗಿದ್ದರು, ಕೆಲವರು ಅರ್ಧಕೆಂಪಾಗಿದ್ದರು, ಕೆಲವರು ಕಪಿಲ ಬಣ್ಣವುಳ್ಳವರು, ಕೆಲವರು ಕಪ್ಪುಮಿಶ್ರವಾದ ಕೆಂಪು ಬಣ್ಣದವರಾಗಿದ್ದರು.

ನೀಲಾಃ ಶುಕ್ಲಾಸ್ತಥಾ ಪೀತಾ ಹರಿತಾಶ್ಚಿತ್ರರೂಪಿಣಃ ।
ಅವಾದಯಂತ ತೇ ಶಂಖಾನ್ಪಟಹಾನ್ಪರಿವಾದಿನಃ ॥ ೪೦ ॥

ಮೃದಂಗಾನ್ ಡಿಂಡಿಮಾಂಶ್ಚೈವ ಗೋಮುಖಾನ್ಪಣವಾಂಸ್ತಥಾ ।
ಸರ್ವೇ ಜಟಾಭಿಃ ಪಿಂಗಾಭಿಸ್ತುಂಗಾಭಿಶ್ಚ ಕರಾಲಿತಾಃ ॥ ೪೧ ॥

ನಿರಂತರಾಭಿರ್ವಿಪ್ರೇಂದ್ರಾ ಗಣಾಃ ಸ್ಯಂದನಗಾಮಿನಃ ।
ಶೂಲಹಸ್ತಾಃ ಪಾಶಹಸ್ತಾಃ ಖಡ್ಗಹಸ್ತಾ ಧನುರ್ಧರಾಃ ॥ ೪೨ ॥

ಶಕ್ತ್ಯಂಕುಶಗದಾಬಾಣಪಟ್ಟಿಶಪ್ರಾಸಪಾಣಯಃ ।
ನಾನಾಯುಧಾ ಮಹಾನಾದಂ ಕುರ್ವಂತಸ್ತೇ ಮಹಾಬಲಾಃ ॥ ೪೩ ॥

---

೪೦. ಕೆಲವರು ಕಪ್ಪು ಬಣ್ಣದವರು, ಕೆಲವರು ಬೆಳ್ಳಗಿದ್ದರು, ಕೆಲವರು ಹಳದಿಯ ವರ್ಣದವರು, ಕೆಲವರು ಹಸುರು ಬಣ್ಣದವರು, ಮತ್ತೆ ಕೆಲವರು ಚಿತ್ರವಿಚಿತ್ರ ವರ್ಣದವರು. ಈ ರೀತಿಯಿಂದ ಇದ್ದ ಈ ಪರಿವಾರಗಣಗಳು ಶಂಖಗಳನ್ನೂದಿದರು. ತಮ್ಮಟೆಯನ್ನು ಬಾರಿಸಿದರು. ವೀಣೆಯನ್ನು ನುಡಿಸಿದರು.

೪೧. ಕೆಲವರು ಮದ್ದಳೆಗಳನ್ನೂ, ಡಿಮಕಿಗಳನ್ನೂ, ಗೋಮುಖವೆಂಬ ವಾದ್ಯಗಳನ್ನೂ ಪಣವವಾದ್ಯಗಳನ್ನೂ ಬಾರಿಸುತ್ತಲಿದ್ದರು. ಆವರೆಲ್ಲರೂ ಕಪ್ಪು ಕೆಂಪುಮಿಶ್ರವಾದ ದೊಡ್ಡ ದೊಡ್ಡ ಜಟೆಗಳಿಂದ ಕೂಡಿ ಭಯಂಕರವಾಗಿ ಕಾಣುತ್ತಲಿದ್ದರು.

೪೨. ಎಲೈ ಬ್ರಾಹ್ಮಣೋತ್ತಮರೇ:—ಗುಂಪುಗುಂಪಾಗಿದ್ದ ಆಪರಿವಾರ ಗಣಗಳಲ್ಲಿ ಕೆಲವರು ರಥಗಳನ್ನೇರಿ ಕುಳಿತಿದ್ದರು, ಕೆಲವರು ಶೂಲವನ್ನು ಹಿಡಿದಿದ್ದರು. ಕೆಲವರು ಪಾಶವನ್ನು ಹಿಡಿದಿದ್ದರು, ಕೆಲವರು ಕೈಯಲ್ಲಿ ಕತ್ತಿಯನ್ನು ಧರಿಸಿದ್ದರು, ಇನ್ನು ಕೆಲವರು ಧನುರ್ಧಾರಿಗಳಾಗಿದ್ದರು.

೪೩. ಮತ್ತು ಬಲಿಷ್ಠರಾದ ಆವರು, ಶಕ್ತಿ, ಅಂಕುಶ, ಗದೆ, ಬಾಣ, ಭಲ್ಲೆ, ಈಟಿ ಮೊದಲಾದ ಅನೇಕಬಗೆಯ ಆಯುಧಗಳನ್ನು ಧರಿಸಿ ಸಿಂಹನಾದವನ್ನು ಮಾಡುತ್ತಲಿದ್ದರು.

ಮಾರಯ ಛೇದಯೇತ್ಯೂಚುರ್ಬ್ರಹ್ಮಣಃ ಪುರತೋ ಗತಾಃ ।
ತೇಷಾಂ ತು ವದತಾಂ ತತ್ರ ಮಾರಯ ಛೇದಯೇತ್ಯುತ ॥ ೪೪ ॥
ಯೋಗನಿದ್ರಾಪ್ರಭಾವಾನ್ನ ವಿಧಿರ್ವಕ್ತುಂ ಪ್ರಚಕ್ರಮೇ ।
ಅಥ ಬ್ರಹ್ಮಾಣಮಾಭಾಷ್ಯ ತಾನ್ದೃಷ್ಟ್ವಾ ಮದನೋ ಗಣಾನ್ ।
ಉವಾಚ ವಾರಯನ್ವಕ್ತುಂ ಗಣಾನಾಮಗ್ರತಃ ಸ್ಮರಃ ॥ ೪೫ ॥

॥ ಮದನ ಉವಾಚ ॥

ಕಂ ಕರ್ಮೈತೇ ಕರಿಷ್ಯಂತಿ ಕುತ್ರ ಸ್ಥಾಸ್ಯಂತಿ ವಾ ವಿಧೇ
ಕಂ ನಾಮಧೇಯಾ ಏತೇ ವಾ ತತ್ಕೃತಾನ್ವಿನಿಯೋಜಯ ॥ ೪೬ ॥
ನಿಯೋಜ್ಯೈತಾನ್ನಿಜೇ ಕೃತ್ಯೇ ಸ್ಥಾನಂ ದತ್ವಾ ಚ ನಾಮ ಚ ।
ಕೃತ್ವಾ ಪಶ್ಚಾನ್ಮಹಾಮಾಯಾಪ್ರಭಾವಂ ಕಥಯಸ್ವ ಮೇ ॥ ೪೭ ॥

---

೪೪. ಆವರು ಬ್ರಹ್ಮನ ಎದುರಿಗೆ ಹೋಗಿ "ಕೊಲ್ಲು, ಕತ್ತರಿಸು" ಎಂಬ ಭೀಷಣ ಧ್ವನಿಗಳನ್ನು ಮಾಡುತ್ತಲಿದ್ದರು. ಈ ರೀತಿ ಕೂಗುತ್ತಿರುವ ಆ ಗಣಗಳನ್ನು ನೋಡಿ ಬ್ರಹ್ಮನು, ಇದು ಆದಿಮಾಯೆಯ ಮಹಿಮೆಯೆಂದು ಹೇಳಲುಪಕ್ರಮಿಸಿದನು.

೪೫. ಬಳಿಕ ಈ ರೀತಿ ತಮ್ಮೆದುರಿಗೆ ಗಲಭೆಮಾಡುತ್ತಿರುವ ಆ ಗಣಗಳನ್ನು ತಡೆದು ಮನ್ಮಥನು ಬ್ರಹ್ಮನನ್ನು ಕುರಿತು ಹೀಗೆ ಹೇಳಿದನು.

೪೬. ಮನ್ಮಥನು ಹೇಳಿದನು—ಓ ಬ್ರಹ್ಮನೇ, ಈ ಗಣಗಳಾರು? ಇವುಗಳೆಲ್ಲಿರುತ್ತವೆ? ಇವುಗಳ ಹೆಸರೇನು? ಇವು ಮಾಡಬೇಕಾದ ಕಾರ್ಯದಲ್ಲಿ ಅವುಗಳನ್ನು ನಿಯಮಿಸು.

೪೭. ಇವುಗಳು ಮಾಡಬೇಕಾಗಿರುವ ಕಾರ್ಯವನ್ನು ನಿಯಮಿಸಿ, ಇವುಗಳಿಗೆ ಸ್ಥಾನಮಾನಗಳನ್ನೂ ಹೆಸರನ್ನೂ ಕಲ್ಪಿಸಿ ಬಳಿಕ ವಿಷ್ಣುಮಾಯೆಯ ಮಹಿಮೆಯನ್ನು ಹೇಳುವವನಾಗು.

॥ ಮಾರ್ಕಂಡೇಯ ಉವಾಚ ॥

ಅಥ ತದ್ವಾಕ್ಯಮಾಕರ್ಣ್ಯ ಸರ್ವಲೋಕಪಿತಾಮಹಃ ।
ಗಣಾನ್ ಸಮುದನಾನಾಹ ತೇಷಾಂ ಕರ್ಮಾದಿಕಂ ದಿಶನ್ ॥ ೪೮ ॥

॥ ಬ್ರಹ್ಮೋವಾಚ ॥

ಏತ ಉತ್ಪನ್ನಮಾತ್ರಾ ಹಿ ಮಾರಯೇತ್ಯವದಂಸ್ತರಾಂ ।
ಮುಹುರ್ಮುಹುರತೋಽಮೀಷಾಂ ನಾಮ ಮಾರೇತಿ ಜಾಯತಾಂ॥೪೯॥
ಮಾರಾತ್ಮಕತ್ವಾದಸ್ಯೇತೇ ಮಾರಾಃ ಸಂತು ಚ ನಾಮಕಃ ॥ ೫೦ ॥
ಸದಾ ವಿಘ್ನಂ ಕರಿಷ್ಯಂತಿ ಜಂತೂನಾಂ ಚ ವಿನಾರ್ಚನಂ ।
ತವಾನುಗಮನಂ ಕರ್ಮ ಮುಖ್ಯಮೇಷಾಂ ಮನೋಭವ ॥ ೫೧ ॥
ಯತ್ರ ಯತ್ರ ಭವಾನ್ ಯಾತಾ ಸ್ವಕರ್ಮಾರ್ಥಂ ಯದಾ ಯದಾ ।
ಗಂತಾರಸ್ತತ್ರ ತತ್ರೈತೇ ಸಾಹಾಯ್ಯಾಯ ತದಾ ತದಾ ॥ ೫೨ ॥

---

೪೮. ಮಾರ್ಕಂಡೇಯ ಮುನಿಯು ಹೇಳಿದನು:—ಆಮೇಲೆ ಜಗತ್ಪಿತಾಮಹನೆನಿಸಿದ ಬ್ರಹ್ಮನು ಮನ್ಮಥನ ಮಾತುಗಳನ್ನು ಕೇಳಿ, ಆ ಗಣಗಳಿಗೆ ಕಾರ್ಯವನ್ನು ಕಲ್ಪಿಸಲಿಚ್ಛೆಯಿಂದ, ಮದನನಿಗೂ ಗಣಗಳಿಗೂ ಸಹ ಈ ರೀತಿ ಹೇಳಿದನು.

೪೯–೫೦. ಬ್ರಹ್ಮನು ಹೇಳಿದನು:—ಈ ಗಣಗಳು ಹುಟ್ಟಿದೊಡನೆಯೇ "ಮಾರಯ" ಕೊಲ್ಲು ಎಂದು ಪದೇಪದೆ ಹೇಳುತ್ತಲಿದ್ದುದರಿಂದಲೂ, ಇವರು ಕಾಮಿಗಳನ್ನು ಹಿಂಸಿಸುವ ಸ್ವಭಾವವುಳ್ಳವರಾದುದರಿಂದಲೂ, ಇವರು ಮಾರರೆಂದು ಹೆಸರುಳ್ಳವರಾಗಲಿ.

೫೧. ಎಲೈ ಮನ್ಮಥನೇ ಇವರು ಪ್ರಾಣಿಗಳಿಗೆ ಯಾವಾಗಲೂ ಅವರ ಕೆಲಸಗಳಲ್ಲಿ ತೊಂದರೆಯನ್ನುಂಟುಮಾಡುವರು. ನಿನ್ನನ್ನು ಅನುಸರಿಸುತ್ತಾ ನಿನಗೆ ಸಹಾಯಮಾಡುವುದೇ ಇವರು ಮಾಡಬೇಕಾದ ಮುಖ್ಯ ಕಾರ್ಯವು.

೫೨. ನೀನು ನಿನ್ನ ಕಾರ್ಯಕ್ಕಾಗಿ ಯಾವಾಗ ಎಲ್ಲೆಲ್ಲಿ ಹೋಗುವಿಯೋ, ಆಲ್ಲೆಲ್ಲಾ ಇವರು ನಿನ್ನೊಡನಿದ್ದು ನಿನಗೆ ಸಹಾಯವನ್ನು ಮಾಡುವರು.

ಚಿತ್ತೋದ್ಭ್ರಾಂತಿಂ ಕರಿಷ್ಯಂತಿ ತ್ವದಸ್ತ್ರವಶವರ್ತಿನಾಂ ।
ಜ್ಞಾನಿನಾಂ ಜ್ಞಾನಮಾರ್ಗಂ ಚ ವಿಘ್ನಯಿಷ್ಯಂತಿ ಸರ್ವದಾ ॥ ೫೩ ॥

ಯಥಾ ಸಾಂಸಾರಿಕಂ ಕರ್ಮ ಸರ್ವೇ ಕುರ್ವಂತಿ ಜಂತವಃ ।
ತಥಾ ಚೈತೇ ಕರಿಷ್ಯಂತಿ ಸವಿಘ್ನಮಪಿ ಸರ್ವತಃ ॥ ೫೪ ॥

ಇಮೇ ಸ್ಥಾಪ್ಯಂತಿ ಸರ್ವತ್ರ ವೇಗಿನಃ ಕಾಮರೂಪಿಣಃ ।
ತ್ವಮೇವೈಷಾಂ ಗಣಾಧ್ಯಕ್ಷಃ ಪಂಚಯಜ್ಞಾಂಶಭೋಗಿನಃ ॥ ೫೫ ॥
ನಿತ್ಯಕ್ರಿಯಾವತಾಂ ತೋಯಭೋಗಿನೋ ವೈ ಭವಂತ್ವಿತಿ ॥ ೫೬ ॥

॥ ಮಾರ್ಕಂಡೇಯ ಉವಾಚ ॥

ಇತಿ ಶ್ರುತ್ವಾ ತು ತೇ ಸರ್ವೇ ಮದನಂ ಸವಿಧಿಂ ತತಃ ।
ಪರಿವಾರ್ಯ ಯಥಾ ಕಾಮಂ ತಸ್ಥುಃ ಶ್ರುತ್ವಾ ನಿಜಾಂ ಗತಿಂ ॥ ೫೭ ॥

---

೫೩. ನಿನ್ನ ಬಾಣಗಳಿಗೆ ಅಧೀನರಾದವರ ಮನಸ್ಸನ್ನು ಇವರು ಭ್ರಾಂತಿಗೊಳಿಸುತ್ತಾರೆ. ಜ್ಞಾನಿಗಳ ಜ್ಞಾನಮಾರ್ಗಕ್ಕೂ ಇವರು ವಿಘ್ನವನ್ನುಂಟು ಮಾಡುವರು.

೫೪. ಸಂಸಾರಕರ್ಮವು ಅನೇಕಬಗೆಯ ದುಃಖವಿಘ್ನಗಳಿಂದ ಕೂಡಿದ್ದರೂ, ಎಲ್ಲ ಪ್ರಾಣಿಗಳೂ ಕಾಮಾಭಿಲಾಷೆಯಿಂದ ಸಂಸಾರದಲ್ಲಿಯೇ ನಿರತರಾಗಿರುವಂತೆ ಇವರು ಮಾಡುತ್ತಾರೆ.

೫೫–೫೬. ಇವರು ತಮಗೆ ಇಷ್ಟಬಂದಂತೆ ಬಗೆಬಗೆಯ ರೂಪಗಳನ್ನು ಧರಿಸಿ ಅತಿವೇಗದಿಂದ ಎಲ್ಲೆಡೆಗಳಲ್ಲಿಯೂ ಇರುವರು. ಇವರ ಗುಂಪಿಗೆ ನೀನೇ ಯಜಮಾನನು. ಇವರು, ಪಂಚಮಹಾಯಜ್ಞಗಳ ಒಂದಂಶಕ್ಕೂ, ನಿತ್ಯಕರ್ಮವನ್ನು ಮಾಡುವವರು ಬಿಡುವ ಜಲಾಂಜಲಿಗಳಿಗೂ ಭಾಗಿಗಳಾಗಿರುವರು.

೫೭. ಮಾರ್ಕಂಡೇಯ ಮುನಿಯು ಹೇಳಿದನು:—ಆ ಮಾರಗಣಗಳು ಹೀಗೆ ತಮ್ಮ ಕಾರ್ಯವನ್ನೂ ಹೆಸರು ಮೊದಲಾದುವನ್ನೂ ಕೇಳಿ ಬ್ರಹ್ಮನ ಮತ್ತು ಮನ್ಮಥನ ಸುತ್ತಲೂ ಕುಳಿತುಕೊಂಡವು.

ತೇಷಾಂ ವರ್ಣಯಿತುಂ ಶಕ್ಯೋ ಭುವಿ ಕಂ ಮುನಿಸತ್ತಮಾಃ ।
ಮಾಹಾತ್ಮ್ಯಂ ಚ ಪ್ರಭಾವಂ ಚ ತೇ ತಪಶ್ಯಾಲಿನೋ ಯತಃ ॥ ೫೮ ॥

ನೈಷಾಂ ಜಾಯಾ ನ ತನಯಾ ನಿಃಸಮಿಾಹಾಃ ಸದೈವ ಹಿ ।
ನ್ಯಾಸಿನೋಽಪಿ ಮಹಾತ್ಮಾನಃ ಸರ್ವೇ ತೇ ಹ್ಯೂರ್ಧ್ವರೇತಸಃ ॥ ೫೯ ॥

ಅತೋ ಬ್ರಹ್ಮಾ ಪ್ರಸನ್ನಃ ಸ ಮಾಹಾತ್ಮ್ಯಂ ಮದನಾಯ ಚ ।
ಗದಿತುಂ ಯೋಗನಿದ್ರಾಯಾಃ ಸಮ್ಯಕ್ಸಮುಪಚಕ್ರಮೇ ॥ ೬೦ ॥

॥ ಬ್ರಹ್ಮೋವಾಚ ॥

ಅವ್ಯಕ್ತವ್ಯಕ್ತರೂಪೇಣ ರಜಃಸತ್ತ್ವತಮೋಗುಣೈಃ ।
ವಿಭಜ್ಯ ಯಾರ್ಥಂ ಕುರುತೇ ವಿಷ್ಣುಮಾಯೇತಿ ಸೋಚ್ಯತೇ ॥ ೬೧ ॥

---

೫೮. ಎಲೈ ಮುನಿಶ್ರೇಷ್ಠರೇ, ಆ ಮಾರಗಣಗಳ ಮಹಿಮೆಯನ್ನೂ, ಪ್ರಭಾವವನ್ನೂ ವರ್ಣಿಸಲು ಈ ಭೂಮಿಯಲ್ಲಿ ಯಾರು ಸಮರ್ಥರು? ಏಕೆಂದರೆ ಅವರು ತುಂಬ ತಪಸ್ವಿಗಳಾಗಿದ್ದರು.

೫೯. ಅವರಿಗೆ ಹೆಂಡತಿಯರಾಗಲಿ, ಮಕ್ಕಳಾಗಲೀ ಇರಲಿಲ್ಲವು. ಯಾವಾಗಲೂ ಅವರು ನಿಸ್ಪೃಹರು; ಫಲೇಚ್ಛೆಯಿಲ್ಲದೆ ಕರ್ಮವನ್ನು ಮಾಡತಕ್ಕವರು ಮತ್ತು ಮಹಾತ್ಮರೂ ಜಿತೇಂದ್ರಿಯರೂ ಆಗಿದ್ದರು.

೬೦. ಆಮೇಲೆ ಬ್ರಹ್ಮನು ಪ್ರಸನ್ನನಾಗಿ ಮನ್ಮಥನಿಗೆ ವಿಷ್ಣುಮಾಯೆಯ ಮಹಿಮೆಯನ್ನು ಹೇಳಲು ಪ್ರಾರಂಭಿಸಿದನು.

೬೧. ಬ್ರಹ್ಮನು ಹೀಗೆ ಹೇಳಿದನು:—ಯಾವ ದೇವಿಯು, ಸತ್ತ್ವ, ರಜಸ್, ತಮಃ ಎಂಬ ಮೂರುಗುಣಗಳಿಂದ ವ್ಯಕ್ತಾವ್ಯಕ್ತರೂಪವಾದ ಪ್ರಪಂಚವನ್ನು ಎಂದರೆ, ಕಣ್ಣಿಗೆ ಕಾಣಿಸುವ ಪೃಥ್ವಿಯೇ ಮೊದಲಾದ ಸ್ಥೂಲ ಪದಾರ್ಥಗಳು, ಕಣ್ಣಿಗೆ ಕಾಣಿಸದಿರುವ ಆಕಾಶವೇ ಮೊದಲಾದ ಭೂತಗಳು ಇವುಗಳ ಸಂಯೋಗ ವಿಭಾಗಗಳಿಂದ ಕೂಡಿ ಆಗಿರುವ ಜಗತ್ತನ್ನು ಸೃಷ್ಟಿಸುವಳೋ ಅವಳೇ ವಿಷ್ಣುಮಾಯೆಯೆಂದು ಹೇಳಲ್ಪಡುವಳು.

ಸೃಷ್ಟಿಗೆ ಪೂರ್ವದಲ್ಲಿ ಅವ್ಯಕ್ತವೊಂದೇ ಇರುವುದು. ಇದರಲ್ಲಿ ಸತ್ತ್ವರಜಸ್ತಮೋಗುಣಗಳು ಸಮನಾಗಿದ್ದು ನಾಮರೂಪಗಳಿಲ್ಲದ ಅಖಂಡವಾದ

ಯಾ ನಿಮ್ನಾಂತಃಸ್ಥಲಾಂಭಃಸ್ಥಾ ಜಗದಂಡಕಪಾಲತಃ ।
ವಿಭಜ್ಯ ಪುರುಷಂ ಯಾತಿ ಯೋಗನಿದ್ರೇತಿ ಸೋಚ್ಯತೇ ॥ ೬೨ ॥
ಮಂತ್ರಾಂತರ್ಭಾವನಪರಾ ಪರಮಾನಂದರೂಪಿಣೀ ।
ಯೋಗಿನಾಂ ಸತ್ತ್ವವಿದ್ಯಾಂತಃ ಸಾ ನಿಗದ್ಯಾ ಜಗನ್ಮಯೀ ॥ ೬೩ ॥

ಮತ್ತು ಅನಂತವಾದ ಒಂದೇ ತತ್ತ್ವವು ಎಲ್ಲವನ್ನೂ ವ್ಯಾಪಿಸಿರುವುದು. ಇದೇ ದೇವಿಯ ಅವ್ಯಕ್ತಸ್ವರೂಪವು. ದೇವಿಯು ಸೃಷ್ಟಿಮಾಡಲು ಸಂಕಲ್ಪಿಸಿದ ಕೂಡಲೇ ಅವ್ಯಕ್ತದಲ್ಲಿ, ಸತ್ತ್ವರಜಸ್ತಮೋಗುಣಗಳ ಹೆಚ್ಚು ಕಡಿಮೆಯಿಂದ ಬದಲಾವಣೆಯುಂಟಾಗಿ ಕ್ರಮಕ್ರಮವಾಗಿ ವ್ಯಕ್ತರೂಪವನ್ನು ತಾಳುವುದು. ಇದರಿಂದ ಮಹದಾದಿತತ್ತ್ವಗಳೂ, ತನ್ಮಾತ್ರೆಗಳೂ, ಭೂತಗಳೂ ಉಂಟಾಗಿ ಪಂಚೀಕರಣ ಕ್ರಮದಿಂದ ಪ್ರಪಂಚದಲ್ಲಿರುವ ನಾನಾ ಬಗೆಯ ವಸ್ತುಗಳು ಉಂಟಾಗುವವು. ಪಂಚಭೂತಗಳ ಉತ್ಪತ್ತಿಕ್ರಮವನ್ನೂ, ಪಂಚೀಕರಣವಿಧಾನವನ್ನೂ ಬೇರೆ ಸಂದರ್ಭದಲ್ಲಿ ವಿಶದವಾಗಿ ವಿವರಿಸಲಾಗುವುದು.

೬೨. ಯಾವ ದೇವಿಯು ಸೃಷ್ಟಿಯ ಆದಿಯಲ್ಲಿ ಆಳವಾದ ಜಲದ ಮಧ್ಯದಲ್ಲಿದ್ದು ಬ್ರಹ್ಮಾಂಡ ಮತ್ತು ಕಪಾಲಗಳನ್ನು ವಿಭಾಗಿಸಿ ಒಡೆದು ಅದರಿಂದ ಜಗತ್ತನ್ನು ಸೃಜಿಸಿ ಪರಮಾತ್ಮನನ್ನು ಸೇರುವಳೋ ಅವಳು ಯೋಗನಿದ್ರೆಯೆಂದು ಹೇಳಲ್ಪಡುವಳು.

ಈ ಶ್ಲೋಕದಲ್ಲಿಯೂ ಸಹ ಹಿಂದಿನ ಶ್ಲೋಕದ ಅರ್ಥವನ್ನೇ ಪ್ರಕಾರಾಂತವಾಗಿ ಹೇಳಿರುತ್ತೆ. ಸೃಷ್ಟಿಯ ಆದಿಯಲ್ಲಿ ಆಳವಾದ ಜಲರಾಶಿಯೆಂದರೆ ಅಖಂಡವಾಗಿಯೂ ಅನಂತವಾಗಿಯೂ ಸರ್ವವ್ಯಾಪಿಯಾಗಿಯೂ ಇರುವ ಸತ್ತ್ವರಜಸ್ತಮೋಗುಣಗಳು ಸಮತಾವಸ್ಥೆಯಲ್ಲಿರುವ ಅವ್ಯಕ್ತತತ್ತ್ವವೆಂದೂ, ಬ್ರಹ್ಮಾಂಡಕಪಾಲವನ್ನು ಒಡೆಯುವುದೆಂದರೆ, ಆ ಅವ್ಯಕ್ತದಲ್ಲಿ ಸತ್ತ್ವರಜಸ್ತಮೋಗುಣಗಳ ವಿಷಮಾವಸ್ಥೆಯನ್ನು ಕಲ್ಪಿಸಿ ವ್ಯಕ್ತವಾಗುವಂತೆ ಮಾಡಿ ಜಗತ್ಸೃಷ್ಟಿಮಾಡುವಳೆಂದು ಭಾಸವಾಗುವುದು.

೬೩. ಉತ್ಕೃಷ್ಟವಾದ ಆನಂದಸ್ವರೂಪಳಾದ ಯಾವ ದೇವಿಯು ತನ್ನ ಮಂತ್ರಗಳಿಂದಲೇ ಅಂತರ್ಮುಖರಾಗಿ ಧ್ಯಾನಮಾಡುವ ಯೋಗಿಗಳ ಶುದ್ಧ

ಗರ್ಭಾಂತರ್ಜ್ಞಾನಸಂಪನ್ನಂ ಸ್ಮೇರಿತಂ ಸೂತಿಮಾರುತೈಃ ।
ಉತ್ಪನ್ನಂ ಜ್ಞಾನರಹಿತಂ ಕುರುತೇ ಯಾ ನಿರಂತರಂ ॥ ೬೪ ॥

ಪೂರ್ವಾತಿಪೂರ್ವಂ ಸಂಧಾತುಂ ಸಂಸ್ಕಾರೇಣ ನಿಯೋಜ್ಯ ಚ ।
ಆಹಾರಾದೌ ತತೋ ಮೋಹಂ ಮಮತ್ವಂ ಜ್ಞಾನಸಂಶಯಂ ॥ ೬೫ ॥

ಕ್ರೋಧೋಪರೋಧಲೋಭೇಷು ಕ್ಷಿಪ್ತ್ವಾ ಕ್ಷಿಪ್ತ್ವಾ ಪುನಃಪುನಃ ।
ಪಶ್ಚಾತ್ತಾಮೇ ನಿಯೋಜ್ಯಾಶು ಚಿಂತಾಯುಕ್ತಮಹರ್ನಿಶಂ ॥ ೬೬ ॥

ವಾದ ಅಂತಃ ಕರಣದಲ್ಲಿದ್ದು ಅವರಿಗೆ ಧ್ಯೇಯವಸ್ತುವಾಗಿರುವಳೋ ಅವಳೇ ಜಗನ್ಮಯಿ ಎಂದು ಪ್ರಸಿದ್ಧಳು.

೬೪. ಗರ್ಭದಲ್ಲಿರುವಾಗ ವೈರಾಗ್ಯ, ಹಿಂದು ಮುಂದಿನ ತಿಳಿವಳಿಕೆ ಇವುಗಳುಳ್ಳ ಶಿಶುವನ್ನು ಪ್ರಸವಕಾಲದ ಗಾಳಿಯಿಂದ ಜ್ಞಾನವಿಲ್ಲದ್ದನ್ನಾಗಿ ಯಾವ ದೇವಿಯು ಮಾಡುವಳೋ ಆವಳೇ ಮಹಾಮಾಯೆಯೆಂದು ಪ್ರಸಿದ್ಧಳಾದ ಜಗದೀಶ್ವರಿಯು.

೬೫. ಮತ್ತು ಯಾವ ದೇವಿಯು ಅವನವನ ಹಿಂದಿನ ಕರ್ಮಕ್ಕನು ಸಾರವಾಗಿ ನಡೆಯುವಂತೆ ಸಂಸ್ಕಾರವನ್ನು ಆ ಹುಟ್ಟಿದ ಪ್ರಾಣಿಯಲ್ಲಿಟ್ಟು, ಬಳಿಕ ಆಹಾರಾದಿಗಳಲ್ಲಿ ಮೋಹವನ್ನೂ ಶರೀರಾದಿಗಳಲ್ಲಿ ಅಭಿಮಾನವನ್ನೂ ತಿಳುವಳಿಕೆಯಲ್ಲಿ ಸಂಶಯಗಳನ್ನೂ ಉಂಟುಮಾಡುವಳೋ ಆವಳೇ ಮಹಾಮಾಯೆಯೆಂದು ಪ್ರಸಿದ್ಧಳಾದ ಜಗದೊಡೆಯಳು.

೬೬. ಮತ್ತು ಯಾವ ದೇವಿಯು ಕ್ರೋಧಲೋಭಮಾತ್ಸರ್ಯಾದಿಗಳಲ್ಲಿ ಮನುಜನನ್ನು ಪುನಃಪುನಃ ಕೆಡುಹಿ ಆಪೇಲೆ ಕಾಮದಲ್ಲಿ ಆಸಕ್ತಿ ಹುಟ್ಟುವಂತೆ ಮಾಡಿ ರಾತ್ರಿ ಹಗಲೂ ಆದೇ ಚಿಂತೆಯಲ್ಲಿಯೇ ಮುಳುಗಿರುವಂತೆ ಮಾಡುವಳೋ ಆವಳೇ ಮಹಾಮಾಯೆಯೆಂದು ಪ್ರಸಿದ್ಧಳಾದ ಜಗದೊಡೆಯಳು.

ಆಮೋದಯುಕ್ತಂ ವ್ಯಸನಾಸಕ್ತಜಂತುಂ ಕರೋತಿ ಯಾ ।
ಮಹಾಮಾಯೇತಿ ಸಾ ಪ್ರೋಕ್ತಾ ತೇನ ಸಾ ಜಗದೀಶ್ವರೀ ॥ ೬೭ ॥
ಅಹಂಕಾರಾದಿಸಂಸಕ್ತಸೃಷ್ಟಿಪ್ರಭವಭಾವಿನೀ ।
ಉತ್ಪತ್ತಿರಿತಿ ಲೋಕೈಃ ಸಾ ಕಥ್ಯತೇಽನಂತರೂಪಿಣೀ ॥ ೬೮ ॥
ಉತ್ಪನ್ನಮಂಕುರಂ ಬೀಜಾದ್ಯಥಾಪೋ ಮೇಘಸಂಭವಾಃ ।
ಪ್ರರೋಹಯತಿ ಸಾ ಜಂತೂಂಸ್ತಥೋತ್ಪನ್ನಾನ್ಪ್ರರೋಹಯೇತ್ ॥ ೬೯ ॥
ಸಾ ಶಕ್ತಿಃ ಸೃಷ್ಟಿರೂಪಾಚ ಸರ್ವೇಷಾಂ ಖ್ಯಾತಿರೀಶ್ವರೀ ॥ ೭೦ ॥
ಕ್ಷಮಾ ಕ್ಷಮವತಾಂ ನಿತ್ಯಂ ಕರುಣಾ ಸಾ ದಯಾವತಾಂ ।
ನಿತ್ಯಾ ಸಾ ನಿತ್ಯರೂಪೇಣ ಜಗದ್ಗರ್ಭೇ ಪ್ರಕಾಶತೇ ॥ ೭೧ ॥

---

೬೭. ಮತ್ತು ಯಾವ ದೇವಿಯು ಮನುಜನನ್ನು ಕೆಲವುವೇಳೆ ಸಂತೋಷವುಳ್ಳವನನ್ನಾಗಿಯೂ, ಕೆಲವುವೇಳೆ ವ್ಯಸನಗಳಲ್ಲಿ ಆಸಕ್ತನಾಗಿರುವಂತೆಯೂ ಮಾಡುವಳೋ ಅವಳಿಗೆ ಮಹಾಮಾಯೆಯೆಂದು ಹೆಸರು. ಅವಳೇ ಜಗತ್ತಿಗೆ ಒಡೆಯಳು.

೬೮. ಅನೇಕರೂಪವುಳ್ಳ ಆ ದೇವಿಯು ಅಹಂಕಾರಾದಿತತ್ತ್ವಗಳಿಂದ ಕೂಡಿದ ಸೃಷ್ಟಿಯನ್ನು ಮಾಡುವವಳಾದುದರಿಂದ ಅವಳು ಉತ್ಪತ್ತಿಯೆಂದು ಕರೆಯಲ್ಪಡುತ್ತಾಳೆ.

೬೯–೭೦. ಬೀಜದಿಂದ ಮೊಳಕೆಯು ಹುಟ್ಟುವಂತೆಯೂ, ಮೇಘದಿಂದ ಜಲವು ಸುರಿಯುವಂತೆಯೂ, ಯಾವ ದೇವಿಯು ಪ್ರಾಣಿಗಳನ್ನು ಸೃಷ್ಟಿಸುವಳೋ, ಸೃಷ್ಟಿಸಿದವರನ್ನು ಬೆಳಸುವಳೋ ಅವಳೇ ಸೃಷ್ಟಿರೂಪಳಾದ ಆದಿಶಕ್ತಿಯು, ಎಲ್ಲರಿಗೂ ಒಡೆಯಳು ಎಂದು ಪ್ರಸಿದ್ಧಳಾದವಳು.

೭೧. ಕ್ಷಮಾಗುಣವುಳ್ಳವರಲ್ಲಿ ಇರುವ ಕ್ಷಮೆಯೇ ಅವಳು, ದಯೆಯುಳ್ಳವರಲ್ಲಿ ಇರುವ ದಯಾಗುಣವೇ ಅವಳು. ಮತ್ತು ನಿತ್ಯಳಾದ ಅವಳು ನಿತ್ಯವಾದ ರೂಪದಿಂದಲೇ ಜಗನ್ಮಧ್ಯದಲ್ಲಿ ಪ್ರಕಾಶಿಸುತ್ತಾಳೆ.

ಜ್ಯೋತಿಃಸ್ವರೂಪೇಣ ಪರಾ ವ್ಯಕ್ತಾವ್ಯಕ್ತಪ್ರಕಾಶಿನೀ ।
ಸಾ ಯೋಗಿನಾಂ ಮುಕ್ತಿಹೇತುರ್ವಿದ್ಯಾರೂಪೇಣ ವೈಷ್ಣವೀ ॥ ೭೨ ॥
ಸಾಂಸಾರಿಕಾಣಾಂ ಸಂಸಾರಬಂಧಹೇತುರ್ವಿಪರ್ಯಯಾ ।
ಲಕ್ಷ್ಮೀರೂಪೇಣ ಕೃಷ್ಣಸ್ಯ ದ್ವಿತೀಯಾ ಸುಮನೋಹರಾ ॥ ೭೩ ॥
ತ್ರಯೀರೂಪೇಣ ಕಂಠಸ್ಥಾ ಸದಾ ಮಮ ಮನೋಭವ ॥
ಸರ್ವತ್ರಸ್ಥಾ ಸರ್ವಗಾ ದಿವ್ಯಮೂರ್ತಿ–
ರ್ನಿತ್ಯಾ ದೇವೀ ಸರ್ವರೂಪಾ ಪರಾಖ್ಯಾ ।
ಕೃಷ್ಣಾದೀನಾಂ ಸರ್ವದಾ ಮೋಹಯಿತ್ರೀ
ಸಾ ಸ್ತ್ರೀರೂಪೈಃ ಸರ್ವಜಂತೋಃ ಸಮಂತಾತ್ ॥ ೭೪ ॥

॥ ಇತಿ ಶ್ರೀಕಾಲಿಕಾಪುರಾಣೇ ಷಷ್ಠೋಽಧ್ಯಾಯಃ ॥

---

೭೨. ಆ ಉತ್ಕೃಷ್ಟಳಾದ ವಿಷ್ಣುಮಾಯೆಯು ತನ್ನ ಜ್ಯೋತಿಃಸ್ವರೂಪದಿಂದ ದೃಶ್ಯಾದೃಶ್ಯ ವಸ್ತುಗಳನ್ನು ಎಂದರೆ ಕಣ್ಣಿಗೆ ಕಾಣುವ ಮತ್ತು ಕಾಣದಿರುವ ವಸ್ತುಗಳನ್ನು ಬೆಳಗುತ್ತಾಳೆ. ಮತ್ತು ಅವಳು ಯೋಗಿಗಳಿಗೆ ವಿದ್ಯಾ, ಅಥವಾ ಜ್ಞಾನರೂಪದಿಂದ ಮುಕ್ತಿಯನ್ನುಂಟುಮಾಡುತ್ತಾಳೆ.

೭೩. ಅವಳು, ಸಂಸಾರದಲ್ಲಿ ಆಸಕ್ತಿಯುಳ್ಳವರಿಗೆ ಬಂಧನದಂತಿರುವ ಆ ಸಂಸಾರವನ್ನೇ ಉಂಟುಮಾಡುವುದರಿಂದ ವಿಪರ್ಯಯಾ ಎಂದರೆ ಬಂಧವನ್ನುಂಟುಮಾಡುವವಳು ಎಂದು ಹೆಸರು. ವಿಷ್ಣುವಿನ ಮನಸ್ಸನ್ನು ಲಕ್ಷ್ಮೀಯ ರೂಪದಿಂದ ಅಪಹರಿಸಿದವಳೂ ಅವಳೇ. ಎಲೈ ಮನ್ಮಥನೇ, ಋಗ್ಯಜುಸ್ಸಾಮಗಳೆಂಬ ಮೂರು ವೇದಗಳ ರೂಪದಿಂದ ಅವಳು ನನ್ನ ಕಂಠದಲ್ಲಿ ಯಾವಾಗಲೂ ಇರುತ್ತಾಳೆ.

೭೪. ಆ ದೇವಿಯು ಎಲ್ಲಿಡೆಯಲ್ಲಿಯೂ ಇರುವವಳು, ಎಲ್ಲವನ್ನೂ ವ್ಯಾಪಿಸಿರುವವಳು, ಸುಂದರವಾದ ಆಕಾರವುಳ್ಳವಳು, ನಾಶರಹಿತಳಾದವಳು, ಅನೇಕ ಬಗೆಯ ರೂಪವುಳ್ಳವಳು, ಆದಿಶಕ್ತಿಯೆಂದು ಪ್ರಸಿದ್ಧಳು. ಇಂತಹ ಆ ದೇವಿಯು ವಿಷ್ಣುವೇ ಮೊದಲಾದವರನ್ನು ಮೋಹಗೊಳಿಸುತ್ತಾ, ಸ್ತ್ರೀಯರೂಪದಿಂದ ಎಲ್ಲ ಪ್ರಾಣಿಗಳ ಸುತ್ತಮುತ್ತಲೂ ಇರುವಳು.

ಇಲ್ಲಿಗೆ ಶ್ರೀಕಾಲಿಕಾಪುರಾಣದಲ್ಲಿ ಆರನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

॥ ಅಥ ಶ್ರೀಕಾಲಿಕಾಪುರಾಣೇ ಸಪ್ತಮೋಽಧ್ಯಾಯಃ ॥

ಏಳನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ಅಥ ಬ್ರಹ್ಮಾ ಮಹಾಮಾಯಾಸ್ವರೂಪಂ ಪ್ರತಿಸಾದ್ಯ ಚ ।
ಮದನಾಯ ಪುನಃ ಪ್ರಾಹ ಯುಕ್ತಾಸೌ ಹರಮೋಹನೇ ॥ ೧ ॥

॥ ಬ್ರಹ್ಮೋವಾಚ ॥

ವಿಷ್ಣುಮಾಯಾ ಮಹಾದೇವೋ ಯಥಾ ದಾರಪರಿಗ್ರಹಂ ।
ಕರಿಷ್ಯತಿ ತಥಾ ಕರ್ತುಮಂಗೀಕಾರಂ ಪುರಾಽಕರೋತ್ ॥ ೨ ॥

ಸಾಽವಶ್ಯಂ ದಕ್ಷತನಯಾ ಭೂತ್ವಾ ಶಂಭೋರ್ಮಹಾತ್ಮನಃ ।
ಭವಿಷ್ಯತಿ ದ್ವಿತೀಯೇತಿ ಸ್ವಯಮೇವಾವದತ್ಸ್ಮರ ॥ ೩ ॥

---

೧. ಮಾರ್ಕಂಡೇಯ ಮುನಿಯು ಹೇಳಿದನು:—ಆಮೇಲೆ ಬ್ರಹ್ಮನು ಮನ್ಮಥನಿಗೆ ಆದಿಮಾಯೆಯ ಸ್ವರೂಪವನ್ನು ಹೇಳಿ, ಅವಳೇ ಈಶ್ವರನನ್ನು ಮೋಹಗೊಳಿಸುವ ಕಾರ್ಯದಲ್ಲಿ ಪ್ರವೃತ್ತಳಾಗಿದ್ದಾಳೆಂದು ಮತ್ತೆ ಹೇಳ ತೊಡಗಿದನು.

೨. ಬ್ರಹ್ಮನು ಮನ್ಮಥನಿಗೆ ಹೇಳಿದನು:—ಎಲೈ ಮದನನೇ, ಶಂಕರನು ಪತ್ನಿಯನ್ನು ಪರಿಗ್ರಹಿಸುವಂತೆ ಮಾಡುವೆನೆಂದು ಆ ವಿಷ್ಣುಮಾಯೆಯು ಹಿಂದೆಯೇ ಒಪ್ಪಿಕೊಂಡಿರುವಳು.

೩. ಎಲೈ ಮನ್ಮಥನೇ, ಆ ದೇವಿಯು ಖಂಡಿತವಾಗಿಯೂ ದಕ್ಷಬ್ರಹ್ಮನ ಮಗಳಾಗಿ ಹುಟ್ಟಿ ಮಹಾತ್ಮನಾದ ಶಂಕರನ ಪತ್ನಿಯಾಗುವೆನೆಂದು ತಾನೇ ಹೇಳಿರುವಳು.

ತ್ವಮೇಭಿಃ ಸ್ವಗಣೈಃ ಸಾರ್ಧಂ ರತ್ಯಾ ಚ ಮಧುನಾ ಸಹ ।
ಯಥೇಚ್ಛತಿ ತಥಾ ದಾರಾನ್ಗ್ರಹೀತುಂ ಕುರು ಶಂಕರಃ ॥ ೪ ॥

ಶಂಭೌ ಗೃಹೀತದಾರೇ ತು ಕೃತಕೃತ್ಯಾ ವಯಂ ಸ್ಮರ ।
ಅವಿಚ್ಛಿನ್ನಾ ಸೃಷ್ಟಿರಿಯಂ ಭವಿಷ್ಯತಿ ನ ಸಂಶಯಃ ॥ ೫ ॥

॥ ಮಾರ್ಕಂಡೇಯ ಉವಾಚ ॥

ತಥೇತ್ಯುಕ್ತ್ವಾ ದ್ವಿಜಶ್ರೇಷ್ಠಾ ಲೋಕೇಶಾಯ ಮನೋಭವಃ ।
ಮಧುರಂ ಯತ್ಕೃತಂ ತೇನ ಮಹಾದೇವಸ್ಯ ಮೋಹನೇ ॥ ೬ ॥

॥ ಮದನ ಉವಾಚ ॥

ಶೃಣು ಬ್ರಹ್ಮನ್ಯಥಾಸ್ಮಾಭಿಃ ಕ್ರಿಯತೇ ಹರಮೋಹನೇ ।
ಪ್ರತ್ಯಕ್ಷೇ ವಾ ಪರೋಕ್ಷೇ ವಾ ತಸ್ಯ ತದ್ವದತೋ ಮಮ ॥ ೭ ॥

---

೪. ನೀನೂ ಸಹ ಈ ಪರಿವಾರ ಗಣಗಳಿಂದ ಯುಕ್ತನಾಗಿ, ರತಿಯೊಂದಿಗೂ ವಸಂತನೊಂದಿಗೂ ಕೂಡಿಕೊಂಡು, ಆ ಶಂಕರನು ಹೆಂಡತಿಯನ್ನು ಸ್ವೀಕರಿಸಲಿಚ್ಛೆಯುಳ್ಳವನಾಗುವಂತೆ ಮಾಡಲು ಪ್ರಯತ್ನಿಸು.

೫. ಎಲೈ ಮನ್ಮಥನೇ, ಈಶ್ವರನು ಪತ್ನಿಯನ್ನು ಸ್ವೀಕರಿಸಿದುದೇ ಆದರೆ, ನಾವು ಕೃತಕೃತ್ಯರು. ಮುಂದೆ ಸೃಷ್ಟಿಕಾರ್ಯವು ಮಧ್ಯದಲ್ಲಿ ನಿಲ್ಲದೆ ಸರಿಯಾಗಿ ನಡೆದುಕೊಂಡು ಹೋಗುವುದು. ಇದರಲ್ಲಿ ಸಂಶಯವಿಲ್ಲವು.

೬. ಮಾರ್ಕಂಡೇಯ ಮುನಿಯು ಹೇಳಿದನು:—ಎಲೈ ಬ್ರಾಹ್ಮಣೋತ್ತಮರೇ, ಆಮೇಲೆ ಮನ್ಮಥನು, ಮಹಾದೇವನನ್ನು ಮೋಹಗೊಳಿಸುವ ಪಚಾರದಲ್ಲಿ ಮಾಡಿದ ಪ್ರಯತ್ನವನ್ನು ಬ್ರಹ್ಮನಿಗೆ ಮಧುರವಾದ ಮಾತಿನಿಂದ ಹೀಗೆ ಹೇಳಿದನು.

೭. ಮನ್ಮಥನು ಹೇಳಿದನು:—ಓ ಬ್ರಹ್ಮನೇ, ಈಶ್ವರನನ್ನು ಮೋಹಗೊಳಿಸುವುದರಲ್ಲಿ ಎದುರಿಗೆ ನಿಂತಾಗಲೀ, ಮರೆಯಿಂದಲಾಗಲೀ ನಾವು ಮಾಡಬೇಕೆಂದಿರುವ ಪ್ರಯತ್ನವನ್ನು ಹೇಳುವೆನು ಕೇಳು.

ಯದಾ ಸಮಾಧಿಮಾಶ್ರಿತ್ಯ ಸ್ಥಿತಃ ಶಂಭುರ್ಜಿತೇಂದ್ರಿಯಃ ।
ತದಾ ಸುಗಂಧಿವಾತೇನ ಶೀತಲೇನ ವಿವೇಗಿನಾ ॥ ೮ ॥
ತಂ ವೀಜಯಾಮಿ ಲೋಕೇಶ ನಿತ್ಯಂ ಮೋಹನಕಾರಿಣಾ ।

ಸ್ವಸಾಯಕಾಂಸ್ತಥಾ ಪಂಚ ಸಮಾದಾಯ ಶರಾಸನಂ ।
ಭ್ರಮಾಮಿ ತಸ್ಯ ಸನ್ನಿಧೇ ಮೋಹಯಂಸ್ತದ್ಗಣಾನಹಂ ॥ ೯ ॥

ಸಿದ್ಧದ್ವಂದ್ವಾನಹಂ ತತ್ರ ರಮಯಾಮಿ ದಿವಾನಿಶಂ
ಭಾವಾ ಹಾವಾಶ್ಚ ತೇ ಸರ್ವೇ ಪ್ರವಿಶಂತಿ ಚ ತೇಷು ವೈ ॥ ೧೦ ॥

ಮಯಿ ಪ್ರವಿಷ್ಟೇ ಸನ್ನಿಧೇ ಶಂಭೋಃ ಪ್ರಾಣೇ ಪಿತಾಮಹ ।
ಕೋ ವಾ ನ ಕುರುತೇ ದ್ವಂದ್ವಭಾವಂ ತತ್ರ ಮುಹರ್ಮುಹುಃ ॥ ೧೧ ॥

ಮಮ ಪ್ರವೇಶಮಾತ್ರೇಣ ತಥಾ ಸ್ಯುಃ ಸರ್ವಜಂತವಃ ॥ ೧೨ ॥

---

೮. ಓ ಬ್ರಹ್ಮನೇ, ಜಿತೇಂದ್ರಿಯನಾದ ಆ ಶಂಕರನು ಯಾವಾಗ ಸಮಾಧಿಯಲ್ಲಿರುವನೋ ಆಗ ನಾನು ಸುವಾಸನೆಯುಳ್ಳ ತಂಪಾದ ಮುಂದ ಮಾರುತವು ಬೀಸುವಂತೆ ಮಾಡುತ್ತೇನೆ.

೯. ನನ್ನ ಐದು ಪುಷ್ಪಬಾಣಗಳನ್ನೂ ಧನುಸ್ಸನ್ನೂ ಹಿಡಿದು ಆ ಶಂಕರನ ಪರಿವಾರಗಣಗಳನ್ನು ಮೋಹಗೊಳಿಸುತ್ತಾ ಅವನ ಹತ್ತಿರವೇ ಸುಳಿದಾಡುತ್ತಿರುತ್ತೇನೆ.

೧೦. ಮತ್ತು ಆ ಶಂಕರನ ಎದುರಿನಲ್ಲಿ ಸಿದ್ಧಸ್ತ್ರೀಪುರುಷರು ರಾತ್ರಿ ಹಗಲು ಕ್ರೀಡಿಸುತ್ತಿರುವಂತೆ ಮಾಡುತ್ತೇನೆ. ಅವರೆಲ್ಲರೂ ಹಾವಭಾವಾದಿ ಶೃಂಗಾರ ಚೇಷ್ಟೆಗಳನ್ನು ಮಾಡುತ್ತಾ ಅಲ್ಲಿಗೆ ಬಂದು ಕ್ರೀಡಿಸುತ್ತಿರುವರು.

೧೧-೧೨. ಓ ಬ್ರಹ್ಮನೇ, ಹೀಗೆ ನಾನು ಶಂಕರನ ಸಮೀಪದಲ್ಲಿ ಸುಳಿದಾಡುತ್ತಿರಲು ಯಾವ ಪ್ರಾಣಿತಾನೇ ತನ್ನ ಸ್ತ್ರೀಯೊಂದಿಗೆ ಶೃಂಗಾರ ಚೇಷ್ಟೆಯನ್ನು ಮಾಡದಿದ್ದೀತು? ನಾನು ಪ್ರವೇಶಿಸಿದೊಡನೆಯೇ, ಎಲ್ಲ ಪ್ರಾಣಿಗಳೂ ಶೃಂಗಾರಭಾವವುಳ್ಳವಾಗಿ ಆಗಿಯೇ ಆಗುತ್ತವೆ.

ನ ಶಂಭುರ್ನ ವೃಷಸ್ತಸ್ಯ ಮಾನಸೀಂ ವಿಕ್ರಿಯಾಂ ಗತೌ ।
ಯದಾ ಹಿ ಭವತಃ ಪ್ರಸ್ಥಂ ಸ ಯಾತಿ ಪ್ರಮಥಾಧಿಪಃ ॥ ೧೩ ॥
ತತ್ರ ಗಂತಾ ತದೈವಾಹಂ ಸರತಿಃ ಸಮಧುರ್ವಿಧೇ ॥
ಯದಾ ಮೇರುಂ ಪ್ರಯಾತ್ಯೇಷ ಯದಾ ವಾ ನಾಟಕೇಶ್ವರಂ
ಕೈಲಾಸಂ ವಾ ಯದಾ ಯಾತಿ ತತ್ರ ಗಚ್ಛಾಮ್ಯಹಂ ತದಾ । ॥ ೧೪ ॥
ಯದಾ ತ್ಯಕ್ತಸಮಾಧಿಸ್ತು ಹರಸ್ತಿಷ್ಠತಿ ವೈ ಕ್ಷಣಂ
ತತಸ್ತಸ್ಯ ಪುರಶ್ಚಕ್ರಮಿಥುನಂ ಯೋಜಯಾಮ್ಯಹಂ ॥ ॥ ೧೫ ॥
ತಚ್ಚಕ್ರಯುಗಲಂ ಬ್ರಹ್ಮನ್ ಹಾವಭಾವಯುತಂ ಮುಹುಃ ।
ನಾನಾಭಾವೇನ ಕುರುತೇ ದಾಂಪತ್ಯಂ ಕ್ರಮಮುತ್ತಮಂ ॥ ೧೬ ॥

---

೧೩. ಆದರೆ, ಆ ಶಂಕರನೂ, ನಂದಿಯೂ ಕಾಮಾಭಿಲಾಷೆಯಿಂದ ಮನೋವಿಕಾರವನ್ನು ಹೊಂದಲೇ ಇಲ್ಲವು. ಓ ಬ್ರಹ್ಮನೇ ಆಮೇಲೆ ಶಂಕರನು ಯಾವಾಗ ಹಿಮವತ್ಪರ್ವತದ ತಪ್ಪಲಿಗೆ ಹೋಗುವನೋ ಆಗ ನಾನೂ ಅಲ್ಲಿಗೆ ರತಿ ಮತ್ತು ವಸಂತರೊಂದಿಗೆ ಹೋಗಿಯೇ ಹೋಗುತ್ತೇನೆ

೧೪. ಅಥವಾ ಮೇರುಪರ್ವತಕ್ಕಾಗಲಿ, ನಾಟಕೇಶ್ವರಕ್ಕಾಗಲಿ, ಕೈಲಾಸ ಪರ್ವತಕ್ಕಾಗಲಿ, ಆ ಶಂಕರನು ಯಾವಾಗ ಹೋಗುವನೋ ಆವಾಗ ನಾನೂ ಅಲ್ಲಲ್ಲಿಗೆ ಹೋಗುತ್ತೇನೆ.

೧೫. ಸಮಾಧಿಯನ್ನು ಬಿಟ್ಟು ಶಂಕರನು ಯಾವಾಗ ಒಂದು ಕ್ಷಣ ಕಾಲ ಮಟ್ಟಿಗೆ ಬಹಿರ್ಮುಖನಾಗುವನೋ ಆಗ ಅವನೆದುರಿನಲ್ಲಿ ಚಕ್ರವಾಕ ಪಕ್ಷಿಗಳ ಮಿಥುನವನ್ನು ಎಂದರೆ ಗಂಡುಹೆಣ್ಣುಗಳ ಜೋಡಿಯನ್ನು ಸೇರಿಸುತ್ತೇನೆ.

೧೬. ಓ ಬ್ರಹ್ಮನೇ ಆ ಚಕ್ರವಾಕಗಳ ಜೋಡಿಯು ಅನೇಕ ಬಗೆಯ ಶೃಂಗಾರ ಚೇಷ್ಟೆಗಳನ್ನು ಮಾಡುತ್ತಾ ಉತ್ತಮವಾದ ಪತಿಪತ್ನೀಭಾವವನ್ನು ತೋರಿಸುತ್ತದೆ.

ನೀಲಕಂಠಾನಪಿ ಮುಹುಃ ಸಜಾಯಾನಪಿ ತತ್ಪುರಃ ।
ಸಂಮೋಹಯಾಮಿ ಸ ವಿಧೇ ಮೃಗಾನನ್ಯಾಂಶ್ಚ ಪಕ್ಷಿಣಃ । ॥ ೧೭ ॥
ವಿಚಿತ್ರಭಾವಮಾಸಾದ್ಯ ಯದಾ ಪ್ರಕುರುತೇ ರತಿಂ ॥
ಮಯೂರಮಿಥುನಂ ವೀಕ್ಷ್ಯ ತತ್ತದಾ ಕೋ ನ ಚೋತ್ಸುಕಃ ॥ ೧೮ ॥
ಮೃಗಾಶ್ಚ ತತ್ಪುರಸ್ಥಾಶ್ಚ ಸ್ವಜಾಯಾಭಿಸ್ತು ಸೋತ್ಸುಕಾಃ ।
ಅಕುರ್ವನ್ ರುಚಿರಂ ಭಾವಂ ತಸ್ಯ ಪಾರ್ಶ್ವೇ ಪುರಸ್ತದಾ । ॥ ೧೯ ॥
ಅಪಶ್ಯನ್ ವಿವರಂ ನಾಸ್ಯ ಕದಾಚಿದಪಿ ಮುಚ್ಛರಃ
ನಿಪಾತ್ಯಃ ಸ ಯದಾ ದೇಹೇ ತನ್ಮಯಾ ಸರ್ವಲೋಕಕೃತ್ ॥ ೨೦ ॥
ಬಹುಧಾ ನಿಶ್ಚಿತಂ ಜ್ಞಾತಂ ರಾಮಾಸಂಗಾದೃತೇ ಹರಂ
ಅಲಂ ಚ ಸಂಮೋಹಯಿತುಂ ಸಸಹಾಯೋಽಪಿ ನಿಷ್ಕಲಂ । ॥ ೨೧ ॥

---

೧೭. ಅಲ್ಲದೆ ಅವನೆದುರಿನಲ್ಲಿ ಹೆಣ್ಣು ನವಿಲಿನೊಂದಿಗಿರುವ ಗಂಡು ನವಿಲುಗಳನ್ನು ಬಿಟ್ಟು ಮೋಹಗೊಳಿಸುವೆನು. ಅದರಂತೇ ಇನ್ನೂ ಇತರ ಮೃಗಪಕ್ಷಿಗಳ ಮಿಥುನಗಳನ್ನು ಅವನೆದುರಿಗೆ ಸೇರಿಸಿ ಅವುಗಳು ಶೃಂಗಾರ ಚೇಷ್ಟೆಗಳನ್ನು ಮತ್ತೆ ಮತ್ತೆ ಮಾಡುವಂತೆ ಪ್ರೇರಿಸಿ ಅವುಗಳನ್ನು ಮೋಹ ಗೊಳಿಸುವೆನು.

೧೮. ನವಿಲುಗಳ ಜೋಡಿಯು ನಾನಾಬಗೆಯ ಶೃಂಗಾರಚೇಷ್ಟೆಗಳ ನ್ನೆಸಗಿ ವಿಚಿತ್ರರೀತಿಯಲ್ಲಿ ಕ್ರೀಡಿಸುತ್ತಿರುವುದನ್ನು ನೋಡಿ ಯಾವ ಮನುಷ್ಯನುತಾನೆ ಕಾಮವಿಕಾರವನ್ನು ಹೊಂದುವುದಿಲ್ಲ. ?

೧೯. ಮೃಗಗಳೂ ಕೂಡ ತಮ್ಮ ಪ್ರಿಯೆಯರಾದ ಸ್ತ್ರೀಯರೊಡಗೂಡಿ ಸಂಭ್ರಮದಿಂದ ಆ ಶಂಕರನ ಎದುರಿನಲ್ಲಿಯೂ, ಆಕ್ಕಪಕ್ಕಗಳಲ್ಲಿಯೂ ಆಗ ಮನೋಹರವಾದ ಶೃಂಗಾರಚೇಷ್ಟೆಯನ್ನು ಮಾಡಿದವು.

೨೦–೨೧. ಇಷ್ಟಾದರೂ, ಸರ್ವಲೋಕಕರ್ತನಾದ ಆ ಶಂಕರನ ಮೇಲೆ ಬಾಣವನ್ನು ಬಿಡಲು ನನಗೆ ಯಾವಾಗ ಅವಕಾಶವೇ ಸಿಗಲಿಲ್ಲವೋ ಆಗ ನಾನು, ಮನಸ್ಸಿನಲ್ಲಿ ಅನೇಕ ಬಗೆಯಿಂದ ಯೋಚಿಸಿ, ಇಷ್ಟೊಂದು ಸಹಾಯ

ಮಧುಶ್ಚ ಕುರುತೇ ಕರ್ಮ ಯದ್ಯತ್ತಸ್ಯ ವಿಮೋಹನೇ ।
ತಚ್ಛೃಣುಷ್ವ ಮಹಾಭಾಗ ನಿತ್ಯಂ ತಸ್ಯೋಚಿತಂ ಪುನಃ ॥ ೨೨ ॥

ಚಂಪಕಾನ್ಕೇಶರಾನಾಮ್ರಾನ್ಕುರುಣಾನ್ಪಾಟಲಾಂಸ್ತಥಾ
ನಾಗಕೇಸರಪುನ್ನಾಗಾನ್ ಕಿಂಶುಕಾನ್ಕೇತಕಾನ್ಧವಾನ್ ॥ ೨೩ ॥

ಮಾಧವೀಮರ್ಮಲ್ಲಿಕಾಃ ಪರ್ಣಧಾರಾನ್ ಕುರುಬಕಾಂಸ್ತಥಾ ।
ಉತ್ಫುಲ್ಲಯತಿ ತತ್ತಸ್ಯ ಯತ್ರ ತಿಷ್ಠತಿ ವೈ ಹರಃ ॥ ೨೪ ॥

ಸರಾಂಸ್ಯುತ್ಫುಲ್ಲಪದ್ಮಾನಿ ವೀಜಯನ್ಮಲಯಾನಿಲೈಃ ।
ಸುಗಂಧೀಕೃತವಾನ್ ಯತ್ನಾದತೀವ ಶಂಕರಾಶ್ರಮಂ ॥ ೨೫ ॥

ವಿದ್ದರೂ ಜಿತೇಂದ್ರಿಯನಾದ ಆ ಶಂಕರನನ್ನು ಅನುರೂಪಳಾದ ಸುಂದರಿಯಿಲ್ಲದೇ ಮೋಹಗೊಳಿಸಲು ಸಾಧ್ಯವಿಲ್ಲವೆಂದು ನಿಶ್ಚಯಿಸಿದೆನು.

೨೨. ಪೂಜ್ಯನಾದ ಓ ಬ್ರಹ್ಮನೇ, ನಾನು ಮಾಡುವ ಕೆಲಸವನ್ನು ಹೇಳಿದ್ದಾಯಿತು. ಇನ್ನು ವಸಂತನು ಶಂಕರನನ್ನು ಮೋಹಗೊಳಿಸಲು ಯೋಗ್ಯವಾದ ಯಾವ ಯಾವ ಕಾರ್ಯಗಳನ್ನು ಮಾಡುವನು ಎಂಬುದನ್ನು ಹೇಳುವನು, ಕೇಳು.

೨೩–೨೪. ಆ ಶಂಕರನು ಎಲ್ಲೆಲ್ಲಿರುವನೋ ಅಲ್ಲೆಲ್ಲಾ ವಸಂತನು, ಸಂಪಿಗೆ, ಸುರಗಿ, ಮಾವು, ವಲಸೆ, ಹಸರು ಪಾದರಿ, ನಾಗಸಂಪಿಗೆ, ಪುನ್ನಾಗ, ಮುತ್ತಗ, ಕೇದಗೆ, ಕಗ್ಗಲಿ, ಕಾಡು ಇರುವಂತಿಗೆ, ಮಲ್ಲಿಗೆ, ಕಗ್ಗೊಲೆ, ಕೆಂಪು ಗೋರಂಟಿಗೆ ಮೊದಲಾದ ವೃಕ್ಷಗಳಲ್ಲಿ ಪುಷ್ಪಗಳು ಅರಳಿ ಮನೋಹರವಾಗಿ ಕಾಣುವಂತೆ ಮಾಡಿದನು.

೨೫. ಮಲಯಪರ್ವತದ ಗಾಳಿಯಿಂದ, ಸರೋವರಗಳಲ್ಲಿರುವ ಅರಳಿದ ಪದ್ಮಗಳಮೇಲೆ ಬೀಸಿಸಿ ಆ ಶಂಕರನ ಆಶ್ರಮವನ್ನು ತುಂಬ ಸುವಾಸನೆಯುಳ್ಳದ್ದನ್ನಾಗಿ ಮಾಡಿದನು.

ಲತಾಃ ಸರ್ವಾಃ ಸುಮನಸಃ ಪುಲ್ಲಪಾದಪಸಂಚಯಾನ್ ।
ವೃಕ್ಷಾನ್ ರುಚಿರಭಾವೇನ ವೇಷ್ಟಯಂತಿ ಸ್ಮ ತತ್ರ ಚ ॥ ೨೬ ॥

ತಾನ್ವೃಕ್ಷಾಂಶ್ಚಾರುಪುಷ್ಪಾಢ್ಯೈಸ್ತೈಃ ಸುಗಂಧಿಸವಿಸ್ತರೈಃ ।
ದೃಷ್ಟ್ವಾ ಕಾಮವಶಂ ಯಾತೋ ನ ತತ್ರ ಮುನಿರಪ್ಯುತ ॥ ೨೭ ॥

ತದ್ಗಣಾ ಅಪಿ ಲೋಕೇಶ ನಾನಾಭಾವೈಃ ಸುಶೋಭನೈಃ ।
ವಸಂತಿ ಸ್ಮ ಸುರಾಃ ಸಿದ್ಧಾ ಯೇ ಯೇ ಚಾತಿತಪೋಧನಾಃ ॥ ೨೮ ॥

ನ ತಸ್ಯ ಪುನರಸ್ಮಾಭಿರ್ದೃಷ್ಟಂ ಮೋಹಸ್ಯ ಕಾರಣಂ ।
ಭಾವಮಾತ್ರಂ ನ ಕುರುತೇ ಕಾಯೋತ್ಥಮಪಿ ಶಂಕರಃ ॥ ೨೯ ॥

ಇತಿ ಸರ್ವಮಹಂ ದೃಷ್ಟ್ವಾ ಜ್ಞಾತ್ವಾ ಚ ಹರಭಾವನಂ ।
ವಿಮುಹ್ಯೋಽಹಂ ಶಂಭುಮೋಹಾನ್ನಿಯತಂ ವಾ ಯಯಾ ವಿನಾ॥೩೦॥

---

೨೬. ಆ ವಸಂತನು ಅರಳಿದ ಹೂವುಗಳಿಂದ ಕೂಡಿದ ಅನೇಕ ಲತೆಗಳು, ಅರಳಿದ ಪುಷ್ಪಗಳ ಸಮೂಹದಿಂದ ಶೋಭಿಸುತ್ತಿರುವ ವೃಕ್ಷಗಳನ್ನು ಮನೋಹರವಾಗಿ ಸುತ್ತಿಕೊಂಡಿರುವಂತೆ ಮಾಡಿದನು.

೨೭. ಸುಂದರವಾದ ಪುಷ್ಪನಿಚಯದಿಂದಲೂ, ಸುವಾಸನೆಯುಳ್ಳ ಗಾಳಿಯಿಂದಲೂ ಕೂಡಿರುವ ಆ ವೃಕ್ಷಗಳನ್ನು ನೋಡಿದರೂ ಮೌನದಿಂದಿದ್ದ ಶಂಕರನು ಕಾಮವಿಕಾರವನ್ನು ಹೊಂದಲಿಲ್ಲವು.

೨೮. ಓ ಬ್ರಹ್ಮನೇ ಆ ಶಂಕರನ ಪರಿವಾರ ಗಣಗಳೂ, ಮತ್ತು ಆ ಆಶ್ರಮದಲ್ಲಿದ್ದ ದೇವತೆಗಳು, ಸಿದ್ಧರೂ ತಪಸ್ವಿಗಳೂ ಸಹ ಉತ್ತಮವಾದ ಶೃಂಗಾರ ಚೇಷ್ಟೆಗಳಿಂದ ಯುಕ್ತರಾಗಿ ಮನ್ಮಥವಿಕಾರವನ್ನು ಹೊಂದಿದರು.

೨೯. ಆದರೆ ಶಂಕರನಿಗೆ ಸ್ವಲ್ಪವೂ ಕಾಮವಿಕಾರವನ್ನುಂಟುಮಾಡುವ ಯಾವ ಚಿಹ್ನೆಯನ್ನೂ ನಾವು ಕಾಣಲಿಲ್ಲವು. ಅವನ ಶರೀರದಲ್ಲಿ ಯಾವ ಶೃಂಗಾರ ಚೇಷ್ಟೆಯು ಉದ್ಭವಿಸಿದುದನ್ನೂ ಕಾಣಲಿಲ್ಲವು.

೩೦. ಹೀಗೆ ನಡೆದುದೆಲ್ಲವನ್ನು ನೋಡಿ, ಶಂಕರನ ಮನಸ್ಸನ್ನು ತಿಳಿದವನಾಗಿ, ನಿಯತಮನಸ್ಕನಾದ ಆ ಶಂಕರನನ್ನು ಮೋಹಗೊಳಿಸಲು ಆ

ಇದಾನೀಂ ತ್ವದ್ವಚಃ ಶ್ರುತ್ವಾ ಯೋಗನಿದ್ರೋದಿತಂ ಪುನಃ ।
ತಸ್ಯಾಃ ಪ್ರಭಾವಂ ಶ್ರುತ್ವಾಥ ಗಣಾನ್ದೃಷ್ಟ್ವಾ ಸಹಾಯಕಾನ್ ॥ ೩೧ ॥
ಮಯಾ ಶಂಭೋರ್ವಿಮೋಹಾಯ ಕ್ರಿಯತೇ ಮುಹುರುದ್ಯಮಃ ॥೩೨॥
ಭವಾನಪಿ ತ್ರಿಲೋಕೇಶ ಯೋಗನಿದ್ರಾ ದ್ರುತಂ ಪುನಃ ।
ಭವೇದ್ಯಥಾ ಶಂಭುಜಾಯಾ ತಥೈವ ವಿದಧಾತ್ವರಂ ॥ ೩೩ ॥
ಯಮಾನಾಂ ನಿಯಮಾನಾಂ ಚ ಪ್ರಾಣಾಯಾಮಸ್ಯ ನಿತ್ಯಶಃ ।
ಆಸನಸ್ಯ ಮಹೇಶಸ್ಯ ಪ್ರತ್ಯಾಹಾರಸ್ಯ ಗೋಚರೇ ॥ ೩೪ ॥
ಧ್ಯಾನಸ್ಯ ಧಾರಣಾಯಾಶ್ಚ ಸಮಾಧೇರ್ವಿಘ್ನಸಂಭವಂ ।
ಮನ್ಯೇ ಕರ್ತುಂ ನ ಶಕ್ಯಃ ಸ್ಯಾದಪಿ ಮಾರಶತೈರಪಿ ॥ ೩೫ ॥

ದೇವಿಯಿಂದಲ್ಲದೆ ಮತ್ತಾರಿಂದಲೂ ಆಗಲಾರದೆಂದು ನಿರಾಶೆಯುಳ್ಳವನಾಗಿರುತ್ತೇನೆ.

೩೧–೩೨. ಆದರೆ, ಈಗ ನೀನು ಹೇಳಿದ ದೇವಿಯ ಮಾತನ್ನೂ, ಅವಳ ಮಹಿಮೆಯನ್ನೂ ಕೇಳಿ, ಹೊಸದಾಗಿ ಜನಿಸಿದ ಈ ಸಹಾಯಕ ಗಣಗಳನ್ನೂ ನೋಡಿ ಧೈರ್ಯಗೊಂಡು, ಆ ಶಂಕರನನ್ನು ಮೋಹಗೊಳಿಸುವ ವಿಚಾರದಲ್ಲಿ ಪುನಃ ಪ್ರಯತ್ನವನ್ನು ಮಾಡುತ್ತೇನೆ.

೩೩. ಮೂರು ಲೋಕಗಳಿಗೂ ಒಡೆಯನಾದ ಓ ಬ್ರಹ್ಮನೇ, ನೀನೂ ಸಹ, ಆ ಯೋಗಮಾಯೆಯು ಬೇಗನೆ ಈಶ್ವರನ ಪತ್ನಿಯಾಗುವಂತೆ ಯತ್ನಿಸಬೇಕು.

೩೪–೩೫. ಆ ಮಹೇಶ್ವರನ ಎದುರಿಗೆ ನಿಂತು, ಆವನು ಪ್ರತಿದಿನವೂ ಆಚರಿಸುತ್ತಿರುವ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ ಧ್ಯಾನ, ಸಮಾಧಿಯೆಂಬ ಅಷ್ಟಾಂಗಗಳಿಗೂ ಇವುಗಳಿಂದ ಕೂಡಿ ಮಾಡುವ ತಪಸ್ಸಿಗೂ ವಿಘ್ನವನ್ನುಂಟುಮಾಡಲು ನೂರು ಜನ ಮನ್ಮಥರಿಂದಲೂ, ನೂರು ಜನ ಮಾರಣಗಳಿಂದಲೂ ಸಾಧ್ಯವಿಲ್ಲವು.

ತಥಾಪ್ಯಯಂ ಮಾರಗಣಃ ಕರೋತು
ಹರಸ್ಯ ಯೋಗಾಂಗವಿಕಾರವಿಘ್ನಂ ।
ಯದೇವ ಶಕ್ಯಂ ಕಿಮು ವಾ ಸಮರ್ಥಃ
ಸಮುಕ್ಷಮನ್ಯಸ್ಯ ನ ಕರ್ತುಮೋಜಃ ॥ ೩೬ ॥

॥ ಇತಿ ಶ್ರೀ ಕಾಲಿಕಾಪುರಾಣೇ ಸಪ್ತಮೋಽಧ್ಯಾಯಃ ॥

---

೩೬. ಆದರೂ ಈ ಮಾರಗಣವು ಈಶ್ವರನ ಯೋಗಾಂಗಗಳ ಅನುಷ್ಠಾನಕ್ಕೆ ಸಾಧ್ಯವಿದ್ದಷ್ಟು ವಿಘ್ನವನ್ನು ಮಾಡಲಿ. ಆದರೆ ಅಷ್ಟು ವಿಘ್ನ ಮಾಡುವುದೂ ಇವುಗಳಿಂದ ಸಾಧ್ಯವಿದೆಯೋ ಇಲ್ಲವೊ? ಏಕೆಂದರೆ ಆ ಶಂಕರನ ಎದುರಿಗೆ ಬೇರೊಬ್ಬನಿಗೂ ವಿಘ್ನವನ್ನು ಮಾಡುವುದು ಅಸಾಧ್ಯವು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಏಳನೆಯ ಅಧ್ಯಾಯವು ಮುಗಿದುದು

॥ ಶ್ರೀ ॥

॥ ಅಥ ಶ್ರೀಕಾಲಿಕಾಪುರಾಣೇಽಷ್ಟಮೋಧ್ಯಾಯಃ ॥

ಎಂಟನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ತತೋ ಬ್ರಹ್ಮಾಪಿ ಮದನಮುವಾಚೇದಂ ವಚಃ ಪುನಃ ।
ನಿಶ್ಚಿತ್ಯ ಯೋಗನಿದ್ರಾಯಾಃ ಸ್ಮೃತ್ವಾ ವಾಕ್ಯಂ ತಪೋಧನಾಃ ॥ ೧ ॥

॥ ಬ್ರಹ್ಮೋವಾಚ ॥

ಅವಶ್ಯಂ ಶಂಭುಪತ್ನೀ ಸಾ ಯೋಗನಿದ್ರಾ ಭವಿಷ್ಯತಿ ।
ಯಥಾಶಕ್ತಿ ಭವಾಂಸ್ತತ್ರ ಕರೋತ್ವಸ್ಯಾಃ ಸಹಾಯತಾಂ ॥ ೨ ॥

ಗಚ್ಛ ತ್ವಂ ಸ್ವಗಣೈಃ ಸಾರ್ಧಂ ಯತ್ರ ತಿಷ್ಠತಿ ಶಂಕರಃ ।
ದ್ರುತಂ ಮನೋಭವ ತ್ವಂ ಚ ತತ್ಸ್ಥಾನಂ ಮಧುನಾ ಸಹ ॥ ೩ ॥

---

೧. ಮಾರ್ಕಂಡೆಯ ಮುನಿಯು ಹೇಳಿದನು:—ತಪಸ್ವಿಗಳಾದ ಬ್ರಾಹ್ಮಣರೇ, ಆಮೇಲೆ ಬ್ರಹ್ಮನು ಆ ಯೋಗಮಾಯೆಯ ಮಾತನ್ನು ಜ್ಞಾಪಿಸಿಕೊಂಡು ನಿಶ್ಚಯದಿಂದ ಮನ್ಮಥನನ್ನು ಕುರಿತು ಈ ಮಾತನ್ನು ಹೇಳಿದನು.

೨. ಬ್ರಹ್ಮನು ಹೇಳಿದನು:—ಆ ವಿಷ್ಣುಮಾಯೆಯು ನಿಜವಾಗಿಯೂ ಈಶ್ವರನ ಹೆಂಡತಿಯಾಗುವಳು. ನೀನೂ ಈ ವಿಷಯದಲ್ಲಿ ಆ ದೇವಿಗೆ ನಿನ್ನ ಶಕ್ತಿಯಿದ್ದಷ್ಟು ಸಹಾಯವನ್ನು ಮಾಡು.

೩. ಎಲೈ ಮನ್ಮಥನೇ, ನೀನು ಶಂಕರನೆಲ್ಲಿರುವನೋ ಅಲ್ಲಿಗೆ ಈ ನಿನ್ನ ಪರಿವಾರಗಣಗಳೊಂದಿಗೂ, ವಸಂತನೊಡನೆಯೂ ಬೇಗನೆ ಹೊರಡು.

ರಾತ್ರಿಂ ದಿವಸ್ಯ ತುರ್ಯಾಂಶಂ ಜಗನ್ಮೋಹಯ ನಿತ್ಯಶಃ ।
ಭಾಗತ್ರಯಂ ಶಂಭುಪಾರ್ಶ್ವೇ ತಿಷ್ಠ ಸಾರ್ಧಂ ಗಣೈಃ ಸದಾ ॥ ೪ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಸರ್ವಲೋಕೇಶಸ್ತತ್ರೈವಾಂತರಧೀಯತ ।
ಶಂಭೋಃ ಸಕಾಶಂ ಮದನೋ ಗತವಾನ್ಸಗಣಸ್ತದಾ ॥ ೫ ॥

ಏತಸ್ಮಿನ್ನಂತರೇ ದಕ್ಷಶ್ಚಿರಂ ಕಾಲಂ ತಪೋರತಃ ।
ನಿಯಮೈರ್ಬಹುಭಿರ್ದೇವೀಮಾರಾಧಯತ ಸುವ್ರತಃ ॥ ೬ ॥

ತತೋ ನಿಯಮಯುಕ್ತಸ್ಯ ದಕ್ಷಸ್ಯ ಮುನಿಸತ್ತಮಾಃ ।
ಯೋಗನಿದ್ರಾಂ ಪೂಜಯತಃ ಪ್ರತ್ಯಕ್ಷಮಭವಚ್ಛಿವಾ ॥ ೭ ॥

---

೪. ರಾತ್ರಿ ಹಗಲಿನಿಂದ ಕೂಡಿದ ಒಂದು ದಿವಸದ ನಾಲ್ಕು ಭಾಗಗಳಲ್ಲಿ ಒಂದು ಭಾಗ ಮಾತ್ರ ಜಗತ್ತಿನ ಪ್ರಾಣಿಗಳನ್ನು ಮೋಹಗೊಳಿಸುವುದಕ್ಕೆ ಇಟ್ಟುಕೋ. ಇನ್ನುಳಿದ ಮೂರು ಭಾಗ ಕಾಲದಲ್ಲೂ ನಿನ್ನ ಪರಿವಾರಗಣಗಳೊಂದಿಗೆ ಈಶ್ವರನ ಹತ್ತಿರದಲ್ಲೇ ಇರುವವನಾಗು.

೫ ಮಾರ್ಕಂಡೇಯ ಮುನಿಯು ಹೇಳಿದನು:–ಹೀಗೆ ಹೇಳಿ ಬ್ರಹ್ಮನು ಅಲ್ಲಿಯೇ ಅಂತರ್ಧಾನನಾದನು. ಮದನನೂ ಸಹ ತನ್ನ ಪರಿವಾರದೊಡನೆ ಶಂಕರನ ಸಮೀಪವನ್ನೈದಿದನು.

೬. ಈ ಸಮಯದಲ್ಲಿಯೇ ದಕ್ಷಬ್ರಹ್ಮನು ಬಹುಕಾಲ ತಪಸ್ಸನ್ನು ಮಾಡುತ್ತಾ, ಅನೇಕವ್ರತನಿಯಮಗಳಿಂದ ಆ ದೇವಿಯನು ಆರಾಧಿಸುತ್ತಿದ್ದನು.

೭. ಓ ಮುನಿಶ್ರೇಷ್ಠರೇ, ಆಮೇಲೆ ಆದಿಮಾಯೆಯನ್ನು ಹೀಗೆ ನಿಯಮದಿಂದ ಪೂಜಿಸುತ್ತಿರುವ ಆ ದಕ್ಷಬ್ರಹ್ಮನಿಗೆ ಮಂಗಳಸ್ವರೂಪಳಾದ ದೇವಿಯು ಪ್ರತ್ಯಕ್ಷಳಾದಳು.

ತತಃ ಪ್ರತ್ಯಕ್ಷತೋ ದೃಷ್ಟ್ವಾ ವಿಷ್ಣುಮಾಯಾಂ ಜಗನ್ಮಯಾಂ।
ಕೃತಕೃತ್ಯಮಥಾತ್ಮಾನಂ ಮೇನೇ ದಕ್ಷಃ ಪ್ರಜಾಪತಿಃ ॥ ೮ ॥

ಸಿಂಹಸ್ಥಾಂ ಕಾಲಿಕಾಂ ಕೃಷ್ಣಾಂ ಪೀನೋತ್ತುಂಗಪಯೋಧರಾಂ।
ಚತುರ್ಭುಜಾಂ ಚಾರುವಕ್ತ್ರಾಂ ನೀಲೋತ್ಪಲಧರಾಂ ಶುಭಾಂ ॥ ೯ ॥

ವರದಾಭಯದಾಂ ಖಡ್ಗಹಸ್ತಾಂ ಸರ್ವಗುಣಾನ್ವಿತಾಂ।
ಆರಕ್ತನಯನಾಂ ಚಾರುಮುಕ್ತಕೇಶೀಂ ಮನೋಹರಾಂ ॥ ೧೦ ॥

ದೃಷ್ಟ್ವಾ ದಕ್ಷೋऽಥ ತುಷ್ಟಾವ ಮಹಾಮಾಯಾಂ ಪ್ರಜಾಪತಿಃ।
ಪ್ರೀತ್ಯಾ ಪರಮಯಾ ಯುಕ್ತೋ ವಿನಯಾನತಕಂಧರಃ ॥ ೧೧ ॥.

॥ ದಕ್ಷ ಉವಾಚ ॥

ಆನಂದರೂಪಿಣೀಂ ದೇವೀಂ ಜಗದಾನಂದಕಾರಿಣೀಂ।
ಸೃಷ್ಟಿಸ್ಥಿತ್ಯಂತರೂಪಾಂ ತಾಂ ಸ್ತೌಮಿ ಲಕ್ಷ್ಮೀಂ ಹರೇಃ ಶುಭಾಂ ॥ ೧೨ ॥

---

೮. ಬಳಿಕ ಜಗದ್ರೂಪಿಣಿಯಾದ ಆ ವಿಷ್ಣುಮಾಯೆಯು ತನ್ನೆದುರಿಗೆ ಪ್ರತ್ಯಕ್ಷಳಾದುದನ್ನು ನೋಡಿ, ದಕ್ಷಬ್ರಹ್ಮನು ತಾನು ಕೃತಕೃತ್ಯನಾದೆನೆಂದ ತಿಳಿದನು.

೯-೧೦-೧೧. ಹೀಗೆ ದಕ್ಷಬ್ರಹ್ಮನಿಗೆ ಪ್ರತ್ಯಕ್ಷಳಾದ ದೇವಿಯು, ಸಿಂಹದ ಮೇಲೆ ಕುಳಿತು, ಕಪ್ಪುಬಣ್ಣವುಳ್ಳವಳಾಗಿಯೂ, ಉಬ್ಬಿ ದುಂಡಾಗಿರುವ ಸ್ತನಗಳುಳ್ಳವಳಾಗಿಯೂ ನಾಲ್ಕು ಕೈಗಳುಳ್ಳವಳಾಗಿಯೂ, ಕೈಯ್ಯಲ್ಲಿ ಕನ್ನೈದಿಲೆಯ ಹೂವನ್ನು ಹಿಡಿದು ಸುಂದರವಾದ ಮುಖಕಾಂತಿಯಿಂದ ಶೋಭಿಸುತ್ತಿದ್ದಳು. ಮತ್ತು ಆ ದೇವಿಯು ತನ್ನ ಕೈಗಳಲ್ಲಿ ವರದ, ಅಭಯಮುದ್ರೆ, ಕತ್ತಿ ಇವುಗಳನ್ನು ಧರಿಸಿ, ಸಮಸ್ತ ಗುಣಸಂಪನ್ನೆಯಾಗಿ, ಕೆಂಪಾದ ಕಣ್ಣುಗಳು, ಬಿಚ್ಚಿ ಕೆದರಿದ ಕೇಶಪಾಶಗಳು ಇವುಗಳಿಂದ ಮನೋಹರವಾಗಿ ಒಪ್ಪುತ್ತಿದ್ದಳು. ಈ ರೀತಿ ಪ್ರತ್ಯಕ್ಷಳಾಗಿರುವ ಆ ಆದಿಮಾಯೆಯನ್ನು ದಕ್ಷಬ್ರಹ್ಮನು ನೋಡಿ ಭಕ್ತ್ಯಾದರಗಳಿಂದ ಶಿರಸ್ಸನ್ನು ಬಗ್ಗಿಸಿ ನಮ್ರಭಾವದಿಂದ ದೇವಿಯನ್ನು ಹೀಗೆ ಸ್ತುತಿಸಿದನು.

೧೨. ದಕ್ಷಬ್ರಹ್ಮನು ಹೀಗೆ ಸ್ತೋತ್ರಮಾಡಿದನು:—ಆನಂದಸ್ವರೂಪಳಾಗಿಯೂ, ಜಗತ್ತಿಗೆ ಆನಂದವನ್ನುಂಟುಮಾಡುವವಳಾಗಿಯೂ, ಸೃಷ್ಟಿಸ್ಥಿತಿ

ಸತ್ತ್ವೋದ್ರೇಕಪ್ರಕಾಶೇನ ಯಜ್ಜ್ಯೋತಿಸ್ತತ್ತ್ವಮುತ್ತಮಂ।
ಸ್ವಪ್ರಕಾಶಂ ಜಗದ್ಧಾಮ ತತ್ತವಾಂಶಂ ಮಹೇಶ್ವರಿ ॥ ೧೩ ॥
ರಜೋಗುಣಾತಿರೇಕೇಣ ಯತ್ಕಾಮಸ್ಯ ಪ್ರಕಾಶನಂ।
ರಾಗಸ್ವರೂಪಂ ಮಧ್ಯಸ್ಥಂ ತತ್ತೇಽಂಶಾಂಶಂ ಜಗನ್ಮಯಿ ॥ ೧೪ ॥
ತಮೋಗುಣಾತಿರೇಕೇಣ ಯದ್ಯನ್ಮೋಹಪ್ರಕಾಶನಂ।
ಆಚ್ಛಾದನಂ ಚೇತನಾನಾಂ ತತ್ತೇ ಚಾಂಶಾಂಶಗೋಚರಂ ॥ ೧೫ ॥

ನಾಶಗಳ ಸ್ವರೂಪಳಾಗಿಯೂ ಇರುವ, ವಿಷ್ಣುಪತ್ನಿಯಾದ ಲಕ್ಷ್ಮೀರೂಪಳಾದ ದೇವಿಯನ್ನು ಸ್ತೋತ್ರಮಾಡುತ್ತೀನೆ.

೧೩. ಓ ದೇವಿಯೇ, ಸತ್ತ್ವಗುಣವೇ ಹೆಚ್ಚಾಗಿ, ಸ್ವಯಂಪ್ರಕಾಶ ರೂಪವಾದ ಮತ್ತು ಜಗತ್ತಿಗೆ ಆಧಾರಭೂತವಾದ ಯಾವ ವಸ್ತುವಿರುವುದೋ ಅದು ನಿನ್ನ ಅಂಶವು. ನಿನ್ನಿಂದ ಹೊರಟ ಜ್ಯೋತೀರೂಪವಾದ ಸತ್ತ್ವಗುಣವು ತನ್ನ ಪ್ರಕಾಶದಿಂದಲೇ ಬೆಳಗುತ್ತ ಜಗತ್ತಿನಲ್ಲಿರುವ ಉತ್ತಮ ವಸ್ತುಗಳಿಗೆ ಆಧಾರವಾಗಿರುವುದು. ಎಲ್ಲೆಲ್ಲ ಸತ್ತ್ವಗುಣಪ್ರಧಾನವು ಇರುವುದೋ ಅಲ್ಲೆಲ್ಲಾ ನಿನ್ನ ಅಂಶವೇ ಇರುವುದು. ವಿಷ್ಣುವೇ ಮೊದಲಾದ ದೇವತೆಗಳಲ್ಲಿ ಸತ್ತ್ವಗುಣವು ಪ್ರಧಾನಭೂತವಾಗಿರುವುದು. ಆ ದೇವತೆಗಳಲ್ಲಿಯೂ ಸಹ ನಿನ್ನ ಅಂಶರೂಪವಾದ ಶಕ್ತಿಯು ಇಲ್ಲದೇ ಇಲ್ಲ.

೧೪. ಓ ಜಗದ್ರೂಪಳಾದ ದೇವಿಯೇ, ರಜೋಗುಣವೇ ಹೆಚ್ಚಾಗಿ, ಕಾಮವನ್ನೇ ಪ್ರಕಟಿಸುತ್ತಾ ಅನುರಾಗರೂಪವಾದ ಸಾಮಾನ್ಯ ತರಗತಿಯ ಯಾವ ವಸ್ತುವಿರುವುದೋ ಅದು ನಿನ್ನ ಅಂಶದ ಅಂಶವು. ಮನುಷ್ಯರು ಸಾಮಾನ್ಯವಾಗಿ ರಜೋಗುಣ ಪ್ರಧಾನರು. ಎಂದರೆ ಇವರಲ್ಲಿ ಸತ್ತ್ವತಮೋ ಗುಣಗಳು ಸ್ವಲ್ಪಸ್ವಲ್ಪವಿದ್ದು ರಜೋಗುಣವೇ ಹೆಚ್ಚಾಗಿರುವುದು. ಇವರಲ್ಲಿ ನಿನ್ನ ಅಂಶದ ಅಂಶವು ಇರುವುದು.

೧೫. ತಮೋಗುಣವೇ ಹೆಚ್ಚಾಗಿದ್ದು ಯಾವಯಾವ ವಸ್ತುವು ಮೋಹ ವನ್ನೇ ಪ್ರಕಾಶಿಸುವುದೋ ಮತ್ತು ಜ್ಞಾನವನ್ನು ಮುಚ್ಚುವುದೋ ಅದು ನಿನ್ನ ಅಂಶಾಂಶದ ಅಂಶವು. ಪ್ರಾಣಿಗಳಲ್ಲಿ ತಮೋಗುಣವು ಹೆಚ್ಚಾಗಿದ್ದರೆ ಅವುಗಳ

ಪರಾ ಪರಾತ್ಮಿಕಾ ಶುದ್ಧಾ ನಿರ್ಮಲಾ ಲೋಕಮೋಹಿನೀ ।
ತ್ವಂ ತ್ರಿರೂಪಾ ತ್ರಯೀ ಕೀರ್ತಿರ್ವಾರ್ತಾಸ್ಯ ಜಗತೋ ಗತಿಃ ॥ ೧೬ ॥
ಬಿಭರ್ತಿ ಮಾಧವೋ ಧಾತ್ರೀಂ ಯಯಾ ಮೂರ್ತ್ಯಾ ನಿಜೋತ್ಥಯಾ ।
ಸಾ ಮೂರ್ತಿಸ್ತವ ಸರ್ವೇಷಾಂ ಜಗತಾಮುಪಕಾರಿಣೀ ॥ ೧೭ ॥
ಮಹಾನುಭಾವಾ ತ್ವಂ ವಿಶ್ವಶಕ್ತಿಃ ಸೂಕ್ಷ್ಮಾಪರಾಜಿತಾ ।
ಯದೂರ್ಧ್ವಾಧೋನಿರೋಧೇನ ವ್ಯಜ್ಯತೇ ಪವನೈಃ ಪರಂ
ತಜ್ಜ್ಯೋತಿಸ್ತವ ಮಾತ್ರಾರ್ಥೇ ಸಾತ್ತ್ವಿಕಂ ಭಾವಸಂಮತಂ ॥ ೧೮ ॥

ಬುದ್ಧಿಯು ಮಂಕಾಗಿ ಭ್ರಾಂತಿಯಿಂದ ನಿಶ್ಚಯಜ್ಞಾನವು ಹೋಗುವುದು. ತಿರ್ಯಕ್ಪ್ರಾಣಿಗಳಲ್ಲಿ ತಮೋಗುಣವೇ ಹೆಚ್ಚಾಗಿರುವುದರಿಂದ ಅವುಗಳಿಗೆ ಸರಿಯಾದ ತಿಳಿವಳಿಕೆಯು ಇರುವುದಿಲ್ಲ. ಮನುಷ್ಯರಿಗೂ ಸಹ ಕೆಲವು ಕಾಲದಲ್ಲಿ ತಮೋಗುಣವು ಹೆಚ್ಚಾಗಿ ಅವರ ಬುದ್ಧಿಯು ಮಂದವಾಗಿ ಯುಕ್ತಾಯುಕ್ತ ವಿವೇಚನೆಯಿಲ್ಲವಾಗುವುದು.

೧೬. ಓ ದೇವಿಯೇ, ನೀನು ಉತ್ಕೃಷ್ಟಳು, ಪರಮಾತ್ಮಳು, ಶುದ್ಧಳು, ನಿರ್ಮಲಳು ಲೋಕವನ್ನು ಮೋಹಗೊಳಿಸುವವಳು, ಮೂರು ಲೋಕಗಳ ಸ್ವರೂಪಳು, ಮೂರುವೇದರೂಪಳು, ನೀನೇ ಕೀರ್ತಿಯು, ನೀನೇ ಸಮಾಚಾರವು, ಈ ಜಗತ್ತಿಗೆ ನೀನೇ ಗತಿಯು.

೧೭. ಓ ದೇವಿಯೇ ವಿಷ್ಣುವು ಯಾವ ವರಾಹರೂಪದಿಂದ ಅವತಾರ ಮಾಡಿ ಭೂಮಿಯನ್ನು ಧರಿಸಿದನೋ ಆ ವರಾಹಮೂರ್ತಿಯೂ ನೀನೇ. ನೀನು ಸಮಸ್ತಪ್ರಪಂಚಕ್ಕೂ ಉಪಕಾರವನ್ನು ಮಾಡುವವಳು.

೧೮. ತುಂಬಾ ಮಹಿಮೆಯುಳ್ಳ ನೀನು ಜಗತ್ತಿಗೆ ಶಕ್ತಿಯು; ಅತಿ ಸೂಕ್ಷ್ಮವಾದ ಸ್ವರೂಪವುಳ್ಳವಳು ಆದುದರಿಂದ ತಿಳಿಯಲಸಾಧ್ಯಳು; ಇನ್ನೊಬ್ಬರಿಂದ ಜಯಿಸಲಸಾಧ್ಯಳು. ಯಾವುದು ವಾಯುವಿನಿಂದ ಪ್ರೇರಿಸಲ್ಪಡುತ್ತಾ ಎಲ್ಲೆಡೆಯಲ್ಲೆಯೂ ವ್ಯಾಪಿಸಿರುವುದೋ ಅಂತಹ ಆ ಸಾತ್ತ್ವಿಕ ತೇಜಸ್ಸು ಎಂದರೆ ಅಗ್ನಿಯು, ನೀನೇ ಹೊರತು ಬೇರೆಯಲ್ಲ. ಅದು ನಿನ್ನ ಅಂಶವಾದುದರಿಂದ ಅದರಿಂದ ನಿನ್ನನ್ನು ತಿಳಿಯಬಹುದು.

ಯದ್ಯೋಗಿನೋ ನಿರಾಲಂಬಂ ನಿಷ್ಕಲಂ ನಿರ್ಮಲಂ ಪರಂ।
ಆಲಂಬಯಂತಿ ತತ್ತತ್ತ್ವಂ ತ್ವದಂತರ್ಗೋಚರಂ ತು ತತ್ ॥ ೯೯ ॥

ಯಾ ಪ್ರಸಿದ್ಧಾ ಚ ಕೂಟಸ್ಥಾ ಸುಪ್ರಸಿದ್ಧಾತಿನಿರ್ಮಲಾ।
ಸಾ ಜ್ಞಪ್ತಿಸ್ತ್ವಂ ನಿಃಪ್ರಪಂಚಾ ಪ್ರಪಂಚಾಪಿ ಪ್ರಕಾಶಿಕಾ ॥ ೨೦ ॥

ತ್ವಂ ವಿದ್ಯಾ ತ್ವಮವಿದ್ಯಾ ಚ ತ್ವಮಾಲಂಬಾ ನಿರಾಶ್ರಯಾ।
ಪ್ರಪಂಚರೂಪಾ ಜಗತಾಮಾದಿಶಕ್ತಿಸ್ತ್ವಮೀಶ್ವರೀ ॥ ೨೧ ॥

ಬ್ರಹ್ಮಕಂಠಾಲಯಾ ಶುದ್ಧಾ ವಾಗ್ವಾಣೀ ಯಾ ಪ್ರಗೀಯತೇ।
ವೇದಪ್ರಕಾಶನಪರಾ ಸಾ ತ್ವಂ ವಿಶ್ವಪ್ರಕಾಶಿನೀ ॥ ೨೨ ॥

---

೧೯. ಯೋಗಿಗಳು ಆಧಾರರಹಿತವಾಗಿಯೂ, ಅವಯವಾದಿಗಳಿಲ್ಲದೆಯೂ ಇರುವ ಶುದ್ಧವೂ ಉತ್ಕೃಷ್ಟವೂ ಆದ ಯಾವ ವಸ್ತು (ಬ್ರಹ್ಮವಸ್ತು) ವನ್ನು ತಮ್ಮ ಅಂತಃಕರಣದಲ್ಲಿ ಉಪಾಸಿಸುವರೋ ಆ ಪರವಸ್ತುವೂ ನೀನೇ.

೨೦. ನಿರ್ವಿಕಾರವಾದುದೆಂದೂ, ಅವಿದ್ಯೆಯೇ ಮೊದಲಾದ ದೋಷವಿಲ್ಲದೆ ತುಂಬ ಶುದ್ಧವಾಗಿರುವುದೆಂದೂ ಯಾವುದು ಪ್ರಸಿದ್ಧವಾಗಿದೆಯೋ, ಪ್ರಪಂಚರೂಪರವಾಗಿದ್ದರೂ ಯಾವುದರಲ್ಲಿ ಪ್ರಪಂಚವಿರುವುದಿಲ್ಲವೋ, ಯಾವುದು ಜಡವಸ್ತುಗಳನ್ನು ಪ್ರಕಾಶಿಸುವುದೋ, ಆ ಜ್ಞಾನರೂಪವಾದ ಬ್ರಹ್ಮವಸ್ತುವೂ ನೀನೇ

೨೧. ಓ ದೇವಿಯೇ ನೀನು ವಿದ್ಯೆಯು, ಜನಗಳನ್ನು ಮೋಹಗೊಳಿಸುವ ಅಜ್ಞಾನ ಅಥವಾ ಅವಿದ್ಯಾಸ್ವರೂಪಳು. ಈ ಜಗತ್ತಿಗೆ ನೀನೇ ಆಧಾರವು. ಆದರೆ ನಿನಗೆ ಯಾವ ಆಧಾರವೂ ಇಲ್ಲವು. ನೀನು ಪ್ರಪಂಚಸ್ವರೂಪಳು, ಆದಿಶಕ್ತಿಯಾದ ನೀನೇ ಜಗತ್ತಿಗೆಲ್ಲಾ ಒಡೆಯಳಾಗಿರುವೆ.

೨೨. ಬ್ರಹ್ಮನ ಕಂಠದಲ್ಲಿದ್ದು ವೇದವನ್ನು ಪ್ರಕಾಶಿಸುವ, ಶುದ್ಧ ವಾಕ್ಕಿನರೂಪವಾದ ಸರಸ್ವತಿಯೂ ನೀನೇ. ನೀನೇ ಜಗತ್ತನ್ನು ಪ್ರಕಾಶಿಸುವವಳು.

ತ್ವಮಗ್ನಿಸ್ತ್ವಂ ತಥಾ ಸ್ವಾಹಾ ತ್ವಂ ಸ್ವಧಾ ಪಿತೃಭಿಃ ಸಹ ।
ತ್ವಂ ನಭಸ್ತ್ವಂ ಕಾಲರೂಪಾ ತ್ವಂ ಕಾಷ್ಠಾ ತ್ವಂ ಬಹಿಷ್ಕೃತಾ ॥ ೨೩ ॥
ತ್ವಮಚಿಂತ್ಯಾ ತ್ವಮವ್ಯಕ್ತಾ ತಥಾ ನಿರ್ದೇಶ್ಯರೂಪಿಣೀ ।
ತ್ವಂ ಕಾಲರಾತ್ರಿಸ್ತ್ವಂ ಶಾಂತಾ ತ್ವಮೇವ ಪ್ರಕೃತಿಃ ಪರಾ ॥ ೨೪ ॥
ಯಸ್ಯಾಃ ಸಂಸಾರಲೋಕಾನಾಂ ಪರಿತ್ರಾಣಾಯ ಯದ್ಭವಃ ।
ರೂಪಂ ಜಾನಂತಿ ಧಾತ್ರಾದ್ಯಾಸ್ತತ್ತ್ವಂ ಜ್ಞಾಸ್ಯಂತಿ ತೇ ಪರಾಂ ॥ ೨೫ ॥
ಪ್ರಸೀದ ಭಗವತ್ಯಂಬ ಪ್ರಸೀದ ಯೋಗರೂಪಿಣಿ ।
ಪ್ರಸೀದ ಘೋರರೂಪೇ ತ್ವಂ ಜಗನ್ಮಯಿ ನಮೋಸ್ತು ತೇ ॥ ೨೬ ॥

---

೨೩. ನೀನೇ ಅಗ್ನಿಯು, ದೇವತೆಗಳಿಗೆ ಹವಿಸ್ಸನ್ನು ವಹಿಸಿ ಸಂತೋಷವನ್ನುಂಟುಮಾಡುವ ಸ್ವಾಹಾದೇವತೆಯೂ, ಪಿತೃಗಳನ್ನು ಸಂತೋಷಗೊಳಿಸುವ ಸ್ವಧಾದೇವತೆಯೂ ನೀನೇ, ನೀನೇ ಆಕಾಶವು. ಕಾಲವೂ ದಿಕ್ಕುಗಳೂ ನೀನೇ ಆದರೆ ಈ ಯಾವ ಜಡವಸ್ತುಗಳ ಸಂಬಂಧವೂ ನಿನಗೆ ಇರುವುದಿಲ್ಲ.

೨೪. ನಿನ್ನ ಸ್ವರೂಪವನ್ನು ಚಿಂತಿಸಿ ಹೀಗೆಯೇ ಸರಿಯೆಂದು ನಿಷ್ಕರ್ಷಿಸಲಸಾಧ್ಯವು. ನೀನು ಚರ್ಮಚಕ್ಷುಸ್ಸುಗಳಿಗೆ ಗೋಚರಳಾಗದ ಅವ್ಯಕ್ತರೂಪಳು. ಆದರೆ ವೇದಶಾಸ್ತ್ರಗಳಿಂದಲೂ ಜ್ಞಾನದೃಷ್ಟಿಯಿಂದಲೂ ತಿಳಿಯಲ್ಪಡತಕ್ಕವಳು. ನೀನು ಪ್ರಳಯರಾತ್ರಿಯು ಎಂದರೆ ಪ್ರಳಯಕಾಲದಲ್ಲಿ ಸಂಹಾರಕರ್ತ್ರಿಯು ಆದರೂ ಶಾಂತಸ್ವಭಾವವುಳ್ಳವಳು. ನೀನೇ ಜಗತ್ತಿಗೆ ಆದಿಕಾರಣಳು.

೨೫. ಸಂಸಾರದಲ್ಲಿ ಕಷ್ಟಪಡುವ ಜನಗಳನ್ನು ಸಲಹುವುದಕ್ಕಾಗಿಯೇ ನೀನು ಧರಿಸುವ ಹೊರಗಿನ ರೂಪವನ್ನು ಎಂದರೆ ವ್ಯಕ್ತರೂಪವನ್ನು ಬ್ರಹ್ಮನೇ ಮೊದಲಾದ ದೇವತೆಗಳು ತಿಳಿಯುವರು. ಹೀಗಿರುವಾಗ ನಿನ್ನ ನಿಜವಾದ ಅವ್ಯಕ್ತಸ್ವರೂಪವನ್ನು ತಿಳಿಯುವರಾರು?

೨೬. ಪೂಜ್ಯಳಾದ ಓ ಮಾತೆಯೇ, ಪ್ರಸನ್ನಳಾಗು, ಯೋಗರೂಪಿಣಿಯಾದ ಓ ದೇವಿಯೇ ಸಂತುಷ್ಟಳಾಗು, ಭಯಂಕರವಾದ ರೂಪವುಳ್ಳ ಓ ದೇವಿಯೇ ಪ್ರಸನ್ನಳಾಗು. ಓ ಜಗದ್ರೂಪಳೇ ನಿನಗೆ ನಮಸ್ಕಾರವು.

॥ ಮಾರ್ಕಂಡೇಯ ಉವಾಚ ॥

ಇತಿ ಸ್ತುತಾ ಮಹಾಮಾಯಾ ದಕ್ಷೇಣ ಪ್ರಯತಾತ್ಮನಾ ।
ಉವಾಚ ದಕ್ಷಂ ಜ್ಞಾತ್ವಾಽಪಿ ಸ್ವಯಂ ತಸ್ಯೇಪ್ಸಿತಂ ದ್ವಿಜಾಃ ॥ ೨೭ ॥

॥ ಭಗವತ್ಯುವಾಚ ॥

ತುಷ್ಟಾಽಹಂ ದಕ್ಷ ಭವತೋ ಮದ್ಭಕ್ತ್ಯಾ ಹ್ಯನಯಾ ಭೃಶಂ ।
ವರಂ ವೃಣೀಷ್ವ ಚಾಭೀಷ್ಟಂ ತತ್ತೇ ದಾಸ್ಯಾಮಿ ತತ್ಸ್ವಯಂ ॥ ೨೮ ॥
ನಿಯಮೇನ ತಪೋಭಿಶ್ಚ ಸ್ತುತಿಭಿಸ್ತೇ ಪ್ರಜಾಪತೇ ।
ಅತೀವ ತುಷ್ಟಾ ದಾಸ್ಯೇಽಹಂ ವರಂ ವರಯ ವಾಂಛಿತಂ ॥ ೨೯ ॥

॥ ದಕ್ಷ ಉವಾಚ ॥

ಜಗನ್ಮಯಿ ಮಹಾಮಾಯೇ ಯದಿ ತ್ವಂ ವರದಾ ಮಮ ।
ತದಾ ಮಮ ಸುತಾ ಭೂತ್ವಾ ಹರಜಾಯಾ ಭವಾಧುನಾ ॥ ೩೦ ॥

---

೨೭. ಮಾರ್ಕಂಡೇಯಮುನಿಯು ಹೇಳಿದನು:—ಓ ಬ್ರಾಹ್ಮಣೋತ್ತಮರೇ, ಜಿತೇಂದ್ರಿಯನಾದ ಆ ದಕ್ಷಬ್ರಹ್ಮನಿಂದ ಈ ರೀತಿ ಸ್ತುತಿಸಲ್ಪಟ್ಟ ಮಹಾಮಾಯೆಯು, ಅವನ ಮನಸ್ಸಿನ ಇಷ್ಟವನ್ನೂ ತಿಳಿದವಳಾಗಿದ್ದರೂ, ಅವನನ್ನು ಕುರಿತು ಹಿಗೆ ಹೇಳಿದಳು.

೨೮. ದೇವಿಯು ಹೇಳಿದಳು:—ಎಲೈ ದಕ್ಷಬ್ರಹ್ಮನೇ, ಭಕ್ತಿಯಿಂದ ನೀನು ಮಾಡಿದ ಸ್ತೋತ್ರದಿಂದ ನಾನು ಸಂತುಷ್ಟಳಾಗಿರುವೆನು. ನಿನಗೆ ಬೇಕಾದ ವರವನ್ನು ಬೇಡು. ಅದನ್ನು ನಾನು ನೆರವೇರಿಸಿಕೊಡುತ್ತೇನೆ.

೨೯. ಎಲೈ ದಕ್ಷಬ್ರಹ್ಮನೇ, ನೀನು ಮಾಡಿದ ನಿಯಮಾನುಷ್ಠಾನಗಳಿಂದಲೂ ತಪಿಸ್ಸಿನಿಂದಲೂ, ಸ್ತೋತ್ರಗಳಿಂದಲೂ ತುಂಬ ಸಂತುಷ್ಟಳಾಗಿರುತ್ತೇನೆ. ಬೇಕಾದ ವರವನ್ನು ಕೇಳು ಕೊಡುತ್ತೇನೆ.

೩೦ ದಕ್ಷಬ್ರಹ್ಮನು ಹೇಳಿದನು:—ಜಗದ್ರೂಪಳಾದ ದೇವಿಯೇ, ನೀನು ನನಗೆ ಬೇಕಾದ ವರವನ್ನು ಕೊಡುವುದಾದರೆ, ನನ್ನ ಮಗಳಾಗಿ ಹುಟ್ಟಿ ಮುಂದೆ ಈಶ್ವರನ ಪತ್ನಿಯಾಗು.

ಮಮೈಷ ನ ವರೋ ದೇವಿ ಕೇವಲಂ ಜಗತಾಮಪಿ ।
ಲೋಕೇಶಸ್ಯ ತಥಾ ವಿಷ್ಣೋಃ ಶಿವಸ್ಯಾಪಿ ಪ್ರಜೇಶ್ವರಿ ॥ ೩೧ ॥

॥ ದೇವ್ಯುವಾಚ ॥

ಅಹಂ ತವ ಸುತಾ ಭೂತ್ವಾ ತ್ವಜ್ಜಾಯಾಯಾಂ ಸಮುದ್ಭವಾ ।
ಹರಜಾಯಾ ಭವಿಷ್ಯಾಮಿ ನ ಚಿರಾತ್ತು ಪ್ರಜಾಪತೇ ॥ ೩೨ ॥

ಯದಾ ಭವಾನ್ಮಯಿ ಪುನರ್ಭವೇನ್ಮಂದಾದರಸ್ತದಾ ।
ದೇಹಂ ತ್ಯಕ್ಷ್ಯಾಮಿ ಸಪದಿ ಸುಖಿನ್ಯಪ್ಯಥ ನೇತರಾ ॥ ೩೩ ॥

ಏಷ ದತ್ತಸ್ತವ ವರಃ ಪ್ರತಿಸರ್ಗಂ ಪ್ರಜಾಪತೇ ।
ಅಹಂ ತವ ಸುತಾ ಭೂತ್ವಾ ಭವಿಷ್ಯಾಮಿ ಹರಪ್ರಿಯಾ ॥ ೩೪ ॥

ತಥಾ ಸಂಮೋಹಯಿಷ್ಯಾಮಿ ಮಹಾದೇವಂ ಪ್ರಜಾಪತೇ ।
ಪ್ರತಿಸರ್ಗಂ ಯಥಾ ಮೋಹಂ ಸಂಪ್ರಾಪ್ಸ್ಯತಿ ನಿರಾಕುಲಂ ॥ ೩೫ ॥

---

೩೧. ಓ ಜಗದ್ಧೊಡೆಯಳೇ, ಈ ವರವು ನನಗೆ ಮಾತ್ರವಲ್ಲ. ಎಲ್ಲ ಜಗತ್ತಿಗೂ, ಬ್ರಹ್ಮನಿಗೂ, ವಿಷ್ಣುವಿಗೂ, ಶಿವನಿಗೂ ಬೇಕಾದುದು.

೩೨. ದೇವಿಯು ಹೇಳಿದಳು:—ಓ ದಕ್ಷಬ್ರಹ್ಮನೇ, ಸ್ವಲ್ಪಕಾಲದಲ್ಲಿಯೇ ನಾನು ನಿನ್ನ ಪತ್ನಿಯಲ್ಲಿ ಮಗಳಾಗಿ ಹುಟ್ಟಿ ಮುಂದೆ ಈಶ್ವರನ ಪತ್ನಿಯಾಗುವೆನು.

೩೩. ಮುಂದೆ ನೀನು ಯಾವಾಗ ನನ್ನಲ್ಲಿ ಆದರವಿಲ್ಲದವನಾಗುವಿಯೋ ಆಗ ನಾನು ನನ್ನ ಶರೀರವನ್ನು ತ್ಯಜಿಸಿ ತಿರುಗಿ ಇನ್ನೊಂದು ಶರೀರವನ್ನು ಹೊಂದಿ ಸುಖಿಯಾಗಿರುತ್ತೇನೆ.

೩೪–೩೫. ಎಲೈ ದಕ್ಷಬ್ರಹ್ಮನೇ, ಈ ವರವನ್ನು ನಿನಗೆ ಪ್ರತಿಕಲ್ಪದಲ್ಲಿಯೂ ಆಗುವಂತೆ ಕೊಟ್ಟಿರುವೆನು. ನಾನು ಪ್ರತಿಕಲ್ಪದಲ್ಲಿಯೂ ನಿನ್ನ ಮಗಳಾಗಿ ಜನಿಸಿ ಈಶ್ವರನ ಪತ್ನಿಯಾಗುತ್ತೇನೆ. ಎಲೈ ದಕ್ಷಬ್ರಹ್ಮನೇ, ಆರೀತಿ ಶಂಕರನು ಯಾವ ಯೋಚನೆಯೂ ಇಲ್ಲದೆ ನನ್ನನ್ನು ಪತ್ನಿಯಾಗಿ ಸ್ವೀಕರಿಸುವಂತೆ ಆ ಶಂಕರನನ್ನು ಮೋಹಗೊಳಿಸುವೆನು.

॥ ಮಾರ್ಕಂಡೇಯ ಉವಾಚ ॥

ಏವಮುಕ್ತ್ವಾ ಮಹಾಮಾಯಾ ದಕ್ಷಂ ಮುಖ್ಯಂ ಪ್ರಜಾಪತಿಂ ।
ಅಂತರ್ದಧೇ ತತೋ ದೇವೀ ಸಮ್ಯಗ್ದಕ್ಷಸ್ಯ ಪಶ್ಯತಃ ॥ ೩೬ ॥

ಅಂತರ್ಹಿತಾಯಾಂ ಮಾಯಾಯಾಂ ದಕ್ಷೋಽಪಿ ನಿಜಮಾಶ್ರಮಂ ।
ಜಗಾಮ ಲೇಭೇ ಚ ಮುದಂ ಭವಿಷ್ಯತಿ ಸುತೇತಿ ಸಾ ॥ ೩೭ ॥

ಅತ್ರ ಚಕ್ರೇ ಪ್ರಜೋತ್ಪಾದಂ ವಿನಾ ಸ್ತ್ರೀಸಂಗಮೇನ ಚ ।
ಸಂಕಲ್ಪಾವಿರ್ಭವಾಭ್ಯಾಂತು ಮನಸಾ ಚಿಂತನೇನ ಚ ॥ ೩೮ ॥

ತತ್ರ ಯೇ ತನಯಾ ಜಾತಾ ಬಹುಶೋ ದ್ವಿಜಸತ್ತಮಾಃ ।
ತೇ ನಾರದೋಪದೇಶೇನ ಭ್ರಮಂತಿ ಪೃಥಿವೀಮಿಮಾಂ ॥ ೩೯ ॥

ಪುನಃ ಪುನಃ ಸುತಾ ಯೇ ಯೇ ತಸ್ಯ ಜಾತಾಃ ಸಹಸ್ರಶಃ ।
ತೇ ಸರ್ವೇ ಭ್ರಾತೃಪದವೀಂ ಯಯುರ್ನಾರದವಾಕ್ಯತಃ ॥ ೪೦ ॥

---

೩೬. ಮಾರ್ಕಂಡೇಯಋಷಿಯು ಹೇಳಿದನು:—ಹೀಗೆ ಆ ದಕ್ಷಬ್ರಹ್ಮನಿಗೆ ಹೇಳಿ ಆ ಆದಿಮಾಯೆಯು ಅವನು ನೋಡುತ್ತಿರುವಂತೆಯೇ ಅಲ್ಲಿ ಅಂತರ್ಧಾನಳಾದಳು.

೩೭. ಹೀಗೆ ಆ ಆದಿಮಾಯೆಯು ಅಂತರ್ಧಾನಳಾದ ಮೇಲೆ ದಕ್ಷಬ್ರಹ್ಮನೂ ತನ್ನ ಆಶ್ರಮಕ್ಕೆ ತೆರಳಿ, ಅಲ್ಲಿ ಆದಿಮಾಯೆಯು ತನ್ನ ಮಗಳಾಗುವಳೆಂದು ಸಂತೋಷದಿಂದ ಇದ್ದನು.

೩೮. ಆ ಆಶ್ರಮದಲ್ಲಿ ಆ ದಕ್ಷಬ್ರಹ್ಮನು ಸ್ತ್ರೀಸಂಗವಿಲ್ಲದೆಯೇ, ಸಂಕಲ್ಪದಿಂದಲೂ, ಆವಿರ್ಭಾವದಿಂದಲೂ, ಮನಸ್ಸಿನಲ್ಲಿ ಧ್ಯಾನಮಾಡುವುದರಿಂದಲೂ ಪ್ರಜೆಗಳನ್ನು ಸೃಷ್ಟಿಸಿದನು.

೩೯. ಆಗ ಅಲ್ಲಿ ಹುಟ್ಟಿದ ದಕ್ಷಬ್ರಹ್ಮನ ಮಕ್ಕಳೆಲ್ಲರೂ ನಾರದ ಮುನಿಯ ಉಪದೇಶದಿಂದ ಈ ಭೂಮಿಯಲ್ಲಿ ಸಂಚರಿಸತೊಡಗಿದರು.

೪೦. ಆ ದಕ್ಷಬ್ರಹ್ಮನಿಗೆ ಪುನಃ ಪುನಃ ಸಾವಿರಾರು ಮಕ್ಕಳು ಜನಿಸಿ, ಅವರೂ ತಮ್ಮ ಅಣ್ಣಂದಿರು ಹಿಡಿದ ಮಾರ್ಗದಂತೆ ಭೂಮಂಡಲವನ್ನು ಸಂಚರಿಸ ತೊಡಗಿದರು.

ಪೃಥಿವ್ಯಾಂ ಸೃಷ್ಟಿಕರ್ತಾರಃ ಸರ್ವೇ ಯೂಯಂ ದ್ವಿಜೋತ್ತಮಾಃ ।
ಪಶ್ಯಧ್ವಂ ಪೃಥಿವೀಂ ಕೃತ್ಸ್ನಾಮುಪಾಂತಪ್ರಾಂತಮಾಯತಾಂ ॥ ೪೧ ॥

ಇತಿ ನಾರದವಾಕ್ಯೇನ ನೋದಿತಾ ದಕ್ಷಪುತ್ರಕಾಃ ।
ಅದ್ಯಾಪಿ ನ ನಿವರ್ತಂತೇ ಭ್ರಮಂತಃ ಪೃಥಿವೀಮಿಮಾಂ ॥ ೪೨ ॥

ತತಃ ಸಮುತ್ಪಾದಯಿತುಂ ಪ್ರಜಾ ಮೈಥುನಸಂಭವಾಃ ।
ಉಪಯೇಮೇ ವೀರಣಸ್ಯ ತನಯಾಂ ದಕ್ಷ ಈಪ್ಸಿತಾಂ ॥ ೪೩ ॥

ವೀರಣೀ ನಾಮ ತಸ್ಯಾಸ್ತು ಅಸಿಕ್ನೀತ್ಯಪಿ ಸತ್ತಮಾಃ । ॥ ೪೪ ॥

ತಸ್ಯಾಂ ಪ್ರಥಮಸಂಕಲ್ಪೇ ಯದಾ ಭೂತಃ ಪ್ರಜಾಪತೇಃ ।
ಸದ್ಯೋಜಾತಾ ಮಹಾಮಾಯಾ ತದಾ ತಸ್ಯಾಂ ದ್ವಿಜೋತ್ತಮಾಃ ॥೪೫॥

೪೧–೪೨. "ಓ ಬ್ರಾಹ್ಮಣೋತ್ತಮರೇ, ನೀವೆಲ್ಲರೂ ಪ್ರಜೋತ್ಪಾದನೆಯನ್ನು ಮಾಡುತ್ತಾ, ವಿಶಾಲವಾದ ಈ ಭೂಮಿಯನ್ನು ಮೊದಲಿನಿಂದ ಕೊನೆಯವರೆಗೂ ಹೋಗಿ ನೋಡಿರಿ" ಎಂದು ನಾರದ ಮುನಿಯಿಂದ ಪ್ರೇರಿತರಾದ ಆ ದಕ್ಷಬ್ರಹ್ಮನ ಮಕ್ಕಳೆಲ್ಲರೂ ಆ ನಾರದನ ವಾಕ್ಯದಂತೆ ಭೂಮಿಯಲ್ಲಿ ಸಂಚರಿಸುತ್ತಾ ಇವತ್ತಿನವರೆಗೂ ಹಿಂತಿರುಗಿಲ್ಲವು.

೪೩. ಆ ಮೇಲೆ ಸ್ತ್ರೀ ಸಂಗದಿಂದ ಪ್ರಜೆಗಳನ್ನು ಸೃಷ್ಟಿಮಾಡಲೋಸುಗ ದಕ್ಷಬ್ರಹ್ಮನು ತನಗೆ ಇಷ್ಟಳಾದ ವೀರಣಮುನಿಯ ಮಗಳನ್ನು ಮದುವೆಮಾಡಿಕೊಂಡನು.

೪೪. ಓ ಬ್ರಾಹ್ಮಣೋತ್ತಮರೇ, ಆ ದಕ್ಷಬ್ರಹ್ಮನ ಹೆಂಡತಿಗೆ ವೀರಣಿಯೆಂದೂ, ಅಸಿಕ್ನಿಯೆಂದೂ ಹೆಸರು.

೪೫. ಓ ಬ್ರಾಹ್ಮಣಶ್ರೇಷ್ಠರೇ, ಆ ದಕ್ಷಬ್ರಹ್ಮನಿಗೆ ವೀರಣಿಯಲ್ಲಿ ಸಂಭೋಗೇಚ್ಛೆಯು ಯಾವಾಗ ಮೊದಲು ಉಂಟಾಯಿತೋ ಆಗಲೇ ಅವಳಲ್ಲಿ ಆ ಆದಿಮಾಯೆಯು ಜನಿಸಿದಳು.

ತಸ್ಯಾಂ ತು ಜಾತಮಾತ್ರಾಯಾಂ ಸುಪ್ರೀತೋಽಭೂತ್ಪ್ರಜಾಪತಿಃ।
ಸೈನೇಷೇತಿ ತದಾ ನೋನೇ ತಾಂ ದೃಷ್ಟ್ವಾ ತೇಜಸೋಜ್ಜ್ವಲಾಂ। ॥೪೩॥

ಬಭೂವ ಪುಷ್ಪವೃಷ್ಟಿಶ್ಚ ಮೇಘಾಶ್ಚ ವವೃಷುರ್ಜಲಂ।
ದಿಶಃ ಶಾಂತಾಸ್ತದಾ ತಸ್ಯಾಂ ಜಾತಾಯಾಂ ಚ ಸಮುದ್ಗತಾಃ ॥ ೪೪ ॥

ಅವಾದಯಂತ ಸ್ತ್ರಿದಶಾಃ ಶುಭಂ ವಾದ್ಯಂ ವಿಯದ್ಗತಾಃ।
ಜಜ್ವಲುಶ್ಚಾಗ್ನಯಃ ಶಾಂತಾಸ್ತಸ್ಯಾಂ ಸತ್ಯಾಂ ನರೋತ್ತಮಾಃ ॥ ೪೫ ॥

ವೀರಣ್ಯಾ ಲಕ್ಷಿತೋ ದಕ್ಷಸ್ತಾಂ ದೃಷ್ಟ್ವಾ ಜಗದೀಶ್ವರೀಂ।
ವಿಷ್ಣುಮಾಯಾಂ ಮಹಾಮಾಯಾಂ ತೋಷಯಾಮಾಸ ಭಕ್ತಿತಃ ॥೪೬॥

---

೪೩. ಆ ದೇವಿಯು ಜನಿಸಿದೊಡನೆಯೇ ದಕ್ಷಬ್ರಹ್ಮನು ತುಂಬಾ ಸಂತೋಷಗೊಂಡು, ತೇಜಸ್ಸಿನಿಂದ ಹೊಳೆಯುತ್ತಿರುವ ಆ ಮಗುವನ್ನು ನೋಡಿ, ಆದಿಮಾಯೆಯೇ ಜನಿಸಿರುವಳೆಂದು ತಿಳಿದನು.

೪೪. ಅವಳು ಹುಟ್ಟಿದೊಡನೆಯೇ ಆಕಾಶದಿಂದ ಪುಷ್ಪವೃಷ್ಟಿಯಾಯಿತು. ಮೇಘಗಳು ಮಳೆಯನ್ನು ಸುರಿಸಿದವು. ದಿಕ್ಕುಗಳೆಲ್ಲ ಶಾಂತವಾಗಿದ್ದವು.

೪೫. ಎಲೈ ಪುರುಷಶ್ರೇಷ್ಠರೇ, ದೇವತೆಗಳು ಆಕಾಶದಲ್ಲಿದ್ದುಕೊಂಡು ಮಂಗಳಕರವಾದ ವಾದ್ಯಗಳನ್ನು ಬಾರಿಸಿದರು. ಅವಳು ಜನಿಸಿದೊಡನೆಯೇ ಯಾಗಾಗ್ನಿಗಳು ಹೊಗೆಯಿಲ್ಲದೆ ಶಾಂತಿಯಿಂದ ಜಾಜ್ವಲ್ಯಮಾನವಾಗಿ ಉರಿಯ ತೊಡಗಿದವು.

೪೬. ತನ್ನ ಪತ್ನಿಯಾದ ವೀರಣಿಯೊಡನೆ ದಕ್ಷಬ್ರಹ್ಮನು ಜಗತ್ತಿಗೆ ಒಡೆಯಳೂ ಆದಿಮಾಯೆಯೂ ಆದ ವಿಷ್ಣುಮಾಯೆಯನ್ನು ನೋಡಿ, ಅವಳನ್ನು ಪ್ರೀತ್ಯಾದರಗಳಿಂದ ಸಂತೋಷಗೊಳಿಸಿದನು.

॥ ದಕ್ಷ ಉವಾಚ ॥

ಶಿವಾ ಶಾಂತಾ ಮಹಾಮಾಯಾ ಯೋಗನಿದ್ರಾ ಜಗನ್ಮಯಿಾ ।
ಯಾ ಪ್ರೋಚ್ಯತೇ ವಿಷ್ಣುಮಾಯಾ ತಾಂ ನಮಾಮಿ ಸನಾತನೀಂ ॥೫೦॥

ಯಯಾ ಧಾತಾ ಜಗತ್ಸೃಷ್ಟಾ ನಿಯುಕ್ತಸ್ತಾಂ ಪುರಾऽಕರೋತ್ ।
ಸ್ಥಿತಿಂ ಚ ವಿಷ್ಣುರಕರೋದ್ಯನ್ನಿಯೋಗಾಜ್ಜಗತ್ಪತಿಃ ।
ಶಂಭುರಂತಂ ತತೋ ದೇವೀಂ ತಾಂ ನಮಾಮಿ ಮಹೀಯಸೀಂ ॥ ೫೧ ॥

ವಿಕಾರರಹಿತಾಂ ಶುದ್ಧಾಮಪ್ರಮೇಯಾಂ ಪ್ರಭಾವತೀಂ ।
ಪ್ರಮಾಣಮಾನಮೇಯಾಖ್ಯಾಂ ಪ್ರಣಮಾಮಿ ಸುಖಾತ್ಮಿಕಾಂ ॥ ೫೨ ॥

ಯಸ್ತ್ವಾಂ ವಿಚಿಂತಯೇದ್ದೇವೀಂ ವಿದ್ಯಾऽವಿದ್ಯಾತ್ಮಿಕಾಂ ಪರಾಂ ।
ತಸ್ಯ ಭೋಗ್ಯಂ ಚ ಮುಕ್ತಿಶ್ಚ ಸದಾ ಕರತಲೇ ಸ್ಥಿತಾ ॥ ೫೩ ॥

---

೫೦. ದಕ್ಷಬ್ರಹ್ಮನು ಹೇಳಿದನು:---ಯಾವ ದೇವಿಯು, ಮಂಗಳ ಸ್ವರೂಪಳೆಂದೂ, ಶಾಂತಳೆಂದೂ, ಯೋಗನಿದ್ರೆಯೆಂದೂ, ಜಗದ್ರೂಪಳೆಂದೂ, ವಿಷ್ಣುಮಾಯೆಯೆಂದೂ ಹೇಳಲ್ಪಡುವಳೋ ಅಂತಹ ನಾಶವಿಲ್ಲದ ದೇವಿಯನ್ನು ನಾನು ನಮಸ್ಕರಿಸುತ್ತೇನೆ.

೫೧. ಯಾವ ದೇವಿಯ ಅಪ್ಪಣೆಯಿಂದ ಬ್ರಹ್ಮನು ಸೃಷ್ಟಿಕಾರ್ಯದಲ್ಲಿ ನಿಯುಕ್ತನಾಗಿ ಜಗತ್ತನ್ನು ಸೃಷ್ಟಿಸುವನೋ, ಜಗತ್ಪತಿಯಾದ ವಿಷ್ಣುವು ಸಲಹುವನೋ, ಶಂಕರನು ನಾಶಮಾಡುವನೋ, ಅಂತಹ ಎಲ್ಲರಿಗೂ ಹೆಚ್ಚಿನ ವಳಾದ ಆ ದೇವಿಗೆ ನಮಸ್ಕಾರಮಾಡುವೆನು.

೫೨. ಉತ್ಪತ್ತಿಯೇ ಮೊದಲಾದ ವಿಕಾರಗಳಿಲ್ಲದವಳೂ, ಶುದ್ಧಳೂ, ತಿಳಿಯಲಸಾಧ್ಯಳೂ, ಜ್ಯೋತಿಸ್ಸ್ವರೂಪಳೂ, ಪ್ರತ್ಯಕ್ಷಾದಿ ಪ್ರಮಾಣಗಳಿಂದ ತಿಳಿಯಲ್ಪಡುವ ಪರವಸ್ತುವಾಗಿಯೂ, ಸುಖಸ್ವರೂಪಳಾಗಿಯೂ ಇರುವ ಆ ದೇವಿಯನ್ನು ನಮಸ್ಕರಿಸುವೆನು.

೫೩. ಯಾವ ಪುರುಷನು ಜ್ಞಾನ ಮತ್ತು ಅಜ್ಞಾನ ಇವುಗಳ ಸ್ವರೂಪಳಾದ ನಿನ್ನನ್ನು ಧ್ಯಾನಿಸುವನೋ ಅವನಿಗೆ ಇಹಲೋಕಸುಖಗಳೂ, ಮುಕ್ತಿಯೂ ಕೈಯಲ್ಲಿದ್ದಂತೆಯೇ ತಿಳಿಯತಕ್ಕದ್ದು.

ಯಸ್ತ್ವಾಂ ಪ್ರತ್ಯಕ್ಷತೋ ದೇವೀಂ ಸಕೃತ್ಪಶ್ಯತಿ ಪಾವನೀಂ ।
ತಸ್ಯಾವಶ್ಯಂ ಭವೇನ್ಮುಕ್ತಿರ್ವಿದ್ಯಾಽವಿದ್ಯಾಪ್ರಕಾಶಿಕಾ ॥ ೫೪ ॥

ಯೋಗನಿದ್ರೇ ಮಹಾಮಾಯೇ ವಿಷ್ಣುಮಾಯೇ ಜಗನ್ಮಯಿ ॥ ೫೫ ॥

ಯಾ ಪ್ರಮಾಣಾರ್ಥಸಂಪನ್ನಾ ಚೇತನಾ ಸಾ ತವಾತ್ಮಿಕಾ ।
ಯೇ ಸ್ತುವಂತಿ ಜಗನ್ಮಾತರ್ಭವತೀಮಂಬಿಕೇತಿ ಚ ॥ ೫೬ ॥

ಜಗನ್ಮಯೀತಿ ಮಾಯೇತಿ ಸರ್ವಂ ತೇಷಾಂ ಭವಿಷ್ಯತಿ ।

॥ ಮಾರ್ಕಂಡೇಯ ಉವಾಚ ॥

ಇತಿ ಸ್ತುತಾ ಜಗನ್ಮಾತಾ ದಕ್ಷೇಣ ಸುಮಹಾತ್ಮನಾ ।
ತಥೋವಾಚ ತದಾ ದಕ್ಷಂ ಯಥಾ ಮಾತಾ ಶೃಣೋತಿ ನ ॥ ೫೭ ॥

---

೫೪. ಯಾವನು ಪವಿತ್ರಳಾದ ನಿನ್ನನ್ನು ನೋಡುವನೋ ಅವನಿಗೆ ನಿಶ್ಚಯವಾಗಿಯೂ ಜ್ಞಾನಾಜ್ಞಾನಗಳ ಸ್ವರೂಪವು ತಿಳಿಯುವುದಲ್ಲದೆ ಮುಕ್ತಿಯೂ ಲಭಿಸುವುದು.

೫೫. ಪ್ರಪಂಚವನ್ನು ಸಲಹುವುದಕ್ಕಾಗಿ ಎಚ್ಚರವುಳ್ಳ ಯೋಗನಿದ್ರೆಯ ಸ್ವರೂಪಳೂ, ಆದಿಯಾಯೆಯೂ, ವಿಷ್ಣುಮಾಯೆಯೂ, ಜಗತ್ತಿನ ಸ್ವರೂಪಳೂ ಆದ ಓ ದೇವಿಯೇ ನಿನಗೆ ನಮಸ್ಕಾರವು.

೫೬. ಚಕ್ಷುಸ್ಸೇ ಮೊದಲಾದ ವಿಷಯ ಸಾಧನ ಭೂತವಾದ ಇಂದ್ರಿಯಗಳಿಂದಲೂ ಪಂಚಭೂತಾದಿ ದ್ರವ್ಯಗಳಿಂದಲೂ ಕೂಡಿ ಉಂಟಾಗಿರುವ ಪುರುಷನೆಂಬ ಚೇತನವು ನಿನ್ನ ಸ್ವರೂಪವೇ ಆಗಿದೆ. ಯಾರು ನಿನ್ನನ್ನು ಜಗತ್ತಿಗೆ ಒಡೆಯಳಿಂದೂ, ಜಗನ್ಮಾತೆಯೆಂದೂ, ಜಗದ್ರೂಪಳಿಂದೂ, ಮಹಾಮಾಯೆಯೆಂದೂ ಸ್ತುತಿಸುವರೋ ಅವರಿಗೆ ಎಲ್ಲ ಇಷ್ಟಾರ್ಥಗಳೂ ಸಿದ್ಧಿಸುವವು.

೫೭. ಮಾರ್ಕಂಡೇಯ ಮುನಿಯು ಹೇಳಿದನು:—ಹೀಗೆ ಮಹಾತ್ಮನಾದ ದಕ್ಷಬ್ರಹ್ಮನು ಸ್ತುತಿಸಲು ಶಿಶುರೂಪಳಾದ ಆ ದೇವಿಯು, ತನ್ನ ತಾಯಿಯಾದ ವೀರಣಿಯು ಕೇಳದಿರುವಂತೆ ದಕ್ಷನನ್ನು ಕುರಿತು ಹೀಗೆ ಹೇಳಿದಳು.

ಸಂಮೋಹ್ಯ ಸರ್ವಂ ತತ್ರಸ್ಥಂ ಯಥಾ ದಕ್ಷಃ ಶೃಣೋತಿ ತತ್ ।
ನಾನ್ಯಃ ಶೃಣೋತಿ ಚ ತಥಾ ಮಾಯಯಾಽಽಹ ತದಾಂಬಿಕಾ ॥ ೫೮ ॥

॥ ದೇವ್ಯುವಾಚ ॥

ಅಹಮಾರಾಧಿತಾ ಪೂರ್ವಂ ಯದರ್ಥಂ ಮುನಿಸತ್ತಮ ।
ಈಪ್ಸಿತಂ ತವ ಸಿದ್ಧಂ ತದವಧಾರಯ ಸಾಂಪ್ರತಂ ॥ ೫೯ ॥

॥ ಮಾರ್ಕಂಡೇಯ ಉವಾಚ ॥

ಏವಮುಕ್ತ್ವಾ ತದಾ ದೇವೀ ದಕ್ಷಂ ಚ ನಿಜಮಾಯಯಾ ।
ಆಸ್ಥಾಯ ಶೈಶವಂ ಭಾವಂ ಜನನ್ಯಂಕೇ ರುರೋದ ಸಾ ॥ ೬೦ ॥

ತತಸ್ತಾಂ ವೀರಣೀ ಯತ್ನಾತ್ಸುಸಂಸ್ಕೃತ್ಯ ಯಥೋಚಿತಂ ॥ ೬೧ ॥

ಶಿಶುಪಾಲೇನ ವಿಧಿನಾ ತಸ್ಯೈ ಸ್ತನ್ಯಾದಿಕಂ ದದೌ ॥ ೬೨ ॥

---

೫೮. ಆವಳು ಹೇಳುವ ಮಾತುಗಳನ್ನು ದಕ್ಷಬ್ರಹ್ಮನು ಹೊರತು ಮತ್ತಾರೂ ಕೇಳದಿರುವಂತೆ ಅಲ್ಲಿರುವ ಪ್ರಾಣಿಗಳನ್ನೆಲ್ಲಾ ಮೋಹಗೊಳಿಸಿ ಹೇಳಿದಳು.

೫೯. ದೇವಿಯು ಹೇಳಿದಳು:—ಋಷಿಶ್ರೇಷ್ಠನಾದ ಎಲೈ ದಕ್ಷನೇ, ನೀನು ಹಿಂದೆ ಯಾವ ಉದ್ದೇಶಸಾಧನೆಗಾಗಿ ನನ್ನನ್ನು ಆರಾಧಿಸಿದೆಯೋ ಆ ನಿನ್ನ ಇಷ್ಟವು ಈಗ ನೆರವೇರಿತೆಂದು ತಿಳಿ.

೬೦. ಮಾರ್ಕಂಡೇಯ ಮುನಿಯು ಹೇಳಿದನು:—ಹೀಗೆ ದಕ್ಷನನ್ನು ಕುರಿತು ಹೇಳಿ, ಆ ದೇವಿಯು ತನ್ನ ಮಾಯೆಯಿಂದ ಶಿಶುವಿನ ರೂಪವನ್ನು ಹೊಂದಿ ತನ್ನ ತಾಯಿಯ ತೊಡೆಯ ಮೇಲೆ ಅಳತೊಡಗಿದಳು.

೬೧–೬೨. ಆಮೇಲೆ ವೀರಣಿಯು ಆ ಮಗುವನ್ನು ಯೋಗ್ಯವಾದ ಲಾಲನೆ ಪಾಲನೆ ಮೊದಲಾದ ಮಕ್ಕಳನ್ನು ಸಲಹುವ ಕ್ರಮದಿಂದ ಸಮಾಧಾನ ಪಡಿಸಿ, ಆದಕ್ಕೆ ಸ್ತನ್ಯಪಾನವನ್ನು ಮಾಡಿಸಿದಳು.

ಪಾಲಿತಾ ಸಾಥ ವೀರಿಣ್ಯಾ ದಕ್ಷೇಣ ಸುಮಹಾತ್ಮನಾ ।
ವವೃಧೇ ಶುಕ್ಲಪಕ್ಷಸ್ಯ ನಿಶಾನಾಥೋ ಯಥಾನ್ವಹಂ ॥ ೩೩ ॥

ತಸ್ಯಾಂ ತು ಸದ್ಗುಣಾಃ ಸರ್ವೇ ವಿವಿಶುರ್ದ್ವಿಜಸತ್ತಮಾಃ ।
ಶೈಶವೇಽಪಿ ಯಥಾ ಚಂದ್ರೇ ಕಲಾಃ ಸರ್ವಾ ಮನೋಹರಾಃ ॥ ೩೪ ॥

ರೇಮೇ ಸಾ ನಿಜಭಾವೇನ ಸಖೀಮಧ್ಯಗತಾ ಯದಾ ।
ತದಾ ಲಿಖತಿ ಭರ್ಗಸ್ಯ ಪ್ರತಿಮಾಮನ್ವಹಂ ಮುಹುಃ ॥ ೩೫ ॥

ಯದಾ ಗಾಯತಿ ಗೀತಾನಿ ತದಾ ಬಾಲ್ಯೋಚಿತಾನಿ ಸಾ ।
ಉಗ್ರಂ ಸ್ಥಾಣುಂ ಹರಂ ರುದ್ರಂ ಸಸ್ಮಾರ ಸ್ಮರಮಾನಸಾ ॥ ೩೬ ॥

ತಸ್ಯಾಶ್ಚಕ್ರೇ ನಾಮ ದಕ್ಷಃ ಸತೀತಿ ದ್ವಿಜಸತ್ತಮಾಃ ।
ಪ್ರಶಸ್ತಾಯಾಃ ಸರ್ವಗುಣೈಃ ಸತ್ತ್ವಾದಪಿ ನಯಾದಪಿ ॥ ೩೭ ॥

---

೩೩. ಬಳಿಕ ಆ ದೇವಿಯು, ವೀರಣಿಯಿಂದಲೂ, ಮಹಾತ್ಮನಾದ ದಕ್ಷನಿಂದಲೂ ಸಲಹಲ್ಪಡುತ್ತಾ, ಶುಕ್ಲಪಕ್ಷದ ಚಂದ್ರನಂತೆ ದಿನದಿನದಲ್ಲೂ ಬೆಳೆಯುತ್ತಿದ್ದಳು.

೩೪. ಎಲೈ ಬ್ರಾಹ್ಮಣೋತ್ತಮರೇ, ಚಂದ್ರನನ್ನು ಕಲೆಗಳು ಸೇರುವಂತೆ, ಬಾಲ್ಯದಲ್ಲಿಯೇ ಆವಳಲ್ಲಿ ಎಲ್ಲ ಒಳ್ಳೆಯ ಗುಣಗಳೂ ಬಂದು ಸೇರಿದವು.

೩೫. ಅವಳು ಗೆಳತಿಯರೊಡನೆ ಸೇರಿಕೊಂಡು ಬಾಲ್ಯಭಾವಕ್ಕೆ ತಕ್ಕಂತೆ ಆಟವಾಡುವಾಗಲೆಲ್ಲ ಪರಮೇಶ್ವರನ ಚಿತ್ರವನ್ನು ಬರೆಯುತ್ತಿದ್ದಳು.

೩೬. ಹುಡುಗತನದಿಂದ ಹಾಡುವಾಗ ಅವಳು, ಉಗ್ರನೆಂದೂ, ಸ್ಥಾಣುವೆಂದೂ, ಹರನೆಂದೂ, ರುದ್ರನೆಂದೂ ಶಂಕರನ ಹೆಸರುಗಳನ್ನು ಹಾಡಿ ಶೃಂಗಾರ ಭಾವದಿಂದ ಆವನನ್ನು ಸ್ಮರಿಸುತ್ತಿದ್ದಳು.

೩೭. ಎಲೈ ಬ್ರಾಹ್ಮಣೋತ್ತಮರೇ, ಸೌಂದರ್ಯ ಸೌಶೀಲ್ಯಾದಿ ಗುಣಗಳಿಂದಲೂ ತೇಜಸ್ಸಿನಿಂದಲೂ ವಿನಯದಿಂದಲೂ ಕೂಡಿ ಶ್ರೇಷ್ಠಳಾದ ಅವಳಿಗೆ ದಕ್ಷನು ಸತೀ ಎಂದು ಹೆಸರಿಟ್ಟನು.

ವವೃಧೇ ದಕ್ಷವೀರಿಣ್ಯೋಃ ಪ್ರತ್ಯಹಂ ಕರುಣಾತುಲಾ । ॥ ೬೮ ॥
ತಸ್ಯಾಂ ಬಾಲ್ಯೇಽಪಿ ಭಕ್ತ್ಯಾಯಾಂ ತಯೋರ್ನಿತ್ಯಂ ಮುಹುರ್ಮುಹುಃ
ಸರ್ವಕಾಂತಗುಣಾಕ್ರಾಂತಾ ಸದಾ ಸಾ ನಯಶಾಲಿನೀ ।
ತೋಷಯಾಮಾಸ ಪಿತರೌ ನಿತ್ಯಂ ನಿತ್ಯಂ ನರೋತ್ತಮಾಃ ॥ ೬೯ ॥
ಅಥೈಕದಾ ಪಿತುಃ ಪಾರ್ಶ್ವೇ ತಿಷ್ಠಂತೀಂ ತಾಂ ಸತೀಂ ವಿಧಿಃ ।
ನಾರದಶ್ಚ ದದರ್ಶಾಥ ರತ್ನಭೂತಾಂ ಕ್ಷಿತೌ ಶುಭಾಂ ॥ ೭೦ ॥
ಸಾಪಿ ತೌ ವೀಕ್ಷ್ಯ ಮುದಿತಾ ವಿನಯಾವನತಾ ತದಾ ।
ಪ್ರಣನಾಮ ಸತೀ ದೇವಂ ಬ್ರಹ್ಮಾಣಮಥ ನಾರದಂ ॥ ೭೧ ॥
ಪ್ರಣಾಮಾಂತೇ ಸತೀಂ ವೀಕ್ಷ್ಯ ವಿನಯಾವನತಾಂ ವಿಧಿಃ ।
ನಾರದಶ್ಚ ತಥೈವಾಶೀರ್ವಾದಮೇತಮುವಾಚ ಹ ॥ ೭೨ ॥

---

೬೮. ಬಾಲ್ಯದಲ್ಲಿಯೇ ತಂದೆ ತಾಯಿಗಳಾದ ದಕ್ಷ ಮತ್ತು ವೀರಿಣಿಯರಲ್ಲಿ ಭಕ್ತಿಯಿಂದ ನಡೆಯುತ್ತಾ ಅವಳು ಅವರ ಪ್ರೀತಿಗೆ ಪಾತ್ರಳಾಗಿ ದಿನದಿನವೂ ಬೆಳೆಯುತ್ತಿದ್ದಳು.

೬೯. ಎಲೈ ಪುರುಷಶ್ರೇಷ್ಠರೇ, ಆ ಸತಿಯು ಎಲ್ಲ ಒಳ್ಳೆಯ ಗುಣಗಳಿಂದಲೂ ವಿನಯದಿಂದಲೂ ಕೂಡಿದವಳಾಗಿ ನಿತ್ಯವೂ ತನ್ನ ತಾಯಿ ತಂದೆಗಳನ್ನು ಸಂತೋಷಗೊಳಿಸುತ್ತಿದ್ದಳು.

೭೦. ಆಮೇಲೊಂದು ದಿನ ತಂದೆಯಾದ ದಕ್ಷಬ್ರಹ್ಮನ ಸಮೀಪದಲ್ಲಿ ಕುಳಿತು ಭೂಲೋಕದಲ್ಲಿ ರತ್ನದಂತೆ ಶ್ರೇಷ್ಠಳಾಗಿಯೂ ಮಂಗಳಸ್ವರೂಪಳಾಗಿಯೂ ಇರುವ ಆ ಸತೀದೇವಿಯನ್ನು ಬ್ರಹ್ಮನೂ ನಾರದನೂ ಇಬ್ಬರೂ ನೋಡಿದರು.

೭೧. ಆ ಸತಿಯೂ ಸಹ ಅವರನ್ನು ನೋಡಿ ಸಂತೋಷಗೊಂಡು, ವಿನಯದಿಂದ ನಮ್ರಳಾಗಿ ಬ್ರಹ್ಮನನ್ನೂ ನಾರದಮುನಿಯನ್ನೂ ನಮಸ್ಕರಿಸಿದಳು.

೭೨. ನಮಸ್ಕರಿಸಿ ವಿನಯದಿಂದ ಬಗ್ಗಿ ನಿಂತಿರುವ ಆ ಸತಿಯನ್ನು ಬ್ರಹ್ಮನೂ ನಾರದನೂ ಹೀಗೆ ಆಶೀರ್ವದಿಸಿದರು.

ತ್ವಾಮೇವ ಯಃ ಕಾಮಯತೇ ಯಂ ತ್ವಂ ಕಾಮಯಸೇ ಪತಿಂ ।
ತಮಾಪ್ನುಹಿ ಪತಿಂ ದೇವಂ ಸರ್ವಜ್ಞಂ ಜಗದೀಶ್ವರಂ ॥ ೭೩ ॥

ಯೋ ನಾನ್ಯಾಂ ಜಗೃಹೇ ನಾಪಿ ಗೃಹ್ಣಾತಿ ನ ಗ್ರಹಿಷ್ಯತಿ ।
ಜಾಯಾಂ ಸ ತೇ ಪತಿರ್ಭೂಯಾದನನ್ಯಸದೃಶಃ ಶುಭೇ ॥ ೭೪ ॥

ಇತ್ಯುಕ್ತ್ವಾ ಸುಚಿರಂ ತೌ ತು ಸ್ಥಿತ್ವಾ ದಕ್ಷಾಶ್ರಮೇ ಪುನಃ ।
ವಿಸೃಷ್ಟೌ ತೇನ ಸಂಯಾತೌ ಸ್ವಸ್ಥಾನಂ ದ್ವಿಜಸತ್ತಮಾಃ ॥ ೭೫ ॥

॥ ಇತಿ ಶ್ರೀಕಾಲಿಕಾಪುರಾಣೇಽಷ್ಟಮೋಽಧ್ಯಾಯಃ ॥

---

೭೩. ಎಲೈ ಸತಿಯೇ, ನಿನ್ನನ್ನು ಯಾವನು ಪ್ರೀತಿಸುವನೋ, ನೀನೂ ಸಹ ಯಾರನ್ನು ಪತಿಯಾಗಬೇಕೆಂದು ಬಯಸಿ ಪ್ರೀತಿಸುವೆಯೋ, ಸರ್ವಜ್ಞನಾಗಿಯೂ ಜಗತ್ತಿಗೆ ಪತಿಯಾಗಿಯೂ ಇರುವ ಆ ಮಹಾದೇವನನ್ನು ನೀನು ಪತಿಯಾಗಿ ಪಡೆಯುವೆ.

೭೪. ಎಲೈ ಮಂಗಳಾಂಗಿಯೇ, ನಿನ್ನ ಹೊರತು ಇನ್ನೊಬ್ಬಳನ್ನು ಯಾರು ಪತ್ನಿಯಾಗಿ ಸ್ವೀಕರಿಸಲಿಲ್ಲವೋ ಸ್ವೀಕರಿಸುವುದೂ ಇಲ್ಲವೋ ಅಂತಹ ಅಸಮಾನಸುಂದರನಾದ ಆ ದೇವನೇ ನಿನಗೆ ಪತಿಯಾಗಲಿ.

೭೫. ಎಲೈ ಬ್ರಾಹ್ಮಣಶ್ರೇಷ್ಠರೇ, ಹೀಗೆ ಸತಿಯನ್ನು ಆಶೀರ್ವದಿಸಿ ಆ ಬ್ರಹ್ಮ, ನಾರದರು ದಕ್ಷಬ್ರಹ್ಮನ ಆಶ್ರಮದಲ್ಲಿ ಬಹಳ ಹೊತ್ತಿದ್ದು, ಬಳಿಕ ಅವನಿಂದ ಬೀಳ್ಕೊಂಡವರಾಗಿ ತಮ್ಮ ಸ್ಥಾನಕ್ಕೆ ಹೊರಟುಹೋದರು.

ಇಲ್ಲಿಗೆ ಶ್ರೀಕಾಲಿಕಾಪುರಾಣದಲ್ಲಿ ಎಂಟನೆಯ ಅಧ್ಯಾಯವು ಮುಗಿದುದು.

॥ ೨ ॥

॥ ಅಥ ಶ್ರೀಕಾಲಿಕಾಪುರಾಣೇ ನವಮೋಽಧ್ಯಾಯಃ ॥

ಒಂಭತ್ತನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ಬಾಲ್ಯಂ ವ್ಯತೀತ್ಯ ಸಾ ಪ್ರಾಪ ಯೌವನಂ ಶೋಭನಂ ತತಃ ।
ಅತೀವ ರೂಪೇಣಾಂಗೇನ ಸರ್ವಾಂಗಸುಮನೋಹರಾ ॥ ೧ ॥

ತಾಂ ವೀಕ್ಷ್ಯ ದಕ್ಷೋ ಲೋಕೇಶಃ ಪ್ರೋದ್ಭಿನ್ನಾಂತರ್ಮಯಸ್ಥಿತಾಂ ।
ಚಿಂತಯಾಮಾಸ ಭರ್ಗಾಯ ಕಥಂ ದಾಸ್ಯ ಇಮಾಂ ಸುತಾಂ ॥ ೨ ॥

ಅಥ ಸಾಪಿ ಸ್ವಯಂ ಭರ್ಗಂ ಪ್ರಾಪ್ತುಮೈಚ್ಛತ್ತದಾನ್ವಹಂ ।
ಆರಾಧಯಾಮಾಸ ಚ ತಂ ಗೃಹೇ ಮಾತುರನುಜ್ಞಯಾ ॥ ೩ ॥

---

೧. ಮಾರ್ಕಂಡೇಯ ಮುನಿಯು ಕಮಠನೇ ಮೊದಲಾದ ಋಷಿಗಳಿಗೆ ಹೇಳತೊಡಗಿದನು:—ಎಲೈ ಬ್ರಾಹ್ಮಣೋತ್ತಮರೇ ಆ ಸತೀದೇವಿಯು ಬಾಲ್ಯವನ್ನು ದಾಟಿ ಮನೋಹರವಾದ ಯೌವನವನ್ನು ಪಡೆದು ಸುಂದರವಾದ ಅವಯವಗಳಿಂದ ಅತ್ಯಂತ ಮನೋಹರವಾಗಿ ಒಪ್ಪುತ್ತಿದ್ದಳು.

೨. ಬಾಲ್ಯವನ್ನು ದಾಟಿ, ಮನೋಹರವಾದ ಯೌವನದಲ್ಲಿರುವ ಆ ಸತಿಯನ್ನು ನೋಡಿ ಲೋಕಪತಿಯಾದ ದಕ್ಷನು, ಈ ಸತಿಯನ್ನು ಶಂಕರನಿಗೆ ಕೊಡಲು ಏನು ಮಾಡಬೇಕೆಂದು ಯೋಚಿಸಿದನು.

೩. ಆ ಮೇಲೆ ಆ ಸತೀದೇವಿಯೂ ಸಹ ಈಶ್ವರನನ್ನು ಪತಿಯಾಗಿ ಪಡೆಯಲಿಚ್ಛೆಯಿಂದ ಅವನನ್ನು ಮನೆಯಲ್ಲಿ ತಾಯಿಯ ಅನುಮತಿಯಿಂದ ಪ್ರತಿದಿನವೂ ಆರಾಧಿಸುತ್ತಿದ್ದಳು.

ಆಶ್ವಿನೇ ನಂದಕಾಖ್ಯಾಯಾಂ ಲವಣೈಃ ಸಗುಡೋದನೈಃ ।
ಪೂಜಯಿತ್ವಾ ಹರಂ ಪಶ್ಚಾದ್ವವಂದೇ ಸಾ ನಿನಾಯ ತತ್ ॥ ೪ ॥

ಕಾರ್ತಿಕಸ್ಯ ಚತುರ್ದಶ್ಯಾಂ ಸಾಽಪೂಪೈಃ ಪಾಯಸೈರ್ಹರಂ ।
ಸಮಾಕೀರ್ಣೈಃ ಸಮಾರಾಧ್ಯ ಸಸ್ಮಾರ ಪರಮೇಶ್ವರಂ ॥ ೫ ॥

ಕೃಷ್ಣಾಷ್ಟಮ್ಯಾಂ ಮಾರ್ಗಶೀರ್ಷೇ ಸಲಿಲೈಃ ಸಯವೋದನೈಃ ।
ಪೂಜಯಿತ್ವಾ ಹರಂ ನೀಲೈರ್ನಿನಾಯ ದಿವಸಂ ಪುನಃ ॥ ೬ ॥

ಪೌಷೇತು ಕೃಷ್ಣಸಪ್ತಮ್ಯಾಂ ಕೃತ್ವಾ ಜಾಗರಣಂ ನಿಶಿ ।
ಅಪೂಜಯಚ್ಛಿವಂ ಪ್ರಾತಃ ಕೃಶರಾನ್ನೇನ ಸಾ ಸತೀ ॥ ೭ ॥

ಮಾಘಸ್ಯ ಪೌರ್ಣಮಾಸ್ಯಾಂ ತು ಕೃತ್ವಾ ಜಾಗರಣಂ ನಿಶಿ ।
ಆರ್ದ್ರವಸ್ತ್ರಾ ನದೀತೀರೇ ಹ್ಯಕರೋದ್ಧರಪೂಜನಂ ॥ ೮ ॥

---

೪. ಆಶ್ವಯುಜ ಮಾಸದ ನಂದಕವೆಂಬ ತಿಥಿಯಲ್ಲಿ (ನಂದಾಷ್ಟಮಿ) ಆ ಶಂಕರನನ್ನು ಭಕ್ತಿಯಿಂದ ಪೂಜಿಸಿ ಬೆಲ್ಲ ಮಿಶ್ರವಾದ ಆನ್ನದ ಮತ್ತು ಲವಣಾನ್ನದ ನಿವೇದನೆಗಳಿಂದ ಸಂತುಷ್ಟಿ ಪಡಿಸಿ, ಆ ಶಂಕರನನ್ನು ಭಕ್ತಿಭಾವ ದಿಂದ ನಮಸ್ಕರಿಸಿದಳು. ಈ ಆರಾಧನೆಯಿಂದ ಆ ದಿನವನ್ನು ಕಳೆದಳು.

೫. ಕಾರ್ತಿಕ ಮಾಸದ ಚತುರ್ದಶಿಯಲ್ಲಿ, ಹೋಳಿಗೆ ಪಾಯಸಗಳ ನಿವೇದನೆಯಿಂದ ಶಂಕರನನ್ನು ಆರಾಧಿಸಿ ಧ್ಯಾನಮಾಡಿದಳು.

೬. ಮಾರ್ಗಶಿರ ಮಾಸದ ಬಹುಳ ಅಷ್ಟಮಿಯಲ್ಲಿ ರುದ್ರಾಭಿಷೇಕ ದಿಂದಲೂ ಮಹಾನ್ನ ನೈವೇದ್ಯದಿಂದಲೂ, ಕನ್ನೈದಿಲೆಗಳ ಅರ್ಚನೆಗಳಿಂದಲೂ ಶಂಕರನನ್ನು ಪೂಜಿಸುತ್ತಾ ಆ ದಿವಸವನ್ನು ಕಳೆದಳು.

೭. ಪುಷ್ಯಮಾಸದ ಬಹುಳ ಸಪ್ತಮಿಯಲ್ಲಿ ಆ ಸತಿಯು ರಾತ್ರಿಯೆಲ್ಲಾ ಜಾಗರಣೆಮಾಡಿ ಬೆಳಗಾದ ಮೇಲೆ ಎಳ್ಳುಹುಡಿಯನ್ನವನ್ನು ನಿವೇದಿಸಿ ಮಹಾ ದೇವನನ್ನು ಪೂಜಿಸಿದಳು.

೮. ಮಾಘ ಮಾಸದ ಹುಣ್ಣಿಮೆಯಲ್ಲಿ ರಾತ್ರಿ ಜಾಗರಣವನ್ನು ಮಾಡಿ ಬೆಳಿಗ್ಗೆ ನದಿಯ ದಡದಲ್ಲಿ ಒದ್ದೆಬಟ್ಟೆಯನ್ನುಟ್ಟುಕೊಂಡು ಶಂಕರನನ್ನು ಆರಾಧಿ ಸಿದಳು.

ನಾನಾವಿಧೈಃ ಫಲೈಃ ಪುಷ್ಪೈಃ ಸಮ್ಯಕ್ತತ್ಕಾಲಸಂಭವೈಃ ।
ಚಕಾರ ನಿಯತಾಹಾರಂ ತಂ ಮಾಸಂ ಹರಮಾನಸಾ ॥ ೯ ॥

ಚತುರ್ದಶ್ಯಾಂ ಕೃಷ್ಣಪಕ್ಷೇ ತಪಸ್ಯಸ್ಯ ವಿಶೇಷತಃ ।
ಕೃತ್ವಾ ಜಾಗರಣಂ ದೇವಂ ಬಿಲ್ವಪತ್ರೈರಪೂಜಯತ್ ॥ ೧೦ ॥

ಚೈತ್ರಶುಕ್ಲಚತುರ್ದಶ್ಯಾಂ ಪಾಲಾಶೈಃ ಕುಸುಮೈಃ ಶಿವಂ ।
ಅಪೂಜಯದ್ದಿವಾರಾತ್ರೌ ತಂ ಸ್ಮರಂತೀ ನಿನಾಯ ತಂ ॥ ೧೧ ॥

ವೈಶಾಖಸ್ಯ ತೃತೀಯಾಯಾಂ ಶುಕ್ಲಾಯಾಂ ಸಯವೋದನೈಃ ।
ಪೂಜಯಿತ್ವಾ ಹರಂ ದೇವಂ ಗನ್ಧೈರ್ಮಾಸಂ ಚರಂತ್ಯನು ॥ ೧೨ ॥
ನಿನಾಯ ಸಾ ನಿರಾಹಾರಾ ಸ್ಮರಂತೀ ವೃಷವಾಹನಂ ।

---

೯. ಆಗ ಅವಳು ಆ ಕಾಲದಲ್ಲಿ ಸಿಕ್ಕಿದ ಅನೇಕಬಗೆಯ ಹೂವು ಮತ್ತು ಹಣ್ಣುಗಳಿಂದ ಶಂಕರನನ್ನು ಅರ್ಚಿಸಿದಳು. ಆ ತಿಂಗಳೆಲ್ಲಾ ಮಿತವಾದ ಆಹಾರವನ್ನು ಸೇವಿಸುತ್ತಾ ಶಂಕರನ ಧ್ಯಾನದಲ್ಲೇ ಆಸಕ್ತಳಾಗಿದ್ದಳು.

೧೦. ಫಾಲ್ಗುಣ ಮಾಸದ ಬಹುಳ ಚತುರ್ದಶಿಯಲ್ಲಿ ಆ ಸತಿಯು ರಾತ್ರಿ ಜಾಗರಣೆಯಿಂದಿದ್ದು ಬಿಲ್ವಪತ್ರಗಳಿಂದ ಮಹಾದೇವನನ್ನು ಚೆನ್ನಾಗಿ ಅರ್ಚಿಸಿದಳು.

೧೧. ಚೈತ್ರ ಮಾಸದ ಶುಕ್ಲಪಕ್ಷದ ಚತುರ್ದಶಿಯಲ್ಲಿ ಮುತ್ತುಗದ ಹೂವು ಗಳಿಂದ ಶಂಕರನನ್ನು ಹಗಲಿನಲ್ಲೂ ರಾತ್ರಿಯಲ್ಲೂ ಅರ್ಚನೆಮಾಡಿ, ಅವನನ್ನು ಧ್ಯಾನಮಾಡುತ್ತಾ ಆ ದಿನವನ್ನು ಕಳೆದಳು.

೧೨. ವೈಶಾಖ ಶುದ್ಧ ತದಿಗೆಯಲ್ಲಿ, ಮಹಾನ್ನವನ್ನೂ, ಹಸುವಿನ ಹಾಲು ಮೊಸರು ಮುಂತಾದುವುಗಳನ್ನೂ ನಿವೇದಿಸಿ ಶಂಕರನನ್ನು ಪೂಜಿಸಿದಳು. ಮತ್ತು ಆ ತಿಂಗಳನ್ನು, ಯಾವ ಆಹಾರವನ್ನೂ ಸೇವಿಸದೆ ಉಪವಾಸ ಮಾಡುತ್ತಾ ಶಂಕರನ ಸ್ಮರಣೆಯಲ್ಲೇ ಕಳೆದಳು.

ಜ್ಯೇಷ್ಠಸ್ಯ ಪೂರ್ಣಿಮಾರಾತ್ರೌ ಸಂಪೂಜ್ಯ ವೃಷವಾಹನಂ
ವಸನೈರ್ಬೃಹತೀಪುಷ್ಪೈರ್ನಿರಾಹಾರಾ ನಿನಾಯ ತಾಂ ॥ ೧೩ ॥

ಆಷಾಢಸ್ಯ ಚತುರ್ದಶ್ಯಾಂ ಶುಕ್ಲಾಯಾಂ ಕೃತ್ತಿವಾಸಸಃ ।
ಬೃಹತೀಕುಸುಮೈಃ ಪೂಜಾ ದೇವಸ್ಯಾಕಾರಿ ವೈ ತಯಾ ॥ ೧೪ ॥

ಶ್ರಾವಣಸ್ಯ ಸಿತಾಷ್ಟಮ್ಯಾಂ ಚತುರ್ದಶ್ಯಾಂ ಚ ಸಾ ಶಿವಂ ।
ಯಜ್ಞೋಪವೀತೈರ್ವಾಸೋಭಿಃ ಪವಿತ್ರೈರಪ್ಯಪೂಜಯತ್ ॥ ೧೫ ॥

ಭಾದ್ರೇ ಕೃಷ್ಣತ್ರಯೋದಶ್ಯಾಂ ಪುಷ್ಪೈರ್ನಾನಾವಿಧೈಃ ಫಲೈಃ ।
ಸಂಪೂಜ್ಯಾಥ ಚತುರ್ದಶ್ಯಾಂ ಚಕಾರ ಫಲಭೋಜನಂ ॥ ೧೬ ॥

ಇತಿ ವ್ರತಂ ಯದಾರಬ್ಧಂ ಪುರಾ ಸತ್ಯಾ ತದೈವ ತು ।
ಸಾವಿತ್ರೀಸಹಿತೋ ಬ್ರಹ್ಮಾ ಜಗಾಮಾಥ ಹರಾಂತಿಕಂ ॥ ೧೭ ॥

---

೧೩. ಜ್ಯೇಷ್ಠ ಮಾಸದ ಹುಣ್ಣಿಮೆ ರಾತ್ರಿಯಲ್ಲಿ, ನಂದಿವಾಹನನಾದ ಶಂಕರನನ್ನು ಶುಭ್ರ ವಸ್ತ್ರಗಳಿಂದಲೂ ಬೃಹತೀಪುಷ್ಪಗಳಿಂದಲೂ ಅರ್ಚಿಸಿ, ಆ ರಾತ್ರಿಯನ್ನು ಆಹಾರವನ್ನು ಸೇವಿಸದೆ ಕಳೆದಳು.

೧೪. ಆಷಾಢ ಶುದ್ಧ ಚತುರ್ದಶೀ ತಿಥಿಯಲ್ಲಿ ಆ ಸತಿಯು ಮಹಾದೇವನನ್ನು ಬೃಹತೀ ಪುಷ್ಪಗಳಿಂದ ಅರ್ಚಿಸಿದಳು.

೧೫. ಶ್ರಾವಣ ಶುದ್ಧ ಅಷ್ಟಮಿಯಲ್ಲೂ ಚತುರ್ದಶಿಯಲ್ಲೂ ಆ ಸತಿಯು ಶಿವನನ್ನು ಪವಿತ್ರವಾದ ಯಜ್ಞೋಪವೀತಗಳಿಂದಲೂ, ವಸ್ತ್ರಗಳಿಂದಲೂ ಪೂಜಿಸಿದಳು.

೧೬. ಭಾದ್ರಪದ ಮಾಸದ ಬಹುಳ ತ್ರಯೋದಶಿಯಲ್ಲಿ ಅನೇಕ ಬಗೆಯ ಹೂವುಗಳಿಂದಲೂ ಹಣ್ಣುಗಳಿಂದಲೂ ಶಂಕರನನ್ನು ಅರ್ಚಿಸಿ, ಅಂದು ಉಪವಾಸವಿದ್ದು, ಮರುದಿನ ಚತುರ್ದಶಿಯಲ್ಲಿ ಹಣ್ಣುಗಳನ್ನು ಮಾತ್ರ ಸೇವಿಸಿದಳು

೧೭. ಹೀಗೆ ಆ ಸತೀದೇವಿಯು ವ್ರತವನ್ನು ಯಾವಾಗ ಆರಂಭಿಸಿದಳೋ ಆಗಲೇ ಬ್ರಹ್ಮನು ಸಾವಿತ್ರಿಯೊಡನೆ ಈಶ್ವರನಿರುವಲ್ಲಿಗೆ ಹೋದನು.

ವಾಸುದೇವೋऽಪಿ ಭಗವಾನ್ಸಹ ಲಕ್ಷ್ಮ್ಯಾ ತದಂತಿಕಂ ।
ಪ್ರಸ್ಥಂ ಹಿಮವತಃ ಶಂಭುಃ ಸ್ಥಿತೋ ಯತ್ರ ಗಣೈಃ ಸಹ ॥ ೧೮ ॥

ತೌ ತು ದೃಷ್ಟ್ವಾ ಬ್ರಹ್ಮಕೃಷ್ಣೌ ಸಸ್ತ್ರೀಕೌ ಸಂಗತೌ ಹರಃ ।
ಯಥೋಚಿತಂ ಸಮಾಭಾಷ್ಯ ಪಪ್ರಚ್ಛಾಗಮನಂ ತಯೋಃ ॥ ೧೯ ॥

ತಥಾವಿಧಾಂಸ್ತು ತಾನ್ದೃಷ್ಟ್ವಾ ದಾಂಪತ್ಯಭಾವಸಂಯುತಾನ್ ।
ಕಾಂಚಿದೀಹಾಂ ಚ ಮನಸಾ ಚಕ್ರೇ ದಾರಪರಿಗ್ರಹೇ ॥ ೨೦ ॥

ಅಥಾಗಮನಹೇತುಂ ನಃ ಕಥಯಧ್ವಂ ಚ ತತ್ತ್ವತಃ ॥
ಕಿಮುರ್ಥಮಾಗತಾ ಯೂಯಂ ಕಿಂ ಕಾರ್ಯಂ ವೋऽತ್ರ ವಿದ್ಯತೇ ॥ ೨೧ ॥

ಇತಿ ಪೃಷ್ಟಸ್ತ್ರ್ಯಂಬಕೇನ ಬ್ರಹ್ಮಾ ಲೋಕಪಿತಾಮಹಃ ॥
ಉವಾಚ ಚ ಮಹಾದೇವಂ ವಿಷ್ಣುನಾ ಪರಿಚೋದಿತಃ ॥ ೨೨ ॥

---

೧೮. ಪೂಜ್ಯನಾದ ವಿಷ್ಣುವೂ ಸಹ ಗಣಗಳೊಂದಿಗೆ ಶಂಕರನು ವಾಸಿಸುತ್ತಲಿರುವ ಹಿಮವತ್ಪರ್ವದ ತಪ್ಪಲಿಗೆ ಲಕ್ಷ್ಮಿಯೊಡನೆ ಬಂದನು.

೧೯. ತಮ್ಮತಮ್ಮ ಹೆಂಡತಿಯರೊಂದಿಗೆ ಬಂದಿರುವ ವಿಷ್ಣು ಬ್ರಹ್ಮರನ್ನು ನೋಡಿ ಶಂಕರನು ಅವರನ್ನು ಸ್ವಾಗತಿಸಿ ಯಥಾಯೋಗ್ಯವಾಗಿ ಕುಶಲಪ್ರಶ್ನೆಯನ್ನು ಮಾಡಿ ಅವರು ಬಂದ ಕಾರಣವೇನೆಂದು ಕೇಳಿದನು.

೨೦. ಗಂಡಹೆಂಡಿರಭಾವದಿಂದ ಕೂಡಿರುವ ಅವರೆಲ್ಲರನ್ನೂ ನೋಡಿ ಶಂಕರನು ಮನಸ್ಸಿನಲ್ಲಿ ತಾನೂ ಮದುವೆಯನ್ನು ಮಾಡಿಕೊಳ್ಳಬೇಕೆಂಬ ಇಚ್ಛೆಯುಳ್ಳವನಾದನು.

೨೧. ನೀವು ಬಂದ ಕಾರಣವನ್ನು ನನಗೆ ಹೇಳಿರಿ. ಎಲೈ ಬ್ರಹ್ಮ ವಿಷ್ಣುಗಳಿರಾ, ನೀವು ಇಲ್ಲಿಗೆ ಏತಕ್ಕಾಗಿ ಬಂದಿರುವಿರಿ? ನಿಜವನ್ನು ಹೇಳಿ. ಇಲ್ಲಿ ನಿಮ್ಮ ಕೆಲಸವು ಏನು ಇರುವುದು?

೨೨. ಹೀಗೆ ಆ ಶಂಕರನು ಕೇಳಲು ಜಗತ್ಪಿತಾಮಹನಾದ ಬ್ರಹ್ಮನು ವಿಷ್ಣುವಿನಿಂದ ಪ್ರೇರಿತನಾಗಿ ಆ ಮಹಾದೇವನನ್ನು ಕುರಿತು ಹೀಗೆ ಹೇಳಿದನು.

॥ ಬ್ರಹ್ಮೋವಾಚ ॥

ಯದರ್ಥಮಾಗತಾವಾವಾಂ ತಚ್ಛೃಣುಷ್ವ ತ್ರಿಲೋಚನ ।
ವಿಶೇಷತಶ್ಚ ದೇವಾರ್ಥಂ ವಿಶ್ವಾರ್ಥಂ ಚ ವೃಷಧ್ವಜ ॥೨೩॥

ಅಹಂ ಸೃಷ್ಟಿರತಃ ಶಂಭೋ ಸ್ಥಿತಿಹೇತುಸ್ತಥಾ ಹರಿಃ ।
ಅಂತಹೇತುರ್ಭವಾನಸ್ಯ ಜಗತಃ ಪ್ರತಿಸರ್ಗಕಂ ॥ ೨೪ ॥

ತತ್ಕರ್ಮಣಿ ಸದೈವಾಹಂ ಭವದ್ಭ್ಯಾಂ ಸಹಿತೋ ಹ್ಯಲಂ ।
ಹರಿಃ ಸ್ಥಿತಾವಪಿ ತಥಾ ಮಯ್ಯಾಽಲಂ ಭವತಾ ಸಹ ॥ ೨೫ ॥

ತ್ವಮಂತಕರಣೇ ಶಕ್ತೋ ವಿನಾ ನ್ಯಾವಾಂ ಭವಿಷ್ಯಸಿ ॥ ೨೬ ॥

---

೨೩. ಬ್ರಹ್ಮನು ಹೇಳಿದನು:—ಎಲೈ ಮಹಾದೇವನೇ, ನಾವು ಬಂದಿರುವುದು ಏತಕ್ಕೆಂಬುದನ್ನು ಹೇಳುವೆವು, ಕೇಳು. ಎಲೈ ವೃಷಭವಾಹನನೇ, ದೇವತೆಗಳ ಮತ್ತು ಜಗತ್ತಿನ ಹಿತಕ್ಕಾಗಿ ನಾವು ಹೇಳುವ ಮಾತುಗಳನ್ನು ಕೇಳುವವನಾಗು.

೨೪. ಓ ಶಂಭುವೇ, ಪ್ರತಿಕಲ್ಪದಲ್ಲಿಯೂ ನಾನು ಈ ಜಗತ್ತನ್ನು ಸೃಷ್ಟಿಸುವವನು; ವಿಷ್ಣುವು ಪಾಲಿಸುವವನು; ನೀನು ಸಂಹರಿಸತಕ್ಕವನು.

೨೫–೨೬. ನಾನು ಮಾಡಬೇಕಾದ ಸೃಷ್ಟಿಕಾರ್ಯವನ್ನು ನಿಮ್ಮಿಬ್ಬರ ಎಂದರೆ ವಿಷ್ಣುಶಂಕರರ ಸಹಾಯದಿಂದಲೇ ಮಾಡುತ್ತೇನೆ. ಹರಿಯೂ ನಮ್ಮಿಬ್ಬರ ಎಂದರೆ, ಬ್ರಹ್ಮಶಂಕರರ ಸಹಾಯದಿಂದಲೇ ಜಗತ್ಪಾಲನ ಕಾರ್ಯವನ್ನು ನಿರ್ವಹಿಸುವನು. ನೀನೂ ಸಹ ನಮ್ಮಿಬ್ಬರ ಎಂದರೆ ವಿಷ್ಣು ಬ್ರಹ್ಮರ ಸಹಾಯವಿಲ್ಲದೆ ನೀನು ಮಾಡಬೇಕಾದ ಸಂಹಾರ ಕಾರ್ಯವನ್ನು ಮಾಡಲಾರೆ.

ತಸ್ಮಾದನ್ಯೋನ್ಯಕೃತ್ಯೇಷು ಸರ್ವೇಷಾಂ ವೃಷಭಧ್ವಜ ।
ಸಾಹಾಯ್ಯಂ ನಃ ಸದಾ ಯೋಗ್ಯಮನ್ಯಥಾ ನ ಜಗದ್ಭವೇತ್ ॥ ೨೭ ॥

ಕೇಚಿದ್ಭವಿಷ್ಯಂತ್ಯಸುರಾ ಮಮ ವಧ್ಯಾ ಮಹೇಶ್ವರ ।
ಅಪರೇ ತು ಹರೇರ್ವಧ್ಯಾ ಭವತೋऽಪಿ ತಥಾಪರೇ ॥ ೨೮ ॥

ಕೇಚಿತ್ತ್ವದ್ವೀರ್ಯಜಾತಸ್ಯ ಕೇಚಿನ್ಮೇಂಶಭವಸ್ಯ ವೈ ।
ಮಾಯಾಯಾಃ ಕೇಚಿದಪರೇ ವಧ್ಯಾಃ ಸ್ಯುರ್ದೇವವೈರಿಣಃ ॥ ೨೯ ॥

ಯೋಗಯುಕ್ತೇ ತ್ವಯಿ ಸದಾ ರಾಗದ್ವೇಷಾದಿ ವರ್ಜಿತೇ ।
ದಯಾಮಾತ್ರೈಕನಿರತೇ ನ ವಧ್ಯಾ ಅಸುರಾಸ್ತವ ॥ ೩೦ ॥

ಅಬಾಧಿತೇಷು ತೇಷ್ವೀಶ ಕಥಂ ಸೃಷ್ಟಿಸ್ತಥಾ ಸ್ಥಿತಿಃ ।
ಅಂತಶ್ಚ ಭವಿತಾ ಯುಕ್ತಂ ನಿತ್ಯಂ ನಿತ್ಯಂ ವೃಷಧ್ವಜ ॥ ೩೧ ॥

---

೨೭. ಆದುದರಿಂದ, ಓ ಶಂಕರನೇ, ನಮ್ಮ ನಮ್ಮ ಕಾರ್ಯಗಳಲ್ಲಿ ಅನ್ಯೋನ್ಯವಾದ ಸಹಾಯವು ಯಾವಾಗಲೂ ಬೇಕೇಬೇಕು. ಇಲ್ಲದಿದ್ದರೆ ಜಗತ್ತೇ ನಿಲ್ಲಲಾರದು.

೨೮. ದೇವತೆಗಳಿಗೆ ದ್ವೇಷಿಗಳಾದ ರಾಕ್ಷಸರು ಮುಂದೆ ಹಲವರು ಜನಿಸುವರು. ಅವರಲ್ಲಿ ಕೆಲವರು ನನ್ನಿಂದ ಕೊಲ್ಲಲ್ಪಡತಕ್ಕವರು; ಕೆಲವರು ವಿಷ್ಣುವಿನಿಂದ ಸಂಹರಿಸಲ್ಪಡತಕ್ಕವರು; ಇನ್ನು ಕೆಲವರು ನಿನ್ನಿಂದ ಸಂಹರಿಸಲ್ಪಡುವವರು.

೨೯. ಆ ರಾಕ್ಷಸರಲ್ಲಿ ಮತ್ತೆ ಕೆಲವರು ನಿನ್ನ ವೀರ್ಯದಿಂದ ಜನಿಸುವ ಮಗನಿಂದ ಸಂಹರಿಸಲ್ಪಡತಕ್ಕವರು; ಕೆಲವರು ನನ್ನ ಅಂಶದಿಂದ ಜನಿಸುವವನಿಂದ ವಧ್ಯರು; ಮತ್ತೆ ಕೆಲವರು ಆದಿಮಾಯೆಯಿಂದ ಸಂಹರಿಸಲ್ಪಡತಕ್ಕವರು.

೩೦. ಆದರೆ ನೀನು ಯಾವಾಗಲೂ ರಾಗದ್ವೇಷಾದಿಗಳನ್ನು ಬಿಟ್ಟು ವೈರಾಗ್ಯದಿಂದಿರುತ್ತ ದಯಾಮಯನಾಗಿ ಬಿಟ್ಟರೆ ಆ ರಾಕ್ಷಸರನ್ನು ಸಂಹರಿಸಲು ಸಾಧ್ಯವಾಗುವುದಿಲ್ಲ.

೩೧. ಓ ಶಂಕರನೇ, ಆ ರಾಕ್ಷಸರನ್ನು ಸಂಹರಿಸದಿದ್ದರೆ, ಸೃಷ್ಟಿಯೂ ಪಾಲನೆಯೂ ಸಂಹಾರವೂ ಯಾವ ತೊಂದರೆಯೂ ಇಲ್ಲದೆ ನಿತ್ಯವೂ ನಡೆಯುವ ಬಗೆಯೆಂತು?

ಸೃಷ್ಟಿಸ್ಥಿತ್ಯಂತಕರ್ಮಾಣಿ ನ ಕಾರ್ಯಾಣಿ ಯದಾ ಹರ ।
ಶರೀರಭೇದಮಸ್ಮಾಕಂ ಮಾಯಾಯಾಶ್ಚ ನ ಯುಜ್ಯತೇ ॥ ೩೨ ॥

ಏಕಸ್ವರೂಪಾ ಹಿ ವಯಂ ಭಿನ್ನಾಃ ಕಾರ್ಯಸ್ಯ ಭೇದತಃ ।
ಕಾರ್ಯಭೇದೋ ನ ಸಿದ್ಧಶ್ಚೇದ್ರೂಪಭೇದೋಽಪ್ರಯೋಜನಃ ॥ ೩೩ ॥

ಏಕ ಏವ ತ್ರಿಧಾ ಭೂತ್ವಾ ವಯಂ ಭಿನ್ನಸ್ವರೂಪಿಣಃ ।
ಭೂತಾ ಮಹೇಶ್ವರ ಇತಿ ತತ್ತ್ವಂ ವಿದ್ಧಿ ಸನಾತನಂ ॥ ೩೪ ॥

ಮಾಯಾಽಪಿ ಭಿನ್ನರೂಪೇಣ ಕಮಲಾಖ್ಯಾ ಸರಸ್ವತೀ ।
ಸಾವಿತ್ರೀ ಚಾಥ ಸಂಧ್ಯಾ ಚ ಭೂತಾ ಕಾರ್ಯಸ್ಯ ಭೇದತಃ ॥ ೩೫ ॥

---

೩೨. ಸೃಷ್ಟಿ ಸ್ಥಿತಿ ನಾಶರೂಪವಾದ ಕಾರ್ಯಗಳು ನಡೆಯದಿದ್ದಮೇಲೆ ನಮ್ಮ ಈ ಬ್ರಹ್ಮ ವಿಷ್ಣು ಶಂಕರರೆಂಬ ಶರೀರಭೇದವೂ, ಮಾಯೆಯ ಶರೀರ ಭೇದವೂ ಯಾವುದಕ್ಕೂ ಬೇಕಾಗಿಲ್ಲವು.

೩೩. ಒಂದೇ ಸ್ವರೂಪವುಳ್ಳ ನಾವು ಸೃಷ್ಟಿಯೇ ಮೊದಲಾದ ಬೇರೆ ಬೇರೆ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಬೇರೆ ಬೇರೆ ರೂಪಗಳಿಂದ ವಿಭಾಗಿಸಲ್ಪಟ್ಟಿರುತ್ತೇವೆ. ಆ ಕಾರ್ಯಗಳು ನಡೆಯದೇ ಹೋದರೆ ನಮ್ಮ ಶರೀರ ಭೇದವೂ ಪ್ರಯೋಜನವಿಲ್ಲದುದಾಗುತ್ತದೆ.

೩೪. ಒಂದೇ ಬ್ರಹ್ಮವಸ್ತುವಾದ ನಾವು ಆಯಾಯ ಕಾರ್ಯಗಳ ನಿರ್ವಹಣೆಗಾಗಿ ಮೂರು ಪ್ರಕಾರದಿಂದ ಭಿನ್ನಸ್ವರೂಪವುಳ್ಳವರಾಗಿರುತ್ತೇವೆ. ಓ ಪರಮೇಶ್ವರನೇ, ನೀನೂ ಪರಮಾರ್ಥವಾದ ಈ ವಿಷಯವನ್ನು ತಿಳಿದೇ ಇರುವೆ.

೩೫. ಆ ಆದಿಮಾಯೆಯೂ ಸಹ ಆಯಾಯ ಕಾರ್ಯಗಳಿಗನುಸಾರವಾಗಿ ಲಕ್ಷ್ಮಿಯಾಗಿಯೂ, ಸರಸ್ವತಿಯಾಗಿಯೂ, ಸಾವಿತ್ರಿಯಾಗಿಯೂ ಸಂಧ್ಯೆಯಾಗಿಯೂ ಬೇರೆ ಬೇರೆ ರೂಪಗಳಿಂದ ಜನಿಸಿರುವಳು.

ಪ್ರವೃತ್ತೇರನುರಾಗಸ್ಯ ನಾರೀ ಮೂಲಂ ಮಹೇಶ್ವರ ।
ರಾಮೂಪರಿಗ್ರಹಾತ್ಪಶ್ಚಾತ್ಕಾಮಕ್ರೋಧಾದಿಕೋದ್ಭವಃ ॥ ೩೬ ॥

ಅನುರಾಗೇ ತು ಸಂಜಾತೇ ಕಾಮಕ್ರೋಧಾದಿಕಾರಣೇ ।
ವಿರಾಗಹೇತುಂ ಯತ್ನೇನ ಸಾಂತ್ವಯಂತೀಹ ಜಂತವಃ ॥ ೩೭ ॥

ಸಂಗಃ ಪ್ರಥಮ ಏವ ಸ್ಯಾದ್ರಾಗವೃಕ್ಷಾತ್ಫಲಂ ಮಹತ್ ।
ತಸ್ಮಾತ್ಸಂಜಾಯತೇ ಕಾಮಃ ಕಾಮಾತ್ಕ್ರೋಧಸ್ತತೋ ಭವೇತ್ ॥೩೮॥

---

೩೬. ಓ ಶಂಕರನೇ, ಪ್ರಾಣಿಗಳಿಗೆ ಸಂಸಾರಪ್ರವೃತ್ತಿಗೂ ಅನುರಾಗಕ್ಕೂ ಸ್ತ್ರೀಯೇ ಮೂಲವು. ಆ ನಾರಿಯನ್ನು ಸ್ವೀಕರಿಸಿದರೆ ಬಳಿಕ ಕಾಮಕ್ರೋಧಾದಿಗಳು ಜನಿಸುತ್ತವೆ.

೩೭. ಕಾಮಕ್ರೋಧಗಳಿಗೆ ಕಾರಣಭೂತವಾದ ಅನುರಾಗವು ಹುಟ್ಟಿದರೆ, ಜನಗಳು ವೈರಾಗ್ಯಕ್ಕೆ ಸಾಧನಭೂತವಾದ ಸತ್ಕರ್ಮಗಳ ಆಚರಣೆಯನ್ನು ಪ್ರಯತ್ನಪೂರ್ವಕವಾಗಿ ತ್ಯಜಿಸುವರು.

೩೮. ಅನುರಾಗವೆಂಬ ಮರದಿಂದ ಮೊದಲು ಆಸಕ್ತಿಯೆಂಬ ದೊಡ್ಡ ಫಲವುಂಟಾಗುತ್ತದೆ. ಅದರಿಂದ ಕಾಮವುಂಟಾಗುತ್ತದೆ. ಮುಂದೆ ಆ ಕಾಮವು ಸಿದ್ಧಿಸದೆ ಹೋದರೆ ಕ್ರೋಧವುಂಟಾಗುವುದು.

ಉದಾಹರಣೆಗಾಗಿ, ಒಬ್ಬ ಪುರುಷನು ಒಬ್ಬ ಸ್ತ್ರೀಯನ್ನು ನೋಡಿ ಅವಳಲ್ಲಿ ಅನುರಕ್ತನಾಗುವನು. ಈ ಅನುರಾಗ ಅಥವಾ ಪ್ರೀತಿಯಿಂದ ಅವನ ಮನಸ್ಸು ಆ ಸ್ತ್ರೀಯಲ್ಲಿಯೇ ಯಾವಾಗಲೂ ಆಸಕ್ತವಾಗುವುದು. ಹೀಗೆ ಸಂತತವಾದ ಆಸಕ್ತಿಯಿಂದ ಆ ಸ್ತ್ರೀಯನ್ನು ಹೊಂದಬೇಕೆಂಬ ಅಪೇಕ್ಷೆಯು ಅಥವಾ ಕಾಮವು ಉಂಟಾಗುವುದು. ಇದು ನೆರವೇರದೆ ಹೋದರೆ, ಎಂದರೆ ಆ ಸ್ತ್ರೀಯು ಇವನಿಗೆ ಲಭಿಸದೆ ಹೋದರೆ, ಮನಸ್ಸಿನಲ್ಲಿ ಕೋಪವು ಹುಟ್ಟುವುದು. ಹೀಗೆ ಅನುರಾಗದಿಂದ ಕಾಮವೂ, ಕಾಮದಿಂದ ಕ್ರೋಧವೂ ಉಂಟಾಗುವುದು ಸ್ತ್ರೀಯರ ವಿಷಯದಲ್ಲಿ ಮಾತ್ರವೇ ಅಲ್ಲ. ದ್ರವ್ಯಾದಿ ಸುಖ ಸಾಧನವಾದ ಯಾವ ಪ್ರಿಯವಸ್ತುವಿನಲ್ಲಾದರೂ ಇದು ಉಂಟಾಗಬಹುದು.

ವೈರಾಗ್ಯಂ ಚ ನಿವೃತ್ತಿಶ್ಚ ಶೋಕಾತ್ಸ್ವಭಾವಿಕಾದಪಿ ।
ಸಂಸಾರವಿಮುಖೇ ಹೇತುರಸಂಗಶ್ಚ ಸದಾತನಃ ॥ ೩೯ ॥

ದಯಾ ತತ್ರ ಭವೇನ್ನಿತ್ಯಂ ಶಾಂತಿಶ್ಚಾಪಿ ಮಹೇಶ್ವರ ।
ಅಹಿಂಸಾ ಚ ತಪಃಶಾಂತಿರ್ಜ್ಞಾನಮಾರ್ಗಾನುಸಾಧನಂ ॥ ೪೦ ॥

---

೩೯. ವ್ಯಸನದಿಂದಲಾಗಲಿ ಸ್ವಭಾವದಿಂದಲಾಗಲಿ ಉಂಟಾಗುವ ವೈರಾಗ್ಯವೂ ಎಂದರೆ ವಿಷಯ ಸುಖಾಭಿಲಾಷೆಗಳಲ್ಲಿ ಪರಾಙ್ಮುಖತೆಯೂ, ನಿವೃತ್ತಿ ಮಾರ್ಗದಲ್ಲಿ ಎಂದರೆ ಮೋಕ್ಷವನ್ನು ಹೊಂದಬೇಕೆಂದು ಬಯಸಿ ಅದಕ್ಕಾಗಿ ಮಾಡಬೇಕಾದ ಜ್ಞಾನಾರ್ಜನೆಯೇ ಮೊದಲಾದ ಕಾರ್ಯಗಳಲ್ಲಿ ಆಸಕ್ತಿಯೂ ಸಹ ಸಂಸಾರದಲ್ಲಿ ವಿಮುಖನಾದವನಿಗೆ ಎಂದರೆ ಆಶೆಯಿಲ್ಲದಿರುವವನಿಗೆ ಬೇಕಾದವು ; ಮತ್ತು ವಿಷಯಸುಖದಲ್ಲಿ ಅನಾಸಕ್ತಿಯೂ, ನಿರ್ಮಮತೆಯೂ ಸಹ ಸಂಸಾರವಿಮುಖನಾದ ವೈರಾಗ್ಯಸಂಪನ್ನನಿಗೆ ಆವಶ್ಯಕವಾಗಿ ಬೇಕಾದ ಸಾಧನಗಳು.

ಒಬ್ಬ ಮನುಷ್ಯನಿಗೆ ತನಗೆ ಬಹಳವಾಗಿ ಪ್ರೀತಿಪಾತ್ರವಾದ ವಸ್ತುವಿನ ವಿರಹದಿಂದಾಗಲೀ ನಾಶದಿಂದಾಗಲೀ ವ್ಯಸನವುಂಟಾದರೆ, ಆ ವ್ಯಸನದಿಂದ ಅವನ ಮನಸ್ಸು ಬಹಳವಾಗಿ ನೊಂದು, ಯಾವ ವಸ್ತುವೂ ಸ್ಥಿರವಲ್ಲವೆಂದೂ ಮತ್ತು ಯಾವ ವಸ್ತುವಿನಲ್ಲಾಗಲಿ ಹೆಚ್ಚಾದ ಆಸಕ್ತಿಯನ್ನಿಡುವುದು ವ್ಯಸನಕ್ಕೆ ಕಾರಣವೆಂದೂ ತಿಳಿದು, ಈ ಆಸಕ್ತಿ ಅಥವಾ ಮಮತೆಯನ್ನು ಬಿಟ್ಟು, ವೈರಾಗ್ಯವನ್ನು ಹೊಂದುವನು. ಈ ವಿಧವಾದ ಮನಸ್ಸಿನ ಬದಲಾವಣೆಯು ಸಂಸಾರ ಬಂಧನದಿಂದ ಬಿಡುಗಡೆಯನ್ನು ಹೊಂದಲು ಸಾಧಕವಾದ ನಿವೃತ್ತಿ ಮಾರ್ಗಕ್ಕೆ ಅನುಕೂಲವಾಗಿರುವುದು. ಈ ವಿಧವಾದ ಮನೋವೃತ್ತಿಯು ಮನುಷ್ಯನಿಗೆ ಸ್ವಾಭಾವಿಕವಾಗಿ ಎಂದರೆ ಬ್ರಹ್ಮ ಹೊರತು ಇತರ ವಸ್ತುಗಳು ನಿತ್ಯಗಳಲ್ಲವೆಂಬ ನಿಶ್ಚಯ ಜ್ಞಾನದಿಂದಲೂ ಬರುವುದು. ಆದುದರಿಂದ ವಿಷಯಾಭಿಲಾಷೆಗಳಲ್ಲಿ ನಿಸ್ಪೃಹತೆಯೂ ವಸ್ತುಗಳಲ್ಲಿ ನಿರ್ಮಮತ್ವವೂ ನಿವೃತ್ತಿಮಾರ್ಗಕ್ಕೆ ಮುಖ್ಯ ಸಾಧನಗಳು.

೪೦. ನಿವೃತ್ತಿಮಾರ್ಗವನ್ನು ಅನುಸರಿಸುವವನಿಗೆ ದಯೆಯೂ ಶಾಂತಿಯೂ ಸದಾ ಇರಬೇಕು. ಎಲೈ ಮಹೇಶ್ವರನೇ, ಅಹಿಂಸೆಯೂ,

ತ್ವಯಿತಾವತ್ತಪೋನಿಷ್ಠೇ ವಿಸಂಗಿನಿ ದಯಾಯುತೇ ।
ಅಹಿಂಸಾ ಚ ತಥಾ ಶಾಂತಿಃ ಸದಾ ತವ ಭವಿಷ್ಯತಿ ॥ ೪೧ ॥

ತಪಸ್ಸೂ, ಶಾಂತಿಯೂ ಸಹ ಆತ್ಮಸ್ವರೂಪವನ್ನು ತಿಳಿಸುವಂತಹ ಜ್ಞಾನ ಮಾರ್ಗಕ್ಕೆ ಸಾಧನಗಳು.

ಹಿಂದಿನ ಶ್ಲೋಕದಲ್ಲಿ ಹೇಳಿದಂತೆ ವಿಷಯಾಭಿಲಾಷೆಗಳಲ್ಲಿ ವೈರಾಗ್ಯವೂ ನಿರ್ಮಮತ್ವವೂ ಜ್ಞಾನಮಾರ್ಗಕ್ಕೆ ಸಾಧನಗಳಾಗಿರುವಂತೆಯೇ, ಅಹಿಂಸೆ, ದಯಾ, ತಪಸ್ಸು, ಶಾಂತಿ ಇವುಗಳೂ ಸಹ ನಿವೃತ್ತಿಮಾರ್ಗಕ್ಕೆ ಸಾಧನಗಳು ಪ್ರಾಣಿಗಳನ್ನು ಹಿಂಸೆ ಮಾಡದೆ ಅವುಗಳ ವಿಷಯದಲ್ಲಿ ದಯಾಭಾವವನ್ನು ಯಾವಾಗಲೂ ಹೊಂದಿರಬೇಕು. ತಪಸ್ಸೆಂದರೆ ಯಮನಿಯಮಾದಿ ಯೋಗಾಂಗಗಳ ಅನುಷ್ಠಾನವನ್ನು ಮಾಡುತ್ತಾ ಪರವಸ್ತುವಿನ ಧ್ಯಾನದಲ್ಲಿ ಮಗ್ನನಾಗಿರುವುದು. ಇನ್ನು, ಶಾಂತಿಯು ತಪಸ್ವಿಗಳಿಗೆ ಬಹಳ ಮುಖ್ಯವಾದುದು. ಶಾಂತಿಯೆಂದರೆ ಕೋಪ ಸ್ವಭಾವವನ್ನು ಬಿಟ್ಟು ದಯಾಪರನಾಗಿರುವುದು ಮಾತ್ರವೇ ಅಲ್ಲ. ಪರಬ್ರಹ್ಮಸ್ವರೂಪವನ್ನು ಕ್ರಮಕ್ರಮವಾಗಿ ತಿಳಿಯುತ್ತಾ ಬಂದಂತೆ ಈ ಶಾಂತಿಗುಣವು ಅಭಿವೃದ್ಧಿಯಾಗುವುದು. ಪ್ರಪಂಚದಲ್ಲಿರುವ ಸಮಸ್ತ ಚರಾಚರ ವಸ್ತುಗಳೂ ತಾನೂ ಸಹ ಆ ಪರಬ್ರಹ್ಮನ ಅಂಶರೂಪಗಳೇ ಎಂದೂ. ಬ್ರಹ್ಮ ಹೊರತು ಬೇರೆ ವಸ್ತುವೇ ಸ್ವತಂತ್ರವಾಗಿ ಇರುವುದಿಲ್ಲವೆಂದೂ, ಆದುದರಿಂದ ಕೆಲವು ವಸ್ತುಗಳಲ್ಲಿ ವಿಶೇಷ ಮಮತೆಯನ್ನಿಟ್ಟು, "ಇದು ನನ್ನದು" ಮುಂತಾದ ಅಹಂಭಾವವು ಪಾರಮಾರ್ಥಿಕವಾಗಿ ನೋಡಿದರೆ ಅರ್ಥವಿಲ್ಲದ್ದೆಂದೂ ಮನಗಂಡರೆ, ಮಮತೆಯು ಹೋಗಿ ಮನಸ್ಸಿಗೆ ಒಂದು ವಿಧವಾದ ತೃಪ್ತಿಯೂ, ಸಂತೋಷವೂ ಯಾವಾಗಲೂ ಉಂಟಾಗುವುದು. ಈ ವಿಧವಾದ ಮನೋವೃತ್ತಿಯೇ ಶಾಂತಿಯು. ಇದು ವೈರಾಗ್ಯಸಂಪನ್ನರಾದ, ಬ್ರಹ್ಮಸ್ವರೂಪವನ್ನು ತಿಳಿದಿರುವ ತಪಸ್ವಿಗಳೇ ಮುಂತಾದವರಿಗೆ ಮಾತ್ರ ಲಭ್ಯವು. ವಿಷಯಸುಖಾಭಿಲಾಷಿಗಳಿಗೆ ಈ ವಿಧವಾದ ಮನಶ್ಶಾಂತಿಯೇ ಇರುವುದಿಲ್ಲ.

೪೧. ನೀನೂ ಸಹ ಹೀಗೆ ತಪಸ್ವಿಯಾಗಿ ಸಂಸಾರ ಸುಖದಲ್ಲಿ ಆಸಕ್ತಿಯಿಲ್ಲದೆ ದಯಾಮಯನಾಗಿದ್ದರೆ, ಅಹಿಂಸೆಯೂ ಶಾಂತಿಯೂ ಯಾವಾಗಲೂ ನಿನಗೆ ಇದ್ದೇ ಇರುತ್ತವೆ.

ತತೋ ಸುಖವಿಧೌ ಯತ್ನಸ್ತವ ಕಸ್ಮಾದ್ಭವಿಷ್ಯತಿ ।
ಅಕೃತೇ ದೂಷಣಂ ಯದ್ಯತ್ತತ್ಸರ್ವಂ ಕಥಿತಂ ತವ ॥ ೪೨ ॥

ತಸ್ಮಾದ್ವಿಶ್ವಹಿತಾಯ ತ್ವಂ ದೇವಾನಾಂ ಚ ಜಗತ್ಪತೇ ।
ಪರಿಗೃಹ್ಣೀಷ್ವ ಭಾರ್ಯಾರ್ಥೇ ವಾಮಾಮೇಕಾಂ ಸುಶೋಭನಾಂ ॥೪೩॥

ಯಥಾ ಪದ್ಮಾಲಯಾ ವಿಷ್ಣೋಃ ಸಾವಿತ್ರೀ ಚ ಯಥಾ ಮಮ ।
ತಥಾ ಸಹಚರೀ ಶಂಭೋರ್ಯಾ ಸ್ಯಾತ್ತಾಂ ಗೃಹ್ಣ ಸಂಪ್ರತಿ ॥ ೪೪ ॥

॥ ಮಾರ್ಕಂಡೇಯ ಉವಾಚ ॥

ಇತಿ ಶ್ರುತ್ವಾ ವಚಸ್ತಸ್ಯ ಬ್ರಹ್ಮಣಃ ಪುರತೋ ಹರೇಃ ।
ತದಾ ಜಗಾದ ಲೋಕೇಶಂ ಸ್ಮಿತಾರ್ದ್ರಿತಮುಖೋ ಹರಃ ॥ ೪೫ ॥

---

೪೨. ಆಮೇಲೆ ನೀನು ಸಂಸಾರಸುಖಕ್ಕಾಗಿ ಯತ್ನಿಸಲಾರೆ. ಆದರೆ ಸಂಸಾರವನ್ನು ಸ್ವೀಕರಿಸದಿದ್ದರೆ ಏನೇನು ಅನರ್ಥಗಳಾಗುವವೆಂಬುದನ್ನು ಹೇಳಿರುವೆನು.

೪೩. ಆದುದರಿಂದ, ಜಗದೊಡೆಯನಾದ ಓ ಶಂಕರನೇ, ಜಗತ್ತಿನ ಹಿತಕ್ಕಾಗಿಯೂ ದೇವತೆಗಳ ಕಾರ್ಯಾರ್ಥವಾಗಿಯೂ ತುಂಬ ಮನೋಹರಳಾದ ಸುಂದರಿಯೋರ್ವಳನ್ನು ಪತ್ನಿಯಾಗಿ ಸ್ವೀಕರಿಸು.

೪೪. ವಿಷ್ಣುವಿಗೆ ಲಕ್ಷ್ಮಿಯು ಹೇಗೋ, ನನಗೆ ಸಾವಿತ್ರಿಯು (ಸರಸ್ವತಿಯು) ಹೇಗೋ ಹಾಗೆ ನಿನ್ನ ಸಹಚರಿಯಾಗಿರುವಂತೆ ಓರ್ವ ಸುಂದರಿಯನ್ನು ಪರಿಗ್ರಹಿಸು.

೪೫. ಮಾರ್ಕಂಡೇಯ ಮುನಿಯು ಹೇಳಿದನು:— ಹೀಗೆ ಬ್ರಹ್ಮನ ಮಾತುಗಳನ್ನು ಕೇಳಿ ಶಂಕರನು ವಿಷ್ಣುವಿನ ಎದುರಿನಲ್ಲಿ ಬ್ರಹ್ಮನನ್ನು ಕುರಿತು ಮುಗುಳುನಗೆಯೊಡನೆ ಹೀಗೆ ಹೇಳಿದನು.

ಈಶ್ವರ ಉವಾಚ

ಏವಮೇವ ಯಥಾऽऽತ್ಥ ತ್ವಂ ಬ್ರಹ್ಮನ್ವಿಶ್ವನಿಮಿತ್ತತಃ ।
ನ ಸ್ವಾರ್ಥತಃ ಪ್ರವೃತ್ತಿರ್ಮೇ ಸಮ್ಯಗ್ಬ್ರಹ್ಮವಿಚಿಂತನಾತ್ ॥ ೪೬ ॥

ತಥಾಪಿ ಯತ್ಕರಿಷ್ಯಾಮಿ ತತ್ತೇ ವಕ್ಷ್ಯೇ ಜಗದ್ಧಿತಂ ।
ತಚ್ಛೃಣುಷ್ವ ಮಹಾಭಾಗ ಯುಕ್ತಮೇವ ವಚೋ ಮಮ ೪೭ ॥

ಯಾ ಮೇ ತೇಜಃ ಸಮರ್ಥಾ ಸ್ಯಾದ್ಗ್ರಹೀತುಮಿಹ ಭಾಗಶಃ ।
ತಾಂ ನಿದೇಶಯ ಭಾರ್ಯಾರ್ಥೇ ಯೋಗಿನೀಂ ಕಾಮರೂಪಿಣೀಂ ॥೪೮॥

ಯೋಗಯುಕ್ತೇ ಮಯಿ ತಥಾ ಯೋಗಿನ್ಯೇವ ಭವಿಷ್ಯತಿ ।
ಕಾಮಾಸಕ್ತೇ ಮಯಿ ಪುನರ್ಮೋಹಿನ್ಯೇವ ಭವಿಷ್ಯತಿ ॥ ೪೯ ॥

ತಾಂ ಮೇ ನಿದೇಶಯ ಬ್ರಹ್ಮ ಭಾರ್ಯಾರ್ಥೇ ವರವರ್ಣಿನೀಂ ॥೫೦ ॥

---

೪೬. ಈಶ್ವರನು ಹೇಳಿದನು:—ಎಲೈ ಬ್ರಹ್ಮನೇ, ನೀನು ಜಗತ್ತಿನ ಹಿತಕ್ಕಾಗಿ ಯಾವ ಮಾತುಗಳನ್ನಾಡಿದೆಯೋ ಅದು ನಿಜವಾದುದು. ಬ್ರಹ್ಮ ವಸ್ತುವನ್ನೇ ಚಿಂತಿಸುತ್ತಲಿರುವ ನಾನು ಸ್ವಾರ್ಥಕ್ಕಾಗಿ ಪ್ರವರ್ತಿಸಲಾರೆನು.

೪೭. ಎಲೈ ಪೂಜ್ಯನಾದ ಬ್ರಹ್ಮನೇ, ಆದರೂ ಜಗತ್ತಿನ ಹಿತಕ್ಕಾಗಿ ನಾನು ಯಾವುದನ್ನು ಮಾಡುವೆನೋ ಅದನ್ನು ಹೇಳುವೆನು ಕೇಳು. ನನ್ನ ಮಾತು ಯುಕ್ತವಾಗಿಯೇ ಇರುವುದು.

೪೮. ಎಲೈ ಬ್ರಹ್ಮನೇ, ಯಾವಳು ನನ್ನ ವೀರ್ಯವನ್ನು ಸ್ವೀಕರಿಸಲು ಸಮರ್ಥಳೋ ಅಂತಹ ಯೋಗಪರಳಾದ ಮತ್ತು ಸುಂದರವಾದ ರೂಪವುಳ್ಳ ಸ್ತ್ರೀಯನ್ನು ತೋರಿಸು. ಅವಳನ್ನು ಪರಿಗ್ರಹಿಸುವೆನು.

೪೯–೫೦. ನಾನು ಯೋಗದಲ್ಲಿ ನಿರತನಾದರೆ ಅವಳೂ ಯೋಗಪರಳಾಗಿರಬೇಕು. ನಾನು ಶೃಂಗಾರದಲ್ಲಾಸಕ್ತನಾದರೆ ಅವಳು ನನ್ನನ್ನು ಮೋಹಗೊಳಿಸುವವಳಾಗಿರಬೇಕು. ಅಂತಹ ಉತ್ತಮಸ್ತ್ರೀಯನ್ನು ನನ್ನ ಪತ್ನಿಯಾಗಿ ಕಲ್ಪಿಸು.

ಯದಕ್ಷರಂ ವೇದವಿದೋ ನಿಗದಂತಿ ಮುನೀಷಿಣಃ ।
ಜ್ಯೋತಿಃಸ್ವರೂಪಂ ಪರಮಂ ಚಿಂತಯಿಷ್ಯೇ ಸನಾತನಂ ॥ ೫೧ ॥

ತಚ್ಚಿಂತಾಯಾಂ ಸದಾ ಶಕ್ತೋ ಬ್ರಹ್ಮನ್ಗಚ್ಛಾಮಿ ಭಾವನಾಂ ।
ತತ್ರ ಯಾ ವಿಘ್ನಜನನೀ ನ ಭವಿತ್ರೀಹ ಸಾಽಸ್ತು ಮೇ ॥ ೫೨ ॥

ತ್ವಂ ವಾ ವಿಷ್ಣುರಹಂ ವಾಪಿ ಪರಬ್ರಹ್ಮಸ್ವರೂಪಿಣಃ ।
ಅಂಗಭೂತಾ ಮಹಾಭಾಗ ಯೋಗ್ಯಂ ತದನುಚಿಂತನಂ ॥ ೫೩ ॥

ತಚ್ಚಿಂತಯಾ ವಿನಾ ನಾಹಂ ಸ್ಥಾಸ್ಯಾಮಿ ಕಮಲಾಸನ ।
ತಸ್ಮಾಜ್ಜಾಯಾಂ ಪ್ರಾದಿಶಸ್ವ ಮತ್ಕರ್ಮಾನುಗತಾಂ ಸದಾ ॥ ೫೪ ॥

---

೫೧. ಯಾವ ವಸ್ತುವು ಎಂದೂ ನಾಶವಾಗದಿರುವುದೆಂದೂ, ಜ್ಯೋತಿಸ್ಸ್ವರೂಪವೆಂದೂ, ಅನಾದಿಯಾದುದೆಂದೂ, ಸರ್ವಶ್ರೇಷ್ಠವಾದುದೆಂದೂ, ವೇದಪಾರಗರಾದ ಬ್ರಹ್ಮಜ್ಞಾನಿಗಳು ಹೇಳುವರೋ ಅಂತಹ ಪರಬ್ರಹ್ಮವಸ್ತುವನ್ನು ನಾನು ಯಾವಾಗಲೂ ಧ್ಯಾನಿಸುತ್ತಿರುತ್ತೇನೆ.

೫೨. ಹೀಗೆ ಬ್ರಹ್ಮವಸ್ತುವನ್ನು ಯಾವಾಗಲೂ ಚಿಂತಿಸುತ್ತಾ ತಲ್ಲೀನತೆಯನ್ನು ಹೊಂದುವೆನು. ಎಲೈ ಬ್ರಹ್ಮನೇ, ಈ ನನ್ನ ಧ್ಯಾನಮಾರ್ಗಕ್ಕೆ ಯಾವಳು ವಿಘ್ನವನ್ನುಂಟುಮಾಡುವುದಿಲ್ಲವೋ ಅಂಥವಳೇ ನನಗೆ ಪತ್ನಿಯಾಗಲಿ.

೫೩. ನೀನೂ, ವಿಷ್ಣುವೂ, ನಾನೂ ಸಹ ಆ ಪರಬ್ರಹ್ಮನ ಸ್ವರೂಪಿಗಳು ಎಂದರೆ ಅಂಶಭೂತರಾದವರು. ಆದಕಾರಣ ಆ ಬ್ರಹ್ಮನನ್ನು ಧ್ಯಾನಿಸುವುದು ನಮಗೆ ಯೋಗ್ಯವಾಗಿರುವುದು.

೫೪. ಎಲೈ ಬ್ರಹ್ಮನೇ, ಬ್ರಹ್ಮವಸ್ತುವನ್ನು ಧ್ಯಾನಿಸದೆ ನಾನು ಕ್ಷಣಕಾಲವೂ ಇರಲಾರೆನು. ಆದುದರಿಂದ ನನ್ನ ಚಿಂತನೆಗೆ ಅನುಕೂಲಳಾದವಳನ್ನೇ ನನಗೆ ಪತ್ನಿಯಾಗಿ ಕಲ್ಪಿಸು.

ಇತಿ ತಸ್ಯ ವಚಃ ಶ್ರುತ್ವಾ ಬ್ರಹ್ಮಾ ಸರ್ವಜಗತ್ಪತಿಃ ।
ಸಸ್ಮಿತಂ ಮೋದಿತಮನಾ ಇದಂ ವಚನಮುಬ್ರವೀತ್ ॥ ೫೫ ॥

॥ ಬ್ರಹ್ಮೋವಾಚ ॥

ಅಸ್ತೀದೃಶೀ ಮಹಾದೇವ ಮಾರ್ಗಿತಾ ಯಾದೃಶೀ ತ್ವಯಾ ।
ದಕ್ಷಸ್ಯ ತನಯಾ ಯಾಽಭೂತ್ಸತೀ ನಾಮ್ನಾ ಸುಶೋಭನಾ ॥ ೫೬ ॥

ಸೈವೇದೃಶೀ ಭವದ್ಭಾರ್ಯಾ ಭವಿಷ್ಯತಿ ಸುಧೀಮತೀ ।
ತಾಂ ತ್ವದರ್ಥೇ ತಪಸ್ಯಂತೀಂ ತ್ವತ್ಪ್ರಾಪ್ತಿಂ ಪ್ರತಿಕಾಮಿನೀಂ ।

ವಿದ್ಧಿ ತ್ವಂ ದೇವದೇವೇಶ ಸರ್ವೇಷ್ವಾತ್ಮಸು ವರ್ತತೇ ॥ ೫೭ ॥

---

೫೫. ಮಾರ್ಕಂಡೇಯ ಮುನಿಯು ಹೇಳಿದನು :—ಹೀಗೆ ಆ ಮಹಾದೇವನ ಮಾತುಗಳನ್ನು ಕೇಳಿ ಸಮಸ್ತ ಪ್ರಪಂಚಕ್ಕೂ ಅಧಿಪತಿಯಾದ ಬ್ರಹ್ಮನು ಸಂತೋಷದಿಂದ ಮಂದಹಾಸಯುಕ್ತನಾಗಿ ಈ ಮಾತನ್ನು ಹೇಳಿದನು.

೫೬. ಬ್ರಹ್ಮನು ಹೇಳಿದನು :—ಓ ಮಹಾದೇವನೇ, ನೀನು ಎಂತಹ ಸ್ತ್ರೀಯು ಬೇಕೆಂದು ಬಯಸುತ್ತಿರುವೆಯೋ ಅಂತಹ ಉತ್ತಮ ಸ್ತ್ರೀಯು ಇರುವಳು. ಅವಳೇ ದಕ್ಷಬ್ರಹ್ಮನ ಮಗಳಾದ ಸತೀ ಎಂಬ ಹೆಸರುಳ್ಳ ಶೋಭನಾಂಗಿಯು.

೫೭. ಆ ಸತೀದೇವಿಯೇ ನೀನು ಹೇಳಿದ ಗುಣಗಳುಳ್ಳವಳು. ತುಂಬ ಬುದ್ಧಿವಂತಳಾದ ಆವಳು ನಿನಗೆ ಪತ್ನಿಯಾಗುವಳು. ನಿನ್ನನ್ನು ಪತಿಯನ್ನಾಗಿ ಪಡೆಯಬೇಕೆಂಬ ಉದ್ದೇಶದಿಂದಲೇ ತಪಸ್ಸನ್ನಾಚರಿಸುತ್ತಿರುವಳು. ಓ ದೇವದೇವನೇ, ನೀನು ಎಲ್ಲರಲ್ಲೂ ಅಂತರ್ಯಾಮಿಯಾಗಿರುವೆ. ಆ ಸತಿಯು ನಿನ್ನಲ್ಲಿ ಪ್ರೀತಿಯುಳ್ಳವಳೋ ಇಲ್ಲವೋ ಎಂಬುದನ್ನು ನೀನೇ ತಿಳಿದುಕೋ.

॥ ಮಾರ್ಕಂಡೇಯ ಉವಾಚ ॥

ಅಥ ಬ್ರಹ್ಮವಚಃ ಶೇಷೇ ಭಗವಾನ್ಮಧುಸೂದನಃ ।
ಯದುಕ್ತಂ ಬ್ರಹ್ಮಣಾ ಸರ್ವಂ ತತ್ಕುರುಷ್ವೇತ್ಯುವಾಚ ಸಃ ॥ ೫೮ ॥

ಕರಿಷ್ಯ ಇತಿ ತೇನೋಕ್ತೇ ಸ್ವೇಷ್ಟಂ ದೇಶಂ ಪ್ರಜಗ್ಮತುಃ ॥ ೫೯ ॥

ಹರಿರ್ಬ್ರಹ್ಮಾ ಚ ಮುದಿತೌ ಸಾವಿತ್ರೀ ಕಮಲಾಯುತೌ ॥ ೬೦ ॥

ಕಾಮೋಽಪಿ ವಾಕ್ಯಾನಿ ಹರಸ್ಯ ಶ್ರುತ್ವಾ
ಚಾಮೋದಯುಕ್ತೋ ರತಿನಾ ಸಮಿತ್ರಃ ।
ಶಂಭುಂ ಸಮಾಸಾದ್ಯ ವಿವಿಕ್ತರೂಪೀ
ತಸ್ಥೌ ವಸಂತಂ ವಿನಿಯೋಜ್ಯ ಶಶ್ವತ್ ॥ ೬೧ ॥

ಇತಿ ಶ್ರೀ ಕಾಲಿಕಾಪುರಾಣೇ ನವಮೋಽಧ್ಯಾಯಃ

---

೫೮. ಮಾರ್ಕಂಡೇಯ ಮುನಿಯು ಹೇಳಿದನು :—ಆ ಮೇಲೆ ಬ್ರಹ್ಮನ ಮಾತು ಮುಗಿಯಲು ಪೂಜ್ಯನಾದ ವಿಷ್ಣುವು ಶಿವನನ್ನು ಕುರಿತು—"ಓ ಶಿವನೇ, ಬ್ರಹ್ಮನು ಏನನ್ನು ಹೇಳಿದನೋ ಅದೆಲ್ಲವನ್ನೂ ಮಾಡು" ಎಂದು ಹೇಳಿದನು.

೫೯–೬೦. ಅದಕ್ಕುತ್ತರವಾಗಿ ಶಂಕರನು ಹಾಗೆಯೇ ಮಾಡುವೆನೆಂದು ಹೇಳಲು, ಹರಿಯೂ ಬ್ರಹ್ಮನೂ ಸಂತೋಷಗೊಂಡು ತಮ್ಮ ಪತ್ನಿಯರಾದ ಲಕ್ಷ್ಮೀ ಸರಸ್ವತಿಯರೊಡನೆ ತಮ್ಮ ತಮ್ಮ ಸ್ಥಾನಗಳಿಗೆ ಹೊರಟುಹೋದರು.

೬೧. ಮನ್ಮಥನೂ ಸಹ ಶಂಕರನ ದಾರಪರಿಗ್ರಹಸಮ್ಮತಿರೂಪವಾದ ಮಾತುಗಳನ್ನು ಕೇಳಿ ಬಹಳ ಸಂತೋಷಗೊಂಡು, ತನ್ನ ಪತ್ನಿಯಾದ ರತಿಯಿಂದಲೂ ಮಿತ್ರನಾದ ವಸಂತನಿಂದಲೂ ಯುಕ್ತನಾಗಿ, ಶಂಕರನ ಸಮೀಪಕ್ಕೆ ಹೋಗಿ, ವಸಂತನನ್ನು ಅವನ ಕಾರ್ಯದಲ್ಲಿ ನಿಯಮಿಸಿ ತಾನು ಮರೆಯಾಗಿಯೇ ಇದ್ದನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಒಂಭತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ ಅಥ ಶ್ರೀಕಾಲಿಕಾಪುರಾಣೇ ದಶಮೋಽಧ್ಯಾಯಃ ॥

ಹತ್ತನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ಅಥ ಸತ್ಯಾ ಪುನಃ ಶುಕ್ಲಪಕ್ಷೇಽಷ್ಟಮ್ಯಾಮುಪೋಷಿತಾ ।
ಆಶ್ವಿನೇಮಾಸಿ ದೇವೇಶಂ ಪೂಜಯಾಮಾಸ ಭಕ್ತಿತಃ ॥ ೧ ॥

ಇತಿ ನಂದಾವ್ರತೇ ಪೂರ್ಣೇ ನವಮ್ಯಾಂ ದಿನಭಾಗತಃ ।
ತಸ್ಯಾಸ್ತು ಭಕ್ತಿನಮ್ರಾಯಾಃ ಪ್ರತ್ಯಕ್ಷಮುಭವದ್ಧರಃ ॥ ೨ ॥

ಪ್ರತ್ಯಕ್ಷತೋ ಹರಂ ವೀಕ್ಷ್ಯ ಸಾಮೋದಹೃದಯಾ ಸತೀ ।
ನವಂದೇ ಚರಣೌ ತಸ್ಯ ಲಜ್ಜಯಾವನತಾ ನತಾ ॥ ೩ ॥

---

೧. ಮಾರ್ಕಂಡೇಯ ಮುನಿಯು ಹೇಳತೊಡಗಿದನು—ಆಮೇಲೆ ಸತೀದೇವಿಯು ತಿರುಗಿ ಆಶ್ವಯುಜಮಾಸದ ಶುದ್ಧ ಅಷ್ಟಮಿಯಲ್ಲಿ ಉಪವಾಸವಿದ್ದು ಶಂಕರನನ್ನು ಭಕ್ತಿಯಿಂದ ಪೂಜಿಸಿದಳು.

೨. ಈ ರೀತಿಯಾಗಿ ನಂದಾಷ್ಟಮಿಯ ವ್ರತವು ಮುಗಿಯಲು, ನವಮಿಯ ದಿವಸ ಭಕ್ತಿಯಿಂದ ನಮ್ರಳಾದ ಆ ಸತೀದೇವಿಗೆ ಶಂಕರನು ಪ್ರತ್ಯಕ್ಷನಾದನು.

೩. ಆಗ ತನ್ನ ಎದುರಿನಲ್ಲಿಯೇ ಶಂಕರನು ಪ್ರತ್ಯಕ್ಷನಾಗಿರುವುದನ್ನು ಸತೀದೇವಿಯು ನೋಡಿ ಸಂತೋಷಗೊಂಡು ನಾಚಿಕೆಯಿಂದ ಬಗ್ಗಿದವಳಾಗಿ ಅವನ ಪಾದಗಳಿಗೆ ನಮಸ್ಕರಿಸಿದಳು.

ಅಥ ಪ್ರಾಹ ಮಹಾದೇವಃ ಸತೀಂ ತದ್ವ್ರತಧಾರಿಣೀಂ ।
ತಾಮಿಚ್ಛನ್ನಪಿ ಭಾರ್ಯಾರ್ಥೇ ತಸ್ಯಾಶ್ಚರ್ಯಾಫಲಪ್ರದಃ ॥ ೪ ॥

॥ ಈಶ್ವರ ಉವಾಚ ॥

ಅನೇನ ತ್ವದ್ವ್ರತೇನಾಹಂ ಪ್ರೀತೋಽಸ್ಮಿ ದಕ್ಷನಂದಿನಿ ।
ವರಂ ವರಯ ದಾಸ್ಯಾಮಿ ಯಸ್ತವಾಭಿಮತೋ ಭವೇತ್ ॥ ೫ ॥

॥ ಮಾರ್ಕಂಡೇಯ ಉವಾಚ ॥

ಜಾನನ್ನಪೀಹ ತದ್ಭಾವಂ ಮಹಾದೇವೋ ಜಗತ್ಪತಿಃ ।
ಊಚೇಽಥ ವರಯಸ್ವೇತಿ ತದ್ವಾಕ್ಯಶ್ರವಣೇಚ್ಛಯಾ ॥ ೬ ॥
ಸಾಪಿ ತ್ರಪಾಸಮಾವಿಷ್ಟಾ ನೋ ವಕ್ತುಂ ಹೃದಯೇ ಸ್ಥಿತಂ ।
ಶಶಾಕ ಬಾಲಾಭೀಷ್ಟಂ ಯಲ್ಲಜ್ಜಯಾಚ್ಛಾದಿತಂ ಯತಃ ॥ ೭ ॥

---

೪. ಆಮೇಲೆ ಶಂಕರನು, ತನ್ನ ವ್ರತವನ್ನೇ ಮಾಡುತ್ತಲಿರುವ ಆ ಸತಿಯನ್ನು ಕುರಿತು, ಅವಳು ತನ್ನ ಪತ್ನಿಯಾಗಬೇಕೆಂಬ ಇಚ್ಛೆಯುಳ್ಳವನಾದರೂ ಅವಳ ತಪಸ್ಸಿಗೆ ಫಲವನ್ನು ಕೊಡುವ ಉದ್ದೇಶದಿಂದ ಹೀಗೆ ಹೇಳಿದನು.

೫. ಈಶ್ವರನು ಹೇಳಿದನು:—ಎಲೈ ದಕ್ಷಪುತ್ರಿಯೇ, ನಿನ್ನ ಈ ವ್ರತದಿಂದ ನಾನು ಸಂತುಷ್ಟನಾಗಿರುವೆನು. ನಿನಗೆ ಬೇಕಾದ ವರವನ್ನು ಕೇಳು, ಕೊಡುತ್ತೇನೆ.

೬. ಮಾರ್ಕಂಡೇಯ ಮುನಿಯು ಹೇಳಿದನು :— ಮಹಾದೇವನು ಆ ಸತಿಯ ಅಭಿಪ್ರಾಯವನ್ನು ತಿಳಿದಿದ್ದರೂ, ಅವಳ ಮಾತುಗಳನ್ನು ಕೇಳಲಿಚ್ಛೆಯಿಂದ ಹೀಗೆ ವರವನ್ನು ಕೇಳೆಂದು ಹೇಳಿದನು.

೭. ಆಗ ಸತಿಯು ನಾಚಿಕೆಯಿಂದ ಕೂಡಿದವಳಾಗಿ ತನ್ನ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ಹೇಳಲಾರದವಳಾದಳು. ಆ ಬಾಲೆಯು ತನ್ನ ಮನೋಭೀಷ್ಟವನ್ನು ನಾಚಿಕೆಯಿಂದ ಹೊರಪಡಿಸಲಿಲ್ಲ.

ಏತಸ್ಮಿನ್ನಂತರೇ ಕಾಮಃ ಸಾಭಿಪ್ರಾಯಂ ಹರಂ ತದಾ ।
ವಾಮಾ ಪರಿಗ್ರಹೇ ನೇತ್ರೇ ವಕ್ರವ್ಯಾಪಾರಲಿಂಗಿತಂ ।
ಸಂಪ್ರಾಪ್ಯ ವಿವರಂ ಚಾಯಂ ಸಂದಧೇ ಪುಷ್ಪಹೇತಿನಾ ॥ ೮ ॥

ಹರ್ಷಣೇನಾಥ ಬಾಣೇನ ವಿವ್ಯಾಧ ಹೃದಯೇ ಹರಂ ।
ತತೋಽಸೌ ಹರ್ಷಿತಃ ಶಂಭುರ್ವೀಕ್ಷ್ಯಾಂಚಕ್ರೇ ಸತೀಂ ಮುಹುಃ ।
ವಿಸ್ಮೃತ್ಯ ಚ ಪರಬ್ರಹ್ಮಚಿಂತನಂ ಪರಮೇಶ್ವರಃ ॥ ೯ ॥

ತತಃ ಪುನರ್ಮೋಹನೇನ ಬಾಣೇನೈನಂ ಮನೋಭವಃ ।
ವಿವ್ಯಾಧ ಹರ್ಷಿತಃ ಶಂಭುರ್ಮೋಹಿತಶ್ಚ ತದಾ ಭೃಶಂ ॥ ೧೦ ॥

ತತೋ ಯದಾಸೌ ಮೋಹಸ್ಯ ಹರ್ಷಸ್ಯ ಚ ದ್ವಿಜೋತ್ತಮಾಃ ॥ ೧೧ ॥

ಭಾವಂ ವ್ಯಕ್ತೀಚಕಾರೈಷ ಮಾಯಯಾಪಿ ವಿಮೋಹಿತಃ ।
ಅಥ ತ್ರಪಾಂ ಸ್ವಾಂ ಸಂಸ್ಮೃಭ್ಯ ಯದಾ ಪ್ರಾಹ ಹರಂ ಸತೀ ॥ ೧೨ ॥

---

೮. ಈ ಮಧ್ಯದಲ್ಲಿ ಮನ್ಮಥನು ವಕ್ರವಾದ ಶೃಂಗಾರ ನೋಟದಿಂದ ಶಂಕರನು ಸ್ತ್ರೀಯಲ್ಲಿ ಆಸಕ್ತಿಯುಳ್ಳವನಾಗಿರುವನೆಂದು ತಿಳಿದು, ತನಗೆ ಅವಕಾಶ ಸಿಕ್ಕಿತೆಂದುಕೊಂಡು ತನ್ನ ಧನುಸ್ಸಿಗೆ ಪುಷ್ಪಶರಗಳನ್ನು ಸೇರಿಸಿ ಸಜ್ಜುಗೊಳಿಸಿದನು.

೯. ಬಳಿಕ ಮನ್ಮಥನು ಹರ್ಷಣವೆಂಬ ಬಾಣದಿಂದ ಶಂಕರನ ಹೃದಯವನ್ನು ಪ್ರಹರಿಸಿದನು. ಅದರಿಂದ ಶಂಕರನು ತುಂಬ ಸಂತೋಷವುಳ್ಳವನಾಗಿ ತಾನು ಮಾಡುತ್ತಿದ್ದ ಬ್ರಹ್ಮ ಧ್ಯಾನವನ್ನೂ ಸಹ ಮರೆತು ಸತೀದೇವಿಯನ್ನು ಪುನಃಪುನಃ ನೋಡತೊಡಗಿದನು.

೧೦. ಆಮೇಲೆ ತಿರುಗಿ ಮದನನು ಮೋಹನವೆಂಬ ಬಾಣದಿಂದ ಶಂಕರನನ್ನು ಹೊಡೆದನು. ಶಂಕರನು ಅದರಿಂದ ಸಂತೋಷವನ್ನು ಹೊಂದಿ ತುಂಬ ಮೋಹಗೊಂಡನು.

೧೧–೧೨. ಎಲೈ ಬ್ರಾಹ್ಮಣೋತ್ತಮರೇ ಆಮೇಲೆ, ಶಂಕರನು ಮೋಹಗೊಂಡು ಯಾವಾಗ ಹರ್ಷವನ್ನೂ ಮೋಹವನ್ನೂ ಪ್ರಕಟಿಸಿದನೋ, ಆಗ

ಮಮೇಷ್ಟಂ ದೇಹಿ ವರದ ವರಮಿತ್ಯರ್ಥಕಾರಕಂ ।
ತದಾ ವಾಕ್ಯಸ್ಯಾವಸಾನಮನಪೇಕ್ಷ್ಯ ವೃಷಧ್ವಜಃ ।
ಭವಸ್ವ ಮಮ ಭಾರ್ಯೇತಿ ಪ್ರಾಹ ದಾಕ್ಷಾಯಣೀಂ ಮುಹುಃ ॥ ೧೩ ॥
ಏತಚ್ಛ್ರುತ್ವಾ ವಚಸ್ತಸ್ಯ ಸಾಭೀಷ್ಟಫಲಭಾವನಂ ।
ತೂಷ್ಣೀಂ ತಸ್ಥೌ ಪ್ರಮುದಿತಾ ವರಂ ಪ್ರಾಪ್ಯ ಮನೋಗತಂ ॥ ೧೪ ॥
ಸಕಾಮಸ್ಯ ಹರಸ್ಯಾಗ್ರೇ ತತ್ರ ಸಾ ಚಾರುಹಾಸಿನೀ ।
ಆಕರೋನ್ನಿಜಭಾವಾಂಶ್ಚ ಹಾವಾನಪಿ ದ್ವಿಜೋತ್ತಮಾಃ ॥ ೧೫ ॥

ಸತೀದೇವಿಯು ತನ್ನ ಲಜ್ಜೆಯನ್ನು ತಡೆದುಕೊಂಡು ಆವನನ್ನು ಕುರಿತು ಹೇಳಿದಳು.

೧೩. "ಇಷ್ಟಾರ್ಥಗಳನ್ನು ಕೊಡುವ ಎಲೈ ಶಂಕರನೇ, ನನಗೆ ಇಷ್ಟವಾದ ವರವನ್ನು ಕೊಡು" ಎಂದು ತನ್ನ ಮನಸ್ಸಿನ ಅಭಿಪ್ರಾಯವನ್ನು ಸೂಚಿಸುತ್ತಾ ಮಾತನ್ನು ಪೂರ್ತಿಯಾಗಿ ಆಡುವಷ್ಟರಲ್ಲಿಯೇ, ಎಂದರೆ ಶಂಕರನು ಆವಳು ಮಾತನ್ನು, ಮುಗಿಸುವವರಿಗೂ ಕಾಯದೆ, ಆವಳನ್ನು ಕುರಿತು— "ಎಲೌ ಸತಿಯೇ. ನೀನು ನನ್ನ ಪತ್ನಿಯಾಗು" ಎಂದು ಹೇಳಿದನು.

೧೪. ತನ್ನ ಇಷ್ಟವು ಕೈಗೂಡುವುದೆಂದು ಸೂಚಿಸುವ ಆ ಶಂಕರನ ಮಾತುಗಳನ್ನು ಕೇಳಿ ಸತೀದೇವಿಯು ತನ್ನ ಮನೋಭೀಷ್ಟವನ್ನು ಹೊಂದಿದ್ದರಿಂದ ಅತ್ಯಂತ ಸಂತೋಷವುಳ್ಳವಳಾಗಿ ಯಾವ ಮಾತನ್ನೂ ಆಡದೇ ಸುಮ್ಮನೆ ನಿಂತಿದ್ದಳು.

೧೫. ಎಲೈ ಬ್ರಾಹ್ಮಣೋತ್ತಮರೇ, ಮನ್ಮಥ ವಿಕಾರವನ್ನು ಹೊಂದಿದ ಆ ಶಂಕರನ ಎದುರಿನಲ್ಲಿ ಸುಂದರವಾದ ಮಂದಹಾಸದಿಂದ ಶೋಭಿಸುತ್ತಿರುವ ಆ ಸತಿಯು ಸ್ತ್ರೀಸ್ವಾಭಾವಿಕವಾದ ಹಾವಭಾವ ವಿಲಾಸಗಳನ್ನು ಪ್ರಕಟಿಸಿ ಶೃಂಗಾರ ಚೇಷ್ಟೆಯನ್ನು ಮಾಡಿದಳು.

ಸ್ವಸ್ಯ ಭಾವಾನ್ಸಮಾದಾಯ ಶೃಂಗಾರಾಖ್ಯೋ ರಸಸ್ತದಾ ।
ತಯೋರ್ವಿವೇಶ ವಿಪ್ರೇಂದ್ರಾಃ ಕಲಾ ಹಾವಾ ಯಥೋಚಿತಂ ॥ ೧೬ ॥

ಹರಸ್ಯ ಪುರತೋ ರೇಜೇ ಸ್ನಿಗ್ಧಭಿನ್ನಾಂಜನಪ್ರಭಾ ।
ಚಂದ್ರಾಭ್ಯಾಸೇಽಭ್ರಲೇಖೇವ ಸ್ಫಟಿಕೋಜ್ಜ್ವಲವಪ್ರ್ಯಣಃ ॥ ೧೭ ॥

ಅಥ ಸಾ ತಮುವಾಚೇದಂ ಹರಂ ದಾಕ್ಷಾಯಣೀ ಮುಹುಃ ।
ಪಿತುರ್ಮೇ ಗೋಚರೀಕೃತ್ಯ ಮಾಂ ಗೃಹ್ಣೀಷ್ವ ಜಗತ್ಪತೇ ॥ ೧೮ ॥

ಏವಂ ಮಿತಂ ವಚೋ ದೇವೀ ಯದೋವಾಚ ಸತೀ ತದಾ ।
ಮಮ ಭಾರ್ಯಾ ಭವೇತ್ಯುಚೇ ಪುನಃ ಕಾಮೇನ ಮೋಹಿತಃ ॥ ೧೯ ॥

---

೧೬. ಎಲೈ ಬ್ರಾಹ್ಮಣೋತ್ತಮರೇ, ಕೇಳಿ. ಶೃಂಗಾರರಸವು ತನ್ನ ಸ್ವಭಾವಸಿದ್ಧವಾದ ಭಾವಗಳನ್ನೂ ಮತ್ತು ಪರಿವಾರಗಳನ್ನೂ ಕೂಡಿ ಆ ಪಾರ್ವತೀಶಂಕರರಲ್ಲಿ ಪ್ರವೇಶಿಸಿತು. ಅದರಂತೆಯೇ ಅರುವತ್ತುನಾಲ್ಕು ಶೃಂಗಾರ ಕಲೆಗಳೂ, ಚೇಷ್ಟೆಗಳೂ ಅವರಲ್ಲಿ ಪ್ರವೇಶಿಸಿದವು.

೧೭. ಸ್ಫಟಿಕದಂತೆ ಪ್ರಕಾಶಮಾನವಾದ ಶರೀರಕಾಂತಿಯುಳ್ಳ ಆ ಶಂಕರನ ಎದುರಿಗೆ ಮೃದುವಾದ ಕಾಡಿಗೆಯ ಖಂಡದಂತಿರುವ ಆ ಸತಿಯು ಚಂದ್ರನೆದುರಿಗೆ ಮೇಘಪಂಕ್ತಿಯಂತೆ ಹೊಳೆಯುತ್ತಿದ್ದಳು.

೧೮. ಆ ಮೇಲೆ ಆ ಸತೀದೇವಿಯು ಶಂಕರನನ್ನು ಕುರಿತು - ಓ ಜಗದೊಡೆಯನೇ, ನನ್ನ ತಂದೆಗೆ ಈ ವಿಷಯವನ್ನು ತಿಳಿಸಿ ನನ್ನನ್ನು ಮದುವೆಯಾಗು ಎಂದು ಹೇಳಿದಳು.

೧೯. ಹೀಗೆ ಅಭಿಪ್ರಾಯಗರ್ಭಿತವಾದ ಮಿತವಾದ ಮಾತನ್ನು ಸತಿಯು ಹೇಳಲು, ಕಾಮದಿಂದ ಮೋಹಗೊಳಿಸಲ್ಪಟ್ಟ ಶಂಕರನು ಪುನಃ ಅವಳನ್ನು ಕುರಿತು – ನೀನು ನನ್ನ ಪತ್ನಿಯಾಗು ಎಂದು ಹೇಳಿದನು.

ಅಥೈತದ್ವೀಕ್ಷ್ಯ ಮದನಃ ಸರತಿಃ ಸಸಖೋ ಮುದಾ ।
ಯುಕ್ತೋ ಬಭೂವ ಶಶ್ವಚ್ಚ ಆತ್ಮಾನಂ ಚಾಭ್ಯನಂದಯನ್ ॥ ೨೦ ॥

ಅಥ ದಾಕ್ಷಾಯಣೀ ಶಂಭುಂ ಸಮಾಭಾಷ್ಯ ದ್ವಿಜೋತ್ತಮಾಃ ।
ಜಗಾಮ ಮಾತುರಭ್ಯಾಶಂ ಹರ್ಷಮೋಹಸಮನ್ವಿತಾ ॥ ೨೧ ॥

ಹರೋಽಪಿ ಹಿಮವತ್ಪೃಷ್ಠಂ ಪ್ರವಿಶ್ಯ ಚ ನಿಜಾಶ್ರಮಂ ।
ದಾಕ್ಷಾಯಣೀವಿಪ್ರಲಂಭದುಃಖಾಧ್ಯಾನಪರೋಽಭವತ್ ॥ ೨೨ ॥

ವಿಪ್ರಲಬ್ಧೋಽಪಿ ಭೂತೇಶೋ ಬ್ರಹ್ಮವಾಕ್ಯಮಥಾಸ್ಮರತ್ ।
ಜಾಯಾಪರಿಗ್ರಹಸ್ಯಾರ್ಥೇ ಯದುಕ್ತಂ ಪದ್ಮಯೋನಿನಾ ॥ ೨೩ ॥

ಸ್ಮೃತ್ಯೈವ ಬ್ರಹ್ಮವಾಕ್ಯಸ್ಯ ಪುರಾ ವಿಶ್ವಾಸತಃ ಪರಂ ।
ಚಿಂತಯಾಮಾಸ ಮನಸಾ ಬ್ರಹ್ಮಾಣಂ ವೃಷಭಧ್ವಜಃ ॥ ೨೪ ॥

---

೨೦. ಆಗ ಶಂಕರನ ಮನ್ಮಥವಿಕಾರವನ್ನು ನೋಡಿ ಮದನನು ರತಿ ಮತ್ತು ವಸಂತನೊಡನೆ ಸಂತೋಷಗೊಂಡು ತಾನು ಮಾಡಿದ ಕಾರ್ಯ ನಿರ್ವಾಹಕ್ಕಾಗಿ ಬಹಳವಾಗಿ ಹೆಮ್ಮೆಪಟ್ಟನು.

೨೧. ಎಲೈ ಬ್ರಾಹ್ಮಣೋತ್ತಮರೇ, ಬಳಿಕ ಆ ಸತಿಯು ಶಂಕರನನ್ನು ಕೇಳಿಕೊಂಡು ಹರ್ಷಮೋಹಗಳಿಂದ ಪುಳಕಿತಳಾಗಿ ತನ್ನ ತಾಯಿಯ ಬಳಿಗೆ ಹೊರಟು ಹೋದಳು.

೨೨. ಶಂಕರನೂ ಸಹ ಹಿಮವತ್ಪರ್ವತದ ತಪ್ಪಲಿನಲ್ಲಿರುವ ತನ್ನ ಆಶ್ರಮಕ್ಕೆ ತೆರಳಿ ಅಲ್ಲಿ ಸತೀದೇವಿಯ ವಿಯೋಗದುಃಖದಿಂದ ಚಿಂತಾಸಕ್ತ ನಾದನು.

೨೩. ಹೀಗೆ ವಿಯೋಗದುಃಖದಿಂದ ಪರಿತಪಿಸುತ್ತಿರುವ ಶಂಕರನು ಪತ್ನಿಯನ್ನು ಸ್ವೀಕರಿಸುವ ವಿಷಯದಲ್ಲಿ ಬ್ರಹ್ಮನು ತನಗೆ ಹೇಳಿದ ಮಾತನ್ನು ಸ್ಮರಿಸಿಕೊಂಡನು.

೨೪. ಹೀಗೆ ಬ್ರಹ್ಮನ ವಾಕ್ಯದ ಸ್ಮರಣೆಯಿಂದಲೂ, ಆಮೇಲೆ ವಿಶ್ವಾಸ ದಿಂದಲೂ, ಶಂಕರನು ಬ್ರಹ್ಮನನ್ನು ಮನಸ್ಸಿನಲ್ಲಿ ಧ್ಯಾನಿಸಿದನು.

ಅಥ ಸಂಚಿಂತ್ಯಮಾನೋಽಸೌ ಪರಮೇಷ್ಠೀ ತ್ರಿಶೂಲಿನಃ ।
ಪುರಸ್ತಾತ್ತ್ವಾವಿಶತ್ತೂರ್ಣಮಿಷ್ಟಸಿದ್ಧಿಪ್ರಚೋದಿತಃ ॥ ॥ ೨೫ ॥
ಯತ್ರಾಯಂ ಹಿಮವತ್ಪಶ್ಚೀ ವಿಪ್ರಲಬ್ಧೋ ಹರಃ ಸ್ಥಿತಃ ।
ಸಾವಿತ್ರೀಸಹಿತೋ ಬ್ರಹ್ಮಾ ತತ್ರೈವ ಸಮುಪಸ್ಥಿತಃ ॥ ೨೬ ॥
ಅಥ ತಂ ವೀಕ್ಷ್ಯ ಧಾತಾರಂ ಸಾವಿತ್ರೀಸಹಿತಂ ಹರಃ ।
ಸೋತ್ಸುಕೋ ವಿಪ್ರಲಬ್ಧಶ್ಚ ಸತ್ಯರ್ಥೀ ತಮುವಾಚ ಹ ॥ ೨೭ ॥

॥ ಈಶ್ವರ ಉವಾಚ ॥

ಬ್ರಹ್ಮನ್ವಿಶ್ವಾರ್ಥತೋ ದಾರಪರಿಗ್ರಹಕೃತೌ ಚ ಯತ್ ।
ತ್ವಮಾತ್ಥ ತತ್ಸಾರ್ಥಮಿವ ಪ್ರತಿಭಾತಿ ಮಮಾಧುನಾ ॥ ೨೮ ॥
ಅಹಮಾರಾಧಿತೋ ಭಕ್ತ್ಯಾ ದಾಕ್ಷಾಯಣ್ಯಾತಿಭಕ್ತಿತಃ ।
ತಸ್ಯಾ ವರಮಹಂ ದಾತುಂ ಯದಾ ಯಾತಃ ಪ್ರಪೂಜಿತಃ ॥ ೨೯ ॥
ತತ್ಸಕಾಶೇ ತದಾ ಕಾಮೋ ಮಾಂ ವಿವ್ಯಾಧ ಮಹೇಷುಭಿಃ ॥ ೩೦॥

---

೨೫. ಹೀಗೆ ಧ್ಯಾನಿಸಲ್ಪಟ್ಟ ಬ್ರಹ್ಮನು, ತನ್ನ ಇಷ್ಟವು ಸಿದ್ಧಿಸಿದುದರಿಂದ ಪ್ರೇರಿತನಾಗಿ ಶಂಕರನ ಎದುರಿಗೆ ಬಂದು ನಿಂತನು.

೨೬. ಸತೀ ವಿರಹದಿಂದ ಚಿಂತಾಕುಲನಾದ ಶಂಕರನಿರುವ ಹಿಮವತ್ಪರ್ವತದ ತಪ್ಪಲಿಗೆ ಬ್ರಹ್ಮನು ತನ್ನ ಪತ್ನಿಯಾದ ಸಾವಿತ್ರಿಯೊಡನೆ ಬಂದನು.

೨೭. ಆಮೇಲೆ ಸಾವಿತ್ರಿಯೊಡನೆ ಬಂದಿರುವ ಬ್ರಹ್ಮನನ್ನು ನೋಡಿ, ಸತೀದೇವಿಯ ವಿರಹದಿಂದ ಯುಕ್ತನಾದ ಆ ಶಂಕರನು ಅವಳನ್ನು ಪಡೆಯಬೇಕೆಂಬ ಇಚ್ಛೆಯಿಂದ ಸಂಭ್ರಮಗೊಂಡು ಆ ಸತಿಯ ವಿಷಯದಲ್ಲಿ ಬ್ರಹ್ಮನನ್ನು ಕುರಿತು ಹೀಗೆ ಹೇಳಿದನು.

೨೮. ಈಶ್ವರನು ಹೇಳಿದನು:—ಎಲೈ ಬ್ರಹ್ಮನೇ, ಜಗತ್ತಿನ ಹಿತಕ್ಕಾಗಿ ನಾನು ಪತ್ನಿಯನ್ನು ಸ್ವೀಕರಿಸಬೇಕೆಂದು ನೀನು ಹಿಂದೆ ಹೇಳಿದ ಮಾತಿನ ಅರ್ಥವು ನನಗೆ ಈಗ ಚೆನ್ನಾಗಿ ಮನದಟ್ಟಾಗಿದೆ.

೨೯–೩೦. ಸತೀದೇವಿಯು ತುಂಬಾ ಭಕ್ತಿಯಿಂದ ನನ್ನನ್ನು ಪೂಜಿಸಲು, ಅವಳಿಗೆ ವರವನ್ನು ನೀಡಲು ನಾನು ಅಲ್ಲಿಗೆ ಹೋಗಿದ್ದೆನು. ಆಗ ಅವಳ ಸನ್ನಿಧಾನದಲ್ಲಿ ಮನ್ಮಥನು ನನ್ನನ್ನು ತನ್ನ ಬಾಣಗಳಿಂದ ಪ್ರಹರಿಸಿದನು.

ಮಾಯಯಾ ಮೋಹಿತಶ್ಚಾಹಂ ತತ್ಪ್ರತೀಕಾರಮಂಜಸಾ ।
ನ ಶಕ್ತಃ ಕರ್ತುಮಭಿತಃ ಪುರಾಹಂ ಕಮಲಾಸನ ॥ ೩೧ ॥

ತಸ್ಯಾಶ್ಚ ವಾಂಛಿತಂ ಬ್ರಹ್ಮನ್ನೇತದೇವ ಮಯೇಕ್ಷಿತಂ ।
ಯದಹಂ ಸ್ಯಾಂ ವಿಭೋಭರ್ತಾ ವ್ರತಭಕ್ತಿಸಮಾಯುತಃ ॥ ೩೨ ॥

ತಸ್ಮಾತ್ತ್ವಂ ಕುರು ವಿಶ್ವಾರ್ಥೇ ಮದರ್ಥೇ ಚ ಪ್ರಜಾಪತೇ ।
ದಕ್ಷೋ ಯಥಾ ಮಾಮಾಮಂತ್ರ್ಯ ಸುತಾಂ ದಾತಾ ತಥಾ ದ್ರುತಂ ॥೩೩॥

ಗಚ್ಛ ತ್ವಂ ದಕ್ಷಭವನಂ ಕಥಯಸ್ವ ವಚೋ ಮಮ ।
ಯಥಾ ಸತೀವಿಯೋಗಸ್ಯ ಭಂಗಃ ಸ್ಯಾತ್ತ್ವಂ ತಥಾ ಕುರು ॥ ೩೪ ॥

॥ ಮಾರ್ಕಂಡೇಯ ಉವಾಚ ॥

ಇತ್ಯುದೀರ್ಯ ಮಹಾದೇವಃ ಸಕಾಶೇಽಸ್ಯ ಪ್ರಜಾಪತೇಃ ।
ಸಾವಿತ್ರೀಂ ವೀಕ್ಷ್ಯ ಸತ್ಯಾಸ್ತು ವಿಪ್ರಯೋಗೋ ವ್ಯವರ್ಧತ ॥ ೩೫ ॥

---

೩೧. ಎಲೈ ಬ್ರಹ್ಮನೆ, ಮಾಯೆಯಿಂದ ಮೋಹಗೊಳಿಸಲ್ಪಟ್ಟು, ನಾನು ಅಲ್ಲಿ ಆ ಕೂಡಲೆ ಅದಕ್ಕೆ ತಕ್ಕ ಪ್ರತೀಕಾರವನ್ನು ಮಾಡಲಾರದವನಾದೆನು.

೩೨. ಎಲೈ ಬ್ರಹ್ಮನೇ, ಅವಳ ಇಷ್ಟವೂ, ನಾನೇ ಅವಳಿಗೆ ಪತಿಯಾಗ ಬೇಕೆಂದಿರುತ್ತದೆ. ಇದನ್ನು ನಾನು ನೋಡಿ ತಿಳಿದುಕೊಂಡೆನು. ಆದಕ್ಕಾಗಿಯೇ ಅವಳು ನನ್ನನ್ನು ವ್ರತಾಚರಣೆ ಮತ್ತು ಭಕ್ತಿ ಇವುಗಳಿಂದ ಆರಾಧಿಸು ತ್ತಿರುವಳು.

೩೩. ಆದುದರಿಂದ ಎಲೈ ಬ್ರಹ್ಮನೇ, ಜಗತ್ತಿನ ಹಿತಕ್ಕಾಗಿಯೂ ನನಗಾಗಿಯೂ, ದಕ್ಷಬ್ರಹ್ಮನು ನನ್ನನ್ನು ಕರೆದು ತನ್ನ ಮಗಳನ್ನು ನನಗೆ ಮದುವೆ ಮಾಡಿಕೊಡುವಂತೆ ಪ್ರಯತ್ನಿಸು.

೩೪. ನೀನೀಗ ದಕ್ಷಬ್ರಹ್ಮನ ಮನೆಗೆ ಹೋಗಿ, ಅವನಿಗೆ ನನ್ನ ಅಭಿಪ್ರಾಯವನ್ನು ತಿಳಿಸು. ಆದಷ್ಟು ಜಾಗ್ರತೆಯಾಗಿ ಆ ಸತೀದೇವಿಯ ವಿರಹವು ಕೊನೆಗಾಣುವಂತೆ ಮಾಡು.

೩೫. ಮಾರ್ಕಂಡೇಯ ಮುನಿಯು ಹೇಳಿದನು:—ಹೀಗೆ ಹೇಳಿದ ಮೇಲೆ, ಶಂಕರನಿಗೆ, ಬ್ರಹ್ಮನ ಸಮೀಪದಲ್ಲಿರುವ ಸಾವಿತ್ರಿಯನ್ನು ನೋಡಿ ಸತೀದೇವಿಯ ವಿಯೋಗ ವ್ಯಸನವು ಇನ್ನಷ್ಟು ಹೆಚ್ಚಾಯಿತು.

ತಂ ಸಮಾಭಾಷ್ಯ ಲೋಕೇಶಃ ಕೃತಕೃತ್ಯೋ ಮುದಾನ್ವಿತಃ ।
ಇದಂ ಜಗಾದ ಜಗತಾಂ ಹಿತಂ ಪಥ್ಯಂ ಚ ಧೂರ್ಜಟೇಃ ॥ ೩೬ ॥

॥ ಬ್ರಹ್ಮೋವಾಚ ॥

ಯದಾತ್ಥ ಭಗವಂಛಂಭೋ ತದ್ವಿಶ್ವಾರ್ಥಂ ಸುನಿಶ್ಚಿತಂ ।
ನಾಸ್ತ್ಯೇವ ಭವತಃ ಸ್ವಾರ್ಥೋ ಮಮಾಪಿ ವೃಷಭಧ್ವಜ ॥ ೩೭ ॥
ಸುತಾಂ ಚ ತುಭ್ಯಂ ದಕ್ಷಸ್ತು ಸ್ವಯಮೇವ ಪ್ರದಾಸ್ಯತಿ ।
ಅಹಂ ಚಾಪಿ ವದಿಷ್ಯಾಮಿ ತ್ವದ್ವಾಕ್ಯಂ ತತ್ಸಮಕ್ಷತಃ ॥ ೩೮ ॥

॥ ಮಾರ್ಕಂಡೇಯ ಉವಾಚ ॥

ಇತ್ಯುದೀರ್ಯ ಮಹಾದೇವಂ ಬ್ರಹ್ಮಾ ಲೋಕಪಿತಾಮಹಃ ।
ಜಗಾಮ ದಕ್ಷನಿಲಯಂ ಸ್ಯಂದನೇನಾತಿವೇಗಿನಾ ॥ ೩೯ ॥

---

೩೬. ಆ ಶಂಕರನ ಮಾತುಗಳನ್ನು ಕೇಳಿ ಬ್ರಹ್ಮನು ಕೃತಕೃತ್ಯನಾದೆನೆಂದು ಸಂತೋಷಗೊಂಡು, ಜಗತ್ತಿಗೂ ಶಂಕರನಿಗೂ ಹಿತವೂ ಅನುಕೂಲವೂ ಆದ ಮಾತನ್ನು ಹೀಗೆ ಹೇಳಿದನು.

೩೭. ಬ್ರಹ್ಮನು ಹೇಳಿದನು:—ಎಲೈ ಪೂಜ್ಯನಾದ ಶಂಕರನೇ, ಜಗತ್ತಿನ ಹಿತಕ್ಕಾಗಿ ದಾರಪರಿಗ್ರಹಣವನ್ನು ಮಾಡುವೆನೆಂದು ನೀನು ಹೇಳಿದ ಮಾತು ಸತ್ಯವಾದದ್ದು. ಇದರಲ್ಲಿ ಸ್ವಾರ್ಥಸಾಧನೆಯೇನೂ ಇರುವುದಿಲ್ಲ. ಈ ವಿಚಾರದಲ್ಲಿ ನಾನು ಮಾಡುವ ಪ್ರಯತ್ನವೂ ಸಹ ಸ್ವಾರ್ಥವುಳ್ಳದ್ದಾಗಿರುವುದಿಲ್ಲ.

೩೮. ದಕ್ಷಬ್ರಹ್ಮನು ತನ್ನ ಮಗಳನ್ನು ತಾನಾಗಿಯೇ ನಿನಗೆ ಕೊಡುವನು. ನಾನೂ ಸಹ ನೀನು ಹೇಳಿದುದನ್ನು ದಕ್ಷಬ್ರಹ್ಮನಿಗೆ ತಿಳಿಸುವೆನು.

೩೯. ಮಾರ್ಕಂಡೇಯ ಮುನಿಯು ಹೇಳಿದನು:—ಮಹಾದೇವನಿಗೆ ಹೀಗೆ ಹೇಳಿ ಜಗತ್ಪಿತಾಮಹನೆನಿಸಿದ ಬ್ರಹ್ಮನು, ತುಂಬ ವೇಗದಿಂದ ಚಲಿಸುವ ರಥವನ್ನೇರಿ ದಕ್ಷನ ಮನೆಗೆ ಹೋದನು.

ಅಥ ದಕ್ಷೋಽಪಿ ವೃತ್ತಾಂತಂ ಸರ್ವಂ ಶ್ರುತ್ವಾ ಸತೀಮುಖಾತ್ ।
ಚಿಂತಯಾಮಾಸ ದೇಯೇಯಂ ಮತ್ಸುತಾ ಶಂಭವೇ ಕಥಂ ॥ ೪೦ ॥

ಆಗತೋಽಪಿ ಮಹಾದೇವಃ ಪ್ರಸನ್ನಃ ಸಂಜಗಾಮ ಹ ।
ಪುನರೇವ ಕಥಂ ಸೋಽಪಿ ಸುತಾರ್ಥೇಽತ್ಯರ್ಥಮಾಪ್ಸಿತಃ ॥ ೪೧ ॥

ಪ್ರಸ್ಥಾಪ್ಯೋ ವಾ ಮಯಾ ತಸ್ಯ ದೂತೋ ನಿಕಟಮಂಜಸಾ ।
ನೈತದ್ಯೋಗ್ಯಂ ನ ಗೃಹ್ಣೀಯಾದ್ಯದ್ಯೇನಾಂ ವಿಭುರಾತ್ಮನೇ ॥ ೪೨ ॥

ಅಥವಾ ಪೂಜಯಿಷ್ಯಾಮಿ ತಮೇವ ವೃಷಭಧ್ವಜಂ ।
ನದೀಯತೇ ಮಯಾ ಭರ್ತಾ ಸ್ವಯಮೇವ ಯಥಾ ಭವೇತ್ ॥ ೪೩ ॥

ತಥೈವ ಪೂಜಿತಃ ಸೋಽಪಿ ವಾಂಛತ್ಯತಿಪ್ರಯತ್ನತಃ ।
ಶಂಭುರ್ಭವತು ಮದ್ಭರ್ತೇತ್ಯೇವಂ ದತ್ತಂ ಚ ತೇನ ತತ್ ॥ ೪೪ ॥

---

೪೦. ಅತ್ತಲಾಗಿ ದಕ್ಷನೂ ಸಹ ಸತೀದೇವಿಯಿಂದ ನಡೆದ ಸಮಾಚಾರವನ್ನು ಕೇಳಿ ಈ ಸತಿಯನ್ನು ಶಂಕರನಿಗೆ ಯಾವ ರೀತಿಯಿಂದ ಮದುವೆಮಾಡಿಕೊಡಲಿ ಎಂದು ಆಲೋಚಿಸಿದನು.

೪೧. ಪ್ರಸನ್ನನಾಗಿ ಬಂದಿದ್ದ ಮಹಾದೇವನು ಹಿಂತಿರುಗಿ ಹೊರಟು ಹೋಗಿರುವನು. ತಿರುಗಿ ನನ್ನ ಮಗಳಿಗಾಗಿ ಅವನು ಬರುವನೇ?

೪೨. ಅಥವಾ ಇದಕ್ಕಾಗಿ ಅವನಲ್ಲಿಗೆ ದೂತನೋರ್ವನನ್ನು ಕಳುಹಿಸಬೇಕೇ—ಎಂದರೆ, ದೂತನನ್ನೂ ಕಳುಹಿಸಿಯೂ ಶಂಕರನು ಸತಿಯನ್ನು ಸ್ವೀಕರಿಸದಿದ್ದರೆ, ಆಗ ಇದು ಯೋಗ್ಯವಾಗುವುದಿಲ್ಲವು.

೪೩. ಇಲ್ಲದಿದ್ದರೆ, ಆ ಶಂಕರನು ತಾನಾಗಿಯೇ ನನ್ನ ಮಗಳನ್ನು ಮದುವೆಯಾಗುವಂತೆ ಅವನನ್ನು ಆರಾಧಿಸುವೆನು.

೪೪. ಹಾಗೆ ವಿಶೇಷ ಪ್ರಯತ್ನದಿಂದ ಪೂಜಿಸಿದರೆ, ಶಂಕರನು ಸುಪ್ರೀತನಾಗಿ ಸತಿಯನ್ನು ಸ್ವೀಕರಿಸಲಿಚ್ಛಿಸುವನು. ಸತಿಯೂ ತನಗೆ ಶಂಕರನೇ ಪತಿಯಾಗಬೇಕೆಂದು ಕೇಳಿಕೊಂಡಿರುವಳು. ಅದರಂತೆ ಅವಳಿಗೆ ತಾನು ಪತಿಯಾಗುವೆನೆಂದು ಆ ಶಂಕರನು ವರವನ್ನೂ ಕೊಟ್ಟಿರುವನು.

ಇತಿ ಚಿಂತಯತಸ್ತಸ್ಯ ದಕ್ಷಸ್ಯ ಪುರತೋ ವಿಧಿಃ ।
ಉಪಸ್ಥಿತೋ ಹಂಸರಥಃ ಸಾವಿತ್ರೀಸಹಿತಸ್ತದಾ ॥ ೪೫ ॥

ತಂ ದೃಷ್ಟ್ವಾ ವೇಧಸಂ ದಕ್ಷಃ ಪ್ರಣಮ್ಯಾವನತಃ ಸ್ಥಿತಃ ।
ಆಸನಂ ಚ ದದೌ ತಸ್ಮೈ ಸಮಾಭಾಷ್ಯ ಯಥೋಚಿತಂ ॥ ೪೬ ॥

ತತಸ್ತಂ ಸರ್ವಲೋಕೇಶಂ ತತ್ಸಾಗಮನಕಾರಣಂ ।
ದಕ್ಷಃ ಪಪ್ರಚ್ಛ ವಿಪ್ರೇಂದ್ರಾಶ್ಚಿಂತಾವಿಷ್ಟೋಽಪಿ ಹರ್ಷಿತಃ ॥ ೪೭ ॥

॥ ದಕ್ಷ ಉವಾಚ ॥

ತವಾತ್ರಾಽಽಗಮನೇ ಹೇತುಂ ಕಥಯಸ್ವ ಜಗದ್ಗುರೋ ।
ಪುತ್ರಸ್ನೇಹಾತ್ಕಾರ್ಯವಶಾದಥವಾಽಽಶ್ರಮಮಾಗತಃ ॥ ೪೮ ॥

---

೪೫. ಹೀಗೆ ಯೋಚಿಸುತ್ತಿರುವ ಆ ದಕ್ಷನ ಎದುರಿಗೆ, ಬ್ರಹ್ಮನು ಸಾವಿತ್ರಿಯೊಡನೆ ಹಂಸಯಾನದಲ್ಲಿ ಕುಳಿತು ಬಂದನು.

೪೬. ಬಂದಿರುವ ಆ ಬ್ರಹ್ಮನನ್ನು ನೋಡಿ ದಕ್ಷನು ವಿನಯದಿಂದ ಬಗ್ಗಿ ನಮಸ್ಕರಿಸಿ ಅವನಿಗೆ ಆಸನಾದಿಗಳನ್ನು ಕೊಟ್ಟು ಉಪಚರಿಸಿ, ಕುಶಲಪ್ರಶ್ನೆಯನ್ನು ಮಾಡಿದನು.

೪೭. ಎಲೈ ಬ್ರಾಹ್ಮಣೋತ್ತಮರೇ, ಆ ಮೇಲೆ ದಕ್ಷನು ಮಗಳ ಮದುವೆಯ ವಿಷಯದಲ್ಲಿ ಚಿಂತೆಯುಳ್ಳವನಾದರೂ ಬ್ರಹ್ಮನ ಆಗಮನದಿಂದ ಸಂತೋಷಗೊಂಡು ಬ್ರಹ್ಮನನ್ನು ಕುರಿತು, ಬಂದಕಾರಣವೇನೆಂದು ಕೇಳಿದನು.

೪೮. ದಕ್ಷನು ಬ್ರಹ್ಮನನ್ನು ಕೇಳಿದನು:—ಎಲೈ ಜಗತ್ತಿಗೆ ತಂದೆಯಾದ ಬ್ರಹ್ಮನೇ, ನೀನು ಬಂದ ಕಾರಣವೇನು? ಅದನ್ನು ನನಗೆ ಹೇಳು. ಮಗನಾದ ನನ್ನ ಮೇಲಿನ ವಾತ್ಸಲ್ಯದಿಂದ ಬಂದಿರುವೆಯಾ? ಅಥವಾ ಬೇರೆ ಯಾವುದಾದರೂ ಕಾರ್ಯಾರ್ಥವಾಗಿ ಈ ನನ್ನ ಆಶ್ರಮಕ್ಕೆ ಬಂದಿರುವೆಯಾ?

॥ ಮಾರ್ಕಂಡೇಯ ಉವಾಚ ॥

ಇತಿ ಪೃಷ್ಟಃ ಸುರಶ್ರೇಷ್ಠೋ ದಕ್ಷೇಣ ಸುಮಹಾತ್ಮನಾ ।
ಪ್ರಹಸನ್ನಬ್ರವೀದ್ವಾಕ್ಯಂ ಮೋದಯಂಸ್ತಂ ಪ್ರಜಾಪತಿಂ ॥ ೪೯ ॥

॥ ಬ್ರಹ್ಮೋವಾಚ ॥

ಶೃಣು ದಕ್ಷ ಯದರ್ಥಂ ತೇ ಸಮೀಪಮಹಮಾಗತಃ ।
ತಲ್ಲೋಕಸ್ಯ ಹಿತಂ ಪಥ್ಯಂ ಭವತೋಽಪಿ ತದೀಪ್ಸಿತಂ ॥ ೫೦ ॥

ತವ ಪುತ್ರ್ಯಾ ಸಮಾರಾಧ್ಯ ಮಹಾದೇವಂ ಜಗತ್ಪತಿಂ ।
ಯೋ ವರಃ ಪ್ರಾರ್ಥಿತಃ ಸೋಽದ್ಯ ಸ್ವಯಮೇವಾಗತೋ ಗೃಹಂ ॥೫೧॥

ಶಂಭುನಾ ತವ ಪುತ್ರ್ಯರ್ಥೇ ತ್ವತ್ಸಕಾಶಮಹಂ ಪುನಃ ।
ಪ್ರಸ್ಥಾಪಿತೋಽಸ್ಮಿ ಯತ್ಕೃತ್ಯಂ ಶ್ರೇಯಸ್ತದವಧಾರಯ ॥ ೫೨ ॥

---

೪೯. ಮಾರ್ಕಂಡೇಯಮುನಿಯು ಹೇಳಿದನು :—ಮಹಾತ್ಮನಾದ ದಕ್ಷನು ಹೀಗೆ ಕೇಳಿದಮೇಲೆ ದೇವಶ್ರೇಷ್ಠನಾದ ಬ್ರಹ್ಮನು ದಕ್ಷನನ್ನು ಸಂತೋಷಗೊಳಿಸುತ್ತಾ ಮಂದಹಾಸದಿಂದ ಹೀಗೆ ಹೇಳಿದನು.

೫೦. ಬ್ರಹ್ಮನು ಹೇಳಿದನು :—ಎಲೈ ದಕ್ಷಬ್ರಹ್ಮನೇ, ನಾನು ನಿನ್ನಲ್ಲಿ ಏತಕ್ಕೆ ಬಂದಿರುವೆನೆಂಬುದನ್ನು ಹೇಳುವೆನು, ಕೇಳು. ನಾನು ಬಂದಿರುವ ಕಾರ್ಯವು ಜಗತ್ತಿಗೆ ಹಿತಕರವೂ ಒಳ್ಳೆಯದೂ ಆಗಿರುತ್ತದೆ. ನಿನಗೂ ಅದು ಇಷ್ಟವಾದುದು.

೫೧. ನಿನ್ನ ಮಗಳಾದ ಸತಿಯು ಜಗದೊಡೆಯನಾದ ಮಹಾದೇವನನ್ನು ಆರಾಧಿಸಿ ಯಾವ ವರನನ್ನು ಕೇಳಿಕೊಂಡಳೋ ಆದಕ್ಕಾಗಿ ನಾನು ಈಗ ನಿನ್ನ ಮನೆಗೆ ಬಂದಿರುವೆನು.

೫೨. ನಿನ್ನ ಮಗಳಿಗಾಗಿ, ಶಂಕರನು ನನ್ನನ್ನು ನಿನ್ನ ಬಳಿಗೆ ಕಳುಹಿಸಿರುವನು. ಈ ವಿಚಾರದಲ್ಲಿ ಏನು ಮಾಡಬೇಕು? ಯಾವುದು ಶ್ರೇಯಸ್ಸು ಎಂಬುದನ್ನು ಹೇಳುವೆನು, ಕೇಳು.

ವರಂ ದಾತುಂ ಯದಾ ಯಾತಸ್ತಾವತ್ತ್ವಭೃತಿ ಶಂಕರಃ ।
ತ್ವತ್ಸುತಾವಿಪ್ರಯೋಗೇನ ನ ಶರ್ಮ ಲಭತೇऽಜ್ಞಸಾ ॥ ೫೩ ॥
ಲಬ್ಧಚ್ಛಿದ್ರೋऽಪಿ ಮದನೋ ನಿಜಘಾನ ತದಾ ಭೃಶಂ ।
ಸರ್ವೈಃ ಪುಷ್ಪಕರೈರ್ಬಾಣೈರೇಕದೈವ ಜಗತ್ಪ್ರಭುಂ ॥ ೫೪ ॥
ಸ ಬಾಣವಿದ್ಧಃ ಕಾಮೇನ ಪರಿತ್ಯಜ್ಯಾತ್ಮಚಿಂತನಂ ।
ಸತೀಂ ವಿಚಿಂತಯನ್ನಾಸ್ತೇ ವ್ಯಾಕುಲಃ ಪ್ರಾಕೃತೋ ಯಥಾ ॥ ೫೫ ॥
ವಿಸ್ಮೃತ್ಯ ಪ್ರಸ್ತುತಾಂ ವಾಣೀಂ ಗಣಾಗ್ರೇ ವಿಪ್ರಯೋಗತಃ ।
ಕ್ವ ಸತೀತ್ಯೇವ ಗಿರಿಶೋ ಭಾಷತೇऽನ್ಯಕೃತಾವಪಿ ॥ ೫೬ ॥
ಮಯಾ ಯದ್ವಾಂಛಿತಂ ಪೂರ್ವಂ ತ್ವಯಾ ಚ ಮದನೇನ ಚ ।
ಮರೀಚ್ಯಾದ್ಯೈರ್ಮುನಿವರೈಸ್ತತ್ಸಿದ್ಧಮಧುನಾ ಸುತ ॥ ೫೭ ॥

---

೫೩. ನಿನ್ನ ಮಗಳಿಗೆ ವರವನ್ನು ಕೊಡಲು ಶಂಕರನು ಯಾವಾಗ ಬಂದು ಸತಿಯನ್ನು ನೋಡಿದನೋ ಆಗಿನಿಂದ ಶಂಕರನು ಆ ಸತಿಯ ವಿಯೋಗದಿಂದ ತುಂಬ ಚಿಂತಾಕ್ರಾಂತನಾಗಿ ಸ್ವಲ್ಪವೂ ಸುಖವಿಲ್ಲದಿರುವನು.

೫೪. ಆಗ ಮನ್ಮಥನೂ ಸಹ ಸಮಯವನ್ನು ನಿರೀಕ್ಷಿಸಿ ತನ್ನಲ್ಲಿದ್ದ ಎಲ್ಲ ಪುಷ್ಪಬಾಣಗಳನ್ನೂ ಒಂದೇ ಸಾರಿಗೆ ಶಂಕರನ ಮೇಲೆ ಪ್ರಯೋಗಿಸಿದನು.

೫೫. ಆಗಿನಿಂದ ಶಂಕರನು ಹೀಗೆ ಮನ್ಮಥನ ಬಾಣದಿಂದ ಪೀಡಿತನಾಗಿ ಬ್ರಹ್ಮಧ್ಯಾನವನ್ನು ಬಿಟ್ಟು, ಸತಿಯನ್ನೇ ಚಿಂತಿಸುತ್ತಾ, ಸಾಮಾನ್ಯ ಮನುಷ್ಯನಂತೆ ಚಿಂತೆಯಲ್ಲಿ ಮುಳುಗಿರುವನು.

೫೬. ಮತ್ತು ಆ ಶಂಕರನು ಪ್ರಕೃತವಾದ ಮಾತುಗಳನ್ನು ಮರೆತು ಗಣಗಳೆದುರಿಗೆ "ಸತೀ ದೇವಿಯೆಲ್ಲಿ?" ಎಂದು ಹುಚ್ಚು ಹುಚ್ಚಾಗಿ ಮಾತನಾಡುತ್ತಿರುವನು.

೫೭. ಎಲೈ ಪುತ್ರನೇ, ಹಿಂದೆ ನಾನೂ, ನೀನೂ, ಮನ್ಮಥನೂ, ಮರೀಚಿಯೇ ಮೊದಲಾದ ಮುನಿಗಳೂ ಏನನ್ನು ಅಪೇಕ್ಷಿಸಿದ್ದೆವೋ ಅದು ಈಗ ಸಿದ್ಧಿಸಿದಂತಾಯಿತು.

ತ್ವತ್ಪುತ್ರ್ಯಾssರಾಧಿತಃ ಶಂಭುಃ ಸೋಽಪಿ ತಸ್ಯಾ ವಿಚಿಂತನಾತ್ ।
ಅನುಮೋದಯಿತುಂ ಪ್ರೇಪ್ಸುರ್ವರ್ತತೇ ಹಿಮವದ್ಗಿರೌ ॥ ೫೮ ॥

ಯಥಾ ನಾನಾವಿಧೈರ್ಭಾವೈಃ ಸತ್ಯಾ ನಂದಾವ್ರತೇನ ಚ ।
ಶಂಭುರಾರಾಧಿತಸ್ತೇನ ತಥೈವಾರಾಧ್ಯತೇ ಸತೀ ॥ ೫೯ ॥

ತಸ್ಮಾತ್ತ್ವಂ ದಕ್ಷ ತನಯಾಂ ಶಂಭ್ವರ್ಥೇ ಪರಿಕಲ್ಪಿತಾಂ ।
ತಸ್ಮೈ ದೇಹ್ಯವಿಲಂಬೇನ ತೇನ ತೇ ಕೃತಕೃತ್ಯತಾ ॥ ೬೦ ॥

ಅಹಂ ತಮಾನಯಿಷ್ಯಾಮಿ ನಾರದೇನ ತ್ವದಾಲಯಂ ।
ತಸ್ಮೈ ತ್ವಮೇನಾಂ ಸಂಯಚ್ಛ ತದರ್ಥೇ ಪರಿಕಲ್ಪಿತಾಂ ॥ ೬೧ ॥

---

೫೮. ನಿನ್ನ ಮಗಳಿಂದ ಪೂಜಿಸಲ್ಪಟ್ಟ ಆ ಶಂಕರನು, ತಾನೂ ಅವಳನ್ನು ಪಡೆಯುವ ಇಚ್ಛೆಯಿಂದ ಅವಳನ್ನು ಸಂತೋಷಗೊಳಿಸಲು ಸದಾ ಅವಳನ್ನು ಧ್ಯಾನಿಸುತ್ತಲೇ ಹಿಮವತ್ಪರ್ವತದಲ್ಲಿರುವನು.

೫೯. ಭಕ್ತಿಪೂರ್ವಕವಾದ ಅನೇಕ ಪೂಜೆಗಳಿಂದಲೂ ನಂದಾವ್ರತದಿಂದಲೂ ಸತಿಯು ಶಂಕರನನ್ನು ಹೇಗೆ ಆರಾಧಿಸಿದಳೋ ಅದರಂತೆ ಶಂಕರನೂ ಈಗ ಅವಳನ್ನು ಆರಾಧಿಸುತ್ತಲಿರುವನು.

೬೦. ಆದುದರಿಂದ ಎಲೈ ದಕ್ಷಬ್ರಹ್ಮನೇ ಶಂಕರನಿಗಾಗಿಯೇ ನಿಶ್ಚಯಿಸಲ್ಪಟ್ಟಿರುವ ನಿನ್ನ ಮಗಳಾದ ಸತಿಯನ್ನು ಆ ಶಂಕರನಿಗೆ ಜಾಗ್ರತೆಯಾಗಿ ಮದುವೆಮಾಡಿಕೊಡು. ಎಲೈ ದಕ್ಷನೇ, ಹಾಗೆ ಮಾಡಿದರೆ ನೀನೂ ಕೃತಕೃತ್ಯನಾಗುವೆ.

೬೧. ನಾನು ನಾರದಮುನಿಯೊಡನೆ ಆ ಶಂಕರನನ್ನು ಇಲ್ಲಿಗೆ ಕರೆದುಕೊಂಡು ಬರುವೆನು. ಅವನಿಗಾಗಿ ನಿಶ್ಚಿತಳಾಗಿರುವ ಸತಿಯನ್ನು ಆ ಶಂಕರನಿಗೆ ಧಾರೆಯೆರೆದು ಕೊಡು.

॥ ಮಾರ್ಕಂಡೇಯ ಉವಾಚ ॥

ಏವಮೇವೇತಿ ದಕ್ಷಸ್ತಮುವಾಚ ಪರಮೇಷ್ಠಿನಂ ।
ವಿಧಿಶ್ಚ ಗತವಾಂಸ್ತತ್ರ ಗಿರಿಶೋ ಯತ್ರ ಸಂಸ್ಥಿತಃ ॥ ೬೨ ॥

ಗತೇ ಬ್ರಹ್ಮಣಿ ದಕ್ಷೋಽಪಿ ಸದಾರತನಯೋ ಮುದಾ ।
ಅಭವತ್ಪೂರ್ಣದೇಹಸ್ತು ಪೀಯೂಷೈರಿವ ಪೂರಿತಃ ॥ ೬೩ ॥

ಅಥ ಬ್ರಹ್ಮಾಪಿ ಮೋದೇನ ಪ್ರಸನ್ನಃ ಕಮಲಾಸನಃ ।
ಅಸಸಾದ ಮಹಾದೇವಂ ಹಿಮವದ್ಗಿರಿಸಂಸ್ಥಿತಂ ॥ ೬೪ ॥

ತಂ ವೀಕ್ಷ್ಯ ಲೋಕಸ್ರಷ್ಟಾರಮಾಯಾಂತಂ ವೃಷಭಧ್ವಜಃ ।
ಮನಸಾ ಸಂಶಯಂ ಚಕ್ರೇ ಸತೀ ಪ್ರಾಪ್ತೌ ಮುಹುರ್ಮುಹುಃ ॥ ೬೫ ॥

ಅಥ ದೂರಾನ್ಮಹಾದೇವೋ ಲೋಕೇಶಂ ಸಾಮುಸಂಯುತಂ ।
ಉವಾಚ ಮುದನೋನ್ಮಾಥೀ ವಿಧಿಂ ಸಸ್ಮರಮಾನಸಃ ॥ ೬೬ ॥

---

೬೨. ಮಾರ್ಕಂಡೇಯ ಮುನಿಯು ಹೇಳಿದನು:—ಆಮೇಲೆ ದಕ್ಷ ಬ್ರಹ್ಮನು ಹಾಗೆಯೇ ಆಗಲೆಂದು ಬ್ರಹ್ಮನಿಗೆ ಹೇಳಿದನು. ಬ್ರಹ್ಮನೂ ಸಹ ಶಂಕರನಿರುವಲ್ಲಿಗೆ ತೆರಳಿದನು.

೬೩. ಬ್ರಹ್ಮನು ಹೊರಟು ಹೋದಮೇಲೆ ಹೆಂಡತಿ ಮಗಳೊಂದಿಗೆ ಕೂಡಿದ ಆ ದಕ್ಷಬ್ರಹ್ಮನು ಶರೀರದಲ್ಲೆಲ್ಲಾ ಅಮೃತವು ತುಂಬಿಕೊಂಡಂತೆ ಸಂತೋಷದಿಂದ ಭರಿತನಾದನು.

೬೪. ಅತ್ತಲಾಗಿ ಬ್ರಹ್ಮನೂ ಸಹ ಸಂತೋಷದಿಂದ ಪ್ರಸನ್ನನಾಗಿ ಹಿಮವತ್ಪರ್ವತದಲ್ಲಿರುವ ಮಹಾದೇವನ ಸಮೀಪವನ್ನೈದಿದನು.

೬೫. ಆಮೇಲೆ ಶಂಕರನು ಬ್ರಹ್ಮನು ಬರುತ್ತಿರುವುದನ್ನು ನೋಡಿ, ಸತೀದೇವಿಯು ತನಗೆ ಲಭಿಸುವ ವಿಷಯದಲ್ಲಿ ಬ್ರಹ್ಮನು ಹೋಗಿದ್ದ ಕೆಲಸವೇನಾಯಿತೋ ಎಂದು ಸಂಶಯಪಟ್ಟನು.

೬೬. ಆ ಮೇಲೆ ನಗುಮುಖದಿಂದ ಇರುವ ಬ್ರಹ್ಮನನ್ನು ದೂರದಿಂದಲೇ ನೋಡಿ ಮನ್ಮಥವಿಕಾರದಿಂದ ಕೂಡಿದ ಆ ಶಂಕರನು ಬ್ರಹ್ಮನನ್ನು ಕುರಿತು ಹೀಗೆ ಹೇಳಿದನು.

॥ ಈಶ್ವರ ಉವಾಚ ॥

ಕಮುವೋಚತ್ಸುರಶ್ರೇಷ್ಠ ಸತ್ಯರ್ಥೇ ತ್ವತ್ಸುತಃ ಸ್ವಯಂ ।
ಕಥಯಸ್ವ ಯಥಾ ಸ್ವಾಂತಂ ಮನ್ಮಥೇನ ನ ದೀರ್ಯತೇ ॥ ೬೭ ॥

ಬಾಧಮಾನೋ ವಿಸ್ರಯೋಗೋ ಮಾಮೇವ ಚ ಸತೀವೃತೇ ।
ಅಭಿಹಂತಿ ಸುರಶ್ರೇಷ್ಠ ತ್ಯಕ್ತ್ವಾನ್ಯಾನ್ಪ್ರಾಣಧಾರಿಣಃ ॥ ೬೮ ॥

ಸತೀತಿ ಸತತಂ ವೇದ್ಮಿ ಬ್ರಹ್ಮನ್ ಕಾರ್ಯಾಂತರೇಽಪ್ಯಹಂ ।
ಸಾ ಯಥಾ ಹಿ ಮಯಾ ಸ್ಪಾಪ್ಯಾ ತದ್ವಿಧತ್ಸ್ವ ತಥಾ ದ್ರುತಂ ॥ ೬೯ ॥

॥ ಬ್ರಹ್ಮೋವಾಚ ॥

ಸತ್ಯರ್ಥೇ ಯನ್ಮಮ ಸುತೋ ವದತಿಸ್ಮ ವೃಷಧ್ವಜ ।
ತಚ್ಛೃಣುಷ್ವ ನಿಜಂ ಸಾಧ್ಯಂ ಸಿದ್ಧಮಿತ್ಯವಧಾರಯ ॥ ೭೦ ॥

---

೬೭. ಶಂಕರನು ಹೇಳಿದನು:—ದೇವೋತ್ತಮನಾದ ಎಲೈ ಬ್ರಹ್ಮನೇ, ನಿನ್ನ ಮಗನಾದ ದಕ್ಷನು ಸತೀದೇವಿಯ ವಿಷಯವಾಗಿ ಏನು ಹೇಳಿದನು? ನನ್ನ ಮನಸ್ಸು ಮನ್ಮಥಬಾಧೆಯಿಂದ ಪರಿತಪಿಸುತ್ತಿದೆ. ಅದನ್ನು ಶಮನಗೊಳಿಸುವ ಹಾಗೆ ಆ ಸತೀದೇವಿಯ ವಿಚಾರವನ್ನು ಹೇಳು.

೬೮. ಎಲೈ ಬ್ರಹ್ಮನೇ, ಆ ಸತಿಯ ವಿಯೋಗವು ಸತಿಯನ್ನು ಬಿಟ್ಟು ನನ್ನನ್ನೇ ಬಾಧಿಸುತ್ತಲಿದೆ. ಮನ್ಮಥನೂ ಸಹ ಮಿಕ್ಕ ಜನಗಳನ್ನು ಬಿಟ್ಟು ನನ್ನಲ್ಲಿಯೇ ತನ್ನ ಬಾಣಗಳನ್ನು ಪ್ರಯೋಗಿಸುತ್ತಿರುವನು.

೬೯. ಎಲೈ ಬ್ರಹ್ಮನೇ, ಪ್ರತಿಯೊಂದು ಕಾರ್ಯದಲ್ಲಿಯೂ ನನಗೆ ಸತಿಯೇ ಕಾಣುತ್ತಲಿರುವಳು. ಅವಳನ್ನು ನಾನು ಬೇಗ ಪಡೆಯುವಂತೆ ನೀನು ಸ್ರಯತ್ನಿಸುವವನಾಗು.

೭೦. ಬ್ರಹ್ಮನು ಹೇಳಿದನು:—ಓ ಶಂಕರನೇ, ನನ್ನ ಮಗನಾದ ದಕ್ಷ ಬ್ರಹ್ಮನು ಸತಿಯ ವಿಷಯದಲ್ಲಿ ಏನು ಹೇಳಿರುವನೋ ಅದನ್ನು ಕೇಳು. ನಿನ ಇಷ್ಟಾರ್ಥವು ನೆರವೇರಿರುವುದೆಂದು ತಿಳಿ.

ದೇಯಾ ತಸ್ಮೈ ಮಯಾ ಪುತ್ರೀ ತದರ್ಥೇ ಪರಿಕಲ್ಪಿತಾ ।
ಮಮಾಪೀಷ್ಟಮಿದಂ ಕರ್ಮ ತ್ವದ್ವಾಕ್ಯಾದಧಿಕಂ ಪುನಃ ॥ ೭೧ ॥

ಮತ್ಪುತ್ರ್ಯಾಽऽರಾಧಿತಃ ಶಂಭುರೇತದರ್ಥೇ ಸ್ವಯಂ ಪುನಃ ।
ಸೋऽಪ್ಯನ್ವಿಚ್ಛತಿ ತಾಂ ಯಸ್ಮಾತ್ತಸ್ಮಾದ್ದೇಯಾ ಮಯಾ ಹರೇ ॥ ೭೨ ॥

ಶುಭೇ ಲಗ್ನೇ ಮುಹೂರ್ತೇ ಚ ಸಮಾಗಚ್ಛತು ಮೇऽನ್ತಿಕಂ ।
ತದಾ ದಾಸ್ಯಾಮಿ ತನಯಾಂ ಭಿಕ್ಷಾರ್ಥಂ ಶಂಭವೇ ವಿಧೇ ॥ ೭೩ ॥

ಇತ್ಯವೋಚನ್ಮದಾ ದಕ್ಷಸ್ತಸ್ಮಾತ್ತ್ವಂ ವೃಷಭಧ್ವಜ ।
ಶುಭೇ ಮುಹೂರ್ತೇ ತದ್ವೇಶ್ಮ ಗಚ್ಛ ತಾಮನುಯಾಚತು ॥ ೭೪ ॥

---

೭೧. ಆ ದಕ್ಷಬ್ರಹ್ಮನು ಹೀಗೆ ಹೇಳಿದನು :—ಶಂಕರನಿಗಾಗಿಯೇ ನಿಶ್ಚಯಿಸಲ್ಪಟ್ಟ ನನ್ನ ಮಗಳನ್ನು ಅವನಿಗೇ ಕೊಡುವೆನು. ಈ ಕಾರ್ಯವು ನನಗೂ ಇಷ್ಟವಾದುದು. ಓ ಬ್ರಹ್ಮನೇ, ನಿನ್ನ ಮಾತಿನಿಂದ ಆ ನನ್ನ ಉದ್ದೇಶವು ಇನ್ನೂ ಹೆಚ್ಚಾಗಿರುವುದು.

೭೨. ನನ್ನ ಮಗಳು ಶಂಕರನನ್ನು ಪತಿಯಾಗಿ ಪಡೆಯಲಿಚ್ಛೆಯಿಂದಲೇ ಅವನನ್ನು ಆರಾಧಿಸಿರುವಳು. ಈಗ ಆ ಶಂಕರನೂ ಅವಳನ್ನು ಸ್ವೀಕರಿಸಲಿಚ್ಛಿಸಿರುವುದರಿಂದ ಅವನಿಗೆ ಸತಿಯನ್ನು ಕೊಡುವೆನು.

೭೩. ಎಲೈ ಬ್ರಹ್ಮನೇ, ಒಳ್ಳೆಯ ಲಗ್ನ ಮತ್ತು ಮುಹೂರ್ತದಲ್ಲಿ ಆ ಶಂಕರನು ನನ್ನ ಮನೆಗೆ ಬರಲಿ. ಆಗ ಅವನಿಗೆ ನನ್ನ ಮಗಳನ್ನು ಧಾರೆಯೆರೆದು ಕೊಡುವೆನು.

೭೪. ಹೀಗೆಂದು ದಕ್ಷಬ್ರಹ್ಮನು ಹೇಳಿರುವನು:—ಆದಕಾರಣ ಎಲೈ ಶಂಕರನೇ, ನೀನು ಒಳ್ಳೆಯ ಮುಹೂರ್ತದಲ್ಲಿ ದಕ್ಷನ ಮನೆಗೆ ಹೋಗಿ ಆ ಸತಿಯನ್ನು ಸ್ವೀಕರಿಸು.

॥ ಈಶ್ವರ ಉವಾಚ ॥

ಗಮಿಷ್ಯೇ ಭವತಾ ಸಾರ್ಧಂ ನಾರದೇನ ಮಹಾತ್ಮನಾ ।
ದ್ಯುತಮೇವ ಜಗತ್ಸ್ರಷ್ಟಸ್ತಸ್ಮಾತ್ತ್ವಂ ನಾರದಂ ಸ್ಮರ ॥ ೭೫ ॥
ಮರೀಚ್ಯಾದೀನ್ದಶ ತಥಾ ಮಾನಸಾನಪಿ ಸಂಸ್ಮರ ।
ತೈಃ ಸಾರ್ಧಂ ದಕ್ಷನಿಲಯಂ ಗಮಿಷ್ಯೇಽಹಂ ಗಣೈಃ ಸಹ ॥ ೭೬ ॥
ತತಃ ಸ್ಮೃತಾಸ್ತೇ ಕಮಲಾಸನೇನ
ಸನಾರದಾ ಬ್ರಹ್ಮಸುತಾ ಮನೋಜವಾಃ ।
ಸಮಾಗತಾ ಯತ್ರ ಹರೋ ವಿಧಿಶ್ಚ
ತತ್ಸಾಗತಾಃ ಕಾಮಮವೇತ್ಯ ಚಿಂತಾಂ ॥೭೭॥

॥ ಇತಿ ಶ್ರೀ ಕಾಲಿಕಾಪುರಾಣೇ ದಶಮೋಽಧ್ಯಾಯಃ ॥

---

೭೫. ಈಶ್ವರನು ಹೇಳಿದನು:—ಎಲೈ ಬ್ರಹ್ಮನೇ, ನಿನ್ನೊಡನೆಯೂ ಮಹಾತ್ಮನಾದ ನಾರದನೊಡನೆಯೂ ನಾನು ಆ ದಕ್ಷನ ಮನೆಗೆ ಹೋಗುವೆನು. ಆದುದರಿಂದ ನೀನು ನಾರದನನ್ನು ಬರುವಂತೆ ಸ್ಮರಿಸು.

೭೬. ಮತ್ತು ಮರೀಚಿಯೇ ಮೊದಲಾದ ನಿನ್ನ ಹತ್ತು ಜನ ಮಾನಸ ಪುತ್ರರನ್ನೂ ಬರುವಂತೆ ಸ್ಮರಿಸು. ಅವರೊಡನೆಯೂ ನನ್ನ ಪರಿವಾರಗಣ ಗಳೊಡನೆಯೂ ಕೂಡಿ ದಕ್ಷನ ಮನೆಗೆ ಹೋಗುವೆನು.

೭೭. ಆಮೇಲೆ ಬ್ರಹ್ಮನು ಅವರನ್ನು ಸ್ಮರಿಸಲು ನಾರದನೊಡನೆ ಆ ಬ್ರಹ್ಮನ ಮಾನಸಪುತ್ರರೆಲ್ಲರೂ ಈ ವಿಚಾರವನ್ನು ತಿಳಿದು, ಮನೋವೇಗ ದಿಂದ ಬ್ರಹ್ಮನೂ ಶಂಕರನೂ ಇರುವ ಪ್ರದೇಶಕ್ಕೆ ಬಂದು ಸೇರಿದರು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಹತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ಅಥ ಶ್ರೀ ಕಾಲಿಕಾಪುರಾಣೇ ಏಕಾದಶೋಽಧ್ಯಾಯಃ॥

ಹನ್ನೊಂದನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ತತಃ ಸಮಾಗತಾಃ ಸರ್ವೇ ಮಾನಸಾಶ್ಚ ಸನಾರದಾಃ ।
ವಿಧೇಃ ಸ್ಮರಣಮಾತ್ರೇಣ ವಾತೇನೇವ ವಿನೋದಿತಾಃ ॥ ೧ ॥

ತೈಃ ಸಾರ್ಧಂ ಬ್ರಹ್ಮಣಾ ಶಂಭುಃ ಸಗಣೋ ದಕ್ಷಮಂದಿರಂ ।
ಜಗಾಮ ಮೋದಯುಕ್ತೋಽಥ ಕಾಲೇ ತತ್ಕರ್ಮಯೋಗಿನಿ ॥ ೨ ॥

ಗಣಾಃ ಶಂಖಾಂಶ್ಚ ಪಟಹಾನ್ ಡಿಂಡಿಮಾಂ ಸ್ತೂರ್ಯವಂಶಕಾನ್ ।
ನಾದಯಂತೋ ಮುದಾ ಯುಕ್ತಾ ಅನುಗಚ್ಛಂತಿ ಶಂಕರಂ ॥ ೩ ॥

---

೧. ಮಾರ್ಕಂಡೇಯ ಮುನಿಯು ಹೇಳತೊಡಗಿದನು :—ಆಮೇಲೆ ಮಾನಸ ಪುತ್ರರೆಲ್ಲರೂ ನಾರದನೊಂದಿಗೆ ಕುತೂಹಲಯುಕ್ತರಾಗಿ, ಬ್ರಹ್ಮನು ಸ್ಮರಿಸಿದ ಮಾತ್ರದಿಂದಲೇ ಗಾಳಿಯಿಂದ ತೂರಲ್ಪಟ್ಟವರಂತೆ ಅಲ್ಲಿಗೆ ಬಂದು ಸೇರಿದರು.

೨. ಆಗ ಶಂಕರನು ಸಂತೋಷಗೊಂಡು ಅವರೆಲ್ಲರೊಡನೆಯೂ, ಬ್ರಹ್ಮನೊಂದಿಗೂ, ತನ್ನ ಗಣಗಳೊಂದಿಗೂ, ವಿವಾಹಕ್ಕೆ ಯೋಗ್ಯವಾದ ಒಳ್ಳೆಯ ಲಗ್ನದಲ್ಲಿ ದಕ್ಷಬ್ರಹ್ಮನ ಮನೆಗೆ ಹೊರಟನು.

೩. ಆ ಪರಿವಾರಗಣಗಳು ಸಂತೋಷದಿಂದ ಶಂಖಗಳನ್ನೂದುತ್ತಲೂ, ತಮ್ಮಟೆಗಳನ್ನೂ ಡಿಮಕಿಗಳನ್ನೂ ವಾದ್ಯಗಳನ್ನೂ ಬಾರಿಸುತ್ತಲೂ ಆ ಶಂಕರನೊಡನೆ ಹೋಗುತ್ತಲಿದ್ದವು.

ಕೇಚಿತ್ತಾಲಂ ಕರತಲೈಃ ಕುರ್ವಂತೋಽಂಘ್ರಿತಲಸ್ವನಂ ।
ವಿಮಾನೈರತಿವೇಗೈಃ ಸ್ವೈರನುಯಾಂತಿ ವೃಷಧ್ವಜಂ ॥ ೪ ॥

ಕೋಲಾಹಲಂ ಪ್ರಕುರ್ವಂತಸ್ತಥಾ ನಾನಾವಿಧಾನ್ರವಾನ್ ।
ಗಣಾ ಅನೇಕಾಕೃತಯಃ ಶಬ್ದಯೋಗೇನ ನಿರ್ಯಯುಃ ॥ ೫ ॥

ತತೋ ದೇವಾ ಮುದಾ ಯುಕ್ತಾ ಗಂಧರ್ವಾಪ್ಸರಸೋಗಣಾಃ ।
ವಾದ್ಯೈರ್ಮೋದೈಸ್ತಥಾ ನೃತ್ಯೈರನ್ವೀಯುರ್ವೃಷಭಧ್ವಜಂ ॥ ೬ ॥

ತೇಷಾಂ ಶಬ್ದೇನ ವಿಸ್ರೋಂದ್ರಾ ಗಂಧರ್ವಾಣಾಂ ಗರೀಯಸಾಂ ।
ಗಣಾನಾಂ ಚ ದಿಶಃ ಸರ್ವಾಃ ಪೂರಿತಾ ಚ ವಸುಂಧರಾ ॥ ೭ ॥

ಕಾಮೋಽಪಿ ಸಗಣಃ ಶಂಭುಂ ಸಶೃಂಗಾರರಸಾದಿಭಿಃ ।
ಮೋದಯನ್ಮೋಹಯನ್ಸ್ವಮಮನ್ವಿಯಾತ್ಸ ಸಮಕ್ಷತಃ ॥ ೮ ॥

---

೪. ಕೆಲವರು ಕೈಗಳಿಂದ ತಾಳಗಳನ್ನು ಹಾಕುತ್ತಲೂ, ಕಾಲಿನಿಂದ ಕುಟ್ಟಿ ಧ್ವನಿಯನ್ನು ಮಾಡುತ್ತಲೂ, ತುಂಬ ವೇಗವಾಗಿ ಹೋಗುವ ವಿಮಾನಗಳಲ್ಲಿ ಕುಳಿತು ಶಂಕರನನ್ನು ಅನುಸರಿಸಿ ಬಂದರು.

೫. ಅನೇಕ ಆಕಾರವಾಗಿ ಇರುವ ಇನ್ನು ಕೆಲವು ಗಣಗಳು ಕಲಕಲ ಶಬ್ದವನ್ನೂ, ಇನ್ನೂ ಅನೇಕ ಬಗೆಯ ಶಬ್ದಗಳನ್ನೂ ಮಾಡುತ್ತಾ ಶಂಕರನನ್ನು ಅನುಸರಿಸಿ ಬಂದವು.

೬. ಆಮೇಲೆ ದೇವತೆಗಳೂ, ಗಂಧರ್ವರೂ, ಅಪ್ಸರಸ್ತ್ರೀಯರೂ ಸಂತೋಷಗೊಂಡು, ವಾದ್ಯಧ್ವನಿಗಳಿಂದಲೂ ನರ್ತನದಿಂದಲೂ ಆ ಶಂಕರನನ್ನು ಅನುಸರಿಸಿ ಬಂದರು.

೭. ಎಲೈ ಬ್ರಾಹ್ಮಣೋತ್ತಮರೇ, ಆ ಅಸಂಖ್ಯಾತರಾದ ಗಂಧರ್ವರ ಮತ್ತು ಗಣಗಳ ಶಬ್ದದಿಂದ ದಿಕ್ಕುಗಳೂ, ಭೂಮಂಡಲವೂ ತುಂಬಿಹೋದವು.

೮. ಮನ್ಮಥನೂ ಸಹ ಶೃಂಗಾರರಸವೇ ಮೊದಲಾದವುಗಳಿಂದಲೂ ತನ್ನ ಪರಿವಾರಗಣಗಳಿಂದಲೂ ಆ ಶಂಕರನನ್ನು ಸಂತೋಷಗೊಳಿಸುತ್ತಲೂ ಮೋಹಗೊಳಿಸುತ್ತಲೂ ಆ ಶಂಕರನೆದುರಿನಲ್ಲಿಯೇ ನಡೆದು ಬರುತ್ತಲಿದ್ದನು

ಹರೇ ಗಚ್ಛತಿ ಭಾರ್ಯಾರ್ಥೇ ತದಾನೀಂ ಸಕಲಾಃ ಸುರಾಃ ।
ಬ್ರಹ್ಮಾದ್ಯಾಃ ಸ್ವಯಮೇವಾಶು ವಾದ್ಯಂ ಚಕ್ರುರ್ಮನೋಹರಂ ॥ ೯ ॥
ದಿಶಃ ಸರ್ವಾಃ ಸುಪ್ರಸನ್ನಾ ಬಭೂವುರ್ದ್ವಿಜಸತ್ತಮಾಃ ।
ಜಜ್ವಲುಶ್ಚಾಗ್ನಯಃ ಶಾಂತಾಃ ಪುಷ್ಪವೃಷ್ಟಿರಜಾಯತ ॥ ೧೦ ॥
ವವುರ್ವಾತಾಃ ಸುರಭಯೋ ವೃಕ್ಷಾಶ್ಚಾಪಿ ಸುಪುಷ್ಪಿತಾಃ ।
ಬಭೂವುಃ ಪ್ರಾಣಿನಃ ಸ್ವಸ್ಥಾ ಅಸ್ವಸ್ಥಾ ಯೇಽಪಿ ಕೇಚನ ॥ ೧೧ ॥
ಹಂಸಸಾರಸಕಾದಂಬಾ ನೀಲಕಂಠಾಶ್ಚ ಚಾತಕಾಃ ।
ಚುಕ್ರುಶುರ್ಮಧುರಾನ್ ಶಬ್ದಾನ್ ಪ್ರೇರಯಂತ ಇವೇಶ್ವರಂ ॥ ೧೨ ॥
ಭುಜಂಗೋ ವ್ಯಾಘ್ರಕೃತ್ತಿಶ್ಚ ಜಟಾ ಚಂದ್ರಕಲಾ ತಥಾ ।
ಜಗಾಮ ಭೂಷಣತ್ವಂ ಚ ತೇನಾಪಿ ಪರಿದೀಪಿತಃ ॥ ೧೩ ॥

---

೯. ಹೀಗೆ ಶಂಕರನು ವಿವಾಹಾರ್ಥವಾಗಿ ಹೋಗುತ್ತಿರಲು, ಬ್ರಹ್ಮನೇ ಮೊದಲಾದ ದೇವತೆಗಳೆಲ್ಲರೂ ತಾವೇ ವಾದ್ಯಗಳನ್ನು ಮನೋಹರವಾಗಿ ಬಾರಿಸುತ್ತಲಿದ್ದರು.

೧೦. ಎಲೈ ಬ್ರಾಹ್ಮಣಶ್ರೇಷ್ಠರೇ, ಆಗ ದಿಕ್ಕುಗಳೆಲ್ಲವೂ ನಿರ್ಮಲವಾಗಿದ್ದವು. ಯಾಗಾಗ್ನಿಗಳು ಹೊಗೆ ಮುಂತಾದವುಗಳಿಲ್ಲದೆ ಪ್ರಕಾಶಮಾನವಾಗಿ ಉರಿಯುತ್ತಿದ್ದವು. ಆಕಾಶದಿಂದ ಹೂವಿನ ಮಳೆಯಾಯಿತು.

೧೧. ಸುವಾಸನೆಯುಳ್ಳ ಮಂದಮಾರುತವು ಬೀಸಿತು. ಮರಗಳು ಅರಳಿದ ಹೂವುಗಳಿಂದ ಮನೋಹರವಾಗಿ ಕಂಗೊಳಿಸಿದವು. ಸಮಸ್ತ ಪ್ರಾಣಿಗಳೂ ತಮ್ಮ ಚಿಂತೆಯನ್ನು ಬಿಟ್ಟು ಸಂತೋಷಗೊಂಡವು.

೧೨. ಹಂಸ, ಸಾರಸಪಕ್ಷಿ, ಹೊಗೆಯ ಬಣ್ಣದ ಹಂಸ, ನವಿಲು, ಚಾತಕಪಕ್ಷಿ ಇವುಗಳು ಮಧುರವಾಗಿ ಧ್ವನಿಗೈಯುತ್ತಾ ಶಂಕರನನ್ನು ಪ್ರೇರಿಸುವಂತೆ ತೋರುತ್ತಿದ್ದವು.

೧೩. ಸರ್ಪವೂ, ಹುಲಿಯ ಚರ್ಮವೂ, ಜಟೆಯೂ, ಚಂದ್ರಕಲೆಯೂ ಆ ಶಂಕರನಿಗೆ ಆಭರಣಪ್ರಾಯವಾಗಿ ಒಪ್ಪುತ್ತಿದ್ದವು. ಆ ಶಂಕರನ ತೇಜಸ್ಸಿನಿಂದ ಅವುಗಳಿಗೆ ಅಪೂರ್ವ ಕಾಂತಿಯು ಉಂಟಾಯಿತು.

ತತಃ ಕ್ಷಣೇನ ಬಲಿನಾ ಬಲೀವರ್ದೇನ ವೇಗಿನಾ ।
ಸ ಬ್ರಹ್ಮನಾರದಾದ್ಯೈಶ್ಚ ಪ್ರಾಪ ದಕ್ಷಾಲಯಂ ಹರಃ ॥ ೧೪ ॥
ತತೋ ದಕ್ಷೋ ಮಹಾತೇಜಾ ಅಭ್ಯುತ್ಥಾಯ ಸ್ವಯಂ ಹರಂ ।
ಬ್ರಹ್ಮಾದೀಂಶ್ಚ ದದೌ ತೇಷಾಮಾಸನಾನಿ ಯಥೋಚಿತಂ ॥ ೧೫ ॥
ಕೃತ್ವಾ ಯಥೋಚಿತಂ ತೇಷಾಂ ಪೂಜಾಂ ಪಾದ್ಯಾದಿಭಿಸ್ತಥಾ ।
ಚಕಾರ ಸಂವಿದಂ ದಕ್ಷೋ ಮುನಿಭಿರ್ಮಾನಸೈಃ ಪುನಃ ॥ ೧೬ ॥
ತತಃ ಶುಭೇ ಮುಹೂರ್ತೇ ತು ಲಗ್ನೇ ಚ ದ್ವಿಜಸತ್ತಮಾಃ ।
ಸತೀಂ ನಿಜಸುತಾಂ ದಕ್ಷೋ ದದೌ ಹರ್ಷೇಣ ಶಂಭವೇ ॥ ೧೭ ॥
ಉದ್ವಾಹವಿಧಿನಾ ಸೋಽಪಿ ಪಾಣಿಂ ಜಗ್ರಾಹ ಹರ್ಷಿತಃ ।
ದಾಕ್ಷಾಯಣ್ಯಾ ವರತನೋಸ್ತದಾನೀಂ ವೃಷಭಧ್ವಜಃ ॥ ೧೮ ॥

---

೧೪. ಬಳಿಕ ಆ ಶಂಕರನು ಬಲಿಷ್ಠವಾದ ಮತ್ತು ಅತಿವೇಗವಾದ ಗಮನವುಳ್ಳ ವೃಷಭದ ಮೇಲೆ ಕುಳಿತು, ಬ್ರಹ್ಮ ನಾರದ ಮೊದಲಾದವರೊಡನೆ ಜಾಗ್ರತೆಯಾಗಿ ದಕ್ಷಬ್ರಹ್ಮನ ಮನೆಗೆ ಬಂದು ಸೇರಿದನು.

೧೫. ಆಮೇಲೆ ತುಂಬಾ ತೇಜಸ್ವಿಯಾದ ದಕ್ಷನು ಹರನನ್ನೂ, ಬ್ರಹ್ಮನೇ ಮೊದಲಾದವರನ್ನೂ ಎದ್ದು ನಿಂತು ಗೌರವಿಸಿ ಅವರವರಿಗೆ ಉಚಿತವಾದ ಆಸನಗಳನ್ನು ಕೊಟ್ಟನು.

೧೬. ಬಂದವರಿಗೆಲ್ಲ ಅರ್ಘ್ಯಪಾದ್ಯಾದಿಗಳಿಂದ ಯಥೋಚಿತವಾದ ಸತ್ಕಾರವನ್ನು ಮಾಡಿ, ದಕ್ಷಬ್ರಹ್ಮನು ಮಾನಸಪುತ್ರರಾದ ಮುನಿಗಳೊಂದಿಗೆ ಶಾಸ್ತ್ರೀಯವಾದ ವರನಿಶ್ಚಯವನ್ನು ಮಾಡಿದನು.

೧೭. ಬಳಿಕ ಶುಭಲಗ್ನದ ಒಳ್ಳೆಯ ಮುಹೂರ್ತದಲ್ಲಿ ದಕ್ಷಬ್ರಹ್ಮನು ಸಂತೋಷದಿಂದ ತನ್ನ ಮಗಳಾದ ಸತೀದೇವಿಯನ್ನು ಶಂಕರನಿಗೆ ಧಾರೆಯೆರೆದು ಕೊಟ್ಟನು.

೧೮. ಆಗ ಶಂಕರನೂ ಸಹ ಶಾಸ್ತ್ರೋಕ್ತವಾದ ವಿವಾಹವಿಧಿಯಂತೆ ದಕ್ಷನ ಮಗಳಾದ ಸುಂದರವಾದ ಶರೀರವುಳ್ಳ ಸತೀದೇವಿಯ ಪಾಣಿಗ್ರಹಣವನ್ನು ಮಾಡಿದನು.

ಬ್ರಹ್ಮಾಥ ನಾರದಾದ್ಯಾಶ್ಚ ಮುನಯಃ ಸಾಮಗೀತಿಭಿಃ ।
ಋಚಾ ಯಜುರ್ಭಿಃ ಸುಶ್ರಾವ್ಯೈಸ್ತೋಷಯಾಮಾಸುರೀಶ್ವರಂ ॥೧೯॥

ವಾದ್ಯಂ ಚಕ್ರುರ್ಗಣಾಸ್ಸರ್ವೇ ನನೃತುಶ್ಚಾಪ್ಸರೋ ಗಣಾಃ ।
ಪುಷ್ಪವೃಷ್ಟಿಶ್ಚ ಸಸೃಜುರ್ಮೇಘಾ ಗಗನಸಂಗತಾಃ ॥ ೨೦ ॥

ಅಥ ಶಂಭುಮುಪಾಗತ್ಯ ಗರುಡೇನಾತಿವೇಗಿನಾ ।
ಸಾರ್ಧಂ ಕಮಲಯಾ ಚೇದಮುವಾಚ ಗರುಡಧ್ವಜಃ ॥ ೨೧ ॥

॥ ಶ್ರೀಭಗವಾನುವಾಚ ॥

ಸ್ನಿಗ್ಧನೀಲಾಂಜನಶ್ಯಾಮಶೋಭಯಾ ಶೋಭಸೇ ಹರ ।
ದಾಕ್ಷಾಯಣ್ಯಾ ಯಥಾ ಚಾಹಂ ಪ್ರಾತಿಲೋಮ್ಯೇನ ಪದ್ಮಯಾ ॥೨೨॥

---

೧೯. ಆ ಕಾಲದಲ್ಲಿ ಬ್ರಹ್ಮನೂ, ನಾರದನೇ ಮೊದಲಾದ ಮುನಿಗಳೂ, ಮಧುರವಾದ ಸಾಮಗಾನದಿಂದಲೂ, ಸುಶ್ರಾವ್ಯವಾಗಿ ಪಠಿಸುತ್ತಿರುವ ಋಗ್ವೇದ ಯಜುರ್ವೇದ ಮಂತ್ರಘೋಷದಿಂದಲೂ ಶಂಕರನನ್ನು ಸಂತೋಷಗೊಳಿಸಿದರು.

೨೦. ಶಂಕರನ ಪರಿವಾರಗಣಗಳೆಲ್ಲವೂ ಮನೋಹರವಾಗಿ ವಾದ್ಯವನ್ನು ಬಾರಿಸಿದವು. ಅಪ್ಸರಸ್ತ್ರೀಯರು ನರ್ತನಮಾಡಿದರು. ಮೇಘಗಳು ಆಕಾಶದಿಂದ ಹೂವಿನ ಮಳೆಯನ್ನು ಸುರಿಸಿದವು.

೨೧. ಅಮೇಲೆ ತುಂಬ ವೇಗಶಾಲಿಯಾದ ಗರುಡನ ಮೇಲೆ ಕುಳಿತು ವಿಷ್ಣುವು ಲಕ್ಷ್ಮಿಯೊಡನೆ ಅಲ್ಲಿಗೆ ಬಂದು ಶಂಕರನನ್ನು ಕುರಿತು ಹೀಗೆ ಹೇಳಿದನು.

೨೨. ವಿಷ್ಣುವು ಹೇಳಿದನು :—ಎಲೈ ಶಂಕರನೇ ನೀನು, ನಯವಾದ ಕಾಡಿಗೆಯಂತೆ ಕಪ್ಪಾದ ಶರೀರಕಾಂತಿಯುಳ್ಳ ಈ ಸತಿಯಿಂದ, ಇದಕ್ಕೆ ವ್ಯತಿರಿಕ್ತವಾಗಿ ಶ್ಯಾಮವರ್ಣವುಳ್ಳ ನಾನು ಶುಭ್ರಳಾದ ಲಕ್ಷ್ಮಿಯಿಂದ ಕೂಡಿ ಶೋಭಿಸುವಂತೆ ಶೋಭಿಸುತ್ತಿರುವೆ. ಎಂದರೆ, ನಾನು ಶ್ಯಾಮವರ್ಣವುಳ್ಳವನು, ನನ್ನ ಪತ್ನಿಯಾದ ಲಕ್ಷ್ಮಿಯು ಶುಭ್ರವಾದ ವರ್ಣವುಳ್ಳವಳು. ಬೇರೆ ಬೇರೆ ವರ್ಣವುಳ್ಳ ನಾವು ಒಂದಾಗಿ ಕಲೆತು ಶೋಭಿಸುವಂತೆ ನೀನೂ ಶೋಭಿಸುವೆ. ಆದರೆ ನಿಮ್ಮಿಬ್ಬರಲ್ಲಿ ನೀನು ಶುಭ್ರವಾದ ಶರೀರಕಾಂತಿಯುಳ್ಳವನು. ನಿನ್ನ ಪತ್ನಿಯಾದ ಸತಿಯು ಕಪ್ಪು ಬಣ್ಣವುಳ್ಳವಳು. ಆದುದರಿಂದ ನಮಗೆ ವ್ಯತಿರಿಕ್ತವಾದ ಬಣ್ಣವುಳ್ಳವರಾದರೂ ನೀವು ಒಟ್ಟಿಗೆ ಕಲೆತು ನಮ್ಮಂತೆಯೇ ಶೋಭಿಸುತ್ತಿರುವಿರಿ.

ಕುರು ತ್ವಮನಯಾ ಸಾರ್ಧಂ ರಕ್ಷಾಂ ದೇವಸ್ಯ ವಾ ನೃಣಾಂ ।
ಅನಯಾ ಸಹ ಸಂಸಾರಸಾರಿಣಾಂ ಮುಂಗಲಂ ಸದಾ ॥ ೨೩ ॥
ಕುರು ದಸ್ಯೂನ್ಯಥಾಯೋಗ್ಯಂ ಹನಿಷ್ಯಸಿ ಚ ಶಂಕರ ।
ಯ ಏನೈನಾಂ ಸಾಭಿಲಾಷೋ ದೃಷ್ಟ್ವಾ ಶ್ರುತ್ವಾಥ ವಾ ಭವೇತ್ ॥ ೨೪ ॥
ತಂ ಹನಿಷ್ಯಸಿ ಭೂತೇಶ ನಾತ್ರ ಕಾರ್ಯಾ ವಿಚಾರಣಾ ।

॥ ಮಾರ್ಕಂಡೇಯ ಉವಾಚ ॥

ಏವಮಸ್ತ್ವಿತಿ ಸರ್ವಜ್ಞಃ ಪ್ರೋವಾಚ ಪರಮೇಶ್ವರಂ ।
ಪ್ರಹೃಷ್ಟಮಾನಸಂ ಪ್ರೀತ್ಯಾ ಪ್ರಸನ್ನವದನೋ ದ್ವಿಜಾಃ ॥ ೨೫ ॥
ಅಥ ಬ್ರಹ್ಮಾ ತದಾ ದೃಷ್ಟ್ವಾ ದಕ್ಷಜಾಂ ಚಾರುಹಾಸಿನೀಂ ।
ಸ್ಮರಾವಿಷ್ಟಮನಾವಕ್ತ್ರಂ ವೀಕ್ಷಾಂ ಚಕ್ರೇ ತದೀಯಕಂ ॥ ೨೬ ॥

---

೨೩. ಈ ಸತಿಯೊಂದಿಗೆ ನೀನು, ಸಂಸಾರದಲ್ಲಿ ಸಿಕ್ಕಿ ವ್ಯಥೆಪಡುತ್ತಿರುವ ಜನರಿಗೂ, ದೇವತೆಗಳಿಗೂ ಮಂಗಳವನ್ನುಂಟುಮಾಡುತ್ತಾ ಅವರನ್ನು ರಕ್ಷಿಸುವವನಾಗು.

೨೪. ಎಲೈ ಶಂಕರನೇ, ದುರ್ಮಾರ್ಗಪ್ರವರ್ತಕರನ್ನು ಯಥಾರೀತಿಯಾಗಿ ನಿಗ್ರಹಿಸು. ಮತ್ತು ಈ ಸತಿಯನ್ನು ಯಾವನು ಕೆಟ್ಟ ಅಭಿಲಾಷೆಯಿಂದ ನೋಡುವನೋ ಅಥವಾ ಕೇಳುವನೋ ಅವನನ್ನೂ ನಿಗ್ರಹಿಸು. ಇದರಲ್ಲಿ ವಿಮರ್ಶೆಮಾಡಬೇಕಾಗಿಲ್ಲ.

೨೫. ಮಾರ್ಕಂಡೇಯ ಮುನಿಯು ಹೇಳಿದನು :—ಎಲೈ ಬ್ರಾಹ್ಮಣರೇ, ಕೇಳಿರಿ. ಎಲ್ಲವನ್ನೂ ತಿಳಿದ ಶಂಕರನು ಹಾಗೆಯೇ ಆಗಲೆಂದು, ಪ್ರೀತಿಯಿಂದ ಪ್ರಸನ್ನ ಮುಖವುಳ್ಳವನಾಗಿ, ಸಂತೋಷದಿಂದಿರುವ ವಿಷ್ಣುವಿಗೆ ಹೇಳಿದನು.

೨೬. ಆಮೇಲೆ ಬ್ರಹ್ಮನು ಅಲ್ಲಿರುವ ಸುಂದರವಾದ ಮಂದಹಾಸವುಳ್ಳ ಸತಿಯನ್ನು ನೋಡಿ ಅವಳ ಮುಖವನ್ನು ಮನ್ಮಥವಿಕಾರರಹಿತನಾಗಿ ದೃಷ್ಟಿಸಿ ನೋಡಿದನು.

ಮುಹುರ್ಮುಹುಸ್ತದಾ ಬ್ರಹ್ಮಾ ಪಶ್ಯತಿಸ್ಮ ಸತೀಮುಖಂ ।
ತದೇಂದ್ರಿಯವಿಕಾರಂ ಚ ಪ್ರಾಪ್ತವಾನವಶಃ ಪುನಃ ॥ ೨೭ ॥

ಅಥ ಶಸ್ಯ ಪಪಾತಾಶು ತೇಜೋ ಭೂಮೌ ದ್ವಿಜೋತ್ತಮಾಃ ।
ತಜ್ಜ್ವಲದ್ದಹನಾಭಾಸಂ ಮುನೀನಾಂ ಪುರತಸ್ತದಾ ॥ ೨೮ ॥

ತತಸ್ತಸ್ಮಾತ್ಸಮುಭವಂಸ್ತೋಯದಾಃ ಶಬ್ದಸಂಯುತಾಃ ।
ಸಂವರ್ತಶ್ಚ ತಥಾಽಽವರ್ತಃ ಪುಷ್ಕರೋ ದ್ರೋಣ ಏವ ಚ ॥ ೨೯ ॥

ಗರ್ಜಂತಶ್ಚಾಥ ಮುಂಚಂತಸ್ತೋಯಾನಿ ದ್ವಿಜಸತ್ತಮಾಃ ॥ ೩೦ ॥

ತೈಸ್ತು ಸಂಘಾದಿತೇ ವ್ಯೋಮ್ನಿ ತೇಷು ಗರ್ಜತ್ಸು ಶಂಕರಃ ॥
ಪಶ್ಯನ್ ದಾಕ್ಷಾಯಣೀಂ ದೇವೀಂ ಭೃಶಂ ಕಾಮೇನ ಮೋಹಿತಃ ॥೩೧॥

---

೨೭. ಬ್ರಹ್ಮನು ಮೊದಲು ಸತೀಮುಖವನ್ನು ಕಾಮಭಾವನೆಯಿಲ್ಲದೆ ನೋಡಿದರೂ, ಪದೇ ಪದೇ ನೋಡುತ್ತಿದ್ದುದರಿಂದ ಕಡೆಗೆ ಮನಸ್ಥೈರ್ಯವಿಲ್ಲದೆ ಕಾಮಪರವಶನಾದನು.

೨೮. ಎಲೈ ಬ್ರಾಹ್ಮಣೋತ್ತಮರೇ, ಆ ಮೇಲೆ ಮನ್ಮಥಪರವಶನಾದ ಆ ಬ್ರಹ್ಮನ, ಉರಿಯುತ್ತಿರುವ ಬೆಂಕಿಯಂತೆ ಪ್ರಕಾಶಮಾನವಾದ ವೀರ್ಯವು ಮುನಿಗಳ ಎದುರಿನಲ್ಲಿಯೇ ಭೂಮಿಯ ಮೇಲೆ ಬಿದ್ದಿತು.

೨೯. ಆ ಮೇಲೆ ಭೂಮಿಯ ಮೇಲೆ ಬಿದ್ದ ಬ್ರಹ್ಮನ ವೀರ್ಯದಿಂದ ಗರ್ಜನೆಯನ್ನು ಮಾಡುತ್ತಿರುವ ಸಂವರ್ತ, ಆವರ್ತ, ಪುಷ್ಕರ, ದ್ರೋಣಗಳೆಂಬ ನಾಲ್ಕು ಮೇಘಗಳು ಉದ್ಭವಿಸಿದವು.

೩೦-೩೧. ಎಲೈ ಬ್ರಾಹ್ಮಣೋತ್ತಮರೇ, ಆ ಮೇಘಗಳು ಆಕಾಶವನ್ನೆಲ್ಲಾ ಮುಚ್ಚಿ ಗರ್ಜನೆಮಾಡುತ್ತಾ ಮಳೆಯನ್ನು ಸುರಿಸಿದವು. ಇದನ್ನು ನೋಡಿ ಶಂಕರನು ತನ್ನ ಪಕ್ಕದಲ್ಲಿರುವ ಸತಿಯನ್ನು ನೋಡಿ ಮನ್ಮಥವಿಕಾರದಿಂದ ತುಂಬ ಮೋಹಗೊಂಡನು.

ಮೋಹಿತೋಽಪ್ಯಥ ಕಾಮೇನ ತದಾ ವಿಷ್ಣ್ವವಚಃ ಸ್ಮರನ್ ।
ಇಯೇಷ ಹಂತುಂ ಬ್ರಹ್ಮಾಣಂ ಶೂಲಮುದ್ಯಮ್ಯ ಶಂಕರಃ ॥ ೩೨ ॥
ಶಂಭುನೋದ್ಯಮಿತೇ ಶೂಲೇ ವಿಧಿಂ ಹಂತುಂ ದ್ವಿಜೋತ್ತಮಾಃ ।
ಮರೀಚಿನಾರದಾದ್ಯಾಸ್ತೇ ಚಕ್ರುರ್ಹಾಹಾಕೃತಿಂ ತದಾ ॥ ೩೩ ॥
ದಕ್ಷೋ ಮೈವಂ ಮೈವಮಿತಿ ಪಾಣಿಮುದ್ಯಮ್ಯ ಶಂಕಿತಃ ।
ವಾರಯಾಮಾಸ ಭೂತೇಶಂ ಕ್ಷಿಪ್ರಮೇವ ಪುರೋಗತಃ ॥ ೩೪ ॥
ಅಥಾಗ್ರೇ ಮಿಲಿತಂ ವೀಕ್ಷ್ಯ ತದಾ ದಕ್ಷಂ ಮಹೇಶ್ವರಃ ।
ಪ್ರತ್ಯುವಾಚಾಪ್ರಿಯಮಿದಂ ಸ್ಮಾರಯನ್ವೈಷ್ಣವೀಂ ಗಿರಂ ॥ ೩೫ ॥

॥ ಈಶ್ವರ ಉವಾಚ ॥

ನಾರಾಯಣೇನ ವಿಪ್ರೇಂದ್ರ ಯದಿದಾನೀಮುದೀರಿತಂ ।
ಮಯಾಪ್ಯಂಗೀಕೃತಂ ಕರ್ತುಂ ತದಿಹೈವ ಪ್ರಜಾಪತೇ ॥ ೩೬ ॥

---

೩೨. ಹೀಗೆ ಕಾಮಮೋಹಿತನಾದರೂ ಶಂಕರನು, ಸತೀದೇವಿಯಲ್ಲಿ ಅಭಿಲಾಷೆಪಡುವವನನ್ನು ನಿಗ್ರಹಿಸೆಂಬ ವಿಷ್ಣುವಿನ ಮಾತನ್ನು ಸ್ಮರಿಸಿ ಬ್ರಹ್ಮನನ್ನು ಕೊಲ್ಲಲು ಇಚ್ಛೆಯಿಂದ ತನ್ನ ತ್ರಿಶೂಲವನ್ನೆತ್ತಿದನು.

೩೩. ಎಲೈ ಬ್ರಾಹ್ಮಣೋತ್ತಮರೇ, ಹೀಗೆ ಬ್ರಹ್ಮನನ್ನು ಕೊಲ್ಲಲು ಶಂಭುವು ತ್ರಿಶೂಲವನ್ನೆತ್ತಲು ಮರೀಚಿ, ನಾರದ ಮೊದಲಾದವರು ಹಾಹಾಕಾರವನ್ನು ಮಾಡಿದರು.

೩೪. ಆಗ ದಕ್ಷಬ್ರಹ್ಮನು ಭಯದಿಂದ ಶಂಕರನ ಎದುರಿಗೆ ಓಡಿ ಬಂದು ಬೇಡ ಬೇಡವೆಂದು ಕೈಯನ್ನೆತ್ತಿ ಅವನನ್ನು ತಡೆದನು.

೩೫. ಆಮೇಲೆ ದಕ್ಷನು ತನ್ನ ಎದುರಿಗೆ ಬಂದುದನ್ನು ನೋಡಿ ಶಂಕರನು ಅವನನ್ನು ಕುರಿತು ವಿಷ್ಣುವಿನ ಮಾತನ್ನು ಜ್ಞಾಪಿಸುತ್ತಾ ಹೀಗೆ ಹೇಳಿದನು :—

೩೬. ಈಶ್ವರನು ಹೇಳಿದನು :—ಎಲೈ ಬ್ರಾಹ್ಮಣ ಶ್ರೇಷ್ಠನಾದ ದಕ್ಷ ಬ್ರಹ್ಮನೇ, ಇಲ್ಲಿಯೇ ಈಗ ನಾರಾಯಣನು ಏನನ್ನು ಹೇಳಿದನೋ ಅದನ್ನು ಮಾಡಲು ನಾನೂ ಒಪ್ಪಿಕೊಂಡಿರುವೆನು.

ಏನಾಂ ಯಃ ಸಾಭಿಲಾಷಃ ಸನ್ವೀಕ್ಷತೇ ತಂ ಹನಿಷ್ಯಸಿ ।
ಇತಿ ವಾಚಂ ತು ಸಫಲಾಮೇನಂ ಹತ್ವಾ ಕರೋಮ್ಯಹಂ ॥ ೩೭ ॥
ಸಾಭಿಲಾಷಃ ಕಥಂ ಬ್ರಹ್ಮಾ ಸತೀಂ ಸಮವಲೋಕಯತ್ ।
ಅಭವತ್ತ್ಯಕ್ತತೇಜಾಸ್ತು ತತೋ ಹನ್ಮಿ ಕೃತಾಗಸಂ ॥ ೩೮ ॥

॥ ಮಾರ್ಕಂಡೇಯ ಉವಾಚ ॥

ತಮೇವಂ ವಾದಿನಂ ವಿಷ್ಣುಃ ಕ್ಷಿಪ್ರಂ ಭೂತ್ವಾ ಪುರಸ್ಸರಃ ।
ಇದಮೂಚೇ ವಾರಯಂಸ್ತಂ ಹಂತುಂ ಸರ್ವಜಗತ್ಪ್ರಭುಃ ॥ ೩೯ ॥

॥ ಶ್ರೀ ಭಗವಾನುವಾಚ ॥

ನ ಹನಿಷ್ಯಸಿ ಭೂತೇಶ ಸ್ರಷ್ಟಾರಂ ಜಗತಾಂ ವರಂ ।
ಅನೇನೈವ ಸತೀ ಭಾರ್ಯಾ ಭವದರ್ಥೇ ಪ್ರಕಲ್ಪಿತಾ ॥ ೪೦ ॥

---

೩೭. ಅದೇನೆಂದರೆ, ಯಾವನು ಈ ಸತಿಯನ್ನು ಕಾಮಾಭಿಲಾಷೆಯಿಂದ ನೋಡುವನೋ ಅವನನ್ನು ಕೊಲ್ಲು ಎಂದು ವಿಷ್ಣುವು ಹೇಳಿರುವನು. ಈಗ ಈ ಬ್ರಹ್ಮನನ್ನು ಕೊಂದು ಆ ಮಾತನ್ನು ಸಾರ್ಥಕವನ್ನಾಗಿ ಮಾಡುವೆನು.

೩೮. ಈ ಬ್ರಹ್ಮನು ಸತಿಯನ್ನು ಅನುರಾಗದಿಂದೇಕೆ ನೋಡಿದನು? ಅದರಿಂದ ಅವನ ವೀರ್ಯವೂ ಸ್ಖಲನವಾಗಿರುತ್ತದೆ. ಆದುದರಿಂದ ತಪ್ಪು ಮಾಡಿರುವ ಈ ಬ್ರಹ್ಮನನ್ನು ಕೊಲ್ಲುವೆನು.

೩೯. ಮಾರ್ಕಂಡೇಯಮುನಿಯು ಹೇಳಿದನು :—ಹೀಗೆ ಹೇಳುತ್ತಿರುವ ಶಂಕರನ ಎದುರಿಗೆ ಬೇಗನೆ ಬಂದು ಜಗತ್ತಿಗೊಡೆಯನಾದ ವಿಷ್ಣುವು ಬ್ರಹ್ಮನನ್ನು ಕೊಲ್ಲುವುದಕ್ಕೆ ಸಿದ್ಧನಾಗಿರುವ ಶಂಕರನನ್ನು ತಡೆದು, ಹೀಗೆ ಹೇಳಿದನು.

೪೦. ವಿಷ್ಣುವು ಹೇಳಿದನು:— ಎಲೈ ಶಂಕರನೇ, ಪ್ರಜೆಗಳನ್ನು ಸೃಷ್ಟಿಮಾಡುವ ಮತ್ತು ಜಗತ್ತಿನಲ್ಲಿ ಶ್ರೇಷ್ಠನಾಗಿರುವ ಈ ಬ್ರಹ್ಮನನ್ನು ಕೊಲ್ಲಬೇಡ. ಸತೀದೇವಿಯು ನಿನಗೆ ಹೆಂಡತಿಯಾಗುವಂತೆ ಈ ಬ್ರಹ್ಮನೇ ಪ್ರಯತ್ನಮಾಡಿರುವನು.

ಪ್ರಜಾಃ ಸ್ರಷ್ಟುಮಯಂ ಶಂಭೋ ಪ್ರಾದುರ್ಭೂತಶ್ಚತುರ್ಮುಖಃ ।
ಅಸ್ಮಿನ್ ಹತೇ ಜಗತ್ಸ್ರಷ್ಟಾ ನಾಸ್ತ್ಯನ್ಯಃ ಪ್ರಾಕೃತೋಽಧುನಾ ॥ ೪೧ ॥

ಸೃಷ್ಟಿಸ್ಥಿತ್ಯಂತಕರ್ಮಾಣಿ ಕರಿಷ್ಯಾಮಃ ಕಥಂ ಪುನಃ ।
ಅನೇನಾಪಿ ಮಯಾ ಚೈವ ಭವತಾ ಚ ಸಮಂಜಸಂ ॥ ೪೨ ॥

ಏಕಸ್ಮಿನ್ನಿಹತೇಽಮೀಷು ಕಸ್ತತ್ಕರ್ಮ ಕರಿಷ್ಯತಿ ।
ತಸ್ಮಾನ್ನ ವಧ್ಯೋ ಭವತಾ ವಿಧಾತಾ ವೃಷಭಧ್ವಜ ॥ ೪೩ ॥

॥ ಈಶ್ವರ ಉವಾಚ ॥

ಪ್ರತಿಜ್ಞಾಂ ಪೂರಯಿಷ್ಯಾಮಿ ಹತ್ವೈನಂ ಚತುರಾನನಂ ।
ಅಹಮೇವ ಪ್ರಜಾಃ ಸ್ರಕ್ಷ್ಯೇ ಸ್ಥಾವರಾಣಿ ಚರಾಣಿ ಚ ॥ ೪೪ ॥

---

೪೧. ಎಲೈ ಶಂಭುವೇ, ಈ ಚತುರ್ಮುಖ ಬ್ರಹ್ಮನು ಪ್ರಜೆಗಳನ್ನು ಸೃಷ್ಟಿಸುವುದಕ್ಕಾಗಿಯೇ ಜನಿಸಿರುವನು. ಇವನು ಕೊಲ್ಲಲ್ಪಟ್ಟರೆ, ಜಗತ್ತನ್ನು ಸೃಷ್ಟಿಸುವವನು ಈಗ ಇನ್ನೊಬ್ಬನಿಲ್ಲವು.

೪೨. ಈ ಬ್ರಹ್ಮನೂ, ನಾನೂ, ನೀನೂ—ಈ ಮೂವರೂ ಸೇರಿ ಜಗತ್ತಿನ ಸೃಷ್ಟಿಸ್ಥಿತಿನಾಶರೂಪವಾದ ಕಾರ್ಯಗಳನ್ನು ಮಾಡಬೇಕಾಗಿರುವುದು. ಈ ಬ್ರಹ್ಮನನ್ನು ನೀನು ಕೊಂದರೆ ಈ ಕೆಲಸಗಳನ್ನು ನಾವು ಹೇಗೆ ಮಾಡಲಾದೀತು ?

೪೩. ನಮ್ಮ ಮೂವರಲ್ಲಿ ಒಬ್ಬನು ಹತನಾದರೆ, ಅವನ ಕಾರ್ಯವನ್ನು ಮಾಡುವವರಾರು ? ಆದುದರಿಂದ ಎಲೈ ಶಂಕರನೇ, ಈ ಬ್ರಹ್ಮನನ್ನು ಕೊಲ್ಲಬೇಡ.

೪೪. ಈಶ್ವರನು ಹೇಳಿದನು:— ಎಲೈ ವಿಷ್ಣುವೇ, ಈ ಬ್ರಹ್ಮನನ್ನು ಸಂಹರಿಸಿ ನನ್ನ ಪ್ರತಿಜ್ಞೆಯನ್ನು ಪೂರೈಸುವೆನು. ಇವನ ಬದಲಾಗಿ ಪ್ರಜೆಗಳನ್ನೂ ಚರಾಚರಾತ್ಮಕವಾದ ಪ್ರಪಂಚವನ್ನೂ ನಾನೇ ಸೃಷ್ಟಿಸುವೆನು.

ಅನ್ಯಂ ಸೃಷ್ಟ್ಯೇ ವಿಧಾತಾರಮಥವಾऽಹಂ ಸ್ವತೇಜಸಾ ।
ಸ ಏವ ಸೃಷ್ಟಿಕರ್ತಾ ಸ್ಯಾತ್ಸರ್ವದಾ ಮದನುಜ್ಞಯಾ ॥ ೪೫ ॥

ಹತ್ವೈನಂ ವಿಧಿಮೇವಾಹಂ ಪ್ರತಿಜ್ಞಾಂ ಪಾಲಯನ್ವಿಭೋ ।
ಸೃಷ್ಟ್ಯಾರಮೇತಂ ಸೃಕ್ಷ್ಯಾಮಿ ನ ವಾರಯ ಚತುರ್ಭುಜ ॥ ೪೬ ॥

॥ ಮಾರ್ಕಂಡೇಯ ಉವಾಚ ॥

ಇತಿ ತಸ್ಯ ವಚಃ ಶ್ರುತ್ವಾ ಗಿರಿಶಸ್ಯ ಚತುರ್ಭುಜಃ ।
ಸ್ಮಿತಪ್ರಸನ್ನವದನಃ ಪುನರ್ಮೃವಮಿತೀರಯನ್ ॥ ೪೭ ॥

ಪ್ರತಿಜ್ಞಾಪೂರಣಂ ಕರ್ತುಂ ಯೋಗ್ಯಮಾತ್ಮನಿ ನೋ ಭವೇತ್ ।
ಇತ್ಯುವಾಚಾಭಿವದನಮೀಶ್ವರಸ್ಯ ದ್ವಿಜೋತ್ತಮಾಃ ॥ ೪೮ ॥

---

೪೫. ಅಲ್ಲದಿದ್ದರೆ ನಾನು ನನ್ನ ಸಾಮರ್ಥ್ಯದಿಂದ ಇನ್ನೊಬ್ಬ ಬ್ರಹ್ಮನನ್ನು ಸೃಷ್ಟಿಸುವೆನು. ಅವನೇ ನನ್ನಾಜ್ಞೆಯಂತೆ ಯಾವಾಗಲೂ ಸೃಷ್ಟಿಕಾರ್ಯದಲ್ಲಿ ನಿರತನಾಗಿರುವನು.

೪೬. ಎಲೈ ನಾಲ್ಕು ಬಾಹುಗಳಿಂದ ಶೋಭಿಸುವ ನಾರಾಯಣನೇ, ಈ ಬ್ರಹ್ಮನನ್ನು ಕೊಂದೇ ನನ್ನ ಪ್ರತಿಜ್ಞೆಯನ್ನು ಪೂರೈಸುವೆನು. ಆಮೇಲೆ ಇನ್ನೊಬ್ಬ ಬ್ರಹ್ಮನನ್ನು ಸೃಷ್ಟಿಸುವೆನು. ಆದುದರಿಂದ ನನ್ನನ್ನು ತಡೆಯಬೇಡ.

೪೭-೪೮. ಮಾರ್ಕಂಡೇಯ ಮುನಿಯು ಹೇಳಿದನು:—ಎಲೈ ಬ್ರಾಹ್ಮಣೋತ್ತಮರೇ, ಹೀಗೆ ಹೇಳುತ್ತಿರುವ ಆ ಶಂಕರನ ಮಾತುಗಳನ್ನು ಕೇಳಿ ಚತುರ್ಬಾಹುಯುಕ್ತನಾದ ವಿಷ್ಣುವು ಮಂದಹಾಸವದನನಾಗಿ ಹಾಗೆ ಮಾಡಬೇಡವೆಂದು ಹೇಳಿ, ಪ್ರತಿಜ್ಞೆಯನ್ನು ನಿನ್ನ ಆತ್ಮನೇ ಆದ ಈ ಬ್ರಹ್ಮನಲ್ಲಿ ಪೂರೈಸುವುದು ಯೋಗ್ಯವಾದುದಲ್ಲವೆಂದು ಎದುರಿಗಿರುವ ಆ ಶಂಕರನಿಗೆ ಪುನಃ ಹೇಳಿದನು.

ತತಃ ವುನಃ ಶಂಭುರೂಚೇ ಕಥಮಾತ್ಮಾ ವಿಧಿರ್ಮಮ ।
ಲಕ್ಷ್ಯತೇ ಭಿನ್ನ ಏವಾಯಂ ಪ್ರತ್ಯಕ್ಷೇಣಾಗ್ರತಃ ಸ್ಥಿತಃ ॥ ೪೯ ॥
ಅಥ ಪ್ರಹಸ್ಯ ಭಗವಾನ್ಮುನೀನಾಂ ಪುರತಸ್ತದಾ ।
ಇದಮೂಚೇ ಮಹಾದೇವಂ ತೋಷಯನ್ಗರುಡಧ್ವಜಃ ॥ ೫೦ ॥

॥ ಶ್ರೀ ಭಗವಾನುವಾಚ ॥

ನ ಬ್ರಹ್ಮಾ ಭವತೋ ಭಿನ್ನೋ ನ ಶಂಭುರ್ಬ್ರಹ್ಮಣಸ್ತಥಾ ।
ನ ಚಾಹಂ ಯುವಯೋರ್ಭಿನ್ನೋಽಭಿನ್ನತ್ವಂ ಸರ್ವದಾತನಂ ॥ ೫೧ ॥
ಪ್ರಧಾನಸ್ಯಾಽಪ್ರಧಾನಸ್ಯ ಭಾಗಾಭಾಗಸ್ವರೂಪಿಣಃ ।
ಜ್ಯೋತಿರ್ಯಸ್ಯ ಭಾಗೋ ಮೇ ಯುವಾಮೇಕೋಽಹಮುಂಶಕಃ॥೫೨॥

---

೪೯. ಈ ಬ್ರಹ್ಮನು ನನ್ನ ಆತ್ಮನು ಹೇಗೆ? ನನ್ನ ಎದುರಿಗೆ ನಿಂತಿರುವ ಇವನು ನನ್ನಿಂದ ಬೇರೆಯಾಗಿ ತೋರುತ್ತಲಿರುವನು ಎಂದು ಶಂಕರನು ಹೇಳಿದನು.

೫೦. ಹೀಗೆ ಹೇಳಿದಮೇಲೆ ವಿಷ್ಣುವು ನಕ್ಕು ಅವನನ್ನು ಸಂತೋಷ ಗೊಳಿಸಿ ನೆರೆದಿರುವ ಆ ಮುನಿಗಳ ಎದುರಿನಲ್ಲಿ ಈ ಮಾತನ್ನು ಹೇಳಿದನು.

೫೧. ವಿಷ್ಣುವು ಹೇಳಿದನು:—ಓ ಶಂಕರನೆ, ಬ್ರಹ್ಮನು ನಿನ್ನಿಂದ ಬೇರೆ ಯಲ್ಲವು. ನೀನೂ ಬ್ರಹ್ಮನಿಂದ ಬೇರೆಯಲ್ಲವು. ನಿಮ್ಮಿಬ್ಬರಿಂದ ಬೇರೆ ಯಾಗಿ ನಾನೂ ಇಲ್ಲವು. ಹೀಗೆ ನಮ್ಮ ಮೂವರಿಗೂ ಅಭೇದವು ಯಾವಾಗಲೂ ಇರುವುದು.

೫೨. ಪರಮಾತ್ಮನಿಗೆ ತನ್ನ ನಿಜಸ್ವರೂಪವೂ ಬ್ರಹ್ಮಸ್ವರೂಪವೂ, ಮತ್ತು ಪ್ರಕೃತಿಸ್ವರೂಪವೂ ಇರುವುದು. ಎಂದರೆ ಪರಬ್ರಹ್ಮನು ತನ್ನ ನಿಜರೂಪ ದಲ್ಲಿ ಇರುವಾಗ ಸತ್ತ್ವರಜಸ್ತಮೋಗುಣಗಳು ಹೆಚ್ಚು ಕಡಿಮೆಯಿಲ್ಲದೆ ಸಮ ಭಾವದಿಂದ ಇರುವುವು. ಈ ಅವಸ್ಥೆಗೆ ಪ್ರಧಾನವೆಂದೂ, ಅವ್ಯಕ್ತವೆಂದೂ ನಾಮರೂಪಗಳಿಲ್ಲದ ನಿರ್ಗುಣಾತ್ಮಕವಾದ ಅಭೇದರೂಪವೆಂದೂ ಹೆಸರುಗ ಳಿರುವವು. ಸೃಷ್ಟಿಕಾಲದಲ್ಲಿ ಈ ಅವ್ಯಕ್ತರೂಪದಲ್ಲಿ ಸತ್ತ್ವರಜಸ್ತಮೋಗುಣ

ಕಸ್ತ್ವಂ ಕೋऽಹಂ ಚ ಕೋ ಬ್ರಹ್ಮಾ ಮಮೈವ ಪರಮಾತ್ಮನಃ ।
ಅಂಶತ್ರಯಮಿದಂ ಭಿನ್ನಂ ಸೃಷ್ಟಿಸ್ಥಿತ್ಯಂತಕಾರಣಂ ॥ ೫೩ ॥

ಚಿಂತಯಸ್ವಾತ್ಮನಾऽऽತ್ಮಾನಂ ಸಂಸ್ತವಂ ಕುರು ಚಾತ್ಮನಿ ।
ಏಕತ್ವಂ ಬ್ರಹ್ಮವೈಕುಂಠಶಂಭೂನಾಂ ಹೃದ್ಗತಂ ಕುರು ॥ ೫೪ ॥

ಶಿರೋಗ್ರೀವಾದಿಭೇದೇನ ಯಥೈಕಸ್ಯೈವ ಧರ್ಮಿಣಃ ।
ಅಂಗಾನಿ ಮೇ ತಥೈಕಸ್ಯ ಭಾಗತ್ರಯಮಿದಂ ಹರ ॥ ೫೫ ॥

ಗಳ ವಿಷಮಾವಸ್ಥೆಯು, ಎಂದರೆ ಹೆಚ್ಚುಕಡಿಮೆಗಳು, ಉಂಟಾಗಿ ಜಗದುತ್ಪತ್ತಿಗೆ ಕಾರಣವಾಗುವುದು. ಹೀಗೆ ಉಂಟಾಗುವ ವಿಷಮಾವಸ್ಥೆಗೆ, ಪ್ರಕೃತಿಯೆಂತಲೂ, ವ್ಯಕ್ತರೂಪವೆಂತಲೂ ಅನೇಕ ಹೆಸರುಗಳಿರುವವು. ಆದರೂ ಈ ಸಾಮ್ಯಾವಸ್ಥೆ, ವಿಷಮಾವಸ್ಥೆಗಳು ಎರಡೂ ಒಂದೇ ಪರಬ್ರಹ್ಮಸ್ವರೂಪವೇ ಆಗಿರುವುದರಿಂದ, ಆ ಪ್ರಧಾನವಸ್ತುವಿನ ಅಂಶಗಳಾದ ನಾವುಗಳು ಭೇದರಹಿತರಾಗಿರುವೆವು. ಎಂದರೆ, ನೀವೀರ್ವರೂ, ನಾನೂಸಹ ಪ್ರಕಾಶರೂಪನಾದ ಆ ಪರಮಾತ್ಮನ ಅಂಶವೇ ಆಗಿರುತ್ತೇವೆ.

೫೩. ನೀನಾರು? ನಾನಾರು? ಬ್ರಹ್ಮನಾರು? ನಾವು ಮೂವರೂ ನಮ್ಮ ಸ್ವರೂಪನಾದ ಆ ಪರಮಾತ್ಮನ ಮೂರು ಅಂಶಗಳು. ಸೃಷ್ಟಿ, ಪಾಲನೆ, ನಾಶ ಇವುಗಳಿಗಾಗಿ ಸೃಷ್ಟಿಸಲ್ಪಟ್ಟಿರುತ್ತೇವೆ.

೫೪. ನಿನ್ನಿಂದ ನಿನ್ನ ಸ್ವರೂಪವನ್ನೂ ಆಲೋಚಿಸು, ನಿನ್ನ ಆತ್ಮನು ಯಾರೆಂಬ ಪರಿಚಯವನ್ನು ಮಾಡಿಕೋ. ಬ್ರಹ್ಮ ವಿಷ್ಣು ಮಹೇಶ್ವರರು ಬೇರೆಬೇರೆಯಲ್ಲವು. ಒಂದೇ ಸ್ವರೂಪವೆಂದು ಮನಸ್ಸಿನಲ್ಲಿ ದೃಢ ಮಾಡಿಕೋ.

೫೫. ಎಲೈ ಶಂಕರನೇ, ತಲೆ, ಕತ್ತು ಮೊದಲಾದವುಗಳು ಹೇಗೆ ಒಂದೇ ಶರೀರದ ಅಂಗಗಳೋ ಅದರಂತೆ ನಾವುಗಳು ಒಂದೇ ಆದ ಪರಮಾತ್ಮನ ಅಂಗಗಳು ಅಥವಾ ಭಾಗಗಳು.

ಯಜ್ಜ್ಞೋತಿರಗ್ರ್ಯಂ ಸ್ವಪರಪ್ರಕಾಶಂ
ಕೂಟಸ್ಥಮವ್ಯಕ್ತಮನಂತರೂಪಂ ।
ನಿತ್ಯಂ ಚ ದೀರ್ಘಾದಿವಿಶೇಷಣಾದ್ಯೈ
ರ್ಹೀನಂ ಪರಂ ತಚ್ಚ ವಯಂ ನ ಭಿನ್ನಾಃ ॥ ೫೬ ॥

॥ ಮಾರ್ಕಂಡೇಯ ಉವಾಚ ॥

ಏತಚ್ಛ್ರುತ್ವಾ ವಚಸ್ತಸ್ಯ ಮಹಾದೇವೋಽಪಿ ಮೋಹಿತಃ ।
ಜಾನನ್ನಪ್ಯಭಿನ್ನತ್ವಂ ಸದ್ವಿಸ್ಮೃತ್ಯಾನ್ಯಚಿಂತನಾತ್ ॥ ೫೭ ॥
ಪುನಃ ಪಪ್ರಚ್ಛ ಗೋವಿಂದಮನನ್ಯತ್ವಂ ತ್ರಿಭೇದಿನಾಂ ।
ಬ್ರಹ್ಮವಿಷ್ಣುತ್ರ್ಯಂಬಕಾನಾಮೇಕಸ್ಯ ಚ ವಿಶೇಷಕಂ ॥ ೫೮ ॥
ತತೋ ನಾರಾಯಣಃ ಪೃಷ್ಟಃ ಕಥಯಾಮಾಸ ಶಂಭವೇ ।
ಅನನ್ಯತ್ವಂ ತ್ರಿದೇವಾನಾಮೇಕತ್ವಂ ಚ ವ್ಯದರ್ಶಯತ್ ॥ ೫೯ ॥

---

೫೬. ತಾನು ಇನ್ನೊಂದು ವಸ್ತುವಿನಿಂದ ಪ್ರಕಾಶಿಸಲ್ಪಡದೆ ತಾನೇ ಎಲ್ಲವನ್ನೂ ಪ್ರಕಾಶಿಸುವುದೂ, ಉತ್ಪತ್ತಿಯೇ ಮೊದಲಾದ ವಿಕಾರವಿಲ್ಲದುದೂ, ಕೊನೆಯಿಲ್ಲದ ರೂಪವುಳ್ಳದೂ, ನಿತ್ಯವಾದುದೂ, ದೀರ್ಘತ್ವ ಮೊದಲಾದ ವಸ್ತುಧರ್ಮಗಳಿಲ್ಲದುದೂ ಆದ ಯಾವ ಪರಮಾತ್ಮಸ್ವರೂಪವಿರುವುದೋ ಅದಕ್ಕಿಂತಲೂ ನಾವು ಬೇರೆಯಲ್ಲವು.

೫೭. ಮಾರ್ಕಂಡೇಯ ಮುನಿಯು ಹೇಳಿದನು:— ಮಹಾದೇವನು ವಿಷ್ಣುವಿನ ಮಾತನ್ನು ಕೇಳಿ, ಮೂರ್ತಿತ್ರಯಕ್ಕೂ ಅಭೇದತ್ವವನ್ನು ತಿಳಿದವನಾದರೂ ಸತೀ ವಿಷಯಕವಾದ ಚಿಂತನೆಯಿಂದ ಅದನ್ನು ಮರೆತು ತಿಳಿವಳಿಕೆಯಿಲ್ಲದಂತಾಗಿದ್ದನು.

೫೮. ಆದಕಾರಣ ಅವನು ಬ್ರಹ್ಮವಿಷ್ಣುಶಂಕರರಿಗೆ ಅಭೇದವನ್ನೂ ಒಬ್ಬನೇ ಪರಮಾತ್ಮನ ರೂಪಭೇದವೆಂಬುದನ್ನೂ ಕುರಿತು ವಿಷ್ಣುವನ್ನು ಪುನಃ ಪ್ರಶ್ನೆ ಮಾಡಿದನು.

೫೯. ಆಮೇಲೆ ವಿಷ್ಣುವು ಶಂಕರನಿಗೆ ತ್ರಿಮೂರ್ತಿಗಳ ಅಭೇದವನ್ನೂ ಅವರು ಒಬ್ಬನೇ ಪರಮಾತ್ಮನ ಸ್ವರೂಪವೆಂಬುದನ್ನೂ ತೋರಿಸಿಕೊಟ್ಟನು.

ಶ್ರುತ್ವಾ ತತೋ ವಿಷ್ಣುಮುಖಾಬ್ಜಕೋಶಾ-
ದನನ್ಯತಾಂ ವಿಷ್ಣುವಿಧೀಶತತ್ತ್ವೇ ।
ದೃಷ್ಟ್ವಾ ಸ್ವರೂಪಂ ಚ ಜಹಾನ ನೈನಂ ।
ವಿಧಿಂ ಮೃಡಃ ಪುಷ್ಪಮಧೂಕರಾಭಂ ॥ ೬೦ ॥

॥ ಇತಿ ಶ್ರೀಕಾಲಿಕಾಪುರಾಣೇ ಏಕಾದಶೋಽಧ್ಯಾಯಃ ॥

---

೬೦. ಆಮೇಲೆ ಶಂಕರನು, ವಿಷ್ಣು ಬ್ರಹ್ಮ ಈಶ್ವರರಿಗೆ ಭೇದವಿಲ್ಲದಿರುವಿಕೆಯನ್ನೂ, ಮೂವರೂ ಒಂದೇ ಪರಮಾತ್ಮನ ಸ್ವರೂಪವೆಂಬುದನ್ನೂ ವಿಷ್ಣುವಿನ ಮುಖದಿಂದ ಕೇಳಿ ತಿಳಿದು, ಹುವ್ವಿನಲ್ಲಿರುವ ದುಂಬಿಯ ಕಾಂತಿಯುಳ್ಳ ಆ ಬ್ರಹ್ಮನನ್ನು ಸಂಹರಿಸಲಿಲ್ಲವು.

ಇಲ್ಲಿಗೆ ಶ್ರೀಕಾಲಿಕಾಪುರಾಣದಲ್ಲಿ ಹನ್ನೊಂದನೆಯ ಅಧ್ಯಾಯವು ಮುಗಿದುದು.

॥ ೞ ॥

॥ ಅಥ ಶ್ರೀಕಾಲಿಕಾಪುರಾಣೇ ದ್ವಾದಶೋಧ್ಯಾಯಃ ॥

ಹನ್ನೆರಡನೆಯ ಅಧ್ಯಾಯವು

॥ ಋಷಯ ಊಚುಃ ॥

ಅನನ್ಯತ್ವಂ ತ್ರಿದೇವಾನಾಂ ಯಜ್ಜಗಾದ ಜನಾರ್ದನಃ ।
ಶಂಭವೇ ತದ್ವಯಂ ಶ್ರೋತುಮಿಚ್ಛಾಮೋ ದ್ವಿಜಸತ್ತಮ ॥ ೧ ॥

ಏಕತ್ವಂ ದರ್ಶಯಾಮಾಸ ಕಥಂ ವಾ ಗರುಡಧ್ವಜಃ ।
ತತ್ಸಮಾಚಕ್ಷ್ವ ವಿಪ್ರೇಂದ್ರ ಪರಂ ಕೌತೂಹಲಂ ಹಿ ನಃ ॥ ೨ ॥

---

೧. ಕಮಠನೇ ಮೊದಲಾದ ಋಷಿಗಳು ಮಾರ್ಕಂಡೇಯ ಮುನಿಯನ್ನು ಹೀಗೆ ಪ್ರಶ್ನೆಮಾಡಿದರು:–ಎಲೈ ಬ್ರಾಹ್ಮಣ ಶ್ರೇಷ್ಠನೇ, ವಿಷ್ಣುವು ಶಂಕರನಿಗೆ ತ್ರಿಮೂರ್ತಿಗಳ ಅಭೇದಸ್ವರೂಪದ ವಿಷಯದಲ್ಲಿ ಏನನ್ನು ಹೇಳಿದನೋ ಅದನ್ನು ನಾವು ಕೇಳಲು ಇಚ್ಛಿಸುವೆವು.

೨. ಓ ಬ್ರಾಹ್ಮಣೋತ್ತಮನೇ, ತ್ರಿಮೂರ್ತಿಗಳೂ ಓರ್ವನೇ ಆದ ಪರಮಾತ್ಮನ ಸ್ವರೂಪವೆಂಬುದನ್ನು ಆ ವಿಷ್ಣುವು ಹೀಗೆ ತೋರಿಸಿದನು? ಅದನ್ನು ಹೇಳು. ಅದನ್ನು ಕೇಳಲು ನಾವು ತುಂಬ ಕುತೂಹಲವುಳ್ಳವರಾಗಿದ್ದೇವೆ.

॥ ಮಾರ್ಕಂಡೇಯ ಉವಾಚ ॥

ಶೃಣುಧ್ವಂ ಮುನಯೋ ಗುಹ್ಯಂ ಪರಮಂ ಪ್ರಯತಂ ಪರಂ ।
ತ್ರಿದೇವಾನಾಮನನ್ಯತ್ವಂ ತಥೈವೈಕತ್ವದರ್ಶನಂ ॥ ೩ ॥
ಹರೇಣ ಪೃಷ್ಟೋ ಗೋವಿಂದಸ್ತಂ ಸಮಾಭಾಷ್ಯ ಸಾದರಂ ।
ಇದಮಾಹ ಮುನಿಶ್ರೇಷ್ಠಾ ಅಭಿನ್ನಪ್ರತಿಪಾದಕಂ ॥ ೪ ॥

॥ ಶ್ರೀ ಭಗವಾನುವಾಚ ॥

ಇದಂ ತಮೋಮಯಂ ಸರ್ವಮಾಸೀದ್ಭುವನವರ್ಜಿತಂ ।
ಅಪ್ರಜ್ಞಾತಮಲಕ್ಷ್ಯಂ ಚ ಪ್ರಸುಪ್ತಮಿವ ಸರ್ವತಃ ॥ ೫ ॥

---

೩. ಮಾರ್ಕಂಡೇಯ ಮುನಿಯು ಹೇಳಿದನು:—ಎಲೈ ಮುನಿಗಳೇ, ತ್ರಿಮೂರ್ತಿಗಳಿಗೆ ಭೇದವಿಲ್ಲದಿರುವಿಕೆಯನ್ನೂ, ಐಕ್ಯಸ್ವರೂಪವನ್ನೂ ಹೇಳುವೆನು. ತುಂಬ ರಹಸ್ಯವಾಗಿಯೂ ಶ್ರೇಷ್ಠವಾದುದಾಗಿಯೂ ಇರುವ ಈ ತತ್ತ್ವ ರಹಸ್ಯವನ್ನು ಕೇಳುವವರಾಗಿರಿ.

೪. ಎಲೈ ಮುನಿಗಳಿರಾ ಕೇಳಿರಿ:—ಶಂಕರನು ವಿಷ್ಣುವನ್ನು ಹೀಗೆ ಕೇಳಲು ಆ ವಿಷ್ಣುವು ತ್ರಿಮೂರ್ತಿಗಳ ಅಭೇದಸ್ವರೂಪವನ್ನು ಶಂಕರನಿಗೆ ಆದರದಿಂದ ಹೀಗೆ ವಿವರಿಸಿದನು.

೫. ವಿಷ್ಣುವು ಹೇಳಿದನು:—ಓ ಶಂಕರನೇ, ಸೃಷ್ಟಿಗೆ ಮೊದಲು ಈ ಜಗತ್ತು ಮೊದಲಾದ ಯಾವ ಲೋಕವೂ ಇಲ್ಲದೆ ಎಲ್ಲವೂ ಕತ್ತಲೆಯಿಂದ ಆವೃತವಾಗಿ ತಮೋಮಯವಾಗಿತ್ತು. ಯಾವ ವಿಧವಾದ ಚಲನವಲನಗಳಿಲ್ಲದೆ ನಿದ್ರೆಯಲ್ಲಿರುವಂತೆ ಇದ್ದ ಈ ಅವ್ಯಕ್ತ ಸ್ವರೂಪವನ್ನು ತಿಳಿಯುವುದಕ್ಕಾಗಲಿ, ನೋಡುವುದಕ್ಕಾಗಲಿ, ಯಾರಿಂದಲೂ ಸಾಧ್ಯವಿಲ್ಲ. ಈ ವಿಷಯದಲ್ಲಿ ಶ್ರುತಿಯಲ್ಲಿ ಹೀಗೆ ಹೇಳಿದೆ:—"ತಮ ಆ ಸೀತ್ತಮಸಾ ಗೂಢಮಗ್ರೇ ॥" ಎಂದರೆ ಸೃಷ್ಟಿಗೆ ಮೊದಲು ಬಹಳ ನಿಬಿಡವಾದ ಕತ್ತಲೆಯು ಎಲ್ಲೆಲ್ಲಿಯೂ ತಾನೇತಾನಾಗಿ ಆವರಿಸಿತ್ತು.

ನ ದಿವಾರಾತ್ರಿಭಾಗೋऽತ್ರ ನಾಕಾಶಂ ನ ಚ ಕಾಶ್ಯಪೀ ।
ನ ಜ್ಯೋತಿರ್ನ ಜಲಂ ವಾಯುರ್ನಾನ್ಯತ್ಕಿಂಚಿ ನ ಸಂಸ್ಥಿತಂ ॥ ೬ ॥
ಏಕಮಾಸೀತ್ಪರಂ ಬ್ರಹ್ಮ ಸೂಕ್ಷ್ಮಂ ನಿತ್ಯಮತೀಂದ್ರಿಯಂ ।
ಅವ್ಯಕ್ತಂ ಜ್ಞಾನರೂಪೇಣ ದ್ವೈತಹೀನವಿಶೇಷಣಂ ॥ ೭ ॥

---

೬. ಆಗ ಹಗಲಾಗಲೀ, ರಾತ್ರಿಯಾಗಲೀ ಇರಲಿಲ್ಲವು ; ಆಕಾಶವಾಗಲಿ ಭೂಮಿಯಾಗಲೀ ಇರಲಿಲ್ಲವು; ತೇಜಸ್ಸಾಗಲೀ ಜಲವಾಗಲೀ ಇರಲಿಲ್ಲವು ; ವಾಯುವಾಗಲೀ ಮತ್ತೇನಾಗಲೀ ಇರಲಿಲ್ಲವು. ಶ್ರುತಿಯು ಹೀಗೆ ಹೇಳುವುದು:—" ನಾಸೀದ್ರಜೋ ನೋ ವ್ಯೋಮಾ ಪರೋಯತ್ " "ನ ರಾತ್ರ್ಯಾ ಅಹ್ನಾ ಆಸೀತ್ಪ್ರಕೇತಃ." ಅವ್ಯಕ್ತಸ್ವರೂಪ ಒಂದೇ ಇರುವಾಗ ರಾತ್ರಿ ಹಗಲೆಂಬ ಕಾಲಭೇದವು ಇರುವುದಿಲ್ಲ. ಆಕಾಶ ಮೊದಲಾದ ಪಂಚಭೂತಗಳೂ ಇರುವುದಿಲ್ಲ ಎಂದರೆ ವ್ಯಕ್ತರೂಪವನ್ನು ಹೊಂದಿರುವುದಿಲ್ಲ.

೭. ಆಗ ಅವ್ಯಕ್ತಸ್ವರೂಪವಾದ ಬ್ರಹ್ಮವಸ್ತು ಒಂದೇ ಇದ್ದಿತು. ಅದು ಬಹು ಸೂಕ್ಷ್ಮವಾಗಿಯೂ, ಇಂದ್ರಿಯಗಳಿಗೆ ಅಗೋಚರವಾದುದಾಗಿಯೂ, ಅನಾದಿಯಾಗಿಯೂ, ಜ್ಞಾನರೂಪವಾದುದಾಗಿಯೂ, ನಾಮರೂಪಗಳಿಲ್ಲದ್ದರಿಂದ ಭೇದವಿಲ್ಲದುದಾಗಿಯೂ, ನಿರ್ಗುಣವಾದುದಾಗಿಯೂ ಇದ್ದಿತು.

ಈ ಪರಬ್ರಹ್ಮಸ್ವರೂಪವನ್ನು ವಾಕ್ಯಗಳಿಂದ ಯಥಾಸ್ಥಿತಿಯಾಗಿ ವಿವರಿಸುವುದು ಯಾರಿಂದಲೂ ಸಾಧ್ಯವಿಲ್ಲ. ವೇದಗಳಲ್ಲಿಯೂ ಉಪನಿಷತ್ತುಗಳಲ್ಲಿಯೂ ಮತ್ತು ಇತರ ವೇದಾಂತಗ್ರಂಥಗಳಲ್ಲಿಯೂ ಸಾಧ್ಯವಾದ ಮಟ್ಟಿಗೆ ಆದರ ಸ್ವರೂಪವನ್ನು ವಿವರಿಸಲು ಪ್ರಯತ್ನ ಮಾಡಲ್ಪಟ್ಟಿದೆ. ಇದರ ಸ್ವರೂಪವನ್ನು ಸ್ವಲ್ಪಮಟ್ಟಿಗೆ ತಿಳಿಯಬೇಕಾದರೂ ವೇದಶಾಸ್ತ್ರಗಳ ಜ್ಞಾನವೂ, ತಪಸ್ಸು, ಯೋಗ ಮೊದಲಾದವುಗಳಿಂದ ಧ್ಯಾನಮೂಲಕವಾದ ಅನುಭವವೂ, ಸದಾಕಾಲದಲ್ಲಿಯೂ ಮನನವೂ, ಮನಶ್ಶಾಂತಿಯೂ ಸಹಇರಬೇಕು.

ಇದರ ಸ್ವರೂಪವನ್ನು ತಿಳಿಯಲು ಅಷ್ಟೇಕೆ ಕಷ್ಟವೆಂದು ಪ್ರಶ್ನಿಸಿದರೆ, ಇದನ್ನು ಹೋಲುವ ವಸ್ತುವು ಬೇರೆ ಯಾವುದೂ ಇರುವುದಿಲ್ಲವಾದುದರಿಂದ ಉದಾಹರಣೆಗಳ ಮೂಲಕ ಇಥನ್ನು ವಿಶದವಾಗಿ ತಿಳಿಯಪಡಿಸುವುದು ಸಾಧ್ಯವಿಲ್ಲ. ಇದನ್ನು ಕಣ್ಣಿನಿಂದ ನೋಡುವುದಾಗಲೀ, ಇತರ ಇಂದ್ರಿಯಗಳಿಂದ

ಪ್ರಕೃತಿಃ ಪುರುಷಶ್ಚೈವ ನಿತ್ಯೌ ದ್ವೌ ಸರ್ವಸಂಹಿತೌ ।
ಸ್ಥಿತಃ ಕಾಲೋಽಪಿ ಭೂತೇಶ ಜಗತ್ಕಾರಣಮೇಕಕಂ ॥ ೮ ॥

ಯದೇಕಂ ಪರಮುಂ ಬ್ರಹ್ಮ ತತ್ಸ್ವರೂಪಾಪರಂ ಹರ ।
ರೂಪತ್ರಯಮಿದಂ ನಿತ್ಯಂ ತಸ್ಯೈವ ಜಗತಃ ಪತೇಃ ॥ ೯ ॥

ಕಾಲೋ ನಾಮಾಽಪರಂ ರೂಪಮನಾದ್ಯಂ ತತ್ತು ಕಾರಣಂ ।
ಸರ್ವೇಷಾಮೇವ ಭೂತಾನಾಮವಚ್ಛೇದೇನ ಸಂಗತಃ ॥ ೧೦ ॥

ತತಸ್ತತ್ಸ್ವಪ್ರಕಾಶೇನ ಭಾಸ್ವದ್ರೂಪಂ ಪ್ರಕಾಶತೇ ।
ಪುರಾ ಸೃಷ್ಟ್ಯರ್ಥಮತುಲಂ ಕ್ಷೋಭಯನ್ಪ್ರಕೃತಿಂ ಸ್ವಯಂ ॥ ೧೧ ॥

ಸಾಕ್ಷಾತ್ಕರಿಸುವುದಕ್ಕಾಗಲಿ, ಸಾಧ್ಯವಿಲ್ಲ. ಇದು ಸ್ವಯಂ ಪ್ರಕಾಶ ಮಾನವಾಗಿಯೂ, ಜ್ಞಾನರೂಪವಾಗಿಯೂ, ಅನಂತವಾಗಿಯೂ ಇರುವುದು. ಆದುದರಿಂದಲೇ ಶ್ರುತಿಯಲ್ಲಿ "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂದು ಬ್ರಹ್ಮಸ್ವರೂಪವು ಸಂಗ್ರಹರೂಪವಾದರೂ ಬಹು ಚನ್ನಾಗಿ ವಿವರಿಸಲ್ಪಟ್ಟಿರುವುದು.

೮–೯–೧೦. ಓ ಶಂಕರನೇ, ಪ್ರಕೃತಿ ಪುರುಷ ಇವರಿಬ್ಬರೂ ನಿತ್ಯರು, ಎಲ್ಲಿಡೆಯಲ್ಲಿಯೂ ಇರುವವರು; ಇವರಲ್ಲದೆ ಕಾಲವೂ ಒಂದು ಇದ್ದಿತು. ಜಗತ್ತಿಗೆ ಮುಖ್ಯ ಕಾರಣಭೂತವಾದ ಯಾವ ಪರಬ್ರಹ್ಮವಸ್ತುವುಂಟೋ ಅದರ ಮೂರು ರೂಪಗಳೇ ಇವು. ಇವು ನಿತ್ಯವು ಎಂದರೆ ಯಾವಾಗಲೂ ನಾಶವಿಲ್ಲದೆ ಇರತಕ್ಕವು. ಕಾಲವೆಂಬುದು ಆ ಪರಮಾತ್ಮನ ಅನಾದಿಯಾದ ಇನ್ನೊಂದು ರೂಪವು. ಅದೂ ಜಗತ್ತಿಗೆ ಕಾರಣವು. ಅದು ಎಲ್ಲ ಪ್ರಾಣಿಗಳಿಗೂ ಆಧಾರವು.

೧೧. ಇನ್ನೊಂದು ವಸ್ತುವಿನ ಸಹಾಯವಿಲ್ಲದೇ ತಾನೇ ಪ್ರಕಾಶಿಸುವ ಆ ಪರಬ್ರಹ್ಮದಿಂದಲೇ ಸೂರ್ಯನು ಪ್ರಕಾಶಿಸುವನು. ಮೊದಲು ಜಗತ್ಸೃಷ್ಟಿ ಮಾಡುವುದಕ್ಕಾಗಿ ಆ ಬ್ರಹ್ಮವು ಅಗಾಧವಾದ ಪ್ರಕೃತಿಯನ್ನು ಕಡೆಯಿತು.

ಸಂಕ್ಷುಬ್ಧಾಯಾಂ ತು ಪ್ರಕೃತೌ ಮಹತ್ತತ್ತ್ವಮಜಾಯತ ।
ಮಹತ್ತತ್ತ್ವಾತ್ತ್ರಿಧಾಭೂತಃ ಪಶ್ಚಾದಹಂಕಾರಸ್ತ್ರಿಧಾಭವತ್ ॥ ೧೨ ॥

ಅಹಂಕಾರೇ ತು ಸಂಜಾತೇ ಶಬ್ದತನ್ಮಾತ್ರತಸ್ತತಃ ।
ಆಕಾಶಮಸೃಜದ್ವಿಷ್ಣುರನಂತಂ ಮೂರ್ತಿವರ್ಜಿತಂ ॥ ೧೩ ॥

ತತಸ್ತು ರಸತನ್ಮಾತ್ರಾದಪಃ ಸೃಷ್ಟ್ವಾ ಮಹೇಶ್ವರಃ ।
ನಿರಾಧಾರಃ ಸ್ವಯಂ ದಧ್ರೇ ತಾಸ್ತದಾ ನಿಜಮಾಯಯಾ ॥ ೧೪ ॥

ತತಸ್ತ್ರಿಗುಣಸಾಮ್ಯೇನ ಸಂಸ್ಥಿತಾಂ ಪ್ರಕೃತಿಂ ಪ್ರಭುಃ ॥
ಪುನಃ ಸಂಕ್ಷೋಭಯಾಮಾಸ ಸೃಷ್ಟ್ಯರ್ಥಂ ಪರಮೇಶ್ವರಃ ॥ ೧೫ ॥

ತತಃ ಸಾ ಪ್ರಕೃತಿಸ್ತಾಸು ಬೀಜಂ ತ್ರಿಗುಣಭಾಗವತ್ ।
ಅಪ್ಸು ಸಂಸರ್ಜಯಾಮಾಸ ಜಗದ್ಬೀಜಂ ನಿರಾಕುಲಂ ॥ ೧೬ ॥

---

೧೨. ಹೀಗೆ ಕಡೆದ ಆ ಪ್ರಕೃತಿಯಿಂದ ಮಹತ್ತತ್ತ್ವವೆಂಬುದು ಜನಿಸಿತು. ಅದರಿಂದ ಸತ್ತ್ವರಜಸ್ತಮೋಗುಣಗಳಿಂದ ಕೂಡಿದ ಮೂರು ವಿಧವಾದ ಅಹಂಕಾರತತ್ತ್ವವು ಜನಿಸಿತು.

೧೩. ಹೀಗೆ ಅಹಂಕಾರವು ಜನಿಸಲು, ಅದರಿಂದ ಐದು ತನ್ಮಾತ್ರಗಳಿಂಬ ಭೂತಸೂಕ್ಷ್ಮಗಳು ಜನಿಸಿದವು. ಅವುಗಳ ಪೈಕಿ ಒಂದಾದ ಶಬ್ದ ತನ್ಮಾತ್ರದಿಂದ, ಪರಮಾತ್ಮನು, ರೂಪವಿಲ್ಲದುದೂ, ಎಲ್ಲೆಡೆಯಲ್ಲಿಯೂ ವ್ಯಾಪಕವೂ ಆದ ಆಕಾಶವನ್ನು ಸೃಷ್ಟಿಸಿದನು.

೧೪. ಆಮೇಲೆ ಪರಮಾತ್ಮನು ರಸತನ್ಮಾತ್ರವೆಂಬ ಸೂಕ್ಷ್ಮಭೂತದಿಂದ ಜಲವನ್ನು ಸೃಷ್ಟಿಸಿ, ತಾನು ಆಧಾರವಿಲ್ಲದವನಾದರೂ ತನ್ನ ಮಾಯಾಶಕ್ತಿಯಿಂದ ತಾನೇ ಆ ಜಲವನ್ನು ಧರಿಸಿದನು.

೧೫. ಸತ್ತ್ವ, ರಜಸ್ಸು, ತಮಸ್ಸು ಈ ಮೂರು ಗುಣಗಳೂ ಸಮವಾಗಿರುವ ಪ್ರಕೃತಿಯನ್ನು ತಿರುಗಿ ಸೃಷ್ಟಿಗಾಗಿ ಪರಮೇಶ್ವರನು ಕಡೆದನು.

೧೬. ಆ ಮೇಲೆ ಪ್ರಕೃತಿಯು ಆ ಜಲದಲ್ಲಿ ಸತ್ತ್ವರಜಸ್ತಮೋಗುಣಗಳುಳ್ಳ ಮತ್ತು ಜಗತ್ತಿಗೆ ಕಾರಣವಾದ ಬೀಜವನ್ನು ಸೇರಿಸಿದಳು.

ತದ್ವಿ ವೃದ್ಧಿಂ ಕ್ರಮೇಣೈವ ಹೈಮಮುಂಡಮಭೂನ್ಮಹತ್ ।
ಜಗ್ರಾಹಾಪಃ ಸಮುಸ್ತಾಸ್ತಾ ಗರ್ಭ ಏವ ತದಂಡಕಂ ॥ ೧೭ ॥

ಅಪ್ಸು ಸ್ಥಿತಾಸು ಹೈಮಾಂಡಗರ್ಭೇ ವಿಷ್ಣುಸ್ತದಂಡಕಂ ।
ತಯೈವ ಮಾಯಯಾ ದಧ್ರೇ ಬ್ರಹ್ಮಾಂಡಮತುಲಂ ಪುನಃ ॥ ೧೮ ॥

ವಾರಿಣಾ ವಹ್ನಿಭಿಶ್ಚೈವ ವಾಯುಭಿರ್ನಭಸಾ ತಥಾ ।
ಬಹಿಸ್ತದಂಡಕಂ ಛನ್ನಂ ಶರ್ವ ಪಾರ್ಶ್ವೇ ಸಮಂತತಃ ॥ ೧೯ ॥

ಸಪ್ತಸಾಗರಮಾನೇನ ತಥಾ ನದ್ಯಾದಿಮಾನತಃ ।
ಬ್ರಹ್ಮಾಂಡಾಭ್ಯಂತರೇ ತೋಯಂ ತದನ್ಯತ್ತು ಬಹಿರ್ಗತಂ ॥ ೨೦ ॥

ತದಂತಃ ಸ್ವಯಮೇವಾಸೌ ವಿಷ್ಣುರ್ಬ್ರಹ್ಮಸ್ವರೂಪಧೃಕ್ ।
ದೈವಂ ವರ್ಷಮುಷಿತ್ವೈವ ಪ್ರಬಿಭೇದ ತದಂಡಕಂ ॥ ೨೧ ॥

---

೧೭. ಆ ಬೀಜವು ಕ್ರಮವಾಗಿ ಬೆಳೆಯುತ್ತಾ ಚಿನ್ಮಯವಾದ ದೊಡ್ಡ ಗೋಳವಾಯಿತು. ಆಮೇಲೆ ಆ ಗೋಳವು ತನ್ನ ಮಧ್ಯದಲ್ಲಿ ಎಲ್ಲ ಜಲವನ್ನೂ ಧರಿಸಿತು.

೧೮. ಹೀಗೆ ಜಲವೆಲ್ಲವೂ ಆ ಸುವರ್ಣಗೋಳದಲ್ಲಿ ಸೇರಲು, ಪರಮಾತ್ಮನು ಆ ಗೋಳವನ್ನೂ ಸಮಸ್ತ ಜಗತ್ತನ್ನೂ ತನ್ನ ಆ ಮಾಯಾ ಶಕ್ತಿಯಿಂದಲೇ ಧರಿಸಿದನು.

೧೯. ಎಲೈ ಶಂಕರನೇ, ಆಮೇಲೆ ಆ ಗೋಳವು ಹೊರಗೆ ನೀರಿನಿಂದಲೂ, ಬೆಂಕಿಯಿಂದಲೂ, ವಾಯುವಿನಿಂದಲೂ, ಆಕಾಶದಿಂದಲೂ ಎಲ್ಲೆಡೆಯಲ್ಲಿಯೂ ಮುಚ್ಚಲ್ಪಟ್ಟಿತು, ಎಂದರೆ ಆವರಿಸಲ್ಪಟ್ಟಿತು.

೨೦. ಏಳು ಸಮುದ್ರಗಳ ಜಲವೂ, ನದಿ, ಸರಸ್ಸು ಮೊದಲಾದವುಗಳ ಜಲವೂ ಆ ದೊಡ್ಡ ಗೋಳದಲ್ಲಿ ಸೇರಿತು. ಉಳಿದುವೆಲ್ಲವೂ ಬ್ರಹ್ಮಾಂಡದ ಎಂದರೆ ಆ ಗೋಳದ ಹೊರಗೇ ಉಳಿಯಿತು.

೨೧. ಆಮೇಲೆ ಪರಮಾತ್ಮನು ತಾನೇ ಬ್ರಹ್ಮ ಸ್ವರೂಪವನ್ನು ಧರಿಸಿ ಆ ಗೋಳದಲ್ಲಿ ದೈವಮಾನರೀತ್ಯಾ ಒಂದು ವರ್ಷದವರೆಗೂ ವಾಸಮಾಡಿ ಬಳಿಕ ಆ ಗೋಳವನ್ನು ಭೇದಿಸಿದನು.

ತಸ್ಮಾತ್ಸಮುಭವನ್ಮೇರುರುತ್ಪನ್ನೋಽಸ್ಮಿನ್ಮಹೇಶ್ವರಃ ।
ಜರಾಯುಃ ಪರ್ವತಾ ಜಾತಾಃ ಸಮುದ್ರಾಃ ಸಪ್ತ ತಜ್ಜಲಾತ್ ॥ ೨೨ ॥

ತನ್ಮಧ್ಯೇ ಗಂಧತನ್ಮಾತ್ರಾತ್ಪೃಥಿವೀ ಸಮಜಾಯತ ।
ಈಶ್ವರೇಣ ಪ್ರಕೃತ್ಯಾ ಚ ಯೋಜಿತಾ ತ್ರಿಗುಣಾತ್ಮಿಕಾ ॥ ೨೩ ॥

ಪ್ರಾಗೇವ ಪರ್ವತಾದಿಭ್ಯಃ ಸಮುತ್ಪನ್ನಾ ವಸುಂಧರಾ ।
ಬ್ರಹ್ಮಾಂಡಖಂಡಸಂಯೋಗಾದ್ದೃಢಾ ಭೂತಾ ತು ಸಾ ಭೃಶಂ ॥ ೨೪ ॥

ತಸ್ಯಾಮೇವ ಸ್ಥಿತೋ ಬ್ರಹ್ಮಾ ಸರ್ವಲೋಕಗುರುಃ ಸ್ವಯಂ ।
ಯದಾ ಬ್ರಹ್ಮಾಂಡಮಧ್ಯಸ್ಥೋ ಬ್ರಹ್ಮಾ ವ್ಯಕ್ತೋ ನ ಚಾಭವತ್ ॥ ೨೫ ॥

ತದೈವ ರೂಪತನ್ಮಾತ್ರಾತ್ತೇಜಃ ಸಮ್ಯಗಜಾಯತ ।
ವಾಯುಸ್ತು ಸ್ಪರ್ಶತನ್ಮಾತ್ರಾತ್ಪ್ರಕೃತ್ಯಾ ವಿನಿಯೋಜಿತಾತ್ ।
ಬಭೂವ ಸರ್ವಭೂತಾನಾಂ ಪ್ರಾಣಭೂತಃ ಸಮಂತತಃ ॥ ೨೬ ॥

---

೨೨. ಈ ರೀತಿ ಭೇದಿಸಿದ್ದರಿಂದ ಮೇರು ಪರ್ವತವು ಜನಿಸಿತು. ಅಲ್ಲಿ ಮಹೇಶ್ವರನು ನೆಲಸಿರುವನು. ಮತ್ತು ಆ ಜಲದಿಂದ ಪರ್ವತಗಳೂ ಸಪ್ತ ಸಾಗರಗಳೂ ಉಂಟಾದವು.

೨೩. ಆ ಗೋಳದ ಮಧ್ಯದಲ್ಲಿ ಗಂಧತನ್ಮಾತ್ರವೆಂಬ ಸೂಕ್ಷ್ಮಭೂತ ದಿಂದ ಭೂಮಿಯಾಯಿತು. ಸತ್ತ್ವರಜಸ್ತಮಸ್ಸುಗಳ ಸ್ವರೂಪವಾದ ಆ ಭೂಮಿಯು ಪ್ರಕೃತಿಯಿಂದಲೂ ಆತ್ಮನಿಂದಲೂ ಕೂಡಿದುದಾಗಿರುವುದು.

೨೪. ಪರ್ವತಗಳು ಹುಟ್ಟುವುದಕ್ಕೆ ಮೊದಲೇ ಭೂಮಿಯು ಜನಿಸಿತು. ಆದರೆ ಆ ಬ್ರಹ್ಮಾಂಡಖಂಡಗಳಾದ ಪರ್ವತಗಳ ಸಂಯೋಗ ದಿಂದ ಭೂಮಿಯು ದೃಢವಾಯಿತು.

೨೫. ಆಮೇಲೆ ಭೂಮಿಯಲ್ಲಿಯೇ ಎಲ್ಲ ಜನಗಳಿಗೂ ಗುರುವಾದ ಬ್ರಹ್ಮನು ನಿಂತನು. ಹೀಗೆ ಬ್ರಹ್ಮನು ಬ್ರಹ್ಮಾಂಡ ಮಧ್ಯದಲ್ಲಿ ನಿಂತಮೇಲೆ ರೂಪತನ್ಮಾತ್ರವೆಂಬ ಭೂತಸೂಕ್ಷ್ಮದಿಂದ ತೇಜಸ್ಸು ಎಂದರೆ ಅಗ್ನಿಯು ಉತ್ಪನ್ನವಾಯಿತು.

೨೬. ಪ್ರಕೃತಿಯಿಂದ ಪ್ರೇರಿಸಲ್ಪಟ್ಟು ಸ್ಪರ್ಶತನ್ಮಾತ್ರದಿಂದ ವಾಯುವು ಹುಟ್ಟಿತು. ಈ ವಾಯುವು ಎಲ್ಲೆಡೆಯಲ್ಲಿಯೂ ವ್ಯಾಪಿಸಿ ಸಮಸ್ತ ಪ್ರಾಣಿ ಗಳಿಗೂ ಪ್ರಾಣಭೂತವಾಯಿತು.

ಅದ್ಭಿಸ್ತೇಜೋಭಿರತುಲೈರ್ವಾಯುಭಿರ್ನಭಸಾ ತಥಾ ।
ಅಂತರ್ಬಹಿಸ್ತದಂಡಸ್ಯ ವ್ಯಾಪ್ತಮನ್ಯತ್ತು ಗರ್ಭಗಂ ॥ ೨೭ ॥

ತತೋ ಬ್ರಹ್ಮಶರೀರಂ ತು ತ್ರಿಧಾ ಚಕ್ರೇ ಮಹೇಶ್ವರಃ ।
ಪ್ರಧಾನೇಚ್ಛಾವಶಾಚ್ಚಂಭೋ ತ್ರಿಗುಣಾತ್ತ್ರಿಗುಣೇಕೃತಂ ॥ ೨೮ ॥

ತದೂರ್ಧ್ವಭಾಗಃ ಸಂಜಾತಶ್ಚತುರ್ವಕ್ತ್ರಶ್ಚತುರ್ಭುಜಃ ।
ಪದ್ಮಕೇಸರಗೌರಾಂಗಕಾಯೋ ಬ್ರಾಹ್ಮೋ ಮಹೇಶ್ವರಃ ॥ ೨೯ ॥

ತನ್ಮಧ್ಯಭಾಗೋ ನೀಲಾಂಗ ಏಕವಕ್ತ್ರಶ್ಚತುರ್ಭುಜಃ ।
ಶಂಖಚಕ್ರಗದಾಪದ್ಮಪಾಣಿಃ ಕಾಯಃ ಸ ವೈಷ್ಣವಃ ॥ ೩೦ ॥

---

೨೭. ಅಪರಿಮಿತವಾದ ಜಲದಿಂದಲೂ, ತೇಜಸ್ಸಿನಿಂದಲೂ, ವಾಯುವಿನಿಂದಲೂ, ಆಕಾಶದಿಂದಲೂ ಆ ಗೋಳವು ಒಳಗೂ ಹೊರಗೂ ವ್ಯಾಪಿಸಲ್ಪಟ್ಟಿತು. ಮಿಕ್ಕವುಗಳು ಗೋಳದ ಮಧ್ಯದಲ್ಲಿ ಇದ್ದವು.

೨೮. ಆಮೇಲೆ, ಆ ಪರಬ್ರಹ್ಮನು ತನ್ನ ಶರೀರವನ್ನು ಮೂರು ಭಾಗವಾಗಿ ವಿಂಗಡಿಸಿ, ಪ್ರಕೃತಿಯ ಮತ್ತು ಇಚ್ಛೆಯ ಅಧೀನವಾಗಿ ಸತ್ತ್ವರಜಸ್ತಮೋಗುಣಗಳನ್ನು ಆ ಶರೀರದ ಮೂರು ಭಾಗಗಳಲ್ಲಿ ಬೇರೆ ಬೇರೆಯಾಗಿ ಸೇರಿಸಿದನು.

೨೯. ಆ ಪರಬ್ರಹ್ಮಶರೀರದ ಮೊದಲನೆಯ, ಎಂದರೆ ಮೇಲಿನ ಭಾಗದಿಂದ ನಾಲ್ಕು ಮುಖಗಳುಳ್ಳವನಾಗಿಯೂ, ನಾಲ್ಕು ಕೈಗಳುಳ್ಳವನಾಗಿಯೂ ಕಮಲದ ಕೇಸರದಂತೆ ಗೌರವರ್ಣದ ಶರೀರವುಳ್ಳವನಾಗಿಯೂ ಇರುವ ಬ್ರಹ್ಮನು ಹುಟ್ಟಿದನು.

೩೦. ಆ ಪರಬ್ರಹ್ಮಶರೀರದ ಮಧ್ಯಭಾಗವು ಕಪ್ಪಾದ ಬಣ್ಣವುಳ್ಳ, ಒಂದು ಮುಖವೂ, ನಾಲ್ಕು ಕೈಗಳೂ ಉಳ್ಳ, ಮತ್ತು ಶಂಖ ಚಕ್ರ ಗದೆ ಕಮಲ ಇವುಗಳನ್ನು ಕೈಗಳಲ್ಲಿ ಹಿಡಿದಿರುವ ವಿಷ್ಣುವಿನ ಶರೀರವಾಯಿತು.

ಅಭವತ್ತದಧೋಭಾಗಃ ಪಂಚವಕ್ತ್ರಶ್ಚತುರ್ಭುಜಃ ।
ಸ್ಫಟಿಕಾಭ್ರಸಮಃ ಶುಕ್ಲಃ ಸ ಕಾಯಶ್ಚಂದ್ರಶೇಖರಃ ॥ ೩೦ ॥

ಇತಸ್ತತೋ ಬ್ರಹ್ಮಕಾಯೇ ಸೃಷ್ಟಿಶಕ್ತಿಂ ನ್ಯಯೋಜಯತ್ ।
ಸ್ವಯಮೇವಾಭವತ್ಸ್ರಷ್ಟಾ ಬ್ರಹ್ಮರೂಪೇಣ ಲೋಕಭೃತ್ ॥ ೩೨ ॥

ಸ್ಥಿತಿಶಕ್ತಿಂ ನಿಜಾಂ ಮಾಯಾಂ ಪ್ರಕೃತ್ಯಾಖ್ಯಾಂ ನ್ಯಯೋಜಯತ್ ॥೩೩॥

ಮಹೇಶೋ ವೈಷ್ಣವೇ ಕಾಯೇ ಜ್ಞಾನಶಕ್ತಿಂ ನಿಜಾಂ ತಥಾ ।
ಸ್ಥಿತಿಕರ್ತಾऽಭವದ್ವಿಷ್ಣುರಹಮೇವ ಮಹೇಶ್ವರಃ ॥ ೩೪ ॥

ಸರ್ವಶಕ್ತಿನಿಯೋಗೇನ ಸದಾ ತದ್ರೂಪತಾ ಮಮ ।

---

೩೧. ಆ ಬ್ರಹ್ಮಶರೀರದ ಕೆಳಭಾಗವು ಐದು ಮುಖಗಳುಳ್ಳ, ನಾಲ್ಕು ಕೈಗಳುಳ್ಳ ಶುದ್ಧಸ್ಫಟಿಕದಂತೆ ಬಿಳಿಯ ಬಣ್ಣವುಳ್ಳ, ಜಟೆಯಲ್ಲಿ ಚಂದ್ರಕಲೆಯನ್ನು ಧರಿಸಿರುವ ಶಂಕರನಾಯಿತು.

೩೨. ಆ ಮೊದಲನೆಯ ಭಾಗವಾದ ಬ್ರಹ್ಮ ಶರೀರದಲ್ಲಿ ಜಗತ್ಸೃಷ್ಟಿಯನ್ನು ಮಾಡುವ ಶಕ್ತಿಯನ್ನಿಟ್ಟನು. ಹೀಗೆ ಲೋಕವನ್ನೆಲ್ಲ ಧರಿಸುವ ಆ ಪರಬ್ರಹ್ಮನು ಚತುರ್ಮುಖಬ್ರಹ್ಮನ ರೂಪದಿಂದ ತಾನೇ ಸೃಷ್ಟಿಕರ್ತೃವಾದನು.

೩೩-೩೪. ಆಮೇಲೆ ಆ ಪರಬ್ರಹ್ಮನು ತನ್ನ ಪಾಲನ ಶಕ್ತಿಯನ್ನೂ ಪ್ರಕೃತಿಯೆಂಬ ಹೆಸರುಳ್ಳ ತನ್ನ ಮಾಯೆಯನ್ನೂ, ಮತ್ತು ಜ್ಞಾನಶಕ್ತಿಯನ್ನೂ ಎರಡನೆಯ ಭಾಗವಾದ ವಿಷ್ಣುವಿನ ಶರೀರದಲ್ಲಿ ಸೇರಿಸಿದನು. ಆದರಿಂದ ಆ ಪರಮೇಶ್ವರನೇ ವಿಷ್ಣುವಿನ (ನನ್ನ) ರೂಪದಿಂದ ಜಗತ್ತನ್ನು ರಕ್ಷಿಸುವವನಾದನು.

ಎಲೈ ಶಂಕರನೇ ಆ ಪಾಲನ ಶಕ್ತಿಯ ಸಂಬಂಧದಿಂದ ನನಗೆ ಯಾವಾಗಲೂ ವಿಷ್ಣುವಿನ ರೂಪವೇ ಇರುವುದು.

ಅಂತಶಕ್ತಿಂ ತಥಾ ಕಾಯೇ ಶಾಂಭವೇ ಸಂನ್ಯಯೋಜಯತ್ ।
ಅಂತಕರ್ತಾಽಭವಚ್ಛಂಭುಃ ಸ ಏವ ಪರಮೇಶ್ವರಃ ॥ ೩೫ ॥

ತತಸ್ತ್ರಿಷು ಶರೀರೇಷು ಸ್ವಯಮೇವ ಪ್ರಕಾಶತೇ ।
ಜ್ಞಾನರೂಪಂ ಪರಂಜ್ಯೋತಿರನಾದಿರ್ಭಗವಾನ್ಪ್ರಭುಃ ॥ ೩೬ ॥

ಸೃಷ್ಟಿಸ್ಥಿತ್ಯಂತಕರಣಾದೇಕ ಏವ ಮಹೇಶ್ವರಃ ।
ಬ್ರಹ್ಮಾ ವಿಷ್ಣುಃ ಶಿವಶ್ಚೇತಿ ಸಂಜ್ಞಾಮಾಪ ಪೃಥಕ್ಪೃಥಕ್ ॥ ೩೭ ॥

ಅತಸ್ತ್ವಂ ಚ ವಿಧಾತಾ ಚ ತಥಾಽಹಮಪಿ ನ ಪೃಥಕ್ ।
ಏವಂ ಶರೀರಂ ರೂಪಂ ಚ ಜ್ಞಾನಮಸ್ಮಾಕಮುಂತರಂ ॥ ೩೮ ॥

---

೩೫. ಹಾಗೆಯೇ ತನ್ನ ಶರೀರದ ಕೊನೆಯ ಭಾಗವಾದ ಶಂಕರನ ಶರೀರದಲ್ಲಿ ಆ ಪರಬ್ರಹ್ಮನು ನಾಶಮಾಡುವ ಶಕ್ತಿಯನ್ನಿಟ್ಟನು. ಆದರಿಂದ ಪ್ರಳಯಕಾಲದಲ್ಲಿ ಆ ಪರಬ್ರಹ್ಮನೇ ಶಂಕರನ ರೂಪದಿಂದ ಜಗತ್ತನ್ನು ನಾಶ ಮಾಡತಕ್ಕವನು.

೩೬. ಆದುದರಿಂದ ಜ್ಞಾನರೂಪನೂ, ಸ್ವಯಂ ಪ್ರಕಾಶರೂಪನೂ, ಆದಿಯಿಲ್ಲದವನೂ ಜಗದೊಡೆಯನೂ ಸಕಲೈಶ್ವರ್ಯಸಂಪನ್ನನೂ ಆದ ಆ ಪರಬ್ರಹ್ಮನೇ ಬ್ರಹ್ಮ ವಿಷ್ಣು ಮಹೇಶ್ವರರ ಶರೀರದಲ್ಲಿ ತಾನೇ ಪ್ರಕಾಶಿಸುವನು.

೩೭. ಓರ್ವನೇ ಆದ ಆ ಪರಮಾತ್ಮನು ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವುದರಿಂದ ಬ್ರಹ್ಮನೆಂದೂ, ವಿಷ್ಣುವೆಂದೂ, ಶಿವನೆಂದೂ ಬೇರೆ ಬೇರೆ ಸಂಜ್ಞೆಯುಳ್ಳವನಾಗಿರುವನು.

೩೮. ಆದುದರಿಂದ ಎಲೈ ಶಿವನೇ, ನೀನೂ, ಬ್ರಹ್ಮನೂ, ನಾನೂ ಬೇರೆಯಲ್ಲವು. ಆದರೆ, ನಮ್ಮ ಶರೀರ, ರೂಪ, ಜ್ಞಾನ ಇವುಗಳು ಮಾತ್ರ ಭಿನ್ನವಾದುವು.

॥ ಮಾರ್ಕಂಡೇಯ ಉವಾಚ ॥

ಏತಚ್ಛ್ರುತ್ವಾ ವಚಸ್ತಸ್ಯ ವಿಷ್ಣೋರಮಿತತೇಜಸಃ ।
ಹರ್ಷೋತ್ಫುಲ್ಲಮುಖಃ ಪ್ರೋಚೇ ಪುನರೇವ ಜನಾರ್ದನಂ ॥ ೪೯ ॥

॥ ಈಶ್ವರ ಉವಾಚ ॥

ಏಕ ಏವ ಮಹೇಶಶ್ಚ ಜ್ಯೋತೀರೂಪೋ ನಿರಂಜನಃ ।
ಕಾ ವಾ ಮಾಯಾಽಥ ಕಃ ಕಾಲಃ ಕಾ ವಾ ಪ್ರಕೃತಿರುಚ್ಯತೇ ॥ ೪೦ ॥

ಕೇ ಪುಮಾಂಸಸ್ತತೋ ಭಿನ್ನಾ ಭಿನ್ನಾಶ್ಚೇತ್ಕಥಮೇಕತಾ ।
ತನ್ಮೇ ವದಸ್ವ ಗೋವಿಂದ ತತ್ತ್ವಭಾವಂ ಯಥಾತಥಂ ॥ ೪೧ ॥

॥ ಶ್ರೀ ಭಗವಾನುವಾಚ ॥

ತ್ವಮೇವ ಪಶ್ಯಸಿ ಸದಾ ಧ್ಯಾನಸ್ಥಃ ಪರಮೇಶ್ವರಂ ।
ಆತ್ಮನ್ಯಾತ್ಮಸ್ವರೂಪಂ ತಜ್ಜ್ಯೋತೀರೂಪಂ ಸದಕ್ಷರಂ ॥ ೪೨ ॥

---

೪೯. ಮಾರ್ಕಂಡೇಯ ಮುನಿಯು ಹೇಳಿದನು:—ಮಹಾ ತೇಜಸ್ವಿಯಾದ ವಿಷ್ಣುವಿನ ಈ ಮಾತುಗಳನ್ನು ಕೇಳಿ ಶಂಕರನು ಹರ್ಷದಿಂದ ಅರಳಿದ ಮುಖವುಳ್ಳವನಾಗಿ ತಿರುಗಿ ವಿಷ್ಣುವನ್ನು ಹೀಗೆ ಪ್ರಶ್ನೆ ಮಾಡಿದನು.

೪೦. ಈಶ್ವರನು ಹೇಳಿದನು:—ಎಲೈ ವಿಷ್ಣುವೇ, ಪ್ರಕಾಶ ಸ್ವರೂಪನೂ ಮತ್ತು ನಿತ್ಯ ಶುದ್ಧನೂ ಆದ ಪರಮಾತ್ಮನೊಬ್ಬನೇ ಇರುವುದಾದರೆ, ಮಾಯೆಯಾರು? ಕಾಲವೆಂಬುದಾವುದು? ಪ್ರಕೃತಿಯೆಂದರೆ ಯಾರು?

೪೧. ಪರಮಾತ್ಮನಿಗಿಂತಲೂ ಬೇರೆಯಾದ ಆ ಪುರುಷರೆಂಬುವರಾರು? ಅವರು ಬೇರೆಯಾದರೆ ಐಕ್ಯವೆಲ್ಲಿ ಬಂತು? ಎಲೈ ವಿಷ್ಣುವೇ, ಆದನ್ನು ನನಗೆ ತಿಳಿಯಹೇಳು, ಮತ್ತು ಆ ಪರಮಾತ್ಮನ ಮಹಿಮೆಯನ್ನೂ ಹೇಳು.

೪೨. ವಿಷ್ಣುವು ಹೇಳಿದನು:—ಎಲೈ ಶಂಕರನೇ, ನೀನು ಧ್ಯಾನದಲ್ಲಿ ಲೀನನಾಗಿದ್ದು ನಿನ್ನಲ್ಲಿಯೇ ಇರುವ ಆತ್ಮಸ್ವರೂಪನಾಗಿಯೂ, ಜ್ಯೋತಿರ್ಮಯನಾಗಿಯೂ, ಎಂದಿಗೂ ನಾಶವಿಲ್ಲದವನಾಗಿಯೂ ಇರುವ ಆ ಪರಮೇಶ್ವರನನ್ನು ನೋಡುವವನಾಗು. (ಸಾಕ್ಷಾತ್ಕರಿಸುವವನಾಗು).

ಮಾಯಾಂ ಚ ಪ್ರಕೃತಿಂ ಕಾಲಂ ಪುರುಷಂ ಚ ಸ್ವಯಂ ವಿಭೋ ।
ಜ್ಞಾತ್ವಾ ತ್ವಂ ಧ್ಯಾನಯೋಗೇನ ತಸ್ಮಾದ್ಧ್ಯಾನಪರೋ ಭವ ॥ ೪೩ ॥

ಮಾಯಯಾ ಮೋಹಿತೋ ಯಸ್ಮಾದಧುನಾ ತ್ವಸ್ಮದೀಯಯಾ ।
ತತೋ ವಿಸ್ಮೃತ್ಯ ಪರಮಂ ಜ್ಯೋತಿರ್ಹಿ.ವನಿತಾರತಃ ॥ ೪೪ ॥

ಅಧುನಾ ಕೋಪಯುಕ್ತಸ್ತ್ವಂ ವಿಸ್ಮೃತ್ಯಾತ್ಮಾನಮಾತ್ಮನಿ ।
ಮಾಂ ಪೃಚ್ಛಸಿ ಪ್ರಕೃತ್ಯಾದಿರೂಪಾಣಿ ಪ್ರಮುಥಾಧಿಪ ॥ ೪೫ ॥

॥ ಮಾರ್ಕಂಡೇಯ ಉವಾಚ ॥

ತತಸ್ತತ್ರ ಮಹಾದೇವಃ ಶ್ರುತ್ವಾ ವಾಕ್ಯಂ ಸುನಿಶ್ಚಿತಂ ।
ಮುನೀನಾಂ ಪಶ್ಯತಾಂ ಯೋಗಯುಕ್ತೋ ಧ್ಯಾನಪರೋಽಭವತ್ ॥೪೬॥

---

೪೩. ಎಲೈ ಶಂಕರನೇ, ನೀನು ಧ್ಯಾನಯೋಗವೆಂಬ ಸಾಧನದಿಂದ ಮಾಯೆಯನ್ನೂ ಪ್ರಕೃತಿಯನ್ನೂ ಕಾಲವನ್ನೂ ಪುರುಷನನ್ನೂ ತಾನೇ ತಿಳಿಯಬಹುದು. ಆದುದರಿಂದ ನೀನು ಧ್ಯಾನಾಸಕ್ತನಾಗು.

೪೪. ಈಗ ನೀನು ವಿಷ್ಣುಮಾಯೆಯಿಂದ ಮೋಹಗೊಳಿಸಲ್ಪಟ್ಟಿರುವೆ. ಆದುದರಿಂದಲೇ ನೀನು ಜ್ಯೋತಿಸ್ಸ್ವರೂಪನಾದ ಆ ಪರಮಾತ್ಮನನ್ನು ಮರೆತು ಸ್ತ್ರೀಯಲ್ಲಿ ಆಸಕ್ತಿಯುಳ್ಳವನಾಗಿರುವೆ.

೪೫. ಎಲೈ ಶಂಕರನೇ, ಈಗ ನೀನು ಬ್ರಹ್ಮನಲ್ಲಿ ಕೋಪಗೊಂಡು, ನಿನ್ನ ಆತ್ಮಸ್ವರೂಪವನ್ನು ಮರೆತು, ಪ್ರಕೃತಿಯೇ ಮೊದಲಾದವುಗಳ ವಿಷಯದಲ್ಲಿ ನನ್ನನ್ನು ಪ್ರಶ್ನಿಸುತ್ತಿರುವೆ.

೪೬. ಮಾರ್ಕಂಡೇಯ ಮುನಿಯು ಹೇಳಿದನು:—ಆಮೇಲೆ, ಶಂಕರನು ವಿಷ್ಣುವು ಹೇಳಿದ ನಿಶ್ಚಯವಾದ ಈ ಮಾತುಗಳನ್ನು ಕೇಳಿ, ಅಲ್ಲಿ ಮರೀಚಿಯೇ ಮೊದಲಾದ ಮುನಿಗಳು ನೋಡುತ್ತಿರುವಂತೆಯೇ ಯೋಗಾನುಷ್ಠಾನದಿಂದ ಧ್ಯಾನಾಸಕ್ತನಾದನು.

ಆಸಾದ್ಯ ಬಂಧಪರ್ಯಂಕಂ ನಿಮೀಲಿತವಿಲೋಚನಃ ।
ಆತ್ಮಾನಂ ಚಿಂತಯಾಮಾಸ ತದಾತ್ಮನಿ ಮಹೇಶ್ವರಃ ॥ ೪೭ ॥

ಪರಂ ಚಿಂತಯತಸ್ತಸ್ಯ ಶರೀರಂ ವಿಬಭೌ ಶುಭಂ ।
ತೇಜೋಭಿರುಜ್ಜ್ವಲಂ ದ್ರಷ್ಟುಂ ನ ಶೇಕುರ್ಮುನಯಸ್ತದಾ ॥ ೪೮ ॥

ತತ್ಕ್ಷಣಾದ್ಧ್ಯಾನಯುಕ್ತಶ್ಚ ಶಂಭುಃ ಸ ವಿಷ್ಣುಮಾಯಯಾ ।
ಪರಿತ್ಯಕ್ತೋಽತಿವಿಬಭೌ ತಪಸ್ತೇಜೋಭಿರುಜ್ಜ್ವಲಃ ॥ ೪೯ ॥

ಯೇ ಯೇ ಗಣಾಸ್ತದಾ ತಸ್ಥುಃ ಸೇವಯಾ ಶಂಕರಾಂತಿಕೇ ।
ನ ತೇಽಪಿ ವೀಕ್ಷಿತುಂ ಶೇಕುಃ ಶಂಕರಂ ವಾ ದಿವಾಕರಂ ॥ ೫೦ ॥

ಸ್ವಯಮೇವ ತದಾ ವಿಷ್ಣುಃ ಸಮಾಧಿಮನಸೋ ಭೃಶಂ ।
ಪ್ರವಿವೇಶ ಶರೀರಾಂತರ್ಜ್ಯೋತೀರೂಪೇಣ ಧೂರ್ಜಟೇಃ ॥ ೫೧ ॥

---

೪೭. ಬಳಿಕ ಶಂಕರನು (ಮಂಚದಂತೆ ಇರುವ) ಪರ್ಯಂಕಾಸನದಲ್ಲಿ ಕುಳಿತು ದೃಷ್ಟಿಯನ್ನು ಮೇಲೆ ಮಾಡಿ ಕಣ್ಣುಗಳನ್ನು ಅರ್ಧಮುಚ್ಚಿ, ತನ್ನಲ್ಲಿ ಪರಮಾತ್ಮನನ್ನು ಧ್ಯಾನಿಸಿದನು.

೪೮. ಹೀಗೆ ಪರಬ್ರಹ್ಮನನ್ನು ಧ್ಯಾನಿಸುತ್ತಲಿರುವ ಆ ಶಂಕರನ, ದಿವ್ಯ ತೇಜಸ್ಸಿನಿಂದ ಬೆಳಗುತ್ತಿರುವ ಶರೀರವನ್ನು, ಮುನಿಗಳು ನೋಡಲಶಕ್ತರಾದರು.

೪೯ ಹೀಗೆ, ಶಂಕರನು ಧ್ಯಾನದಲ್ಲಿ ನಿರತನಾಗಿರಲು, ವಿಷ್ಣುಮಾಯೆಯಿಂದ ಅವನು ಬಿಡಲ್ಪಟ್ಟು, ತಪಸ್ಸಿನ ತೇಜಸ್ಸಿನಿಂದ ಬಹಳ ಉಜ್ಜ್ವಲವಾಗಿ ಪ್ರಕಾಶಿಸತೊಡಗಿದನು.

೫೦. ಆಗ ಶಂಕರನ ಸಮೀಪದಲ್ಲಿ ಅವನ ಸೇವೆಯನ್ನು ಮಾಡುತ್ತಲಿದ್ದ ಪರಿವಾರಗಣಗಳೂ ಸಹ ಸಹಸ್ರಸೂರ್ಯರಂತೆ ಬೆಳಗುತ್ತಿರುವ ಆ ಶಂಕರನನ್ನು ನೋಡಲಾರದವರಾದರು.

೫೧. ಆಗ ವಿಷ್ಣುವು ತಾನೇ ಸಮಾಧಿನಿರತನಾದ ಆ ಶಂಕರನ ಶರೀರದ ಒಳಗೆ ಪ್ರಕಾಶ ರೂಪದಿಂದ ಪ್ರವೇಶಿಸಿದನು.

ಪ್ರವಿಶ್ಯ ತಸ್ಯ ಜಠರೇ ಯಥಾ ಸೃಷ್ಟಿಕ್ರಮಃ ಪುರಾ ।
ತಥೈವ ದರ್ಶಯಾಮಾಸ ಸ್ವಯಂ ನಾರಾಯಣೋಽವ್ಯಯಃ ॥ ೫೨ ॥
ನ ಸ್ಥೂಲಂ ನ ಚ ಸೂಕ್ಷ್ಮಂ ಚ ನ ವಿಶೇಷಣಗೋಚರಂ ।
ನಿತ್ಯಾನಂದಂ ನಿರಾತಂಕಮೇಕಂ ಶುದ್ಧಮತೀಂದ್ರಿಯಂ ॥ ೫೩ ॥
ಅದೃಶ್ಯಂ ಸರ್ವದ್ರಷ್ಟಾರಂ ನಿರ್ಗುಣಂ ಪರಮಂ ಪದಂ ।
ಪರಮಾತ್ಮಾನಮಾನಂದಂ ಜಗತ್ಕಾರಣಕಾರಣಂ ॥ ೫೪ ॥
ಪ್ರಥಮಂ ದದೃಶೇ ಶಂಭುರಾತ್ಮಾನಂ ತತ್ಸ್ವರೂಪಿಣಂ ।
ತತ್ರ ಪ್ರವಿಷ್ಟಮನಸಾ ಬಹಿರ್ಜ್ಞಾನವಿವರ್ಜಿತಃ ॥ ೫೫ ॥
ತಸ್ಯೈವ ರೂಪಂ ಪ್ರಕೃತಿಂ ಸೃಷ್ಟ್ಯರ್ಥೇ ಭಿನ್ನತಾಂ ಗತಾಂ ।
ದದರ್ಶ ತಸ್ಯೈವಾಭ್ಯಾಶೇ ಪೃಥಗ್ಭೂತಾಮಿವೈಕಿಕಾಂ ॥ ೫೬ ॥

---

೫೨. ಆವನ ಶರೀರದಲ್ಲಿ ಪ್ರವೇಶಿಸಿ ನಾಶವಿಲ್ಲದ ಆ ನಾರಾಯಣನು ಹಿಂದೆ ಹೇಗೆ ಯಾವಾವ ವಸ್ತುಗಳ ಸೃಷ್ಟಿಯು ನಡೆದಿರುವುದೋ ಅದರಂತೆ ಎಲ್ಲವನ್ನೂ ಆ ಶಂಕರನಿಗೆ ಅವನ ಧ್ಯಾನದಲ್ಲಿಯೇ ತೋರಿಸಿದನು.

೫೩-೫೪-೫೫. ಶಂಕರನು ಧ್ಯಾನ ಮಾಡುತ್ತಲಿದ್ದ ಆ ಪರಬ್ರಹ್ಮನು, ಸ್ಥೂಲ (ಎಂದರೆ ದೊಡ್ಡದು) ಸೂಕ್ಷ್ಮ ಮೊದಲಾದ ದ್ರವ್ಯಧರ್ಮಗಳಿಲ್ಲದವನು, ಯಾವಾಗಲೂ ಇರತಕ್ಕವನು, ಆನಂದ ಸ್ವರೂಪನು, ದುಃಖವಿಲ್ಲದವನು, ತನಗೆ ಸದೃಶವಾದ ವಸ್ತುವಿಲ್ಲದವನು, ಯಾವ ಇಂದ್ರಿಯಕ್ಕೂ ಗೋಚರನಾಗದೇ ಇರುವವನು, ಕಣ್ಣಿಗೆ ಕಾಣಿಸದವನು, ಸಮಸ್ತವನ್ನೂ ಸಾಕ್ಷಿಯಾಗಿ ನೋಡುವವನು, ಸತ್ತ್ವರಜಸ್ತಮೋಗುಣಗಳ ಸಂಪರ್ಕವಿಲ್ಲದವನು, ಉತ್ಕೃಷ್ಟನು, ಯೋಗಿಗಳಿಂದ ಪಡೆಯಲ್ಪಡತಕ್ಕವನು, ಜಗತ್ಸೃಷ್ಟಿಗೆ ಕಾರಣಭೂತನಾದವನು, ಆನಂದಸ್ವರೂಪನು ; ಇಂತಹ ಸ್ವರೂಪವುಳ್ಳ ಆ ಪರಮಾತ್ಮನನ್ನು ಶಂಕರನು ಮೊದಲು ತನ್ನಲ್ಲಿಯೇ ನೋಡಿದನು—ಎಂದರೆ ಸಾಕ್ಷಾತ್ಕರಿಸಿದನು.

೫೬. ಬಾಹ್ಯವಸ್ತುಗಳಲ್ಲಿ ಗಮನವಿಲ್ಲದೆ ಆ ಪರಬ್ರಹ್ಮನಲ್ಲಿಯೇ ನೆಟ್ಟ ಮನಸ್ಸುಳ್ಳವನಾಗಿ, ಆ ಶಂಕರನು ಸೃಷ್ಟಿಗಾಗಿ ಬೇರೆಯಾಗಿರುವ ಆ ಪರ

ಪುರುಷಾಂಶ್ಚ ದದರ್ಶಾಸೌ ಯಥೈವ ವಸತಸ್ತತಃ ।
ಅಗ್ನೇರಿವ ಕಣಾತ್ಸ್ಫುಲಾದಜಸ್ರಂ ದ್ವಿಜಸತ್ತಮಾಃ ॥ ೫೭ ॥
ತದೇವ ಕಾಲರೂಪೇಣಾಭಾಸತೇ ಚ ಮುಹುರ್ಮುಹುಃ ।
ಸೃಷ್ಟಿಸ್ಥಿತ್ಯಂತಯೋಗಾನಾಮವಚ್ಛೇದೇನ ಕಾರಣಂ ॥ ೫೮ ॥
ಪ್ರಕೃತಿಃ ಪುರುಷಶ್ಚೈವ ಕಾಲೋಽಪಿ ಚ ಮುಹುರ್ಮುಹುಃ ।
ಅಭಿನ್ನಾನ್ಭಾಷಮಾಣಾಂಶ್ಚ ಸರ್ಗಾರ್ಥೇ ಭಿನ್ನತಾಂ ಗತಾನ್ ॥ ೫೯ ॥
ಪೃಥಗ್ಭೂತಾನಭಿನ್ನಾಂಶ್ಚ ದದೃಶೇ ಚಂದ್ರಶೇಖರಃ ॥ ೬೦ ॥
ಏಕಮೇವಾದ್ವಯಂ ಬ್ರಹ್ಮ ನೇಹ ನಾನಾಸ್ತಿ ಕಿಂಚನ ।
ಸ ಪ್ರಧಾನಸ್ವರೂಪೇಣ ಕಾಲರೂಪೇಣ ಭಾಸತೇ ॥ ೬೧ ॥

ಮಾತ್ಮನ ರೂಪವಾದ ಪ್ರಕೃತಿಯನ್ನು, ಆ ಪರಮಾತ್ಮನ ಸಮೀಪ. ದಲ್ಲಿಯೇ ಬೇರೆಯಾಗಿರುವಂತೆ ಕಾಣುತ್ತಿರುವುದನ್ನು ನೋಡಿದನು.

೫೭. ಎಲೈ ಬ್ರಾಹ್ಮಣೋತ್ತಮರೇ ಕೇಳಿರಿ:—ಶಂಕರನು ಆ ಪರಬ್ರಹ್ಮ ನಲ್ಲಿಯೇ ನೆಟ್ಟ ಮನಸ್ಸುಳ್ಳವನಾಗಿ, ಅಗ್ನಿಯಿಂದ ಕಿಡಿಗಳು ಹೊರಬೀಳು ವಂತೆ, ಆ ಪರಬ್ರಹ್ಮದಿಂದ ಜನಿಸುವ ಅನೇಕ ಪುರುಷರನ್ನು ನೋಡಿದನು.

೫೮. ಮತ್ತು ಆ ಪರಮಾತ್ಮನೇ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಆಶ್ರಯವೂ ಕಾರಣವೂ ಆದ ಕಾಲರೂಪದಿಂದ ಪ್ರಕಾಶಿಸುತ್ತಲಿರುವುದನ್ನು ನೋಡಿದನು.

೫೯-೬೦. ಮತ್ತು ಆ ಶಂಕರನು, ಪ್ರಕೃತಿಯು, ಪುರುಷನು, ಕಾಲವು ಈ ಮೂರೂ ಒಂದೇ ಪರಮಾತ್ಮ ಸ್ವರೂಪವಾಗಿರುವುದನ್ನೂ, ಸೃಷ್ಟಿಗಾಗಿ ಬೇರೆ ಬೇರೆ ವ್ಯವಹಾರಗಳಿಂದ ಪ್ರತ್ಯೇಕವಾದವುಗಳಂತೆ ಕಾಣುತ್ತಿರುವುದನ್ನೂ, ನೋಡಿದನು.

೬೧. ಎರಡನೆಯ ವಸ್ತುವಿಲ್ಲದೆ ಬ್ರಹ್ಮವಸ್ತು ಒಂದೇ ಇರುವುದು ಇಲ್ಲಿ ಇನ್ನಾವ ವಸ್ತುವೂ, ಭೇದವೂ ಇರುವುದಿಲ್ಲವು. ಆದೇ ಬ್ರಹ್ಮವೇ ಸೃಷ್ಟಿಯ ಕಾಲದಲ್ಲಿ ಪ್ರಕೃತಿಯ ರೂಪದಿಂದಲೂ, ಕಾಲರೂಪದಿಂದಲೂ. ತೋರುವುದು.

ತಥಾ ಪುರುಷರೂಪೇಣ ಸಂಸಾರಾರ್ಥಂ ಪ್ರವರ್ತತೇ ।
ಭೋಗಾರ್ಥಂ ಪ್ರಾಣಿನಾಂ ಶಶ್ವಚ್ಛರೀರೇ ಚ ಪ್ರವರ್ತತೇ ॥ ೬೨ ॥

ಸೈವ ಮಾಯಾ ಚ ಪ್ರಕೃತಿಃ ಸಾ ಮೋಹಯತಿ ಶಂಕರಂ ।
ಹರಿಂ ತಥಾ ವಿರಿಂಚಿಂ ಚ ತಥೈವಾನ್ಯಜನುರ್ಭವಾನ್ ॥ ೬೩ ॥

ಮಾಯಾಖ್ಯಾ ಪ್ರಕೃತಿರ್ಜಾತಾ ಜಂತೂನ್ಸಂಮೋಹಯತ್ಯಪಿ ।
ಸಾ ಸ್ತ್ರೀರೂಪೇಣ ಚ ಸದಾ ಲಕ್ಷ್ಮೀಭೂತಾ ಹರೇಃ ಪ್ರಿಯಾ ॥ ೬೪ ॥

ಸಾ ಸಾವಿತ್ರೀ ರತೀ ಸಂಧ್ಯಾ ಸಾ ಸತೀ ಸೈವ ವೀರಿಣೀ ।
ಬುದ್ಧಿರೂಪಾ ಸ್ವಯಂ ದೇವೀ ಚಂಡಿಕೇತಿ ಚ ಗೀಯತೇ ॥ ೬೫ ॥

---

೬೨. ಹಾಗೆಯೇ ಸಂಸಾರಾರ್ಥವಾಗಿ ಆ ಬ್ರಹ್ಮವೇ ಪುರುಷನ ರೂಪವಾಗಿ ಪ್ರವರ್ತಿಸುತ್ತದೆ. ಮತ್ತು ಪ್ರಾಣಿಗಳಿಗೆ ಅವರವರ ಕರ್ಮಫಲದ ಭೋಗಕ್ಕಾಗಿ ಜೀವರೂಪದಿಂದ ಶರೀರದಲ್ಲಿ ಪುನಃ ಪುನಃ ಪ್ರವರ್ತಿಸುವುದು.

೬೩. ಆ ಪ್ರಕೃತಿಯೇ ಮಾಯೆಯು. ಅದು ಶಂಕರನನ್ನೂ, ವಿಷ್ಣುವನ್ನೂ, ಬ್ರಹ್ಮನನ್ನೂ ಮಿಕ್ಕ ಎಲ್ಲ ಪ್ರಾಣಿಗಳನ್ನೂ ಮೋಹಗೊಳಿಸುವುದು.

೬೪. ಆ ಮಾಯೆಯ ರೂಪವಾದ ಪ್ರಕೃತಿಯು ಸ್ತ್ರೀರೂಪದಿಂದ ಪ್ರಾಣಿಗಳನ್ನು ಯಾವಾಗಲೂ ಮೋಹಗೊಳಿಸುವುದು. ಅದೇ ವಿಷ್ಣುವಿನ ಪ್ರಿಯ ಪತ್ನಿಯಾದ ಲಕ್ಷ್ಮಿಯು.

೬೫. ಆ ಮಾಯೆಯೇ ಬ್ರಹ್ಮನ ಮಡದಿಯಾದ ಸಾವಿತ್ರಿಯು, ಅವಳೇ ರತಿಯು, ಸಂಧ್ಯೆಯು, ಈಶ್ವರನ ಪತ್ನಿಯಾದ ಸತೀದೇವಿಯು, ಅವಳೇ ದಕ್ಷಬ್ರಹ್ಮನ ಪತ್ನಿಯಾದ ವೀರಿಣಿಯು. ಬುದ್ಧಿರೂಪಳಾದ ಆ ದೇವಿಯೇ ಚಂಡಿಕೆಯೆಂದು ಕರೆಯಲ್ಪಡುವಳು.

ಇತಿ ಸ್ವಯಂ ದದರ್ಶಾಶು ಧ್ಯಾನಮಾರ್ಗಗತೋ ಹರಃ ।
ಮಹದಾದಿಪ್ರಭೇದೇನ ತಥಾ ಸೃಷ್ಟಿಕ್ರಮಂ ಸ್ವಯಂ ॥ ೬೬ ॥

ದರ್ಶಯಿತ್ವಾ ಹರಿಃ ಕಾಲಂ ಪ್ರಕೃತಿಂ ಪುರುಷಾಂಸ್ತಥಾ ।
ತಥಾನ್ಯದ್ದರ್ಶಯಾಮಾಸ ತಚ್ಛರೀರೇ ದ್ವಿಜೋತ್ತಮಾಃ ॥ ೬೭ ॥

॥ ಇತಿ ಶ್ರೀ ಕಾಲಿಕಾಪುರಾಣೆ ದ್ವಾದಶೋಽಧ್ಯಾಯಃ ॥

---

೬೬. ಹೀಗೆ ಪರಮಾತ್ಮಸ್ವರೂಪವೆಲ್ಲವನ್ನೂ ಆ ಶಂಕರನು ಧ್ಯಾನ ಮಾರ್ಗದಿಂದ ನೋಡಿದನು. ಮಹತ್ತತ್ತ್ವವೇ ಮೊದಲಾದ ಪ್ರಭೇದಗಳಿಂದ ನಡೆಯುವ ಸೃಷ್ಟಿಯ ಕ್ರಮವನ್ನೂ ತಾನು ನೋಡಿ ತಿಳಿದುಕೊಂಡನು.

೬೭. ಎಲೈ ಬ್ರಾಹ್ಮಣೋತ್ತಮರೇ ಹೀಗೆ ವಿಷ್ಣುವು ಆ ಶಂಕರನ ಶರೀರದಲ್ಲಿ ಪ್ರವೇಶಿಸಿ, ಅವನಿಗೆ ಕಾಲವನ್ನೂ ಪ್ರಕೃತಿಯನ್ನೂ, ಪುರುಷನನ್ನೂ, ಮಿಕ್ಕೆಲ್ಲ ವಿವರಗಳನ್ನೂ ತೋರಿಸಿದನು.

ಇಲ್ಲಿಗೆ ಶ್ರೀಕಾಲಿಕಾಪುರಾಣದಲ್ಲಿ ಹನ್ನೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ಅಥ ಶ್ರೀಕಾಲಿಕಾಪುರಾಣೇ ತ್ರಯೋದಶೋಽಧ್ಯಾಯಃ॥

ಹದಿಮೂರನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ತತೋ ಬ್ರಹ್ಮಾಂಡಸಂಸ್ಥಾನಂ ದರ್ಶಯಾಮಾಸ ಶಂಭವೇ ।
ವವೃಧೇ ತೋಯರಾಶಿಸ್ಥಂ ಬ್ರಹ್ಮಾಂಡಂ ಚ ಯಥಾ ಪುರಾ ॥ ೧ ॥

ತನ್ಮಧ್ಯೇ ಪದ್ಮಗರ್ಭಾಭಂ ಬ್ರಹ್ಮಾಣಂ ಚ ಜಗತ್ಪತಿಂ ।
ಜ್ಯೋತೀರೂಪಂ ಪ್ರಕಾಶಾರ್ಥಂ ಸೃಷ್ಟ್ಯರ್ಥಂ ಚ ಪೃಥಗ್ಗತಂ ॥ ೨ ॥

---

೧. ಮಾರ್ಕಂಡೇಯ ಮುನಿಯು ಹೇಳತೊಡಗಿದನು:— ಆಮೇಲೆ ಆ ವಿಷ್ಣುವು ಬ್ರಹ್ಮಾಂಡದ ಸ್ಥಿತಿಸ್ವರೂಪವನ್ನೂ, ಆದು ಸೃಷ್ಟ್ಯಾದಿಯಲ್ಲಿ ಜಲ ರಾಶಿಯ ಮಧ್ಯದಲ್ಲಿದ್ದು ಹೇಗೆ ಬೆಳೆಯಿತೆಂಬುದನ್ನೂ ತೋರಿಸಿದನು.

೨. ಆ ಬ್ರಹ್ಮಾಂಡಮಧ್ಯದಲ್ಲಿ ಜಗದೊಡೆಯನಾದ, ಪದ್ಮದ ಮಧ್ಯ ಭಾಗದಂತಿರುವ, ಜಗತ್ತನ್ನು ಪ್ರಕಾಶಿಸಲು ಸೂರ್ಯನೇ ಮೊದಲಾದ ತೇಜೋ ರೂಪನಾಗಿರುವ ಪರಬ್ರಹ್ಮನು ಸೃಷ್ಟಿಗಾಗಿ ಬೇರೆ ಬೇರೆ ರೂಪವನ್ನು ಧರಿಸಿರುವುದನ್ನು ತೋರಿಸಿದನು.

ಶರೀರಿಣಂ ಚ ದದೃಶೇ ಬ್ರಹ್ಮಾಂಡಾಂತರ್ಗತಂ ಮುಹುಃ ।
ಚತುರ್ಮುಜಂ ಪ್ರಕಾಶಂತಂ ಜ್ಯೋತಿರ್ಭಿಃ ಕಮಲಾಸನಂ ॥ ೩ ॥

ತತ್ರೈವ ಚ ತ್ರಿಧಾ ಭೂತಂ ವಪುರ್ಬ್ರಾಹ್ಮಂ ದದರ್ಶ ಸಃ ।
ಊರ್ಧ್ವಮಧ್ಯಾಂತಭಾಗೈಶ್ಚ ಬ್ರಹ್ಮವಿಷ್ಣುಶಿವಾತ್ಮಕಂ ॥ ೪ ॥

ಯಥೋರ್ಧ್ವಭಾಗೋ ವಪುಷೋ ಬ್ರಹ್ಮತ್ವಮಗಮತ್ತದಾ ।
ಮಧ್ಯಂ ಯಥಾ ವಿಷ್ಣುಭೂತಂ ದದರ್ಶಾಂತಸ್ಯ ಶಂಭುತಾಂ ॥ ೫ ॥

ಏಕಮೇವ ಶರೀರಂ ತು ತ್ರಿಧಾ ಭೂತಂ ಮುಹುರ್ಮುಹುಃ ।
ಹರೋ ದದರ್ಶ ಸ್ವೇ ಗರ್ಭೇ ತಥಾ ಸರ್ವಮಿದಂ ಜಗತ್ ॥ ೬ ॥

---

೩. ಮತ್ತು ಆ ಬ್ರಹ್ಮಾಂಡದಲ್ಲಿ, ನಾಲ್ಕು ಕೈಗಳಿಂದ ಕೂಡಿ ತೇಜಸ್ಸಿನಿಂದ ಹೊಳೆಯುತ್ತಲಿರುವ ಕಮಲಾಸನದಲ್ಲಿ ಕುಳಿತಿರುವ ಚತುರ್ಮುಖ ಬ್ರಹ್ಮನನ್ನು ತೋರಿಸಿದನು.

೪. ಅಲ್ಲಿ ಆ ಪರಬ್ರಹ್ಮನ ಶರೀರವು ಮೊದಲು, ಮಧ್ಯ ಮತ್ತು ಕೊನೆಯ ಭಾಗಗಳಿಂದ ಬ್ರಹ್ಮ ವಿಷ್ಣು ಶಂಕರ ರೂಪಗಳಾದ ಮೂರು ಭಾಗಗಳಾದುದನ್ನೂ ಆ ಶಂಕರನು ನೋಡಿದನು.

೫. ಆ ಮೂರು ಭಾಗಗಳಲ್ಲಿ ಮೇಲಿನ ಭಾಗವು ಬ್ರಹ್ಮರೂಪವನ್ನು ಹೇಗೆ ಹೊಂದಿತೋ, ಮಧ್ಯಭಾಗವು ವಿಷ್ಣುರೂಪವಾಗಿ ಹೇಗೆ ಆಯಿತೋ, ಕೊನೆಯ ಭಾಗವು ಶಂಕರನ ರೂಪವನ್ನು ಹೇಗೆ ತಾಳಿತೋ, ಅದನ್ನೂ ಆ ಶಂಕರನು ನೋಡಿದನು.

೬. ಪರಮಾತ್ಮನ ಒಂದೇ ಆದ ಶರೀರವು ತಿರುಗಿ ತಿರುಗಿ ಬ್ರಹ್ಮ ವಿಷ್ಣು ಮಹೇಶ್ವರ ರೂಪದಿಂದ ಮೂರು ಭಾಗವಾದುದನ್ನೂ ಮತ್ತು ಸಕಲ ಜಗತ್ತನ್ನೂ ತನ್ನ ಶರೀರದಲ್ಲಿಯೇ ಶಂಕರನು ನೋಡಿದನು.

ಕದಾಚಿದ್ವೈಷ್ಣವಂ ಕಾಯಂ ಬ್ರಾಹ್ಮೇ ಕಾಯೇ ಲಯಂ ವ್ರಜೇತ್ ।
ಬ್ರಾಹ್ಮಂ ತಥಾ ವೈಷ್ಣವೇ ಚ ಶಾಂಭವೇ ವೈಷ್ಣವಂ ತಥಾ ॥ ೭ ॥

ಶಾಂಭವಂ ವೈಷ್ಣವೇ ಕಾಯೇ ಬ್ರಾಹ್ಮಂ ವಾಪ್ಯಥ ಶಾಂಭವೇ ।
ಗಚ್ಛಂತಂ ಲೀನತಾಂ ಶಂಭುರೇಕತಾಂ ಚ ಮುಹುರ್ಮುಹುಃ ॥ ೮ ॥

ದದರ್ಶ ವಾಮದೇವೋಽಪಿ ಭಿನ್ನಂ ಚಾಪ್ಯಪೃಥಗ್ಗತಂ ।
ಪರಮಾತ್ಮನಿ ಗಚ್ಛಂತಂ ಲೀನತಾಂ ತದ್ವಪುಃ ಸ್ವಯಂ ॥ ೯ ॥

ತನ್ಮಧ್ಯೇ ಪೃಥಿವೀಂ ಶಂಭುರ್ದದರ್ಶ ವಿತತಾಂ ಜಲೇ ।
ಮಹಾಪರ್ವತಸಂಘಾತೈರ್ವಿರಲಾಂ ಸ್ಥಗಿತಾಂನತಃ ॥ ೧೦ ॥

---

೭. ಹಾಗೆಯೇ ಒಮ್ಮೆ ವಿಷ್ಣುಶರೀರವು ಬ್ರಹ್ಮಶರೀರದಲ್ಲಿ ಲಯ ಹೊಂದುವುದನ್ನೂ, ಬ್ರಹ್ಮಶರೀರವು ವಿಷ್ಣುಶರೀರದಲ್ಲಿ ಲಯಹೊಂದುವು ದನ್ನೂ, ವಿಷ್ಣುಶರೀರವು ಶಂಕರಶರೀರದಲ್ಲಿ ಲಯವಾಗುವುದನ್ನೂ ನೋಡಿದನು.

೮. ಮತ್ತು ಶಂಕರ ಶರೀರವು ವಿಷ್ಣುಶರೀರದಲ್ಲಿಯೂ, ಬ್ರಹ್ಮಶರೀರವು ಶಂಕರಶರೀರದಲ್ಲಿಯೂ ಲಯಹೊಂದುವುದನ್ನೂ, ಹೀಗೆ ಆ ಮೂರು ಜನಗಳಿಗೆ ಪರಸ್ಪರ ಭೇದವಿಲ್ಲದಿರುವುದನ್ನೂ ತಿಳಿದನು.

೯. ಅಲ್ಲದೆ, ಆ ಶಂಕರನು ಭೇದವಿಲ್ಲದಿದ್ದರೂ ಆಯಾಯ ಕಾರ್ಯ ಕ್ಕಾಗಿ ಬೇರೆಯಾಗಿರುವ ಆ ಬ್ರಹ್ಮಶರೀರವೂ ಪರಮಾತ್ಮನಲ್ಲಿ ಲಯಹೊಂದು ವುದನ್ನೂ ನೋಡಿದನು.

೧೦. ಆ ಪರಬ್ರಹ್ಮ ಶರೀರದಲ್ಲಿರುವ ಜಲರಾಶಿಯಲ್ಲಿ ದೊಡ್ಡ ದೊಡ್ಡ ಬೆಟ್ಟಗಳ ಸಮೂಹಗಳಿಂದ ನಿಬಿಡವೂ ಉನ್ನತವೂ ಆದ ವಿಶಾಲಭೂಮಿ ಯನ್ನೂ ನೋಡಿದನು.

ಪುನರ್ದದರ್ಶ ಬ್ರಹ್ಮಾಣಂ ಕುರ್ವಂತಂ ಸರ್ಗಮಾದಿತಃ ।
ಆತ್ಮಾನಂ ಚ ಪೃಥಗ್ಭೂತಂ ವಿಷ್ಣುಂ ಚ ಗರುಡಾಸನಂ ॥ ೧೧ ॥

ದಕ್ಷಂ ಪ್ರಜಾಪತಿಂ ತತ್ರ ತಥೈವ ಚ ನಿಜಾನ್ಗಣಾನ್ ।
ಮರೀಚ್ಯಾದೀನ್ದದರ್ಶ ತಥಾ ವೀರಿಣೀಂ ಚ ತಥಾ ಸತೀಂ ॥ ೧೨ ॥

ಸಂಧ್ಯಾಂ ರತೀಂ ಚ ಕಂದರ್ಪಂ ಶೃಂಗಾರಂ ಸವಸಂತಕಂ ।
ಹಾವಾನ್ಭಾವಾಂಸ್ತಥಾ ಮಾರಾನ್ಋಷೀನ್ದೇವಾನ್ಮರುದ್ಗಣಾನ್ ॥ ೧೩ ॥

ಮೇಘಾಂಶ್ಚ ಚಂದ್ರಂ ಸೂರ್ಯಂ ಚ ವೃಕ್ಷಾನ್ವಲ್ಲೀಸ್ತೃಣಾನಿ ಚ ।
ಸಿದ್ಧಾನ್ವಿದ್ಯಾಧರಾನ್ಯಕ್ಷಾನ್ರಾಕ್ಷಸಾನ್ಕಿನ್ನರಾಂಸ್ತಥಾ ॥ ೧೪ ॥

---

೧೧. ಮತ್ತು ಅಲ್ಲಿ ಆ ಪರಬ್ರಹ್ಮನೇ ಬೇರೆಬೇರೆ ರೂಪಗಳನ್ನು ತಾಳಿ ಆದಿಯಿಂದಲೂ ಸೃಷ್ಟಿಯನ್ನು ಮಾಡುತ್ತಲಿರುವ ಚತುರ್ಮುಖ ಬ್ರಹ್ಮನನ್ನೂ, ತನ್ನನ್ನೂ, ಗರುಡನಮೇಲೆ ಕುಳಿತಿರುವ ವಿಷ್ಣುವನ್ನೂ ಬೇರೆ ಬೇರೆಯಾಗಿ ಶಂಕರನು ಪುನಃ ನೋಡಿದನು.

೧೨. ದಕ್ಷಬ್ರಹ್ಮನನ್ನೂ, ತನ್ನ (ಶಂಕರನ) ಗಣಗಳನ್ನೂ, ಮರೀಚಿಯೇ ಮೊದಲಾದ ಹತ್ತುಜನ ಮಾನಸಪುತ್ರರನ್ನೂ, ದಕ್ಷಪತ್ನಿಯಾದ ವೀರಿಣಿಯನ್ನೂ, ಸತೀದೇವಿಯನ್ನೂ ಆ ಪರಬ್ರಹ್ಮ ಶರೀರದಲ್ಲಿಯೇ ನೋಡಿದನು.

೧೩. ಮತ್ತು ಸಂಧ್ಯೆಯನ್ನೂ, ರತೀದೇವಿಯನ್ನೂ, ಮನ್ಮಥನನ್ನೂ, ಶೃಂಗಾರ ರಸಗಳನ್ನೂ, ವಸಂತಪುರುಷನನ್ನೂ, ಶೃಂಗಾರಚೇಷ್ಟೆಗಳನ್ನೂ, ಮನ್ಮಥ ಗಣಗಳನ್ನೂ, ಋಷಿಗಳನ್ನೂ, ದೇವತೆಗಳನ್ನೂ, ಮರುದ್ಗಣಗಳನ್ನೂ ಆ ಪರಮಾತ್ಮನ ಶರೀರದಲ್ಲಿ ನೋಡಿದನು.

೧೪. ಮೇಘಗಳನ್ನೂ ಚಂದ್ರಸೂರ್ಯರನ್ನೂ, ವೃಕ್ಷ ಲತೆ ಹುಲ್ಲುಗಳನ್ನೂ, ಸಿದ್ಧರು, ವಿದ್ಯಾಧರರು, ಯಕ್ಷರು, ರಾಕ್ಷಸರು, ಕಿನ್ನರರು ಇವರುಗಳನ್ನೂ ಆ ಪರಮಾತ್ಮನ ಶರೀರದಲ್ಲಿ ನೋಡಿದನು.

ಮಾನುಷಾಂಶ್ಚ ಭುಜಂಗಾಂಶ್ಚ ಗ್ರಾಹಾನ್ಮತ್ಸ್ಯಾಂಶ್ಚ ಕಚ್ಛಪಾನ್ ।
ಉಲ್ಕಾನಿರ್ಘಾತಕೇತೂಂಶ್ಚ ಕೃಮಿಕೀಟಪತಂಗಕಾನ್ ॥ ೧೫ ॥

ಕಾಂಚಿದ್ದದರ್ಶ ವನಿತಾಂ ದ್ವಂದ್ವಭಾವಂ ಪ್ರಕುರ್ವತೀಂ ।
ಉತ್ಪನ್ನಮುತ್ಪದ್ಯಂತಂ ಚ ವಿಪದ್ಯಂತಂ ಚ ಕಂಚನ ॥ ೧೬ ॥

ಹಸತೋ ರಮತಃ ಕಾಂಶ್ಚಿತ್ಕಾಂಶ್ಚಿದ್ವಿಲಪತಸ್ತಥಾ ।
ಧಾವತಶ್ಚಾಪರಾನ್ಭೂಂಭುರ್ದದರ್ಶ ಪರಮೇಶ್ವರಃ ॥ ೧೭ ॥

ದಿವ್ಯಾಲಂಕಾರಸಂಭನ್ನಾ ಮಾಲಾಚಂದನಚರ್ಚಿತಾಃ ।
ವೀಕ್ಷ್ಯಾಂ ಚ ಚಕ್ರೀರೇ ಕೇಚಿಚ್ಛಂಭುನಾ ಕ್ರೀಡಿತಾ ಮುಹುಃ ॥ ೧೮ ॥

ಸ್ತುವಂತಃ ಪ್ರಸ್ತುವಂತಶ್ಚ ಶಂಭುಂ ವಿಷ್ಣುಂ ತಥಾ ವಿಧಿಂ ।
ಕೇಚಿದ್ದದೃಶಿರೇ ತೇನ ಮುನಯಶ್ಚ ತಪೋಧನಾಃ ॥ ೧೯ ॥

---

೧೫. ಮತ್ತು ಮನುಷ್ಯರನ್ನೂ, ಸರ್ಪಗಳನ್ನೂ, ಮೀನು ಮೊಸಳೆ ಆಮೆಗಳನ್ನೂ, ಉಲ್ಕಾಪಾತ ಕೇತುಗ್ರಹಗಳನ್ನೂ, ಕ್ರಿಮಿ ಹುಳು ದೀಪದ ಹುಳು ಇವುಗಳನ್ನೂ ಅಲ್ಲಿ ನೋಡಿದನು.

೧೬. ಶೃಂಗಾರಚೇಷ್ಟೆಯನ್ನು ಪ್ರಕಟಿಸುತ್ತಿರುವ ಸ್ತ್ರೀಯೋರ್ವಳನ್ನೂ ಆಗತಾನೇ ಹುಟ್ಟಿದ ಶಿಶುವನ್ನೂ, ಹುಟ್ಟುತ್ತಲಿರುವ ಶಿಶುವನ್ನೂ ಮತ್ತು ಸಾಯುತ್ತಿರುವ ಪ್ರಾಣಿಯೊಂದನ್ನೂ ಆ ಶರೀರದಲ್ಲಿ ನೋಡಿದನು.

೧೭. ಮತ್ತು ಅಲ್ಲಿ ನಗುತ್ತಲೂ ಕ್ರೀಡಿಸುತ್ತಲೂ, ಅಳುತ್ತಲೂ ಇರುವ ಸ್ತ್ರೀಪುರುಷರನ್ನೂ ಓಡಿಹೋಗುತ್ತಲಿರುವ ಕೆಲವರನ್ನೂ ಆ ಶಂಕರನು ನೋಡಿದನು.

೧೮. ದಿವ್ಯಾಲಂಕಾರಭೂಷಿತರಾಗಿ, ಪುಷ್ಪಹಾರ ಸುಗಂಧಗಳಿಂದ ಕೂಡಿ ವಿಹರಿಸುತ್ತಲಿರುವ ಕೆಲವರು ಆ ಶಂಭುವಿನ ದೃಷ್ಟಿಗೆ ಗೋಚರರಾದರು.

೧೯. ಶಂಕರನನ್ನೂ ವಿಷ್ಣುವನ್ನೂ ಬ್ರಹ್ಮನನ್ನೂ ಸ್ತೋತ್ರಮಾಡುತ್ತಲಿರುವ ತಪಸ್ವಿಗಳಾದ ಕೆಲವು ಋಷಿಗಳನ್ನು ಶಂಕರನು ನೋಡಿದನು.

ತಪಾಂಸಿ ಚರತಃ ಕೇಚಿನ್ನದೀತೀರೇ ತಪೋವನೇ ।
ಸ್ವಾಧ್ಯಾಯವೇದನಿರತಾಃ ಪಾಠಯಂತಶ್ಚ ಕೇಚನ ॥ ೨೦ ॥

ತಥೈವ ಸಾಗರಾಃ ಸಪ್ತ ನದ್ಯೋ ದೇವಸರಾಂಸಿ ಚ ।
ತಥೈವ ಪರ್ವತಸ್ಥೋಽಸೌ ದದೃಶೇ ಶಂಭುನಾ ಸ್ವಯಂ ॥ ೨೧ ॥

ಮಾಯಾ ಲಕ್ಷ್ಮೀಸ್ವರೂಪೇಣ ಹರಿಂ ಸಂಮೋಹಯತ್ಪರಂ ।
ಸತೀರೂಪಾ ತಥಾತ್ಮಾನಂ ಮೋಹಯಂತೀತಿ ಶಂಕರಃ ॥ ೨೨ ॥

ಸತ್ಯಾ ಸಾರ್ಧಂ ಸ್ವಯಂ ರೇಮೇ ಕೈಲಾಸೇ ಮೇರುಪರ್ವತೇ ।
ಮಂದರೇ ದೇವವಿಪಿನೇ ಶೃಂಗಾರರಸಸೇವಿತೇ ॥ ೨೩ ॥

---

೨೦. ಅಲ್ಲಿ ಕೆಲವರು ನದಿಯ ದಡದಲ್ಲಿಯೂ ತಪೋವನದಲ್ಲಿಯೂ ತಪಸ್ಸನ್ನು ಆಚರಿಸುತ್ತಲಿದ್ದರು. ಮತ್ತೆ ಕೆಲವರು ವೇದಾಧ್ಯಯನವನ್ನು ಮಾಡುತ್ತಲಿದ್ದರು. ಕೆಲವರು ಆ ವೇದಗಳನ್ನು ಶಿಷ್ಯರಿಗೆ ಹೇಳಿಕೊಡುತ್ತಲಿದ್ದರು.

೨೧. ಅಲ್ಲದೆ ಏಳು ಸಮುದ್ರಗಳೂ ನದಿಗಳೂ ಮಾನಸವೇ ಮೊದಲಾದ ದೇವಸರೋವರಗಳೂ ಅಲ್ಲಿ ಕಾಣಿಸಿದವು. ಮತ್ತು ಕೈಲಾಸಪರ್ವತದಲ್ಲಿರುವ ತನ್ನನ್ನೂ (ಶಂಕರನನ್ನೂ) ಆ ಶಂಕರನು ನೋಡಿದನು.

೨೨. ಮತ್ತು ಆ ಶಂಕರನು, ಆದಿಮಾಯೆಯೇ ಲಕ್ಷ್ಮಿಯ ರೂಪದಿಂದ ವಿಷ್ಣುವನ್ನೂ, ಸತೀದೇವಿಯ ರೂಪದಿಂದ ತನ್ನನ್ನೂ, ಮೋಹಗೊಳಿಸುವಳೆಂದೂ ತಿಳಿದನು.

೨೩. ಆ ಸತೀದೇವಿಯೊಂದಿಗೆ ತಾನು ಕೈಲಾಸದಲ್ಲಿಯೂ ಮೇರುಪರ್ವತದಲ್ಲಿಯೂ ಮಂದರಪರ್ವತದಲ್ಲಿಯೂ ಶೃಂಗಾರರಸಕ್ಕೆ ಆವಾಸವಾದ ನಂದನವನಗಳಲ್ಲಿಯೂ ಕ್ರೀಡಿಸುತ್ತಿರುವುದನ್ನು ನೋಡಿದನು.

ಸತೀ ದೇಹಂ ತಥಾ ತ್ಯಕ್ತ್ವಾ ಜಾತಾ ಹಿಮವತಃ ಸುತಾ ।
ಯಥಾ ಪ್ರಾಪ ಪುನಸ್ತಾಂ ತು ಯಥಾ ಚೈವಾಂಧಕೋ ಹತಃ ॥ ೨೪ ॥

ಕಾರ್ತಿಕೇಯಃ ಸಮುತ್ಪನ್ನೋ ಯಥಾಹಂಸ್ತಾರಕಾಹ್ವಯಂ ।
ತತ್ಸರ್ವಂ ವಿಸ್ತರಾತ್ಸವ್ಯಗ್ದದರ್ಶ ವೃಷಭಧ್ವಜಃ ॥ ೨೫ ॥

ಹಿರಣ್ಯಕಶಿಪುರ್ಜಘ್ನೇ ನರಸಿಂಹಸ್ವರೂಪಿಣಾ ।
ಯಥಾ ಹತಃ ಕಾಲನೇಮಿರ್ಹಿರಣ್ಯಾಕ್ಷೋ ಯಥಾ ಹತಃ ॥ ೨೬ ॥

ವಿಷ್ಣುನಾ ಯಾದೃಶಂ ಯುದ್ಧಂ ದಾನವೌಘೈಃ ಪುರಾ ಕೃತಂ ।
ಯಥಾ ಯೇ ಯೇ ಚ ನಿಹತಾಸ್ತತ್ಸರ್ವಂ ದೃಷ್ಟವಾನ್ಹರಃ ॥ ೨೭ ॥

---

೨೪. ಆಲ್ಲದೆ ಆ ಸತಿಯು ತನ್ನ ಶರೀರವನ್ನು ತ್ಯಜಿಸಿ, ಹಿಮವಂತನ ಮಗಳಾಗಿ ಹುಟ್ಟಿ, ತಿರುಗಿ ಶಂಕರನನ್ನು ಹೇಗೆ ಪಡೆದಳೆಂಬುದನ್ನೂ ಅಂಧಕಾಸುರನು ಹೇಗೆ ಸಂಹೃತನಾದನೆಂಬುದನ್ನೂ ನೋಡಿದನು.

೨೫. ಷಣ್ಮುಖಸ್ವಾಮಿಯು ಹುಟ್ಟಿ ತಾರಕಾಸುರನನ್ನು ಹೇಗೆ ಸಂಹರಿಸಿದನೋ ಅದೆಲ್ಲವನ್ನೂ ವಿಸ್ತಾರವಾಗಿಯೂ ಬಹು ಚೆನ್ನಾಗಿಯೂ ಆ ಪರಬ್ರಹ್ಮಶರೀರದಲ್ಲಿ ಶಂಕರನು ನೋಡಿದನು.

೨೬. ನರಸಿಂಹಾವತಾರವನ್ನು ಮಾಡಿ ವಿಷ್ಣುವು ಹಿರಣ್ಯಕಶಿಪುವನ್ನು ಹೇಗೆ ಕೊಂದನೋ, ಕಾಲನೇಮಿಯೆಂಬ ಅರಸನು ಹೇಗೆ ಹತನಾದನೋ, ಹಿರಣ್ಯಾಕ್ಷನು ಹೇಗೆ ಸಂಹರಿಸಲ್ಪಟ್ಟನೋ ಇದೆಲ್ಲವನ್ನೂ ಆ ಶಂಕರನು ನೋಡಿದನು.

೨೭. ಹಿಂದೆ ರಾಕ್ಷಸರೊಂದಿಗೆ ವಿಷ್ಣುವು ಹೇಗೆ ಯುದ್ಧವನ್ನು ಮಾಡಿದನೋ, ಮತ್ತು ಯಾವ ಯಾವ ರಾಕ್ಷಸರನ್ನು ಅವನು ಕೊಂದನೋ, ಅದೆಲ್ಲವನ್ನೂ ಆ ಪರಬ್ರಹ್ಮಶರೀರದಲ್ಲಿ ಶಂಕರನು ನೋಡಿದನು.

ಜಗತ್ಪಪಂಚಾನ್ಬ್ರಹ್ಮಾದೀನ್ನಕ್ಷತ್ರಗ್ರಹಮಾನುಷಾನ್ ।
ಸಿದ್ಧವಿದ್ಯಾಧರಾದೀಂಶ್ಚ ದೃಷ್ಟ್ವಾ ದೃಷ್ಟ್ವಾ ಪೃಥಕ್‌ಪೃಥಕ್ ॥ ೨೮ ॥

ಆತ್ಮಾನಂ ತಾನ್ ಸಂಹರಂತಂ ದದೃಶೇ ಶಂಭುರೀಶ್ವರಃ ॥ ೨೯ ॥

ಸಂಹಾರಾಂತೇ ದದರ್ಶಾಸೌ ಬ್ರಹ್ಮವಿಷ್ಣುಮಹೇಶ್ವರಾನ್ ।
ಶೂನ್ಯಂ ಸಮಭವತ್ಸರ್ವಂ ಜಗದೇತಚ್ಚರಾಚರಂ ॥ ೩೦ ॥

ಶೂನ್ಯೇ ಜಗತಿ ಸರ್ವಸ್ಮಿನ್ ಬ್ರಹ್ಮಾ ವಿಷ್ಣುಶರೀರಗಃ ।
ಲೀನಃ ಶಂಭುಶ್ಚ ತಸ್ಯೈವ ಶರೀರಂ ಪ್ರವಿವೇಶ ಹ ॥ ೩೧ ॥

ಏಕಮೇವ ದದರ್ಶಾಸೌ ವಿಷ್ಣುಮವ್ಯಕ್ತರೂಪಿಣಂ ।
ನಾನ್ಯತ್ಕಿಂಚಿದ್ದದರ್ಶಾಸೌ ತದಾ ವಿಷ್ಣುಮೃತೇ ಹರಃ ॥ ೩೨ ॥

೨೮–೨೯. ಮತ್ತು ವಿಶಾಲವಾದ ಲೋಕಗಳನ್ನೂ ಬ್ರಹ್ಮನೇ ಮೊದಲಾದ ದೇವತೆಗಳನ್ನೂ ನಕ್ಷತ್ರ, ಗ್ರಹ, ಮನುಷ್ಯ ಇವರುಗಳನ್ನೂ ಸಿದ್ಧ ಮತ್ತು ವಿದ್ಯಾಧರರೇ ಮೊದಲಾದವರನ್ನೂ ಬೇರೆ ಬೇರೆಯಾಗಿ ನೋಡಿ, ತಿರುಗಿ ಈ ಎಲ್ಲರಿಂದಲೂ ಕೂಡಿದ ಜಗತ್ತುಗಳನ್ನು ತಾನು (ಶಂಕರನು) ಸಂಹರಿಸುತ್ತಿರುವುದನ್ನು ನೋಡಿದನು.

೩೦. ಹೀಗೆ ಎಲ್ಲಾ ಜಗತ್ತನ್ನೂ ಸಂಹರಿಸಿದ ಮೇಲೆ, ಬ್ರಹ್ಮ ವಿಷ್ಣು ಮಹೇಶ್ವರರನ್ನು ತಿರುಗಿ ನೋಡಿದನು. ಆಗ ಈ ಜಗತ್ತೆಲ್ಲವೂ ಒಂದೂ ಇಲ್ಲದೆ ಶೂನ್ಯವಾಗಿ ಕಂಡಿತು.

೩೧. ಜಗತ್ತೆಲ್ಲವೂ ಶೂನ್ಯವಾಗಲು, ಬ್ರಹ್ಮನೂ, ಶಂಕರನೂ ವಿಷ್ಣುವಿನ ಶರೀರವನ್ನು ಪ್ರವೇಶಿಸಿ ಅಲ್ಲಿಯೇ ಲೀನರಾದರು.

೩೨. ಆಗ ಶಂಕರನು ಅವ್ಯಕ್ತ ಎಂದರೆ, ಇಂದ್ರಿಯಗಳಿಗೆ ಅಗೋಚರವಾದ ರೂಪವುಳ್ಳ ವಿಷ್ಣುವು ಒಬ್ಬನು ಮಾತ್ರವಿರುವುದನ್ನು ನೋಡಿದನು. ಅವನನ್ನು ಹೊರತು ಮತ್ತೇನನ್ನೂ ಆ ಶಂಕರನು ನೋಡಲಿಲ್ಲವು.

ಅಥ ವಿಷ್ಣುಂ ಚ ದದೃಶೇ ಲಯಂತಂ ಪರಮಾತ್ಮನಿ ।
ಭಾಸಮಾನಂ ಪರಂ ತತ್ತ್ವೇ ಜ್ಯೋತೀರೂಪೇ ಸನಾತನೇ ॥ ೩೩ ॥

ತತೋ ಜ್ಞಾನಮಯಂ ನಿತ್ಯಮಾನಂದಂ ಬ್ರಹ್ಮಣಃ ಪರಂ ।
ಕೇವಲಂ ಜ್ಞಾನಗಮ್ಯಂ ಚ ದದರ್ಶಾನ್ಯಂ ನ ಕಿಂಚನ ॥ ೩೪ ॥

ಏಕತ್ವಂ ಚ ಪೃಥಕ್ತ್ವಂ ಚ ಜಗತಃ ಪರಮಾತ್ಮನಿ ।
ದದರ್ಶ ಸ್ವಶರೀರಾಂತಃ ಸರ್ಗಸ್ಥಿತ್ಯಂತಸಂಯಮಾನ್ ॥ ೩೫ ॥

ಪ್ರಕಾಶಂ ಪರಮಾತ್ಮಾನಂ ಶಾಂತಂ ನಿತ್ಯಮತೀಂದ್ರಿಯಂ ।
ಏಕಮೇವಾದ್ವಯಂ ಬ್ರಹ್ಮ ದದರ್ಶಾನ್ಯನ್ನ ಕಿಂಚನ ॥ ೩೬ ॥

---

೩೩. ಆಮೇಲೆ, ಪ್ರಕಾಶಮಾನನಾದ ಆ ವಿಷ್ಣು ವೂ ಸಹ ದಿವ್ಯ ಜ್ಯೋತಿಯಿಂದ ಬೆಳಗುತ್ತಿರುವ ಅನಾದಿಯಾದ ಪರಮಾತ್ಮನಲ್ಲಿ ಲಯವನ್ನು ಹೊಂದುತ್ತಿರುವುದನ್ನು ನೋಡಿದನು.

೩೪. ಬಳಿಕ ಅಲ್ಲಿ ಶಂಕರನು, ಜ್ಞಾನಸ್ವರೂಪನಾಗಿಯೂ, ನಿತ್ಯನಾಗಿಯೂ, ಸುಖಸ್ವರೂಪನಾಗಿಯೂ, ಉತ್ಕೃಷ್ಟನಾಗಿಯೂ, ಜ್ಞಾನದಿಂದ ಮಾತ್ರವೇ ಪಡೆಯಲು ಸಾಧ್ಯನಾಗಿಯೂ ಇರುವ ಆ ಪರಮಾತ್ಮ ಸ್ವರೂಪವೊಂದನ್ನು ಹೊರತು ಇನ್ನೇನನ್ನೂ ನೋಡಲಿಲ್ಲವು.

೩೫. ಪರಮಾತ್ಮನೊಂದಿಗೆ ಜಗತ್ತಿನ ಅಭೇದವನ್ನೂ ಭೇದವನ್ನೂ, ಸೃಷ್ಟಿಸ್ಥಿತಿಸಂಹಾರಗಳನ್ನೂ ತನ್ನ ಶರೀರದಲ್ಲಿಯೇ ಆ ಶಂಕರನು ನೋಡಿದನು.

೩೬. ಜ್ಯೋತಿಸ್ವರೂಪನೂ, ಎಲ್ಲರ ಆತ್ಮಸ್ವರೂಪನೂ, ಶಾಂತನೂ, ಇಂದ್ರಿಯಗಳಿಗೆ ಅಗೋಚರನೂ, ಭೇದತ್ರಯ ರಹಿತನೂ—ಎಂದರೆ, ತನ್ನಲ್ಲಿಯೇ ಉಂಟಾಗುವ ಭೇದ, ತನಗೆ ಸದೃಶವಾದ ಇನ್ನೊಂದು ವಸ್ತುವಿನೊಡನೆ ಭೇದ, ತನಗೆ ಸದೃಶವಲ್ಲದ ವಸ್ತುವಿನೊಡನೆ ಭೇದ, ಈ ರೀತಿ ಇರುವ ಮೂರು ವಿಧವಾದ ಭೇದಗಳಿಲ್ಲದವನೂ—ಆದ ಪರಬ್ರಹ್ಮನೊಬ್ಬನನ್ನು ಹೊರತು ಇನ್ನೇನನ್ನೂ ಆ ಶಂಕರನು ನೋಡಲಿಲ್ಲವು.

ಕೋ ವಾ ವಿಷ್ಣುರ್ಹರಃ ಕೋ ವಾ ಕೋ ಬ್ರಹ್ಮಾ ಕಿಮಿದಂ ಜಗತ್ ।
ಇತಿ ಭೇದೋ ನ ಜಗೃಹೇ ಶಂಭುನಾ ಪರಮಾತ್ಮನಾ ॥ ೩೭ ॥

ಏವಂ ಸಂಪಶ್ಯತಸ್ತಸ್ಯ ಶರೀರಾಭ್ಯಂತರಾದ್ಬಹಿಃ ।
ನಿಃಸಸಾರಾಥ ಮಾಯಾಪಿ ಪ್ರವಿವೇಶ ವೃಷಧ್ವಜಂ ॥ ೩೮ ॥

ಅನನ್ಯತ್ವಂ ಪೃಥಕ್ತ್ವಂ ಚ ದರ್ಶಯಿತ್ವಾ ಜನಾರ್ದನಃ ।
ಶಂಭವೇ ತಚ್ಛರೀರಾತ್ತು ಬಹಿರ್ಭೂತಸ್ತತೋ ದ್ರುತಂ ॥ ೩೯ ॥

ಅಥ ತ್ಯಕ್ತಸಮಾಧೇಸ್ತು ಹರಸ್ಯ ಚಲಿತಾತ್ಮನಃ ।
ಸತೀಂ ಮನೋ ಜಗಾಮಾಶು ಮೋಹಿತಸ್ಯ ಚ ಮಾಯಯಾ ॥ ೪೦ ॥

---

೩೭. ಪರಮಾತ್ಮಸ್ವರೂಪನಾದ ಆ ಶಂಕರನಿಗೆ, ವಿಷ್ಣು ವಾರು? ಶಂಕರ ನಾರು? ಬ್ರಹ್ಮನಾವನು? ಈ ಜಗತ್ತು ಯಾವುದು? ಎಂಬ ಭೇದವೇ ತಿಳಿಯಲಿಲ್ಲವು.

೩೮. ಈ ರೀತಿ ಸಮಾಧಿಯೋಗದಲ್ಲಿದ್ದು ಪರಬ್ರಹ್ಮ ಸ್ವರೂಪವನ್ನು ನೋಡುತ್ತಲಿರುವ ಆ ಶಂಕರನ ಶರೀರದಿಂದ ಜ್ಞಾನಸ್ವರೂಪಿಣಿಯಾದ ಆದಿ ಮಾಯೆಯು ಹೊರಹೊರಟು ಪುನಃ ಆ ಶಂಕರನ ಶರೀರವನ್ನು ಅಜ್ಞಾನ ರೂಪದಿಂದ ಪ್ರವೇಶಿಸಿ ಅವನನ್ನು ಮೋಹಯುಕ್ತನನ್ನಾಗಿ ಮಾಡಿದಳು.

೩೯. ಇದುವರೆಗೂ ಶಂಕರನ ಶರೀರವನ್ನು ಪ್ರವೇಶಿಸಿ ಅಲ್ಲಿದ್ದು ಅವನಿಗೆ, ಪರಮಾತ್ಮನ ಅಭೇದ ಸ್ವರೂಪವನ್ನೂ, ಕಾರ್ಯನಿಮಿತ್ತವಾಗಿ ಆ ಪರಬ್ರಹ್ಮನೇ ಭೇದಭಾವವನ್ನು ಹೊಂದುವುದನ್ನೂ ತೋರಿಸಿ, ವಿಷ್ಣುವು ಬೇಗನೆ ಆ ಶಂಕರನ ಶರೀರದಿಂದ ಹೊರಗೆ ಬಂದನು.

೪೦. ಆಮೇಲೆ ಶಂಕರನು ಸಮಾಧಿಯಿಂದ ಬಹಿರ್ಮುಖನಾದ ಮೇಲೆ, ಮಾಯೆಯಿಂದ ಮೋಹಗೊಳಿಸಲ್ಪಟ್ಟವನಾಗಿ, ಚಿತ್ತಚಾಂಚಲ್ಯ ವನ್ನು ಹೊಂದಿ, ಸತೀ ದೇವಿಯಲ್ಲಿ ಅನುರಕ್ತನಾದನು.

ತತೋ ಮುಹುರ್ಹರೋ ವಕ್ತ್ರಂ ದಾಕ್ಷಾಯಣ್ಯಾ ಮನೋಹರಂ ।
ಪ್ರಬುದ್ಧಕಮಲಾಕಾರಂ ವೀಕ್ಷಾಂಚಕ್ರೇ ದ್ವಿಜೋತ್ತಮಾಃ ॥ ೪೧ ॥

ತತೋ ದಕ್ಷಮರೀಚ್ಯಾದೀನ್ಸ್ವಗಣಾನ್ಕಮಲಾಸನಂ ।
ವಿಷ್ಣುಂ ಚ ತತ್ರ ಸಂವೀಕ್ಷ್ಯ ಶಂಕರೋ ವಿಸ್ಮಿತೋಽಭವತ್ ॥ ೪೨ ॥

ಅಥ ತಂ ವಿಸ್ಮಯಾವಿಷ್ಟಂ ಮಹಾದೇವಂ ವೃಷಧ್ವಜಂ ।
ಸ್ಮಿತಪ್ರಫುಲ್ಲವದನಂ ಹರಮಾಹ ಜನಾರ್ದನಃ ॥ ೪೩ ॥

॥ ಶ್ರೀಭಗವಾನುವಾಚ ॥

ಯದ್ಯತ್ಪೃಷ್ಟಂ ತ್ವಯೈಕತ್ವೇ ಭಿನ್ನತಾಯಾಂ ಚ ಶಂಕರ ।
ತ್ರಯಾಣಾಮಥ ದೇವಾನಾಂ ತಜ್ಜ್ಞಾತಮಧುನಾ ತ್ವಯಾ ॥ ೪೪ ॥

---

೪೧. ಎಲೈ ಬ್ರಾಹ್ಮಣೋತ್ತಮರೇ, ಆ ಬಳಿಕ ಶಂಕರನು ದಕ್ಷಪುತ್ರಿಯಾದ ಆ ಸತೀದೇವಿಯ, ಅರಳಿದ ಕಮಲದಂತೆ ಸುಂದರವಾದ ಮುಖವನ್ನು ಮತ್ತೆ ನೋಡಿದನು.

೪೨. ಆಮೇಲೆ ಅಲ್ಲಿ ದಕ್ಷ, ಮರೀಚಿ ಮೊದಲಾದವರನ್ನೂ, ತನ್ನ ಪರಿವಾರಗಣಗಳನ್ನೂ ಬ್ರಹ್ಮನನ್ನೂ ವಿಷ್ಣುವನ್ನೂ ನೋಡಿ ಶಂಕರನು ತುಂಬ ಆಶ್ಚರ್ಯಗೊಂಡನು.

೪೩. ಆಮೇಲೆ ಹೀಗೆ ಆಶ್ಚರ್ಯಗೊಂಡು ಮಂದಹಾಸದಿಂದ ಅರಳಿದ ಮುಖವುಳ್ಳ ಆ ನಂದಿವಾಹನನಾದ ಮಹಾದೇವನನ್ನು ಕುರಿತು ವಿಷ್ಣುವು ಹೀಗೆ ಹೇಳಿದನು.

೪೪. ವಿಷ್ಣುವು ಹೇಳಿದನು:—ಓ ಶಂಕರನೇ, ತ್ರಿಮೂರ್ತಿಗಳಾದ ಬ್ರಹ್ಮವಿಷ್ಣು ಮಹೇಶ್ವರರಿಗಿರುವ ಭೇದಾಭೇದಸ್ವರೂಪದ ವಿಷಯದಲ್ಲಿಯೂ, ಇತರ ವಸ್ತುಗಳ ಭೇದಸ್ವರೂಪವಿಷಯದಲ್ಲಿಯೂ ನೀನು ಏನೇನನ್ನು ಕೇಳಿದ್ದೆಯೋ ಅದನ್ನೆಲ್ಲಾ ಈಗ ನೀನು ತಿಳಿದಂತಾಯಿತು.

ಪ್ರಕೃತಿಃ ಪುರುಷಶ್ಚೈವ ಕಾಲೋ ಮಾಯಾ ನಿಜಾಂತರೇ ।
ತ್ವಯಾ ಜ್ಞಾತಾ ಮಹಾದೇವ ಕೀದೃಶಾಸ್ತೇ ಚ ಕೇ ಪುನಃ ॥ ೪೫ ॥
ಏಕಂ ಬ್ರಹ್ಮ ಸದಾ ಶಾಂತಂ ನಿತ್ಯಂ ಚ ಪರಮಂ ಮಹತ್ ।
ತತ್ಕಥಂ ಭಿನ್ನತಾಂ ಜಾತಂ ದೃಷ್ಟಂ ತತ್ಕೀದೃಶಂ ತ್ವಯಾ ॥ ೪೬ ॥

॥ ಮಾರ್ಕಂಡೇಯ ಉವಾಚ ॥

ಇತಿ ಪೃಷ್ಟೋ ಭಗವತಾ ಭಗವಾನ್ವೃಷಭಧ್ವಜಃ ।
ಜಗಾದ ಹರಯೇ ತಥ್ಯಮೇತದ್ವಾಕ್ಯಂ ದ್ವಿಜೋತ್ತಮಾಃ ॥ ೪೭ ॥

॥ ಈಶ್ವರ ಉವಾಚ ॥

ಏಕಂ ಶಿವಂ ಶಾಂತಮನಂತಮಚ್ಯುತಂ
ಬ್ರಹ್ಮಾಸ್ತಿ ತಸ್ಮಾನ್ನ ಹಿ ಕಿಂಚಿದೀದೃಶಂ ।

---

೪೫. ಓ ಮಹಾದೇವನೇ, ಪ್ರಕೃತಿ, ಪುರುಷ, ಕಾಲ, ಮಾಯಾ ಇವು ಗಳಾರು? ಇವುಗಳ ಸ್ವರೂಪವೇನು? ಎಂಬುದನ್ನು ನೀನು ನಿನ್ನ ಶರೀರದ ಲ್ಲಿಯೇ ಧ್ಯಾನಯೋಗದಿಂದ ತಿಳಿದುಕೊಂಡಿರುವೆಯಲ್ಲವೇ? ಅವುಗಳು ಯಾವವು? ಎಂಥವುಗಳು ಎಂಬುದನ್ನು ಹೇಳು.

೪೬. ಯಾವಾಗಲೂ ಶಾಂತವೂ, ನಿತ್ಯವೂ, ವ್ಯಾಪಕವೂ, ಉತ್ಕೃಷ್ಟವೂ ಆದ ಆ ಪರಬ್ರಹ್ಮವಸ್ತು ವೊಂದೇ ಹೇಗೆ ಬೇರೆ ಬೇರೆಯಾಯಿತೆಂಬುದನ್ನೂ ಆದರ ಸ್ವರೂಪವೆಂತಹುದೆಂಬುದನ್ನೂ ನೀನು ನೋಡಿ ತಿಳಿದುದಾಯ್ತು. ಅದೆಂತಹುದೆಂಬುದನ್ನು ಹೇಳು.

೪೭. ಮಾರ್ಕಂಡೇಯ ಮುನಿಯು ಹೇಳಿದನು:—ಎಲೈ ಬ್ರಾಹ್ಮಣೋ ತ್ತಮರೇ, ಈ ರೀತಿ ವಿಷ್ಣುವು ಶಂಕರನನ್ನು ಕೇಳಲು, ಅವನು ವಾಸ್ತವವಾದ ಮಾತನ್ನು ವಿಷ್ಣುವಿಗೆ ಈರೀತಿ ಹೇಳಿದನು.

ತಸ್ಮಾದಭಿನ್ನಂ ಸಕಲಂ ಜಗದ್ಧರೇ
ಕಾಲಾದಿರೂಪಾಣಿ ಚ ಸೃಷ್ಟಿಹೇತುಃ ॥ ೪೮ ॥

ಸಮಸ್ತಭೂತಪ್ರಭವಂ ನಿರಂಜನಂ
ವಯಂ ಚ ತಸ್ಯೈವ ಸದಾಂಶರೂಪಿಣಃ ।
ಸೃಷ್ಟಿಂ ಸ್ಥಿತಿಂ ಸಂಯಮನಂ ತದೀರಿತಂ
ರೂಪತ್ರಯಂ ತಸ್ಯ ವಿಭಾತಿ ಭೇದತಃ ॥ ೪೯ ॥

ನಾಹಂ ನ ಚ ತ್ವಂ ನ ಹಿರಣ್ಯಗರ್ಭೋ
ನ ಕಾಲರೂಪಂ ಪ್ರಕೃತಿಂ ನ ಚಾನ್ಯಂ ।
ತತ್ಪ್ರೇರಣಾಂ ಕರ್ತುಮಲಂ ಚ ಕಿಂಚಿ–
ದ್ವಿನಾಪಿ ರೂಪಂ ಸದಪೀಹ ತಸ್ಯ ॥ ೫೦ ॥

---

೪೮. ಶಂಕರನು ಹೇಳಿದನು:—ಓ ವಿಷ್ಣುವೇ, ಮಂಗಳಸ್ವರೂಪವೂ, ಶಾಂತವೂ ಅನಂತವೂ ಆದ್ಯಂತರಹಿತವೂ ಆದ ಪರಬ್ರಹ್ಮವೊಂದೇ ಇರುವುದು. ಅಂತಹ ಇನ್ನೊಂದು ವಸ್ತುವಾವುದೂ ಇರುವುದಿಲ್ಲವು. ಈ ಜಗತ್ತೆಲ್ಲವೂ ಆ ಬ್ರಹ್ಮಕ್ಕಿಂತಲೂ ಬೇರೆಯಲ್ಲವು. ಕಾಲ, ಪ್ರಕೃತಿ ಮೊದಲಾದವುಗಳು ಸೃಷ್ಟಿಕಾರ್ಯಕ್ಕಾಗಿ ಆದವುಗಳು.

೪೯. ಆ ಬ್ರಹ್ಮವಸ್ತುವೇ ಜಗತ್ತಿಗೆಲ್ಲ ಕಾರಣವು. ಆದು ಶುದ್ಧವಾದುದು. ನಾವುಗಳೆಲ್ಲರೂ ಆ ಬ್ರಹ್ಮನ ಅಂಶಗಳು. ಸೃಷ್ಟಿಯೂ ಪಾಲನೆಯೂ, ನಾಶವೂ ಈ ಮೂರೂ ಬೇರೆ ಬೇರೆಯಾಗಿ ತೋರುತ್ತಿದ್ದರೂ ಆ ಬ್ರಹ್ಮನ ರೂಪಗಳೇ ಆಗಿರುವವು.

೫೦. ಆ ಪರಬ್ರಹ್ಮನ ರೂಪದಿಂದಲ್ಲದೆ ಬೇರೆ ಯಾತರಿಂದಲೂ ನಾನಾಗಲಿ, ನೀನಾಗಲಿ, ಬ್ರಹ್ಮನಾಗಲಿ, ಕಾಲವಾಗಲಿ, ಪ್ರಕೃತಿಯಾಗಲಿ ಯಾವುದೂ ಅಲುಗಾಡಲು ಸಹ ಸಾಧ್ಯವಿಲ್ಲವು.

॥ ಶ್ರೀಭಗವಾನುವಾಚ ॥

ಇತಿ ತತ್ತ್ವಂ ತ್ವಯಾ ಪ್ರೋಕ್ತಂ ಜ್ಞಾನಂ ಚ ವೃಷಭಧ್ವಜ ।
ತದಂಶಭೂತಾಸ್ತು ವಯಂ ಬ್ರಹ್ಮವಿಷ್ಣುಪಿನಾಕಿನಃ ॥ ೫೧ ॥

ತಸ್ಮಾತ್ತ್ವಯಾ ನ ವಧ್ಯೋಽಯಂ ವಿರಿಂಚಿಸ್ತವ ಚೇದ್ಭವೇತ್ ।
ಏಕತಾ ವಿದಿತಾ ಶಂಭೋ ಬ್ರಹ್ಮವಿಷ್ಣುಪಿನಾಕಿನಾಂ ॥ ೫೨ ॥

॥ ಮಾರ್ಕಂಡೇಯ ಉವಾಚ ॥

ಇತಿ ತಸ್ಯ ವಚಃ ಶ್ರುತ್ವಾ ವಿಷ್ಣೋರಮಿತತೇಜಸಃ ।
ನ ಜಘಾನ ಮಹಾದೇವೋ ವಿಧಿಂ ದೃಷ್ಟ್ವಾಥ ಚೈಕತಾಂ ॥ ೫೩ ॥

ಇತಿ ವಃ ಕಥಿತಂ ವಿಷ್ಣುರ್ಯಥಾನನ್ಯತ್ವಮಾದಿಶತ್ ।
ಶಂಭವೇ ಪ್ರಸ್ತುತಂ ತದ್ವಃ ಕಥಯಾಮಿ ಪುನರ್ದ್ವಿಜಾಃ ॥ ೫೪ ॥

॥ ಇತಿ ಶ್ರೀಕಾಲಿಕಾಪುರಾಣೇ ತ್ರಯೋದಶೋಽಧ್ಯಾಯಃ ॥

---

೫೧. ವಿಷ್ಣುವು ಹೇಳಿದನು:—ಓ ಶಂಕರನೇ, ಈಗ ನೀನು ಹೇಳಿದು ದೆಲ್ಲವೂ ನಿಜವು, ರಹಸ್ಯವಾದುದು. ನಿನ್ನ ತಿಳಿವಳಿಕೆಯೂ ಸರಿಯಾದುದು. ಬ್ರಹ್ಮ ವಿಷ್ಣು ಮಹೇಶ್ವರರಾದ ನಾವುಗಳು ಆ ಪರಮಾತ್ಮನ ಅಂಶಭೂತರು.

೫೨. ಆದುದರಿಂದ ಓ ಶಂಕರನೇ, ನಿನಗೆ ಬ್ರಹ್ಮ ವಿಷ್ಣು ಶಂಕರರ ಅಭೇದವು ತಿಳಿದುದೇ ಆದರೆ ನೀನು ಈ ಬ್ರಹ್ಮನನ್ನು ಕೊಲ್ಲತಕ್ಕದ್ದಲ್ಲವು.

೫೩. ಮಾರ್ಕಂಡೇಯ ಮುನಿಯು ಹೇಳಿದನು:—ಮಹಾತೇಜಸ್ವಿಯಾದ ವಿಷ್ಣುವಿನ ಈ ರೀತಿಯಾದ ಮಾತುಗಳನ್ನು ಕೇಳಿ ಶಂಕರನು, ತ್ರಿಮೂರ್ತಿಗಳಿಗೆ ಭೇದವಿಲ್ಲದಿರುವುದನ್ನು ತಿಳಿದು ಬ್ರಹ್ಮನನ್ನು ಕೊಲ್ಲಲಿಲ್ಲವು.

೫೪. ಎಲೈ ಬ್ರಾಹ್ಮಣಶ್ರೇಷ್ಠರೇ, ಈ ರೀತಿ ವಿಷ್ಣುವು ಶಂಕರನಿಗೆ ಹೇಳಿದ, ಪರಬ್ರಹ್ಮನಿಗೂ ತ್ರಿಮೂರ್ತಿಗಳಿಗೂ ಇರುವ ಅಭೇದಸ್ವರೂಪವನ್ನು ನಿಮಗೆ ತಿಳಿಸಿದುದಾಯ್ತು. ಇನ್ನು ಮುಂದೆ ಏನು ನಡೆಯಿತೆಂಬುದನ್ನು ನಿಮಗೆ ಹೇಳುತ್ತೇನೆ.

ಇಲ್ಲಿಗೆ ಶ್ರೀಕಾಲಿಕಾಪುರಾಣದಲ್ಲಿ ಹದಿಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ಅಥ ಶ್ರೀ ಕಾಲಿಕಾಪುರಾಣೇ ಚತುರ್ದಶೋಽಧ್ಯಾಯಃ॥

ಹದಿನಾಲ್ಕನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ಜಲದೇಷ್ವಥ ಗರ್ಜತ್ಸು ಮಹಾದೇವಃ ಸತೀಪತಿಃ ।
ವಿಸೃಜ್ಯ ವಿಷ್ಣುಪ್ರಭೃತೀಞ್ಜಗಾಮ ಹಿಮವದ್ಗಿರಿಂ ॥ ೧ ॥
ಆರೋಪ್ಯ ವೃಷಭೇ ತುಂಗೇ ಸತೀಮಾನೋದಶಾಲಿನೀಂ ।
ಜಗಾಮ ಹಿಮವತ್ಪೃಷ್ಠಂ ರಮ್ಯಂ ಕುಂಜಸಮನ್ವಿತಂ ॥ ೨ ॥

---

೧. ಮಾರ್ಕಂಡೇಯ ಮುನಿಯು ಹೇಳತೊಡಗಿದನು:—ಹಿಂದೆ ಹೇಳಿದ ಆ ಸಂವರ್ತವೇ ಮೊದಲಾದ ಮೇಘಗಳು ಗರ್ಜಿಸುತ್ತಿರಲು, ಸತೀದೇವಿಯ ಪತಿಯಾದ ಶಂಕರನು ವಿಷ್ಣುವೇ ಮೊದಲಾದವರನ್ನು ಬೀಳ್ಕೊಟ್ಟು ತಾನು ಸತಿಯೊಡನೆ ಹಿಮವತ್ಪರ್ವತಕ್ಕೆ ಹೊರಟನು.

೨. ಬಳಿಕ ಶಂಕರನು ಸಂತೋಷಗೊಂಡಿರುವ ಆ ಸತಿಯನ್ನು ಉನ್ನತಾಕಾರವಾದ ನಂದಿಯ ಮೇಲೆ ಕೂಡಿಸಿಕೊಂಡು, ಮನೋಹರವಾದ ಲತಾಗೃಹಗಳಿಂದ ಒಪ್ಪುತ್ತಲಿರುವ ಹಿಮವತ್ಪರ್ವತದ ತಪ್ಪಲಿಗೆ ತೆರಳಿದನು.

ಅಥ ಸಾ ಶಂಕರಾಭ್ಯಾಶೇ ಸುದತೀ ಚಾರುಹಾಸಿನೀ ।
ವಿರೇಜೇ ವೃಷಭಸ್ಥಾऽತಿ ಚಂದ್ರಾಂತೇ ಕಾಲಿಕೋಪಮಾ ॥ ೩ ॥

ಬ್ರಹ್ಮಾದಯಶ್ಚ ತೇ ಸರ್ವೇ ಮರೀಚ್ಯಾದ್ಯಾಶ್ಚ ಮಾನಸಾಃ ।
ದಕ್ಷೋ೭ಪಿ ಸರ್ವೇ ಮುದಿತಾ ಅಭವನ್ಸುರಾಸುರಾಃ ॥ ೪ ॥

ಕೇಚಿಚ್ಛಂಖಾನ್ವಾದಯಂತಃ ಕೇಚಿತ್ತಾಲಸ್ವನಂ ಗಣಾಃ ।
ಕೇಚಿದ್ಧಾಸ್ಯಂ ಪ್ರಕುರ್ವಂತೋ ಅನುಜಗ್ಮುರ್ವೃಷಧ್ವಜಂ ॥ ೫ ॥

ವಿಸೃಷ್ಟಾ ಅಪಿ ಬ್ರಹ್ಮಾದ್ಯಾಃ ಶಂಭುನಾ ಪುನರೇವ ತೇ ।
ಅನುಜಗ್ಮುಃ ಕಿಯದ್ದೂರಂ ಮುದಾ ಪರಮಯಾ ಯುತಾಃ ॥ ೬ ॥

---

೩. ಆಗ ಆ ನಂದಿಯ ಮೇಲೆ ಶಂಕರನೊಡನೆ ಕುಳಿತು, ಸುಂದರವಾದ ದಂತಪಂಕ್ತಿಯಿಂದಲೂ, ಮನೋಹರವಾದ ಮುಗುಳುನಗೆಯಿಂದಲೂ ಶೋಭಿಸುತ್ತಿರುವ ಸತೀದೇವಿಯು ಚಂದ್ರನಲ್ಲಿರುವ ಕಳಂಕದಂತೆ ಪ್ರಕಾಶಿಸಿದಳು. ಬೆಳ್ಳಗಿರುವ ಚಂದ್ರಮಂಡಲದಲ್ಲಿ ಕಲೆಯು ಸೇರಿ ಹೇಗೆ ಪ್ರಕಾಶಿಸುವುದೋ ಆದರಂತೆ ಶುದ್ಧ ಸ್ಫಟಿಕದಂತೆ ನಿರ್ಮಲಾಕಾರವುಳ್ಳ ಶಂಕರನ ಸಮೀಪದಲ್ಲಿ ಶ್ಯಾಮಲವರ್ಣವುಳ್ಳ ಸತಿಯು ಕುಳಿತು ಪ್ರಕಾಶಿಸಿದಳು.

೪. ಆಗ ಶಂಕರನ ದಾರಾಪರಿಗ್ರಹಣದಿಂದ ಬ್ರಹ್ಮನೇ ಮೊದಲಾದವರೂ, ಮರೀಚಿಯೇ ಮೊದಲಾದ ಮಾನಸಪುತ್ರರೂ, ದಕ್ಷಬ್ರಹ್ಮನೂ, ದೇವತೆಗಳೂ, ರಾಕ್ಷಸರೂ ಎಲ್ಲರೂ ಸಂತೋಷವನ್ನು ಹೊಂದಿದರು.

೫. ಆ ಶಂಕರನ ಗಣಗಳಲ್ಲಿ ಕೆಲವರು ಶಂಖವನ್ನು ಊದುತ್ತಲೂ, ಕೆಲವರು ತಾಳವನ್ನು ಹಾಕುತ್ತಲೂ, ಮತ್ತೆ ಕೆಲವರು ಹಾಸ್ಯ ವಿನೋದಗಳನ್ನು ಮಾಡುತ್ತಲೂ ಆ ಶಂಕರನನ್ನು ಅನುಸರಿಸಿ ಹೊರಟರು.

೬. ಶಂಕರನಿಂದ ಬೀಳ್ಕೊಟ್ಟವರಾದರೂ ಬ್ರಹ್ಮನೇ ಮೊದಲಾದವರು ಸಂತೋಷದಿಂದ ಮತ್ತೆ ಆ ಶಂಕರನನ್ನು ಕೆಲವುದೂರ ಹಿಂಬಾಲಿಸಿ ಹೋದರು.

ತತಃ ಶಂಭುಂ ಸಮಾಭಾಷ್ಯ ಬ್ರಹ್ಮಾದ್ಯಾ ಮಾನಸಾಶ್ಚ ತೇ ।
ಸ್ವಂ ಸ್ವಂ ಸ್ಥಾನಂ ತದಾ ಜಗ್ಮುಃ ಸ್ಯಂದನೈರಾಶುಗಾಮಿಭಿಃ ॥ ೭ ॥

ದೇವಾಶ್ಚ ಸರ್ವೇ ಸಿದ್ಧಾಶ್ಚ ತಥೈವಾಪ್ಸರಸಾಂ ಗಣಾಃ ।
ಯಕ್ಷವಿದ್ಯಾಧರಾದ್ಯಾಶ್ಚ ಯೇ ಯೇ ತತ್ರ ಸಮಾಗತಾಃ ॥ ೮ ॥

ತೇ ಹರೇಣ ವಿಸೃಷ್ಟಾಸ್ತು ಗತವಂತೋ ನಿಜಾಸ್ಪದಂ ।
ಬಭೂವುರಾಮೋದಯುತಾಃ ಕೃತದಾರೇ ವೃಷಧ್ವಜೇ ॥ ೯ ॥

ತತೋ ಹರಃ ಸಸ್ವಗಣಃ ಸ್ವಂ ಸ್ಥಾನಂ ಪ್ರಾಪ್ಯ ಮೋದನಂ ।
ಕೈಲಾಸಂ ತತ್ರ ವೃಷಭಾದವತಾರಯತಿ ಸ್ಮ ಯಾಂ ॥ ೧೦ ॥

ತತೋ ವಿರೂಪಾಕ್ಷ ಇಮಾಂ ಪ್ರಾಪ್ಯ ದಾಕ್ಷಾಯಣೀಂ ಗಣಾನ್ ।
ಸ್ವೀಯಾನ್ವಿಸರ್ಜಯಾಮಾಸ ನಂದ್ಯಾದೀನ್ಗಿರಿಕಂದರಾತ್ ॥ ೧೧ ॥

---

೭. ಆನಂತರ ಬ್ರಹ್ಮನೇ ಮೊದಲಾದವರೂ, ಮರೀಚಿಯೇ ಮೊದಲಾದ ಮಾನಸ ಪುತ್ರರೂ ಶಂಕರನೊಡನೆ ಮಾತನಾಡುತ್ತಾ ಕೆಲವು ದೂರ ಹೋಗಿ, ಬಳಿಕ ವೇಗವಾಗಿ ಹೋಗುವ ರಥಗಳನ್ನೇರಿ ತಮ್ಮ ತಮ್ಮ ಸ್ಥಾನಗಳಿಗೆ ಹೊರಟು ಹೋದರು.

೮–೯. ಅಲ್ಲದೆ, ದೇವತೆಗಳೂ ಸಿದ್ಧರೂ ಅಪ್ಸರಸ್ತ್ರೀಯರೂ ಯಕ್ಷರೂ ವಿದ್ಯಾಧರರೂ ಇನ್ನೂ ಯಾರು ಯಾರು ಬಂದಿದ್ದರೋ ಅವರೆಲ್ಲರೂ ಶಂಕರನ ವಿವಾಹದಿಂದ ಸಂತೋಷಗೊಂಡು, ಅವನಿಂದ ಬೀಳ್ಕೊಂಡವರಾಗಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.

೧೦. ಬಳಿಕ ಶಂಕರನು ತನ್ನ ಗಣಗಳೊಂದಿಗೆ ಆಹ್ಲಾದಕರವಾದ ಕೈಲಾಸವೆಂಬ ಸ್ವಸ್ಥಾನವನ್ನು ಸೇರಿ ಅಲ್ಲಿ ಸತೀದೇವಿಯೊಡನೆ ನಂದಿಯಿಂದ ಇಳಿದನು.

೧೧. ಆಮೇಲೆ ಶಂಕರನು ಸತೀದೇವಿಯೊಡನೆ ಸೇರಿ, ಅಲ್ಲಿಂದ ನಂದಿಯೇ ಮೊದಲಾದ ತನ್ನ ಗಣಗಳನ್ನು ಬೆಟ್ಟದ ಗುಹೆಯ ಸಮೀಪದಿಂದ ಹೊರಟು ಹೋಗುವಂತೆ ಕಳುಹಿಸಿದನು.

ಉವಾಚ ಶಂಭುಸ್ತಾನ್ಸರ್ವಾನ್ನಂದ್ಯಾದೀನತಿಸೂನೃತಂ ।
ಯದಾಹಂ ವಃ ಸ್ಮರಾಮ್ಯತ್ರ ಸ್ಮರಣಾಚ್ಚಲಮಾನಸಾಃ ।
ಸಮಾಗಮಿಷ್ಯಥ ತದಾ ಮತ್ಪಾರ್ಶ್ವಂ ಭೋಸ್ತದಾ ತದಾ ॥ ೧೨ ॥

ಇತ್ಯುಕ್ತೇ ವಾಮದೇವೇನ ತೇ ನಂದೀಭೈರವಾದಯಃ ।
ಮಹಾಕೋಷೀಪ್ರಪಾತಾಯ ಜಗ್ಮುಸ್ತು ಹಿಮವದ್ಗಿರೌ ॥ ೧೩ ॥

ಈಶ್ವರೋಽಪಿ ತಯಾ ಸಾರ್ಧಂ ತೇಷು ಯಾತೇಷು ಮೋಹಿತಃ ।
ದಾಕ್ಷಾಯಣ್ಯಾ ಚಿರಂ ರೇಮೇ ರಹಸ್ಯನುದಿನಂ ಭೃಶಂ ॥ ೧೪ ॥

ಕದಾಚಿದ್ವನ್ಯಪುಷ್ಪಾಣಿ ಸಮಾಹೃತ್ಯ ಮನೋಹರಾಂ ।
ಮಾಲಾಂ ವಿಧಾಯ ಸತ್ಯಾಸ್ತು ಶಿರಃಸ್ಥಾನೇ ನ್ಯಯೋಜಯತ್ ॥ ೧೫ ॥

---

೧೨. ಆಗ ಶಂಕರನು ನಂದಿಯೇ ಮೊದಲಾದ ಗಣಗಳನ್ನು ಕುರಿತು—ಎಲೈ ಗಣಗಳೀ, ನಾನು ಯಾವಾಗ ನಿಮ್ಮನ್ನು ಸ್ಮರಿಸುವೆನೋ ಆಗ ಹೊರಟು ಬರಬೇಕೆಂಬ ಬುದ್ಧಿಯಿಂದ ನನ್ನ ಸಮೀಪಕ್ಕೆ ಬನ್ನಿ—ಎಂದು ಹೇಳಿದನು.

೧೩. ಹೀಗೆ ಶಂಕರನು ಹೇಳಲು, ಆ ನಂದಿ ಭೈರವ ಮೊದಲಾದ ಗಣಗಳು ಮಹಾಕೌಷೀ ಎಂಬ ಜಲಪಾತವಿರುವ ಹಿಮವತ್ಪರ್ವತದ ಪ್ರದೇಶಕ್ಕೆ ಹೊರಟುಹೋದವು.

೧೪. ಆ ಗಣಗಳೆಲ್ಲಾ ಹೊರಟುಹೋದಮೇಲೆ ಶಂಕರನು ಸತಿಯಲ್ಲಿ ಮೋಹಗೊಂಡು ಆವಳೊಡನೆ ಪ್ರತಿದಿನವೂ ಏಕಾಂತಸ್ಥಳದಲ್ಲಿ ವಿಹರಿಸುತ್ತಿದ್ದನು.

೧೫. ಒಂದು ದಿನ, ಆ ಶಂಕರನು ಕಾಡಿನಲ್ಲಿ ಅರಳುವ ಹೂವುಗಳನ್ನು ತಂದು ಅವುಗಳಿಂದ ಮನೋಹರವಾದ ಹಾರವನ್ನು ಕಟ್ಟಿ ಆದನ್ನು ಸತೀದೇವಿಯ ಶಿರಸ್ಸಿನಲ್ಲಿ ಅಲಂಕಾರವಾಗಿ ಮುಡಿಸಿದನು.

ಕದಾಚಿದ್ದರ್ಪಣೇ ವಕ್ತ್ರಂ ವೀಕ್ಷಂತೀಮಾತ್ಮನಃ ಸತೀಂ ।
ಅನುಗಮ್ಯ ಹರೋ ವಕ್ತ್ರಂ ಸ್ವೀಯಮಪ್ಯವಲೋಕಯತ್ ॥ ೧೬ ॥

ಕದಾಚಿತ್ಕುಂತಲಾಂಸ್ತಸ್ಯಾ ಉಲ್ಲಾಸ್ಯೋಲ್ಲಾಸಮಾಗತಃ ।
ಬಧ್ನಾತಿ ಮೋಚಯತ್ಯೇವಂ ಶಶ್ವತ್ಸಂಮಾರ್ಜಯತ್ಯಪಿ ॥ ೧೭ ॥

ಸರಾಗೌ ಚರಣಾವಸ್ಯಾ ಯಾವಕೇನೋಜ್ಜ್ವಲೇನ ಚ ।
ನಿಸರ್ಗರಕ್ತೌ ಕುರುತೇ ಪುರಾ ರಾಗಾದ್ವೃಷಧ್ವಜಃ ॥ ೧೮ ॥

ಉಚ್ಚೈರಪಿ ಯದಾಖ್ಯೇಯಮನ್ಯೇಷಾಂ ಪುರತೋ ಮುಹುಃ ।
ತತ್ಕರ್ಣೇ ಕಥಯತ್ಯಸ್ಯಾ ಹರೋ ದೃಷ್ಟ್ವಾ ತದಾನನಂ ॥ ೧೯ ॥

ನ ದೂರಮಪಿ ಗತ್ವಾಽಸೌ ಸಮಾಗಮ್ಯ ಪ್ರಯತ್ನತಃ ।
ಅನುಬಧ್ನಾತಿ ತಾಮುಷ್ಣೈ ಪೃಷ್ಠದೇಶೇಽನ್ಯಮಾನಸಾಂ ॥ ೨೦ ॥

---

೧೬. ಒಮ್ಮೆ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಳ್ಳುತ್ತಿರುವ ಸತೀದೇವಿಯ ಹಿಂದುಗಡೆ ಹೋಗಿ ಕನ್ನಡಿಯಲ್ಲಿ ತನ್ನ ಮುಖವನ್ನೂ ನೋಡಿ ಕೊಂಡನು.

೧೭. ಮತ್ತೊಮ್ಮೆ ಆ ಶಂಕರನು ಉಲ್ಲಾಸಗೊಂಡು, ಸತಿಯ ಕೇಶ ಪಾಶಗಳನ್ನು ಕೆದರಿ ಕಟ್ಟುತ್ತಲೂ, ಕಟ್ಟಿದ್ದನ್ನು ಪುನಃ ಬಿಚ್ಚುತ್ತಲೂ, ಆಗಾಗ ಬಾಚುತ್ತಲೂ ವಿನೋದಪರನಾಗಿದ್ದನು.

೧೮. ಸ್ವಭಾವವಾಗಿಯೇ ಕೆಂಪಾಗಿರುವ ಅವಳ ಅಂಗಾಲುಗಳನ್ನು ಉಜ್ಜ್ವಲವಾದ ಅರಗಿನಿಂದ ಮತ್ತಷ್ಟು ಕೆಂಪಾದವುಗಳನ್ನಾಗಿ ಆ ಶಂಕರನು ಮಾಡುವನು.

೧೯. ಎಲ್ಲರೆದುರಿನಲ್ಲಿ ಗಟ್ಟಿಯಾಗಿ ಹೇಳಬಹುದಾದಂತಹ ಮಾತನ್ನೂ ಸಹ, ಆ ಶಂಕರನು ಆ ಸತಿಯ ಮುಖವನ್ನು ನೋಡುವ ಬಯಕೆಯಿಂದ ಅವಳ ಕಿವಿಯಲ್ಲಿ ಹೇಳುವನು.

೨೦. ಒಮ್ಮೆ ಆ ಶಂಕರನು ಸ್ವಲ್ಪದೂರ ಹೋಗಿ ಹಿಂತಿರುಗಿ ಬಂದು, ಬೇರೆ ಕಡೆ ಮನಸ್ಸುಳ್ಳ ಆ ಸತೀದೇವಿಯ ಹಿಂಭಾಗದಿಂದ ಅವಳ ಕಣ್ಣುಗ ಳನ್ನು ಮುಚ್ಚುವನು.

ಅಂತರ್ಹಿತಸ್ತು ತತ್ರೈವ ಮಾಯಯಾ ವೃಷಭಧ್ವಜಃ ।
ತಾಮಾಲಿಲಿಂಗ ಭೀತ್ಯಾ ಸಾ ಚಕಿತಾ ವ್ಯಾಕುಲಾಽಭವತ್ ॥ ೨೧ ॥

ಸೌವರ್ಣಪದ್ಮಕಲಿಕಾತುಲ್ಯೇ ತಸ್ಯಾಃ ಕುಚದ್ವಯೀ ।
ಚಕಾರ ಭೃಮರಾಕಾರಂ ಮೃಗನಾಭಿವಿಶೇಷಕಂ ॥ ೨೨ ॥

ಹಾರಮುಸ್ಯಾಃ ಕುಚಯುಗಾದ್ವಿಯೋಜ್ಯ ಸಹಸಾ ಹರಃ ।
ನಿಯೋಜಯತಿ ತತ್ರೈವ ಸಕರಸ್ಪರ್ಶನಂ ಮುಹುಃ ॥ ೨೩ ॥

ಅಂಗದಾನ್ವಲಯಾನ್ವರ್ಮಾಂ ವಿಶ್ಲೇಷ್ಯ ಚ ಪುನಃ ಪುನಃ ।
ತತ್ಸ್ಥಾನಾತ್ಪುನರೇವಾಸೌ ತತ್ಸ್ಥಾನೇ ಪ್ರಯುಯೋಜ ಚ ॥ ೨೪ ॥

ಕಾಲಿಕೇಯಂ ಸಮಾಯಾತಿ ಸವರ್ಣಾ ತೇ ಸಖೀತಿ ತಾಂ ।
ಪಶ್ಯೇತ್ಯಸ್ಯಾಸ್ತಥೇಚ್ಛಂತ್ಯಾಃ ಪ್ರೋಕ್ತ್ವಾ ಜಗ್ರಾಹ ತತ್ಕುಚೌ ॥ ೨೫ ॥

---

೨೧. ಒಂದು ದಿನ ಆ ಶಂಕರನು ಮಾಯೆಯಿಂದ ಅಂತರ್ಧಾನನಾಗಿ, ಅವಳಿಗೆ ಕಾಣಿಸದಂತೆ, ಆ ಸತಿಯನ್ನು ಆಲಿಂಗಿಸಿದನು. ಅದರಿಂದ ಅವಳು ಹೆದರಿ ಬಹಳವಾಗಿ ಗಾಬರಿಗೊಂಡಳು.

೨೨. ಚಿನ್ನದ ಕಮಲದ ಮೊಗ್ಗೆಯಂತಿರುವ, ಆ ಸತೀದೇವಿಯ ಕುಚಗಳಲ್ಲಿ ಕಸ್ತೂರಿಯಿಂದ ದುಂಬಿಯ ಆಕಾರದ ಚಿತ್ರವೊಂದನ್ನು ಬರೆದನು.

೨೩. ಆ ಶಂಕರನು ಸತೀದೇವಿಯ ಸ್ತನಗಳ ಮೇಲಿರುವ ಹಾರವನ್ನು ಬೇಕೆಂತಲೇ ಬೀಳಿಸಿ, ಕೂಡಲೇ ಆ ಸ್ತನಗಳನ್ನು ಕೈಯಿಂದ ಮುಟ್ಟಿ ಹಾರವನ್ನು ಪುನಃ ಮೊದಲಿದ್ದಂತೆಯೇ ಸೇರಿಸುವನು.

೨೪. ಆ ಸತಿಯ ಭುಜಕೀರ್ತಿಗಳನ್ನೂ ಬಳೆಗಳನ್ನೂ ಕುಪ್ಪಸವನ್ನೂ ಪುನಃ ಪುನಃ ತೆಗೆದು, ತಿರುಗಿ ಅವುಗಳನ್ನು ಆಯಾಯ ಸ್ಥಾನಗಳಲ್ಲಿಯೇ ಇರಿಸುವನು.

೨೫. ಒಮ್ಮೆ ಅವನು ಆ ಸತಿಯನ್ನು ಕುರಿತು—ನೋಡು ನಿನ್ನಂತೆ ಕಪ್ಪುಬಣ್ಣವುಳ್ಳ ನಿನ್ನ ಸಖಿಯೋರ್ವಳು ಬರುತ್ತಿರುವಳು ಎಂದು ಹೇಳಿ, ಅದರಂತೆ ಅವಳು ಆಕಡೆ ನೋಡಲುದ್ಯುಕ್ತಳಾದಾಗ ಅವಳ ಸ್ತನಗಳನ್ನು ತನ್ನ ಕೈಗಳಿಂದ ಗ್ರಹಣಮಾಡಿದನು.

ಕದಾಚಿನ್ಮದನೋನ್ಮಾದಚೇತನಃ ಪ್ರಮಥಾಧಿಪಃ ।
ಚಕಾರ ನರ್ಮಕರ್ಮಾಣಿ ತಯಾ ಹೃತ್ಪ್ರಿಯಯಾ ಮುದಾ ॥ ೨೬ ॥
ಆಹೃತ್ಯ ಪದ್ಮಪುಷ್ಪಾಣಿ ವನ್ಯಪುಷ್ಪಾಣಿ ಶಂಕರಃ
ಪುಷ್ಪಾಭರಣಸರ್ವಾಂಗೀಂ ಕುರುತೇ ಸ್ಮ ಕದಾಚನ ॥ ೨೭ ॥
ಗಿರಿಕುಂಜೇಷು ರಮ್ಯೇಷು ತಯಾ ಸಹ ಸತೀಪತಿಃ
ವಿಜಹಾರ ಸಮಸ್ತೇಷು ವನೇಷು ಮುದಿತೋ ಹರಂ ॥ ೨೮ ॥
ನ ಯಾನೇ ನೋಪವೇಶೇ ಚ ನ ಸ್ಥಿತೌ ನಾಪಿ ಚೇಷ್ಟಿತೇ ।
ತಯಾ ವಿನಾ ಕ್ಷಣಮಪಿ ಶರ್ಮ ಲೇಭೇ ವೃಷಧ್ವಜಃ ॥ ೨೯ ॥
ವಿಹೃತ್ಯ ಸುಚಿರಂ ಕಾಲಂ ಕೈಲಾಸಗಿರಿಕಂದರೇ
ಮಹಾಕೋಷೀಪ್ರಪಾತಾಯ ಜಗಾಮ ಹಿಮವದ್ಗಿರೌ ॥ ೩೦॥

---

೨೬. ಒಮ್ಮೆ ಆ ಶಂಕರನು ಮನ್ಮಥ ವಿಕಾರಪರವಶನಾಗಿ, ಹೃದಯೇಶ್ವರಿಯಾದ ಆ ತನ್ನ ಪ್ರಿಯೆಯೊಡನೆ ಸಂತೋಷದಿಂದ ನಾನಾವಿಧವಾದ ಕಾಮಚೇಷ್ಟೆಗಳನ್ನು ಮಾಡಿದನು.

೨೭. ಮತ್ತೊಮ್ಮೆ ಆವನು ಕಮಲಗಳನ್ನೂ, ಕಾಡಿನಲ್ಲಿ ದೊರೆಯುವ ಬೇರೆ ಹೂವುಗಳನ್ನೂ ತಂದು ಅವುಗಳಿಂದಲೇ ಆ ಸತೀದೇವಿಯ ಸರ್ವಾಂಗಗಳನ್ನೂ ಅಲಂಕರಿಸಿದನು.

೨೮. ಆ ಶಂಕರನು ಹಿಮವತ್ಪರ್ವತದ ಮನೋಹರವಾದ ಲತಾಗೃಹಗಳಲ್ಲಿಯೂ ವನಗಳಲ್ಲಿಯೂ ಆ ಸತೀದೇವಿಯೊಡನೆ ಸಂತೋಷದಿಂದ ವಿಹರಿಸಿದನು.

೨೯. ವಾಹನಗಳಲ್ಲಿ ಕುಳಿತಿರುವಾಗಲಾಗಲಿ, ನೆಲದ ಮೇಲೆ ಕುಳಿತಿದ್ದಾಗಲಾಗಲಿ, ನಿಂತುಕೊಂಡಿರುವಾಗಲಾಗಲಿ, ಇತರ ಕೆಲಸಗಳನ್ನು ಮಾಡುತ್ತಿರುವಾಗಲಾಗಲಿ, ಒಂದು ಕ್ಷಣಕಾಲವೂ ಸಹ ಆ ಸತಿಯು ಸಮೀಪದಲ್ಲಿಲ್ಲದಿದ್ದರೆ ಆ ಶಂಕರನಿಗೆ ಸುಖವಾಗುತ್ತಿರಲಿಲ್ಲವು.

೩೦. ಹೀಗೆ ಬಹುಕಾಲ ಕೈಲಾಸಪರ್ವತದ ಗುಹೆಯಲ್ಲಿ ವಿಹರಿಸಿ, ಆಮೇಲೆ ಹಿಮಾಲಯ ಪರ್ವತದಲ್ಲಿರುವ ಮಹಾಕೋಷೀ ಎಂಬ ಜಲಪಾತದ ಬಳಿಗೆ ಸತಿಯೊಡನೆ ಹೋದನು.

ತಸ್ಮಿನ್ಪ್ರವಿಷ್ಟೇ ಹಿಮವತ್ಪರ್ವತೇ ವೃಷಭಧ್ವಜೇ ।
ಕಾಮೋಽಪಿ ಸಹ ಮಿತ್ರೇಣ ರತ್ಯಾ ಚ ಪ್ರಜಗಾಮ ಹ ॥ ೩೧ ॥

ತಸ್ಮಿನ್ಪ್ರವಿಷ್ಟೇ ಕಾಮೇ ತು ವಸಂತಃ ಶಂಕರಾಂತಿಕೇ ।
ವಿತತಾನ ನಿಜಾಃ ಶ್ರೇಷ್ಟ ವೃಕ್ಷೇ ತೋಯೇ ತಥಾ ಭುವಿ ॥ ೩೨ ॥

ಸರ್ವೇ ಸುಪುಷ್ಪಿತಾ ವೃಕ್ಷಾ ಲತಾಶ್ಚಾನ್ಯಾಃ ಸುಪುಷ್ಪಿತಾಃ ।
ಅಂಭಾಂಸಿ ಫುಲ್ಲಪದ್ಮಾನಿ ಪದ್ಮೇಷು ಭ್ರಮರಾಸ್ತಥಾ ॥ ೩೩ ॥

ಪ್ರವಿಷ್ಟೇ ತತ್ರ ಸುರಭೌ ಪ್ರವವುರ್ಮಲಯಾನಿಲಾಃ ।
ಸುಗಂಧಿಪುಷ್ಪಗಂಧೇನ ಮೋಹಿತಾಶ್ಚ ಪುರಂಧ್ರಯಃ ॥ ೩೪ ॥

ಮುನೀನಾಮಪಿ ಚೇತಾಂಸಿ ಪ್ರಮಥ್ಯ ಸುರಭಿಸ್ತದಾ ।
ಸ್ಮರಃ ಸಾರಂ ಸಮುದ್ದಧ್ರೇ ತಕ್ರೌಘಾದಾಜ್ಯವತ್ಯತೀ ॥ ೩೫ ॥

---

೩೧. ಆ ಶಂಕರನು ಹೀಗೆ ಹಿಮವತ್ಪರ್ವತಪ್ರದೇಶವನ್ನು ಪ್ರವೇಶಿಸಲು, ಆಗ ಮನ್ಮಥನೂ ಸಹ ತನ್ನ ಮಿತ್ರನಾದ ವಸಂತ ಮತ್ತು ರತಿಯರೊಡನೆ ಅಲ್ಲಿಗೆ ಬಂದನು.

೩೨. ಮನ್ಮಥನು ವನವನ್ನು ಪ್ರವೇಶಿಸಲು, ವಸಂತನು ವೃಕ್ಷಗಳಲ್ಲೂ, ಸರೋವರಗಳಲ್ಲಿಯೂ, ಭೂಮಿಯ ಮೇಲೆಯೂ ತನ್ನ ಅಪೂರ್ವವಾದ ಕಾಂತಿಯನ್ನು ಬೀರಿ, ಅವುಗಳು ಮನೋಹರವಾಗಿ ಕಂಗೊಳಿಸುವಂತೆ ಮಾಡಿದನು.

೩೩. ಆಗ ವೃಕ್ಷಗಳಲ್ಲಿಯೂ, ಇತರ ಲತೆಗಳಲ್ಲಿಯೂ ಹೂವುಗಳು ಅರಳಿ ಕಂಗೊಳಿಸಿದವು. ಸರೋವರಗಳಲ್ಲಿದ್ದ ಕಮಲಗಳೂ ಅರಳಿದವು. ಮತ್ತೂ ಕಮಲಗಳಲ್ಲಿ ಮಕರಂದಪಾನಕ್ಕಾಗಿ ದುಂಬಿಗಳು ಬಂದು ಮುತ್ತಿದವು.

೩೪. ಆ ವನದಲ್ಲಿ ವಸಂತನು ಪ್ರವೇಶಿಸಿದ ಕೂಡಲೇ ಸುವಾಸನೆಯುಳ್ಳ ಮಲಯಪರ್ವತದ ಗಾಳಿಯು ಆಹ್ಲಾದಕರವಾಗಿ ಬೀಸಿತು. ಮನೋಹರವಾದ ಪುಷ್ಪಗಳ ಸುವಾಸನೆಯಿಂದ ಸ್ತ್ರೀಯರು ಮೋಹಗೊಂಡರು.

೩೫. ಆಗ ವಸಂತನೂ ಮನ್ಮಥನೂ ಸೇರಿ, ಮೊಸರನ್ನು ಕಡೆದು ಸಾರವಾದ ಬೆಣ್ಣೆಯನ್ನು ತೆಗೆಯುವಂತೆ, ತಪಸ್ವಿಗಳ ಮನಸ್ಸನ್ನೂ ಸಹ ವಿಕಾರಗೊಳಿಸಿದರು.

ಸಂಧ್ಯಾರ್ಧಚಂದ್ರಸಂಕಾಶಾಃ ಪಲಾಶಾಶ್ಚ ವಿರೇಜಿರೇ ।
ಕಾಮಾಸ್ತ್ರವತ್ಸುಮನಸಃ ಪ್ರಮೋದಾಯಾಭವಂಸ್ತದಾ ॥ ೩೬ ॥
ಬಭುಃ ಪಂಕಜಪುಷ್ಪಾಣಿ ಸರಸ್ಸು ಸಕಲಾಞ್ಜನಾನ್ ।
ಸಂಮೋಹಯಿತುಮುದ್ಯುಕ್ತಾ ಸುಮುಖೀವಾಂಬುದೇವತಾ ॥ ೩೭ ॥
ನಾಗಕೇಸರವೃಕ್ಷಾಶ್ಚ ಸ್ವರ್ಣವರ್ಣಪ್ರಸೂನಕೈಃ ।
ಬಭುರ್ಮದನಕೇತ್ವಾಭಾ ಮನೋಜ್ಞಾಃ ಶಂಕರಾಂತಿಕೇ ॥ ೩೮ ॥
ಚಂಪಕಾಸ್ತರವೋ ಹ್ಯೆಮಪುಷ್ಪತ್ವಂ ಪ್ರಕಟಂ ಮುಹುಃ ।
ಕುರ್ವಂತಃ ಪ್ರಚುರೈಃ ಪುಷ್ಪೈಃ ಸಮ್ಯಗ್ರೇಜುಸ್ತಥಾ ಸ್ಫುಟೈಃ ॥ ೩೯ ॥
ಪ್ರಫುಲ್ಲಪಾಟಲಾಪುಷ್ಪೈರ್ದಿಶಃ ಸ್ಯುಃ ಪಾಟಲಾಂಶವಃ ।
ಯಥಾ ತಥಾ ಪುಷ್ಪಿತಾಸ್ತೇ ಪಾಟಲಾಖ್ಯಾ ಮಹೀರುಹಾಃ ॥ ೪೦ ॥

---

೩೬. ಆಗ ಮುತ್ತುಗದ ಹೂವುಗಳು ಸಂಧ್ಯಾಕಾಲದ ಅರ್ಧಚಂದ್ರನಂತೆ ಪ್ರಕಾಶಿಸಿದವು. ಮತ್ತು ಅರಳಿ ಶೋಭಿಸುತ್ತಿರುವ ಪುಷ್ಪಗಳು ಮನ್ಮಥನ ಬಾಣಗಳೋ ಎಂಬಂತೆ ಜನಗಳಿಗೆ ಸಂತೋಷವನ್ನುಂಟು ಮಾಡಿದವು.

೩೭. ಸರೋವರಗಳಲ್ಲಿದ್ದ ಕಮಲಪುಷ್ಪಗಳು, ಜನಗಳನ್ನು ಮೋಹಗೊಳಿಸಲುದ್ಯುಕ್ತಳಾದ ಜಲದೇವತೆಯ ಸುಂದರಮುಖದಂತೆ ಪ್ರಕಾಶಿಸಿದವು.

೩೮. ಶಂಕರನಿರುವ ಆ ಸ್ಥಳದಲ್ಲಿ, ಚಿನ್ನದಂತೆ ಹೊಳೆಯುತ್ತಿರುವ ಪುಷ್ಪಗಳಿಂದ ಮನೋಹರವಾಗಿ ಕಂಗೊಳಿಸುವ ನಾಗಕೇಸರ ವೃಕ್ಷಗಳು ಮನ್ಮಥನ ಧ್ವಜಗಳಂತೆ ಪ್ರಕಾಶಿಸಿದವು.

೩೯. ಸಂಪಿಗೆ ಗಿಡಗಳು ಚಿನ್ನದಂತಿರುವ ಹೂವುಗಳನ್ನು ಬಿಟ್ಟು, ಚೆನ್ನಾಗಿ ಅರಳಿರುವ ಆ ಹೂವುಗಳಿಂದ ಕೂಡಿ ಮನೋಹರವಾಗಿ ಒಪ್ಪುತ್ತಿದ್ದವು.

೪೦. ಅರಳಿದ ಹೂವುಗಳಿಂದ ಶೋಭಿಸುತ್ತಿರುವ ಪಾದರಿ ವೃಕ್ಷಗಳು ತಮ್ಮ ಹೂವುಗಳ ಕಾಂತಿಯಿಂದ ದಿಕ್ಕುಗಳನ್ನು ಪಾಟಲವರ್ಣವುಳ್ಳವುಗಳನ್ನಾಗಿ ಮಾಡಿದವು.

ಲವಂಗವಲ್ಲೀಸುರಭಿಃ ಗಂಧೇನೋದ್ವಾಸ್ಯ ಮಾರುತಂ ।
ಸಂಮೋಹಯತಿ ಚೇತಾಂಸಿ ಭೃಶಂ ಕಾಮಿಜನೇ ಪುರಾ ॥ ೪೧ ॥

ವಾಸಂತೀವಾಸಿತಾಸ್ತತ್ರ ಬಲ್ವಜಾಃ ಕಿಲ ರೇಜಿರೇ ।
ತದ್ಗಂಧಲುಬ್ಧಭ್ರಮರಾ ರತಿಮಿಶ್ರಾ ಮನೋಹರಾಃ ॥ ೪೨ ॥

ಚಾರುಸಾವಕವರ್ಚಸ್ವಿಶಿಖಿರಾಶ್ಚೂತಶಾಖಿನಃ ।
ಬಭುರ್ಮದನಬಾಣೌಘಪರ್ಯಂಕವದನಾವೃತಾಃ ॥ ೪೩ ॥

ಅಂಭಾಂಸಿ ಮಲಹೀನಾನಿ ರೇಜುಃ ಫುಲ್ಲಕುಶೇಶಯೈಃ ।
ಮುನೀನಾಮಿವ ಚೇತಾಂಸಿ ಪ್ರವ್ಯಕ್ತಜ್ಯೋತಿರುದ್ಗಮಾತ್ ॥ ೪೪ ॥

ತುಷಾರಾಃ ಸೂರ್ಯರಶ್ಮೀನಾಂ ಸಂಗಮಾದಗಮನ್ ಕ್ಷಯಂ ।
ಮುಮುತ್ವಾನೀವ ವಿಜ್ಞಾನಶೀಲಾನಾಂ ಹೃದಯಾತ್ತದಾ ॥ ೪೫ ॥

---

೪೧. ಲವಂಗಲತೆಯ ಸುವಾಸನೆಯು ಗಾಳಿಯಲ್ಲಿ ಕಾಮುಕರ ಮನಸ್ಸನ್ನು ಮೋಹಗೊಳಿಸಿತು.

೪೨. ಅಲ್ಲಿ ಸಣ್ಣ ಹುಲ್ಲುಗಳು ತಮ್ಮ ಮೇಲೆ ಹಬ್ಬಿರುವ ಇರುವಂತಿಗೆ ಬಳ್ಳಿಯ ಹೂವುಗಳಿಂದ ಒಳ್ಳೆಯ ವಾಸನೆಯುಳ್ಳವುಗಳಾಗಿ, ಆ ವಾಸನೆಗಾಗಿ ಬಂದಿರುವ ಕಾಮಾಸಕ್ತವಾದ ಹೆಣ್ಣು ದುಂಬಿಗಳಿಂದ ಅತ್ಯಂತ ಮನೋಹರವಾಗಿ ಪ್ರಕಾಶಿಸಿದವು.

೪೩. ಪ್ರಕಾಶಮಾನವಾದ ಅಗ್ನಿಯ ಶಾಖೆಯಂತೆ ಕೆಂಪಾದ ಚಿಗುರುಗಳುಳ್ಳ ಮಾವಿನಮರಗಳು, ಮನ್ಮಥನ ಬಾಣಗಳಿಂದ ತುಂಬಿದ ಬತ್ತಳಿಕೆಗಳಂತೆ ಪ್ರಕಾಶಿಸಿದವು.

೪೪. ಕೊಳೆಯಿಲ್ಲದೆ ಶುದ್ಧವಾದ ಜಲಗಳು, ಪರಮಾತ್ಮಸಾಕ್ಷಾತ್ಕಾರ ರೂಪವಾದ ಪ್ರಕಾಶವೆಂಬ ಜ್ಞಾನದಿಂದ ಶುದ್ಧವಾದ ಮುನಿಗಳ ಮನಸ್ಸಿನಂತೆ ಆಗತಾನೇ ಅರಳಿದ ಕಮಲಗಳಿಂದ ಪ್ರಕಾಶಿಸಿದವು.

೪೫. ಜ್ಞಾನಿಗಳ ಹೃದಯದಿಂದ "ನನ್ನದು ತನ್ನದು" ಎಂಬ ಮಮತೆಯು ಹೋಗುವಂತೆ, ಸೂರ್ಯನ ರಶ್ಮಿಗಳ ತಾಪದಿಂದ ಹಿಮದ ತುಂತುರುಗಳು ನಾಶವನ್ನೈದಿದವು.

ನಿಃಶಂಕಾಃ ಕೋಕಿಲಾಃ ಶಬ್ದಂ ತನ್ವತೇ ಸ್ಮ ತದಾನ್ವಹಂ ।
ಪ್ರಾಣಿನ್ವ್ಯಥನಪುಷ್ಪೇಷು ಪುಷ್ಪಜ್ಯಾಶಬ್ದವದ್ಭೃಶಂ ॥ ೪೭ ॥

ಚುಕೂಜುರ್ಭ್ರಮರಾಸ್ತತ್ರ ವನಾಂತರ್ಗತಪುಷ್ಪಗಾಃ ।
ಕಾಂತಾಲೀಲಾಬುಭುಕ್ಷೋಸ್ತು ಸ್ಮರವ್ಯಾಘ್ರಸ್ಯ ಶಬ್ದವತ್ ॥ ೪೭ ॥

ಚಂದ್ರಸ್ತುಷಾರವದ್ಭಾನುರ್ನ ಚೈತಾಃ ಸಕಲಾಃ ।
ಕ್ರಮಾದ್ಬಭಾರ ಮೋಹಾಯ ಜನಾನಾಂ ಕುಶಲಂ ಭುವಿ ॥ ೪೮ ॥

ಪ್ರಸನ್ನಾಃ ಸಹ ಚಂದ್ರೇಣ ನಿಸ್ತುಷಾರಾಸ್ತದಾಽಭವನ್ ।
ವಿಭಾವರ್ಯಃ ಪ್ರಿಯೇಣೇವ ಕಾಮಿನ್ಯಃ ಸುಮನೋಹರಾಃ ॥ ೪೯ ॥

ತಸ್ಮಿನ್ಕಾಲೇ ಮಹಾದೇವಃ ಸಹ ಸತ್ಯಾ ಧರೋತ್ತಮೇ ।
ರೇಮೇ ಸ ಸುಚಿರಂ ಥನ್ನೋ ನಿಕುಂಜೇಷು ನದೀಷು ಚ ॥ ೫೦ ॥

---

೪೭. ಪ್ರಾಣಿಗಳನ್ನು ಹಿಂಸಿಸುವ ಮನ್ಮಥನ ಪುಷ್ಪಬಾಣದ ಧನುಷ್ಟಂಕಾರಶಬ್ದದಂತೆ, ಕೋಗಿಲೆಗಳು ಮದವನ್ನುಂಟುಮಾಡುವ ಪಂಚಮ ಸ್ವರವನ್ನು ಚನ್ನಾಗಿ ಹಾಡಿದವು.

೪೭. ಮಕರಂದಪಾನಕ್ಕಾಗಿ ವನ್ಯ ಪುಷ್ಪಗಳನ್ನು ಮುತ್ತಿರುವ ದುಂಬಿಗಳು, ಕಾಮಿನಿಯರ ವಿಹಾರವನ್ನು ತಿನ್ನಲಿಚ್ಛಿಸುವ ಮನ್ಮಥನೆಂಬ ಹುಲಿಯ ಗರ್ಜನೆಯಂತೆ ಝೀಂಕಾರ ಶಬ್ದವನ್ನು ಮಾಡುತ್ತಲಿದ್ದವು.

೪೮. ಆಗ ಶೀತಲವಾದ ಕಿರಣಗಳಿಂದ ಯುಕ್ತನಾದ ಚಂದ್ರನು ತನ್ನ ಎಲ್ಲ ಕಲೆಗಳನ್ನು ದಿನದಿನವೂ ಕ್ರಮವಾಗಿ ಧರಿಸಲಿಲ್ಲ. ಆದರೆ ಜನಗಳನ್ನು ಮೋಹಗೊಳಿಸುವುದಕ್ಕಾಗಿ ನಿತ್ಯವೂ ಎಲ್ಲ ಕಲೆಗಳಿಂದ ಕೂಡಿರುತ್ತಿದ್ದನು.

೪೯. ಕಾಮಿನಿಯರು ತಮ್ಮ ಪ್ರಿಯತಮರೊಂದಿಗೆ ಮನೋಹರವಾಗಿ ಪ್ರಕಾಶಿಸುವಂತೆ, ಹಿಮವಿಲ್ಲದೆ ನಿರ್ಮಲವಾದ ರಾತ್ರಿಗಳು, ಚಂದ್ರನೊಂದಿಗೆ ಕೂಡಿ ಚನ್ನಾಗಿ ಪ್ರಕಾಶಿಸಿದವು.

೫೦. ಇಂತಹ ವಸಂತಕಾಲದಲ್ಲಿ ಆ ಶಂಕರನು ಸತೀದೇವಿಯೊಡನೆ, ಆ ಶ್ರೇಷ್ಠವಾದ ಹಿಮವತ್ಪರ್ವತದ ಲತಾಗೃಹಗಳಲ್ಲಿಯೂ ನದಿಗಳಲ್ಲಿಯೂ ಬಹಳ ಕಾಲ ಕ್ರೀಡಿಸಿದನು.

ಸಾಪಿ ತೇನ ಸಮಂ ರೇಮೇ ತಥಾ ದಾಕ್ಷಾಯಣೀ ಶುಭಾ ।
ಯಥಾ ಹರಃ ಕ್ಷಣಮಪಿ ಶಾಂತಿಂ ನಾಪ ತಯಾ ವಿನಾ ॥ ೫೧ ॥

ಸಂಭೋಗವಿಷಯೇ ದೇವೀ ಸತೀ ತಸ್ಯ ಮನಃಪ್ರಿಯಾ ।
ವಿಶತೀವ ರಹಸ್ಯಾಂಗೇ ಪಾಯಯಂತೀವ ತದ್ರಸಂ ॥ ೫೨ ॥

ತಸ್ಯಾಃ ಕುಸುಮಮಾಲಾಭಿರ್ಭೂಷಯನ್ಸಕಲಾಂ ತನುಂ ।
ಸ್ವಹಸ್ತರಚಿತಾಭಿಶ್ಚ ವರಂ ನರ್ಮ ಚಕಾರ ಸಃ ॥ ೫೩ ॥

ಆಲಾಪೈರ್ವೀಕ್ಷಣೈರ್ಹಾಸ್ಯೈಸ್ತಥಾ ಸಂಭಾಷಣೈರ್ಹರಃ ।
ತಸ್ಯಾಂ ವಿವೇಶ ಗಿರಿಶಃ ಸಂಯಮೀವಾತ್ಮಸಂವಿದಂ ॥ ೫೪ ॥

ಸತಿಯಿಲ್ಲದೆ ಒಂದು ಕ್ಷಣಕಾಲವೂ ಮನಸ್ಸಮಾಧಾನವಿಲ್ಲದೆ ಇರುವ ರೀತಿಯಲ್ಲಿ, ಮಂಗಳಸ್ವರೂಪಳಾದ ಆ ಸತಿಯೂ ಶಂಕರನೊಡನೆ ವಿಹರಿಸಿದಳು.

೫೨. ಸುರತಸುಖದ ವಿಷಯದಲ್ಲಿ ಆ ಶಂಕರನ ಹೃದಯಪ್ರಿಯೆಯಾದ ಸತೀದೇವಿಯು ಅವನ ಶರೀರವನ್ನೇ ಪ್ರವೇಶಿಸುವವಳಂತೆಯೂ, ಆ ಸುಖದ ರಸವನ್ನು ಅವನಿಗೆ ಪಾನಮಾಡಿಸುವವಳಂತೆಯೂ ವಿಹರಿಸಿದಳು.

೫೩. ಆ ಶಂಕರನೂ ಸಹ ತನ್ನ ಕೈಯಿಂದಲೇ ಮಾಡಿದ ಹೂವಿನ ಹಾರಗಳಿಂದ ಆ ಸತೀದೇವಿಯ ಎಲ್ಲ ಅಂಗಗಳನ್ನೂ ಅಲಂಕರಿಸಿ, ಉತ್ತಮವಾದ ಕಾಮವಿಲಾಸವನ್ನು ಮಾಡಿದನು.

೫೪. ಪರಸ್ಪರ ಸಂಭಾಷಣೆಗಳಿಂದಲೂ, ನೋಟಗಳಿಂದಲೂ, ಹಾಸ್ಯಾಲಾಪಗಳಿಂದಲೂ, ಆ ಶಂಕರನು, ಜ್ಞಾನಿಯು ಜ್ಞಾನಸ್ವರೂಪನಾದ ಆತ್ಮನೊಡನೆ ಸೇರಿಹೋಗುವಂತೆ, (ಅಥವಾ ಸಮಾಧಿಯಲ್ಲಿರುವ ಯೋಗಿಯು ಧ್ಯೇಯವಸ್ತುವಿನೊಡನೆ ಸೇರಿಹೋಗುವಂತೆ) ಆ ಸತಿಯಲ್ಲಿ ಸೇರಿಹೋದನು.

ತದ್ವಕ್ತ್ರಚಂದ್ರಪೀಯೂಷಪಾನಸ್ಥಿರತನುರ್ಹರಃ ।
ನಾವಾಪ ಶೈಷಿಕೀಂ ತನ್ವೀಮವಸ್ಥಾಂ ಸ ಕದಾಚನ ॥ ೫೫ ॥
ತದ್ವಕ್ತ್ರಾಂಬುಜವಾಸೇನ ತತ್ಸೌಂದರ್ಯೈರ್ಹೃತೇನ ಮರ್ಮಭಿಃ ॥ ೫೬ ॥
ಗುಣೈರಿವ ಮಹಾದಂತೀ ಬದ್ಧೋ ನಾನ್ಯದ್ವಿಚೇಷ್ಟತೇ ॥ ೫೭ ॥
ಇತಿ ಹಿಮಗಿರಿಕುಂಜೇ ಪ್ರಸ್ಥಭಾಗೇ ದರೀಷು ।
ಪ್ರತಿದಿನಮಭಿರೇಮೇ ದಕ್ಷಪುತ್ರ್ಯಾ ಮಹೇಶಃ ॥
ಕ್ರತುಭುಜಪರಿಮಾಣೈಃ ಕ್ರೀಡತಸ್ತಸ್ಯ ಜಾತಾ ।
ನವ ದಶ ಚ ಮುನೀಂದ್ರಾ ವತ್ಸರಾಃ ಪಂಚ ಚಾನ್ಯೇ ॥ ೫೯ ॥

॥ ಇತಿ ಶ್ರೀಕಾಲಿಕಾಪುರಾಣೇ ಚತುರ್ದಶೋಽಧ್ಯಾಯಃ ॥

---

೫೫. ಆ ಸತಿಯ ಮುಖವೆಂಬ ಚಂದ್ರನ ಅಮೃತವನ್ನು ಪಾನಮಾಡಿದುದರಿಂದ ಸ್ಥಿರವಾದ ಶರೀರವುಳ್ಳ ಆ ಶಂಕರನು, ತನ್ನ ಶರೀರದಲ್ಲಿ ಕೃಶತಾವಸ್ಥೆಯನ್ನು ಎಂದೆಂದಿಗೂ ಹೊಂದಲಿಲ್ಲವು.

೫೬–೫೭. ಆ ಸತಿಯ ಮುಖಕಮಲದ ಸುವಾಸನೆಯಿಂದಲೂ, ಅವಳ ಸೌಂದರ್ಯದಿಂದಲೂ, ಹಾವಭಾವವಿಲಾಸಗಳಿಂದಲೂ ಆಕರ್ಷಿಸಲ್ಪಟ್ಟ ಆ ಶಂಕರನು, ಸರಪಳಿಯಿಂದ ಕಟ್ಟಲ್ಪಟ್ಟ ಆನೆಯು ಯಾವ ರೀತಿ ಚೇಷ್ಟೆಯನ್ನು ಮಾಡಲಾರದೋ ಅದರಂತೆ, ಇನ್ನೇನನ್ನೂ ಮಾಡಲಾರದವನಾದನು.

೫೯. ಹೀಗೆ ಆ ಶಂಕರನು ಹಿಮವತ್ಪರ್ವತದ ಲತಾಗೃಹಗಳಲ್ಲಿಯೂ, ತಪ್ಪಲುಗಳಲ್ಲಿಯೂ ಗುಹೆಗಳಲ್ಲಿಯೂ, ಸತೀದೇವಿಯೊಡನೆ ಪ್ರತಿದಿನವೂ ಕ್ರೀಡಿಸುತ್ತಿದ್ದನು. ಎಲೈ ಮುನಿಶ್ರೇಷ್ಠರೇ, ಈ ರೀತಿ ಅವನು ಕ್ರೀಡಿಸುತ್ತಿರಲು ದೇವಮಾನರೀತಿಯಿಂದ ಇಪ್ಪತ್ತು ನಾಲ್ಕು ವರ್ಷಗಳು ಕಳೆದು ಹೋದವು.

ಇಲ್ಲಿಗೆ ಶ್ರೀಕಾಲಿಕಾಪುರಾಣದಲ್ಲಿ ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ ಅಥ ಶ್ರೀಕಾಲಿಕಾಪುರಾಣೇ ಪಂಚದಶೋಧ್ಯಾಯಃ ॥

ಹದಿನೈದನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ಕದಾಚಿದಥ ದಕ್ಷಸ್ಯ ತನಯಾ ಜಲದಾಗಮೇ ।
ಜಗಾದಾದ್ರೇಃ ಶಿಖರಿಣಃ ಪ್ರಸ್ಥಸ್ಥಂ ವೃಷಭಧ್ವಜಂ ॥ ೧ ॥

॥ ಸತ್ಯುವಾಚ ॥

ಘನಾಗಮೋಽಯಂ ಸಂಪ್ರಾಪ್ತಃ ಕಾಲಃ ಪರಮದುಃಸಹಃ ।
ಅನೇಕವರ್ಣಮೇಘೌಘಸ್ಥಗಿತಾಂಬರದಿಙ್ಮುಖಃ ॥ ೨ ॥

---

೧. ಮಾರ್ಕಂಡೇಯ ಮುನಿಯು ಹೇಳಲುಪಕ್ರಮಿಸಿದನು:—ಎಲೈ ಮುನಿಗಳೇ, ಮಳೆಗಾಲದಲ್ಲಿ ಒಂದಾನೊಂದು ದಿವಸ ಸತೀದೇವಿಯು, ಹಿಮವತ್ಪರ್ವತದ ತಪ್ಪಲಿನಲ್ಲಿ ಕುಳಿತಿರುವ ಶಂಕರನನ್ನು ಕುರಿತು ಹೀಗೆ ಹೇಳಿದಳು.

೨. ಓ ಶಂಕರನೇ, ಈಗ ಸಹಿಸಲಸಾಧ್ಯವಾದ ಮಳೆಗಾಲವು ಪ್ರಾಪ್ತವಾಗಿರುವುದು; ಆಕಾಶವೂ, ದಶದಿಕ್ಕುಗಳೂ ಸಹ ವಿದ್ಯುತ್ತಿನಿಂದ ಕೂಡಿ ವಿಚಿತ್ರ ವರ್ಣಗಳುಳ್ಳ ಮೇಘಸಮೂಹಗಳಿಂದ ಆವರಿಸಲ್ಪಟ್ಟಿರುವುವು.

ವಿವಾಂತಿ ವಾತಾ ಹೃದಯಂ ದಾರಯಂತೋऽತಿವೇಗಿನಃ ।
ಕದಂಬರಜಸಾ ಧೌತಪಾಥೋ ಲೇಶಾದಿಕರ್ಷಿಣಃ ॥ ೩ ॥

ಮೇಘಾನಾಂ ಗರ್ಜಿತೈರುಚ್ಚೈರ್ಧಾರಾಸಾರಂ ವಿಮುಂಚತಾಂ ।
ವಿದ್ಯುತ್ಪತಾಕಿನಾಂ ತೀವ್ರೈಃ ಕ್ಷುಬ್ಧಂ ಕಸ್ಯ ನ ಮಾನಸಂ ॥ ೪ ॥

ನ ಸೂರ್ಯೋ ದೃಶ್ಯತೇ ನಾಪಿ ಮೇಘಚ್ಛನ್ನೋ ನಿಶಾಪತಿಃ ।
ದಿವಾಪಿ ರಾತ್ರಿವದ್ಭಾತಿ ವಿರಹಿವ್ಯತ್ಯಯಾಕರಂ ॥ ೫ ॥

ಮೇಘಾ ನೈಕತ್ರ ತಿಷ್ಠಂತೋ ಧ್ವನಂತಃ ಪವನೇರಿತಾಃ ।
ಪತಂತ ಇವ ಲೋಕಾನಾಂ ದೃಶ್ಯಂತೇ ಮೂರ್ಧ್ನಿ ಶಂಕರ ॥ ೬ ॥

---

೩. ಕದಂಬಪುಷ್ಪಗಳ ರಜಃಕಣ (ಧೂಳಿ) ಗಳಿಂದ ಮಿಶ್ರವಾದ ಮಳೆಯ ತುಂತುರುಗಳುಳ್ಳ ಶೀತವಾದ ಗಾಳಿಗಳು ಹೃದಯವನ್ನು ಸೀಳುವಂತೆ ತುಂಬ ವೇಗದಿಂದ ಬೀಸುತ್ತಲಿವೆ.

೪. ವಿದ್ಯುತ್ತೆಂಬ (ಮಿಂಚು) ಧ್ವಜಗಳಿಂದ ಪ್ರಕಾಶಿಸುವ ಈ ಮೇಘಗಳು ಎಡಬಿಡದೆ ಸಂತತವಾಗಿ ಮಳೆಯನ್ನು ಸುರಿಸುತ್ತಾ, ಘೋರವಾದ ಗರ್ಜನೆ ಮಾಡುತ್ತಿರುವುದನ್ನು ನೋಡಿ ಯಾರ ಮನಸ್ಸು ತಾನೇ ಕ್ಷೋಭೆಗೊಳ್ಳುವುದಿಲ್ಲ?

೫. ಮೇಘದಿಂದ ಮುಚ್ಚಲ್ಪಟ್ಟು ಸೂರ್ಯನಾಗಲೀ ಚಂದ್ರನಾಗಲೀ ಕಾಣಿಸುತ್ತಿಲ್ಲ. ಹಗಲೂ ಸಹ ರಾತ್ರಿಯಂತೆ ತೋರುತ್ತಿದೆ. ಈ ಕಾಲವು ವಿರಹಿಗಳಿಗೆ ದುಃಖವನ್ನುಂಟುಮಾಡುವುದು.

೬. ಓ ಶಂಕರನೇ, ಗಾಳಿಯಿಂದ ಹೊಡೆಯಲ್ಪಟ್ಟು ಈ ಮೇಘಗಳು ಒಂದು ಕಡೆಯೂ ನಿಲ್ಲದೆ, ಗರ್ಜಿಸುತ್ತಾ ಜನಗಳ ತಲೆಯ ಮೇಲೆ ಬೀಳುವವೋ ಎಂಬಂತೆ ತೋರುತ್ತವೆ.

ವಾತಾಹತಾ ಮಹಾವೃಕ್ಷಾ ನೃತ್ಯಂತ ಇವ ಚಾಂಬರೇ ।
ದೃಶ್ಯಂತೇ ಹರ ಭೀರೂಣಾಂ ತ್ರಾಸಕಾಃ ಕಾಮುಕೇಪ್ಸಿತಾಃ ॥ ೭ ॥

ಸ್ನಿಗ್ಧನೀಲಾಂಜನಶ್ಯಾಮಮುದಿರೌಘಸ್ಯ ಪೃಷ್ಠತಃ ।
ಬಲಾಕರಾಜೀ ಭಾತ್ಯುಚ್ಚೈರ್ಯಮುನಾಘುಷ್ಟಫೇನವತ್ ॥ ೮ ॥

ಕ್ಷಣಂ ಕ್ಷಣಂ ಚಂಚಲೇಯಂ ದೃಶ್ಯತೇ ಕಾಲಿಕಾಗತಾ ।
ಅಂಬುಧಾವಿವ ಸಂದೀಪ್ತಃ ಪಾವಕೋ ವಡವಾಮುಖಃ ॥ ೯ ॥

ಪ್ರರೋಹಂತಿ ಹಿ ಸಸ್ಯಾನಿ ಮುಂದಿರಪ್ರಾಂಗಣೇಷ್ವಪಿ ।
ಕಿಮನ್ಯತ್ರ ವಿರೂಪಾಕ್ಷ ಸಸ್ಯೋದ್ಭೂತಿಂ ವದಾಮ್ಯಹಂ ॥ ೧೦ ॥

---

೭. ಓ ಶಂಕರನೇ, ದೊಡ್ಡ ದೊಡ್ಡ ವೃಕ್ಷಗಳು, ಗಾಳಿಯಿಂದ ಹೊಡೆಯಲ್ಪಟ್ಟು, ನೋಡುವ ಜನರಿಗೆ ಭೀತಿಯನ್ನುಂಟುಮಾಡುತ್ತಲೂ, ಕಾಮುಕರಿಗೆ ಸಂತೋಷವನ್ನುಂಟುಮಾಡುತ್ತಲೂ, ಆಕಾಶದಲ್ಲಿ ನರ್ತನಮಾಡುವಂತೆ ಕಾಣುತ್ತಲಿವೆ.

೮. ಮೃದುವಾದ ಕಾಡಿಗೆಯಂತೆ ಕಪ್ಪಾಗಿರುವ ಮೇಘಪಂಕ್ತಿಗಳ ಹಿಂಬದಿಯಲ್ಲಿರುವ ಬೆಳ್ಳಕ್ಕಿಗಳು, ಯಮುನಾನದಿಯಲ್ಲಿ ಪ್ರವಾಹದಿಂದ ಒಂದೆಡೆಯಲ್ಲಿ ಒಟ್ಟಾಗಿ ಸೇರಿಸಲ್ಪಟ್ಟಿರುವ ನೊರೆಯಂತೆ ಕಾಣುತ್ತಿವೆ.

೯. ನೀಲವಾದ ಮೇಘಗಳಲ್ಲಿ ಒಂದೊಂದು ಕ್ಷಣಕಾಲ ಮಾತ್ರ ಹೊಳೆಯುತ್ತಿರುವ ಮಿಂಚು, ಸಮುದ್ರದಲ್ಲಿ ಉರಿಯುವ ವಡಬಾಗ್ನಿಯಂತೆ ತೋರುತ್ತಿದೆ.

೧೦. ಎಲೈ ಶಂಕರನೇ, ಈ ಮಳೆಗಾಲದಲ್ಲಿ ಮನೆಯ ಅಂಗಳದಲ್ಲಿಯೇ ಹುಲ್ಲು ಮೊದಲಾದ ಸಸ್ಯಗಳು ಹುಟ್ಟಿ ಬೆಳೆಯುತ್ತಿರುವುವೆಂದ ಮೇಲೆ ಇತರ ಸ್ಥಳಗಳಲ್ಲಿ ಬೆಳೆಯುವುವೆಂದು ಹೇಳಬೇಕಾದುದೇನು?

ಶ್ಯಾಮಲೈ ರಾಜತೈಃ ಕಕ್ಷೈರ್ವಿಶದೋಽಯಂ ಹಿಮಾಚಲಃ ।
ಮಂದರಾಶ್ರಯವೃಕ್ಷಾಘ ಪತೈರ್ದುಗ್ಧಾಂಬುಧಿರ್ಯಥಾ ॥ ೧೧ ॥

ಕುಸುಮಶ್ರೀಶ್ಚ ಕುಟಜಂ ಭೇಜೇ ಸಾಸ್ಯಾಥ ಕಿಂಶುಕಾನ್ ।
ಉಚ್ಚಾವಚಾನ್ಯಲೌ ಲಕ್ಷ್ಮೀರ್ಯಥಾ ಸಂತ್ಯಜ್ಯ ಸಜ್ಜನಾನ್ ॥ ೧೨ ॥

ಮಯೂರಾಃ ಸ್ತನಯಿತ್ನೂನಾಂ ಶಬ್ದೇನ ಹೃಷಿತಾ ಮುಹುಃ ।
ಕೇಕಾಯಂತೇ ಪ್ರತಿವನೇ ಸತತಂ ವೃಷ್ಟಿಸೂಚಕಾಃ ॥ ೧೩ ॥

ಮೇಘೋನ್ಮುಖಾನಾಂ ಮಧುರಶ್ಚಾತಕಾನಾಂ ಸ್ವನೋ ಹರ ।
ಶ್ರೂಯತಾಮತಿಮತ್ತಾನಾಂ ವೃಷ್ಟಿಸನ್ನಿಧಿಸೂಚಕಃ ॥ ೧೪ ॥

---

೧೧. ಸಮುದ್ರವನ್ನು ಕಡೆಯುವ ಕಾಲದಲ್ಲಿ ಮಂದರ ಪರ್ವತದಲ್ಲಿನ ಅನೇಕ ವೃಕ್ಷಗಳ ಎಲೆಗಳು ಕ್ಷೀರಸಮುದ್ರದಲ್ಲಿ ಬಿದ್ದು ಯಾವರೀತಿ ಶೋಭಿಸಿದವೋ ಅದರಂತೆ ಕಪ್ಪಗೂ ಬೆಳ್ಳಗೂ ಇರುವ ವೃಕ್ಷಲತಾಗುಲ್ಮಗಳ ಸಮೂಹದಿಂದ ಈ ಹಿಮಾಲಯಪರ್ವತವು ಶೋಭಿಸುತ್ತಿದೆ.

೧೨. ಕಲಿಯುಗದಲ್ಲಿ ಲಕ್ಷ್ಮಿಯು (ಐಶ್ವರ್ಯವು) ಸಜ್ಜನರನ್ನು ಬಿಟ್ಟು ನೀಚರನ್ನು ಸೇರುವಂತೆ ಗಿರಿಮಲ್ಲಿಗೆ ಲತೆಗಳಲ್ಲಿದ್ದ ಪುಷ್ಪಸಂಪತ್ತು ಆಮೇಲೆ ಮುತ್ತುಗದ ಮರಗಳನ್ನು ಸೇರಿತು. ಎಂದರೆ ಗಿರಿಮಲ್ಲಿಗೆ ಲತೆಗಳಲ್ಲಿ ಹೂಬಿಡುವ ಕಾಲವು ಕಳೆದನಂತರ ಮುತ್ತುಗದ ಗಿಡಗಳು ಹೂಬಿಡಲು ಪ್ರಾರಂಭಿಸಿದವು.

೧೩. ಮೇಘಗರ್ಜನೆಯನ್ನು ಕೇಳಿ ನವಿಲುಗಳು ಹರ್ಷಗೊಂಡು, ಮಳೆಯನ್ನು ಸೂಚಿಸುವ ತಮ್ಮ ಕೇಕಾ ಧ್ವನಿಗಳನ್ನು ವನಗಳಲ್ಲೆಲ್ಲಾ ಮಾಡುತ್ತಲಿವೆ.

೧೪. ಎಲೈ ಶಂಕರನೇ, ಮುಖವನ್ನೆತ್ತಿ ಮೇಘವನ್ನು ನೋಡಿ, ಸಂತೋಷದಿಂದ ಕೊಬ್ಬಿ, ಮಳೆಯ ಬರುವಿಕೆಯನ್ನು ಸೂಚಿಸುವ ಚಾತಕ ಪಕ್ಷಿಗಳ ಮಧುರವಾದ ಧ್ವನಿಯನ್ನು ಕೇಳುವವನಾಗು.

ಗಗನೇ ಶಕ್ರಚಾಪೇನ ಕೃತಂ ಸಾಂಪ್ರತಮಾಸ್ಪದಂ ।
ಧಾರಾಸಾರಶರೈಸ್ತಾಪಂ ಭೇತ್ತುಂ ಪ್ರತಿ ಯಥೋದ್ಯತಃ ॥ ೧೫ ॥

ಮೇಘಾನಾಂ ಪಶ್ಯ ಭರ್ಗೇಹ ದುರ್ನಯಂ ಕರಕೋತ್ಕರೈಃ ।
ಯತ್ತಾಡಯಂತ್ಯನುಗತಂ ಮಯೂರಂ ಚಾತಕಂ ತಥಾ ॥ ೧೬ ॥

ಶಿಖಿಸಾರಂಗಯೋರ್ದೃಷ್ಟ್ವಾ ವಿತ್ರಾದಪಿ ಪರಾಭವಂ ।
ಹಂಸಾ ಗಚ್ಛಂತಿ ಗಿರಿಶ ವಿದೂರಮಪಿ ಮಾನಸಂ ॥ ೧೭ ॥

ಏತಸ್ಮಿನ್ವಿಷಮೇ ಕಾಲೇ ನೀಡಂ ಕಾಕಾಶ್ಚ ಕೋರಕಾಃ ।
ಕುರ್ವಂತಿ ತ್ವಂ ವಿನಾ ಗೇಹಾತ್ಕಥಂ ಶಾಂತಿಮವಾಪ್ಸ್ಯಸಿ ॥ ೧೮ ॥

ಮಹತೀ ಬಾಧತೇ ಭೀತಿರ್ಮಾಂ ಮೇಘೋತ್ಥಾ ಪಿನಾಕಧೃಕ್ ।
ಯತಸ್ವ ತಸ್ಮಾದ್ವಾಸಾಯ ಮಾ ಚಿರಂ ವಚನಾನ್ಮಮ ॥ ೧೯ ॥

---

೧೫. ಸಂತತವಾದ ಜಡಿಮಳೆಯೆಂಬ ಬಾಣಗಳಿಂದ ಬೇಸಿಗೆಯ ಬೇಗೆಯನ್ನು ನಾಶಮಾಡಲೋಸುಗವೋ ಎಂಬಂತೆ ಆಕಾಶದಲ್ಲಿ ಕಾಮನ ಬಿಲ್ಲು ಮೂಡಿರುವುದು.

೧೬. ಓ ಶಂಕರನೇ, ಈ ಮೇಘಗಳ ಅನ್ಯಾಯವಾದ ನಡತೆಯನ್ನು ನೋಡು. ಈ ಮೇಘಗಳು ಆನೆಕಲ್ಲುಗಳ ವೃಷ್ಟಿಯಿಂದ ತಮ್ಮನ್ನೇ ಅನುಸರಿಸುತ್ತಿರುವ ನವಿಲನ್ನೂ ಜಾತಕಪಕ್ಷಿಯನ್ನೂ ಹೊಡೆಯುತ್ತಲಿವೆ.

೧೭. ಓ ಶಂಕರನೇ, ನವಿಲು ಮತ್ತು ಜಿಂಕೆಗಳಿಗೆ ಸ್ನೇಹಿತನಾದ ಮೇಘವು ಮಾಡುತ್ತಿರುವ ಈ ಅಪಕಾರವನ್ನು ನೋಡಿ, ಹಂಸಗಳು ದೂರವನ್ನೂ ಲೆಕ್ಕಿಸದೆ ಮಾನಸ ಸರೋವರಕ್ಕೆ ಹೊರಟುಹೋಗುತ್ತಲಿವೆ.

೧೮. ಇಂತಹ ಕಷ್ಟಕರವಾದ ಈ ಮಳೆಗಾಲದಲ್ಲಿ ವಾಸಮಾಡುವುದಕ್ಕೆ ಕಾಗೆಗಳೂ, ಚಕೋರ ಪಕ್ಷಿಗಳೂ ಗೂಡುಗಳನ್ನು ಕಟ್ಟುತ್ತಲಿವೆ. ಓ ಶಂಕರನೇ, ಈಗ ಮನೆಯಿಲ್ಲದೇ ನೀನು ಸುಖವನ್ನು ಹೇಗೆ ಹೊಂದುತ್ತೀಯೆ?

೧೯. ಪಿನಾಕಧಾರಿಯಾದ ಓ ಶಂಕರನೇ, ಈ ಮೇಘಗಳ ಆಡಂಬರದಿಂದ ನನಗೆ ತುಂಬ ಹೆದರಿಕೆಯಾಗುತ್ತಲಿದೆ. ಆದುದರಿಂದ ನನ್ನ ಮಾತನ್ನು ಲಾಲಿಸಿ ಜಾಗ್ರತೆಯಾಗಿ ವಾಸಸ್ಥಾನಕ್ಕಾಗಿ ಯತ್ನಿಸು.

ಕೈಲಾಸೇ ವಾ ಹಿಮಾದ್ರೌ ವಾ ಮಹಾಕೋಷ್ಯಾಮಥ ಕ್ಷಿತೌ ।
ತವೋಪಯೋಗ್ಯಂ ತ್ವಂ ವಾಸಂ ಕುರುಷ್ವ ವೃಷಭಧ್ವಜ ॥ ೨೦ ॥
ಏವಮುಕ್ತಸ್ತದಾ ಶಂಭುರ್ದಾಕ್ಷಾಯಣ್ಯಾ ತಯಾ ಸಕೃತ್ ।
ಈಷಜ್ಜಹಾಸ ಶೀರ್ಷಸ್ಥಚಂದ್ರರಶ್ಮಿಸಿತಾನನಃ ॥ ೨೧ ॥
ಅಥೋವಾಚ ಸತೀಂ ದೇವೀಂ ಸ್ಮಿತಭಿನ್ನೋಷ್ಠಸಂಪುಟಃ ।
ಮಹಾತ್ಮಾ ಸರ್ವತತ್ತ್ವಜ್ಞಸ್ತೋಷಯನ್ ಪರಮೇಶ್ವರೀಂ ॥ ೨೨ ॥

॥ ಈಶ್ವರ ಉವಾಚ ॥

ಯತ್ರ ಪ್ರೀತ್ಯೈ ಮಯಾ ಕಾರ್ಯೋ ವಾಸಸ್ತವ ಮನೋಹರೇ ।
ಮೇಘಾಸ್ತತ್ರ ನ ಗಂತಾರಃ ಕದಾಚಿದಪಿ ಮತ್ಪ್ರಿಯೇ ॥ ೨೩ ॥

---

೨೦. ಎಲೈ ಶಂಕರನೇ, ಕೈಲಾಸಪರ್ವತದಲ್ಲಿಯಾಗಲೀ, ಹಿಮಾಲಯದಲ್ಲಿಯಾಗಲೀ, ಮಹಾಕೋಷಿ ಎಂಬ ಜಲಪಾತದ ಪ್ರದೇಶದಲ್ಲಾಗಲೀ ಅಥವಾ ಭೂಲೋಕದಲ್ಲಾಗಲೀ, ನಿನಗೂ ನನಗೂ ಇರುವುದಕ್ಕೆ ಯೋಗ್ಯವಾದ ಒಂದು ವಾಸಗೃಹವನ್ನು ಕಲ್ಪಿಸು.

೨೧. ಹೀಗೆ ಆ ಸತಿಯು ನುಡಿಯಲು, ಶಂಕರನು ತನ್ನ ಜಟೆಯಲ್ಲಿರುವ ಚಂದ್ರನ ರಶ್ಮಿಗಳ ಕಾಂತಿಯಿಂದ ಪ್ರಕಾಶಮಾನವಾದ ಮುಖವುಳ್ಳವನಾಗಿ ಮಂದಹಾಸದಿಂದ ಸಕ್ಕನು.

೨೨. ಬಳಿಕ ಮಹಾಮಹಿಮನೂ ಎಲ್ಲ ತತ್ತ್ವಗಳನ್ನೂ ತಿಳಿದವನೂ ಆದ ಆ ಶಂಕರನು ಮಂದಹಾಸವನ್ನು ಸೂಸುತ್ತಾ, ಸತೀದೇವಿಯನ್ನು ಸಂತೋಷಗೊಳಿಸಲು ಹೀಗೆ ಹೇಳಿದನು.

೨೩. ಈಶ್ವರನು ಹೇಳಿದನು:—ಎಲೈ ಪ್ರಿಯಳೇ, ನಿನಗೆ ಸುಖವಾಗುವುದಕ್ಕಾಗಿ, ಮೇಘಗಳು ಯಾವಾಗಲೂ ಎಲ್ಲಿಗೆ ಹೋಗಲಾರವೋ ಅಂತಹ ಸ್ಥಳದಲ್ಲಿ ವಾಸಗೃಹವನ್ನು ಕಲ್ಪಿಸಬೇಕು.

ಮೇಘಾ ನಿತಂಬಪರ್ಯಂತಂ ಸಂಚರಂತಿ ಮಹೀಭೃತಃ ।
ಸದಾ ಪ್ರಾಲೇಯಧಾಮ್ನಸ್ತು ವರ್ಷಾಸ್ವಪಿ ಮನೋಹರೇ ॥ ೨೪ ॥

ಕೈಲಾಸಸ್ಯ ತಥಾ ದೇವಿ ಯಾವದಾಮೇಖಲಂ ಘನಾಃ ।
ಸಂಚರಂತಿ ನ ಗಚ್ಛಂತಿ ತಸ್ಮಾದೂರ್ಧ್ವಂ ಕದಾಚನ ॥ ೨೫ ॥

ಸುಮೇರೋರ್ವಾರಿಧೇರೂರ್ಧ್ವಂ ನ ಗಚ್ಛಂತಿ ಬಲಾಹಕಾಃ ।
ಜಂಬೂಮೂಲಂ ಸಮಾಸಾದ್ಯ ಪುಷ್ಕರಾವರ್ತಕಾದಯಃ ॥ ೨೬ ॥

ಏತೇಷು ಚ ಗಿರೀಂದ್ರೇಷು ಯಸ್ಯೋಪರಿ ತವೇಹತೇ ।
ಮನಃ ಪ್ರಿಯೇ ನಿವಾಸಾಯ ತಮಾಚಕ್ಷ್ವ ದ್ರುತಂ ಮಯಿ ॥ ೨೭ ॥

---

೨೪. ಎಲೌ ಮನೋಹರೆಯೇ, ಈ ಮೇಘಗಳು ಯಾವಾಗಲೂ ಎಂದರೆ, ಮಳೆಗಾಲದಲ್ಲಿ ಹಿಮಾಲಯಪರ್ವತದ ಮಧ್ಯಭಾಗದವರೆಗೆ ಮಾತ್ರ ಸಂಚರಿಸುತ್ತವೆ. ಅದಕ್ಕೆ ಮೇಲ್ಪಟ್ಟು ಅವು ಹೋಗಲಾರವು.

೨೫. ಎಲೈದೇವಿಯೇ, ಅದರಂತೆಯೇ ಕೈಲಾಸಗಿರಿಯ ಮಧ್ಯದ ವರೆಗೆ ಮಾತ್ರ ಮೇಘಗಳು ಸಂಚರಿಸುವವು. ಅದಕ್ಕೂ ಮೇಲುಭಾಗಕ್ಕೆ ಅವುಗಳು ಯಾವಾಗಲೂ ಹೋಗುವುದಿಲ್ಲ.

೨೬. ಮತ್ತು ಪುಷ್ಕರ, ಆವರ್ತಕ ಮೊದಲಾದ ಮೇಘಗಳು ಜಂಬೂ ಮೂಲಪ್ರದೇಶದವರೆಗೂ ಹೋಗುವವು. ಅಲ್ಲಿಂದ ಮೇರುಪರ್ವತ ಮತ್ತು ಸಮುದ್ರಗಳ ಮೇಲೆ ಅವುಗಳ ಸಂಚಾರವಿಲ್ಲ.

೨೭. ಎಲೌ ಪ್ರಿಯಳೇ, ಈ ಪರ್ವತಗಳಲ್ಲಿ ಮೇಘ ಸಂಚಾರವಿಲ್ಲದ ಯಾವುದರ ಮೇಲ್ಭಾಗವು ನಮ್ಮ ವಾಸಕ್ಕೆ ಅನುಕೂಲವಾಗಿರುವುದೆಂದು ನೀನು ಇಚ್ಛಿಸುವೆಯೋ ಅದನ್ನು ಬೇಗನೆ ನನಗೆ ಹೇಳು.

ಸ್ವೇಚ್ಛಾವಿಹಾರೈಸ್ತವ ಕೌತುಕಾನಿ ।
ಸುವರ್ಣಪಕ್ಷಾನಿಲವೃಂದವೃಂದೈಃ ॥
ಶಕುಂತವರ್ಗೈರ್ಮಧುರಸ್ವನೈಸ್ತೇ ।
ಸದೋಪದೇಯಾನಿ ಗಿರೌ ಹಿಮೋತ್ಥೇ ॥ ೨೮ ॥

ಸಿದ್ಧಾಂಗನಾಸ್ತೇ ಸಖಿತಾಂ ಸನಾತನೀ–
ಮಿಚ್ಛಂತ್ಯ ಏವೋಪಕೃತಿಂ ಸಕೌತುಕಾಂ ।
ಸ್ವೇಚ್ಛಾವಿಹಾರೈರ್ಮಣಿಕುಟ್ಟಿಮೇ ಗಿರೌ
ಕುರ್ವಂತ್ಯ ಏಷ್ಯಂತಿ ಫಲಾದಿದಾನಕೈಃ ॥ ೨೯ ॥

ಯಾ ದೇವಕನ್ಯಾ ಗಿರಿಕನ್ಯಕಾಶ್ಚ
ಯಾ ನಾಗಕನ್ಯಾಶ್ಚ ತುರಂಗಮುಖ್ಯಃ ।
ಸರ್ವಾಸ್ತು ತಾಸ್ತೇ ಸತತಂ ಸಹಾಯತಾಂ
ಸಮಾಚರಿಷ್ಯಂತ್ಯನುಮೋದವಿಭ್ರಮೈಃ ॥ ೩೦ ॥

---

೨೮. ಹಿಮವತ್ಪರ್ವತದಲ್ಲಾದರೆ, ಸ್ವೇಚ್ಛೆಯಿಂದ ಹಾರಾಡುತ್ತಲಿರುವ ಪಕ್ಷಿಗಳು ಚಿನ್ನದಂತೆ ಪ್ರಕಾಶಮಾನವಾಗಿರುವ ತಮ್ಮ ರೆಕ್ಕೆಗಳಿಂದ ಗಾಳಿಯನ್ನು ಬೀಸುತ್ತಲೂ, ಮಧುರವಾಗಿ ಧ್ವನಿಮಾಡುತ್ತಲೂ, ನಿನಗೆ ತುಂಬ ಆಹ್ಲಾದವನ್ನುಂಟುಮಾಡುವವು.

೨೯. ಮಣಿಮಯವಾದ ಸ್ಥಳಗಳುಳ್ಳ ಆ ಹಿಮಾಲಯದಲ್ಲಿ ಸಿದ್ಧಯುವತಿಯರು ನಿನ್ನನ್ನು ತಮ್ಮ ಸಖಿಯನ್ನಾಗಿ ಮಾಡಿಕೊಳ್ಳಬೇಕೆಂಬ ಬಯಕೆಯಿಂದ ಕುತೂಹಲಾವಿಷ್ಟರಾಗಿ, ಸ್ವೇಚ್ಛಾವಿಹಾರಗಳಿಂದಲೂ, ಹಣ್ಣುಮೊದಲಾದ ಉಪಹಾರಗಳನ್ನು ತಂದೊಪ್ಪಿಸುವುದರಿಂದಲೂ ನಿನ್ನನ್ನು ಆನುಸರಿಸುತ್ತಾ ನಿನ್ನ ಬಳಿಗೆ ಬಂದು ಸೇರುವರು.

೩೦. ಅಲ್ಲದೆ, ಆ ಹಿಮಾಲಯದಲ್ಲಿ, ದೇವಕನ್ಯೆಯರು, ಪರ್ವತಕನ್ಯೆಯರು, ನಾಗಕನ್ಯೆಯರು ಮತ್ತು ಕಿನ್ನರ ಕನ್ಯೆಯರು—ಇವರೆಲ್ಲರೂ ಯಾವಾಗಲೂ ವಿಲಾಸಾಭ್ಯುಪಗಮಗಳಿಂದ ನಿನಗೆ ಸಹಾಯವನ್ನು ಮಾಡುವರು.

ರೂಪಂ ತವೇದಮತುಲಂ ವದನಂ ಸುಚಾರು
ದೃಷ್ಟ್ವಾಂಗನಾ ನಿಜವಪುರ್ನಿಜಕಾನ್ತಿಸಂಘಂ ।
ಹೇಲಾನ್ನಿಜೇ ವಪುಷಿ ರೂಪಗಣೇಷು ನಿತ್ಯಂ
ಕರ್ತಾರ ಇತ್ಯನಿಮಿಷೇಕ್ಷಣಚಾರುರೂಪಾಃ ॥ ೩೧ ॥

ಯಾ ಮೇನಕಾ ಪರ್ವತರಾಜಜಾಯಾ
ರೂಪೈರ್ಗುಣೈಃ ಖ್ಯಾತವತೀ ತ್ರಿಲೋಕೇ ।
ಸಾ ಚಾಪಿ ತೇ ತತ್ರ ಮನೋನುಮೋದಂ
ನಿತ್ಯಂ ಕರಿಷ್ಯತ್ಯಥ ಸೂಚನಾದ್ಯೈಃ ॥ ೩೨ ॥

ಪುರಂಧ್ರಿವರ್ಗೈರ್ಗಿರಿರಾಜವಂದ್ಯೈಃ
ಪ್ರೀತಿಂ ವಿತನ್ವದ್ಭಿರುದಾರರೂಪಾಂ ।
ಶಿಕ್ಷಾ ಸದಾ ತೇ ಸ್ವಕುಲೋಚಿತಾಪಿ
ಕಾರ್ಯಾನ್ನಹಂ ಪ್ರೀತಿಯುತಾ ಗುಣೌಘೈಃ ॥ ೩೩ ॥

---

೩೧. ಸುಂದರಿಯರಾದ ದೇವತಾಸ್ತ್ರೀಯರು ನಿನ್ನ ಅಸದೃಶವಾದ ರೂಪವನ್ನೂ ಮನೋಹರವಾದ ಮುಖವನ್ನೂ ನೋಡಿ, ಬಳಿಕ ತಮ್ಮ ಶರೀರದಲ್ಲಿರುವ ರೂಪದಲ್ಲಿಯೂ ಕಾಂತಿಸೌಂದರ್ಯಗಳಲ್ಲಿಯೂ ತಿರಸ್ಕಾರ ಭಾವವನ್ನು ಹೊಂದಿದರು.

೩೨. ಗುಣ ಮತ್ತು ರೂಪಗಳಿಂದ ಮೂರು ಲೋಕಗಳಲ್ಲಿಯೂ ಪ್ರಸಿದ್ಧಳಾದ ಹಿಮವಂತನ ಪತ್ನಿ ಮೇನಕೆಯೂ ಸಹ ನಿನಗೆ ನಿತ್ಯವೂ ಯೋಗ್ಯವಾದುದನ್ನು ಸೂಚಿಸುತ್ತಾ ನಿನ್ನ ಮನಸ್ಸನ್ನು ಸಂತೋಷಗೊಳಿಸುವಳು.

೩೩. ಅಲ್ಲದೆ, ಹಿಮವಂತನಿಂದಲೂ ಪೂಜಿತರಾದ ಪತಿವ್ರತಾಸ್ತ್ರೀಯರು ನಿನ್ನಲ್ಲಿ ಉದಾರಪ್ರೀತಿಯನ್ನಿಟ್ಟು, ನಿಮ್ಮ ಕುಲಕ್ಕೆ ಯೋಗ್ಯವಾದ ಸದಾಚಾರ ನಡತೆ ಮುಂತಾದವುಗಳ ವಿಷಯದಲ್ಲಿ ನಿನಗೆ ನಿತ್ಯವೂ ಸರಿಯಾದ ಶಿಕ್ಷಣವನ್ನು ಕೊಡುವರು.

ವಿಚಿತ್ರಕೋಕಿಲಾಲಾಪಮೋದಕುಂಜಗಣಾವೃತಂ ।
ಸದಾ ವಸಂತಪ್ರಭವಂ ಗಂತುಮಿಚ್ಛಸಿ ಕಿಂ ಪ್ರಿಯೇ ॥ ೩೪ ॥

ನಾನಾಸ್ವಚ್ಛಜಲಾಪೂರ್ಣಸರಃಶತಸಮಾವೃತಂ ।
ಪದ್ಮಿನೀಶತಸಂಯುಕ್ತಮಚಲೇಂದ್ರಂ ಹಿಮಾಲಯಂ ॥ ೩೫ ॥

ಸರ್ವಕಾಮಪ್ರದೈರ್ವೃಕ್ಷೈಶ್ಚಾದ್ವಲೈಃ ಕಲ್ಪಸಂಜ್ಞಕೈಃ ।
ಸಂಛನ್ನಂ ಯಸ್ಯ ಕುಸುಮಾನ್ಯುಪಯೋಕ್ಷ್ಯಸಿ ತತ್ರ ವೈ ॥ ೩೬ ॥

ಪ್ರಶಾಂತಶ್ವಾಪದಗಣಂ ಮುನಿಭಿರ್ಯತಿಭಿರ್ವೃತಂ ।
ದೇವಾಲಯಂ ಮಹಾಭಾಗೇ ನಾನಾಮೃಗಗಣೈರ್ವೃತಂ ॥ ೩೭ ॥

---

೩೪. ಎಲೈ ಪ್ರಿಯೇ, ವಿಚಿತ್ರವಾದ ಕೋಗಿಲೆಗಳ ಮಧುರ ಧ್ವನಿಯಿಂದ ಸಂತೋಷವನ್ನುಂಟುಮಾಡುತ್ತಿರುವ ಲತಾಗೃಹಗಳಿಂದಲೂ, ಯಾವಾಗಲೂ ವಸಂತ ಋತುವಿನಿಂದಲೂ ಶೋಭಿಸುತ್ತಿರುವ ಹಿಮಾಲಯಕ್ಕೆ ಹೋಗಲಿಚ್ಛಿಸುವೆಯಾ ?

೩೫. ಶುದ್ಧವಾದ ಜಲದಿಂದ ತುಂಬಿರುವ ಅನೇಕ ಸರೋವರಗಳಿಂದಲೂ ಕಮಲಗಳಿಂದ ಶೋಭಿಸುತ್ತಿರುವ, ಅನೇಕ ಕೊಳಗಳಿಂದಲೂ ಒಪ್ಪುತ್ತಿರುವ, ಪರ್ವತಗಳಿಗೆ ರಾಜನೆನಿಸುವ ಹಿಮಾಲಯಕ್ಕೆ ಹೋಗಲಿಚ್ಛಿಸುವೆಯಾ ?

೩೬. ಸಮಸ್ತ ಇಷ್ಟಾರ್ಥಗಳನ್ನೂ ಕೊಡುವ ಕಲ್ಪವೃಕ್ಷಗಳಿಂದಲೂ, ಎಳೆಯ ಹುಲ್ಲಿನಿಂದ ಹಚ್ಚನೆಯ ಬಣ್ಣವಾಗಿ ಮನೋಹರವಾಗಿ ಶೋಭಿಸುತ್ತಿರುವ ಪ್ರದೇಶಗಳಿಂದಲೂ, ವ್ಯಾಪ್ತವಾದ ಆ ಹಿಮಾಲಯದಲ್ಲಿ ನಿನ್ನ ಅಲಂಕಾರಕ್ಕಾಗಿ ಬೇಕಾದ ಹೂವುಗಳನ್ನು ಉಪಯೋಗಿಸಿಕೊಳ್ಳಬಹುದು.

೩೭. ಆ ಹಿಮಾಲಯದಲ್ಲಿ ಸಿಂಹವೇ ಮೊದಲಾದ ಕ್ರೂರಮೃಗಗಳೂ ತಮ್ಮ ಜಾತಿವೈರವನ್ನು ಬಿಟ್ಟು ಶಾಂತಸ್ವಭಾವದಿಂದಿರುತ್ತವೆ. ಮುನಿಗಳೂ, ಯತಿಗಳೂ ಅಲ್ಲಿ ವಾಸವಾಗಿರುವರು. ಅದು ದೇವತೆಗಳಿಗೆ ವಾಸಸ್ಥಾನವು. ಅನೇಕಬಗೆಯ ಮೃಗಗಳೂ ಅಲ್ಲಿರುವವು.

ಸ್ಫಟಿಕಸ್ವರ್ಣವಪ್ರಾದ್ಯೈ ರಾಜತೈಶ್ಚ ವಿರಾಜಿತಂ ।
ಮಾನಸಾದಿಸರೋವರ್ಗೈರಭಿತಃ ಪರಿಶೋಭಿತಂ ॥ ೩೮ ॥

ಹಿರಣ್ಮಯೈ ರತ್ನನಾಲೈಃ ಪಂಕಜೈರ್ಮುಕುಲೈರ್ವೃತಂ ।
ಶಂಶುಮಾರೈಸ್ತಥಾ ಶಂಖೈಃ ಕಚ್ಛಪೈರ್ಮಕರೈರ್ಯುಷ್ಮೈಃ ॥ ೩೯ ॥

ನಿಷೇವಿತೈರ್ಮಂಜುಲೈಶ್ಚ ತಥಾ ನೀಲೋತ್ಪಲಾದಿಭಿಃ ।
ದೇವೀಶತಸ್ನಾನಸಿಕ್ತಸರ್ವಗಂಧೈಶ್ಚ ಕುಂಕುಮೈಃ ॥ ೪೦ ॥

ವಿಚಿತ್ರಸ್ರಗ್ಗಂಧಜಲೈರಾಪೂರ್ಣೈಃ ಸ್ವಚ್ಛಕಾಂತಿಭಿಃ ।
ಶಾದ್ವಲೈಸ್ತರುಭಿಸ್ತುಂಗೈಸ್ತೀರಸ್ಥೈರುಪಶೋಭಿತೈಃ ॥ ೪೧ ॥

---

೩೮. ಮತ್ತು ಅಲ್ಲಿ ಸ್ಫಟಿಕಮಯವಾಗಿಯೂ, ಸುವರ್ಣಮಯವಾಗಿಯೂ, ಬೆಳ್ಳಿಯ ಮಯವಾಗಿಯೂ ಇರುವ ಅನೇಕ ಪ್ರಸ್ಥಭೂಮಿಗಳಿರುವವು. ಅಲ್ಲದೆ, ಮಾನಸವೇ ಮೊದಲಾದ ಸರೋವರಗಳು ಅಲ್ಲಲ್ಲಿ ಶೋಭಿಸುತ್ತಿರುವವು.

೩೯. ಸರೋವರಗಳಲ್ಲಿ ರತ್ನಮಯವಾದ ನಾಳಗಳುಳ್ಳ ಚಿನ್ನದ ಕಮಲಗಳಿರುವವು; ಅಲ್ಲದೆ ನೆಗಳು, ಶಂಖ, ಆಮೆ, ಮೊಸಳೆ, ಮೀನುಗಳೂ ಆ ಸರೋವರಗಳಲ್ಲಿ ಬೇಕಾದಷ್ಟಿರುವವು.

೪೦. ಮತ್ತು ಆ ಸರೋವರಗಳಲ್ಲಿ ಮನೋಹವಾದ ಕನ್ನೈದಿಲೆಗಳು ಕಂಗೊಳಿಸುತ್ತಿರುವವು; ಅನೇಕ ದೇವತಾಸ್ತ್ರೀಯರು ಸ್ನಾನಮಾಡುವುದರಿಂದ ಅವರ ಅಂಗಗಳ ಸುಗಂಧಗಳಿಂದಲೂ ಕುಂಕುಮಾದಿ ಅಲಂಕಾರದ್ರವ್ಯಗಳಿಂದಲೂ ಆ ಸರೋವರಗಳ ಜಲವು ಘಮಘಮಿಸುತ್ತಿರುವುದು.

೪೧. ಮತ್ತು ಆ ಸರೋವರಗಳು, ವಿಚಿತ್ರವಾದ ಹೂವಿನಗೊಂಚಲುಗಳು, ಹೂವಿನ ಸುವಾಸನೆಯು, ಶುದ್ಧವಾದ ತಿಳಿನೀರು ಇವುಗಳಿಂದ ಕೂಡಿ ಅತಿಶೋಭಾಯಮಾನವಾಗಿರುವವು. ಅಲ್ಲದೇ ಎಳೆಯ ಹಸರು ಹುಲ್ಲುಗಳೂ ದಡದಲ್ಲಿ ಬೆಳೆದಿರುವ ಎತ್ತರವಾದ ವೃಕ್ಷಗಳೂ ಸಹ ಆ ಸರೋವರಗಳ ಕಾಂತಿಯನ್ನು ಮತ್ತಷ್ಟು ಹೆಚ್ಚಿಸುತ್ತಿರುವು.

ನೃತ್ಯದ್ಭಿರಿವ ಶಾಖೌಘೈರ್ವ್ಯಂಜಯಂತಂ ಸ್ವಸಂಭವಂ ।
ಕಾದಂಬೈಃ ಸಾರಸೈರ್ಮತ್ತಚಕ್ರಾಂಗಗ್ರಾಮಶೋಭಿತೈಃ ॥ ೪೨ ॥

ಮಧುರಾರಾವಿಭಿರ್ಮೋದಕಾರಿಭಿರ್ಭ್ರಮರಾದಿಭಿಃ ।
ವಾಸವಸ್ಯ ಕುಬೇರಸ್ಯ ಯಮಸ್ಯ ವರುಣಸ್ಯ ಚ ॥ ೪೩ ॥

ಅಗ್ನೇಃ ಕೌಣಪರಾಜಸ್ಯ ಮಾರುತಸ್ಯ ಹರಸ್ಯ ಚ ।
ಪುರೀಭಿಃ ಶೋಭಿಶಿಖರಂ ಮೇರುಮುಚ್ಚೈಃ ಸುರಾಲಯಂ ॥ ೪೪ ॥

ರಂಭಾಶಚೀಮೇನಕಾದಿರಂಭೋರುಗಣಸೇವಿತಂ ।
ಕಿಂ ತ್ವಮಿಚ್ಛಸಿ ಸರ್ವೇಷಾಂ ಸಾರಭೂತಂ ಮಹಾಗಿರಿಂ ॥ ೪೫ ॥

ತವ ದೇವೀಶತಯುತಾ ಸಾಪ್ಸರೋಗಣಸೇವಿತಾ ।
ನಿತ್ಯಂ ಚರಿಷ್ಯತಿ ಶಚೀ ತವ ಯೋಗ್ಯಾಂ ಸಹಾಯತಾಂ ॥ ೪೬ ॥

---

೪೨. ಆ ಹಿಮಾಲಯಪರ್ವತದಲ್ಲಿ ವೃಕ್ಷಗಳ ಕೊಂಬೆಗಳು ಗಾಳಿಯಿಂದ ಚಲಿಸುತ್ತಾ ನರ್ತನಮಾಡುತ್ತಿರುವಂತೆ ತೋರುವವು. ಮಧುರವಾಗಿ ಧ್ವನಿಗೈಯುತ್ತಿರುವ ಕಲಹಂಸ, ಸಾರಸಪಕ್ಷಿ, ಚಕ್ರವಾಕಪಕ್ಷಿ, ಬಿಳಿಯ ಹಂಸ, ಮತ್ತು ದುಂಬಿಗಳೇ ಮೊದಲಾದವುಗಳಿಂದ ಆ ಹಿಮಾಲಯಪರ್ವತವು ಮನೋಹರವಾಗಿ ಒಪ್ಪುತ್ತಿರುವುದು.

೪೩-೪೪. ಹಿಮವತ್ಪರ್ವತವಲ್ಲದಿದ್ದರೆ, ಎತ್ತರವಾಗಿರುವ ಮೇರು ಪರ್ವತವು, ಇಂದ್ರ, ಕುಬೇರ, ಯಮ, ವರುಣ, ಅಗ್ನಿ, ನಿರ್ಋತಿ, ವಾಯು, ಈಶಾನರೆಂಬ ಅಷ್ಟದಿಕ್ಪಾಲಕರ ಪಟ್ಟಣಗಳಿಂದ ಶೋಭಿಸುತ್ತಲೂ, ದೇವತೆಗಳಿಗೆ ವಾಸಸ್ಥಳವಾಗಿಯೂ ಅಲ್ಲೇ ಇರುವುದು.

೪೫. ಆಲ್ಲಿ ರಂಭೆ, ಶಚೀ, ಮೇನಕೆ ಮೊದಲಾದ ಸುರಸುಂದರಿಯರಿರುವರು. ಎಲೌ ದೇವಿ, ಇಂತಹ ಸರ್ವಶ್ರೇಷ್ಠವಾದ ಮೇರುಪರ್ವತದಲ್ಲಿ ವಾಸಿಸಲಿಚ್ಛಿಸುವೆಯಾ ?

೪೬. ಆಲ್ಲಿ ಅನೇಕ ದೇವತಾಸ್ತ್ರೀಯರೊಂದಿಗೂ ಅಪ್ಸರಸ್ತ್ರೀಯರೊಂದಿಗೂ ಕೂಡಿಕೊಂಡು ಶಚೀದೇವಿಯು ನಿನಗೆ ಬೇಕಾದ ಸಹಾಯವನ್ನು ಮಾಡುವಳು.

ಅಥವಾ ಮನು ಕೈಲಾಸಮಚಲೇಂದ್ರಂ ಸದಾಶ್ರಯಂ ।
ಸ್ಥಾನಮಿಚ್ಛಸಿ ವಿತ್ತೇಶಪುರೀಪರಿವಿರಾಜಿತಂ ॥ ೪೭ ॥
ಗಂಗಾಜಲೌಘಪ್ರಯತಂ ಪೂರ್ಣಚಂದ್ರಸಮಪ್ರಭಂ ।
ದರೀಷು ಸಾನುಷು ಸದಾ ಯಕ್ಷಕನ್ಯಾಭಿರೀಹಿತಂ ॥ ೪೮ ॥
ನಾನಾಮೃಗಗಣೈರ್ಜುಷ್ಟಂ ಪದ್ಮಾಕರಶತಾವೃತಂ ।
ಸರ್ವೈರ್ಗುಣೈಶ್ಚ ಸದೃಶಂ ಸುಮೇರೋರಿವ ಸುಂದರಿ ॥ ೪೯ ॥
ಸ್ಥಾನೇಷ್ವೇತೇಷು ಯತ್ರಾಸ್ತಿ ತವಾಂತಃಕರಣಸ್ಪೃಹಾ ।
ತದ್ಬ್ರೂತಂ ಮೇ ಸಮಾಚಕ್ಷ್ವ ವಾಸಂ ಕರ್ತಾಸ್ಮಿ ತತ್ರ ತೇ ॥ ೫೦ ॥

॥ ಮಾರ್ಕಂಡೇಯ ಉವಾಚ ॥

ಇತೀರಿತೇ ಶಂಕರೇಣ ತದಾ ದಾಕ್ಷಾಯಣೀ ಶನೈಃ ।
ಇದಮಾಹ ಮಹಾದೇವಂ ಶ್ಲಕ್ಷ್ಣಂ ಸ್ವೇಚ್ಛಾಪ್ರಕಾಶನಂ ॥ ೫೧ ॥

---

೪೭. ಅಲ್ಲದಿದ್ದರೆ, ಸಪ್ತರುಷರಿಗೆ ಆಶ್ರಯವಾದ ಮತ್ತು ಕುಬೇರನ ಅಲಕಾ ಪಟ್ಟಣದಿಂದ ವಿರಾಜಿಸುವ, ನನ್ನ ಪರ್ವತೋತ್ತಮವಾದ ಕೈಲಾಸವನ್ನು ವಾಸಕ್ಕಾಗಿ ಅಪೇಕ್ಷಿಸುವಿಯಾ ?

೪೮. ಅದು ಗಂಗಾನದಿಯ ಪ್ರವಾಹದಿಂದ ಪವಿತ್ರವಾಗಿರುವುದು. ಪೂರ್ಣಚಂದ್ರನಂತೆ ಕಾಂತಿಯುಳ್ಳದ್ದಾಗಿರುವುದು. ಆ ಕೈಲಾಸಪರ್ವತದ ಗುಹೆಗಳಲ್ಲಿಯೂ, ತಪ್ಪಲು ಪ್ರದೇಶಗಳಲ್ಲಿಯೂ, ಯಕ್ಷಕನ್ಯೆಯರು ಯಾವಾಗಲೂ ವಿಹರಿಸುತ್ತಿರುವರು.

೪೯. ಎಲೌ ಸುಂದರಿ, ಆ ಪರ್ವತವು ಅನೇಕ ಬಗೆಯ ಮೃಗಗಳಿಂದಲೂ, ಸರೋವರಗಳಿಂದಲೂ ಕೂಡಿ ಮನೋಹರವಾಗಿರುವುದು. ಎಲ್ಲ ಗುಣಗಳಿಂದಲೂ ಅದು ಮೇರುಪರ್ವತಕ್ಕೆ ಸಮಾನವಾಗಿರುವುದು.

೫೦. ಎಲೌ ಸತಿಯೇ, ಈ ಮೇಲೆ ಹೇಳಿದ ಸ್ಥಾನಗಳಲ್ಲಿ ನಿನಗೆ ಯಾವುದು ಮನಸ್ಸಿಗೆ ಒಪ್ಪಿತವೋ ಆದನ್ನು ಬೇಗನೆ ನನಗೆ ಹೇಳು. ಆ ಸ್ಥಳದಲ್ಲಿ ನಿನಗೆ ವಾಸಸ್ಥಾನವನ್ನು ಕಲ್ಪಿಸುವೆನು.

೫೧. ಮಾರ್ಕಂಡೇಯ ಮುನಿಯು ಹೇಳಿದನು:—ಹೀಗೆ ಶಂಕರನು ಹೇಳಲು, ಆಗ ಸತೀದೇವಿಯು, ತನ್ನ ಇಷ್ಟವನ್ನು ತಿಳಿಸಲು ಅವನನ್ನು ಕುರಿತು ನಯವಾಗಿ ಹೀಗೆ ಹೇಳಿದಳು.

॥ ಸತ್ಯುವಾಚ ॥

ಹಿಮಾದ್ರಾವೇವ ವಸತಿಮಹಮಿಚ್ಛೇ ತ್ವಯಾ ಸಹ ।
ನ ಚಿರಾತ್ಕುರು ವಾಸಂ ತ್ವಂ ತಸ್ಮಿನ್ನೇವ ಮಹಾಗಿರೌ ॥ ೫೨ ॥

॥ ಮಾರ್ಕಂಡೇಯ ಉವಾಚ ॥

ಅಥ ತದ್ವಾಕ್ಯಮಾಕರ್ಣ್ಯ ಹರಃ ಪರಮಮೋದಿತಃ ।
ಹಿಮಾದ್ರಿಶಿಖರಂ ತುಂಗಂ ದಾಕ್ಷಾಯಣ್ಯಾ ಸಮಂ ಯಯೌ ॥ ೫೩ ॥
ಸಿದ್ಧಾಂಗನಾಗಣಯುತಮಗಮ್ಯಂ ಮೇಘಪಕ್ಷಿಭಿಃ ।
ಜಗಾಮ ಶಿಖರಂ ತುಂಗಂ ಮರೀಚವನರಾಜಿತಂ ॥ ೫೪ ॥

॥ ಇತಿ ಶ್ರೀಕಾಲಿಕಾಪುರಾಣೇ ಪಂಚದಶೋಽಧ್ಯಾಯಃ ॥

---

೫೨. ಸತೀದೇವಿಯು ಹೇಳಿದಳು:—ಓ ಶಂಕರನೇ, ನಾನು ಹಿಮವತ್ಪರ್ವತದಲ್ಲಿಯೇ ನಿನ್ನೊಡನೆ ವಾಸಮಾಡಲಪೇಕ್ಷಿಸುವೆನು. ಆದುದರಿಂದ ಆ ಮಹಾಪರ್ವತದಲ್ಲಿಯೇ ನೀನು ಬೇಗನೆ ವಾಸಸ್ಥಳವನ್ನು ಕಲ್ಪಿಸು.

೫೩. ಮಾರ್ಕಂಡೇಯ ಮುನಿಯು ಹೇಳಿದನು:—ಸತೀದೇವಿಯ ಈ ಮಾತುಗಳನ್ನು ಕೇಳಿ ಶಂಕರನು ಸಂತೋಷಗೊಂಡು, ಅವಳೊಡನೆ ಅತ್ಯುನ್ನತವಾದ ಹಿಮಾಲಯಪರ್ವತದ ಶಿಖರಕ್ಕೆ ಹೊರಟುಹೋದನು.

೫೪. ಸಿದ್ಧಸ್ತ್ರೀಯರ ಸಮೂಹಗಳಿಂದ ಕೂಡಿದುದಾಗಿಯೂ, ಮರೀಚವೆಂಬ ವನದಿಂದ ಶೋಭಿಸುತ್ತಲೂ, ಮೇಘ ಮತ್ತು ಪಕ್ಷಿಗಳೂ ಸಹ ಸಂಚರಿಸಲು ಸಾಧ್ಯವಿಲ್ಲದಂತೆ ಅತ್ಯುನ್ನತವಾಗಿಯೂ ಇರುವ, ಆ ಹಿಮವತ್ಪರ್ವತದ ಶಿಖರಕ್ಕೆ ಶಂಕರನು ಸತಿಯೊಡನೆ ಹೋದನು.

ಇಲ್ಲಿಗೆ ಶ್ರೀಕಾಲಿಕಾಪುರಾಣದಲ್ಲಿ ಹದಿನೈದನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ ಅಥ ಶ್ರೀಕಾಲಿಕಾಪುರಾಣೇ ಷೋಡಶೋऽಧ್ಯಾಯಃ ॥

ಹದಿನಾರನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ವಿಚಿತ್ರಕನಕೈ ರೂಪ್ಯೈಃ ಶಿಖರಂ ರತ್ನಕರ್ಬುರಂ ।
ಬಾಲಾರ್ಕಸದೃಶಂ ತುಂಗಮಾಸಸಾದ ಸತೀಸಖಃ ॥ ೧ ॥

ಸ್ಫಟಿಕಾಭ್ರಮಯೇ ತಸ್ಮಿಞ್ಛೃಙ್ಗೋದ್ವಲದ್ದ್ರುಮರಾಜಿತೇ ।
ವಿಚಿತ್ರಪುಷ್ಪವಲ್ಲೀಭಿಃ ಸರಸೀಭಿಶ್ಚ ಸಂಯುತೇ ॥ ೨ ॥

---

೧. ಮಾರ್ಕಂಡೇಯ ಮುನಿಯು ಹೇಳತೊಡಗಿದನು:—ಸುವರ್ಣಗಳಿಂದಲೂ, ಬೆಳ್ಳಿಗಳಿಂದಲೂ, ರತ್ನಗಳಿಂದಲೂ ಚಿತ್ರವಿಚಿತ್ರವಾಗಿ ಹೊಳೆಯುತ್ತ, ಉದಯಿಸುತ್ತಿರುವ ಸೂರ್ಯನಂತೆ ಪ್ರಕಾಶಮಾನವಾದ ಆ ಹಿಮಾಲಯ ಪರ್ವತದ ಉನ್ನತಶಿಖರವನ್ನು ಶಂಕರನು ಸತಿಯೊಡನೆ ಸೇರಿದನು

೨. ಆ ಶಿಖರವು ಸ್ಫಟಿಕ ಮತ್ತು ಅಭ್ರಕ (ಕಾಗೆಬಂಗಾರ)ಗಳಿಂದ ಕೂಡಿ ಹೊಳೆಯುತ್ತಿರುವುದು. ಅನೇಕ ವೃಕ್ಷಗಳೂ, ಹಚ್ಚನೆಯ ಹುಲ್ಲು ಪ್ರದೇಶಗಳೂ ಅಲ್ಲಿ ಶೋಭಿಸುತ್ತಿರುವವು. ಮತ್ತು ವಿಚಿತ್ರವಾದ ಹೂವುಗಳನ್ನು ಬಿಡುವ ಲತೆಗಳಿಂದಲೂ, ಅಲ್ಲಲ್ಲಿರುವ ಸರೋವರಗಳಿಂದಲೂ ಕಂಗೊಳಿಸುತ್ತಿರುವುದು.

ಪುಷ್ಪುಲ್ಲತರುಶಾಖಾಗ್ರಗುಂಜದ್ಭ್ರಮರಭೂಷಿತೇ ।
ಪಂಕೇರುಹೈಃ ಪುಷ್ಪುಲ್ಲೈಶ್ಚ ನೀಲೋತ್ಪಲಚಯೈಸ್ತಥಾ ॥ ೩ ॥

ಶೋಭಿತೇ ಚಕ್ರವಾಕಾಹ್ವೈಃ ಕೌದಂಬೈರ್ಹಂಸಮದ್ಗುಭಿಃ ।
ಪ್ರಮತ್ತಸಾರಸೈಃ ಕ್ರೌಂಚೈರ್ನೀಲಕಂಠೈಶ್ಚ ಶಬ್ದಿತೇ ॥ ೪ ॥

ಪುಂಸ್ಕೋಕಿಲಕಲಸ್ವಾನೈರ್ಮಧುರೈರ್ಮೃಗಸೇವಿತೇ ।
ತುರಂಗವದನೈಃ ಸಿದ್ಧೈರಪ್ಸರೋಭಿಃ ಸಗುಹ್ಯಕೈಃ ॥ ೫ ॥

ವಿದ್ಯಾಧರೀಭಿರ್ದೇವೀಭಿಃ ಕಿನ್ನರೀಭಿರ್ವಿಹಾರಿತೇ ।
ಪುರಂಧ್ರೀಭಿಃ ಪಾರ್ವತೀಭಿಃ ಕನ್ಯಾಭಿಶ್ಚ ಸಮನ್ವಿತೇ ॥ ೬ ॥

---

೩. ವೃಕ್ಷಶಾಖಾಗ್ರಗಳಲ್ಲಿ ವಿಕಸಿತವಾದ ಪುಷ್ಪಗಳಲ್ಲಿ ದುಂಬಿಗಳು ಮಧುರವಾಗಿ ಝೇಂಕಾರ ಶಬ್ದವನ್ನು ಮಾಡುತ್ತಲಿವೆ. ಅಲ್ಲಿರುವ ಸರೋವರಗಳಲ್ಲಿ ಕಮಲಗಳೂ, ಕನ್ನೈದಿಲೆಗಳೂ ಚನ್ನಾಗಿ ಅರಳಿ ಮನೋಹರವಾಗಿ ಪ್ರಕಾಶಿಸುತ್ತವೆ.

೪. ಮತ್ತು ಆ ಗಿರಿಶಿಖರವು, ಚಕ್ರವಾಕ, ಕಲಹಂಸ, ನೀರುಕಾಗೆ ಈ ಪಕ್ಷಿಗಳ ಕಲಕಲರವದಿಂದಲೂ, ಕೊಬ್ಬಿದ ಸಾರಸಪಕ್ಷಿಗಳು, ಬಕಗಳು, ನವಿಲುಗಳು ಇವುಗಳ ಕೋಲಾಹಲ ಶಬ್ದದಿಂದಲೂ ಶೋಭಿಸುತ್ತಿರುವುದು.

೫. ಅಲ್ಲದೆ ಗಂಡುಕೋಗಿಲೆಗಳ ಇಂಪಾದ ಧ್ವನಿಯಿಂದ ಆ ಶಿಖರವು ರಂಜಿಸುತ್ತಿರುವುದು. ಅಲ್ಲಿ ಅನೇಕಬಗೆಯ ಮೃಗಗಳೂ, ಕಿನ್ನರರೂ, ಸಿದ್ಧರೂ, ಅಪ್ಸರಸ್ತ್ರೀಯರೂ, ಗುಹ್ಯಕರೂ ಮೊದಲಾದವರು ವಿಹರಿಸುತ್ತಲಿರುವರು.

೬. ಮತ್ತು ಅಲ್ಲಿ ವಿದ್ಯಾಧರಸ್ತ್ರೀಯರೂ, ದೇವತಾಸ್ತ್ರೀಯರೂ, ಕಿನ್ನರಸ್ತ್ರೀಯರೂ, ಪರ್ವತದಲ್ಲಿಯೇ ವಾಸಿಸುವ ಸ್ತ್ರೀಯರೂ, ಕನ್ಯೆಯರೂ ವಿಹರಿಸುತ್ತಿರುವರು.

ವಿಪಂಚೀತಂತ್ರಿಕಾಮುಂದ್ರಮೃದಂಗಪಟಹಸ್ವನೈಃ ।
ನೃತ್ಯದ್ಭಿರಪ್ಸರೋಭಿಶ್ಚ ಕೌತುಕೋತ್ಥೈಃ ಸುಶೋಭಿತೇ ॥ ೭ ॥
ದೈವೀಲತಾಭಿರ್ದಿವ್ಯಾಭಿರ್ಗಂಧಿನೀಭಿಃ ಸಮಾವೃತೇ ।
ಊರ್ಧ್ವಪ್ರಫುಲ್ಲಕುಸುಮೈರ್ನಿಕುಂಜೈರುಪಶೋಭಿತೇ ॥ ೮ ॥
ಶೈಲರಾಜಪುರಾಭ್ಯಾಶೇ ಶಿಖರೇ ವೃಷಭಧ್ವಜಃ ।
ಸಹ ಸತ್ಯಾ ಚಿರಂ ರೇಮೇ ಏವಂಭೂತೇ ಸುಶೋಭನೇ ॥ ೯ ॥
ತಸ್ಮಿನ್ಸ್ವರ್ಗಸಮೇ ಸ್ಥಾನೇ ದಿವ್ಯಮಾನೇನ ಶಂಕರಃ ।
ದಶವರ್ಷಸಹಸ್ರಾಣಿ ರೇಮೇ ಸತ್ಯಾ ಸಮಂ ಮುದಾ ॥ ೧೦ ॥
ಸ ಕದಾಚಿತ್ತು ತತ್ಸ್ಥಾನಾತ್ಕೈಲಾಸಂ ಯಾತಿ ಶಂಕರಃ ।
ಕದಾಚಿನ್ಮೇರುಶಿಖರಂ ದೇವದೇವೀವೃತಂ ಪುರಾ ॥ ೧೧ ॥

---

೭. ಅಲ್ಲಿ ಅಪ್ಸರಸ್ತ್ರೀಯರು ವೀಣೆಯನ್ನು ನುಡಿಸುತ್ತಾ, ಮಂದ್ರ ಸ್ವರಗಳಿಂದ ಮೃದಂಗ, ಕಹಳೆ ಮೊದಲಾದವುಗಳನ್ನು ಲಯಕ್ಕೆ ತಕ್ಕಂತೆ ಬಾರಿಸುತ್ತಾ, ಆಶ್ಚರ್ಯವಾಗುವಂತೆ ನರ್ತನವನ್ನು ಮಾಡುತ್ತಲಿರುವರು.

೮. ಸುವಾಸನೆಯುಳ್ಳ ಮನೋಹರವಾದ ಲತೆಗಳಿಂದಲೂ, ಮೇಲ್ಭಾಗದಲ್ಲಿ ಅರಳಿದ ಹೂವುಗಳುಳ್ಳ ಲತಾಗೃಹಗಳಿಂದಲೂ, ಆ ಗಿರಿಶಿಖರವು ಕಂಗೊಳಿಸುತ್ತಿರುವುದು.

೯. ಪರ್ವತರಾಜನಾದ ಹಿಮವಂತನ ಪಟ್ಟಣದ ಸಮೀಪದಲ್ಲಿ, ಈರೀತಿ ಮನೋಹರವಾಗಿ ಶೋಭಿಸುತ್ತಿರುವ ಆ ಗಿರಿಶಿಖರದಲ್ಲಿ ಶಂಕರನು ಸತಿಯೊಡನೆ ಬಹಳಕಾಲ ಕ್ರೀಡಿಸುತ್ತಿದ್ದನು.

೧೦. ಸ್ವರ್ಗಸದೃಶವಾದ ಆ ಶಿಖರದಲ್ಲಿ ಶಂಕರನು ದೇವಗಣನೆಯಂತೆ ಹತ್ತುಸಾವಿರ ವರ್ಷಗಳ ಕಾಲ ಸತೀದೇವಿಯೊಡನೆ ಸಂತೋಷದಿಂದ ವಿಹರಿಸಿದನು.

೧೧. ಮತ್ತು ಆ ಶಂಕರನು ಒಂದೊಂದು ವೇಳೆ ಆ ಶಿಖರದಿಂದ ಹೊರಟು ಕೈಲಾಸಕ್ಕೆ ಹೋಗುವನು. ಮತ್ತೊಂದು ವೇಳೆ ದೇವತೆಗಳಿಂದಲೂ ದೇವಸ್ತ್ರೀಯರಿಂದಲೂ ನಿಬಿಡವಾದ ಮೇರುಪರ್ವತಕ್ಕೆ ಹೋಗುವನು.

ದಿಕ್ಪಾಲಾನಾಂ ತಥೋದ್ಯಾನಂ ವನಾನಿ ವಸುಧಾತಲಂ ।
ಗತ್ವಾ ಗತ್ವಾ ಪುನಸ್ತತ್ರ ರೇಮೇ ತೇಭ್ಯಃ ಸತೀಸಖಃ ॥ ೧೨ ॥
ನ ಜಜ್ಞೇ ಸ ದಿವಾರಾತ್ರಂ ನ ಬ್ರುಹ್ಮ ನ ತಪಸ್ಸನುಂ ।
ಸತ್ಯಾಹಿತಮನಾಃ ಶಂಭುಃ ಪ್ರೀತಿಮೇವ ಚಕಾರ ಹ ॥ ೧೩ ॥
ಏಕಂ ಮಹಾದೇವಮುಖಂ ಸತೀ ಪಶ್ಯತಿ ಸರ್ವಶಃ ।
ಮಹಾದೇವೋಽಪಿ ಸರ್ವತ್ರ ಸದಾಽದ್ರಾಕ್ಷೀತ್ಸತೀಮುಖಂ ॥ ೧೪ ॥
ಏವಮೆನ್ಯೋನ್ಯಸಂಸರ್ಗಾದನುರಾಗಮಹೀರುಹಂ ।
ವರ್ಧಯಾಮಾಸತುಃ ಶಂಭುಸತ್ಯೌ ಭಾವಾಂಬುಸೇಚನೈಃ ॥ ೧೫ ॥
ಏತಸ್ಮಿನ್ನಂತರೇ ದಕ್ಷೋ ಜಗತಾಂ ಹಿತಕಾರಕಃ ।
ಮಹಾಯಜ್ಞಂ ಸಮಾರೇಭೇ ಯಷ್ಟುಂ ಸರ್ವಜನಾನ್ವಿತಂ ॥ ೧೬ ॥

---

೧೨. ಒಮ್ಮೆ ಆ ಶಂಕರನು ಇಂದ್ರನೇ ಮೊದಲಾದ ದಿಕ್ಪಾಲಕರ ನಂದನವನಗಳಿಗೂ, ಒಮ್ಮೆ ಉದ್ಯಾನವನಗಳಿಗೂ, ಮತ್ತೊಮ್ಮೆ ಭೂಲೋಕಕ್ಕೂ ಹೋಗಿ ಅಲ್ಲಲ್ಲಿ ಸತೀದೇವಿಯೊಡನೆ ವಿಹರಿಸುತ್ತಲಿದ್ದನು.

೧೩. ಆ ಶಂಕರನು ಈರೀತಿ ವಿಹರಿಸುತ್ತಿರುವಾಗ ಹಗಲನ್ನಾಗಲಿ ರಾತ್ರಿಯನ್ನಾಗಲಿ, ಗಮನಿಸಲೇ ಇಲ್ಲ. ಮತ್ತು ಪರಬ್ರಹ್ಮವನ್ನಾಗಲಿ, ತಪಸ್ಸನ್ನಾಗಲಿ ತಿಳಿಯಲಿಲ್ಲ. ಕೇವಲ ಆ ಸತೀದೇವಿಯಲ್ಲಿಯೇ ಮನಸ್ಸುಳ್ಳವನಾಗಿ ಅವಳಲ್ಲಿಯೇ ಅನುರಕ್ತನಾದನು.

೧೪. ಸತೀದೇವಿಯೂ ಶಂಕರನ ಮುಖವೊಂದನ್ನು ಹೊರತು ಮತ್ತೇನನ್ನೂ ಗಮನಿಸುತ್ತಿರಲಿಲ್ಲ. ಶಂಕರನೂ ಸಹ ಎಲ್ಲೆಡೆಯಲ್ಲಿಯೂ ಸತೀದೇವಿಯ ಸುಂದರವಾದ ಮುಖವನ್ನೇ ನೋಡುವನು. ಎಂದರೆ ಬೇರೆ ವಸ್ತುಗಳ ಮೇಲೆ ಲಕ್ಷ್ಯವೇ ಇರಲಿಲ್ಲವೆಂದರ್ಥ.

೧೫. ಹೀಗೆ ಪರಸ್ಪರ ಸಂಬಂಧದಿಂದ ಸತೀಶಂಕರರು, ತಮ್ಮ ಅನುರಾಗವೆಂಬ ವೃಕ್ಷವನ್ನು, ಶೃಂಗಾರಚೇಷ್ಟೆಗಳೆಂಬ ಜಲಸೇನೆಯಿಂದ ಬೆಳಸಿದರು.

೧೬. ಈ ಮಧ್ಯದಲ್ಲಿ ದಕ್ಷಬ್ರಹ್ಮನು ಜಗತ್ತಿಗೆ ಒಳ್ಳೆಯದಾಗಬೇಕೆಂಬ ಉದ್ದೇಶದಿಂದ ಅನೇಕ ಜನಗಳೊಡನೆ ಒಂದು ದೊಡ್ಡ ಯಾಗವನ್ನು ಮಾಡಲು ಪ್ರಾರಂಭಿಸಿದನು.

ಅಷ್ಟಾಶೀತಿಸಹಸ್ರಾಣಿ ಯತ್ರ ಜುಹ್ವತಿ ಋತ್ವಿಜಃ ।
ಉದ್ಗಾತಾರಶ್ಚತುಃಷಷ್ಟಿಸಹಸ್ರಾಣಿ ಮಹರ್ಷಯಃ ॥ ೧೭ ॥
ಅಧ್ವರ್ಯವೋಽಥ ಹೋತಾರಸ್ತಾವಂತೋ ನಾರದಾದಯಃ ।
ಅಧಿಷ್ಠಾತಾ ಸ್ವಯಂ ವಿಷ್ಣುಃ ಸಹ ಸರ್ವಮರುದ್ಗಣೈಃ ॥ ೧೮ ॥
ಸ್ವಯಂ ತತ್ರಾಭವದ್ಬ್ರಹ್ಮಾ ತ್ರಯೀವಿಧಿನಿದರ್ಶಕಃ ।
ತಥೈವ ಸರ್ವದಿಕ್ಪಾಲಾ ದ್ವಾರಪಾಲಾಶ್ಚ ರಕ್ಷಕಾಃ ॥ ೧೯ ॥
ಉಪತಸ್ಥೇ ಸ್ವಯಂ ಯಜ್ಞಃ ಸ್ವಯಂ ವೇದೀ ಧರಾಽಭವತ್ ।
ತನೂನಪಾದಪಿ ನಿಜಂ ಚಕ್ರೇ ರೂಪಂ ಸಹಸ್ರಶಃ ॥ ೨೦ ॥
ಹವಿಷಾಂ ಗ್ರಹಣಾಯಾಶು ತಸ್ಮಿನ್ಯಜ್ಞಮಹೋತ್ಸವೇ ।

---

೧೭. ಆ ದೊಡ್ಡ ಯಾಗದಲ್ಲಿ ಹೋಮಮಾಡುವುದಕ್ಕಾಗಿ ಮಹರ್ಷಿಗಳಾದ ಎಂಭತ್ತೆಂಟುಸಾವಿರ ಋತ್ವಿಕ್ಕುಗಳೂ, ಸಾಮಗಾನ ಮಾಡುವುದಕ್ಕೆ ಅರವತ್ತಾರುಸಾವಿರ ಉದ್ಗಾತೃಗಳೂ ಇದ್ದರು.

೧೮. ಮತ್ತು ಆ ಯಜ್ಞದಲ್ಲಿ ನಾರದನೇ ಮೊದಲಾದ ಅಷ್ಟೇ ಸಂಖ್ಯೆಯ ಅಧ್ವರ್ಯುಗಳೆಂಬ ಯಜುರ್ವೇದ ವೇತ್ತೃಗಳಾದ ಮುಖ್ಯ ಋತ್ವಿಕ್ಕುಗಳೂ, ಋಗ್ವೇದ ಮಂತ್ರಗಳಿಂದ ಪುರೋನುವಾಕಯಾಜ್ಯಾದಿಗಳಿಂದ ದೇವತೆಗಳನ್ನು ಆಹ್ವಾನಿಸಿ ಹೋಮಮಂತ್ರಗಳನ್ನುಚ್ಚರಿಸುವ ಹೋತೃಗಳೆಂಬ ಋತ್ವಿಕ್ಕುಗಳೂ ಇದ್ದರು. ಇದೆಲ್ಲಕ್ಕೂ ಅಧ್ಯಕ್ಷನಾಗಿ ಸಾಕ್ಷಾತ್ ವಿಷ್ಣುವೇ ಎಲ್ಲ ದೇವತೆಗಳೊಡನೆ ಕೂಡಿ ಆ ಯಜ್ಞವೇದಿಕೆಯಲ್ಲಿದ್ದನು.

೧೯. ಅಲ್ಲಿ ಚತುರ್ಮುಖ ಬ್ರಹ್ಮನೇ ಸಾಕ್ಷಾತ್ತಾಗಿ, ಮೂರು ವೇದಗಳ ಪ್ರಯೋಗ ಕ್ರಮವನ್ನು ತಪ್ಪುಬಾರದಂತೆ ನೋಡಿಕೊಳ್ಳುವ ಬ್ರಹ್ಮ (ಋತ್ವಿಗ್ವಿಶೇಷ) ನಾಗಿದ್ದನು. ಇಂದ್ರನೇ ಮೊದಲಾದ ಅಷ್ಟದಿಕ್ಪಾಲಕರೇ ದ್ವಾರಪಾಲಕರಾಗಿ ಯಜ್ಞರಕ್ಷಕರಾಗಿದ್ದರು.

೨೦. ಆ ಮಹಾಯಜ್ಞದಲ್ಲಿ ಯಜ್ಞಪುರುಷನೇ ಸಾಕ್ಷಾತ್ತಾಗಿ ಅಲ್ಲಿಗೆ ಬಂದಿದ್ದನು. ಭೂಮಿದೇವಿಯೇ ಯಜ್ಞವೇದಿಕೆಯಾದಳು. ಹವಿಸ್ಸುಗಳನ್ನು ಸ್ವೀಕರಿಸಲೋಸುಗ ಅಗ್ನಿಯು ಸಾಕ್ಷಾತ್ತಾಗಿ ಸಹಸ್ರ ಸಂಖ್ಯೆಯಿಂದ ತನ್ನ ನಿಜರೂಪವನ್ನು ಧರಿಸಿ ಅಲ್ಲಿ ಸಿದ್ಧನಾಗಿದ್ದನು.

ಆಮಂತ್ರ್ಯಾಶು ಮರೀಚ್ಯಾದ್ಯಾಃ ಪವಿತ್ರೈಕೈಕಧಾರಿಣಃ ।
ಸರ್ವತ್ರ ಸಾಮಿಧೇನ್ಯೋ ತಜ್ಜಾ್ವಲಯಾಮಾಸುರರ್ಚಿಷಂ ॥ ೨೧ ॥

ಸಪ್ತರ್ಷಯಃ ಸಾಮಗಾಥಾಃ ಕುರ್ವಂತಿ ಸ್ಮ ಪೃಥಕ್ಪೃಥಕ್ ।
ಗಾಂ ದಿಶೋ ವಿದಿಶಃ ಖಂ ಚ ಪೂರಯಂತಃ ಶ್ರುತಿಸ್ವರೈಃ ॥ ೨೨ ॥

ನ ವೃತಾಸ್ತತ್ರ ಯೋಗೇಷು ದಕ್ಷೇಣ ಸುಮಹಾತ್ಮನಾ ॥ ೨೩ ॥

ನ ಕೇಚಿದೃಷಯೋ ದೇವಾ ನ ಮನುಷ್ಯಾ ನ ಪಕ್ಷಿಣಃ ।
ನೋದ್ಭಿದೋ ನ ತೃಣಂ ವಾಪಿ ಪಶವೋ ನ ಮೃಗಾಸ್ತಥಾ ॥ ೨೪ ॥

ಗಂಧರ್ವವಿದ್ಯಾಧರಸಿದ್ಧಸಂಘಾ-
ನ್ನಾದಿತ್ಯಸಾಧ್ಯರ್ಷಿಗಣಾನ್ಸಯಕ್ಷಾನ್ ।
ಸಸ್ಥಾವರಾನ್ನಾಗವರಾನ್ಸಮಸ್ತಾ-
ನ್ಸವ್ರೇ ಸ ದಕ್ಷಃ ಸುಮಹಾಧ್ವರೇಷು ॥ ೨೫ ॥

---

೨೧. ಮತ್ತು ಯಜ್ಞಾರ್ಥವಾಗಿ ದಕ್ಷನಿಂದ ಕರೆಯಲ್ಪಟ್ಟ ಮರೀಚಿಯೇ ಮೊದಲಾದ ಋಷಿಗಳು ಒಂದೊಂದು ಪವಿತ್ರವನ್ನು ಧರಿಸಿ, ಸಾಮಿಧೇನೀ ಎಂಬ ಮಂತ್ರೋಚ್ಚಾರಣೆಯಿಂದ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡಿದರು.

೨೨. ಭೃಗುವೇ ಮೊದಲಾದ ಸಪ್ತರ್ಷಿಗಳು ಬೇರೆಬೇರೆಯಾಗಿ ಸಾಮಗಾನವನ್ನು ಮಾಡುತ್ತಲಿದ್ದರು. ಅವರು ಪಠಿಸುತ್ತಿದ್ದ ವೇದಘೋಷದಿಂದ ಭೂಮಿಯೂ ದಿಕ್ಕುಗಳೂ, ವಿದಿಕ್ಕುಗಳೂ, ಆಕಾಶವೂ ತುಂಬಿ ಹೋದವು.

೨೩–೨೪. ಆ ಯಾಗಕ್ಕೆ ಋಷಿಗಳಾಗಲಿ, ದೇವತೆಗಳಾಗಲಿ, ಮನುಷ್ಯರಾಗಲಿ, ಪಕ್ಷಿಗಳಾಗಲಿ ಮಹಾತ್ಮನಾದ ದಕ್ಷಬ್ರಹ್ಮನಿಂದ ಕರೆಯಲ್ಪಡದಿರಲಿಲ್ಲ. ಎಂದರೆ ಎಲ್ಲರೂ ಕರೆಯಲ್ಪಟ್ಟಿದ್ದರು. ಹಾಗೆಯೇ ವೃಕ್ಷಗಳೂ, ಹುಲ್ಲುಗಳೂ, ಪಶುಗಳೂ, ಮೃಗಗಳೂ ಸಹ ಕರೆಯಲ್ಪಟ್ಟಿದ್ದರು.

೨೫. ಗಂಧರ್ವರನ್ನೂ, ವಿದ್ಯಾಧರರನ್ನೂ, ಸಿದ್ಧರನ್ನೂ, ದ್ವಾದಶಾದಿತ್ಯರನ್ನೂ, ಸಾಧ್ಯರನ್ನೂ, ಋಷಿಗಳನ್ನೂ, ಯಕ್ಷರನ್ನೂ, ಪರ್ವತಗಳನ್ನೂ ಸರ್ಪಗಳನ್ನೂ ಆ ಮಹಾಯಜ್ಞದಲ್ಲಿ ದಕ್ಷಬ್ರಹ್ಮನು ಆಹ್ವಾನಿಸಿದ್ದನು.

ಕಲ್ಪಮನ್ವಂತರಯುಗವರ್ಷಮಾಸದಿವಾನಿಶಾಃ ।
ಕಲಾಕಾಷ್ಠಾನಿಮೇಷಾದ್ಯಾ ವೃತಾಃ ಸರ್ವೇ ಸಮಾಗತಾಃ ॥ ೨೬ ॥

ಮಹರ್ಷಿರಾಜರ್ಷಿ ಸುರರ್ಷಿಸಂಘಾ
ನೃಪಾಃ ಸಪುತ್ರಾಃ ಸಚಿವೈಃ ಸಸೈನ್ಯೈಃ ।
ವಸುಪ್ರಮುಖ್ಯಾ ಗಣದೇವತಾಯಾಃ
ಸರ್ವಾ ವೃತಾಸ್ತೇನ ಗತಾ ಮಖಂ ತಂ ॥ ೨೭ ॥

ಕೀಟಾಃ ಪತಂಗಾ ಜಲಜಾಶ್ಚ ಸರ್ವೇ
ಸರೀಸೃಪಾಃ ಶ್ವಾಪದವಿಘ್ನಘೋರಾಃ ।
ಮೇಘಾಃ ಸಶೈಲಾಃ ಸನದೀಸಮುದ್ರಾಃ
ಸರಾಂಸಿ ವಾಪ್ಯಶ್ಚ ಗತಾ ವೃತಾಸ್ತೇ ॥ ೨೮ ॥

---

೨೬. ಕಲ್ಪ, ಮನ್ವಂತರ, ಯುಗ, ವರ್ಷ, ಮಾಸ, ಹಗಲು, ರಾತ್ರಿ ಇವುಗಳ ಅಭಿಮಾನಿ ದೇವತೆಗಳೂ, ಕಲೆ, ದಿಕ್ಕು, ನಿಮೇಷ ಇವುಗಳ ಅಭಿಮಾನಿ ದೇವತೆಗಳೂ ಸಹ ಕರೆಯಲ್ಪಟ್ಟು ಆ ಯಾಗಕ್ಕೆ ಬಂದಿದ್ದರು.

೨೭. ಮಹಾಮುನಿಗಳೂ, ರಾಜರ್ಷಿಗಳೂ ದೇವಋಷಿಗಳೂ ದಕ್ಷನಿಂದ ಆಹ್ವಾನಿತರಾಗಿ ಅಲ್ಲಿಗೆ ಬಂದಿದ್ದರು. ಮತ್ತು ರಾಜರುಗಳು ತಮ್ಮ ತಮ್ಮ ಮಕ್ಕಳು, ಮಂತ್ರಿಗಳು, ಸೈನ್ಯಗಳು ಇವುಗಳೊಂದಿಗೆ ಯುಕ್ತರಾಗಿ ಬಂದಿದ್ದರು. ಅಷ್ಟವಸುಗಳೇ ಮೊದಲಾದ ಗಣದೇವತೆಗಳೆಲ್ಲರೂ ಸಹ ಆ ಯಜ್ಞಕ್ಕೆ ಬಂದಿದ್ದರು.

೨೮. ಕ್ರಿಮಿಕೀಟಗಳು, ದೀಪದ ಹುಳುಗಳು, ಜಲಜಂತುಗಳು, ಕಪಿಗಳು, ಸಿಂಹ ಮೊದಲಾದ ಕ್ರೂರಪ್ರಾಣಿಗಳು, ವಿಘ್ನಕರಗಳಾದ ಪ್ರಾಣಿಗಳು, ಮೇಘಗಳು, ಪರ್ವತಗಳು, ನದೀ ಮತ್ತು ಸಮುದ್ರಗಳು, ಸರೋವರಗಳು, ಕೊಳಗಳು, ಇವೆಲ್ಲವೂ ಕರೆಯಲ್ಪಟ್ಟು ಆ ಯಜ್ಞಕ್ಕೆ ಬಂದಿದ್ದವು.

ಸರ್ವೇ ಸ್ವಭಾಗಂ ಹವಿಷಾಂ ಜಿಘೃಕ್ಷವಃ
ಕ್ರತುಂ ಪ್ರಜಗ್ಮುರ್ದೃಢಯಜ್ವಿನಸ್ತೇ ।
ಪಾತಾಲವಾಸಾ ಅಸುರಾಃ ಸಮಾಗತಾ
ನಾಗಸ್ತ್ರಿಯೋ ದೇವಸಮಾಃ ಸಮುಸ್ತಾಃ ॥ ೨೯ ॥

ಜಗದ್ವರ್ತ್ಯಸ್ತಿ ಯತ್ಕಿಂಚಿಚ್ಚೇತನಾಚೇತನಂ ಪುನಃ ।
ಸರ್ವಂ ವೃತ್ವಾ ಸಮಾರೇಭೇ ಯಜ್ಞಂ ಸರ್ವಸ್ವದಕ್ಷಿಣಂ ॥ ೩೦ ॥

ತಸ್ಮಿನ್ಯಜ್ಞೇ ವೃತಃ ಶಂಭುರ್ನ ದಕ್ಷೇಣ ಮಹಾತ್ಮನಾ ।
'ಕಪಾಲೀತಿ ವಿನಿಶ್ಚಿತ್ಯ ತಸ್ಯ ಯಜ್ಞಾರ್ಹತಾ ನ ಹಿ ॥ ೩೧ ॥

ಕಪಾಲಿಭಾರ್ಯೇತಿ ಸತೀ ದಯಿತಾಪಿ ಸುತಾ ನಿಜಾ ।
ನಾಹೂತಾ ಯಜ್ಞವಿಷಯೇ ದಕ್ಷೇಣ ದೋಷದರ್ಶಿನಾ ॥ ೩೨ ॥

---

೨೯. ತಮ್ಮ ತಮ್ಮ ಹವಿರ್ಭಾಗಗಳನ್ನು ತೆಗೆದುಕೊಳ್ಳಲು ಎಲ್ಲಾ ದೇವತೆಗಳೂ, ವಿಧ್ಯುಕ್ತವಾಗಿ ಯಾಗಮಾಡಿದ ದೀಕ್ಷಿತರುಗಳೂ, ಅಲ್ಲಿಗೆ ಬಂದಿದ್ದರು. ಪಾತಾಳಲೋಕದಲ್ಲಿ ವಾಸಿಸುವ ರಾಕ್ಷಸರೂ, ನಾಗಕನ್ಯೆಯರೂ, ಮತ್ತು ದೇವಸ್ತ್ರೀಯರೂ ಇವರೆಲ್ಲರೂ ಬಂದಿದ್ದರು.

೩೦. ಚೇತನಾಚೇತನಾತ್ಮಕವಾದ ಜಗತ್ತಿನಲ್ಲಿರುವ ವಸ್ತುಗಳೆಲ್ಲವನ್ನೂ ಆ ದಕ್ಷಬ್ರಹ್ಮನು ಕರೆದು, ಸರ್ವಸ್ವದಕ್ಷಿಣವೆಂಬ ಆ ಮಹಾಯಾಗವನ್ನು ಮಾಡಲು ಪ್ರಾರಂಭಿಸಿದನು.

೩೧. ಆದರೆ, ಶಂಕರನು ಅಶುಚಿಯಾದ ಕಪಾಲವನ್ನು ಹಿಡಿದಿರುವುದರಿಂದ ಅವನು ಅಪವಿತ್ರನೆಂದೂ ಯಜ್ಞಕ್ಕೆ ಅನರ್ಹನೆಂದೂ ತಿಳಿದು, ದಕ್ಷಬ್ರಹ್ಮನು ಅವನನ್ನು ಕರೆಯಲೇ ಇಲ್ಲ.

೩೨. ಕೇವಲ ದೋಷದಲ್ಲಿಯೇ ದೃಷ್ಟಿಯುಳ್ಳ ಆದಕ್ಷನು, ಅಪವಿತ್ರವಾದ ಕಪಾಲವನ್ನು ಹಿಡಿದ ಶಂಕರನ ಹೆಂಡತಿಯೆಂದು ತನ್ನ ಪ್ರೀತಿಯ ಮಗಳಾದ ಸತಿಯನ್ನೂ ಆ ಯಾಗಕ್ಕೆ ಕರೆಯಲಿಲ್ಲ.

ಶ್ರುತ್ವಾ ಸತೀ ತಥಾ ಯಜ್ಞಂ ತಾತೇನಾರಬ್ಧಮುತ್ತಮಂ ।
ಕಪಾಲಿಭಾರ್ಯೇತಿ ವೃತಾ ನಾಹಮಿತ್ಯಪಿ ತತ್ತ್ವತಃ ॥ ೩೩ ॥

ಉಚ್ಚೈಶ್ಚುಕೋಪ ದಕ್ಷಾಯ ರಕ್ತನೇತ್ರಾನನಾ ತದಾ ।
ಶಾಪೇನ ದಕ್ಷಂ ದಗ್ಧುಂ ಚ ಮನಶ್ಚಕ್ರೇ ತದಾ ಸತೀ ॥ ೩೪ ॥

ಕೋಪಾವಿಷ್ಟಾಪಿ ಸಾ ಪೂರ್ವಸಮಯಂ ಸ್ಮೃತವತ್ಯಮುಂ ।
ಮನಸೇತಿ ವಿನಿಶ್ಚಿತ್ಯ ನ ಶಶಾಪ ತದಾ ಸತೀ ॥ ೩೫ ॥

ಅಲಂ ಶಾಪೇನ ಮೇ ಪೂರ್ವಂ ಸುದೃಢಃ ಸಮಯಃ ಕೃತಃ ।
ಅಸ್ತೀತಿ ಮಯ್ಯವಜ್ಞಾಯಾಂ ಪ್ರಾಣಾನ್ಮೋಕ್ಷ್ಯೇ ಧ್ರುವಂ ಪುನಃ ॥೩೬॥

ಯದಾ ಸ್ತುತಾऽಹಂ ದಕ್ಷೇಣ ಸುಚಿರಂ ತನಯಾರ್ಥಿನಾ ।
ತದೈವ ಸಮಯೋ ಮೇऽಯಂ ಶಾಪೇನಾಲಂಕರೋಮಿ ತಂ ॥ ೩೭ ॥

---

೩೩. ಸತೀದೇವಿಯು, ತನ್ನ ತಂದೆಯು ಉತ್ತಮವಾದ ಯಾಗವನ್ನು ಮಾಡಲು ಪ್ರಾರಂಭಿಸಿರುವನೆಂದು ಕೇಳಿದಳು. ಮತ್ತು ತಾನು ಕಾಪಾಲಿಯ ಹೆಂಡತಿಯೆಂದು ತನ್ನನ್ನು ಯಜ್ಞಕ್ಕೆ ಕರೆಯಲಿಲ್ಲವೆಂದೂ ತಿಳಿದುಕೊಂಡಳು.

೩೪. ಆಗ ಆ ಸತಿಯು ಕೆಂಪಾದ ಕಣ್ಣುಗಳುಳ್ಳವಳಾಗಿ ದಕ್ಷನಮೇಲೆ ಬಹಳವಾಗಿ ಕೋಪಗೊಂಡು ಅವನನ್ನು ಶಾಪದಿಂದ ಸುಟ್ಟುಹಾಕಬೇಕೆಂದು ಮನಸ್ಸುಮಾಡಿದಳು.

೩೫. ಹೀಗೆ ಕೋಪಗೊಂಡರೂ ಅವಳು ಹಿಂದೆ ನಡೆದ ಸಂಗತಿಯನ್ನು ಜ್ಞಾಪಿಸಿಕೊಂಡು, ಮನಸ್ಸಿನಲ್ಲಿ ಅದರಂತೆ ನಿಶ್ಚಯಿಸಿ, ಆಗ ಶಾಪವನ್ನು ಕೊಡಲಿಲ್ಲ.

೩೬. "ಈಗ ಶಾಪವನ್ನು ಕೊಡುವುದು ಬೇಡ. ಈ ಸಂದರ್ಭದಲ್ಲಿ ಯಾವರೀತಿ ನಡೆಯಬೇಕೆಂಬುದು ಮೊದಲೇ ನಿಶ್ಚಿತವಾಗಿರುವುದು. ಅದರಂತೆ ದಕ್ಷನು ಅನಾದರದಿಂದ ನನ್ನನ್ನು ತಿರಸ್ಕರಿಸಿದರೆ ನಾನು ನಿಶ್ಚಯವಾಗಿಯೂ ಪ್ರಾಣವನ್ನು ಬಿಡುವೆನು.

೩೭. ಮಗಳನ್ನು ಬಯಸಿ ಆ ದಕ್ಷನು ಯಾವಾಗ ನನ್ನನ್ನು ಸ್ತುತಿಸಿದನೋ ಆಗಲೇ ಅವನೊಡನೆ ಈ ಸಂಕೇತವನ್ನು, ಎಂದರೆ, ನನ್ನನ್ನು ತಿರಸ್ಕಾರ

ಇತಿ ಸಂಚಿಂತ್ಯ ಸಾ ದೇವೀ ನಿತ್ಯರೂಪಮಥಾತ್ಮನಃ ।
ಸಸ್ಮಾರಾತುಲಮತ್ಯುಗ್ರನಿಷ್ಕಲಂ ತಜ್ಜಗನ್ಮಯಂ ॥ ೩೮ ॥

ಪೂರ್ವರೂಪಂ ಸ್ಮರಂತೀ ಸಾ ಯೋಗನಿದ್ರಾಹ್ವಯಂ ಹರೇಃ ।
ಏವಂ ಸಂಚಿಂತಯಾಮಾಸ ಮನಸಾ ದಕ್ಷಜಾ ತದಾ ॥ ೩೯ ॥

ಬ್ರಹ್ಮಣೋದಿತದಕ್ಷೇಣ ಯದರ್ಥಮುಪಯಾಚಿತಾ ।
ತತ್ಕಿಂಚಿದಪಿ ನೋ ಜಾತಂ ಶಂಕರೋಽಪಿ ನ ಪುತ್ರವಾನ್ ॥ ೪೦ ॥

ಇದಾನೀಮೇಕಮೇವಾಽಭೂತ್ಕಾರ್ಯಂ ದೇವಗಣಸ್ಯ ಚ ।
ಯಚ್ಛಂಕರಃ ಸಾನುರಾಗೋ ಮತ್ಕೃತೇಽಭೂಚ್ಚ ಯೋಷಿತಿ ॥ ೪೧ ॥

ಭಾವದಿಂದ ಕಂಡರೆ ನಾನು ಪ್ರಾಣವನ್ನು ಬಿಡುವೆನೆಂಬ ಸಂಕೇತವನ್ನು, ಮಾಡಿದ್ದೆನು. ಆಗ ಅದರಂತೆಯೇ ಮಾಡುವೆನು. ಶಾಪವನ್ನು ಕೊಡುವುದು ಬೇಡ."

೩೮. ಹೀಗೆ ಯೋಚಿಸಿ ಆ ಸತೀದೇವಿಯು ಜಗದ್ರೂಪಳೂ, ಗುಣರಹಿತಳೂ, ನೋಡಲಸಾಧ್ಯವಾದ ಜ್ಯೋತಿಸ್ವರೂಪಳೂ, ಮಾಯೆಯೂ ಆದ ತನ್ನ ನಿಜಸ್ವರೂಪವನ್ನು ಸ್ಮರಿಸಿದಳು.

೩೯. ಆ ಸತಿಯು ತನ್ನ ಮೊದಲಿನ ಯೋಗನಿದ್ರೆಯೆಂಬ ವಿಷ್ಣು ಮಾಯೆಯ ರೂಪವನ್ನು ಸ್ಮರಿಸುತ್ತಾ ಮನಸ್ಸಿನಲ್ಲಿ ಹೀಗೆ ಯೋಚಿಸಿದಳು.

೪೦. "ಚತುರ್ಮುಖಬ್ರಹ್ಮನು ಹೇಳಿದಂತೆ ದಕ್ಷಬ್ರಹ್ಮನು ಏತಕ್ಕಾಗಿ ನನ್ನನ್ನು ಸ್ತುತಿಸಿ ಮಗಳನ್ನಾಗಿ ಪಡೆದನೋ ಆ ಕಾರ್ಯವೊಂದೂ ನೆರವೇರಿರುವುದಿಲ್ಲ. ಶಂಕರನು ಇನ್ನೂ ಪುತ್ರವಂತನಾಗಲಿಲ್ಲ.

೪೧. ಈಗ ಶಂಕರನು ನನಗಾಗಿ, ಸ್ತ್ರೀಯಲ್ಲ ಅನುರಕ್ತನಾಗಿರುವ ಒಂದೇ ಒಂದು ದೇವತೆಗಳ ಕಾರ್ಯವು ಮಾತ್ರ ನಡೆದಂತಾಗಿದೆ.

ಮತ್ತೋ ನಾನ್ಯಾ ಪುನಃ ಶಂಭೋ ರಾಗಂ ವರ್ಧಯಿತುಂ ಪುನಃ ।
ಶಕ್ತಾ ನ ಕಾಪಿ ಭವಿತಾ ಸ ನಾನ್ಯಾಂ ಸಂಗ್ರಹೀಷ್ಯತಿ ॥ ೪೨ ॥

ತಥಾಪ್ಯಹಂ ತನುಂ ತ್ಯಕ್ಷ್ಯೇ ಸಮಯಾತ್ಪೂರ್ವಯೋಜಿತಾತ್ ।
ಹಿತಾಯ ಜಗತಾಂ ಕುರ್ಯಾಂ ಪ್ರಾದುರ್ಭಾವಂ ಪುನರ್ಗಿರೌ ॥ ೪೩ ॥

ಪುರಾ ಹಿಮವತಃ ಪೃಷ್ಠೇ ರಮ್ಯೇ ದೇವಗೃಹೋಪಮೇ ।
ಶಂಭುಃ ಸಾರ್ಧಂ ಮಯಾ ರಂತುಂ ಸುಚಿರಂ ಪ್ರೀತಿಸಂಯುತಃ ॥ ೪೪ ॥

ತತ್ರ ಯಾ ಮೇನಕಾ ದೇವೀ ಚಾರ್ವಂಗೀ ಚರಿತವ್ರತಾ ।
ಸುಶೀಲಾ ಸಾ ಪುರಂಧ್ರೀಣಾಮುತ್ತಮಾ ಪಾರ್ವತೀಗಣೇ ॥ ೪೫ ॥

ಸಾ ಮಾಂ ಮಾತೃವದಾಚಷ್ಟ ಸರ್ವಕರ್ಮಸು ನರ್ಮಕಂ ।
ತಸ್ಯಾಂ ಮೇऽತ್ಯನುರಾಗೋऽಭೂತ್ಸಾ ಮೇ ಮಾತಾ ಭವಿಷ್ಯತಿ ॥ ೪೬ ॥

---

೪೨. ನನ್ನ ಹೊರತು ಇನ್ನಾವಸ್ತ್ರೀಯೂ ಆ ಶಂಕರನ ಅನುರಾಗವನ್ನು ತಿರುಗಿ ಹೆಚ್ಚಿಸಲು ಶಕ್ತಳಲ್ಲ. ಮತ್ತು ಆ ಶಂಕರನು ನನ್ನ ಹೊರತು ಇನ್ನಾವಳನ್ನೂ ಸ್ವೀಕರಿಸುವುದಿಲ್ಲ.

೪೩. ಹಾಗಿದ್ದರೂ ಹಿಂದೆ ಮಾಡಿದ ಸಂಕೇತದಂತೆ ಈಗ ಈ ಶರೀರವನ್ನು ಬಿಡುವೆನು. ಆಮೇಲೆ ಜಗತ್ತಿನ ಹಿತಕ್ಕಾಗಿ ಈ ಹಿಮವಂತನಲ್ಲಿಯೇ ತಿರುಗಿ ಜನಿಸುವೆನು.

೪೪. ಹಿಂದೆ ಶಂಕರನು ಸ್ವರ್ಗದಂತಿರುವ ಈ ಹಿಮವತ್ಪರ್ವತದ ಮನೋಹರವಾದ ತಪ್ಪಲಿನಲ್ಲಿ ನನ್ನೊಡನೆ ಬಹುಕಾಲ ವಿಹರಿಸಬೇಕೆಂಬ ಅಪೇಕ್ಷೆಯುಳ್ಳವನಾಗಿದ್ದನು.

೪೫. ಅಲ್ಲಿ ಹಿಮವಂತನ ಪತ್ನಿಯೂ ಸುಂದರಿಯೂ ಆದ ಮೇನಕೆ ಇರುವಳು. ಆ ಸುಶೀಲೆಯು ಈ ಪರ್ವದಲ್ಲಿರುವ ಪತಿವ್ರತೆಯರಲ್ಲಿ ಶ್ರೇಷ್ಠಳು.

೪೬. ಆ ಮೇನಕೆಯು ನನಗೆ ಎಲ್ಲ ಕಾರ್ಯಗಳ ರಹಸ್ಯವನ್ನೂ ತಾಯಿಯಂತೆ ತಿಳಿಸುತ್ತಿದ್ದಳು. ನನಗೂ ಅವಳಲ್ಲಿ ಮಾತೃಪ್ರೇಮವು ಇದ್ದಿತು. ಮುಂದೆ ಅವಳೇ ನನಗೆ ತಾಯಿಯಾಗುವಳು.

ಕನ್ಯಾಭಿಃ ಸಾರ್ವತೀಭಿಶ್ಚ ಬಾಲ್ಯಕ್ರೀಡಾಮಹಂ ಚಿರಂ ।
ಕೃತ್ವಾ ಕೃತ್ವಾ ಮೇನಕಾಯಾಃ ಕರಿಷ್ಯೇ ಮೋದಮುತ್ತಮಂ ॥ ೪೭ ॥
ಪುನಶ್ಚಾಹಂ ಭವಿಷ್ಯಾಮಿ ಶಂಭೋರ್ಜಾಯಾತಿವಲ್ಲಭಾ ।
ಕರಿಷ್ಯೇ ದೇವಕಾರ್ಯಾಣಿ ತದುಪಾಯಾದಸಂಶಯಂ ॥ ೪೮ ॥
ಇತಿ ಸಂಚಿಂತಯಂತೀ ಸಾ ಪುನಃ ಕೋಪಸಮಾವೃತಾ ।
ಜಜ್ವಾಲ ದಕ್ಷತನಯಾ ದಕ್ಷದಾರುಣಕರ್ಮಣಾ ॥ ೪೯ ॥
ಕ್ರೋಧರಕ್ತೇಕ್ಷಣಾ ತತ್ರ ತನುಯಷ್ಟೇಸ್ತದಾ ಸತೀ ।
ಸ್ಫೋಟಂ ಚಕಾರ ದ್ವಾರಾಣಿ ಸರ್ವಾಣ್ಯಾವೃತ್ಯ ಯೋಗತಃ ॥೫೦ ॥
ತೇನ ಸ್ಫೋಟೇನ ಮಹತಾ ತಸ್ಯಾಸ್ತು ಪ್ರಾಣವಾಯವಃ ।
ನಿರ್ಭಿದ್ಯ ದಶಮದ್ವಾರಮಾತ್ಮನಸ್ತೇ ಬಹಿರ್ಯಯುಃ ॥ ೫೧ ॥

---

೪೭. ಆ ಪರ್ವತದಲ್ಲಿರುವ ಇತರ ಹುಡುಗಿಯರೊಡನೆ ಬಾಲ್ಯದ ಆಟಗಳನ್ನಾಡುತ್ತಾ ಆ ಮೇನಕೆಯನ್ನು ತುಂಬ ಸಂತೋಷಗೊಳಿಸುವೆನು.

೪೮. ತಿರುಗಿ ಆಗ ಶಂಕರನಿಗೆ ಅತಿಪ್ರಿಯಳಾದ ಹೆಂಡತಿಯಾಗುವೆನು. ಹೀಗೆ ಈ ವಿಧವಾದ ಉಪಾಯಗಳಿಂದ ದೇವತೆಗಳ ಕಾರ್ಯವನು ನೆರವೇರಿಸುವೆನು.”

೪೯. ಹೀಗೆ ಚಿಂತಿಸುತ್ತಾ ಆ ದಕ್ಷಪುತ್ರಿಯಾದ ಸತಿಯು, ದಕ್ಷಬ್ರಹ್ಮನ್ನ ಕೆಟ್ಟ ನಡತೆಯಿಂದ ಅವನಲ್ಲಿ ತುಂಬ ಕೋಪಗೊಂಡವಳಾದಳು.

೫೦. ಕೋಪದಿಂದ ಕೆಂಪಾದ ಕಣ್ಣುಗಳುಳ್ಳವಳಾಗಿ, ಆ ಸತಿಯು ಲತೆಯಂತೆ ತೆಳ್ಳಗಿರುವ ತನ್ನ ಶರೀರದ ಎಲ್ಲ ದ್ವಾರಗಳನ್ನೂ ಯೋಗಬಲದಿಂದ ಬಂಧಿಸಿ, ದೊಡ್ಡ ಶಬ್ದವನ್ನು ಮಾಡಿ ಬ್ರಹ್ಮರಂಧ್ರವನ್ನು ಭೇದಿಸಿದಳು.

೫೧. ದೊಡ್ಡದಾದ ಆಸ್ಫೋಟ ಶಬ್ದದಿಂದ ಸತಿಯ ಪ್ರಾಣವಾಯುಗಳು ಬ್ರಹ್ಮರಂಧ್ರವನ್ನು ಭೇದಿಸಿಕೊಂಡು ಶರೀರದಿಂದ ಹೊರಗೆ ಬಂದವು.

ತ್ಯಕ್ತಪ್ರಾಣಾಂ ತು ತಾಂ ದೃಷ್ಟ್ವಾ ದೇವಾಃ ಸರ್ವೇಽನ್ತರಿಕ್ಷಗಾಃ।
ಹಾಹಾಕಾರಂ ತದಾ ಚಕ್ರುಃ ಶೋಕವ್ಯಾಕುಲಿತೇಕ್ಷಣಾಃ ॥ ೫೨ ॥

ತತಸ್ತು ಸತ್ಯಾ ಭಗಿನೀಸುತಾ ತಾಂ ದ್ರಷ್ಟುಮಾಗತಾ।
ಚುಕ್ರೋಶ ಶೋಕಾದ್ವಿಜಯಾ ಮೃತಾಂ ದೃಷ್ಟ್ವಾ ಸತೀಂ ಮುಹುಃ॥೫೩॥

ಹಾ ಸತಿ ಕ್ವ ಗತಾಸೀತಿ ಹಾ ಸತೀ ತವ ಕಿಂ ತ್ವಿದಂ।
ಹಾ ಮಾತೃಷ್ವಸರಿತ್ಯುಚ್ಚೈಸ್ತದಾ ಶಬ್ದೋ ಮಹಾನಭೂತ್ ॥ ೫೪ ॥

ವಿಪ್ರಿಯಶ್ರವಣಾದೇವ ಪ್ರಾಣಾಸ್ಯಕ್ತಾಸ್ತ್ವಯಾ ಸತಿ।
ಅಹಂ ಕಥಂ ತು ಜೀವಾಮಿ ದೃಷ್ಟ್ವೇದೃಗ್ವಿಪ್ರಿಯಂ ದೃಢಂ ॥ ೫೫ ॥

ಪಾಣಿನಾ ವದನಂ ಸತ್ಯಾ ಮಾರ್ಜಯಂತೀ ಮುಹುರ್ಮುಹುಃ।
ಕರುಣಂ ವಿಲಪಂತೀ ಸ್ಮ ಮುಖಂ ಜಿಘ್ರತಿ ಸಾ ತದಾ ॥ ೫೬ ॥

---

೫೨. ಆ ಸತಿಯು ಪ್ರಾಣವನ್ನು ಬಿಟ್ಟುದನ್ನು ನೋಡಿ ಆಕಾಶದಲ್ಲಿರುವ ದೇವತೆಗಳು ದುಃಖದಿಂದ ಕಂಬನಿದುಂಬಿ ಹಾಹಾಕಾರವನ್ನು ಮಾಡಿದರು.

೫೩. ಆಮೇಲೆ ಸತಿಯ ಅಕ್ಕನ ಮಗಳಾದ ವಿಜಯೆಯೆಂಬವಳು ಸತಿಯನ್ನು ನೋಡಲು ಬಂದಿದ್ದಳು. ಅವಳು ಹೀಗೆ ಸತಿಯು ಮೃತಳಾದ್ದನ್ನು ನೋಡಿ ದುಃಖದಿಂದ ಗಟ್ಟಿಯಾಗಿ ಅತ್ತಳು.

೫೪. ಅವಳು ಅಳುತ್ತಾ, "ಅಯ್ಯೋ ಸತಿಯೇ, ಎಲ್ಲಿಗೆ ಹೋದೆ? ಹಾ ಸತಿಯೆ, ನಿನಗೆ ಇದೇನಾಯಿತು? ಹಾ ಚಿಕ್ಕಮ್ಮನೇ" ಎಂದು ಮೊದಲಾಗಿ ಗಟ್ಟಿಯಾಗಿ ರೋದನವನ್ನು ಮಾಡುತ್ತಿದ್ದಳು.

೫೫. "ಓ ಸತಿಯೇ, ಅಶುಭವನ್ನು ಕೇಳಿದೊಡನೆಯೇ ನೀನು ಹೀಗೆ ಪ್ರಾಣಗಳನ್ನು ಬಿಟ್ಟಿರುವೆಯಲ್ಲಾ? ಆದರೆ ನಾನು ಈ ವಿಧವಾಗಿ ಮೃತಳಾಗಿರುವ ನಿನ್ನನ್ನು ಕಣ್ಣಾರೆ ಕಂಡು ಹೇಗೆ ಜೀವಿಸಲಿ?"

೫೬. ತನ್ನ ಕೈಯಿಂದ ಸತಿಯ ಮುಖವನ್ನು ಪುನಃ ಪುನಃ ಸವರುತ್ತಾ ಆ ವಿಜಯೆಯು ಆರ್ತಧ್ವನಿಯಿಂದ ಅಳುತ್ತಿದ್ದಳು; ಮತ್ತು ಅವಳ ಮುಖವನ್ನು ಮತ್ತೆ ಮತ್ತೆ ಆಘ್ರಾಣಿಸುತ್ತಿದ್ದಳು.

ಸಿಂಚಂತೀ ನೇತ್ರಜೈಸ್ತೋಯೈಃ ಸತ್ಯಾಃ ಸಾ ಹೃದಯಂ ಮುಖಂ ।
ಕೇಶಾನುಲ್ಲಾಸ್ಯ ಪಾಣಿಭ್ಯಾಂ ವೀಕ್ಷಂತೀ ವದನಂ ಮುಹುಃ ॥ ೫೭ ॥

ಊರ್ಧ್ವಾಧಃ ಕಂಪಿತಶಿರಾಃ ಶೋಕವ್ಯಾಕುಲಿತೇಂದ್ರಿಯಾ ।
ಹೃದಯಂ ಪಂಚಶಾಖಾಭ್ಯಾಂ ವಿನಿಹಂತೀ ತಥಾ ಶಿರಃ ॥ ೫೮ ॥

ಇದಂ ಚ ವಚನಂ ಸಾಶ್ರುಕಂಠಾ ಸಾ ವಿಜಯಾऽಬ್ರವೀತ್ ।
ಶ್ರುತ್ವಾ ತೇ ಮರಣಂ ಮಾತಾ ವೀರಿಣೀ ಶೋಕಕರ್ಶಿತಾ ॥ ೫೯ ॥

ಧಾರಯಂತೀ ಕಥಂ ಪ್ರಾಣಾನ್ಸದ್ಯಸ್ತ್ಯಕ್ಷ್ಯತಿ ಜೀವಿತಂ।
ಸ ತಥಾ ನಿರನುಕ್ರೋಶಃ ಕ್ರೂರಕರ್ಮಾ ಪಿತಾ ತವ ॥ ೬೦ ॥

ಪ್ರಮಿತಾಂ ಭವತೀಂ ಶ್ರುತ್ವಾ ಕಥಂ ಧಾಸ್ಯತಿ ಜೀವಿತಂ ।
ವಿಚಿಂತ್ಯ ನೂನಂ ಕರ್ಮಾಣಿ ಸ್ವೀಯಾನಿ ಭವತೀಂ ಪ್ರತಿ ॥ ೬೧ ॥

ಕೃತಾನಿ ನೃಶಂಸಾನಿ ದಕ್ಷಃ ಶೋಕಾಕುಲಸ್ತದಾ ।
ಯಜ್ಞಾ ಸ ಚ ಜ್ಞಾನಶೀಲಃ ಕಥಂ ಯಜ್ಞೇ ಪ್ರವರ್ತತೇ ॥ ೬೨ ॥

---

೫೭. ಕಣ್ಣೀರಿನಿಂದ ಆ ಸತಿಯ ಎದೆಯನ್ನೂ ಮುಖವನ್ನೂ ತೋಯಿಸುತ್ತಾ ಅವಳ ಕೇಶಗಳನ್ನೂ ಕೈಯಿಂದ ಸವರುತ್ತಾ, ಪದೇ ಪದೇ ಅವಳ ಮುಖವನ್ನು ನೋಡುತ್ತ ರೋದನ ಮಾಡುತ್ತಿದ್ದಳು.

೫೮. ತಲೆಯನ್ನು ಮೇಲಕ್ಕೂ ಕೆಳಕ್ಕೂ ಅಲುಗಿಸುತ್ತಾ, ದುಃಖದಿಂದ ಮೈಮೇಲೆ ಸ್ಮೃತಿಯಿಲ್ಲದೆ, ತನ್ನ ಎದೆಯನ್ನೂ ತಲೆಯನ್ನೂ ಕೈಗಳಿಂದ ಹೊಡೆದುಕೊಳ್ಳುತ್ತಾ, ಆ ವಿಜಯೆಯು ಅಳುತ್ತಲೇ ಗದ್ಗದವಾದ ಸ್ವರದಿಂದ ಹೀಗೆ ಹೇಳಿದಳು.

೫೯. "ಎಲೌ ಸತಿಯೇ, ನಿನ್ನ ಮರಣವಾರ್ತೆಯನ್ನು ಕೇಳಿ ದುಃಖಗೊಂಡು ನಿನ್ನ ತಾಯಿಯಾದ ವೀರಿಣಿಯು ಹೇಗೆ ತಾನೆ ಪ್ರಾಣಗಳನ್ನು ಧರಿಸುವಳು? ದುಃಖದಿಂದ ತಕ್ಷಣವೇ ಪ್ರಾಣವನ್ನು ಬಿಡುವಳು.

೬೦. ಕ್ರೂರಕಾರ್ಯವನ್ನು ಮಾಡಿರುವ ದಯಾಶೂನ್ಯನಾದ ಆ ನಿನ್ನ ತಂದೆಯು, ನೀನು ಮೃತಳಾದುದನ್ನು ಕೇಳಿ ಹೇಗೆ ಜೀವದಿಂದಿರುವನು?

೬೧-೬೨. ನಿನ್ನ ವಿಷಯವಾಗಿ ಮಾಡಿದ ಕ್ರೂರ ಕರ್ಮಗಳನ್ನು ನೆನಸಿಕೊಂಡು, ದುಃಖಿತನಾಗಿ, ಯುಕ್ತಾಯುಕ್ತವಿವೇಚನೆಯುಳ್ಳ ಆ ದಕ್ಷನು ವಿಧ್ಯುಕ್ತವಾಗಿ ಆಚರಿಸುತ್ತಿರುವ ಯಜ್ಞದಲ್ಲಿ ಮುಂದೆ ಹೇಗೆತಾನೆ ಪ್ರವರ್ತಿಸಿಯಾನು?

ನಿಃಶ್ರದ್ಧಸ್ಯೈಕ್ತಬುದ್ಧಿಶ್ಚ ಕಥಂ ವಾ ನ ಭವೇತ್ಕ್ರತೌ ।
ಹಾ ಮಾತರ್ದೇಹಿ ವಚನಂ ರುದಂತ್ಯಾ ಬಾಲವನ್ಮಮ ॥ ೬೩ ॥

ಭವತ್ಯಾ ನಿರ್ಗಮೇ ಶೋಕಾದ್ಭ್ರಿಯೇ ಶಲ್ಯಸಮಾನಸೂನ್ ।
ತ್ವಂ ಕಿಂ ಸ್ಮರಸಿ ನೋ ಶಂಭೋರ್ವಿಹಿತಸ್ಯ ಕದಾಚನ ॥ ೬೪ ॥

ತೇನಾಮರ್ಷವಶಂ ಪ್ರಾಪ್ತಾ ಮಾತರ್ಮಾ ಕಿಂ ನ ಭಾಷಸೇ ।
ತದೇವ ವದನಂ ಚಕ್ಷುರ್ಮುಖಂ ಸಾ ನಾಸಿಕಾ ತವ ॥ ೬೫ ॥
ಏತೇಷಾಂ ಕ್ವ ಗತಾಃ ಸರ್ವೇ ವಿಭ್ರಮಾ ಹಸಿತಂ ಕ್ವ ಚ ।

ನನು ತೇ ವಿಭ್ರಮೈರ್ಹೀನಂ ನೇತ್ರಯುಗ್ಮಂ ಸುನಾಸಿಕಂ ।
ಸ್ಮಿತಹೀನಂ ಚ ವದನಂ ದೃಷ್ಟ್ವಾ ಸೋಢಾ ಕಥಂ ಹರಃ ॥ ೬೬ ॥

---

೬೩. ಆ ಯಜ್ಞದಲ್ಲಿ ಆ ದಕ್ಷನು ಶ್ರದ್ಧೆಯಿಲ್ಲದವನೂ, ಬುದ್ಧಿ ಶೂನ್ಯನೂ ಏಕೆ ಆಗಲಾರನು? ಎಲೌ ಮಾತೆಯೇ, ಮಕ್ಕಳಂತೆ ಅಳುತ್ತಿರುವ ನನಗೆ ಉತ್ತರವನ್ನು ಕೊಡು.

೬೪. ನೀನು ಹೋದ ದುಃಖದಿಂದ ಸಲಾಕೆಯಂತೆ ಹರಿತವಾದ ಪ್ರಾಣಗಳನ್ನು ಹೇಗೆ ತಾನೇ ಧರಿಸಲಿ? ಶಂಕರನು ಮತ್ತು ನಾನು ಮಾಡಿದ ಉಪಕಾರವನ್ನು ನೀನು ಸ್ಮರಿಸುವುದಿಲ್ಲವೇ?

೬೫. ಓ ಮಾತೆಯೇ, ಆ ದಕ್ಷನ ಮೇಲಿನ ಸಿಟ್ಟಿನಿಂದ ನನ್ನನ್ನು ಮಾತನಾಡಿಸುವುದಿಲ್ಲವೇ? ಅದೇ ನಿನ್ನ ಮುಖವೂ, ನಿನ್ನ ಕಣ್ಣೂ, ಮುಖವೂ, ನಾಸಿಕೆಯೂ ಎಲ್ಲವೂ ಈಗಲೂ ಹಿಂದಿನಂತೆಯೇ ಇರುವವು. ಆದರೆ ಅವುಗಳ ವಿಲಾಸಗಳೂ ಮುಗುಳುನಗೆಯೂ ಈಗೆಲ್ಲಿ ಹೋದವು?

೬೬. ನಿನ್ನ ಕಣ್ಣುಗಳೂ, ನಾಸಿಕೆಯೂ ಯಾವಾಗಲೂ ವಿಲಾಸ ರಹಿತವಾಗಿ ಇದ್ದದ್ದಿಲ್ಲ. ಈಗ, ಮಂದಹಾಸವಿಲ್ಲದೆ ನಿಸ್ತೇಜಸ್ಕವಾಗಿರುವ ನಿನ್ನ ಮುಖವನ್ನು ನೋಡಿ ಶಂಕರನು ದುಃಖವನ್ನು ಹೇಗೆ ಸಹಿಸುವನು?

ಕಾ ಸುಧಾಸಂಮಿತಂ ವಾಕ್ಯಂ ಹರಾಶ್ರಮುಸಮಾಗತಾಂ ।
ಸೂನೃತಂ ತ್ವಾಮೃತೇ ಮಾತರ್ವದಿಷ್ಯತಿ ಮುಹುರ್ಮುಹುಃ ॥ ೬೭ ॥
ಶ್ರದ್ಧಾವತೀ ಬಾಂಧವೇಷು ಪತ್ಯುರ್ಭಾವವಶಾನುಗಾ ।
ಸರ್ವಲಕ್ಷಣಸಂಪೂರ್ಣಾ ತ್ವತ್ಸಮಾ ಯಾ ಭವಿಷ್ಯತಿ ॥ ೬೮ ॥
ತ್ವದೃತೇ ದೇವದೇವೇಶಃ ಶೋಕಕೋಪಹತಚೇತನಃ ।
ದುಃಖಿತಾತ್ಮಾ ನಿರುತ್ಸಾಹೋ ನಿಶ್ಚೇಷ್ಟಶ್ಚ ಭವಿಷ್ಯತಿ ॥ ೬೯ ॥
ಏವಂ ಲಪಂತೀ ಭೃಶದುಃಖಿತಾ ಸತೀಂ
ಮೃತಾಂ ಸಮಾಕ್ರಾಮ್ಯತಿಶಯಂ ಶುಚಾಹತಾ ।
ಪಪಾತ ಭೂಮೌ ವಿಜಯಾ ವಿರಾವಂ
ವಿತನ್ವತೀ ಚೋರ್ಧ್ವಭುಜಾ ಪ್ರವೇಪತೀ ॥ ೭೦ ॥

॥ ಇತಿ ಶ್ರೀಕಾಲಿಕಾಪುರಾಣೇ ಷೋಡಶೋಽಧ್ಯಾಯಃ ॥

---

೬೭. ಎಲೌ ಮಾತೆಯೇ, ಆಶ್ರಮಕ್ಕೆ ಬಂದ ಮೇಲೆ ನೀನಲ್ಲದೆ ಮತ್ತಾರು ನನ್ನನ್ನು ಆದರಿಸಿ, ಯಾವಾಗಲೂ ಅಮೃತದಂತೆ ಸಂತೋಷ ಕರವಾದ ಮಾತನ್ನಾಡುವರು?

೬೮. ಇನ್ನಾವ ಸ್ತ್ರೀಯು ನಿನ್ನಂತೆ ಬಂಧುಗಳಲ್ಲಿ ಆದರವುಳ್ಳವ ಳಾಗಿಯೂ ಪತಿಯಲ್ಲಿ ಅನುರಕ್ತಳಾಗಿಯೂ, ಎಲ್ಲ ಲಕ್ಷಣಗಳಿಂದ ಕೂಡಿ ದವಳಾಗಿಯೂ ಇರುವಳು?

೬೯. ನೀನಿಲ್ಲದಿದ್ದರೆ ದೇವದೇವನಾದ ಶಂಕರನು ವ್ಯಸನದಿಂದ ಮೂಢ ನಾಗಿ ತುಂಬ ದುಃಖದಿಂದ ಉತ್ಸಾಹವಿಲ್ಲದೆ ಯಾವ ವ್ಯಾಪಾರವನ್ನೂ ಮಾಡ ಲಾರದವನಾಗುವನು."

೭೦. ಮೃತಳಾದ ಸತೀದೇವಿಯನ್ನು ನೋಡಿ ದುಃಖದಿಂದ ಹೀಗೆ ಹೇಳುತ್ತಲೂ ರೋದನಮಾಡುತ್ತಲೂ ಇರುವ ಆ ವಿಜಯೆಯು ಶೋಕಾತಿ ಶಯದಿಂದ ಕೈಗಳನ್ನು ಮೇಲಕ್ಕೆತ್ತಿ, ಶರೀರವೆಲ್ಲವೂ ನಡುಗುತ್ತಿರಲು ಗಟ್ಟಿ ಯಾಗಿ ಅಳುತ್ತಾ ನೆಲದ ಮೇಲೆ ದೊಪ್ಪನೆ ಬಿದ್ದಳು.

ಇಲ್ಲಿಗೆ ಶ್ರೀಕಾಲಿಕಾಪುರಾಣದಲ್ಲಿ ಹದಿನಾರನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ ಅಥ ಶ್ರೀಕಾಲಿಕಾಪುರಾಣೇ ಸಪ್ತದಶೋಽಧ್ಯಾಯಃ ॥

ಹದಿನೇಳನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ಏತಸ್ಮಿನ್ನಂತರೇ ಶಂಭುಃ ಶೋಭನೇ ಮಾನಸೇ ಹ್ರದೇ ।
ಸಮಾಪ್ಯ ಸಂಧ್ಯಾಮಾಯಾತಃ ಸ್ವಮಾಶ್ರಮಪದಂ ಪ್ರತಿ ॥ ೧ ॥

ಆಗಚ್ಛನ್ನೇವ ಸಂರಾವಂ ವಿಜಯಾಯಾ ವೃಷಧ್ವಜಃ ।
ಶುಶ್ರಾವ ದಾರುಣಂ ತೀವ್ರಂ ಚಕಿತಶ್ಚ ತತೋಽಭವತ್ ॥ ೨ ॥

ತತ ಉತ್ಪ್ಲುತ್ಯ ಬಲವತಾ ಮನೋಮಾರುತರಂಹಸಾ ।
ಸ್ವಮಾಶ್ರಮಪದಂ ಶರ್ವ ಆಸಸಾದ ತ್ವರಾನ್ವಿತಃ ॥ ೩ ॥

---

೧. ಮಾರ್ಕಂಡೇಯಮುನಿಯು ಹೇಳತೊಡಗಿದನು:—ಇತ್ತಲಾಗಿ ಶಂಕರನು ರಮ್ಯವಾದ ಮಾನಸಸರೋವರದಲ್ಲಿ ಸಂಧ್ಯಾವಂದನೆಯನ್ನು ಮುಗಿಸಿ ತನ್ನ ಆಶ್ರಮವಿರುವಸ್ಥಳಕ್ಕೆ ಹೊರಟನು.

೨. ಆಶ್ರಮದ ಸಮೀಪಕ್ಕೆ ಬರುತ್ತಿರುವಂತೆಯೇ, ಆ ಶಂಕರನು ವಿಜಯೆಯ ಕಠೋರವಾದ ರೋದನಧ್ವನಿಯನ್ನು ಕೇಳಿ ಗಾಬರಿಗೊಂಡನು.

೩. ಬಳಿಕ ವಾಯುವೇಗ ಮನೋವೇಗದಂತೆ, ವೇಗವಾದ ಗಮನವುಳ್ಳ ಮತ್ತು ಬಲಶಾಲಿಯಾದ ನಂದಿಯನ್ನೇರಿ ಶಂಕರನು ಬೇಗನೆ ತನ್ನ ಆಶ್ರಮಕ್ಕೆ ಬಂದು ಸೇರಿದನು.

ಆಸಾದ್ಯ ದೇವೀಂ ದಯಿತಾಂ ತದಾ ದಾಕ್ಷಾಯಣೀಂ ಹರಃ ।
ಮೃತಾಂ ದೃಷ್ಟ್ವಾಽಪಿ ನ ಜಹೌ ಮೃತೇತಿ ಪ್ರಿಯಭಾವತಃ ॥ ೪ ॥

ತತೋ ನಿರೀಕ್ಷ್ಯ ವದನಮಾಮೃಜ್ಯ ಚ ಪುನಃಪುನಃ ।
ಪಪ್ರಚ್ಛ ಕಸ್ಮಾತ್ಸುಪ್ತಾಸೀತ್ಯೇವಂ ದಾಕ್ಷಾಯಣೀಂ ಮುಹುಃ ॥ ೫ ॥

ತತೋ ಭಗವಚಃ ಶ್ರುತ್ವಾ ತದಾ ತದ್ಭಗಿನೀಸುತಾ ।
ವಿಜಯಾ ಪ್ರಾಹ ನಿಧನಂ ದಾಕ್ಷಾಯಣ್ಯಾ ಯಥಾತಥಾ ॥ ೬ ॥

॥ ವಿಜಯೋವಾಚ ॥

ದಕ್ಷಃ ಕರ್ತುಂ ಕ್ರತುಂ ಶಂಭೋ ದೇವಾನ್ಸರ್ವಾನ್ಸವಾಸವಾನ್ ।
ಆಜುಹಾವ ತಥಾ ದೈತ್ಯಾನ್ರಾಕ್ಷಸಾನ್ಸಿದ್ಧಗುಹ್ಯಕಾನ್ ॥ ೭ ॥

ಬ್ರಹ್ಮಾಣಮಥ ಗೋವಿಂದಮಿಂದ್ರಾದೀನಪಿ ದಿಕ್ಪತೀನ್ ।
ದೇವಯೋನೀಂಸ್ತಥಾ ಸರ್ವಾನ್ಸಾಧ್ಯವಿದ್ಯಾಧರಾದಿಕಾನ್ ॥ ೮ ॥

---

೪. ಪ್ರಿಯಳಾದ ಸತೀದೇವಿಯಿದ್ದಲ್ಲಿಗೆ ಬಂದು, ಶಂಕರನು ಮೃತಳಾದ ಆವಳನ್ನು ನೋಡಿದರೂ ಆವಳಲ್ಲಿದ್ದ ಪ್ರೀತಿಯಿಂದ ಆವಳು ಮೃತಳಾಗಿರುವಳೆಂದು ತಿಳಿಯಲಿಲ್ಲ.

೫. ಆಮೇಲೆ ಶಂಕರನು ಆವಳ ಮುಖವನ್ನು ನೋಡಿ ಕೈಯಿಂದ ಮುಖವನ್ನು ಪುನಃಪುನಃ ಸವರುತ್ತಾ, "ಎಲೈ ಸತಿಯೇ, ಏಕೆ ನಿದ್ರಿಸುತ್ತಿರುವೆ" ಎಂದು ಆವಳನ್ನು ಮತ್ತೆ ಮತ್ತೆ ಕೇಳಿದನು.

೬. ಆಗ ಶಂಕರನ ಮಾತನ್ನು ಕೇಳಿ, ಸತಿಯ ಆಕ್ಕನ ಮಗಳಾದ ವಿಜಯೆಯು, ಸತಿಯು ಹೇಗೆ, ಏತಕ್ಕಾಗಿ, ಮೃತಳಾದಳೆಂಬುದನ್ನು ಯಥಾವತ್ತಾಗಿ ಶಂಕರನಿಗೆ ಹೇಳಿದಳು.

೭-೮. ವಿಜಯೆಯು ಹೇಳಿದಳು:—ಓ ಶಂಕರನೇ, ದಕ್ಷಬ್ರಹ್ಮನು ಯಾಗಮಾಡಲು ಪ್ರಾರಂಭಿಸಿ, ಆ ಯಾಗಕ್ಕೆ ಇಂದ್ರನೇ ಮೊದಲಾದ ದೇವತೆಗಳನ್ನೂ, ರಾಕ್ಷಸರನ್ನೂ, ದೈತ್ಯರನ್ನೂ, ಸಿದ್ಧರನ್ನೂ, ಗುಹ್ಯಕರನ್ನೂ, ಬ್ರಹ್ಮನನ್ನೂ, ವಿಷ್ಣುವನ್ನೂ, ಇಂದ್ರನೇ ಮೊದಲಾದ ದಿಕ್ಪಾಲಕರನ್ನೂ, ಮಿಕ್ಕ ಕಿನ್ನರರೇ ಮೊದಲಾದವರನ್ನೂ, ಸಾಧ್ಯವಿದ್ಯಾಧರರೇ ಮೊದಲಾದವರನ್ನೂ ಕರೆದಿರುವನು.

ನಾಹೂತಾನಿ ಕೃತೌ ತೇನ ಯಾನಿ ಸತ್ತ್ವಾನಿ ಶಂಕರ ।
ತಾನಿ ದಕ್ಷೇಣ ನೋ ಸಂತಿ ಸಮಸ್ತಭುವನೇಷ್ವಪಿ ॥ ೯ ॥

ಏವಂ ಪ್ರವಿತತಂ ಯಜ್ಞಂ ಶ್ರುತ್ವೈಷಾ ವಚನಾನ್ಮಮ ।
ವಿಮೃಷ್ಯವತ್ಯನಾಹ್ವಾನೇ ಹೇತುಂ ಶಂಭೋರಥಾತ್ಮನಃ ॥ ೧೦ ॥

ಚಿಂತಯಾನಾಂ ತಥಾಽಹಂ ತಾಂ ಸತೀಂ ಜ್ಞಾತ್ವಾ ಯಥಾಶ್ರುತಂ ।
ಉಕ್ತವತ್ಯಸ್ಮಿ ಭೂತೇಶ ಯಜ್ಞಾನಾಹ್ವಾನಕಾರಣಂ ॥ ೧೧ ॥

ಶಂಭುಃ ಕಪಾಲೀ ತಜ್ಜಾಯಾ ತತ್ಸಂಸರ್ಗಾದ್ವಿಗರ್ಹಿತಾ ।
ಅತಃ ಶಂಭುಃ ಸತೀ ಚಾಪಿ ನಾಧ್ವರೇ ಮೇ ಮಿಲಿಷ್ಯತಃ ॥ ೧೨ ॥

ಇತ್ಯನಾಹ್ವಾನಹೇತುರ್ಮೇ ಶ್ರುತಪೂರ್ವಃ ಪುರಾ ಮುಖಾತ್ ।
ದಕ್ಷಸ್ಯ ವೀರಿಣೀಂ ಶ್ಲಕ್ಷ್ಣಾಂ ಗದತಸ್ತಸ್ಯ ಮಂದಿರೇ ॥ ೧೩ ॥

---

೯. ಓ ಶಂಕರನೇ, ಆ ಯಾಗಕ್ಕೆ ದಕ್ಷನಿಂದ ಕರೆಯಲ್ಪಡದಿರುವವರು ಮೂರು ಲೋಕಗಳಲ್ಲಿ ಯಾರೂ ಇಲ್ಲ.

೧೦. ತನ್ನ ತಂದೆಯು ಮಾಡುವ ಆ ಮಹಾಯಜ್ಞದ ವಿಷಯವನ್ನು ನನ್ನಿಂದ ತಿಳಿದು ಈ ಸತಿಯು, ತನ್ನನ್ನೂ ನಿನ್ನನ್ನೂ ಕರೆಯದೇ ಇರುವುದಕ್ಕೆ ಕಾರಣವೇನೆಂದು ಯೋಚಿಸಿದಳು.

೧೧. ಹೀಗೆ ಚಿಂತಿಸುತ್ತಲಿರುವ ಆ ಸತಿಗೆ, ನಿಮ್ಮನ್ನು ಯಾಗಕ್ಕೆ ಕರೆಯದಿರುವ ಕಾರಣವನ್ನು, ನಾನು ಕೇಳಿರುವ ಮಟ್ಟಿಗೆ ಆ ಸತಿಗೆ ಹೇಳಿದೆನು.

೧೨. ಶಂಕರನು ಅಶುಚಿಯಾದ ಕಪಾಲವನ್ನು ಧರಿಸಿರುವುದರಿಂದ ಅಪವಿತ್ರನು. ಅವನ ಸಂಬಂಧದಿಂದ ಸತಿಯೂ ಅಪವಿತ್ರಳು. ಆದುದರಿಂದ ಶಂಕರನೂ ಸತಿಯೂ ನಮ್ಮ ಯಾಗಕ್ಕೆ ಬರಲಾಗದು.

೧೩. ಹೀಗೆ ನಿಮ್ಮಗಳನ್ನು ಕರೆಯದಿರುವುದಕ್ಕೆ ಕಾರಣವನ್ನು ದಕ್ಷ ಬ್ರಹ್ಮನೇ ತನ್ನ ಹೆಂಡತಿಯಾದ ವೀರಿಣಿಗೆ ಹೇಳುತ್ತಿದ್ದುದನ್ನು ಅವನ ಮುಖದಿಂದಲೇ ನಾನು ಕೇಳಿರುವೆನು.

ಏತಚ್ಛ್ರುತ್ವಾ ವಮವು ವಚಃ ಸಾ ವಿವರ್ಣಮುಖೀ ಕ್ಷಿತೌ ।
ಉಪವಿಷ್ಟಾ ನ ಮಾಂ ಕಿಂಚಿದುಕ್ತ್ವಾ ಕೋಪಪರಾಯಣಾ ॥ ೧೪ ॥

ಬಭೂವ ವದನಂ ತಸ್ಯಾಸ್ತತ್ಕ್ಷಣಾತ್ಪರುಷಂ ಹರ ।
ಭ್ರುಕುಟೀಕುಟಿಲಂ ಶ್ಯಾಮಂ ಯಥಾ ಖಂ ಧೂಮಕೇತುನಾ ॥ ೧೫ ॥

ಸಾ ಮುಹೂರ್ತಮಿವ ಧ್ಯಾತ್ವಾ ಸ್ಫೋಟೇನ ಮಹತಾ ತತಃ ।
ಪ್ರಾಣಾನುದಸೃಜಚ್ಚೈಷಾ ಭಿತ್ವಾ ಮೂರ್ಧಾನಮಾತ್ಮನಃ ॥ ೧೬ ॥

॥ ಮಾರ್ಕಂಡೇಯ ಉವಾಚ ॥

ಇತಿ ಶ್ರುತ್ವಾ ವಚಸ್ತಸ್ಯಾ ವಿಜಯಾಯಾ ವೃಷಧ್ವಜಃ ।
ಅತೀವ ಕೋಪಾದುತ್ತಸ್ಥೌ ದಿಧಕ್ಷುರಿವ ಪಾವಕಃ ॥ ೧೭ ॥

---

೧೪. ನಾನು ಹೇಳಿದ ಈ ಮಾತನ್ನು ಕೇಳಿ ಸತಿಯು ಮುಖದಲ್ಲಿ ಕಳೆಗುಂದಿ ಕೋಪಗೊಂಡು ನನಗೆ ಏನನ್ನೂ ಹೇಳದೆ ಭೂಮಿಯಲ್ಲಿ ಕುಳಿತಳು.

೧೫ ಬಳಿಕ ಕೋಪದಿಂದ ಹುಬ್ಬುಗಂಟಿಕ್ಕಿದ ಅವಳ ಮುಖವು, ಧೂಮಕೇತುವಿನಿಂದ ಆಕಾಶವು ಕಪ್ಪಾಗುವಂತೆ, ಬಹಳ ಕ್ರೂರವಾಗಿ ಕಂಡಿತು.

೧೬. ಆಮೇಲೆ ಅವಳು ಸ್ವಲ್ಪಹೊತ್ತು ಧ್ಯಾನಮಗ್ನಳಾಗಿದ್ದು, ದೊಡ್ಡ ಸ್ಫೋಟವನ್ನು ಮಾಡಿ ತನ್ನ ಶಿರಸ್ಸಿನ ಬ್ರಹ್ಮರಂಧ್ರವನ್ನು ಭೇದಿಸಿ ಪ್ರಾಣವನ್ನು ಬಿಟ್ಟಳು.

೧೭. ಮಾರ್ಕಂಡೇಯನು ಹೇಳಿದನು :—ಈ ರೀತಿಯಾದ ವಿಜಯೆಯ ಮಾತನ್ನು ಕೇಳಿ ಶಂಕರನು ಪ್ರಪಂಚವನ್ನು ದಹಿಸುತ್ತಿಸುವ ಪ್ರಳಯಾಗ್ನಿಯಂತೆ ಮಹಾಕೋಪದಿಂದ ಎದ್ದು ನಿಂತನು.

ತಸ್ಯ ಕೋಪಪರೀತಸ್ಯ ಕರ್ಣನಾಸಾಕ್ಷಿವಕ್ತ್ರತಃ
ಘೋರಾ ಜ್ವಲಂತ್ಯಃ ಕಣಿಕಾಃ ಸೃಜಂತ್ಯೋಽಗ್ನೇರ್ಮಹಾರವಂ ॥ ೧೪ ॥
ಉಲ್ಕಾ ವಿನಿಃಸೃತಾ ಬಹ್ವ್ಯಃ ಕಲ್ಪಾಂತಾದಿತ್ಯವರ್ಚಸಃ ।
ಅಥ ತತ್ರ ಜಗಾಮಾಶು ದಕ್ಷೋ ಯತ್ರ ಮಹಾತಪಾಃ ॥ ೧೫ ॥
ಯಜ್ಞಂ ಚಕ್ರೇ ಹರೋ ಗತ್ವಾ ಯಜ್ಞವಾಟಾದ್ಬಹಿಃ ಸ್ಥಿತಃ ।
ತಂ ಯಜ್ಞಂ ದದೃಶೇ ಭರ್ಗಃ ಕೋಪೇನ ಮಹತಾ ವೃತಃ ॥ ೧೦ ॥
ಮಹಾಧನಸಮಾಪನ್ನಂ ಪಾತ್ರೀಜುಹ್ವಾದಿಭಿರ್ವೃತಂ ।
ಹುತಾಜ್ಯಾಹುತಿಸಂವೃದ್ಧಂ ದೀಪ್ತವಹ್ನಿವಿರಾಜಿತಂ ॥ ೧೧ ॥
ಯಥಾಸ್ಥಾನಸ್ಥಿತಾನ್ಸರ್ವಾನ್ದಿಕ್ಪಾಲಾನ್ಸಾಯುಧಧ್ವಜಾನ್ ।
ವಿಧಾತಾರಂ ತಥಾ ವಿಷ್ಣುಂ ಯಜ್ಞಮಧ್ಯೇ ವ್ಯವಸ್ಥಿತಂ ॥ ೧೨ ॥

---

೧೪. ಹೀಗೆ ಕೋಪಗೊಂಡಾಗ ಆ ಶಂಕರನ ಕಿವಿ, ಮೂಗು ಮತ್ತು ಮುಖದಿಂದ ಭಯಂಕರವಾದ ಅಗ್ನಿಜ್ವಾಲೆಗಳೂ, ಪ್ರಳಯಕಾಲದ ಸೂರ್ಯನಂತಿರುವ ಕೆಂಡಗಳೂ ಮಹಾಶಬ್ದವನ್ನು ಮಾಡುತ್ತ ಹೊರಬಿದ್ದವು.

೧೫. ಬಳಿಕ ಆ ಶಂಕರನು, ಮಹಾತಪಸ್ವಿಯಾದ ದಕ್ಷನು ಯಜ್ಞವನ್ನು ಮಾಡುತ್ತಿದ್ದ ಪ್ರದೇಶಕ್ಕೆ ಬೇಗನೆ ಹೋಗಿ ಯಜ್ಞಶಾಲೆಯ ಹೊರ ಭಾಗದಲ್ಲಿ ನಿಂತನು.

೧೦-೧೧. ಆ ಯಜ್ಞಶಾಲೆಯಲ್ಲಿ ಯಥೇಚ್ಛವಾಗಿ ಧನವಿದ್ದಿತು. ಸೋಮಪಾನಪಾತ್ರೆಗಳೂ, ಸ್ರುಕ್ಸ್ರುವಗಳೇ ಮೊದಲಾದ ಯಜ್ಞಸಾಮಗ್ರಿಗಳೂ ಅಲ್ಲಿದ್ದವು. ಯಜ್ಞಾಗ್ನಿಗಳು ಆಜ್ಯಾಹುತಿಗಳಿಂದ ವೃದ್ಧಿಗೊಳಿಸಲ್ಪಟ್ಟು ಜಾಜ್ವಲ್ಯಮಾನವಾಗಿ ಉರಿಯುತ್ತಿದ್ದವು. ಇಂತಹ ಯಜ್ಞವನ್ನು ಮಹಾಕೋಪಾವಿಷ್ಟನಾದ ಶಂಕರನು ಹೊರಗಿನಿಂದಲೇ ನೋಡಿದನು.

೧೨. ಮೊದಲೇ ಕೋಪಗೊಂಡಿದ್ದ ಆ ಶಂಕರನು, ಆ ಯಜ್ಞಶಾಲೆಯಲ್ಲಿ ತಮ್ಮ ತಮ್ಮ ಆಯುಧಧ್ವಜಗಳೊಡನೆ ತಮಗೆ ನಿರ್ದಿಷ್ಟವಾದ ಸ್ಥಾನಗಳಲ್ಲಿ ಕುಳಿತಿರುವ ದಿಕ್ಪಾಲಕರನ್ನೂ, ಬ್ರಹ್ಮನನ್ನೂ, ವಿಷ್ಣುವನ್ನೂ ನೋಡಿ, ಮತ್ತಷ್ಟು ಕೋಪಗೊಂಡನು.

ದದರ್ಶ ಕುಪಿತಃ ಶಂಭುಸ್ತಾನ್ದೃಷ್ಟ್ವಾತೀವ ಕೋಪಿತಃ ।
ಭಗಂ ಸೂರ್ಯಂ ತಥಾ ಸೋಮಂ ಭಾರ್ಯಾಭಿಃ ಸಹ ಸಂವೃತಂ ॥ ೨೩ ॥

ಸಹಸ್ರಾಕ್ಷಂ ಗೌತಮಂ ಚ ಪೂರ್ವೇ ಭಾಗೇ ವ್ಯವಸ್ಥಿತಂ ।
ಸನತ್ಕುಮಾರಮಾತ್ರೇಯಂ ಭಾರ್ಗವಂ ವಿನತಾಸುತಂ ॥ ೨೪ ॥

ಮರುದ್ಗಣಾಂಸ್ತಥಾ ಸಾಧ್ಯಾನಾಗ್ನೇಯ್ಯಂ ಜಾತವೇದಸಂ ।
ಕಾಲಂ ಸಚಿತ್ರಗುಪ್ತಂ ಚ ಕುಂಭಯೋನಿಂ ಸಗಾಲವಂ ॥ ೨೫ ॥

ವಿಶ್ವೇದೇವಾಂಸ್ತಥಾ ಸರ್ವಾನ್ಕವ್ಯವಾಹಾದಿಕಾನ್ ಪಿತೄನ್ ।
ಅಗ್ನಿಷ್ವಾತ್ತಾದಿಕಾನ್ಸರ್ವಾನ್ಭೂತಗ್ರಾಮಂ ಚತುರ್ವಿಧಂ ॥ ೨೬ ॥

ಭೌಮಂ ಪ್ರೇತಗಣಾನ್ಸಿಧ್ಧಾನ್ದಕ್ಷಿಣಾಶಾವ್ಯವಸ್ಥಿತಾನ್ ।
ರಕ್ಷಾಂಸಿ ಚ ಪಿಶಾಚಾಂಶ್ಚ ಭೂತಾನಿ ಮೃಗಪಕ್ಷಿಣಃ ॥ ೨೭ ॥

೨೩-೨೪. ಮತ್ತು ಆ ಶಂಕರನು ಅಲ್ಲಿ, ಭಗನೆಂಬ ಸೂರ್ಯನನ್ನೂ, ಪತ್ನಿಯೊಡನಿರುವ ಚಂದ್ರನನ್ನೂ, ಪೂರ್ವದಿಕ್ಕಿನಲ್ಲಿ ಕುಳಿತಿರುವ ಇಂದ್ರನನ್ನೂ, ಗೌತಮಮುನಿಯನ್ನೂ, ಸನತ್ಕುಮಾರನನ್ನೂ, ಆತ್ರೇಯಮುನಿಯನ್ನೂ, ಶುಕ್ರಾಚಾರ್ಯನನ್ನೂ, ಗರುಡನನ್ನೂ ನೋಡಿದನು.

೨೫. ಮತ್ತು ಅಲ್ಲಿ ವಾಯುದೇವತೆಗಳನ್ನೂ, ಸಾಧ್ಯರನ್ನೂ, ಅಗ್ನಿಯನ್ನೂ, ಚಿತ್ರಗುಪ್ತನೊಡನಿರುವ ಯಮನನ್ನೂ, ಗಾಲವಮುನಿಯೊಡನಿರುವ ಅಗಸ್ತ್ಯಋಷಿಯನ್ನೂ ನೋಡಿದನು.

೨೬. ವಿಶ್ವೇದೇವತೆಗಳನ್ನೂ, ಕವ್ಯವಾಹ ಮತ್ತು ಅಗ್ನಿಷ್ವಾತ್ತರೇ ಮೊದಲಾದ ಪಿತೃದೇವತೆಗಳನ್ನೂ, ದೇವ, ಮನುಷ್ಯ, ತಿರ್ಯಕ್ಪ್ರಾಣಿ, ಸ್ಥಾವರ ಎಂಬ ನಾಲ್ಕು ವಿಧವಾದ ಪ್ರಪಂಚವನ್ನೂ ಅಲ್ಲಿ ನೋಡಿದನು.

೨೭. ಅಂಗಾರಕನನ್ನೂ, ಪ್ರೇತಗಣಗಳೆಂಬ ಪಿಶಾಚಿಗಳನ್ನೂ, ಸಿದ್ಧರನ್ನೂ, ದಕ್ಷಿಣದಿಕ್ಕಿನಲ್ಲಿ ನೋಡಿದನು. ಹಾಗೆಯೇ ರಾಕ್ಷಸರನ್ನೂ, ಭೂತಗಳನ್ನೂ, ಮೃಗಪಕ್ಷಿಗಳನ್ನೂ ಆ ಯಜ್ಞಶಾಲೆಯಲ್ಲಿ ನೋಡಿದನು.

ಕ್ರವ್ಯಾದಾನ್ ಕ್ಷುದ್ರಜಂತೂಂಶ್ಚ ತಥಾ ಪುಣ್ಯಜನೇಶ್ವರಂ ।
ಮಹರ್ಷಿಂ ಮೌದ್ಗಲಂ ರಾಹುಂ ನೈರ್ಋತ್ಯಾಂ ಕಿನ್ನರಾಂಸ್ತಥಾ ॥ ೨೮ ॥

ಮಹೋರಗಾಂಸ್ತಥಾ ನಕ್ರಾನ್ಮತ್ಸ್ಯಾನ್ಗ್ರಹಾಂಶ್ಚ ಕಚ್ಛಪಾನ್ ।
ಸಮುದ್ರಾನ್ಸಪ್ತಸಿಂಧೂಂಶ್ಚ ನದಾಂಸ್ತೀರ್ಥಾನಿ ಗುಹ್ಯಕಾನ್ ॥ ೨೯ ॥

ಮಾನಸಾದಿಹ್ರದಾನ್ ಸರ್ವಾನ್ಗಂಗಾಜಂಬೂನದಾಂಸ್ತಥಾ ।
ಕಾಮಂ ಮಧುಂ ವಸಂತಂ ಚ ವರುಣಂ ಚ ಸಹಾನುಗಂ ॥ ೩೦ ॥

ಶನೈಶ್ಚರಂ ಗಿರೀನ್ಸರ್ವಾನ್ಪಶ್ಚಿಮಾಶಾವ್ಯವಸ್ಥಿತಾನ್ ।
ಪ್ರಾಣಾದಿಪಂಚವಾಯೂಂಶ್ಚ ಸಗಣಂ ಚ ಸಮೀರಣಂ ॥ ೩೧ ॥

ಕಲ್ಪದ್ರುಮಾನ್ ಹಿಮಾದ್ರಿಂ ಚ ಕಶ್ಯಪಂ ಚ ಮಹಾಮುನಿಂ ।
ವಾಯವ್ಯಾಂ ಕಮಲಾವ್ರಾತಂ ಫಲಾನಿ ಚ ಕಲಾನಿಧಿಂ ॥ ೩೨ ॥

---

೨೮. ನೈರ್ಋತದಿಕ್ಕಿನಲ್ಲಿ ಮಾಂಸವನ್ನು ತಿನ್ನುವ ದುಷ್ಟಪ್ರಾಣಿಗಳನ್ನೂ, ಕುಬೇರನನ್ನೂ, ಮೌದ್ಗಲಮಹರ್ಷಿಯನ್ನೂ, ರಾಹುವನ್ನೂ ಮತ್ತು ಕಿನ್ನರರನ್ನೂ ನೋಡಿದನು.

೨೯. ವಾಸುಕಿಯೇ ಮೊದಲಾದ ಮಹಾಸರ್ಪಗಳನ್ನೂ, ಮೊಸಳೆಗಳನ್ನೂ, ಮೀನುಗಳನ್ನೂ, ಆಮೆಗಳನ್ನೂ, ಸಮುದ್ರಗಳನ್ನೂ, ಏಳು ನದೀನದಗಳನ್ನೂ, ತೀರ್ಥಗಳನ್ನೂ ಮತ್ತು ಗುಹ್ಯಕರನ್ನೂ ನೋಡಿದನು.

೩೦. ಮಾನಸವೇ ಮೊದಲಾದ ಸರೋವರಗಳನ್ನೂ, ಗಂಗೆ, ಜಂಬೂ ಮೊದಲಾದ ನದಿಗಳನ್ನೂ, ಮನ್ಮಥನನ್ನೂ ವಸಂತನನ್ನೂ, ಪರಿವಾರದೊಡನಿರುವ ವರುಣನನ್ನೂ ಆ ಯಜ್ಞಶಾಲೆಯಲ್ಲಿ ನೋಡಿದನು.

೩೧. ಪಶ್ಚಿಮದಿಕ್ಕಿನಲ್ಲಿ ಶನೈಶ್ಚರನನ್ನೂ, ಸಮಸ್ತ ಪರ್ವತಗಳನ್ನೂ, ಪ್ರಾಣ, ಅಪಾನ. ವ್ಯಾನ, ಉದಾನ, ಸಮಾನಗಳೆಂಬ ಐದು ವಾಯುಗಳನ್ನೂ, ಆವಹವೇ ಮೊದಲಾದ ಗಣದಿಂದ ಕೂಡಿರುವ ಪ್ರಸಿದ್ಧವಾಯುವನ್ನೂ ಅಲ್ಲಿ ನೋಡಿದನು.

೩೨. ಕಲ್ಪವೃಕ್ಷಗಳನ್ನೂ, ಹಿಮಾಲಯವನ್ನೂ, ಕಶ್ಯಪಮಹಾಮುನಿಯನ್ನೂ, ವಾಯವ್ಯದಿಕ್ಕಿನಲ್ಲಿ ಲಕ್ಷ್ಮಿಯ ಪರಿವಾರಗಳನ್ನೂ, ಫಲಗಳನ್ನೂ, ಚಂದ್ರನನ್ನೂ ನೋಡಿದನು.

ನಾನಾರತ್ನಾನಿ ಹೈಮಾನಿ ಮನುಷ್ಯಾನ್ಪರ್ವತಾಂಸ್ತಥಾ ।
ಹಿಮಾದ್ರಿಮುಖ್ಯಾ ಯಕ್ಷಾಶ್ಚ ಸ್ಥೂಣಾಕರ್ಣಾದಯೋ ಬುಧಾಃ ॥ ೩೩ ॥
ನಲಕೂಬರೇಣ ಸಹಿತೋ ಯಕ್ಷರಾಣ್ನಿರವಾಹನಃ ।
ಧ್ರುವೋ ಧರಶ್ಚ ಸೋಮಶ್ಚ ವಿಷ್ಣುಶ್ಚೈವಾಽನಿಲೋಽನಲಃ ॥ ೩೪ ॥
ಪ್ರತ್ಯೂಷಶ್ಚ ಪ್ರಭಾಸಶ್ಚ ಕೌಬೇರ್ಯಾಂ ಸಂಸ್ಥಿತಾನಿಮಾನ್ ।
ವೃಷಧ್ವಜಂ ವಿನಾ ಸರ್ವಾನ್ರುದ್ರಾಞ್ಜೀವಂ ಮನೂಂಸ್ತಥಾ ॥ ೩೫ ॥
ವಿವಿಧಾನ್ಪಾಹುಜಾನ್ವೈಶ್ಯಾಞ್ಶೂದ್ರಾನಪಿ ಸಮಂತತಃ ।
ಐಶಾನ್ಯಾಂ ವಿವಿಧಾನ್ನಾನಿ ವ್ರೀಹೀನಪಿ ಲತಾ ಅಪಿ ॥ ೩೬ ॥
ಐಶಾನೀಪೂರ್ವಯೋರ್ಮಧ್ಯೇ ಬ್ರಹ್ಮರ್ಷೀನ್ಸಂಶಿತವ್ರತಾನ್ ।
ಮಹರ್ಷೀಂಶ್ಚತುರೋ ವೇದಾನ್ವೇದಾಂಗಾನಿ ತಥೈವ ಷಟ್ ॥ ೩೭ ॥

---

೩೩. ಅನೇಕ ಬಗೆಯ ರತ್ನಗಳನ್ನೂ ಸುವರ್ಣಾಭರಣಗಳನ್ನೂ ಮನುಷ್ಯರನ್ನೂ ಪರ್ವತಗಳನ್ನೂ ನೋಡಿದನು. ಮತ್ತು ಹಿಮಾದ್ರಿಯೇ ಮೊದಲಾದವರೂ, ಸ್ಥೂಣಕರ್ಣನೇ ಮೊದಲಾದ ಯಕ್ಷರೂ ಅಲ್ಲಿದ್ದರು.

೩೪. ನಲಕೂಬರನೊಡನೆ ಯಕ್ಷರಾಜನಾದ ಕುಬೇರನೂ, ಧ್ರುವನೂ, ಚಂದ್ರನೂ, ವಿಷ್ಣುವೂ, ಅಗ್ನಿವಾಯುಗಳೂ ಅಲ್ಲಿದ್ದರು.

೩೫. ಪ್ರತ್ಯೂಷನೂ, ಪ್ರಭಾಸನೂ ಬಂದಿದ್ದರು. ಇವರೆಲ್ಲರೂ ಉತ್ತರದಿಕ್ಕಿನಲ್ಲಿದ್ದರು. ಶಂಕರನನ್ನು ಹೊರತು ಮಿಕ್ಕ ರುದ್ರರೂ, ಬೃಹಸ್ಪತಿಯೂ, ಹದಿನಾಲ್ಕು ಮನುಗಳೂ ಬಂದಿದ್ದರು.

೩೬. ಅನೇಕಮಂದಿ ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ಸಹ ಬಂದಿದ್ದರು. ಈಶಾನದಿಕ್ಕಿನಲ್ಲಿ ಅನೇಕ ಬಗೆಯ ಆಹಾರವಸ್ತುಗಳೂ, ಪವಿತ್ರ ಧಾನ್ಯಗಳೂ, ಲತೆಗಳೂ ಇದ್ದವು.

೩೭. ಈಶಾನ್ಯ ಮತ್ತು ಪೂರ್ವದಿಕ್ಕುಗಳ ಮಧ್ಯದಲ್ಲಿ ಮಹಾವ್ರತ ನಿಷ್ಠರಾದ ಬ್ರಹ್ಮರ್ಷಿಗಳನ್ನೂ, ಮಹರ್ಷಿಗಳನ್ನೂ, ನಾಲ್ಕು ವೇದಗಳನ್ನೂ, ಆರು ವೇದಾಂಗಗಳನ್ನೂ ನೋಡಿದನು.

ನೈರ್ಋತ್ಯಪಶ್ಚಿಮಾಂತಸ್ಥಮನಂತಂ ಶ್ವೇತಪರ್ವತಂ ।
ಕಾದ್ರುವೇಯಸಹಸ್ರೇಣ ಸಹಿತಾನ್ಸರ್ಪಭೋಗಿನಃ ॥ ೩೮ ॥

ಕೇತುಂ ತತ್ರೈವ ಕೂಷ್ಮಾಂಡಂ ಡಾಕಿನೀಗಣಸಂಯುತಂ ।
ತಥಾ ಜಲಧರಾನನ್ಯಾನ್ನಾನಾವರ್ಣಾನ್ಸವಿದ್ಯುತಾನ್ ॥ ೩೯ ॥

ದಿಗ್ಗಜಾನಪಿ ತತ್ರಸ್ಥಾನ್ಸ್ವೈರಾವತಮುಖಾನ್ ಹರಃ ।
ಯಥಾಸ್ಥಾನಸ್ಥಿತಾನ್ಸರ್ವಾನ್ದಿಕ್ಕರಿಣ್ಯಾ ಚ ಸಂಯುತಾನ್ ॥ ೪೦ ॥

ತಮೇವಂ ದೂರತೋ ದೃಷ್ಟ್ವಾ ಯಜ್ಞವಾಟಂ ಮಹಾಧನಂ ।
ವೀರಭದ್ರಾಹ್ವಯಂ ತೂರ್ಣಂ ಪ್ರೇಷಯಾಮಾಸ ತಂ ಪ್ರತಿ ॥ ೪೧ ॥

ವೀರಭದ್ರೋಽಪಿ ಬಹುಭಿಃ ಸಂವೃತೋ ವಿವಿಧೈರ್ಗಣೈಃ ।
ವ್ಯಧ್ವಂಸಯತ್ತತೋ ಯಜ್ಞಂ ದಕ್ಷಸ್ಯ ಸುಮಹಾತ್ಮನಃ ॥ ೪೨ ॥

---

೩೮. ನೈರ್ಋತ್ಯ ಪಶ್ಚಿಮದಿಕ್ಕುಗಳ ಮಧ್ಯದಲ್ಲಿ, ಅನಂತನೆಂಬ ಸರ್ಪವನ್ನೂ, ಶ್ವೇತಪರ್ವತವೆಂಬ ಕೈಲಾಸಪರ್ವತವನ್ನೂ ನೋಡಿದನು. ಮತ್ತು ಅಲ್ಲಿ ಕದ್ರುವಿನ ಮಕ್ಕಳಾದ ಸಾವಿರಾರು ಸರ್ಪಗಳೊಡನೆ ಏಳು ಮುಖ್ಯವಾದ ಸರ್ಪಗಳೂ ಇದ್ದವು.

೩೯. ಮತ್ತು ಆ ಶಂಕರನು ಅಲ್ಲಿ ಕೇತುಗ್ರಹವನ್ನೂ, ಡಾಕಿನೀ ಸಮೂಹದೊಡನಿರುವ ಕೂಷ್ಮಾಂಡವೆಂಬ ಗಣವನ್ನೂ, ವಿದ್ಯುತ್ತಿನಿಂದ ವಿಚಿತ್ರವಾಗಿ ಕಾಣಿಸುವ ವರ್ಣವುಳ್ಳ ಮೇಳಗಳನ್ನೂ ನೋಡಿದನು.

೪೦. ಆಯಾಯ ಸ್ಥಳಗಳಲ್ಲಿ ತಮ್ಮ ತಮ್ಮ ಹೆಣ್ಣಾನೆಗಳೊಂದಿಗೆ ಇರುವ ಐರಾವತವೇ ಮೊದಲಾದ ದಿಗ್ಗಜಗಳನ್ನೂ ಆ ಶಂಕರನು ನೋಡಿದನು.

೪೧. ಹೀಗೆ ಮಹಾಧನಸಮೃದ್ಧಿಯಿಂದ ಕೂಡಿರುವ ಆ ಯಜ್ಞಶಾಲೆಯನ್ನು ಶಂಕರನು ದೂರದಿಂದ ನೋಡಿ, ವೀರಭದ್ರನೆಂಬ ತನ್ನ ಗಣವನ್ನು ಬೇಗನೆ ಅಲ್ಲಿಗೆ ಕಳುಹಿಸಿದನು.

೪೨. ಆ ವೀರಭದ್ರನು ಅನೇಕ ಗಣಗಳೊಡನೆ ಕೂಡಿಕೊಂಡು ಮಹಾತ್ಮನಾದ ಆ ದಕ್ಷನ ಯಜ್ಞವನ್ನು ಧ್ವಂಸಮಾಡಿದನು.

ವಿಕುರ್ವಂತಂ ಮಹಾಯಜ್ಞಂ ವೀರಭದ್ರಂ ಸಮಿಾಕ್ಷ್ಯ ವೈ ।
ವಾರಯಾಮಾಸ ವೈಕುಂಠಃ ಸರ್ವದೇವಗಣಾವೃತಃ ॥ ೪೨ ॥

ತಂ ವಾರ್ಯಮಾಣಂ ದೃಷ್ಟ್ವೈವ ಕ್ರೋಧಸಂರಕ್ತಲೋಚನಃ ।
ಸ್ವಯಂ ವಿವೇಶ ತಂ ಯಜ್ಞಂ ಧ್ವಂಸಯಾಮಾಸ ಚೇಶ್ವರಃ ॥ ೪೪ ॥

ವಿಶಂತಮೇವ ತಂ ಯಜ್ಞೇ ಪ್ರಥಮಂ ಪುರತೋ ಭಗಃ ।
ಬಾಹೂ ವಿತತ್ಯ ಭೂತೇಶಮಾಸಸಾದ ತ್ವರಾನ್ವಿತಃ ॥ ೪೫ ॥

ತಮಾಗತಮಭಿಪ್ರೇಕ್ಷ್ಯ ಭಗೋ೯ೇಽಪಿ ಭೃಶರೋಷಿತಃ ।
ಅಂಗುಲ್ಯಗ್ರಪ್ರಹಾರೇಣ ತಸ್ಯ ನೇತ್ರೇ ಜಘಾನ ಹ ॥ ೪೬ ॥

ಹೀನನೇತ್ರಂ ಭಗಂ ದೃಷ್ಟ್ವಾ ವಿರೂಪಾಕ್ಷಂ ದಿವಾಕರಃ ।
ಸ್ಪರ್ಧಮಾನಸ್ತತಃ ಶರ್ವಮಾಸಸಾದ ತ್ವರಾನ್ವಿತಃ ॥ ೪೭ ॥

---

೪೩. ಇಂತಹ ಮಹಾ ಯಾಗವನ್ನು ವೀರಭದ್ರನು ಹಾಳುಮಾಡುತ್ತಿರುವುದನ್ನು ನೋಡಿ, ವಿಷ್ಣುವು ದೇವತೆಗಳೊಡನೆ ಬಂದು, ಬೇಡವೆಂದು ತಡೆದನು.

೪೪. ವಿಷ್ಣುವು ವೀರಭದ್ರನನ್ನು ತಡೆಯುವುದನ್ನು ನೋಡಿ, ಶಂಕರನು ಕೋಪದಿಂದ ಕೆಂಪಾದ ಕಣ್ಣುಗಳುಳ್ಳವನಾಗಿ, ತಾನೇ ಯಜ್ಞಶಾಲೆಗೆ ಪ್ರವೇಶಿಸಿ ಯಜ್ಞವನ್ನು ಧ್ವಂಸಮಾಡಿದನು.

೪೫. ಆಗ ಯಜ್ಞಶಾಲೆಯನ್ನು ಪ್ರವೇಶಿಸುತ್ತಿರುವ ಶಂಕರನನ್ನು ಮೊದಲು ಭಗನೆಂಬ ಆದಿತ್ಯನು, ಕೈಗಳನ್ನು ಮೇಲಕ್ಕೆತ್ತಿ ತಡೆಯಲು ಬೇಗನೆ ಬಂದನು.

೪೬. ತಡೆಯಲು ಬಂದ ಆ ಭಗನನ್ನು ನೋಡಿ ಶಂಕರನು ಇನ್ನೂ ಕೋಪಗೊಂಡು ತನ್ನ ಬೆರಳಿನ ತುದಿಯಿಂದ ಅವನ ಕಣ್ಣುಗಳಮೇಲೆ ಬಲವಾಗಿ ಹೊಡೆದನು.

೪೭ ಆ ಏಟಿನಿಂದ ಕಣ್ಣುಗಳು ನಾಶವಾಗಿ ಭಗನು ವಿಕಾರವಾದ ದೃಷ್ಟಿಯುಳ್ಳವನಾಗಿರುವುದನ್ನು ನೋಡಿ, ಸೂರ್ಯನು, ಶಂಕರನಮೇಲೆ ಹಠದಿಂದ ಬೇಗನೆ ಅವನ ಸಮೀಪಕ್ಕೆ ಓಡಿ ಬಂದನು.

ತತಃ ಸೂರ್ಯಂ ಮಹಾದೇವಃ ಪಾಣೌ ಧೃತ್ವಾ ಕರೇಣ ಚ ।
ದೂರೀಕೃತ್ಯಾತಿಕುಪಿತೋ ಯಜ್ಞಮೇವಾಭ್ಯಧಾವತ ॥ ೪೮ ॥
ಮಾರ್ತಂಡಶ್ಚ ಹಸನ್ವೇಗಾದ್ವಿತತ್ಯ ವಿಪುಲೌ ಭುಜೌ ।
ಏಹಿ ಯೋತ್ಸ್ಯೇ ತ್ವಯೇತ್ಯುಕ್ತ್ವಾ ತಮಗ್ರೇ ಸ್ಮತ್ಯವಾರಯತ್ ॥ ೪೯ ॥
ಹಸತಸ್ತಸ್ಯ ಸೂರ್ಯಸ್ಯ ಕ್ರೋಧೇನ ವೃಷಭಧ್ವಜಃ ।
ದಂತಾನ್ಕರಪ್ರಹಾರೇಣ ಶಾತಯಾಮಾಸ ವಕ್ತ್ರತಃ ॥ ೫೦ ॥
ವಿದಂತಂ ಮಿಹಿರಂ ದೃಷ್ಟ್ವಾ ಹೀನನೇತ್ರಂ ಭಗಂ ತಥಾ ।
ಸರ್ವೇ ದೇವಾಶ್ಚ ಋಷಯೋ ಯೇ ಚಾನ್ಯೇ ತತ್ರ ದುದ್ರುವುಃ ॥ ೫೧ ॥
ವಿದ್ರಾವ್ಯ ಸರ್ವಾನ್ದೇವಾದೀನ್ ಹರಃ ಪರಮಕೋಪನಃ ।
ಮೃಗರೂಪೇಣಾಪಯಾಂತಂ ಯಜ್ಞಮೇವಾನ್ವಪದ್ಯತ ॥ ೫೨ ॥

---

೪೮. ಬಳಿಕ ಶಂಕರನು ಸೂರ್ಯನನ್ನು ಕೈಯಿಂದ ಎತ್ತಿ ದೂರವಾಗಿ ಎಸೆದು, ಮಹಾ ಕೋಪಾನ್ವಿತನಾಗಿ, ಯಜ್ಞಪ್ರದೇಶಕ್ಕೆ ನುಗ್ಗಿ ಬಂದನು.

೪೯. ಆದರೆ ಆ ಸೂರ್ಯನು, ಶಂಕರನನ್ನು ಹಾಸ್ಯಮಾಡುತ್ತಾ ತನ್ನ ದೊಡ್ಡದಾದ ಭುಜಗಳನ್ನು ತಟ್ಟಿ—ಎಲೈ ಶಂಕರನೇ, ಬಾ. ನಾನು ನಿನ್ನೊಡನೆ ಯುದ್ಧ ಮಾಡುವೆನು ಎಂದು ಅವನೆದುರಿಗೆ ಬಂದು, ಅವನನ್ನು ಅಡ್ಡಗಟ್ಟಿ ನಿಂತನು.

೫೦. ಆಗ ಶಂಕರನು ಕೋಪದಿಂದ, ತನ್ನ ಎದುರಿಗೆ ನಿಂತು ಹಾಸ್ಯ ಮಾಡುತ್ತಿರುವ ಸೂರ್ಯನ ಮುಖದಮೇಲೆ ತನ್ನ ಕೈಯಿಂದ ಬಲವಾಗಿ ಹೊಡೆದು ಅವನ ಹಲ್ಲುಗಳನ್ನು ಉದುರಿಸಿದನು.

೫೧. ಹೀಗೆ ಸೂರ್ಯನಿಗೆ ಹಲ್ಲು ಮುರಿದು ಹೋದುದನ್ನೂ, ಭಗನಿಗೆ ಕಣ್ಣು ಕಿತ್ತುದನ್ನೂ ನೋಡಿ ಅಲ್ಲಿದ್ದ ದೇವತೆಗಳೂ ಋಷಿಗಳೂ ಮತ್ತು ಇತರರೂ ಹೆದರಿ ಓಡಿಹೋದರು.

೫೨. ದೇವತೆಗಳೇ ಮೊದಲಾದವರನ್ನು ಓಡಿಸಿ, ಬಳಿಕ ಶಂಕರನು ಮಹಾ ಕೋಪದಿಂದ ಕೂಡಿ, ಮೃಗರೂಪದಿಂದ ಓಡಿಹೋಗುತ್ತಲಿರುವ ಯಜ್ಞಪುರುಷನನ್ನು ಬೆನ್ನಟ್ಟಿ ಹೋದನು.

ಯಜ್ಞೋಽಪ್ಯಾಕಾಶಮಾರ್ಗೇಣ ಬ್ರಹ್ಮಸ್ಥಾನಂ ವಿವೇಶ ಹ ।
ವೃಷಧ್ವಜೋಽಪಿ ಕುಪಿತೋ ಬ್ರಹ್ಮಸ್ಥಾನಂ ಜಗಾಮ ಹ ॥ ೫೩ ॥
ಬ್ರಹ್ಮಣಃ ಸದನಾದ್ಯಜ್ಞೋ ಭೀತೋ ಭರ್ಗಾದವಾತರತ್ ।
ಅವತೀರ್ಯ ಸತೀದೇಹಂ ಪ್ರವಿವೇಶ ಸ್ವಮಾಯಯಾ ॥ ೫೪ ॥

ಭರ್ಗೋಽಪಿ ದಕ್ಷದುಹಿತುರ್ಮೃತಾಯಾ ನಿಕಟಂ ಗತಃ ।
ಅನ್ವಗಚ್ಛತ್ತದಾ ಯಜ್ಞಂ ದದರ್ಶ ಚ ಸತೀಶವಂ ॥ ೫೫ ॥

ಮೃತಾಂ ದೃಷ್ಟ್ವಾ ತದಾ ದೇವೀಂ ಹರೋ ದಾಕ್ಷಾಯಣೀಂ ಸತೀಂ ।
ವಿಸ್ಮೃತ್ಯ ಯಜ್ಞಂ ತತ್ಪ್ರಾಂತೇ ಸ್ಥಿತೋ ಬಾಢಂ ಶುಶೋಚ ತಾಂ ॥ ೫೬ ॥

---

೫೩. ಆಗ ಯಜ್ಞಪುರುಷನು ಆಕಾಶ ಮಾರ್ಗದಿಂದ ಹೋಗಿ ಬ್ರಹ್ಮನ ಸ್ಥಾನವನ್ನು ಪ್ರವೇಶಿಸಿದನು. ಕೋಪಗೊಂಡ ಶಂಕರನೂ ಸಹ ಅವನ ಹಿಂದೆಯೇ ಹೋಗಿ ಆ ಬ್ರಹ್ಮಸ್ಥಾನವನ್ನು ತಾನೂ ಪ್ರವೇಶಿಸಿದನು.

೫೪. ಆಗ ಯಜ್ಞಪುರುಷನು ಶಂಕರನ ಭಯದಿಂದ ಅಲ್ಲಿಯೂ ನಿಲ್ಲದೆ ಬ್ರಹ್ಮಲೋಕದಿಂದ ಇಳಿದು ಬಂದು ಸತೀದೇವಿಯ ಮೃತಶರೀರವನ್ನು ತನ್ನ ಮಾಯೆಯಿಂದ ಪ್ರವೇಶಿಸಿದನು.

೫೫. ಶಂಕರನೂ ಸಹ ದಕ್ಷನ ಮಗಳಾದ ಸತಿಯು ಮೃತಳಾಗಿರುವ ಪ್ರದೇಶಕ್ಕೆ ಯಜ್ಞಪುರುಷನನ್ನು ಅಟ್ಟಿಸಿಕೊಂಡು ಬಂದು, ಅಲ್ಲಿ ಸತಿಯ ಶವವನ್ನು ನೋಡಿದನು.

೫೬. ಅಲ್ಲಿ ದಕ್ಷ ಪುತ್ರಿಯಾದ ಸತೀದೇವಿಯು ಮೃತಳಾಗಿರುವುದನ್ನು ಕಂಡು, ಶಂಕರನು, ಯಜ್ಞಪುರುಷನನ್ನು ಮರೆತು, ಆ ಸತಿಯ ಶವದ ಸಮೀಪದಲ್ಲಿಯೇ ಕುಳಿತು ಅವಳನ್ನು ಕುರಿತು ತುಂಬ ಶೋಕಮಾಡಿದನು.

ಬಹುವಿಧಗುಣವೃಂದಂ ಚಿಂತಯಞ್ಛೂಲಪಾಣಿ–
ರ್ಲಲಿತದಶನಪಂಕ್ತಿಂ ವಕ್ತ್ರಮುಜ್ಜ್ವಪ್ರಕಾಶಂ ।
ಅರುಣವಶನವಸ್ತ್ರಂ ಭ್ರೂಯುಗಂ ವೀಕ್ಷ್ಯ ತಸ್ಯಾಃ
ಖರತರಪೃಥುಶೋಕವ್ಯಾಕುಲೋಽಸೌ ರುರೋದ ॥ ೫೭ ॥

॥ ಇತಿ ಶ್ರೀಕಾಲಿಕಾಪುರಾಣೇ ಸಪ್ತದಶೋಽಧ್ಯಾಯಃ ॥

---

೫೭. ಶೂಲಪಾಣಿಯಾದ ಆ ಶಂಕರನು, ಸತೀದೇವಿಯ ಸೌಶೀಲ್ಯಾದಿ ಅನೇಕ ಗುಣಗಳನ್ನು ಸ್ಮರಿಸುತ್ತಾ, ಅವಳ ಸುಂದರವಾದ ದಂತಪಂಕ್ತಿಯನ್ನೂ ಕಮಲದಂತಿರುವ ಮುಖವನ್ನೂ ಕೆಂಬಣ್ಣದ ಕೆಳದುಟಿಯನ್ನೂ, ಲತೆಯಂತಿರುವ ಹುಬ್ಬುಗಳ ಸೌಂದರ್ಯವನ್ನೂ ನೋಡಿ, ಅವಳ ಗುಣಗಳನ್ನು ನೆನೆನೆನೆದು, ಬಹಳವಾದ ದುಃಖದಿಂದ ರೋದನಮಾಡಿದನು.

ಇಲ್ಲಿಗೆ ಶ್ರೀಕಾಲಿಕಾಪುರಾಣದಲ್ಲಿ ಹದಿನೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ ಅಥ ಶ್ರೀಕಾಲಿಕಾಪುರಾಣೇಽಷ್ಟಾದಶೋಽಧ್ಯಾಯಃ ॥

ಹದಿನೆಂಟನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ದಾಕ್ಷಾಯಣೀಗುಣಗಣಾನ್ಗಣಯನ್ಗೌರಥಸ್ತದಾ ।
ವಿಲಲಾಪಾತಿದುಃಖಾರ್ತೋ ಮನುಜಃ ಪ್ರಾಕೃತೋ ಯಥಾ ॥ ೧ ॥

ವಿಲಪಂತಂ ತದಾ ಭರ್ಗಂ ವಿಜ್ಞಾಯ ಮಕರಧ್ವಜಃ ।
ರತೀವಸಂತಸಹಿತ ಆಸಸಾದ ಮಹೇಶ್ವರಂ ॥ ೨ ॥

ತಂ ಶುಚಾತಿಪರಿಭ್ರಷ್ಟಂ ಯುಗಪತ್ಸ ರತೀಪತಿಃ ।
ಜಘಾನ ಪಂಚಭಿರ್ಬಾಣೈ ರುದಂತಂ ಭ್ರಷ್ಟಚೇತನಂ ॥ ೩ ॥

---

೧. ಮಾರ್ಕಂಡೇಯ ಮುನಿಯು ಹೇಳತೊಡಗಿದನು:—ಸತೀ ದೇವಿಯ ಗುಣಗಳನ್ನು ಸ್ಮರಿಸುತ್ತಾ ವೃಷಭವಾಹನನಾದ ಆ ಶಂಕರನು, ತುಂಬ ದುಃಖದಿಂದ ಕೂಡಿ ಸಾಮಾನ್ಯ ಮನುಷ್ಯನಂತೆ ವಿಲಾಪ ಮಾಡಿದನು.

೨. ಶಂಕರನು ಹೀಗೆ ರೋದಿಸುತ್ತಿರುವುದನ್ನು ತಿಳಿದು, ಮನ್ಮಥನು ರತೀ ವಸಂತರೊಡನೆ ಶಂಕರನಿರುವಲ್ಲಿಗೆ ಬಂದನು.

೩. ಹೆಚ್ಚಾದ ಶೋಕದಿಂದ ಬುದ್ಧಿಯು ವಿಕಲವಾಗಿ ರೋದನ ಮಾಡುತ್ತಿರುವ ಆ ಶಂಕರನನ್ನು ಮನ್ಮಥನು ಒಂದೇ ಸಾರಿ ಐದು ಬಾಣಗಳಿಂದ ಹೊಡೆದನು.

ಶೋಕಾಭಿಹತಚಿತ್ತೋ೭ಪಿ ಸ್ಮರಬಾಣಸಮಾಕುಲಃ ।
ಸಂಕೀರ್ಣಭಾವಮಾಪನ್ನಃ ಶುಶೋಚ ಚ ಮುಮೋಹ ಚ ॥ ೪ ॥

ಕ್ಷಣಂ ಭೂಮೌ ನಿಪತತಿ ಕ್ಷಣಮುತ್ಥಾಯ ಧಾವತಿ
ಕ್ಷಣಂ ಭ್ರಮತಿ ತತ್ರೈವ ನಿಮೀಲತಿ ವಿಭುಃ ಪುನಃ ॥ ೫ ॥

ಧ್ಯಾಯನ್ದಾಕ್ಷಾಯಣೀಂ ದೇವೀಂ ಹಸಮಾನಃ ಕದಾಚನ ।
ಪರಿಷ್ವಜತಿ ಭೂಮಿಷ್ಠಾಂ ರಸಭಾವೈರಿವ ಸ್ಥಿತಾಂ ॥ ೬ ॥

ಸತೀ ಸತೀತಿ ಸತತಂ ನಾಮ ವ್ಯಾಹೃತ್ಯ ಶಂಕರಃ ।
ಮಾನಂ ತ್ಯಜ ವೃಥೇತ್ಯೇವಮುಕ್ತ್ವಾ ಸ್ಪೃಶತಿ ಪಾಣಿನಾ ॥ ೭ ॥

ಪಾಣಿನಾ ಪರಿಮಾರ್ಜ್ಯೈನಾಮಲಂಕಾರಾನ್ಯಥಾಸ್ಥಿತಾನ್ ।
ತಸ್ಯಾ ವಿಶ್ಲಿಷ್ಯ ಚ ಪುನಸ್ತತ್ರೈವಾನುಯುಯೋಜ ಚ ॥ ೮ ॥

---

೪. ಶೋಕದಿಂದ ಮೂಢವಾದ ಮನಸ್ಸುಳ್ಳವನಾದರೂ ಮನ್ಮಥ ಬಾಣಗಳಿಂದ ವ್ಯಾಪ್ತನಾಗಿ ಆ ಶಂಕರನು ಶೋಕಮೋಹಗಳ ಮಿಶ್ರಭಾವವನ್ನು ಹೊಂದಿ ಮೋಹದಿಂದ ದುಃಖಿಸಿದನು.

೫. ಅವನು ಆ ದುಃಖದಿಂದ ಸ್ವಲ್ಪ ಹೊತ್ತು ಭೂಮಿಯಲ್ಲಿ ಬೀಳುವನು. ಸ್ವಲ್ಪ ಹೊತ್ತು ಎದ್ದು ಓಡುವನು. ಕ್ಷಣಕಾಲ ಅಲ್ಲಿಯೇ ತಿರುಗುವನು. ತಿರುಗಿ ಅಲ್ಲಿಯೇ ಮಲಗುವನು.

೬. ಒಮ್ಮೆ ಸತೀದೇವಿಯನ್ನು ಸ್ಮರಿಸಿ ನಗುತ್ತಾ ಭೂಮಿಯಲ್ಲಿರುವ ಅವಳ ಶರೀರವನ್ನು ಶೃಂಗಾರ ಚೇಷ್ಟೆಗಳಿಂದ ಬದುಕಿರುವವಳನ್ನೋಪಾದಿಯಲ್ಲಿ ಆಲಂಗಿಸುವನು.

೭. ಎಲೌ ಸತಿಯೇ, ಓ ಸತಿಯೇ ಎಂದು ಆಕೆಯ ಹೆಸರನ್ನು ಮತ್ತೆ ಮತ್ತೆ ಕೂಗಿ ಕರೆಯುತ್ತಾ, ವ್ಯರ್ಥವಾದ ಈ ಕೋಪವನ್ನು ಬಿಡು ಎಂದು ಹೇಳುತ್ತಾ ಅವಳ ಮೃತ ಶರೀರವನ್ನು ಮುಟ್ಟುವನು.

೮. ಅವಳನ್ನು ಕೈಯಿಂದ ನೇವರಿಸಿ, ಆಯಾಯ ಸ್ಥಾನದಲ್ಲಿರುವ ಅವಳ ಆಭರಣಗಳನ್ನು ತೆಗೆದು ಪುನಃ ಅವುಗಳನ್ನು ಆಯಾಯ ಸ್ಥಾನಗಳಲ್ಲಿಯೇ ತೊಡಿಸುವನು.

ಏವಂ ಕುರ್ವತಿ ಭೂತೇಶೇ ಮೃತಾ ನೋವಾಚ ಕಿಂಚನ ।
ಯದಾ ಸತೀ ತದಾ ಭರ್ಗಃ ಶೋಕಾದ್ಗಾಢಂ ರುರೋದ ಹ ॥ ೯ ॥

ರುದತಸ್ತಸ್ಯ ಪತತೋ ಬಾಷ್ಪಾನ್ವೀಕ್ಷ್ಯ ತದಾ ಸುರಾಃ ।
ಬ್ರಹ್ಮಾದಯಃ ಪರಾಂ ಚಿಂತಾಂ ಜಗ್ಮುಶ್ಚಿಂತಾಪರಾಯಣಾಃ ॥ ೧೦ ॥

ಬಾಷ್ಪಾಃ ಪತಂತೋ ಭೂಮೌ ಚೇದ್ದಹೇಯುಃ ಪೃಥಿವೀಮಿಮಾಂ ।
ಉಪಾಯಸ್ತತ್ರ ಕಃ ಕಾರ್ಯ ಇತಿ ಹಾ ಹೇತಿ ಚುಕ್ರುಶುಃ ॥ ೧೧ ॥

ತತೋ ವಿಮೃಶ್ಯ ತೇ ದೇವಾ ಬ್ರಹ್ಮಾದ್ಯಾಸ್ತು ಶನೈಶ್ಚರಂ ।
ತುಷ್ಟುವುರ್ಮೂಢಭರ್ಗಸ್ಯ ಬಾಷ್ಪಧಾರಣಕಾರಣಾತ್ ॥ ೧೨ ॥

॥ ದೇವಾ ಊಚುಃ ॥

ಶನೈಶ್ಚರ ಮಹಾಭಾಗ ಲೋಕಾನುಗ್ರಹಕಾರಕ ।
ಮೂಲಶಕ್ತಿಸಮುದ್ಭೂತ ನಮಸ್ತೇ ಸೂರ್ಯಸಂಭವ ॥ ೧೩ ॥

---

೯. ಹೀಗೆ ಆ ಶಂಕರನು ಮಾಡುತ್ತಿರಲು, ಆ ಮೃತಳಾದ ಸತೀ ದೇವಿಯು ಯಾವ ಮಾತನ್ನೂ ಆಡದೆ ಇದ್ದುದರಿಂದ ಶಂಕರನು ದುಃಖದಿಂದ ತುಂಬ ರೋದನ ಮಾಡಿದನು.

೧೦. ಹೀಗೆ ಅಳುತ್ತಿರುವ ಆ ಶಂಕರನ ಕಣ್ಣಿನಿಂದ ಬೀಳುತ್ತಿರುವ ಕಂಬನಿಗಳನ್ನು ನೋಡಿ, ಬ್ರಹ್ಮನೇ ಮೊದಲಾದ ದೇವತೆಗಳು ಬಹಳ ಚಿಂತೆಯಿಂದ ಕಳವಳಗೊಂಡರು.

೧೧. ಈ ಕಣ್ಣೀರು ಭೂಮಿಯಲ್ಲಿ ಬಿದ್ದರೆ ಅದು ಭೂಮಿಯನ್ನೇ ಸುಡುವುದು. ಈಗ ಅದನ್ನು ನಿವಾರಿಸಲು ಏನು ಉಪಾಯವನ್ನು ಮಾಡಬೇಕೆಂದು ತೋಚದೆ ತುಂಬ ಖತಿಗೊಂಡರು.

೧೨. ಆ ಮೇಲೆ ಆ ದೇವತೆಗಳೆಲ್ಲರೂ ಸೇರಿ ಆಲೋಚನೆ ಮಾಡಿ, ಶೋಕದಿಂದ ಮೋಹಿತನಾದ ಶಂಕರನ ಕಣ್ಣೀರನ್ನು ಭೂಮಿಯ ಮೇಲೆ ಬೀಳದಂತೆ ಧರಿಸಲೋಸುಗ ಶನೈಶ್ಚರನನ್ನು ಸ್ತೋತ್ರ ಮಾಡಿದರು.

೧೩. ದೇವತೆಗಳು ಹೀಗೆ ಸ್ತೋತ್ರ ಮಾಡಿದರು:—ಎಲೈ ಮಹಾ ಪೂಜ್ಯನಾದ ದೇವನೇ, ನೀನು ಲೋಕದ ಜನರನ್ನು ಅನುಗ್ರಹಿಸಿ ಕಾಪಾಡು

ನಮಸ್ತೇ ಶೂಲಹಸ್ತಾಯ ಪಾಶಹಸ್ತಾಯ ಧನ್ವಿನೇ ।
ತಥಾ ವರದಹಸ್ತಾಯ ನಮಶ್ಛಾಯಾತ್ಮಜಾಯ ತೇ ॥ ೧೪ ॥

ನೀಲಮೇಘಪ್ರತೀಕಾಶ ಭಿನ್ನಾಂಜನಚಯೋಪಮ ।
ನಮಸ್ತೇ ಸರ್ವಲೋಕಾನಾಂ ಪ್ರಾಣಧಾರಣಹೇತವೇ ॥ ೧೫ ॥

ಗೃಧ್ರಧ್ವಜ ನಮಸ್ತೇಽಸ್ತು ಪ್ರಸೀದ ಭಗವನ್ದೃಢಂ ।
ಬಾಷ್ಪೇಭ್ಯಃ ಶೋಕಜೇಭ್ಯಶ್ಚ ಪಾಹಿ ಭರ್ಗಸ್ಯ ನಃ ಕ್ಷಿತಿಂ ॥ ೧೬ ॥

ಯಥಾ ಪುರಾ ಶತಂ ವರ್ಷಾ ನವ ಜಗ್ರಾಹ ವರ್ಷಣಂ ।
ಭವಾನೇವ ತು ಮೇಘೇಭ್ಯಸ್ತಥಾ ಕುರು ಹರಾಂಬುನಿ ॥ ೧೭ ॥

ಪವನು, ಆದಿಶಕ್ತಿಯಿಂದ ಜನಿಸಿದವನು. ಇಂತಹ ಎಲೈ ಸೂರ್ಯ ಪುತ್ರನೇ, ನಿನಗೆ ನಮಸ್ಕಾರವು.

೧೪. ಎಲೈ ದೇವನೇ, ಶೂಲಧಾರಿಯಾಗಿಯೂ, ಪಾಶಧಾರಿಯಾಗಿಯೂ, ಧನುರ್ಧಾರಿಯಾಗಿಯೂ ಇರುವ ನಿನಗೆ ನಮಸ್ಕಾರವು. ಮತ್ತು ವರವನ್ನು ಕೊಡಲು ಹಸ್ತವನ್ನು ನೀಡಿರುವ ಛಾಯಾದೇವಿಯ ಪುತ್ರನಾದ ನಿನಗೆ ನಮಸ್ಕಾರವು.

೧೫. ಕಪ್ಪಾದ ಮೇಘದಂತೆಯೂ, ಅಂಜನ ಪರ್ವತದ ತುಂಡಿನಂತೆಯೂ ಪ್ರಕಾಶಿಸುವ ಓ ಶನೈಶ್ಚರನೇ, ಎಲ್ಲ ಜನಗಳ ಜೀವನಕ್ಕೆ ಕಾರಣನಾದ ನಿನಗೆ ನಮಸ್ಕಾರವು.

೧೬. ಗೃಧ್ರನೇ ಧ್ವಜದ ಚಿಹ್ನೆಯಾಗಿ ಉಳ್ಳ ಓ ಶನೈಶ್ಚರನೇ, ಪ್ರಸನ್ನನಾಗು. ನಿನಗೆ ನಮಸ್ಕಾರವನ್ನು ಮಾಡುವೆವು. ಶಂಕರನು ಶೋಕದಿಂದ ಸುರಿಸುತ್ತಿರುವ ಕಣ್ಣೀರಿನಿಂದ ದಹಿಸದಂತೆ ಈ ನಮ್ಮ ಭೂಮಿಯನ್ನು ರಕ್ಷಿಸು.

೧೭. ಹಿಂದೆ ನೀನೇ ನೂರೊಂಭತ್ತು ವರ್ಷಗಳ ಪರ್ಯಂತ ಮೇಘಗಳಿಂದ ಸುರಿಸಲ್ಪಟ್ಟ ವೃಷ್ಟಿಯನ್ನು ಹೇಗೆ ಧರಿಸಿದೆಯೋ ಅದರಂತೆ ಈಗಲೂ ನೀನು ಶಂಕರನ ಕಣ್ಣೀರನ್ನು ಧರಿಸುವವನಾಗು.

ತವ ಚಾಪಾಂ ಗ್ರಹಂ ದೃಷ್ಟ್ವಾ ಮೇಘಾಸ್ತೇ ಪುಷ್ಕರಾದಯಃ ।
ಮುಮುಚುಃ ಸತತಂ ವರ್ಷಂ ಮಹೇಂದ್ರಸ್ಯ ಕಿಲಾಜ್ಞಯಾ ॥ ೧೮ ॥

ಆಕಾಶ ಏವ ವರ್ಷಾಂಭಸ್ತತ್ಸರ್ವಂ ಭವತಾ ಪುರಾ ।
ವಿನಾಶಿತಂ ಯಥಾ ಬಾಷ್ಪಂ ತಥಾ ನಾಶಯ ಶೂಲಿನಃ ॥ ೧೯ ॥

ನ ತ್ವಾಮೃತೇಽನ್ಯಃ ಶಕ್ತೋಽಸ್ತಿ ಹರಬಾಷ್ಪನಿವಾರಣೇ ।
ದಹೇತ್ಸದೇವಗಂಧರ್ವಬ್ರಹ್ಮಲೋಕಾನ್ತ್ಸಪರ್ವತಾನ್ ।
ಪೃಥಿವೀಂ ಪತಿತೋ ಬಾಷ್ಪಸ್ತಸ್ಮಾದ್ಧಾರಯ ಮಾಯಯಾ ॥ ೨೦ ॥

॥ ಮಾರ್ಕಂಡೇಯ ಉವಾಚ ॥

ಇತ್ಯೇವಂ ಭಾಷಮಾಣೇಷು ದೇವೇಷು ಮಿಹಿರಾತ್ಮಜಃ ।
ಪ್ರತ್ಯುವಾಚ ಸ ತಾನ್ದೇವಾನ್ಮಾತಿಹೃಷ್ಟಮನಾ ಇವ ॥ ೨೧ ॥

---

೧೮. ಅಲ್ಲದೆ ಆಗ ನೀನು ಜಲವನ್ನು ಧರಿಸುವುದನ್ನು ನೋಡಿ ಇಂದ್ರನ ಆಜ್ಞೆಯಿಂದ ಪುಷ್ಕರನೇ ಮೊದಲಾದ ಮೇಘಗಳು ಮತ್ತಷ್ಟು ಮಳೆಯನ್ನು ಸಂತತವಾಗಿ ಸುರಿಸಿದವು.

೧೯. ಆಗ ನೀನು ಆ ಮಳೆಯ ನೀರನ್ನೆಲ್ಲ ಭೂಮಿಯಮೇಲೆ ಬೀಳದಂತೆ ಆಕಾಶದಲ್ಲಿಯೇ ತಡೆದು ನಾಶಮಾಡಿರುವೆ. ಅದರಂತೆ ಈಗ ಶಂಕರನ ಕಣ್ಣೀರನ್ನು ಭೂಮಿಯಮೇಲೆ ಬೀಳುವುದಕ್ಕೆ ಬಿಡದೆ ಮಧ್ಯದಲ್ಲಿಯೇ ನಾಶಮಾಡು.

೨೦. ನಿನ್ನ ಹೊರತು ಈ ಶಂಕರನ ಕಣ್ಣೀರನ್ನು ನಿವಾರಿಸಲು ಯಾರೂ ಶಕ್ತರಲ್ಲ. ಆ ಕಣ್ಣೀರು ಭೂಮಿಯಮೇಲೆ ಬಿದ್ದದ್ದೇ ಆದರೆ ಪರ್ವತಾದಿಗಳಿಂದ ಕೂಡಿರುವ, ದೇವ ಗಂಧರ್ವ ಬ್ರಹ್ಮಲೋಕಗಳನ್ನೂ ಈ ಭೂಲೋಕವನ್ನೂ ದಹಿಸುವುದು. ಆದುದರಿಂದ ಎಲೈ ಶನೈಶ್ಚರನೇ ಆ ಕಣ್ಣೀರನ್ನು ನಿನ್ನ ಮಾಯಾಶಕ್ತಿಯಿಂದ ಧರಿಸು.

೨೧. ಮಾರ್ಕಂಡೇಯ ಮುನಿಯು ಹೇಳಿದನು:—ಈ ರೀತಿಯಾಗಿ ದೇವತೆಗಳು ಪ್ರಾರ್ಥಿಸಲು, ಸೂರ್ಯಪುತ್ರನಾದ ಶನೈಶ್ಚರನು ಅಷ್ಟೊಂದು ಸಂತೋಷಗೊಳ್ಳದಿರುವನಂತೆ ಆ ದೇವತೆಗಳನ್ನು ಕುರಿತು ಹೀಗೆ ಹೇಳಿದನು.

॥ ಶನೈಶ್ಚರ ಉವಾಚ ॥

ಕರಿಷ್ಯೇ ಭವತಾಂ ಕರ್ಮ ಯಥಾಶಕ್ತಿ ಸುರೋತ್ತಮಾಃ ।
ತಥಾ ಕಿಂತು ವಿದಧ್ಯಂ ಹಿ ನ ಮಾಂ ವೇತ್ತಿ ಯಥಾ ಹರಃ ॥ ೨೨ ॥
ದುಃಖಶೋಕಾಕುಲಸ್ಯಾಸ್ಯ ಸಮೀಪೇ ಬಾಷ್ಪಧಾರಿಣಃ ।
ಕೋಪಾನ್ನಶ್ಯೇಚ್ಛರೀರಂ ಮೇ ನಿಯತಂ ನಾತ್ರ ಸಂಶಯಃ ॥ ೨೩ ॥
ತಸ್ಮಾದ್ಯಥಾ ಮಾಂ ಭೂತೇಶೋ ನ ಜಾನಾತಿ ಸತೀಪತಿಃ ।
ತಥಾ ಕುರುಧ್ವಂ ನೇತ್ರೇಭ್ಯೋ ಹರಲೋತಕಧಾರಿಣಂ ॥ ೨೪ ॥

॥ ಮಾರ್ಕಂಡೇಯ ಉವಾಚ ॥

ತತೋ ಬ್ರಹ್ಮಾದಯೋ ದೇವಾಸ್ತೇ ಸರ್ವೇ ಶಂಕರಾಂತಿಕಂ ।
ಗತ್ವಾ ಹರಂ ಸಂಮುಮುಹುಃ ಸಾಂಸಾರ್ಯಾ ಯೋಗಮಾಯಯಾ॥೨೫॥

---

೨೨. ಶನೈಶ್ಚರನು ಹೇಳಿದನು:—ಎಲೈ ದೇವೋತ್ತಮರೇ, ನಾನು ನನ್ನ ಕೈಲಾದಮಟ್ಟಿಗೆ ನಿಮ್ಮ ಕಾರ್ಯವನ್ನು ನಿರ್ವಹಿಸುವೆನು. ಆದರೆ ನಾನು ಈ ಕಾರ್ಯವನ್ನು ಮಾಡುವುದನ್ನು ಶಂಕರನು ತಿಳಿಯದಿರುವಂತೆ ನೀವು ಮಾಡಬೇಕು.

೨೩. ವ್ಯಸನ ಮತ್ತು ಶೋಕಗಳಿಂದ ಕೂಡಿದ ಆ ಶಂಕರನ ಸಮೀಪದಲ್ಲಿಯೇ ನಾನು ಅವನ ಕಣ್ಣೀರನ್ನು ಧರಿಸತೊಡಗಿದರೆ ಆಗ ಅವನ ಕೋಪದಿಂದ ನನ್ನ ಶರೀರವು ಖಂಡಿತವಾಗಿಯೂ ನಾಶವಾಗುವುದು. ಇದರಲ್ಲಿ ಸಂಶಯವಿಲ್ಲ.

೨೪. ಆದುದರಿಂದ ಎಲೈ ದೇವತೆಗಳೇ, ನಾನು ಹರನ ನೇತ್ರಬಾಷ್ಪವನ್ನು ಧರಿಸುತ್ತಿರುವಾಗ ನನ್ನನ್ನು ಸತೀಪತಿಯಾದ ಶಂಕರನು ತಿಳಿಯದಿರುವಂತೆ ನೀವು ಮಾಡಿರಿ.

೨೫. ಮಾರ್ಕಂಡೇಯ ಮುನಿಯು ಹೇಳಿದನು:—ಆಮೇಲೆ ಬ್ರಹ್ಮನೇ ಮೊದಲಾದ ದೇವತೆಗಳೆಲ್ಲರೂ ಶಂಕರನ ಸಮೀಪಕ್ಕೆ ಹೋಗಿ, ಸಂಸಾರದಲ್ಲಿ ಮೋಹವನ್ನುಂಟುಮಾಡುವ ಯೋಗಮಾಯೆಯಿಂದ ಅವನನ್ನು ತುಂಬ ಮೋಹಗೊಳಿಸಿದರು.

ಶನೈಶ್ಚರೋಽಪಿ ಭೂತೇಶಮಾಸಾದ್ಯಾಂತರ್ಹಿತಸ್ತದಾ ।
ಬಾಷ್ಪವೃಷ್ಟಿಂ ದುರಾಧರ್ಷಾಮವಜಗ್ರಾಹ ಮಾಯಯಾ ॥ ೨೬ ॥
ಯದಾ ಸ ನಾಽಶಕದ್ಬಾಷ್ಪಾಸ್ತ್ಸಂಧಾರಯಿತುಮರ್ಕಜಃ ।
ತದಾ ಮಹಾಗಿರೌ ಕ್ಷಿಪ್ತಾ ಬಾಷ್ಪಾಸ್ತೇ ಜಲಧಾರಕೇ ॥ ೨೭ ॥
ಲೋಕಾಲೋಕಸ್ಯ ನಿಕಟೇ ಜಲಧಾರಾಹ್ವಯೋ ಗಿರಿಃ ।
ಪುಷ್ಕರದ್ವೀಪಪೃಷ್ಠಸ್ಥಸ್ತ್ರೋಯಸಾಗರಪಶ್ಚಿಮೇ ॥ ೨೮ ॥
ಸ ತು ಸರ್ವಪ್ರಮಾಣೇನ ಮೇರುಪರ್ವತಸನ್ನಿಭಃ ।
ತಸ್ಮಿನ್ನಿನ್ಯಸ್ತವಾನ್ಬಾಷ್ಪಾಂಸ್ತದಾಽಶಕ್ತಃ ಶನೈಶ್ಚರಃ ॥ ೨೯ ॥
ಸ ಪರ್ವತೋಽಪಿ ತಾನ್ಬಾಷ್ಪಾನ್ನ ಧರ್ತುಂ ಕ್ಷಮ ಈಶಿತುಃ ।
ವಿದೀರ್ಣಸ್ತೈಸ್ತು ಬಾಷ್ಪೈಃ ಪೃರ್ಭಗ್ನಮಧ್ಯೋಽಭವದ್ದ್ರುತಂ ॥ ೩೦ ॥

---

೨೬. ಆಗ ಶನೈಶ್ಚರನೂ ಕೂಡ ಶಂಕರನಿರುವಲ್ಲಿಗೆ ಹೋಗಿ, ಕಣ್ಣಿಗೆ ಕಾಣಿಸದಂತೆ ಅಲ್ಲಿಯೇ ಅಂತರ್ಧಾನನಾಗಿದ್ದುಕೊಂಡು, ಯಾರಿಂದಲೂ ಧರಿಸಲಸಾಧ್ಯವಾದ ಅವನ ಕಣ್ಣೀರನ್ನೆಲ್ಲ ತನ್ನ ಮಾಯಾಶಕ್ತಿಯಿಂದ ಸ್ವೀಕರಿಸಿದನು.

೨೭. ಆದರೆ ಆ ಸೂರ್ಯ ಪುತ್ರನಾದ ಶನೈಶ್ಚರನು ಆ ಕಣ್ಣೀರುಗಳನ್ನು ಧರಿಸಲು ಅಶಕ್ತನಾಗಿ, ಅದನ್ನು ಜಲಧಾರಕವೆಂಬ ದೊಡ್ಡ ಬೆಟ್ಟದಲ್ಲಿ ಚೆಲ್ಲಿದನು.

೨೮–೨೯. ಆ ಜಲಧಾರಕವೆಂಬ ಬೆಟ್ಟವು ಲೋಕಾಲೋಕಪರ್ವತದ ಸಮೀಪದಲ್ಲಿಯೇ ಇರುವುದು. ಅದು ಎಲ್ಲಾ ರೀತಿಯಲ್ಲಿಯೂ ಮೇರು ಪರ್ವತದಷ್ಟು ದೊಡ್ಡದಾಗಿದ್ದು, ಪುಷ್ಕರ ದ್ವೀಪದ ಹಿಂಭಾಗದಲ್ಲಿ ಜಲ ಸಮುದ್ರದಿಂದ ಪಶ್ಚಿಮಕ್ಕೆ ಇರುವುದು.

೩೦. ಅಂತಹ ಜಲಧಾರಕ ಪರ್ವತದಲ್ಲಿ ಅಶಕ್ತನಾದ ಶನೈಶ್ಚರನು ಆ ಕಣ್ಣೀರನ್ನು ಚೆಲ್ಲಿದನು. ಆದರೆ ಆ ಬೆಟ್ಟವೂ ಸಹ ಆ ಕಣ್ಣೀರನ್ನು ಧರಿಸಲು ಸಾಮರ್ಥ್ಯವಿಲ್ಲದೆ ಆ ಕಣ್ಣೀರಿನಿಂದ ಮಧ್ಯಭಾಗದಲ್ಲಿ ಒಡೆದು ಸೀಳಿ ಹೋಯಿತು.

ತೇ ಬಾಷ್ಪಾಃ ಪರ್ವತಂ ಭಿತ್ವಾ ವಿವಿಶುಸ್ತೋಯಸಾಗರಂ ।
ಸಾಗರೋಽಪಿ ಗೃಹೀತುಂ ತಾನ್ನ ಶಶಾಕ ಖರಾನತಿ ॥ ೩೧ ॥

ತತಸ್ತು ಸಾಗರಂ ಮಧ್ಯೇ ಭಿತ್ವಾ ಬಾಷ್ಪಾಃ ಸಮಾಗತಾಃ ।
ತೋಯಧೇಃ ಪ್ರಾಗ್ಭವಾಂ ವೇಲಾಂ ಸ್ಪರ್ಶಮಾತ್ರಾದ್ವಿಭೇದ ತಾಂ॥೩೨॥

ವಿಭಿದ್ಯ ವೇಲಾಂ ತೇ ಬಾಷ್ಪಾಃ ಪುಷ್ಕರದ್ವೀಪಮಧ್ಯಗಾಃ ।
ನದೀ ಭೂತ್ವಾ ವೈತರಣೇ ಪೂರ್ವಸಾಗರಗಾಽಭವತ್ ॥ ೩೩ ॥

ಜಲಧಾರಸ್ಯ ಭೇದೇನ ಸಂಸರ್ಗಾತ್ಸಾಗರಸ್ಯ ಚ ।
ಅವಾಪ್ಯ ಸೌಮ್ಯತಾಂ ಕಿಂಚಿದ್ಬಾಷ್ಪಾಸ್ತೇನಾಭಿದನ್ ಕ್ಷಿತಿಂ ॥ ೩೪ ॥

ವೈವಸ್ವತಪುರದ್ವಾರೇ ಯೋಜನದ್ವಯವಿಸ್ತೃತಾ ।
ಅದ್ಯಾಪಿ ತಿಷ್ಠತ್ಯಪಗಾ ಹರಲೋತಕಸಂಭವಾ ॥ ೩೫ ॥

---

೩೧. ಬಳಿಕ ಶಂಕರನ ಆ ಬಾಷ್ಪಧಾರೆಗಳು ಜಲಧಾರಪರ್ವತವನ್ನು ಭೇದಿಸಿಕೊಂಡು ಸಮುದ್ರವನ್ನು ಪ್ರವೇಶಿಸಿದವು. ಆ ಸಮುದ್ರವೂ ಸಹ ದುಸ್ಸಾಧ್ಯವಾದ ಬಾಷ್ಪಾಶ್ರುಗಳನ್ನು ಧರಿಸಲಾರದೆ ಹೋಯಿತು.

೩೨. ಆ ಮೇಲೆ ಆ ಬಾಷ್ಪಾಶ್ರುಗಳು ಸಮುದ್ರವನ್ನೂ ಭೇದಿಸಿ ಅದರ ಪಶ್ಚಿಮ ದಡವನ್ನು ಸ್ಪರ್ಶಮಾತ್ರದಿಂದಲೇ ಭೇದಿಸಿದವು.

೩೩. ಹೀಗೆ ಆ ಸಮುದ್ರದ ಪಶ್ಚಿಮ ತೀರವನ್ನು ಭೇದಿಸಿ ಆ ಶಂಕರನ ಕಣ್ಣೀರುಗಳು ಪುಷ್ಕರದ್ವೀಪದ ಮಧ್ಯಕ್ಕೆ ಬಂದು ಅಲ್ಲಿ ವೈತರಣೀ ನದಿಯಾಗಿ ಪ್ರವಹಿಸುತ್ತಾ ಪೂರ್ವ ಸಮುದ್ರಕ್ಕೆ ಸೇರಿದವು.

೩೪. ಜಲಧಾರ ಪರ್ವತವನ್ನು ಭೇದಿಸಿದುದರಿಂದಲೂ, ಸಮುದ್ರದ ಸಂಪರ್ಕದಿಂದಲೂ ಆ ಕಣ್ಣೀರುಗಳ ವೇಗವು ಕಡಮೆಯಾಗಿ, ಸ್ವಲ್ಪಮಟ್ಟಿಗೆ ಸೌಮ್ಯಭಾವವನ್ನು ಹೊಂದಿದುದರಿಂದ ಮುಂದೆ ಭೂಮಿಯನ್ನು ಭೇದಿಸ ಲಾಗಲಿಲ್ಲ.

೩೫. ಶಂಕರನ ಕಣ್ಣೀರಿನಿಂದ ಜನಿಸಿದ ಈ ವೈತರಣೀ ನದಿಯು, ಯಮನ ಪುರವಾದ ಶೈಮಿನೀ ಪಟ್ಟಣದ ದ್ವಾರಭಾಗದಲ್ಲಿ ಎರಡು ಯೋಜನ ಅಗಲವಾಗಿ ಇಂದಿಗೂ ಹರಿಯುತ್ತಿರುವುದು.

ಅಥ ಶೋಕವಿಮೂಢಾತ್ಮಾ ವಿಲಪನ್ವೃಷಭಧ್ವಜಃ ।
ಜಗಾಮ ಪ್ರಾಚ್ಯದೇಶಾಂಸ್ತು ಸ್ಕಂಧೇ ಕೃತ್ವಾ ಸತೀಶವಂ ॥ ೩೬ ॥

ಉನ್ಮತ್ತವದ್ಗಚ್ಛತೋಽಸ್ಯ ದೃಷ್ಟ್ವಾ ಭಾವಂ ದಿವೌಕಸಃ ।
ಬ್ರಹ್ಮಾದ್ಯಾಶ್ಚಿಂತಯಾಮಾಸುಃ ಶವಭ್ರಂಶನಕರ್ಮಣಿ ॥ ೩೭ ॥

ಹರಗಾತ್ರಸ್ಯ ಸಂಸ್ಪರ್ಶಾಚ್ಛವೋ ನಾಯಂ ವಿಶೀರ್ಣತಾಂ ।
ಗಮಿಷ್ಯತಿ ಕಥಂ ತಸ್ಮಾದಸ್ಯ ಭ್ರಂಶೋ ಭವಿಷ್ಯತಿ ॥ ೩೮ ॥

ಇತಿ ಸಂಚಿಂತಯಂತಸ್ತೇ ಬ್ರಹ್ಮವಿಷ್ಣುಶನೈಶ್ಚರಾಃ ।
ಸತೀಶವಾಂತರ್ವಿವಿಶುರದೃಶ್ಯಾ ಯೋಗಮಾಯಯಾ ॥ ೩೯ ॥

ಪ್ರವಿಶ್ಯಾಥ ಶವಂ ದೇವಾಃ ಖಂಡಶಸ್ತೇ ಸತೀಶವಂ ।
ಭೂತಲೇ ಪಾತಯಾಮಾಸುಃ ಸ್ಥಾನೇ ಸ್ಥಾನೇ ವಿಶೇಷತಃ ॥ ೪೦ ॥

---

೩೬. ಅತ್ತಲಾಗಿ ಶಂಕರನು ಶೋಕದಿಂದ ಮೂಢನಾಗಿ ಪ್ರಲಾಪಿಸುತ್ತಾ, ಸತೀದೇವಿಯ ಆ ಶವವನ್ನು ಹೆಗಲಮೇಲೆ ತೆಗೆದುಕೊಂಡು ಪೂರ್ವ ದಿಕ್ಕಿನ ಕಡೆಗೆ ಹೊರಟನು.

೩೭. ಹುಚ್ಚನಂತೆ ಹೋಗುತ್ತಲಿರುವ ಆ ಶಂಕರನ ವ್ಯಾಪಾರವನ್ನು ನೋಡಿ ಬ್ರಹ್ಮನೇ ಮೊದಲಾದ ದೇವತೆಗಳು, ಅವನಿಂದ ಸತಿಯ ಮೃತಶರೀರವನ್ನು ತಪ್ಪಿಸುವ ವಿಷಯದಲ್ಲಿ ಹೀಗೆ ಯೋಚಿಸಿದರು.

೩೮. ಶಂಕರನ ಶರೀರಸ್ಪರ್ಶದಿಂದ ಈ ಶವವು ಎಂದಿಗೂ ನಾಶವನ್ನೈದುವುದಿಲ್ಲ. ಆದುದರಿಂದ ಅದನ್ನು ಅವನ ಶರೀರದಿಂದ ತಪ್ಪಿಸುವುದು ಹೇಗೆ?

೩೯. ಹೀಗೆ ಆಲೋಚಿಸಿ ಬ್ರಹ್ಮವಿಷ್ಣುಶನೈಶ್ಚರರು ತಮ್ಮ ಮಾಯಾಶಕ್ತಿಯಿಂದ ಕಣ್ಣಿಗೆ ಕಾಣಿಸದಂತೆ ಆ ಸತಿಯ ಶವವನ್ನು ಪ್ರವೇಶಿಸಿದರು.

೪೦. ಹೀಗೆ ಸತೀಶವವನ್ನು ಪ್ರವೇಶಿಸಿ ಆ ದೇವತೆಗಳು ಅದನ್ನು ಚೂರು ಚೂರಾಗಿ ಮಾಡಿ ಒಂದೊಂದು ಚೂರನ್ನು ಒಂದೊಂದು ಸ್ಥಾನದಲ್ಲಿ ಬೇರೆ ಬೇರೆಯಾಗಿ ಕೆಡವಿದರು.

ದೇವೀಕೂಟೇ ಪಾದಯುಗ್ಮಂ ಪ್ರಥಮಂ ನ್ಯಪತತ್ಕ್ಷಿತೌ ।
ಉಡ್ಡಿಯಾನೇ ಚೋರುಯುಗ್ಮಂ ಹಿತಾಯ ಜಗತಾಂ ತತಃ ॥ ೪೧ ॥
ಕಾಮರೂಪೇ ಕಾಮಗಿರೌ ನ್ಯಪತದ್ಯೋನಿಮಂಡಲಂ ।
ತತ್ರೈವ ನ್ಯಪತದ್ಭೂಮೌ ಪೂರ್ವತೋ ನಾಭಿಮಂಡಲಂ ॥ ೪೨ ॥
ಜಾಲಂಧರೇ ಸ್ತನಯುಗಂ ಸ್ವರ್ಣಹಾರವಿಭೂಷಿತಂ ।
ಅಂಶಗ್ರೀವಂ ಪೂರ್ಣಗಿರೌ ಕಾಮರೂಪಾತ್ತತಃ ಶಿವಃ ॥ ೪೩ ॥
ಯಾವದ್ಭುವಂ ಗತೋ ಭರ್ಗಃ ಸಮಾದಾಯ ಸತೀಶವಂ ।
ಪ್ರಾಚ್ಯೇಷು ಯಾಜ್ಞಿಕೋ ದೇಶಸ್ತಾವದೇವ ಪ್ರಕೀರ್ತಿತಃ ॥ ೪೪ ॥
ಅನ್ಯೇ ಶರೀರಾವಯವಾ ಲವಶಃ ಖಂಡಿತಾಃ ಸುರೈಃ ।
ಆಕಾಶಗಂಗಾಮಗಮನ್ಪವನೇನ ಸಮೀರಿತಾಃ ॥ ೪೫ ॥

---

೪೧. ಮೊದಲು ದೇವೀಕೂಟವೆಂಬ ಸ್ಥಳದಲ್ಲಿ ಸತಿಯ ಕಾಲುಗಳೆರಡು ಬಿದ್ದವು. ಆಮೇಲೆ ಜಗತ್ತಿನ ಹಿತಕ್ಕಾಗಿ ಉಡ್ಡಿಯಾನವೆಂಬ ಸ್ಥಳದಲ್ಲಿ ಅವಳ ಎರಡು ತೊಡೆಗಳು ಬಿದ್ದವು.

೪೨. ಮನೋಹರವಾದ ಆಕಾರವುಳ್ಳ ಕಾಮಗಿರಿಯಲ್ಲಿ ಅವಳ ಯೋನಿಪ್ರದೇಶವು ಬಿದ್ದಿತು. ಆ ಕಾಮಗಿರಿಯ ಪೂರ್ವದಿಕ್ಕಿನ ಭೂಭಾಗದಲ್ಲಿಯೇ ಅವಳ ನಾಭಿಪ್ರದೇಶವೂ ಬಿದ್ದಿತು.

೪೩–೪೪. ಜಾಲಂಧರವೆಂಬ ಪರ್ವತ ಪ್ರದೇಶದಲ್ಲಿ, ಚಿನ್ನದ ಹಾರಗಳಿಂದ ಅಲಂಕೃತವಾದ ಸತಿಯ ಸ್ತನಗಳೆರಡು ಬಿದ್ದವು. ಮತ್ತು ಅವಳ ಭುಜ, ಕತ್ತು ಇವುಗಳು ಪೂರ್ಣಗಿರಿಯೆಂಬಲ್ಲಿ ಬಿದ್ದವು. ಕಾಮರೂಪ ಗಿರಿಯಿಂದ ಶಂಕರನು ಸತಿಯ ಶವವನ್ನು ಹೊತ್ತುಕೊಂಡು ಭೂಮಿಯ ವರೆಗೆ ಬಂದಿರುವ ಪೂರ್ವದಿಕ್ಕಿನ ಆ ಪ್ರದೇಶವು ಯಾಜ್ಞಿಕದೇಶವೆಂಬ ಹೆಸರಿನಿಂದ ಪ್ರಸಿದ್ಧವಾಯಿತು.

೪೫. ಮಿಕ್ಕ ಆ ಶವದ ಅಂಗಗಳು ದೇವತೆಗಳಿಂದ ಸಣ್ಣ ಚೂರು ಗಳಾಗಿ ಖಂಡಿಸಲ್ಪಟ್ಟು, ಗಾಳಿಯಿಂದ ಹಾರಿಹೋಗಿ ಆಕಾಶಗಂಗೆಯಲ್ಲಿ ಬಿದ್ದವು.

ಯತ್ರ ಯತ್ರಾऽಪತನ್ಸತ್ಯಾಸ್ತದಾ ಪಾದಾದಯೋ ದ್ವಿಜಾಃ ।
ತತ್ರ ತತ್ರ ಮಹಾದೇವಃ ಸ್ವಯಂ ಲಿಂಗಸ್ವರೂಪಧೃಕ್ ॥ ೪೬ ॥
ತಸ್ಥೌ ಮೋಹಸಮಾಯುಕ್ತಃ ಸತೀಸ್ನೇಹವಶಾನುಗಃ ॥ ೪೭ ॥
ಬ್ರಹ್ಮಾ ವಿಷ್ಣುಃ ಶನಿಶ್ಚಾಪಿ ಸರ್ವೇ ದೇವಗಣಾಸ್ತಥಾ ।
ಪೂಜಯಾಂಚಕ್ರುರೀಶಸ್ಯ ಪ್ರೀತ್ಯಾ ಸತ್ಯಾಃ ಪದಾದಿಕಂ ॥ ೪೮ ॥
ದೇವೀಕೂಟೇ ಮಹಾದೇವೀ ಮಹಾಭಾಗೇತಿ ಗೀಯತೇ ।
ಸತೀಪಾದಯುಗೇ ಲೀನಾ ಯೋಗನಿದ್ರಾ ಜಗತ್ಪ್ರಸೂಃ ॥ ೪೯ ॥
ಕಾತ್ಯಾಯನೀ ಚೋಡ್ಡಿಯಾನೇ ಕಾಮಾಖ್ಯಾ ಕಾಮರೂಪಿಣೀ ।
ಪೂರ್ಣೇಶ್ವರೀ ಪೂರ್ಣಗಿರೌ ಚಂಡೀ ಜಾಲಂಧರೇ ಗಿರೌ ॥ ೫೦ ॥

೪೬–೪೭. ಎಲೈ ಬ್ರಾಹ್ಮಣರೇ, ಕೇಳಿ:—ಸತಿಯ ಪಾದಗಳೇ ಮೊದಲಾದ ಅಂಗಗಳು ಯಾವ ಯಾವ ಸ್ಥಳಗಳಲ್ಲಿ ಬಿದ್ದವೋ ಆಯಾಯ ಸ್ಥಳಗಳಲ್ಲೆಲ್ಲಾ ಶಂಕರನು ಸತೀದೇವಿಯ ಮೇಲಿನ ಪ್ರೀತಿಯಿಂದ ಲಿಂಗರೂಪವನ್ನು ಧರಿಸಿ ನೆಲಸಿದನು.

೪೮. ಬ್ರಹ್ಮ, ವಿಷ್ಣು, ಶನೈಶ್ಚರ ಮತ್ತು ಇತರ ಎಲ್ಲ ದೇವತೆಗಳೂ ಆಲ್ಲಲ್ಲಿ ಲಿಂಗರೂಪನಾದ ಶಿವನನ್ನೂ, ಸತೀದೇವಿಯ ಪಾದ ಮೊದಲಾದ ಅಂಗಗಳನ್ನೂ ಭಕ್ತಿಯಿಂದ ಪೂಜಿಸಿದರು.

೪೯. ದೇವೀಕೂಟದಲ್ಲಿ, ಸತಿಯ ಪಾದಗಳಲ್ಲಿ ಲೀನಳಾದ, ಜಗತ್ಕಾರಣಳಾದ ಆದಿಶಕ್ತಿಯನ್ನು ಮಹಾದೇವಿಯೆಂದೂ, ಮಹಾಭಾಗೆಯೆಂದೂ ಸ್ತುತಿಸುವರು.

೫೦. ಉಡ್ಡಿಯಾನವೆಂಬ ಸ್ಥಳದಲ್ಲಿ ಕಾತ್ಯಾಯನೀ ಎಂದೂ, ಕಾಮಗಿರಿಯಲ್ಲಿ ಕಾಮಾಖ್ಯಾ ಎಂದೂ, ಪೂರ್ಣಗಿರಿಯಲ್ಲಿ ಪೂರ್ಣೇಶ್ವರೀ ಎಂತಲೂ, ಜಾಲಂಧರ ಪರ್ವತದಲ್ಲಿ ಚಂಡೀ ಎಂಬ ಹೆಸರಿನಿಂದಲೂ ಸ್ತುತಿಸಲ್ಪಡುವಳು.

ಪೂರ್ವಾಂತೇ ಕಾಮರೂಪಸ್ಯ ದೇವೀ ದಿಕ್ಕರವಾಸಿನೀ ।
ತಥಾ ಲಲಿತಕಾಂತೇತಿ ಯೋಗನಿದ್ರಾ ಪ್ರಗೀಯತೇ ॥ ೫೧ ॥

ಯತ್ರೈವ ಪತಿತಂ ಸತ್ಯಾಃ ಶಿರಸ್ತತ್ರ ವೃಷಧ್ವಜಃ ।
ಉಪವಿಷ್ಟಃ ಶಿರೋ ವೀಕ್ಷ್ಯ ಶ್ವಸಞ್ಛೋಕಪರಾಯಣಃ ॥ ೫೨ ॥

ಉಪವಿಷ್ಟೇ ಹರೇ ತತ್ರ ಬ್ರಹ್ಮಾದ್ಯಾಸ್ತೇ ದಿವೌಕಸಃ ।
ಸಮೀಪಮಗಮಂಸ್ತಸ್ಯ ದೂರತಃ ಸಾನ್ತ್ವಯನ್ ಹರಂ ॥ ೫೩ ॥

ದೇವಾನಾಗಚ್ಛತೋ ದೃಷ್ಟ್ವಾ ಶೋಕಲಜ್ಜಾಸಮನ್ವಿತಃ ।
ಗತ್ವಾ ಶಿಲಾತ್ವಂ ತತ್ರೈವ ಲಿಂಗತ್ವಂ ಗತವಾನ್ ಹರಃ ॥ ೫೪ ॥

ಹರೇ ಲಿಂಗತ್ವಮಾಪನ್ನೇ ಬ್ರಹ್ಮಾದ್ಯಾಸ್ತು ದಿವೌಕಸಃ ।
ತುಷ್ಟುವುಸ್ತ್ರ್ಯಂಬಕಂ ತತ್ರ ಲಿಂಗರೂಪಂ ಜಗದ್ಗುರುಂ ॥ ೫೫ ॥

---

೫೧. ಕಾಮರೂಪಗಿರಿಯ ಪೂರ್ವಪ್ರದೇಶದಲ್ಲಿ ಆದಿಶಕ್ತಿಯಾದ ಆ ದೇವಿಯು ದಿಕ್ಕರವಾಸಿನೀ ಎಂದೂ ಲಲಿತಕಾಂತೆ ಎಂದೂ ಸ್ತುತಿಸಲ್ಪಡುವಳು.

೫೨. ಮುಂದೆ ಆ ಸತಿಯ ಶಿರಸ್ಸು ಎಲ್ಲಿ ಬಿದ್ದಿತೋ ಆ ಸ್ಥಳದಲ್ಲಿ ಶಂಕರನು ಕುಳಿತುಕೊಂಡು ಆ ಶಿರಸ್ಸನ್ನು ನೋಡಿ ಅತಿದುಃಖಗೊಂಡು ನಿಟ್ಟುಸುರು ಬಿಡುತ್ತಾ ಶೋಕಮಗ್ನನಾಗಿದ್ದನು.

೫೩. ಹೀಗೆ ಆ ಶಂಕರನು ದುಃಖಿಸುತ್ತಾ ಆಲ್ಲಿ ಕುಳಿತುಕೊಳ್ಳಲು, ಬ್ರಹ್ಮನೇ ಮೊದಲಾದ ದೇವತೆಗಳು ಅವನ ಸಮೀಪಕ್ಕೆ ಬಂದು, ದೂರದಲ್ಲೇ ನಿಂತು, ಆ ಶಂಕರನನ್ನು ಸಮಾಧಾನಗೊಳಿಸಿದರು.

೫೪. ಹೀಗೆ ಸಮಾಧಾನಗೊಳಿಸಲು ಬರುತ್ತಲಿರುವ ದೇವತೆಗಳನ್ನು ನೋಡಿ, ಶಂಕರನು ದುಃಖ ಮತ್ತು ನಾಚಿಕೆಯಿಂದ ಕೂಡಿ ಅಲ್ಲಿಯೇ ಕಲ್ಲಿನ ಲಿಂಗರೂಪವನ್ನು ಹೊಂದಿದನು.

೫೫. ಶಂಕರನು ಲಿಂಗರೂಪವನ್ನು ಹೊಂದಲು ಬ್ರಹ್ಮನೇ ಮೊದಲಾದ ದೇವತೆಗಳು ಲಿಂಗರೂಪದಲ್ಲಿರುವ ಜಗದ್ಗುರುವಾದ ಆ ಮಹಾದೇವನನ್ನು ಸ್ತುತಿಸಿದರು.

॥ ದೇವಾ ಊಚುಃ ॥

ಮಹಾದೇವಂ ಶಿವಂ ಸ್ಥಾಣುಮುಗ್ರಂ ರುದ್ರಂ ವೃಷಧ್ವಜಂ ।
ಶ್ಮಶಾನವಾಸಿನಂ ಭರ್ಗಂ ಸರ್ವಾಂತಃಕರಣಂ ಪರಂ ॥ ೫೬ ॥

ತ್ವಾಂ ನಮಾಮೋ ವಯಂ ಭಕ್ತ್ಯಾ ಶಂಕರಂ ನೀಲಲೋಹಿತಂ ।
ಗಿರೀಶಂ ವರದಂ ದೇವಂ ಭೂತಭಾವನಮವ್ಯಯಂ ॥ ೫೭ ॥

ಅನಾದಿಮಧ್ಯಸಂಸಾರಯೋಗವಿದ್ಯಾಯ ಶಂಭವೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥ ೫೮ ॥

ಜ್ಞಾನಾಮೃತಾಂತಸಂಪೂರ್ಣಶುದ್ಧದೇಹಾಂತರಾಯ ಚ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥ ೫೯ ॥

೫೬–೫೭. ದೇವತೆಗಳು ಶಂಕರನನ್ನು ಹೀಗೆ ಸ್ತೋತ್ರಮಾಡಿದರು:— ಓ ಶಂಕರನೇ, ನೀನು ದೇವದೇವನು, ಮಂಗಳಸ್ವರೂಪನು, ಭಯಂಕರನು, ರುದ್ರನು, ನಂದಿವಾಹನನು, ಸ್ಮಶಾನದಲ್ಲಿ ವಾಸಮಾಡುವವನು, ಭರ್ಗನೆಂಬ ಹೆಸರಿನಿಂದ ಪ್ರಸಿದ್ಧನಾದವನು, ಎಲ್ಲರ ಅಂತಃಕರಣದಲ್ಲಿರುವವನು, ಸರ್ವೋತ್ಕೃಷ್ಟನು, ಭಕ್ತರಿಗೆ ಸುಖವನ್ನುಂಟುಮಾಡುವವನು, ಕಂಠದಲ್ಲಿ ಕಪ್ಪು ಳ್ಳವನು, ಕೈಲಾಸಕ್ಕೆ ಒಡೆಯನು, ಇಷ್ಟಾರ್ಥವನ್ನು ಕೊಡುವವನು. ಜ್ಯೋತಿಸ್ಸ್ವರೂಪನು, ಜಗತ್ತಿಗೆ ಕಾರಣನು, ನಾಶವಿಲ್ಲದವನು:—ಈ ರೀತಿಯಿರುವ ನಿನ್ನನ್ನು ಭಕ್ತಿಯಿಂದ ನಾವು ನಮಸ್ಕರಿಸುವೆವು.

೫೮. ಅನಾದಿಯಾದ ಸಂಸಾರದಲ್ಲಿ ತೊಳಲುತ್ತಿರುವ ಜನಗಳಿಗೆ ಸಂಸಾರ ಬಂಧನವನ್ನು ನಾಶಮಾಡುವ ಯೋಗವಿದ್ಯಾಸ್ವರೂಪನೂ, ಮಂಗಳರೂಪನೂ, ಶಾಂತನೂ, ಪರಬ್ರಹ್ಮರೂಪನೂ, ಲಿಂಗರೂಪಿಯೂ ಆದ ನಿನಗೆ ನಮಸ್ಕಾರವು.

೫೯. ಜ್ಞಾನವೆಂಬ ಅಮೃತದಿಂದ ಪೂರ್ಣವಾದ ನಿರ್ಮಲ ಶರೀರವುಳ್ಳ ನಿನಗೆ ನಮಸ್ಕಾರವು. ಮಂಗಳ : ಸ್ವರೂಪನೂ, ಶಾಂತನೂ, ಪರಬ್ರಹ್ಮರೂಪನೂ, ಲಿಂಗರೂಪಿಯೂ ಆದ ನಿನಗೆ ನಮಸ್ಕಾರವು.

ಆದಿಮಧ್ಯಾಂತಭೂತಾಯ ಸ್ವಭಾವಾನಲದೀಪ್ತಯೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥ ೬೦ ॥

ಜಟಿಲಾಯ ಗಿರೀಶಾಯ ವಿದ್ಯಾಶಕ್ತಿಧರಾಯ ತೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥ ೬೧ ॥

ಪ್ರಲಯಾರ್ಣವಸಂಸ್ಥಾಯ ಪ್ರಲಯಸ್ಥಿತಿಹೇತವೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥ ೬೨ ॥

ಯಃ ಪರೇಭ್ಯಃ ಪರಸ್ತಸ್ಮಾತ್ಪರಾಯ ಪರಮಾತ್ಮನೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥ ೬೩ ॥

ಜ್ವಾಲಾಮಾಲಾವೃತಾಂಗಾಯ ನಮಸ್ತೇ ವಿಶ್ವರೂಪಿಣೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥ ೬೪ ॥

---

೬೦. ಜಗತ್ತಿನ ಆದಿಮಧ್ಯಾಂತ ಎಂದರೆ ಸೃಷ್ಟಿ ಸ್ಥಿತಿ ಪ್ರಳಯ ಸ್ವರೂಪನೂ, ಸ್ವತಃ ಪ್ರಕಾಶ ಸ್ವರೂಪನೂ ಆದ ನಿನಗೆ ನಮಸ್ಕಾರವು. (ಉತ್ತರಾರ್ಧದ ಅರ್ಥವು ಹಿಂದಿನ ಶ್ಲೋಕದಂತೆ, ೬೫ನೇ ಶ್ಲೋಕದವರೆಗೂ ಇರುವುದು.)

೬೧. ಜಟಾಧಾರಿಯೂ, ಕೈಲಾಸಾಧಿಪತಿಯೂ, ವಿದ್ಯೆಯೆಂಬ ಶಕ್ತಿಯನ್ನು ಧರಿಸಿರುವವನೂ ಆದ ನಿನಗೆ ನಮಸ್ಕಾರವು.

೬೨. ಪ್ರಳಯಕಾಲದ ಜಲರಾಶಿಯಲ್ಲಿರುವವನೂ, ಜಗತ್ತಿನ ಪ್ರಳಯ, ಪಾಲನ ಇವುಗಳಿಗೆ ಕಾರಣನೂ ಆದ ನಿನಗೆ ನಮಸ್ಕಾರವು.

೬೩. ಸರ್ವೋತ್ಕೃಷ್ಟವಾದ ವಸ್ತುವಿಗಿಂತಲೂ ಉತ್ಕೃಷ್ಟನೂ, ಸರ್ವೋತ್ತಮನೂ, ಪರಮಾತ್ಮನೂ ಆದ ನಿನಗೆ ನಮಸ್ಕಾರವು.

೬೪. ತೇಜಸ್ಸಿನಿಂದ ಹೊಳೆಯುವ ಶರೀರವುಳ್ಳವನೂ, ಜಗದ್ರೂಪನೂ ಆದ ನಿನಗೆ ನಮಸ್ಕಾರವು.

ಓಂ ನಮಃ ಪರಮಾರ್ಥಾಯ ಜ್ಞಾನದೀಪಾಯ ವೇಧಸೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥ ೬೫ ॥

ನಮೋ ದಾಕ್ಷಾಯಣೀಕಾಂತ ಮೃಡ ಭರ್ಗ ಮಹೇಶ್ವರ ।
ನಮಸ್ತೇ ಸರ್ವಭೂತೇಶ ಪ್ರಸೀದ ಭಗವಂಶ್ಚಿವ ॥ ೬೬ ॥

ಸಶೋಕೇ ತ್ವಯಿ ಲೋಕೇಶೇ ಚೇಷ್ಟಮಾನೇ ಮಹೇಶ್ವರ ।
ಸುರಾಃ ಸಮಾಕುಲಾಃ ಸರ್ವೇ ತಸ್ಮಾಚ್ಛೋಕಂ ಪರಿತ್ಯಜ ॥ ೬೭ ॥

ನಮೋ ನಮಸ್ತೇ ಭೂತೇಶ ಸರ್ವಕಾರಣಕಾರಣ ।
ಪ್ರಸೀದ ರಕ್ಷ ನಃ ಸರ್ವಾಂಸ್ತ್ಯಜ ಶೋಕಂ ನಮೋऽಸ್ತು ತೇ ॥ ೬೮ ॥

॥ ಮಾರ್ಕಂಡೇಯ ಉವಾಚ ॥

ಇತಿ ಸಂಸ್ತೂಯಮಾನಸ್ತು ಮಹಾದೇವೋ ಜಗತ್ಪತಿಃ ।
ನಿಜಂ ರೂಪಂ ಸಮಾಸ್ಥಾಯ ಪ್ರಾದುರ್ಭೂತಃ ಶುಚಾಹತಃ ॥ ೬೯ ॥

---

೬೫. ಓಂಕಾರಸ್ವರೂಪನೂ, ಸತ್ಯಸ್ವರೂಪನೂ, ಜ್ಞಾನಜ್ಯೋತಿ ಪ್ರಕಾಶಸ್ವರೂಪನೂ, ಜಗತ್ತನ್ನು ಸೃಷ್ಟಿಸುವವನೂ ಆದ ನಿನಗೆ ನಮಸ್ಕಾರವು.

೬೬. ಓ ದಕ್ಷಪುತ್ರಿಯ ಪತಿಯೇ ನಿನಗೆ ನಮಸ್ಕಾರವು. ಸುಖ ಸ್ವರೂಪನೂ, ಕಾಮಾದಿ ಅರಿಷಡ್ವರ್ಗನಾಶಕನೂ, ಸಮಸ್ತಪ್ರಾಣಿಗಳಿಗೂ ಒಡೆಯನೂ ಮಂಗಳಸ್ವರೂಪನೂ ಆದ ಎಲೈ ಮಹೇಶ್ವರನೇ, ಪ್ರಸನ್ನನಾಗು.

೬೭. ಓ ಮಹೇಶ್ವರನೇ, ಲೋಕಕ್ಕೆ ಒಡೆಯನಾದ ನೀನು ಹೀಗೆ ದುಃಖಕ್ಕೊಳಗಾಗಿರಲು, ದೇವತೆಗಳೆಲ್ಲರೂ ದುಃಖಪಡುತ್ತಿರುವರು. ಆದುದರಿಂದ ನೀನು ಈ ಶೋಕವನ್ನು ಬಿಡು.

೬೮. ಓ ಭೂತಾಧಿಪತಿಯೇ, ನಿನಗೆ ನಮಸ್ಕಾರವು. ಜಗತ್ತಿಗೆಲ್ಲ ಕಾರಣನಾದ ಬ್ರಹ್ಮನಿಗೂ ಕಾರಣನಾದ ನಿನಗೆ ನಮಸ್ಕಾರವು. ನೀನು ಈ ಶೋಕವನ್ನು ಬಿಟ್ಟು ಪ್ರಸನ್ನನಾಗಿ ನಮ್ಮೆಲ್ಲರನ್ನೂ ರಕ್ಷಿಸು. ಇಗೋ ನಿನಗೆ ನಮಿಸುವೆವು.

೬೯. ಮಾರ್ಕಂಡೇಯ ಮುನಿಯು ಹೇಳಿದನು:—ದೇವತೆಗಳು ಹೀಗೆ ಸ್ತುತಿಸಲು, ಜಗದೊಡೆಯನಾದ ಮಹಾದೇವನು, ತನ್ನ ನಿಜ ರೂಪವನ್ನು ಧರಿಸಿ ಶೋಕದಿಂದ ಕೂಡಿದವನಾಗಿಯೇ ಅವರಿಗೆ ಪ್ರತ್ಯಕ್ಷನಾದನು.

ತಂ ಶುಚಾ ವಿಹ್ವಲಂ ದೃಷ್ಟ್ವಾ ಪ್ರಾದುರ್ಭೂತಂ ವಿಚೇತಸಂ ।
ಶೋಕಾಪಹಂ ವಿಧಿಃ ಸಾಮ್ನಾ ತುಷ್ಟಾವ ವೃಷಭಧ್ವಜಂ ॥ ೭೦ ॥

॥ ಬ್ರಹ್ಮೋವಾಚ ॥

ಹಿರಣ್ಯಬಾಹೋ ಬ್ರಹ್ಮಾ ತ್ವಂ ವಿಷ್ಣುಸ್ತ್ವಂ ಜಗತಃ ಪತಿಃ ।
ಸೃಷ್ಟಿಸ್ಥಿತಿವಿನಾಶಾನಾಂ ಹೇತುಸ್ತ್ವಂ ಕೇವಲಂ ಹರ ॥ ೭೧ ॥
ತ್ವಮಷ್ಟಮೂರ್ತಿಭಿಃ ಸರ್ವಂ ಜಗದ್ವ್ಯಾಪ್ಯ ಚರಾಚರಂ ।
ಉತ್ಪಾದಕಃ ಸ್ಥಾಪಕಶ್ಚ ನಾಶಕಶ್ಚಾಪಿ ವಿಶ್ವಕೃತ್ ॥ ೭೨ ॥
ತ್ವಾಮಾರಾಧ್ಯ ಮಹಾದೇವ ಮುಕ್ತಿಂ ಯಾತಾ ಮುಮುಕ್ಷವಃ ।
ರಾಗದ್ವೇಷಾದಿಭಿಸ್ಯಕ್ತಾ ಸಂಸಾರವಿಮುಖಾ ಬುಧಾಃ ॥ ೭೩ ॥

---

೭೦. ಶೋಕದಿಂದ ಕಂಗೆಟ್ಟು ಬುದ್ಧಿ ವಿಕಲವಾಗಿರುವ ಶಂಕರನು ಪ್ರತ್ಯಕ್ಷನಾಗಿರುವುದನ್ನು ಕಂಡು, ಬ್ರಹ್ಮನು ಶೋಕವನ್ನು ಹೋಗಲಾಡಿಸುವಂತೆ ಸಮಾಧಾನೋಕ್ತಿಯಿಂದ ಶಂಕರನನ್ನು ಹೀಗೆ ಸ್ತುತಿಸಿದನು.

೭೧. ಬ್ರಹ್ಮನು ಹೇಳಿದನು:—ಹಿರಣ್ಯಬಾಹುವೆಂದು ಪ್ರಸಿದ್ಧನಾದ ಸವಿತೃಸ್ವರೂಪನಾದ ಎಲೈ ಶಂಕರನೇ, ನೀನೇ ಸೃಷ್ಟಿಕರ್ತನಾದ ಬ್ರಹ್ಮನು ಜಗದೊಡೆಯನಾದ ವಿಷ್ಣುವೂ ನೀನೇ, ಮತ್ತು ಎಲೈ ಹರನೇ, ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನೂ ನೀನೇ ಆಗಿರುವೆ.

೭೨. ಓ ಶಂಕರನೇ, ನೀನು ನಿನ್ನ ಪೃಥಿವೀ, ಜಲ, ಚಂದ್ರ, ಸೂರ್ಯ, ಅಗ್ನಿ, ಯಜಮಾನ, ಆಕಾಶ, ವಾಯುಗಳೆಂಬ ಎಂಟು ರೂಪಗಳಿಂದ ಚರಾಚರಾತ್ಮಕವಾದ ಎಲ್ಲ ಜಗತ್ತನ್ನೂ ವ್ಯಾಪಿಸಿರುವೆ. ಜಗತ್ತನ್ನು ಸೃಷ್ಟಿಸುವವನೂ, ರಕ್ಷಿಸುವವನೂ, ಸಂಹರಿಸುವವನೂ ನೀನೇ. ಜಗತ್ಕರ್ತೃವೂ ನೀನೇ ಆಗಿರುವೆ.

೭೩. ರಾಗ ದ್ವೇಷ ಮೊದಲಾದುವುಗಳನ್ನು ಬಿಟ್ಟು, ಸಂಸಾರದಲ್ಲಿ ವಿರಕ್ತರಾಗಿ ಮುಕ್ತಿಯನ್ನಪೇಕ್ಷಿಸುವ ಪಂಡಿತರು, ನಿನ್ನನ್ನು ಆರಾಧಿಸಿ ಮೋಕ್ಷವನ್ನು ಹೊಂದಿರುವರು.

ತೃತೀಯಂ ಯದ್ಭವನ್ನೇತ್ರಂ ಲಲಾಟಸ್ಥಂ ಮಹೇಶ್ವರ ।
ಸತತಂ ಭ್ರಾಜಮಾನಂ ಚ ಚಿಂತ್ಯತೇ ಯನ್ಮುಮುಕ್ಷುಭಿಃ ॥ ೭೪ ॥

ವಿಭಿನ್ನವಾಯ್ವಗ್ನಿಜಲೌಘವರ್ಜಿತಂ
ನ ದೂರಸಂಸ್ಥಂ ರವಿಚಂದ್ರಸಂಯುತಂ ।
ತ್ರಿಮಾರ್ಗಮಧ್ಯಸ್ಥಮನುಪ್ರಕಾಶಕಂ
ತತ್ತ್ವಂ ಪರಂ ಶುದ್ಧಮುಯಂ ಮಹೇಶ್ವರ ॥ ೭೫ ॥

ಯದಷ್ಟಶಾಖಸ್ಯ ತರೋಃ ಪ್ರಸೂನಂ
ಚಿದಂಬುವೃದ್ಧಸ್ಯ ಸಮೀಪಜಸ್ಯ ।
ತಪಶ್ಚದಃ ಸಂಸ್ಥಗಿತಸ್ಯ ಪೀನಂ
ಸೂಕ್ಷ್ಮೋಪಗಂ ತೇ ವಶದಂ ಸದೈವ ॥ ೭೬ ॥

---

೭೪. ಓ ಮಹೇಶ್ವರನೇ, ಮುಕ್ತಿಯನ್ನಪೇಕ್ಷಿಸುವ ಯೋಗಿಗಳು, ನಿನ್ನ ಲಲಾಟದಲ್ಲಿರುವ, ಯಾವಾಗಲೂ ಪ್ರಕಾಶದಿಂದ ಬೆಳಗುತ್ತಿರುವ ಮೂರನೆಯ ನೇತ್ರವನ್ನು ಧ್ಯಾನಮಾಡುವರು.

೭೫. ಎಲೈ ಮಹೇಶ್ವರನೇ, ಬೇರೆಬೇರೆಯಾಗಿರುವ ವಾಯು, ಅಗ್ನಿ, ಜಲ ಇವುಗಳಿಂದ ಕೂಡಿ ಇರುವ ಜಗತ್ತಿಗಿಂತ ಭಿನ್ನವಾಗಿಯೂ, ಜ್ಞಾನಿಗಳಿಗೆ ಯಾವಾಗಲೂ ಸನ್ನಿಹಿತವಾದುದೂ, ಸೂರ್ಯ ಚಂದ್ರ ಇವರುಗಳಲ್ಲಿ ಅಂತರ್ಗಾಮಿಯಾಗಿರುವುದೂ ಕರ್ಮ ಭಕ್ತಿ ಜ್ಞಾನಗಳೆಂಬ ಮೂರು ಮಾರ್ಗಗಳಿಂದ ಪಡೆಯಲ್ಪಡತಕ್ಕುದೂ, ಸಮಸ್ತ ಪ್ರಪಂಚವನ್ನೂ ತನ್ನ ಪ್ರಕಾಶದಿಂದಲೇ ಬೆಳಗಿಸುತ್ತಿರುವುದೂ, ಶುದ್ಧವೂ ಆದ ಯಾವ ಪರಬ್ರಹ್ಮವಸ್ತುವಿರುವುದೋ ಅದು ನಿನಗೆ ಸನ್ನಿಹಿತವಾಗಿಯೇ ಇರುವುದು.

೭೬. ಮತ್ತು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿಗಳೆಂಬ ಎಂಟು ಕೊಂಬೆಗಳಿಂದ ಕೂಡಿ, ಜ್ಞಾನವೆಂಬ ನೀರಿನಿಂದ ಬೆಳೆಯುತ್ತಾ, ತಪಸ್ಸೆಂಬ ಎಲೆಗಳಿಂದ ದಟ್ಟವಾಗಿ ಬೆಳೆದು, ಸಮೀಪದಲ್ಲಿಯೇ ಇರುವ ಅಂತಃಕರಣವೆಂಬ (ಮನಸ್ಸು) ವೃಕ್ಷದ, ಸೂಕ್ಷ್ಮವಾಗಿ ತಿಳಿಯಬೇಕಾದ ಪರಬ್ರಹ್ಮವಸ್ತುವೆಂಬ ಪುಷ್ಪವು ನಿನ್ನ ವಶದಲ್ಲಿಯೇ (ಸನ್ನಿಹಿತವಾಗಿಯೇ) ಇರುವುದು.

ಅಧಃ ಸಮಾಧಾಯ ಸಮೀರಣಸ್ವನಂ
ನಿರುಧ್ಯ ಚೋರ್ಧ್ವಂ ನಿಶಿ ಹಂಸಮಧ್ಯತಃ ।
ಹೃತ್ಪದ್ಮಮಧ್ಯೇ ಸುಮುಖೀಕೃತಂ ರಜಃ
ಪರಂ ತು ತೇಜಸ್ತವ ಸರ್ವದೇಕ್ಷ್ಯತಾಂ ॥ ೭೭ ॥

ಪ್ರಾಣಾಯಾಮೈಃ ಪೂರಕೈಃ ಸ್ತಂಭಕೈರ್ವಾ
ರಿಕ್ತೈಶ್ಚಿತ್ತೈಶ್ಚೋದನಂ ಯತ್ಪರಾಖ್ಯಂ ।
ದೃಶ್ಯಾದೃಶ್ಯಂ ಯೋಗಿಭಿಸ್ತೇ ಪ್ರಪಂಚಾಃ
ಶುದ್ಧಂ ವೃದ್ಧಂ ತತ್ತ್ವತಸ್ತೇಽಸ್ತಿ ಲಬ್ಧಂ ॥ ೭೮ ॥

ಇಲ್ಲ ಮುಖ್ಯಾಭಿಪ್ರಾಯವೇನೆಂದರೆ:—ಯಮಾದ್ಯಷ್ಟಾಂಗಯೋಗನಿರತನಾಗಿ ತಪಸ್ಸನ್ನು ಮಾಡುತ್ತಾ ಅತಿರಹಸ್ಯವಾದ ಪರಬ್ರಹ್ಮವಸ್ತುಜ್ಞಾನವನ್ನು ನೀನು ಪಡೆದಿದ್ದರೂ ಪ್ರಾಕೃತ ಮನುಷ್ಯನಂತೆ ದುಃಖಿಸುವುದು ಯೋಗ್ಯವಲ್ಲವೆಂದು ತಾತ್ಪರ್ಯವು.

೭೭ ಪ್ರಾಣವಾಯುವನ್ನು ಕೆಳಗೂ, ಮೇಲುಭಾಗದಲ್ಲಿಯೂ ಬಂಧಿಸಿ, ಎಂದರೆ ಸಮಾಧಿ ಸ್ಥಿತಿಯನ್ನು ಹೊಂದಿ, ತಮ್ಮ ಹೃದಯಕಮಲಮಧ್ಯದಲ್ಲಿ ರಜೋಗುಣವೇ ಮೊದಲಾದ ಗುಣರಹಿತವಾದ ಯಾವ ಪರಬ್ರಹ್ಮ ವಸ್ತುವನ್ನು ತಪಸ್ವಿಗಳು ಸಾಕ್ಷಾತ್ಕರಿಸುವರೋ, ಅಂತಹ ಪರಬ್ರಹ್ಮವು ನಿನಗೆ ಯಾವಾಗಲೂ ಸನ್ನಿಹಿತವಾಗಿರುವುದು.

೭೮. [ಪೂರಕ, ಎಂದರೆ, ಉಸಿರನ್ನು ಒಳಕ್ಕೆ ಎಳೆದುಕೊಳ್ಳುವುದು, ಕುಂಭಕ, ಎಂದರೆ, ಎಳೆದುಕೊಂಡ ಉಸಿರನ್ನು ನಿಯಮಿತ ಕಾಲದವರೆಗೆ ಹೃದಯದಲ್ಲಿಯೇ ನಿಲ್ಲಿಸಿಕೊಂಡಿರುವುದು, ರೇಚಕ, ಎಂದರೆ ಒಳಗೆ ನಿಲ್ಲಿಸಿದ್ದ ಉಸಿರನ್ನು ಹೊರಕ್ಕೆ ಬಿಡುವುದು, — ಈ ಮೂರು ವಿಧವಾದ ಕಾರ್ಯಗಳನ್ನು ಕ್ರಮವಾಗಿ ನಿಯಮಿತ ಮಾತ್ರ ಕಾಲಗಳವರೆಗೆ ವಿಧ್ಯುಕ್ತವಾಗಿ ಮಾಡುವುದಕ್ಕೆ ಪ್ರಾಣಾಯಾಮವೆಂದು ಹೆಸರು. ಈ ಪ್ರಾಣಾಯಾಮದಿಂದ ಶರೀರವು ಶುದ್ಧವಾಗಿ ಮನಃಸ್ಥೈರ್ಯವುಂಟಾಗುವುದು. ಆದುದರಿಂದ ಯೋಗಾಭ್ಯಾಸವನ್ನು ಮಾಡುವ ಯೋಗಿಗಳು ಇದನ್ನು ಮುಖ್ಯವಾಗಿ ಮಾಡುತ್ತಿರಬೇಕು. ಈ ಯೋಗದ ಎಂಟು ಅಂಗಗಳ ಪೈಕಿ, ಯಮ, ನಿಯಮ, ಆಸನ, ಪ್ರಾಣಾ

ಸೂಕ್ಷ್ಮಂ ಜಗದ್ವ್ಯಾಪಿ ಗುಣೌಘಪೀನಂ
ಮೃಗ್ಯಂ ಬುಧೈಃ ಸಾಧನಸಾಧ್ಯರೂಪಂ।
ಚೋರೈ ರಕ್ಷೈರ್ನಾಪ್ಲುತಂ ನೈವ ನೀತಂ
ವಿತ್ತಂ ತವಾಸ್ಯರ್ಥಹೀನಂ ಮಹೇಶ ॥ ೭೯ ॥

ಯಾಮ, ಪ್ರತ್ಯಾಹಾರ ಎಂಬೀ ಐದೂ ಬಹಿರಂಗಗಳು: ಧಾರಣ, ಧ್ಯಾನ, ಸಮಾಧಿ ಈ ಮೂರೂ ಅಂತರಂಗಗಳು. ಮೊದಲು ಬಹಿರಂಗಗಳನ್ನು ಅಭ್ಯಾಸಮಾಡಿ ಶರೀರ ಶುದ್ಧಿಯೂ, ಮನಸ್ಥೈರ್ಯವೂ, ಲಬ್ಧವಾದನಂತರ ಅಂತರಂಗಗಳಾದ ಧ್ಯಾನಾದಿಗಳನ್ನು ಮಾಡಬೇಕು. ಇವುಗಳನ್ನು ಗುರೂಪದೇಶವಿಲ್ಲದೆ ಮಾಡಿದರೆ ಅನರ್ಥವುಂಟಾಗುವುದು].

ಪೂರಕಸ್ತಂಭಕರೇಚಕಗಳಿಂದ ಕೂಡಿರುವ ಪ್ರಾಣಾಯಮವೇ ಮೊದಲಾದ ಯೋಗಸಾಧನೆಗಳಿಂದ, ಯೋಗಿಗಳು ದೃಶ್ಯಾದೃಶ್ಯಾತ್ಮಕವಾದ ಎಂದರೆ, ಕಣ್ಣಿಗೆ ಕಾಣುವ ಪೃಥಿವಿಯೇ ಮೊದಲಾದ ಸ್ಥೂಲವಸ್ತುಗಳು, ಕಣ್ಣಿಗೆ ಕಾಣದಿರುವ ಆಕಾಶವೇ ಮೊದಲಾದ ಸೂಕ್ಷ್ಮವಸ್ತುಗಳು ಇವುಗಳಿಂದ ಕೂಡಿರುವ ಈ ಪ್ರಪಂಚದ ಕಾರಣವಾದ, ಶುದ್ಧವೂ ನಾಶರಹಿತವೂ ಆದ ಯಾವ ಪರಬ್ರಹ್ಮ ವಸ್ತುವನ್ನು ಸಾಕ್ಷಾತ್ಕರಿಸುವರೋ ಅಂತಹ ಪರಬ್ರಹ್ಮದ ಸ್ವರೂಪವನ್ನು ನೀನು ಯಥಾವತ್ತಾಗಿ ತಿಳಿದಿರುವೆ.

೭೯. ಎಲೈ ಮಹೇಶನೇ, ತಿಳಿಯಲಸಾಧ್ಯವೂ ಎಂದರೆ ಅತಿ ಸೂಕ್ಷ್ಮವೂ, ಜಗತ್ತನ್ನು ವ್ಯಾಪಿಸಿರುವುದೂ, ಸತ್ತ್ವರಜಸ್ತಮೋಗುಣಗಳನ್ನು ಉಳ್ಳದ್ದೂ, ಜ್ಞಾನಿಗಳಿಂದ ಹುಡುಕಲ್ಪಡುತ್ತಿರುವುದೂ, ಕಾರಣ ಮತ್ತು ಕಾರ್ಯರೂಪವಾದುದೂ, ಕಳ್ಳರಿಂದಲೂ ರಾಕ್ಷಸರಿಂದಲೂ ಅಪಹರಿಸಲಶಕ್ಯವಾದುದೂ ಆದ ಬೆಲೆಯುಳ್ಳ ಪರಬ್ರಹ್ಮಸ್ವರೂಪಜ್ಞಾನವೆಂಬ ಧನವು ನಿನ್ನಲ್ಲಿರುವುದು. (ಎಂದರೆ ನೀನು ಪರಬ್ರಹ್ಮಸ್ವರೂಪವನ್ನು ಚೆನ್ನಾಗಿ ತಿಳಿದಿರುವಿಯೆಂದು ಅಭಿಪ್ರಾಯವು.)

ನ ಕೋಪೇನ ನ ಶೋಕೇನ ನ ಮಾನೇನ ನ ದಂಭತಃ ।
ಉಪಯೋಜ್ಯಂ ತು ತದ್ವಿತ್ತಮನ್ಯಥೈವ ವಿವರ್ಧತೇ ॥ ೮೦ ॥

ಮಾಯಯಾ ಮೋಹಿತಃ ಶಂಭೋ ವಿಸ್ಮೃತಂ ತೇ ಹೃದಿಸ್ಥಿತಂ ।
ಮಾಯಾಂ ಭಿನ್ನಂ ಪರಿಜ್ಞಾಯ ಧಾರಯಾತ್ಮಾನಮಾತ್ಮನಾ ॥ ೮೧ ॥

ಮಾಯಾಸ್ಮಾಭಿಃ ಸ್ತುತಾ ಪೂರ್ವಂ ಜಗದರ್ಥೇ ಮಹೇಶ್ವರ ।
ತಯಾ ಧ್ಯಾನಗತಂ ಚಿತ್ತಂ ಬಹುಯತ್ನೈಃ ಪ್ರಸಾಧಿತಂ ॥ ೮೨ ॥

ಶೋಕಃ ಕ್ರೋಧಶ್ಚ ಲೋಭಶ್ಚ ಕಾಮೋ ಮೋಹಃ ಪರಾತ್ಮತಾ ।
ಈರ್ಷ್ಯಾಮಾನೌ ವಿಚಿಕಿತ್ಸಾಽಕೃಪಾಸೂಯಾ ಜುಗುಪ್ಸತಾ ॥ ೮೩ ॥

ದ್ವಾದಶೈತೇ ಬುದ್ಧಿನಾಶಹೇತವೋ ಮನಸೋ ಮಲಾಃ ।
ನ ತ್ವಾದೃಶೈರ್ನಿಷೇವ್ಯಂತೇ ಶೋಕಂ ತ್ಯಜ ತತೋ ಹರ ॥ ೮೪ ॥

---

೮೦ ಆ ಧನವು, ಎಂದರೆ, ಬ್ರಹ್ಮಜ್ಞಾನವೆಂಬ ಧನವು ಕೋಪದಿಂದ ಲಾಗಲಿ, ದುಃಖದಿಂದಲಾಗಲಿ, ಗರ್ವದಿಂದಲಾಗಲಿ, ಅಹಂಕಾರದಿಂದ ಲಾಗಲಿ ಉಪಯೋಗಿಸಿದರೆ ವೃದ್ಧಿಯಾಗುವುದಿಲ್ಲ. ಆದರ ಬೆಳವಣಿಗೆಯೂ ಬೇರೆ ರೀತಿಯಲ್ಲಿ ಆಗುವುದು. ಎಂದರೆ, ಕೋಪ, ಶೋಕ, ಮಾನ, ದಂಭ ಇವುಗಳು ಬ್ರಹ್ಮಜ್ಞಾನಕ್ಕೆ ವಿಘ್ನಗಳು. ನೀನು ಬ್ರಹ್ಮಜ್ಞಾನಿಯಾಗಿರುವುದರಿಂದ ಶೋಕಪಡುವುದು ಯುಕ್ತವಲ್ಲವೆಂದು ತಾತ್ಪರ್ಯವು.

೮೧. ಓ ಶಂಕರನೇ, ಮಾಯೆಯಿಂದ ಮೋಹಗೊಳಿಸಲ್ಪಟ್ಟವನಾಗಿ ನೀನು ನಿನ್ನ ಹೃದಯದಲ್ಲಿಯೇ ಇರುವ ಆ ಬ್ರಹ್ಮವಸ್ತುವನ್ನು ಮರೆತಿರುವೆ. ಆ ಮಾಯೆಯು ಬೇರೆಯೆಂದು ತಿಳಿದು, ಆತ್ಮಸ್ವರೂಪವನ್ನು ನಿನ್ನ ಮನಸ್ಸಿನಲ್ಲಿಯೇ ಚೆನ್ನಾಗಿ ವಿಮರ್ಶೆಮಾಡಿ ತಿಳಿದುಕೋ.

೮೨. ಓ ಮಹೇಶ್ವರನೇ, ಜಗತ್ತಿನ ಹಿತಕ್ಕಾಗಿ ಹಿಂದೆ ನಾವುಗಳು ಆ ವಿಷ್ಣುಮಾಯೆಯನ್ನು ಸ್ತುತಿಸಿದೆವು. ಆಗ ಅವಳು ಪರಬ್ರಹ್ಮನ ಧ್ಯಾನದಲ್ಲಿಯೇ ಇದ್ದ ನಿನ್ನ ಮನಸ್ಸನ್ನು ಬಹುಯತ್ನಗಳಿಂದ ತನ್ನೆಡೆಗೆ ಸೆಳೆದುಕೊಂಡಳು.

೮೩-೮೪. ಎಲೈ ಶಂಕರನೇ, ಶೋಕ, ಕೋಪ, ಲೋಭ, ಕಾಮ, ಮೋಹ, ಅನಾತ್ಮವಸ್ತುವಿನಲ್ಲಿ (ಎಂದರೆ ದೇಹಾದಿಗಳಲ್ಲಿ) ಆತ್ಮಬುದ್ಧಿ,

॥ ಮಾರ್ಕಂಡೇಯ ಉವಾಚ ॥

ಇತಿ ಶಾಮ್ಯಂಸ್ತತಃ ಶಂಭುಃ ಸಂಸ್ಮೃತ್ಯಾಪಿ ಸ್ವವಾಂಛಿತಂ ।
ನಾವದಧ್ಯೌ ತದಾತ್ಮಾನಂ ಶೋಕಾತ್ಸತ್ಯಾ ವಿನಾಕೃತಃ ॥ ೮೫ ॥

ಅಧೋಮುಖಃ ಸ್ಥಿತೋ ವೀಕ್ಷ್ಯ ಬ್ರಹ್ಮಾಣಂ ಸ ಶನೈರಿದಂ ।
ಪ್ರಾಹ ಬ್ರಹ್ಮನ್ನಾಯತಿಗಂ ವದ ಕಿಂ ಕರವಾಣ್ಯಹಂ ॥ ೮೬ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತೋ ವಾಮದೇವೇನ ವಿಧಾತಾ ಸರ್ವದೇವತೈಃ ।
ಇದಮಾಹ ತದೀಶಸ್ಯ ಶೋಕವಿಧ್ವಂಸಕಂ ವಚಃ ॥ ೮೭ ॥

ಅಸಹನೆ, ದುರಭಿಮಾನ, ಸಂಶಯ, ನಿರ್ದಯತೆ, ಹೊಟ್ಟೇಕಿಚ್ಚು, ಅಸಹ್ಯತೆ, ಇವು ಹನ್ನೆರಡೂ ಬುದ್ಧಿಯನ್ನು ನಾಶಮಾಡುವ ಮನಸ್ಸಿನ ಕೊಳೆಗಳು. ನಿನ್ನಂಥವರು ಇವುಗಳಿಗೆ ಎಡೆಗೊಡಬಾರದು, ಆದುದರಿಂದ ಎಲೈ ಶಂಕರನೇ, ಈ ಶೋಕವನ್ನು ಬಿಡು.

೮೫. ಮಾರ್ಕಂಡೇಯ ಮುನಿಯು ಹೇಳಿದನು:—ಹೀಗೆ ಬ್ರಹ್ಮನು ಹೇಳಿದುದನ್ನು ಕೇಳಿದರೂ, ಸತೀದೇವಿಯ ವಿಯೋಗದಿಂದುಂಟಾದ ಶೋಕದಿಂದ ಆತ್ಮವಸ್ತುವನ್ನೇ ಮರೆತು, ಆ ಶಂಕರನು ಅದಾವುದನ್ನೂ ತಿಳಿಯಲಿಲ್ಲ.

೮೬. ಆ ಶಂಕರನು ಮುಖವನ್ನು ಕೆಳಗೆ ಬಗ್ಗಿಸಿಕೊಂಡು ಬ್ರಹ್ಮನನ್ನು ಕುರಿತು ಮೆಲ್ಲಗೆ ಹೀಗೆ ಹೇಳಿದನು—ಎಲೈ ಬ್ರಹ್ಮನೇ, ಮುಂದೇನಾಗುವ್ವ ದೆಂಬುದನ್ನು ಹೇಳು. ಈಗ ನಾನೇನು ಮಾಡಲಿ? ಹೇಳು.

೮೭. ಮಾರ್ಕಂಡೇಯ ಮುನಿಯು ಹೇಳಿದನು:—ಶಂಕರನು ಹೀಗೆ ಹೇಳಲು, ಆಗ ಬ್ರಹ್ಮನು ದೇವತೆಗಳೊಡನೆ ಅವನಿಗೆ ಶೋಕವು ಹೋಗುವಂತಹ ಮಾತನ್ನು ಹೀಗೆ ಹೇಳಿದನು.

॥ ಬ್ರಹ್ಮೋವಾಚ ॥

ತ್ಯಜ ತೋಕಂ ಮಹಾದೇವ ಸಂಸ್ಮೃತ್ಯಾತ್ಮಾನಮಾತ್ಮನಾ ।
ನ ತ್ವಂ ಶೋಕಸ್ಯ ಸದನಂ ಪರಂ ಶೋಕಾತ್ತವಾಂತರಂ ॥ ೮೮ ॥

ಸಶೋಕೇ ತ್ವಯಿ ಭೂತೇಶ ದೇವಾ ಭೂತಾಃ ಸಸಾಧ್ವಸಾಃ ।
ಭ್ರಂಶಯೇಜ್ಜಗತೀಂ ಕೋಪಃ ಶೋಕಃ ಸರ್ವಾಂಶ್ಚ ಶೋಷಯೇತ್ ॥ ೮೯

ತ್ವದ್ಬಾಷ್ಪವ್ಯಾಕುಲಾ ಪೃಥ್ವೀ ವಿದೀರ್ಣಾ ಸ್ಯಾನ್ನ ಚೇಚ್ಛನಿಃ ।
ಅವಜಗ್ರಾಹ ತೇ ಬಾಷ್ಪಂ ಸೋಽಪಿ ಕೃಷ್ಣೋಽಭವದ್ಧಠಾತ್ ॥ ೯೦ ॥

ಯತ್ರ ದೇವಾಃ ಸಗಂಧರ್ವಾಃ ಸದಾ ಕ್ರೀಡಂತಿ ಸೋತ್ಸುಕಾಃ ।
ಸುಮೇರುಸದೃಶೋ ಯೋಽಸೌ ಮಾನತಃ ಪರ್ವತೋತ್ತಮಃ ॥ ೯೧ ॥

---

೮೮. ಬ್ರಹ್ಮನು ಹೇಳಿದನು:—ಓ ಮಹಾದೇವನೇ, ನೀನು ನಿನ್ನ ನಿಜಸ್ವರೂಪವನ್ನು ಸ್ಮರಿಸಿಕೊಂಡು, ಈ ಶೋಕವನ್ನು ಬಿಡು. ನೀನು ಈ ಶೋಕಕ್ಕೆ ಸ್ಥಾನವಲ್ಲ. ನಿನ್ನ ಸ್ವರೂಪವು ಶೋಕದ ಸಂಬಂಧವಿಲ್ಲದುದು.

೮೯. ಎಲೈ ಜಗದೊಡಯನೇ, ನೀನು ಈ ರೀತಿ ಶೋಕವುಳ್ಳವನಾಗಿರಲು, ದೇವತೆಗಳು ತುಂಬ ಭಯಗೊಂಡಿರುವರು. ನಿನ್ನ ಕೋಪವು ಜಗತ್ತನ್ನು ಧ್ವಂಸಮಾಡುವುದು. ಶೋಕವಾದರೋ ಎಲ್ಲವನ್ನೂ ನಾಶಗೊಳಿಸುವುದು.

೯೦. ಮೊದಲು ಶನೈಶ್ಚರನು ನಿನ್ನ ಕಣ್ಣೀರನ್ನು ಭೂಮಿಯಮೇಲೆ ಬೀಳದಂತೆ ಧರಿಸದೇ ಇದ್ದರೆ. ಆದು ಭೂಮಿಯ ಮೇಲೆ ಬಿದ್ದು ಕೂಡಲೇ ಅದರಿಂದ ಭೂಮಿಯು ಚೂರುಚೂರಾಗಿ ಹೋಗುತ್ತಿದ್ದಿತು. ಮತ್ತು ಶನೈಶ್ಚರನು ನಿನ್ನ ಬಾಷ್ಪಜಲವನ್ನು ಧರಿಸಿದ್ದರಿಂದ ತಕ್ಷಣವೇ ಕಪ್ಪಾಗಿ ಹೋದನು.

೯೧. ಅನಂತರ ಯಾವ ಪರ್ವತೋತ್ತಮದಲ್ಲಿ ದೇವತೆಗಳೂ ಗಂಧರ್ವರೂ ಉಲ್ಲಾಸದಿಂದ ವಿಹರಿಸುವರೋ ಮತ್ತು ಯಾವುದು ಗಾತ್ರದಲ್ಲಿ ಮೇರುಪರ್ವತದಷ್ಟು ದೊಡ್ಡದೋ,

ಯಸ್ಮಿನ್ಭುವಿಶ್ಯ ಸುಗಿರೌ ಪದ್ಮನಾಲನಿಭೇ ಘನಾಃ ।
ಉತ್ಪಿಬಂತಿ ಸ್ಮ ತೋಯಾನಿ ಪುಷ್ಕರಾವರ್ತಕಾದಯಃ ॥ ೯೨ ॥

ಮಂದರಾತ್ಸತತಂ ಯತ್ರ ಕುಂಭಯೋನಿರ್ಮಹಾಮುನಿಃ ।
ಗತ್ವಾ ಗತ್ವಾ ತಪಸ್ತೇಪೇ ಹಿತಾಯ ಜಗತೋ ಹರ ॥ ೯೩ ॥

ಯಸ್ಮಿನ್ನಿತ್ಯಾ ಗಿರೌ ಪೂರ್ವಮಗಸ್ತ್ಯಸ್ತೋಯ ಸಾಗರಂ ।
ಯಯೌ ತಪೋಬಲಾತ್ಕೃತ್ವಾ ಕರಮಧ್ಯಗತಂ ಕಿಲ ॥ ೯೪ ॥

ಶನೈಶ್ಚರೇಣ ತೇ ವೋಢುಮಸಮರ್ಥೇನ ಲೋತಕೈಃ ।
ಕ್ಷಿಪ್ತೈರ್ವಿದಾರಿತಸ್ತೇಽಸೌ ಜಲಧಾರಾಹ್ವಯೋ ಗಿರಿಃ ॥ ೯೫ ॥

ವಿಭಿದ್ಯ ಪರ್ವತಂ ಶಂಭೋ ಬಾಷ್ಪಾಸ್ತೇ ಸಾಗರಂ ಯಯುಃ ।
ಭಿತ್ವಾ ತು ಸಾಗರಂ ಶೀಘ್ರಂ ಪ್ರವಿಷ್ಟಾಂಡಜಸಂಕುಲಂ ॥ ೯೬ ॥

---

೯೨. ಭೂಮಿಯೆಂಬ ಕಮಲಕ್ಕೆ ನಾಳ (ದಂಟು) ದಂತಿರುವ ಯಾವ ಸುಂದರ ಪರ್ವತದಲ್ಲಿ ಪ್ರವೇಶಿಸಿ ಪುಷ್ಕರ ಮತ್ತು ಆವರ್ತಕ ಮೊದಲಾದ ಮೇಘಗಳು ನೀರನ್ನು ಕುಡಿಯುತ್ತಲಿದ್ದವೋ, ಎಂದರೆ, ಮೇಘಮಂಡಲದ ವರೆಗೂ ಎತ್ತರವಾಗಿದ್ದಿತೋ,

೯೩. ಮತ್ತು ಓ ಶಂಕರನೇ ಮಂದರಪರ್ವತದಿಂದ ಯಾವಾಗಲೂ ಬಂದು ಕುಂಭಸಂಭವನಾದ ಅಗಸ್ತ್ಯಮುನಿಯು ಜಗತ್ತಿನ ಹಿತಕ್ಕಾಗಿ ಯಾವ ಪರ್ವತಕ್ಕೆ ಬಂದು ತಪಸ್ಸನ್ನು ಮಾಡುತ್ತಲಿದ್ದನೋ,

೯೪. ಮತ್ತು ಆ ಅಗಸ್ತ್ಯಮುನಿಯು ಹಿಂದೆ ಯಾವ ಪರ್ವತದಲ್ಲಿ ನಿಂತು ತನ್ನ ತಪಶ್ಶಕ್ತಿಯಿಂದ ಸಮುದ್ರವನ್ನೇ ಕೈಗೆ ತೆಗೆದುಕೊಂಡು ಆದನ್ನು ಪಾನಮಾಡಿದನೋ,

೯೫. ಅಂತಹ ಜಲಧಾರವೆಂಬ ಪರ್ವತವೂ, ಧರಿಸಲು ಅಸಮರ್ಥನಾದ ಶನೈಶ್ಚರನು ನಿನ್ನ ಕಣ್ಣೀರುಗಳನ್ನು ಈ ಬೆಟ್ಟದಮೇಲೆ ಎರಚಿದ್ದರಿಂದ ಸೀಳಿಹೋಯಿತು.

೯೬. ಓ ಶಂಭುವೇ, ಹೀಗೆ ಜಲಧಾರಪರ್ವತವನ್ನು ಭೇದಿಸಿ ಹೊರಟ ನಿನ್ನ ಕಣ್ಣೀರುಗಳು ಸಮುದ್ರಕ್ಕೆ ಸೇರಿದವು. ಬಳಿಕ ಅಲ್ಲಿದ್ದ ಜಲಚರಪ್ರಾಣಿ

ಜಗ್ಮುಸ್ತೇ ಪೂರ್ವಪುಲಿನಂ ತಸ್ಯ ತದ್ವಿಭಿದುಶ್ಚ ತೇ ।
ಭಿತ್ವಾ ವೇಲಾಂ ತತಃ ಪೃಥ್ವೀಂ ವಿಭಿದ್ಯಾಶು ತರಂಗಿಣೀಂ ।
ಚಕ್ರುರ್ವೈತರಣೀಂ ನಾಮ್ನಾ ಪೂರ್ವಸಾಗರಗಾಮಿನೀಂ ॥ ೯೭ ॥

ನ ನಾವಾ ನ ವಿಮಾನೇನ ನ ದ್ರೋಣ್ಯಾ ಸ್ಯಂದನೇನ ಚ ।
ತರ್ತುಂ ಶಕ್ಯಾ ಸಾ ತು ನದೀ ತಪ್ತತೋಯಾತಿಭೀಷಣಾ ॥ ೯೮ ॥

ದುಃಖೇನ ತಾಂ ತು ಪೃಥಿವೀ ಬಿಭರ್ತಿ ಮಹತಾಽಧುನಾ ॥ ೯೯ ॥

ಸದಾ ಚೋರ್ಧ್ವಗತೈರ್ಬಾಷ್ಪೈರ್ವಿಕ್ಷಿಪಂತೀ ನಭಶ್ಚರಾನ್ ।
ತಸ್ಯಾಸ್ತೂಪರಿ ನೋ ಯಾಂತಿ ದೇವಾ ಅಪಿ ಭಯಾತುರಾಃ ॥ ೧೦೦ ॥

ಯಮದ್ವಾರಂ ಪರಾವೃತ್ಯ ಯೋಜನದ್ವಯವಿಸ್ತೃತಾ ।
ನಿಮ್ನಾ ವಹತಿ ಸಂಪೂರ್ಣಾ ಭೀಷಯಂತೀ ಜಗತ್ತ್ರಯಂ ॥ ೧೦೧ ॥

ಗಳಿಂದ ಕೂಡಿರುವ ಆ ಮಹಾಸಾಗರವನ್ನು ಸಹ ಭೇದಿಸಿ ಮುಂದಕ್ಕೆ ಹರಿದು ಹೋದವು.

೯೭. ಆಮೇಲೆ ಆ ಕಣ್ಣೀರುಗಳು ಆ ಸಾಗರದ ಪೂರ್ವತೀರಕ್ಕೆ ಹರಿದು, ಅದನ್ನು ಭೇದಿಸಿಕೊಂಡು ಅನಂತರ ಪುಷ್ಕರದ್ವೀಪಕ್ಕೆ ಬಂದು, ಅಲ್ಲಿ ಭೂಮಿಯನ್ನು ಭೇದಿಸಿ, ವೈತರಣಿಯೆಂಬ ಹೆಸರಿನ ನದಿಯಾಗಿ ಪೂರ್ವ ಸಮುದ್ರಕ್ಕೆ ಹೋಗಿ ಸೇರಿದವು.

೯೮. ಹಡಗಿನಿಂದಲಾಗಲೀ, ವಿಮಾನದಿಂದಲಾಗಲಿ, ದೋಣಿಯಿಂದ ಲಾಗಲಿ, ರಥದಿಂದಲಾಗಲಿ, ಬಿಸಿನೀರಿನಿಂದ ಸುಡುತ್ತಲಿರುವ ಅತಿ ಭಯಂಕರ ವಾದ ಆ ನದಿಯನ್ನು ದಾಟಲು ಸಾಧ್ಯವಿಲ್ಲ.

೯೯-೧೦೦. ಯಾವಾಗಲೂ ಮೇಲ್ಬಾಗಕ್ಕೆ ಉಕ್ಕಿಬರುತ್ತಿರುವ ಕಣ್ಣೀರುಗಳಿಂದ ಆಕಾಶ ಸಂಚಾರಿಗಳನ್ನು ಓಡಿಸಿಗೀಡುಮಾಡುವ ಆ ವೈತರಣಿ ನದಿಯನ್ನು ಭೂಮಿಯು ಈಗಲೂ ಬಹಳ ದುಃಖದಿಂದ ಧರಿಸುತ್ತಿರುವಳು. ಆ ನದಿಯ ಮೇಲ್ಬಾಗದಲ್ಲಿ ವಿಮಾನಾರೂಢರಾದ ದೇವತೆಗಳು ಭಯದಿಂದ ಸಂಚರಿಸುವುದಿಲ್ಲ.

೧೦೧. ಮೂರು ಲೋಕಗಳನ್ನು ಭಯಗೊಳಿಸುತ್ತಾ ಆ ನದಿಯು, ಎರಡು ಯೋಜನ ಅಗಲವಾಗಿಯೂ ಮತ್ತು ತುಂಬಾ ಆಳವಾಗಿಯೂ, ಇದ್ದು ಯಮನ ಪಟ್ಟಣದ ಬಾಗಿಲಲ್ಲಿಯೇ ಹರಿಯುತ್ತಿರುವುದು.

ತ್ವನ್ನಿಃಶ್ವಾಸಮರುಜ್ಜಾತೈರ್ವ್ಯಸ್ತಾಃ ಪರ್ವತಕಾನನಾಃ ।
ಸಮಾಕುಲ ದ್ವೀಪಿನಾಗಾ ನಾದ್ಯಾಪಿ ಪ್ರತಿಶೇರತೇ ॥ ೧೦೨ ॥

ತವ ನಿಃಶ್ವಾಸಜೋ ವಾಯುಃ ಪೀಡಯಞ್ಜಗತಃ ಸುಖಂ ।
ನಾದ್ಯಾಪಿ ಪ್ರಶಮಂ ಯಾತಿ ಬಾಧಾಹೀನಃ ಸನಾತನ ॥ ೧೦೩ ॥

ಸತೀಶವಂ ತೇ ವಹತಃ ಶೀರ್ಯಮಾಣಾ ಪದೇ ಪದೇ ।
ನಾದ್ಯಾಪಿ ವ್ಯಾಕುಲಾ ಪೃಥ್ವೀ ವ್ಯಾಕುಲತ್ವಂ ವಿಮುಂಚತಿ ॥ ೧೦೪ ॥

ನ ಸ್ವರ್ಗೇ ನ ಚ ಪಾತಾಲೇ ತತ್ಸತ್ತ್ವಂ ವಿದ್ಯತೇಽಧುನಾ ।
ಯತ್ತೇ ಕ್ರೋಧೇನ ಶೋಕೇನ ನಾಕುಲಂ ವೃಷಭಧ್ವಜ ॥ ೧೦೫ ॥

ತಸ್ಮಾಚ್ಛೋಕಮಮರ್ಷಂ ಚ ತ್ವಕ್ತ್ವಾ ಶಾಂತಿಂ ಪ್ರಯಚ್ಛ ನಃ ।
ಆತ್ಮಾನಂ ಚಾತ್ಮನಾ ವೇತ್ಥ ಧಾರಯಾತ್ಮಾನಮಾತ್ಮನಾ ॥ ೧೦೬ ॥

---

೧೦೨. ಓ ಶಂಕರನೇ, ನಿನ್ನ ನಿಟ್ಟುಸುರುಗಳಿಂದ ಬೆಟ್ಟ ಕಾಡುಗಳೆಲ್ಲವೂ ಅಲ್ಲೋಲಕಲ್ಲೋಲವಾಗಿ, ಅಲ್ಲಿರುವ ಹುಲಿ, ಆನೆ ಮೊದಲಾದ ವ್ಯಗ ಗಳು ದುಃಖದಿಂದ ಪರಿತಪಿಸುತ್ತಾ ಈಗಲೂ ನಿದ್ರಿಸುತ್ತಿರುವುದಿಲ್ಲ.

೧೦೩. ಓ ಪುರಾಣಪುರುಷನೇ, ನಿನ್ನ ನಿಟ್ಟುಸುರಿನ ಗಾಳಿಯು ಜಗತ್ತಿನ ಸುಖವೆಲ್ಲವನ್ನೂ ತಡೆಯಿಲ್ಲದೆ ನಾಶಮಾಡುತ್ತಾ ಇನ್ನೂ ಶಾಂತ ವಾಗಿರುವುದಿಲ್ಲ.

೧೦೪. ನೀನು ಸತಿಯ ಶವವನ್ನು ಹೊತ್ತುಕೊಂಡು ಹೋಗುತ್ತಿರು ವಾಗ ಹೆಜ್ಜೆಹೆಜ್ಜೆಗೂ ಭೂಮಿಯು ಭೇದಿಸಲ್ಪಟ್ಟು ದುಃಖಗೊಂಡು ಈಗಲೂ ಆ ದುಃಖವನ್ನು ಅನುಭವಿಸುತ್ತಲೇ ಇರುವುದು.

೧೦೫. ಎಲೈ ವೃಷಭಧ್ವಜನೇ, ಈಗ ಸ್ವರ್ಗದಲ್ಲಯಾಗಲೀ, ಪಾತಾಳ ದಲ್ಲಿಯಾಗಲೀ, ನಿನ್ನ ಕೋಪ ಮತ್ತು ಶೋಕಗಳಿಂದ ದುಃಖಗೊಳ್ಳದಿರುವ ಪ್ರಾಣಿಯು ಒಂದೂ ಇರುವುದಿಲ್ಲ.

೧೦೬. ಆದುದರಿಂದ ಓ ಶಂಭುವೇ, ಈ ಶೋಕವನ್ನೂ, ಕೋಪ ವನ್ನೂ ಬಿಡು; ನಮಗೆ ಶಾಂತಿಯನ್ನು ನೀಡು. ಶೋಕ ಕ್ರೋಧಗಳ ಸಂಬಂಧವಿಲ್ಲದ ನಿನ್ನ ಸ್ವರೂಪವನ್ನು ತಿಳಿದುಕೋ. ಧೈರ್ಯವನ್ನು ತಂದು ಕೊಳ್ಳುವವನಾಗು.

ಸತೀ ಚ ದಿವ್ಯಮಾನೇನ ವ್ಯತೀತೇ ಶರದಾಂ ಶತೇ ।
ಸಾ ಚ ತ್ರೇತಾಯುಗಸ್ಯಾದೌ ಭಾರ್ಯಾ ತವ ಭವಿಷ್ಯತಿ ॥ ೧೦೭ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತೋ ವೇಧಸಾ ಶಂಭುಸ್ತೂಷ್ಣೀಂ ಧ್ಯಾನಪರಾಯಣಃ ।
ಅಧೋಮುಖಸ್ತದಾ ಪ್ರಾಹ ಬ್ರಹ್ಮಾಣಮಮಿತೌಜಸಂ ॥ ೧೦೮ ॥

॥ ಈಶ್ವರ ಉವಾಚ ॥

ಯಾವದ್ಬ್ರಹ್ಮನ್ನಹಂ ಶೋಕಾದುತ್ತರಾಮಿ ಸತೀಕೃತಾತ್ ।
ತಾವನ್ಮಮ ಸಖಾ ಭೂತ್ವಾ ಕುರು ಶೋಕಾಪನೋದನಂ ॥ ೧೦೯ ॥
ತಸ್ಮಿನ್ನವಸರೇ ಯತ್ರ ಯತ್ರ ಗಚ್ಛಾಮ್ಯಹಂ ವಿಧೇ ।
ತತ್ರ ತತ್ರ ಭವಾನ್ಗತ್ವಾ ಶೋಕಹಾನಿಂ ಕರೋತು ಮೇ ॥ ೧೧೦ ॥

---

೧೦೭. ದೇವಗಣನೆಯಿಂದ ನೂರು ವರ್ಷಗಳು ಕಳೆದಮೇಲೆ, ಈ ಸತೀದೇವಿಯು ತ್ರೇತಾಯುಗದ ಆದಿಯಲ್ಲಿ ತಿರುಗಿ ನಿನ್ನ ಪತ್ನಿಯಾಗುವಳು.

೧೦೮. ಮಾರ್ಕಂಡೇಯ ಮುನಿಯು ಹೇಳಿದನು:—ಹೀಗೆ ಬ್ರಹ್ಮನು ಹೇಳಲು, ಶಂಕರನು, ಮನಸ್ಸಿನಲ್ಲಿಯೇ ಸ್ವಲ್ಪ ಹೊತ್ತು ಯೋಚಿಸುತ್ತಿದ್ದು, ಮುಖವನ್ನು ಮೇಲಕ್ಕೆತ್ತದೆ ಕೆಳಮುಖವುಳ್ಳವನಾಗಿಯೇ ತೇಜಸ್ವಿಯಾದ ಆ ಬ್ರಹ್ಮನನ್ನು ಕುರಿತು ಹೀಗೆ ಹೇಳಿದನು.

೧೦೯. ಶಂಕರನು ಹೇಳಿದನು:—ಎಲೈ ಬ್ರಹ್ಮನೇ, ಸತೀದೇವಿಯ ನಿಮಿತ್ತವಾದ ಈ ಶೋಕವು ಯಾವಾಗ ಹೋಗುವುದೋ ಅಲ್ಲಿಯವರೆಗೆ ನೀನು ಸ್ನೇಹಿತನಾಗಿ ನನ್ನೊಡನಿದ್ದು ಶೋಕವನ್ನು ಹೋಗಲಾಡಿಸು.

೧೧೦. ಈ ಮಧ್ಯದಲ್ಲಿ ನಾನು ಎಲ್ಲೆಲ್ಲಿಗೆ ಹೋಗುವೆನೋ, ಅಲ್ಲೆಲ್ಲಾ ನೀನು ನನ್ನ ಜೊತೆಯಲ್ಲಿಯೇ ಇದ್ದು ನನ್ನ ಶೋಕವನ್ನು ಹೋಗಲಾಡಿಸು.

॥ ಮಾರ್ಕಂಡೇಯ ಉವಾಚ ॥

ಏವಮುಸ್ತ್ವೇತಿ ಲೋಕೇಶಃ ಪ್ರೋಕ್ತ್ವಾ ವೃಷಭವಾಹನಂ ।
ಹರೇಣ ಸಾರ್ಧಂ ಕೈಲಾಸಂ ಗಂತುಂ ಚಕ್ರೇ ಮನಸ್ತತಃ ॥ ೧೧೧ ॥

ಬ್ರಹ್ಮಣಾ ಸಹಿತಂ ಶಂಭುಂ ಕೈಲಾಸಗಮನೋತ್ಸುಕಂ ।
ಸಮಾಸೇದುರ್ಗಣಾ ದೃಷ್ಟ್ವಾ ನಂದಿಭೃಂಗಿ ಮುಖಾಶ್ಚಯೇ ॥ ೧೧೨ ॥

ತತಃ ಪರ್ವತಸಂಕಾಶೋ ವೃಷಭಃ ಪುರತೋ ವಿಧೇಃ ।
ಉಪತಸ್ಥೇ ಸಿತಾಭ್ರಸ್ಯ ಸದೃಶೋ ಗೈರಿಕೋ ಯಥಾ ॥ ೧೧೩ ॥

ವಾಸುಕ್ಯಾದ್ಯಾಶ್ಚ ಯೇ ಸರ್ಪಾ ಯಥಾಸ್ಥಾನಂ ಚ ತೇ ಹರಂ ।
ಭೂಷಯಾಂ ಚಕ್ರುರುದ್ಗಮ್ಯ ಶಿರೋಬಾಹ್ವಾದಿಷು ದ್ರುತಂ ॥ ೧೧೪ ॥

ತತೋ ಬ್ರಹ್ಮಾ ಚ ವಿಷ್ಣುಶ್ಚ ಮಹಾದೇವಃ ಸತೀಪತಿಃ ।
ಸರ್ವೈಃ ಸುರಗಣೈಃ ಸಾರ್ಧಂ ಜಗ್ಮುಃ ಪ್ರಾಲೇಯಪರ್ವತಂ ॥ ೧೧೫ ॥

---

೧೧೧. ಮಾರ್ಕಂಡೇಯ ಮುನಿಯು ಹೇಳಿದನು:—ಬಳಿಕ ಬ್ರಹ್ಮನು, ಹಾಗೆಯೇ ಆಗಲೆಂದು ಶಂಕರನಿಗೆ ಹೇಳಿ, ಅವನೊಡನೆ ಕೈಲಾಸಕ್ಕೆ ಹೋಗುವ ಮನಸ್ಸು ಮಾಡಿದನು.

೧೧೨. ಬ್ರಹ್ಮನೊಡನೆ ಶಂಕರನು ಕೈಲಾಸಕ್ಕೆ ಹೊರಡುವ ಇಚ್ಛೆಯುಳ್ಳವನಾಗಿರುವುದನ್ನು ತಿಳಿದು ನಂದಿ, ಭೃಂಗಿಯೇ ಮೊದಲಾದ ಗಣಗಳು ಆ ಶಂಕರನ ಬಳಿಗೆ ಬಂದವು.

೧೧೩. ಆಗ ಬೆಟ್ಟದಂತೆ ದೊಡ್ಡ ಆಕಾರವುಳ್ಳ ನಂದಿಯೆಂಬ ವೃಷಭವು, ಬಿಳಿಯ ಮೇಘದಂತೆ ಸ್ವಚ್ಛವಾದ ಕಾಂತಿಯುಳ್ಳ ಬ್ರಹ್ಮನೆದುರಿಗೆ ಗೈರಿಕ ಧಾತುವಿನಂತೆ ಪ್ರಕಾಶಿಸುತ್ತಾ ಬಂದು ನಿಂತಿತು.

೧೧೪. ವಾಸುಕಿಯೇ ಮೊದಲಾದ ಸರ್ಪಗಳು ಬಂದು ಶಂಕರನ ಶಿರಸ್ಸು, ಭುಜ ಮೊದಲಾದ ಸ್ಥಾನಗಳಲ್ಲಿ ನಿಂತು ಅವನ ಶರೀರವನ್ನು ಅಲಂಕರಿಸಿದವು.

೧೧೫. ಆ ಮೇಲೆ ಬ್ರಹ್ಮನು, ವಿಷ್ಣುವು, ಸತೀಪತಿಯಾದ ಮಹಾದೇವನು ಈ ಮೂವರೂ ದೇವತೆಗಳೆಲ್ಲರೊಡನೆ ಹಿಮವತ್ಪರ್ವತಕ್ಕೆ ಹೊರಟರು.

ತತಸ್ತಾನೌಷಧಿಪ್ರಸ್ಥಾನ್ನಿಃಸೃತ್ಯ ನಗರಾದ್ಗಿರಿಃ ।
ಸರ್ವೈರಮಾತ್ಯೈಃ ಸಹಿತ ಉಪತಸ್ಥೇ ಸುರೋತ್ತಮಾನ್ ॥ ೧೧೬ ॥

ತತಃ ಸಂಪೂಜಿತಾಸ್ತೇನ ಸುರೌಘಾ ಗಿರಿಣಾ ಸಹ ।
ಸಚಿವೈಃ ಪೌರವರ್ಗೈಶ್ಚ ಮುಮುದುಸ್ತೇ ಸುರರ್ಷಭಾಃ ॥ ೧೧೭ ॥

ತತೋ ದದರ್ಶ ತತ್ರೈವ ಗಿರೀಂದ್ರಸ್ಯ ಪುರೇ ಹರಃ ।
ವಿಜಯಾಮೌಷಧಿಪ್ರಸ್ಥೇ ಸಖೀಭಿರ್ಗೌತಮಾತ್ಮಜಾಂ ॥ ೧೧೮ ॥

ಸಾಪಿ ಸರ್ವಾನ್ಸುರವರಾನ್ಪ್ರಣಮ್ಯ ಹರಮುಖ್ಯಕಾನ್ ।
ಚುಕ್ರೋಶ ಮಾತೃಭಗಿನೀಂ ಪೃಚ್ಛಂತೀ ಗಿರಿಶಂ ಸತೀಂ ॥ ೧೧೯ ॥

ಕ್ವ ಸತೀ ತೇ ಮಹಾದೇವ ಶೋಭಸೇ ನ ತಯಾ ವಿನಾ ।
ವಿಸೃತಾಪಿ ತ್ವಯಾ ತಾತ ಮದ್ಭೃದೋ ನಾಪಸರ್ಪತಿ ॥ ೧೨೦ ॥

---

೧೧೬. ಆ ಬಳಿಕ ಹಿಮವಂತನು, ಔಷಧಿ ಪ್ರಸ್ಥವೆಂಬ ತನ್ನ ಪಟ್ಟಣದಿಂದ ತನ್ನ ಸಮಸ್ತ ಮಂತ್ರಿಗಳೊಡನೆ ಹೊರಗೆ ಬಂದು ತನ್ನಲ್ಲಿಗೆ ಬರುತ್ತಿರುವ ಬ್ರಹ್ಮನೇ ಮೊದಲಾದ ದೇವಶ್ರೇಷ್ಠರನ್ನು ಎದುರುಗೊಂಡು ಗೌರವಿಸಿದನು.

೧೧೭. ಆ ಮೇಲೆ ಆ ದೇವಶ್ರೇಷ್ಠರೆಲ್ಲರೂ, ಹಿಮವಂತನಿಂದಲೂ ಅವನ ಅಮಾತ್ಯ ನಾಗರಿಕ ಪರಿವಾರ ಜನಗಳಿಂದಲೂ ಪೂಜಿತರಾಗಿ ತುಂಬ ಸಂತೋಷದಿಂದಿದ್ದರು.

೧೧೮. ಆಗ ಶಂಕರನು ಆ ಹಿಮವಂತನ ಓಷಧಿಪ್ರಸ್ಥವೆಂಬ ನಗರದಲ್ಲಿ, ತನ್ನ ಸಖಿಯರೊಡನಿರುವ ಗೌತಮಮುನಿಯ ಪುತ್ರಿಯಾದ ವಿಜಯೆ ಎಂಬುವಳನ್ನು ನೋಡಿದನು.

೧೧೯. ಆ ವಿಜಯೆಯೂ ಕೂಡ ಶಂಕರನೇ ಮೊದಲಾದ ದೇವತೆಗಳನ್ನು ನಮಸ್ಕರಿಸಿ, ಶಂಕರನನ್ನು ಕುರಿತು ತನ್ನ ಚಕ್ಕಮ್ಮನಾದ ಸತೀದೇವಿಯೆಲ್ಲಿ? ಎಂದು ಕೇಳುತ್ತಾ ಬಹಳವಾಗಿ ರೋದನ ಮಾಡಿದಳು.

೧೨೦. ಓ ಮಹಾದೇವನೇ, ನಿನ್ನ ಪತ್ನಿಯಾದ ಆ ಸತಿಯೆಲ್ಲಿ? ಅವಳಿಲ್ಲದೆ ನೀನು ಶೋಭಿಸುವುದಿಲ್ಲ. ಓ ತಂದೆಯೇ, ನೀನು ಅವಳನ್ನು ಪುರಿತರೂ ನಾನು ಅವಳನ್ನು ಮರೆಯಲಾರೆನು.

ಮಮಾಗ್ರೇ ಸಾ ಪುರಾ ಪ್ರಾಣಾನ್ಯದಾ ತ್ಯಜತಿ ಕೋಪತಃ ।
ತದೈವಾಹಂ ಶೋಕಶಲ್ಯವಿದ್ಧಾ ನಾಪ್ನೋಮಿ ವೈ ಸುಖಂ ॥ ೧೨೧ ॥
ಇತ್ಯುಕ್ತ್ವಾ ವದನಂ ವಸ್ತ್ರಪ್ರಾಂತೇನಾಚ್ಛಾದ್ಯ ಸಾ ಭೃಶಂ ।
ರುದಂತೀ ಪ್ರಾಪ ತದ್ಭೂಮೌ ಕಶ್ಮಲಂ ಚಾವಿಶತ್ತದಾ ॥ ೧೨೨ ॥

॥ ಇತಿ ಶ್ರೀಕಾಲಿಕಾಪುರಾಣೇಽಷ್ಟಾದಶೋಽಧ್ಯಾಯಃ ॥

---

೧೨೧. ಯಾವಾಗ ಆ ಸತಿಯು ನನ್ನೆದುರಿಗೆ ಕೋಪದಿಂದ ಪ್ರಾಣ ಗಳನ್ನು ಬಿಟ್ಟಳೋ ಆಗ ನಾನು ಶೋಕವೆಂಬ ಶಲ್ಯ (ಸಲಾಕೆ) ಯಿಂದ ಹೊಡೆಯಲ್ಪಟ್ಟವಳಾಗಿ ಇಂದಿನವರಿಗೂ ಸುಖವನ್ನೇ ಕಾಣದೆ ದುಃಖಿಸುತ್ತಲೇ ಇರುವೆನು.

೧೨೨. ಹೀಗೆ ಹೇಳಿ ಆ ವಿಜಯೆಯು ತನ್ನ ಮುಖವನ್ನು ಸೆರಗಿನಿಂದ ಮುಚ್ಚಿಕೊಂಡು ತುಂಬ ರೋದಿಸುತ್ತಾ, ಭೂಮಿಯಲ್ಲಿ ಬಿದ್ದು ಮೂರ್ಛೆ ಹೋದಳು.

ಇಲ್ಲಿಗೆ ಶ್ರೀಕಾಲಿಕಾಪುರಾಣದಲ್ಲಿ ಹದಿನೆಂಟನೆಯ ಅಧ್ಯಾಯವು ಮುಗಿದುದು.

॥ ೨೯ ॥

॥ ಅಥ ಶ್ರೀಕಾಲಿಕಾಪುರಾಣೇ ಏಕೋನವಿಂಶೋಽಧ್ಯಾಯಃ ॥

ಹತ್ತೊಂಬತ್ತನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ತತಸ್ತಾಂ ಪತಿತಾಂ ದೃಷ್ಟ್ವಾ ತದಾ ದಾಕ್ಷಾಯಣೀಂ ಸ್ಮರನ್ ।
ನ ಶಶಾಕ ಹರಃ ಸೋಢುಂ ಶೋಕಮುದ್ವೇಗಸಂಭವಂ ॥ ೧ ॥

ಭ್ರಷ್ಟಧೈರ್ಯಸ್ತತಃ ಶಂಭುರ್ಬಾಷ್ಪವ್ಯಾಕುಲಲೋಚನಃ ।
ಪಶ್ಯತಾಂ ಸರ್ವದೇವಾನಾಂ ಚಿಂತಾಧ್ಯಾನಪರೋಽಭವತ್ ॥ ೨ ॥

ಅಥಾಶ್ವಾಸ್ಯ ತದಾ ಧಾತಾ ವಿಜಯಾಂ ಶೋಕಕರ್ಶಿತಾಂ ।
ಹರಮಾಶ್ವಾಸಯನ್ಸಾಂತ್ವಪೂರ್ವಮೇತದುವಾಚ ಹ ॥ ೩ ॥

---

೧. ಮಾರ್ಕಂಡೇಯ ಮುನಿಯು ಹೇಳತೊಡಗಿದನು:—ಆಮೇಲೆ ಸತಿಯ ಶೋಕದಿಂದ ಆ ವಿಜಯೆಯು ಭೂಮಿಯಲ್ಲಿ ಬಿದ್ದುದನ್ನು ನೋಡಿ, ಶಂಕರನು ಸತಿಯನ್ನು ನೆನೆದು, ಉಕ್ಕಿ ಬರುತ್ತಿರುವ ಶೋಕವನ್ನು ತಡೆಯಲಾರದವನಾದನು.

೨. ಆಮೇಲೆ ಶಂಕರನು ಧೈರ್ಯಗೆಟ್ಟು ಕಣ್ಣುಗಳಲ್ಲಿ ಕಂಬನಿದುಂಬಿ, ಆ ಎಲ್ಲ ದೇವತೆಗಳು ನೋಡುತ್ತಿರುವಂತೆಯೇ ಚಿಂತೆಯಲ್ಲಿ ಮುಳುಗಿದನು.

೩. ಬಳಿಕ ಬ್ರಹ್ಮನು ಆ ರೀತಿ ಶೋಕದಿಂದ ಬಳಲಿರುವ ವಿಜಯೆಯನ್ನು ಸಮಾಧಾನಗೊಳಿಸಿ, ಶಂಕರನನ್ನು ಸಮಾಧಾನಗೊಳಿಸಲು ಒಳ್ಳೆಯ ಮಾತುಗಳಿಂದ ಹೀಗೆ ಹೇಳಿದನು.

॥ ಬ್ರಹ್ಮೋವಾಚ ॥

ಪುರಾಣಯೋಗಿನ್ಭಗವನ್ನ ಶೋಕಸ್ತವ ಯುಜ್ಯತೇ ।
ಪರಧಾಮ್ನಿ ತವ ಧ್ಯಾನಮಾಸೀತ್ಕಸ್ಮಾತ್ಸ್ತ್ರಿಯಾಮಿಹ ॥ ೪ ॥

ಪ್ರಭವಿಷ್ಣುಃ ಪರಃ ಶಾಂತಃ ಸೂಕ್ಷ್ಮಃ ಸ್ಥೂಲತರಃ ಸದಾ ।
ತವ ಸ್ವಭಾವಶ್ಚ ಕಥಂ ಶೋಕೇನ ಬಹುಧಾ ಕೃತಃ ॥ ೫ ॥

ನಿರಂಜನಂ ಧ್ಯಾನಗಮ್ಯಂ ಯತೀನಾಂ
ಪರಾತ್ಪರಂ ನಿರ್ಮಲಂ ಸರ್ವಗಾಮಿ ।
ಮಲೈರ್ಹೀನಂ ರಾಗಲೋಭಾದಿಭಿರ್ಯ–
ತ್ತತ್ತೇ ರೂಪಂ ತ್ವದ್ಭುತಂ ಗೃಹ್ಣ ಬುದ್ಧ್ಯಾ ॥ ೬ ॥

---

೪. ಬ್ರಹ್ಮನು ಹೇಳಿದನು :—ಪುರಾಣಪುರುಷನೂ, ಪೂಜ್ಯನೂ ಆದ ಓ ಶಂಕರನೇ, ನಿನಗೆ ಈ ಶೋಕವು ಯೋಗ್ಯವಾದುದಲ್ಲ. ನಿನ್ನ ಧ್ಯಾನವು ಯಾವಾಗಲೂ ಪರಮಾತ್ಮನಲ್ಲಿಯೇ ಇದ್ದಿತು. ಆದೀಗ ಸ್ತ್ರೀವಿಷಯದಲ್ಲಿ ಹೇಗೆ ಬಂದಿತು ?

೫. ನಿನ್ನ ಸ್ವರೂಪವು, ಸರ್ವ ಸಮರ್ಥವೂ, ಶೋಕಾದಿಗಳ ಸಂಬಂಧ ವಿಲ್ಲದುದೂ, ಶಾಂತವೂ, ಸೂಕ್ಷ್ಮ ವಸ್ತುವಿಗಿಂತ ಅತಿ ಸೂಕ್ಷ್ಮವೂ, ದೊಡ್ಡ ವಸ್ತುವಿಗಿಂತ ಅತಿ ದೊಡ್ಡದೂ ಆದುದು. ಇಂತಹ ನಿನ್ನ ಸ್ವರೂಪವು ಶೋಕಕ್ಕೆ ಹೇಗೆ ಈಡಾಯಿತು ?

೬. ಪ್ರಕಾಶಸ್ವರೂಪವೂ, ಯತಿಗಳು ಧ್ಯಾನದಿಂದ ಮಾತ್ರ ಪಡೆಯಲು ಸಾಧ್ಯವಾದುದೂ, ಉತ್ಕೃಷ್ಟವಸ್ತುವಿಗಿಂತಲೂ ಅತಿ ಉತ್ಕೃಷ್ಟವಾದುದೂ, ಶುದ್ಧವಾದುದೂ, ಎಲ್ಲೆಡೆಯಲ್ಲಿ ವ್ಯಾಪಿಸಿರುವುದೂ, ರಾಗಲೋಭ ಮೊದಲಾದ ಮನೋವೃತ್ತಿಗಳೆಂಬ ಕೊಳೆಗಳಿಲ್ಲದೆ ನಿರ್ಮಲವಾದುದೂ ಆದ ಯಾವ ನಿನ್ನ ನಿಜಸ್ವರೂಪವಿರುವುದೋ, ಅದ್ಭುತವಾದ ಅಂತಹ ಸ್ವರೂಪವನ್ನು ನಿನ್ನ ಬುದ್ಧಿಯಿಂದ ಗ್ರಹಿಸು.

ಶೋಕೋ ಲೋಭಃ ಕ್ರೋಧಮೋಹೌ ಚ ಹಿಂಸಾ
ಮಾನೋ ದಂಭೋ ಮದಮೋಹಪ್ರಮೋದಾಃ ।
ಈರ್ಷ್ಯಾಸೂಯಾಽಕ್ಷಾಂತಿರಸತ್ಯತಾ ಚ
ಚತುರ್ದಶ ಜ್ಞಾನನಾಶಾ ಹಿ ದೋಷಾಃ ॥ ೭ ॥

ಧ್ಯಾನೇನ ತ್ವಾಂ ಯೋಗಿನಶ್ಚಿಂತಯಂತಿ
ತ್ವಂ ವಿಷ್ಣುರೂಪೀ ಜಗತಾಂ ವಿಧಾತಾ ।
ಯಾ ತೇ ಮಹಾಮೋಹಕರೀ ಸತೀತಿ
ತವೈವ ಸಾ ಲೋಕಮೋಹಾಯ ಮಾಯಾ ॥ ೮ ॥

ಯಾ ಸರ್ವಲೋಕಾಜ್ಜನನೇಽಥ ಗರ್ಭೇ
ವಿಮೋಹಯಂತೀ ಪೂರ್ವದೇಹಸ್ಯ ಬುದ್ಧಿಂ ।
ವಿನಾಶ್ಯ ಬಾಲ್ಯಂ ಕುರುತೇ ಹಿ ಜಂತೋ-
ರ್ವಿಮೋಹಯತ್ಯದ್ಯ ಸಾ ತ್ವಾಂ ಸಶೋಕಂ ॥ ೯ ॥

---

೭. ವ್ಯಸನ, ಆಶೆ, ಕೋಪ, ಮೋಹ, ಹಿಂಸೆ, ಗರ್ವ, ಅಹಂಕಾರ, ಕೊಬ್ಬು, ಭ್ರಾಂತಿ, ಅತಿ ಸಂತೋಷ, ಅಸಹನೆ, ಅಸೂಯೆ, ಅಶಾಂತಿ, ಸುಳ್ಳು ಹೇಳುವುದು, — ಈ ಹದಿನಾಲ್ಕೂ ಮನುಷ್ಯನ ಯುಕ್ತಾಯುಕ್ತವಿವೇಚನೆಯನ್ನು ಕೆಡಿಸಿ, ನಿಜವಾದ ಜ್ಞಾನಪ್ರಾಪ್ತಿಗೆ ವಿಘ್ನವನ್ನುಂಟುಮಾಡುವ ದೋಷಗಳಾಗಿವೆ.

೮. ಓ ಶಂಕರನೇ, ಯೋಗಿಗಳು ನಿನ್ನನ್ನು ಧ್ಯಾನದಿಂದ ಚಿಂತಿಸುವರು. ವಿಷ್ಣುವಿನ ರೂಪದಿಂದ ಜಗತ್ತನ್ನು ಪಾಲಿಸುವವನೂ, ಬ್ರಹ್ಮನ ರೂಪದಿಂದ ಜಗತ್ತನ್ನು ಸೃಷ್ಟಿಸುವವನೂ ನೀನೇ ಆಗಿರುವೆ. ಮತ್ತು ಯಾವಳು ಸತೀ ರೂಪದಿಂದ ನಿನ್ನನ್ನು ಅತ್ಯಂತ ಮೋಹಗೊಳಿಸಿದಳೋ ಅವಳು ವಿಷ್ಣು ಮಾಯೆಯು. ಅವಳೇ ಈ ಜಗತ್ತನ್ನು ಮೋಹಗೊಳಿಸುವ ಆದಿ ಮಾಯೆಯು.

೯. ಮತ್ತು ಯಾವ ದೇವಿಯು, ಸಮಸ್ತ ಪ್ರಾಣಿಗಳನ್ನೂ ಅವುಗಳು ಹುಟ್ಟುವುದಕ್ಕೆ ಮುಂಚೆ ಗರ್ಭದಲ್ಲಿರುವಾಗಲೇ ಅವರ ಪೂರ್ವ ಜನ್ಮದ

ಸತೀಸಹಸ್ರಾಣಿ ಪುರೋಜ್ಝಿತಾನಿ
ತ್ವಯಾ ಮೃತಾನಿ ಪ್ರತಿಕಲ್ಪಮೇವಂ ।
ಹಿತಾಯ ಲೋಕಸ್ಯ ಚರಾಚರಸ್ಯ
ಪುನರ್ಗೃಹೀತಾ ಚ ತಥಾ ತ್ವಯೇಯಂ ॥ ೧೦ ॥

ಭವಾಂತರೇ ಧ್ಯಾನಯೋಗೇನ ಪಶ್ಯ
ಸತೀಸಹಸ್ರಾಣಿ ಮೃತಾನಿ ಯಾನಿ ।
ಯಥಾ ತಯಾ ತ್ವಂ ಪರಿವರ್ಜಿತಶ್ಚ
ಯಥಾಽಸ್ತಿ ಸಾ ವಾ ವೃಷರಾಜಕೇತೋಃ ॥ ೧೧ ॥

ಯತಃ ಸಮುತ್ಪದ್ಯ ಮುಹುರ್ಭವಂತಂ
ಸಾ ಪ್ರಾಪ್ಸ್ಯತೀಶ ತ್ರಿದಶೈರ್ದುರಾಪಂ ।
ಪುನಶ್ಚ ಜಾಯಾ ಯಾದೃಶೀ ತೇ ಭವಿತ್ರೀ
ತತ್ತತ್ಸರ್ವಂ ಧ್ಯಾನಯೋಗೇನ ಪಶ್ಯ ॥ ೧೨ ॥

ತಿಳಿವಳಿಕೆಯನ್ನು ನಾಶಮಾಡಿ, ಬಾಲ್ಯವನ್ನುಂಟುಮಾಡಿ ಮೋಹಗೊಳಿಸುವಳೋ ಆ ಮಾಯೆಯೇ ಈಗ ನಿನ್ನನ್ನು ದುಃಖಿತನನ್ನಾಗಿ ಮಾಡಿ ಮೋಹಗೊಳಿಸುತ್ತಿರುವಳು.

೧೦. ಎಲೈ ಶಂಕರನೇ, ಹಿಂದೆ ಪ್ರತಿಕಲ್ಪದಲ್ಲಿಯೂ ಮೃತರಾಗಿರುವ ಸಾವಿರಾರು ಸತೀದೇವಿಯರನ್ನು ನೀನು ಬಿಟ್ಟಿರುವೆ. ಹಾಗೆಯೇ ಸ್ಥಾವರ ಜಂಗಮಾತ್ಮಕವಾದ ಜಗತ್ತಿನ ಕಲ್ಯಾಣಕ್ಕಾಗಿ ಸಾವಿರಾರು ಬಾರಿ ಸತೀದೇವಿಯರನ್ನು ಪುನಃಪುನಃ ಸ್ವೀಕರಿಸಿರುವೆ.

೧೧. ವೃಷಭಶ್ರೇಷ್ಠನಾದ ನಂದಿಯೇ ಧ್ವಜವಾಗಿರುವ ಎಲೈ ಶಂಕರನೇ, ಹಿಂದೆ ಮೃತರಾದ ಸಾವಿರಾರು ಸತಿಯರನ್ನೂ, ನಿನಗೆ ಉಂಟಾದ ಅವರ ವಿಯೋಗಗಳನ್ನೂ, ಆ ಸತಿಯ ಸ್ವರೂಪವೆಂತಹುದೆಂಬುದನ್ನೂ ಸಹ ಸಮಾಧಿಯಲ್ಲಿ ಅಂತರ್ಮುಖನಾಗಿ ಧ್ಯಾನದಿಂದ ನೋಡಿ ತಿಳಿದುಕೋ.

೧೨. ಓ ಮಹೇಶ್ವರನೇ, ಆ ಸತೀದೇವಿಯು ತಿರುಗಿ ಜನಿಸಿ ದೇವತೆಗಳಿಂದಲೂ ಪಡೆಯಲಸಾಧ್ಯನಾದ ನಿನ್ನನ್ನು ಯಾವಾಗ ಪತಿಯನ್ನಾಗಿ ಪಡೆಯುವಳೋ ಅದೆಲ್ಲವನ್ನೂ ಧ್ಯಾನದೃಷ್ಟಿಯಿಂದ ನೋಡು.

॥ ಮಾರ್ಕಂಡೇಯ ಉವಾಚ ॥

ಏವಂ ಬಹುವಿಧಂ ಬ್ರಹ್ಮಾ ವ್ಯಾಹರತ್ಸಾಮು ಶಂಕರಂ ।
ಗಿರಿರಾಜಪುರಾತ್ತಸ್ಮಾದ್ಗಮಯಾಮಾಸ ನಿರ್ಜನಂ ॥ ೧೩ ॥

ತತೋ ಹಿಮವತಃ ಪ್ರಸ್ಥೇ ಪ್ರತೀಚ್ಯಾಂ ತತ್ಪುರಸ್ಯ ಚ ।
ಸಿಪ್ರಂ ನಾಮು ಸರಃ ಪೂರ್ಣಂ ದದೃಶುರ್ಬ್ರಹ್ಮಣಾದಯಃ ॥ ೧೪ ॥

ತದ್ರಹಸ್ಯಸ್ಥನಮಾಸಾದ್ಯ ಬ್ರಹ್ಮಶಕ್ರಾದಯಃ ಸುರಾಃ ।
ಉಪವಿಷ್ಟಾ ಯಥಾನ್ಯಾಯಂ ಪುರಸ್ಕೃತ್ಯ ಮಹೇಶ್ವರಂ ॥ ೧೫ ॥

ತಂ ಸಿಪ್ರಸಂಜ್ಞಂ ಕಾಸಾರಂ ಮನೋಜ್ಞಂ ಸರ್ವದೇಹಿನಾಂ ।
ಶೀತಾಮಲಜಲಂ ಸರ್ವೈರ್ಗುಣೈರ್ಮಾನಸಸಂಮಿತಂ ॥ ೧೬ ॥

ದೃಷ್ಟ್ವಾ ಕ್ಷಣಂ ಹರಸ್ತಸ್ಮಿನ್ಪ್ರೀತ್ಯುತ್ಸುಕೋಽಭೂದವೇಕ್ಷಣೇ ।

---

೧೩. ಮಾರ್ಕಂಡೇಯ ಮುನಿಯು ಹೇಳಿದನು:—ಹೀಗೆ ಅನೇಕ ವಿಧವಾಗಿ ಸಮಾಧಾನೋಕ್ತಿಯನ್ನು ಶಂಕರನಿಗೆ ಹೇಳಿ, ಬ್ರಹ್ಮನು ಪರ್ವತ ರಾಜನ ಪಟ್ಟಣದಿಂದ ಜನಸಂಚಾರವಿಲ್ಲದ ಪ್ರದೇಶಕ್ಕೆ ಅವನನ್ನು ಕರೆದು ಕೊಂಡು ಹೋದನು.

೧೪. ಬಳಿಕ ಬ್ರಹ್ಮನೇ ಮೊದಲಾದವರು ಹಿಮವತ್ಪರ್ವತದ ತಪ್ಪಲಿ ನಲ್ಲಿಯೇ ಓಷಧಿಪ್ರಸ್ಥನಗರದಿಂದ ಪಶ್ಚಿಮ ದಿಕ್ಕಿನಲ್ಲಿ ಜಲದಿಂದ ತುಂಬಿ ಕಂಗೊಳಿಸುತ್ತಿರುವ ಸಿಪ್ರವೆಂಬ ಸರೋವರವನ್ನು ನೋಡಿದರು.

೧೫. ನಿರ್ಜನವಾದ ಆ ರಹಸ್ಯ ಸ್ಥಳಕ್ಕೆ ಹೋಗಿ, ಅಲ್ಲಿ ಬ್ರಹ್ಮ ಮತ್ತು ಇಂದ್ರನೇ ಮೊದಲಾದ ದೇವತೆಗಳು ಮಹೇಶ್ವರನ ಎದುರಿಗೆ ತಮ್ಮ ಸ್ಥಾನ ಗಳಲ್ಲಿ ಕುಳಿತುಕೊಂಡರು.

೧೬. ಸಮಸ್ತ ಪ್ರಾಣಿಗಳಿಗೂ ಮನೋಹರವಾದ, ಶೀತಲವಾಗಿಯೂ ನಿರ್ಮಲವಾಗಿಯೂ ಇರುವ ಜಲವುಳ್ಳ ಮತ್ತು ಎಲ್ಲ ಪ್ರಕಾರದಿಂದಲೂ ಮಾನಸಸರೋವರವನ್ನು ಹೋಲುವ ಆ ಸಿಪ್ರವೆಂಬ ಸರಸ್ಸನ್ನು ನೋಡಿ, ಶಂಕರನು ಸ್ವಲ್ಪ ಹೊತ್ತಿನವರಿಗೆ ಅದನ್ನೇ ಮನಸ್ಸಿಟ್ಟು ನೋಡುತ್ತಿದ್ದನು.

ಸಿಪ್ರಾಂ ನಾಮು ನದೀಂ ತಸ್ಮಾನ್ನಿಸೃತಾಂ ದಕ್ಷಿಣೋದಧಿಂ
ಗಚ್ಛಂತೀಂ ಚ ದದರ್ಶಾಸೌ ಪಾವಯಂತೀಂ ಜಗಜ್ಜನಾನ್ ॥ ೧೭ ॥
ತತ್ಸರಃ ಪೂರ್ಣಮಾಸಾದ್ಯ ಚರತಃ ಶಕುನಾನ್ಬಹೂನ್ ।
ನಾನಾದೇಶಗತಾಞ್ಛಂಭುರ್ವೀಕ್ಷಾಂಚಕ್ರೇ ಮನೋರಮಾನ್ ॥ ೧೮ ॥
ಗಂಭೀರಪವನೋದ್ವೃತ್ತಿಸಂಪನ್ನೇಷು ವಿರಾಜತಃ ।
ಕೋಕದ್ವಂದ್ವಾಂಸ್ತರಂಗೇಷು ದದರ್ಶ ನೃತ್ಯತೋ ಯಥಾ ॥ ೧೯ ॥
ಮದ್ಗುಚಂಚುಷು ಸಂಪೃಕ್ತಾಂಸ್ತರಂಗಾನ್ತ್ಸ ಪೃಥಕ್ಪೃಥಕ್ ।
ವೀಕ್ಷಾಂಚಕ್ರೇ ಯಥಾ ತೋಯಾದುತ್ಪತತ್ಪತಗಾನ್ಮುಹುಃ ॥ ೨೦ ॥
ಕಾದಂಬೈಃ ಸಾರಸೈರ್ಹಂಸೈಃ ಶ್ರೇಣೀಭೂತೈಸ್ತಟೇ ತಟೇ
ಭಂಗೀಕೃತೈರ್ಯಥಾ ಶಂಖೈಃ ಸಾಗರಸ್ತಾದೃಶಂ ಸರಃ ॥ ೨೧ ॥

---

೧೭. ಮತ್ತು ಆ ಸರೋವರದಿಂದ ಉದ್ಭವಿಸಿ ದಕ್ಷಿಣ ಸಮುದ್ರಾಭಿಮುಖವಾಗಿ ಹರಿಯುತ್ತಾ ಜಗತ್ತಿನ ಜನಗಳನ್ನು ಶುದ್ಧರನ್ನಾಗಿ ಮಾಡುತ್ತಿರುವ ಸಿಪ್ರಾ ಎಂಬ ನದಿಯನ್ನೂ ಆ ಶಂಕರನು ನೋಡಿದನು.

೧೮. ಅನೇಕ ದೇಶಗಳಿಂದ ಬಂದು, ನೀರಿನಿಂದ ತುಂಬಿರುವ ಆ ಸರೋವರದಲ್ಲಿ ವಿಹರಿಸುತ್ತಲಿರುವ ಮನೋಹರಗಳಾದ ಅನೇಕ ಪಕ್ಷಿಗಳನ್ನು ಆ ಶಂಕರನು ನೋಡಿದನು.

೧೯. ಮತ್ತು ಆ ಶಂಕರನು, ಗಂಭೀರವಾದ ಗಾಳಿಯು ಹೊಡೆತದಿಂದ ಚಲಿಸುತ್ತಿರುವ ಅಲೆಗಳಲ್ಲಿ ನರ್ತನಮಾಡುವಂತೆ ವಿಹರಿಸುತ್ತಲಿರುವ ಚಕ್ರವಾಕ ದಂಪತಿಗಳನ್ನು ನೋಡಿದನು.

೨೦. ನೀರಿನಲ್ಲಿ ಮುಳುಗುತ್ತಿರುವ ನೀರು ಕಾಗೆಗಳ ಕೊಕ್ಕುಗಳಿಂದ ಕೂಡಿರುವ ಬೇರೆ ಬೇರೆ ಅಲೆಗಳನ್ನು, ಆ ಶಂಕರನು, ನೀರಿನಿಂದ ಮೇಲಕ್ಕೆ ಬರುತ್ತಲಿರುವ ಪಕ್ಷಿಗಳೆಂದು ತಿಳಿದನು.

೨೧. ಅಲ್ಲಿನ ದಡಗಳಲ್ಲಿ ಸಾಲುಸಾಲಾಗಿ ಕುಳಿತಿರುವ ಕಲಹಂಸ, ಸಾರಸ ಪಕ್ಷಿ, ಹಂಸ ಇವುಗಳಿಂದ ಆ ಸರಸ್ಸು, ಸಾಲುಸಾಲಾಗಿರುವ ಶಂಖಗಳಿಂದ ಸಮುದ್ರವು ಪ್ರಕಾಶಿಸುವಂತೆ, ಪ್ರಕಾಶಿಸುತ್ತಲಿದ್ದಿತು.

ಮಹಾವಿಮಾನಾಹತಿಕ್ಷುಬ್ಧೈಸ್ತೋಯಶಬ್ದೋತ್ಥಸಾಧ್ವಸೈಃ ।
ಪಕ್ಷಿಭಿರ್ವಿಹಿತೈಃ ಶಬ್ದೈಸ್ತತ್ರ ತತ್ರ ಮನೋಹರಂ ॥ ೨೨ ॥

ಪ್ರಫುಲ್ಲೈಃ ಪಂಕಜೈಶ್ಚೈವ ಕ್ವಚಿಜ್ಜಾಲೈರ್ಮನೋಹರೈಃ
ಸರೋ ರೇಜೇ ಯಥಾ ಸ್ವರ್ಗೋ ನಕ್ಷತ್ರೈಃ ಸ್ಥೂಲಸೂಕ್ಷ್ಮಕೈಃ ॥ ೨೩ ॥

ಮಹೋತ್ಪಲಾನಾಂ ಮಧ್ಯೇಷು ವಿರಲಂ ನೀಲಮುತ್ಪಲಂ ।
ರೇಜೇ ನಕ್ಷತ್ರಮಧ್ಯೇಷು ನೀಲನೀರದಖಂಡವತ್ ॥ ೨೪ ॥

ಪದ್ಮಸಂಘಾತಮಧ್ಯಸ್ಥಾ ಹಂಸಾಃ ಕೈಶ್ಚಿನ್ನ ಸಂಸ್ತುತಾಃ ।
ಪ್ರಫುಲ್ಲ ಪಂಕಜಭ್ರಾಂತ್ಯಾ ನಿಶ್ಚಲಾಃ ಸ್ವರ್ಗವಾಸಿಭಿಃ ॥ ೨೫ ॥

ದ್ವಿಧಾ ವ್ಯಷ್ಟಾಪ್ಸು ಶೋಣಶುಕ್ಲೇ ಪದ್ಮೇ ಫುಲ್ಲೇ ವಿಧಿಃ ಸ್ವಕೇ ।
ಕಾಯೇಽರುಣತ್ವಂ ಫುಲ್ಲತ್ವಂ ಸ್ವಾಸನಾಬ್ಜೇ ನಿನಿಂದ ಚ ॥ ೨೬ ॥

---

೨೨. ಅಲ್ಲಲ್ಲಿ ದೊಡ್ಡ ದೊಡ್ಡ ವಿಮಾನುಗಳ ಹೊಡೆತದಿಂದುಂಟಾದ ಶಬ್ದಗಳಿಂದಲೂ, ಅಲೆಗಳ ಪರಸ್ಪರ ಹೊಡೆತದಿಂದುಂಟಾದ ಶಬ್ದದಿಂದಲೂ, ಈ ಶಬ್ದಗಳಿಂದ ಹೆದರಿದ ಪಕ್ಷಿಗಳು ಮಾಡುತ್ತಿರುವ ಕಲಕಲಧ್ವನಿಗಳಿಂದಲೂ ಈ ಸರೋವರವು ಮನೋಹರವಾಗಿ ಒಪ್ಪುತ್ತಿದ್ದಿತು.

೨೩. ಕೆಲವೆಡೆ ಅರಳಿರುವ ಕಮಲಗಳಿಂದಲೂ, ಕೆಲವೆಡೆ ಮನೋಹರವಾದ ಪಕ್ಷಿವಿಶೇಷಗಳಿಂದಲೂ, ಆ ಸರೋವರವು ಸಣ್ಣ ದೊಡ್ಡ ನಕ್ಷತ್ರಗಳಿಂದ ಗಗನವು ಶೋಭಿಸುವಂತೆ ಶೋಭಿಸುತ್ತಲಿದ್ದಿತು.

೨೪. ಹೆಚ್ಚಾದ ಬಿಳಿಯ ಕಮಲಗಳ ಗುಂಪಿನಲ್ಲಿ ಒಂದೆರಡು ಕನ್ನೈದಿಲೆಗಳು, ನಕ್ಷತ್ರಗಳ ಮಧ್ಯದಲ್ಲಿರುವ ಸಣ್ಣ ನೀಲಮೇಘದಂತೆ ಕಾಣುತ್ತಿದ್ದವು.

೨೫. ಬಿಳಿಯ ಕಮಲಗಳ ಮಧ್ಯದಲ್ಲಿ ಅಲುಗಾಡದಂತೆ ಕುಳಿತಿರುವ ಹಂಸಗಳನ್ನು ನೋಡಿ, ಸ್ವರ್ಗವಾಸಿಗಳಲ್ಲಿ ತಿಳಿಯದವರು ಕೆಲವರು, ಆ ಹಂಸಗಳೂ ಅರಳಿದ ಕಮಲಗಳೆಂದೇ ತಿಳಿದರು.

೨೬. ಆ ಸರೋವರದಲ್ಲಿ ಅರಳಿರುವ ಬಿಳಿಯ ಮತ್ತು ಕೆಂಪಾದ ಎರಡು ವಿಧದ ಕಮಲಗಳನ್ನು ನೋಡಿ ಬ್ರಹ್ಮನು, ಅವುಗಳ ಸೌಂದರ್ಯಕ್ಕೆ

ಫುಲ್ಲಂ ಮಹೋತ್ಪಲಂ ವೀಕ್ಷ್ಯ ಸರಸಸ್ತಸ್ಯ ಶಂಕರಃ ।
ಮೌಲೀಂದುಕಾಂತಿಮಲಿನಂ ಹಸ್ತಸ್ಥಂ ನೋತ್ಪಲಂ ಮಮೇ ॥ ೨೭ ॥

ಹರಿಃ ಸ್ವಚಕ್ರಸೂರ್ಯಾಂಶುಫುಲ್ಲಂ ಹಸ್ತಗತಾಂಬುಜಂ ।
ಸರಃಪದ್ಮಂ ಚ ಸದೃಶಂ ಮೇನೇ ವೀಕ್ಷ್ಯ ಸಮಂತತಃ ॥ ೨೮ ॥

ತತ್ಸರೋ ವೀಕ್ಷ್ಯ ಸಂಪೂರ್ಣಂ ನಾನಾಪಕ್ಷಿಸಮಾಕುಲಂ ।
ಪದ್ಮಿನೀಶತಸಂಛನ್ನಂ ನಿಲೋತ್ಪಲಚಯೈರ್ವೃತಂ ॥ ೨೯ ॥

ದೇವದಾರುತರೂಣಾಂ ಚ ತಟಸ್ಥಾನಾಂ ಪ್ರಸೂನಜೈಃ ।
ಪರಾಗೈರ್ವಾಸಿತಜಲಂ ಹೃದಯಾನಂದಕಾರಕಂ ॥ ೩೦ ॥

ತೀರೇ ತೀರೇ ಮಹಾವೃಕ್ಷೈಃ ಶಾದ್ವಲೈಃ ಪರಿವಾರಿತಂ ।
ದೃಷ್ಟ್ವಾ ಶಂಭುಃ ಕ್ಷಣಂ ತತ್ರ ಸೋತ್ಸುಕಃ ಶೋಕವರ್ಜಿತಃ ॥ ೩೧ ॥

ಮನಸೋತು, ತನ್ನ ಶರೀರದಲ್ಲಾಗಲೀ ತನ್ನ ಪದ್ಮಾಸನದಲ್ಲಿರುವ ಕಮಲದಲ್ಲಾಗಲೀ ಆ ರೀತಿ ಸೌಂದರ್ಯವಿಲ್ಲವಲ್ಲಾ ಎಂದು ವಿಷಾದಪಟ್ಟನು.

೨೭. ಆ ಸರಸ್ಸಿನಲ್ಲಿ ಅರಳಿರುವ ದೊಡ್ಡ ಕಮಲವನ್ನು ನೋಡಿ, ಶಂಕರನು ಜಟಾ ಚಂದ್ರನ ಕಿರಣಗಳಿಂದ ಮಲಿನವಾದ ತನ್ನ ಹಸ್ತ ಕಮಲವನ್ನು ಒಳ್ಳೆಯ ಕಮಲವಲ್ಲವೆಂದು ತಿಳಿದನು.

೨೮. ಹರಿಯು ತನ್ನ ಚಕ್ರದಲ್ಲಿರುವ, ಸೂರ್ಯನ ಕಿರಣದಿಂದ ಅರಳಿದ ಕೈಕಮಲವೂ ಆ ಸರೋವರದಲ್ಲಿರುವ ಪದ್ಮವೂ ಎಲ್ಲ ವಿಧದಲ್ಲೂ ಸದೃಶವಾದವುಗಳೆಂದು ತಿಳಿದನು.

೨೯-೩೦-೩೧. ಮತ್ತು ಆ ಸರೋವರವು ನಿರ್ಮಲ ಜಲದಿಂದ ತುಂಬಿ ಅನೇಕ ಪಕ್ಷಿಗಳಿಂದಲೂ, ನೂರಾರು ಕಮಲಗಳಿಂದಲೂ, ಕನ್ನೈದಿಲೆ ಹೂವುಗಳಿಂದಲೂ ನಿಬಿಡವಾಗಿ ಕಂಗೊಳಿಸುತ್ತಲಿದ್ದಿತು. ಅಲ್ಲದೆ ದಡದಲ್ಲಿ ಬೆಳೆದಿರುವ ದೇವದಾರುವೃಕ್ಷಗಳ ಪರಾಗಗಳಿಂದ ಸುವಾಸನೆಯುಳ್ಳ ಅದರ ನೀರು ಮನಸ್ಸಿಗೆ ಆನಂದವನ್ನುಂಟುಮಾಡುತ್ತಲಿದ್ದಿತು. ಆ ಸರಸ್ಸಿನ ತೀರದಲ್ಲಿದ್ದ ದೊಡ್ಡ ದೊಡ್ಡ ವೃಕ್ಷಗಳೂ, ಎಳೆಯ ಹಚ್ಚನೆಯ ಹುಲ್ಲಿನ ಮನೋಹರಪ್ರದೇಶ

ಸಿಪ್ರಾಮಾಲೋಕಯಾಮಾಸ ನಿಃಸೃತಾಂ ಸರಸಸ್ತತಃ ।
ಯಥೇಂದುಮಂಡಲಾದ್ಗಂಗಾ ಮೇರೋರ್ಜಂಬೂನದೀ ಯಥಾ ॥ ೩೨ ॥
ತಥಾ ದೃಷ್ಟ್ವಾ ಮಹೇಶೇನ ಸಿಪ್ರಾ ಸಿಪ್ರಾದ್ವಿನಿಃಸೃತಾ ॥ ೩೩ ॥

॥ ಋಷಯ ಊಚುಃ ॥

ಸಿಪ್ರಾಹ್ವಯಃ ಕಃ ಕಾಸಾರಃ ಕಥಂ ಸಿಪ್ರಾ ತತಃ ಸೃತಾ ।
ಕೀದೃಶೋಽಸ್ಯ ಪ್ರಭಾವಶ್ಚ ತತ್ಸಮಾಚಕ್ಷ್ವ ವಿಸ್ತರಾತ್ ॥ ೩೪ ॥

॥ ಮಾರ್ಕಂಡೇಯ ಉವಾಚ ॥

ಶೃಣ್ವಂತು ಮುನಯಃ ಸರ್ವೇ ಯಥಾ ಸಿಪ್ರಾನದೀ ಸೃತಾ ।
ಸಿಪ್ರಸ್ಯ ಚ ಮಹಾಭಾಗ ಪ್ರಭಾವಂ ವದತೋ ಮಮ ॥ ೩೫ ॥

ಗಳೂ ಆ ಸರೋವರದ ಶೋಭೆಯನ್ನು ಮತ್ತಷ್ಟು ಹೆಚ್ಚಿಸುತ್ತಿದ್ದವು. ಇಂತಹ ಸರೋವರವನ್ನು ಶಂಕರನು ಸ್ವಲ್ಪಹೊತ್ತು ಆಶ್ಚರ್ಯಚಕಿತನಾಗಿ ನೋಡುತ್ತಿದ್ದು ದುಃಖರಹಿತನಾಗಿದ್ದನು.

೩೨-೩೩. ಸಿಪ್ರವೆಂಬ ಸರೋವರದಿಂದ ಹರಿದು ಹೊರಟ ಆ ಸಿಪ್ರಾ ನದಿಯು, ಚಂದ್ರಮಂಡಲ (ಆಕಾಶ)ದಿಂದ ಹೊರಟ ಗಂಗಾನದಿಯಂತೆಯೂ, ಮೇರುಪರ್ವತದಿಂದ ಹೊರಟ ಜಾಂಬೂನದಿಯಂತೆಯೂ, ಶಂಕರನಿಗೆ ಕಾಣಿಸಿತು.

೩೪. ಋಷಿಗಳು ಮಾರ್ಕಂಡೇಯ ಮುನಿಯನ್ನು ಕೇಳಿದರು:—ಓ ಮಾರ್ಕಂಡೇಯ ಮುನಿಯೇ, ಸಿಪ್ರವೆಂಬ ಸರೋವರವಾವುದು? ಆ ಸರಸ್ಸಿನಿಂದ ಸಿಪ್ರಾನದಿಯು ಹೇಗೆ ಹೊರಟಿತು? ಆ ಸರಸ್ಸಿನ ಪ್ರಭಾವವೆಂತಹುದು? ಇದೆಲ್ಲವನ್ನೂ ನಮಗೆ ವಿಸ್ತಾರವಾಗಿ ಹೇಳು.

೩೫. ಮಾರ್ಕಂಡೇಯ ಮುನಿಯು ಹೇಳಿದನು:—ಎಲೈ ಮುನಿಗಳೇ, ಸಿಪ್ರಾನದಿಯು ಹೇಗೆ ಹೊರಟಿತೆಂಬುದನ್ನೂ, ಅದರ ಮಹಿಮೆಯನ್ನೂ ಹೇಳುವೆನು, ಕೇಳಿ.

ವಸಿಷ್ಠೇನ ಯದಾ ದೇವೀ ಪರಿಣೇತಾ ತ್ವರುಂಧತೀ ।
ತದಾ ವೈವಾಹಿಕೈಸ್ತೋಯೈಃ ಸಿಪ್ರಾಸಿಂಧುರಭೂದ್ದ್ವಿಜಾಃ ॥ ೩೬ ॥
ಸಾ ಸಮಾಗತ್ಯ ಪತಿತಾ ಸಿಪ್ರೇ ಸರಸಿ ಶಾಸನಾತ್ ।
ಯಥಾ ಮಂದಾಕಿನೀ ವಿಷ್ಣುಪಾದಾದಬ್ಧೌ ಶಿವೋದಕಾ ॥ ೩೭ ॥
ಬ್ರಹ್ಮವಿಷ್ಣುಮಹಾದೇವೈಸ್ತೋಯಂ ಸಿಕ್ತಂ ತಯೋಃ ಪುರಾ ।
ವಿವಾಹೇ ಶಾಂತಿವಿಹಿತಂ ಗಾಯತ್ರೀದ್ರುಪದಾದಿಭಿಃ ॥ ೩೮ ॥
ಏಕೀಭೂತಂ ತು ತತ್ತೋಯಂ ಮಾನಸಾಚಲಕಂದರಾತ್ ।
ತತ್ಸರ್ವಂ ಪತಿತಂ ಸಿಪ್ರೇ ಕಾಸಾರೇ ಸಾಗರೋಪಮೇ ॥ ೩೯ ॥
ದೇವಾನಾಮುಪಭೋಗಾರ್ಥಂ ಪುರಾ ಧಾತ್ರಾ ವಿನಿರ್ಮಿತಂ ।
ಸರಃ ಸಿಪ್ರಾಹ್ವಯಂ ಸಾನೌ ಪ್ರಾಲೇಯಸ್ಯ ಗಿರೇರ್ಮಹತ್ ॥ ೪೦ ॥

---

೩೬. ಎಲೈ ಬ್ರಾಹ್ಮಣೋತ್ತಮರೇ, ವಸಿಷ್ಠಮುನಿಯು ಅರುಂಧತೀ ದೇವಿಯನ್ನು ಮದುವೆಯಾದಾಗ ಆ ಮದುವೆಯ ಶಾಂತಿಜಲಗಳಿಂದ ಈ ಸಿಪ್ರಾನದಿಯು ಜನಿಸಿತು.

೩೭. ಆ ಜಲಧಾರೆಯು, ಬ್ರಹ್ಮನ ಅಪ್ಪಣೆಯಂತೆ, ಈ ಸಿಪ್ರವೆಂಬ ಸರಸ್ಸಿನಲ್ಲಿ ವಿಷ್ಣುಪಾದದಿಂದ ಹೊರಟ ಗಂಗೆಯು ಸಮುದ್ರದಲ್ಲಿ ಬಿದ್ದಂತೆ, ಬಿದ್ದಿತು.

೩೮. ಹಿಂದೆ ಆ ಅರುಂಧತೀವಸಿಷ್ಠರ ಮುದುವೆಯ ಕಾಲದಲ್ಲಿ, ಬ್ರಹ್ಮ ವಿಷ್ಣುಮಹೇಶ್ವರರು ಗಾಯತ್ರೀ ದ್ರುಪದಾದಿವ ಮುಂತಾದ ಛಂದಸ್ಸಿನ ಮಂತ್ರಗಳನ್ನು ಹೇಳಿ ಶಾಂತ್ಯುದಕವನ್ನು ಆ ದಂಪತಿಗಳ ಶಿರಸ್ಸಿನ ಮೇಲೆ ಪ್ರೋಕ್ಷಣೆಮಾಡಿದರು.

೩೯. ಆಗ ಆ ನೀರೆಲ್ಲವೂ ಒಂದಾಗಿ ಹಿಮವತ್ಪರ್ವತದ ಕಂದರ ಗಳಿಂದ ಹೊರಟು ಸಮುದ್ರದಂತಿರುವ ಈ ಸಿಪ್ರ ಸರೋವರದಲ್ಲಿ ಬಿದ್ದಿತು.

೪೦. ಹೀಗೆ ದೇವತೆಗಳ ವಿಹಾರಕ್ಕಾಗಿ ಹಿಂದೆ ಬ್ರಹ್ಮನು ಈ ಸಿಪ್ರ ವೆಂಬ ದೊಡ್ಡ ಸರೋವರವನ್ನು ಹಿಮವತ್ಪರ್ವತದ ತಪ್ಪಲಿನಲ್ಲಿ ನಿರ್ಮಿಸಿದನು.

ತತ್ರಾದ್ಯಾಪಿ ಶುನಾಸೀರಃ ಸಹಿತಶ್ಚಾಪ್ಸರೋಗಣೈಃ ।
ಶಚೀಸಹಾಯೋ ರಮತೇ ಪ್ರಸನ್ನೇ ಸಲಿಲೇ ಶುಭೇ ॥ ೪೧ ॥

ತದ್ದೇವೈಃ ಸರ್ವದಾ ಯತ್ನಾದ್ರಕ್ಷ್ಯತೇಽದ್ಯಾಪಿ ರತ್ನವತ್ ।
ನ ತತ್ರ ಮಾನುಷಂ ಕಿಂಚಿದ್ಯಾತುಂ ಶಕ್ನೋತಿ ಯೋಽಮುನಿಃ ॥ ೪೨ ॥

ತಪಃಪ್ರಭಾವಾನ್ಮುನಯಃ ಪ್ರಯಾಂತಿ ಸರಸೀಂ ಶುಭಾಂ ।
ಸಿಪ್ರಾಖ್ಯಾಂ ತು ಮಹಾಯತ್ನಾತ್ಸ್ನಾತುಂ ಪಾತುಂ ಚ ತಜ್ಜಲಂ ॥೪೩॥

ತತ್ರ ಸ್ನಾತ್ವಾ ಚ ಪೀತ್ವಾ ಚ ಮನುಷ್ಯಾ ದೈವಯೋಗತಃ ।
ಅವಶ್ಯಮಮರತ್ವಾಯ ಗಚ್ಛಂತ್ಯವಿಕಲೇಂದ್ರಿಯಾಃ ॥ ೪೪ ॥

ವೃದ್ಧಿಂ ಗಚ್ಛತಿ ವರ್ಷಾಸು ಸರೋ ನೈತದ್ದ್ವಿಜೋತ್ತಮಾಃ ।
ನ ಗ್ರೀಷ್ಮೇ ಶೋಷತಾಂ ಯಾತಿ ಸರ್ವದಾ ತದ್ಯಥಾತಥಾ ॥ ೪೫ ॥

---

೪೧. ಆ ಸರೋವರದ ನಿರ್ಮಲವೂ, ಮನೋಹರವೂ ಆದ ಜಲದಲ್ಲಿ ಈಗಲೂ ಇಂದ್ರನು ಅಪ್ಸರಸ್ತ್ರೀಯರೊಡನೆಯೂ, ಶಚೀದೇವಿಯೊಡನೆಯೂ ವಿಹರಿಸುವನು.

೪೨. ಆ ಸರಸ್ಸನ್ನು ದೇವತೆಗಳು ರತ್ನದಂತೆ ಬಹು ಜೋಪಾನವಾಗಿ ಈಗಲೂ ರಕ್ಷಿಸುತ್ತಲಿರುವರು. ತಪಸ್ವಿಯಲ್ಲದ ಯಾವನೊಬ್ಬ ಮನುಷ್ಯನೂ ಅಲ್ಲಿಗೆ ಹೋಗಲಾರನು.

೪೩. ಸಿಪ್ರವೆಂಬ ಆ ಮನೋಹರವಾದ ಸರಸ್ಸಿನಲ್ಲಿ ಸ್ನಾನಮಾಡುವುದಕ್ಕೂ ಅದರ ಜಲವನ್ನು ಪಾನಮಾಡುವುದಕ್ಕೂ ಮುನಿಗಳು ತಮ್ಮ ತಪಸ್ಸಿನ ಶಕ್ತಿಯಿಂದ ತುಂಬ ಪ್ರಯತ್ನಪಟ್ಟು ಅಲ್ಲಿಗೆ ಹೋಗುವರು.

೪೪. ಅದೃಷ್ಟವಶಾತ್ ಮನುಷ್ಯರು ಆ ಸರಸ್ಸಿನಲ್ಲಿ ಸ್ನಾನಮಾಡಿದರೆ ಮತ್ತು ಅದರ ಜಲವನ್ನು ಪಾನಮಾಡಿದರೆ ಅವರು ದೃಢವಾದ ಶರೀರವುಳ್ಳವರಾಗಿ ಅಮರತ್ವವನ್ನು ಹೊಂದುವರು.

೪೫. ಎಲೈ ಬ್ರಾಹ್ಮಣಶ್ರೇಷ್ಠರೇ, ಮಳೆಗಾಲದಲ್ಲಿ ಈ ಸರೋವರವು ದೊಡ್ಡದಾಗುವುದೂ ಇಲ್ಲ, ಬೇಸಿಗೆಯ ಕಾಲದಲ್ಲಿ ಒಣಗುವುದೂ ಇಲ್ಲ. ಯಾವಾಗಲೂ ಒಂದೇರೀತಿಯಾಗಿರುವುದು.

ತತ್ರ ತತ್ಪತಿತಂ ತೋಯಂ ವಸಿಷ್ಠೋದ್ವಾಹಸಂಭವಂ ।
ಬ್ರಹ್ಮವಿಷ್ಣುಮಹಾದೇವಕರಪದ್ಮೈರುದೀರಿತಂ ॥ ೪೬ ॥
ವವೃಧೇ ಸಿಪ್ರುಗರ್ಭಸ್ಥಮನ್ವಹಂ ದ್ವಿಜಸತ್ತಮಾಃ ।
ತತ್ರ ವೃದ್ಧಂ ತು ತತ್ತೋಯಂ ಚಕ್ರೇಣ ಚ ಹರಿಃ ಪುರಾ ॥ ೪೭ ॥
ಗಿರೇಃ ಶೃಂಗಂ ವಿನಿರ್ಭಿದ್ಯ ಲೋಕಾನಾಂ ಹಿತಕಾಮ್ಯಯಾ ।
ಪೃಥಿವೀಂ ಪ್ರೇರಯಾಮಾಸ ಕೃತ್ವಾ ಪುಣ್ಯತಮಾಂ ನದೀಂ ॥ ೪೮ ॥
ಪರಿವೃತ್ಯ ಮಹೇಂದ್ರಂ ಸಾ ಪುನಾನಾ ಸ್ನಾನಕಾರಿಣಃ ।
ದಕ್ಷಿಣಂ ಸಾಗರಂ ಯಾತಾ ಫಲದಾ ಜಾಹ್ನವೀಸಮಾ ॥ ೪೯ ॥
ಸಿಪ್ರಾಖ್ಯಾತ್ಸರಸೋ ಯಸ್ಮಾನ್ನಿಃಸೃತಾ ಸಾ ಮಹಾನದೀ ।
ಅತಃ ಸಿಪ್ರೇತಿ ತನ್ನಾಮ ಪುರೈವ ಬ್ರಹ್ಮಣಾ ಕೃತಂ ॥ ೫೦ ॥

---

೪೬. ಎಲೈ ಬ್ರಾಹ್ಮಣೋತ್ತಮರೇ, ಆ ಸರೋವರದಲ್ಲಿ ಬ್ರಹ್ಮ ವಿಷ್ಣು ಮಹೇಶ್ವರರು ತಮ್ಮ ಕರಕಮಲಗಳಿಂದ ಎರಚಿದ, ವಸಿಷ್ಠದಂಪತಿಗಳ ವಿವಾಹ ಸಂಬಂಧವಾದ ಉದಕವು ದಿನದಿನವೂ ವೃದ್ಧಿಹೊಂದಿತು.

೪೭–೪೮. ಹೀಗೆ ಆ ಸರಸ್ಸಿನಲ್ಲಿ ವೃದ್ಧಿಹೊಂದುತ್ತಲಿದ್ದ ಆ ನೀರನ್ನು, ವಿಷ್ಣುವು ತನ್ನ ಚಕ್ರದಿಂದ ಹಿಮವತ್ಪರ್ವತದ ಶಿಖರವನ್ನು ಭೇದಿಸಿ, ಜನಗಳ ಅನುಕೂಲಕ್ಕೋಸ್ಕರ, ಸಿಪ್ರಾ ಎಂಬ ಪವಿತ್ರವಾದ ನದಿಯ ರೂಪದಿಂದ ಭೂಲೋಕಕ್ಕೆ ಹರಿದು ಹೋಗುವಂತೆ ಪ್ರೇರಣೆ ಮಾಡಿದನು.

೪೯. ಗಂಗೆಯಂತೆ ಅತಿ ಪವಿತ್ರವಾದ ಆ ಸಿಪ್ರಾ ನದಿಯು ಮಹೇಂದ್ರ ಗಿರಿಯನ್ನು ಬಳಸಿ ಹರಿಯುತ್ತಾ, ತನ್ನಲ್ಲಿ ಸ್ನಾನಮಾಡುವ ಜನಗಳನ್ನು ಪವಿತ್ರರನ್ನಾಗಿ ಮಾಡಿ ಇಷ್ಟಾರ್ಥಗಳನ್ನು ಕೊಡುತ್ತ, ದಕ್ಷಿಣ ಸಮುದ್ರಕ್ಕೆ ಹೋಗಿ ಸೇರಿರುವುದು.

೫೦. ಸಿಪ್ರವೆಂಬ ಸರೋವರದಿಂದ ಹೊರಟು ಹರಿಯುತ್ತಿರುವ ಆ ಮಹಾ ನದಿಗೆ ಬ್ರಹ್ಮನು ಸಿಪ್ರಾ ಎಂದೇ ಹೆಸರಿಟ್ಟನು.

ಕಾರ್ತಿಕ್ಯಾಂ ಪೌರ್ಣಮಾಸ್ಯಾಂ ತು ತಸ್ಯಾಂ ಯಃ ಸ್ನಾತಿ ಮಾನವಃ ।
ಸ ಯಾತಿ ವಿಷ್ಣುಸದನಂ ವಿಮಾನೇನಾತಿದೀಪ್ಯತಾ ॥ ೫೧ ॥

ಕಾರ್ತಿಕಂ ಸಕಲಂ ಮಾಸಂ ಸ್ನಾತ್ವಾ ಸಿಪ್ರಾಜಲೇ ನರಃ ।
ಪ್ರಯಾತಿ ಬ್ರಹ್ಮಸದನಂ ಪಶ್ಚಾನ್ಮೋಕ್ಷಮವಾಪ್ನುಯಾತ್ ॥ ೫೨ ॥

॥ ಋಷಯ ಊಚುಃ ॥

ವಸಿಷ್ಠೇನ ಕಥಂ ದೇವೀ ಪರಿಣೀತಾ ತ್ವರುಂಧತೀ ।
ಕಸ್ಯ ಸಾ ತನಯಾ ಬ್ರೂಹ್ಮನ್ನುತ್ಪನ್ನಾ ವಾ ವದಸ್ವ ನಃ ॥ ೫೩ ॥

ಪತಿವ್ರತಾ ಸುಪ್ರಥಿತಾ ತ್ರಿಷು ಲೋಕೇಷು ಯಾ ವರಾ ।
ಭರ್ತೃಪಾದೌ ವಿನಾಽನ್ಯತ್ರ ಯಾ ನ ಚಕ್ಷುಃ ಪ್ರವಾಸ್ಯತಿ ॥ ೫೪ ॥

---

೫೧. ಕಾರ್ತಿಕಮಾಸದ ಹುಣ್ಣಿಮೆಯಲ್ಲಿ ಯಾವನು ಆ ಸಿಪ್ರಾ ನದಿಯಲ್ಲಿ ಸ್ನಾನಮಾಡುವನೋ ಅವನು ತುಂಬ ಪ್ರಕಾಶಮಾನವಾದ ವಿಮಾನವನ್ನೇರಿ ವಿಷ್ಣುಲೋಕಕ್ಕೆ ಹೋಗುವನು.

೫೨. ಕಾರ್ತಿಕಮಾಸದಲ್ಲಿ ಪ್ರತಿದಿವಸವೂ ಯಾವನು ಸಿಪ್ರಾನದಿಯಲ್ಲಿ ಸ್ನಾನಮಾಡುವನೋ ಅವನು ಬ್ರಹ್ಮಲೋಕಕ್ಕೆ ಹೋಗಿ ಅಲ್ಲಿಂದ ಮುಂದೆ ಮುಕ್ತಿಯನ್ನು ಹೊಂದುವನು.

೫೩. ಋಷಿಗಳು ಮಾರ್ಕಂಡೇಯಮುನಿಯನ್ನು ಪ್ರಶ್ನೆಮಾಡಿದರು:— ಎಲೈ ಬ್ರಾಹ್ಮಣೋತ್ತಮನಾದ ಮಾರ್ಕಂಡೇಯನೇ, ವಸಿಷ್ಠಮುನಿಯು ಅರುಂಧತೀದೇವಿಯನ್ನು ಹೇಗೆ ಮದುವೆಯಾದನು? ಆ ಅರುಂಧತಿಯು ಯಾರ ಮಗಳು? ಇದನ್ನು ನಮಗೆ ಹೇಳು.

೫೪. ಪತಿವ್ರತೆಯರಲ್ಲಿ ಉತ್ತಮಳೂ, ಮೂರು ಲೋಕಗಳಲ್ಲಿ ಪ್ರಸಿದ್ಧಳೂ ಮತ್ತು ತನ್ನ ಗಂಡನ ಪಾದಗಳಲ್ಲಿ ಹೊರತು ಬೇರೆ ಎಡೆಯಲ್ಲಿ ದೃಷ್ಟಿಯನ್ನಿಡದಿರುವ ಆ ಅರುಂಧತಿಯು ಯಾರು?

ಯಸ್ಯಾಃ ಸ್ಮೃತ್ವಾ ಕಥಾಮಾತ್ರಂ ಮಾಹಾತ್ಮ್ಯಸಹಿತಂ ಸ್ತ್ರಿಯಃ ।
ಪ್ರೇತ್ಯೇಹ ಚ ಸತೀತ್ವಂ ವೈ ಪ್ರಾಪ್ನುವಂತ್ಯನ್ಯಜನ್ಮನಿ ॥ ೫೫ ॥
ಆಸನ್ನಕಾಲಧರ್ಮೋ ಯಾಂ ನ ಪಶ್ಯತಿ ಯಥಾಽಶುಚಿಃ ।
ಪುರುಷಃ ಪಾಪಕಾರೀ ಚ ತಸ್ಯಾ ಜನ್ಮ ವದಸ್ವ ನಃ ॥ ೫೬ ॥

॥ ಮಾರ್ಕಂಡೇಯ ಉವಾಚ ॥

ಶೃಣುಧ್ವಂ ಸಾ ಯಥಾ ಜಾತಾ ಯಸ್ಯ ವಾ ತನಯಾ ಶುಭಾ ।
ಯಥಾ ವಾಽಽಪ ವಸಿಷ್ಠಂ ಸಾ ಯಥಾ ಭೂತಾ ಪತಿವ್ರತಾ ॥ ೫೭ ॥
ಯಾ ಸಾ ಸಂಧ್ಯಾ ಬ್ರಹ್ಮಸುತಾ ಮನೋಜಾತಾ ಪುರಾಽಭವತ್ ।
ತಪಸ್ತಪ್ತ್ವಾ ತನುಂ ತ್ಯಕ್ತ್ವಾ ಸೈವ ಭೂತಾ ತ್ವರುಂಧತೀ ॥ ೫೮ ॥
ಮೇಧಾತಿಥೇಃ ಸುತಾ ಭೂತ್ವಾ ಮುನಿಶ್ರೇಷ್ಠಸ್ಯ ಸಾ ಸತೀ ।
ಬ್ರಹ್ಮವಿಷ್ಣುಮಹೇಶಾನಾಂ ವಚನಾಜ್ಜರಿತವ್ರತಾ
ವವ್ರೇ ಪತಿಂ ಮಹಾತ್ಮಾನಂ ವಸಿಷ್ಠಂ ಸಂಶಿತವ್ರತಂ ॥ ೫೯ ॥

೫೫-೫೬. ಯಾವ ಅರುಂಧತಿಯ ಮಹಿಮೆಯುಳ್ಳ ಕಥೆಯನ್ನು ಕೇಳಿದ ಮಾತ್ರಕ್ಕೆ ಹೆಂಗಸರು ಈ ಜನ್ಮದಲ್ಲಿ ಪತಿವ್ರತೆಯರಾಗಿದ್ದು, ಜನ್ಮಾಂತರದಲ್ಲಿಯೂ ಪತಿವ್ರತೆಯರಾಗುವರೋ ಮತ್ತು ಮರಣೋನ್ಮುಖನಾಗಿರುವ ಪಾಪಿಯಾದ ಅಶುದ್ಧ ಪುರುಷನು ಯಾವ ಅರುಂಧತಿಯನ್ನು ನೋಡಲು ಅಸಮರ್ಥನೋ ಅಂತಹ ಅರುಂಧತಿಯ ಜನ್ಮಕಥೆಯನ್ನು ನಮಗೆ ಹೇಳು.

೫೭. ಮಾರ್ಕಂಡೇಯ ಮುನಿಯು ಹೇಳಿದನು:—ಓ ಬ್ರಾಹ್ಮಣರೇ, ಕೇಳಿ. ಆ ಅರುಂಧತಿಯು ಹೇಗೆ ಜನಿಸಿದಳು? ಆ ಶುಭಾಂಗಿಯು ಯಾರ ಮಗಳು? ವಸಿಷ್ಠಮುನಿಯನ್ನು ಹೇಗೆ ಮದುವೆಯಾದಳು? ಮತ್ತು ಅವಳು ಪತಿವ್ರತಾ ಶಿರೋಮಣಿಯಾದುದೆಂತು? ಇವೆಲ್ಲವನ್ನೂ ನಿಮಗೆ ಹೇಳುವೆನು.

೫೮. ಹಿಂದೆ ಸೃಷ್ಟಿಯ ಆದಿಯಲ್ಲಿ ಬ್ರಹ್ಮನ ಮನಸ್ಸಿನಿಂದ ಯಾವ ಸಂಧ್ಯೆಯೆಂಬ ಸ್ತ್ರೀಯು ಜನಿಸಿದಳೋ, ಅವಳೇ ಮುಂದೆ ತಪಸ್ಸನ್ನು ಮಾಡಿ ಆ ಶರೀರವನ್ನು ಬಿಟ್ಟು ಅರುಂಧತಿಯಾದಳು.

೫೯. ಅವಳು ಮುನಿಶ್ರೇಷ್ಠನಾದ ಮೇಧಾತಿಥಿಯ ಮಗಳಾಗಿ ಜನಿಸಿ, ಬ್ರಹ್ಮವಿಷ್ಣುಮಹೇಶ್ವರರ ಮಾತಿನಂತೆ ವ್ರತಾನುಷ್ಠಾನ ಮಾಡಿ, ತಪಸ್ವಿಯೂ ಮಹಾತ್ಮನೂ ಆದ ವಸಿಷ್ಠ ಮುನಿಯನ್ನು ಪತಿಯಾಗಿ ವರಿಸಿ ವಿವಾಹವಾದಳು.

॥ ಋಷಯ ಊಚುಃ ॥

ಕಥಂ ತಯಾ ತಪಸ್ತಪ್ತಂ ಕಿಮರ್ಥಂ ಕುತ್ರ ಸಂಧ್ಯಯಾ ।
ಕಥಂ ಶರೀರಂ ಸಾ ತ್ಯಕ್ತ್ವಾ ಭೂತಾ ಮೇಧಾತಿಥೇಃ ಸುತಾ ॥ ೬೦ ॥

ಕಥಂ ವಾ ಗದಿತಂ ದೇವೈರ್ಬ್ರಹ್ಮವಿಷ್ಣುಶಿವೈಃ ಪತಿಂ ।
ವಸಿಷ್ಠಂ ಸುಮಹಾತ್ಮಾನಂ ಸಾ ವವ್ರೇ ಸಂಶಿತವ್ರತಂ ॥ ೬೧ ॥

ತನ್ನಃ ಸರ್ವಂ ಸಮಾಚಕ್ಷ್ವ ವಿಸ್ತರೇಣ ದ್ವಿಜೋತ್ತಮ ।
ಏತನ್ನಃ ಶ್ರೋತೃಮಾಣಾನಾಂ ಚರಿತಂ ದ್ವಿಜಸತ್ತಮ ॥ ೬೨ ॥

ಅರುಂಧತ್ಯಾ ಮಹಾಸತ್ಯಾಃ ಪರಂ ಕೌತೂಹಲಂ ಮಹತ್ ॥ ೬೩ ॥

॥ ಮಾರ್ಕಂಡೇಯ ಉವಾಚ ॥

ಬ್ರಹ್ಮಾಪಿ ತನಯಾಂ ಸಂಧ್ಯಾಂ ದೃಷ್ಟ್ವಾ ಪೂರ್ವಮಥಾತ್ಮನಃ ।
ಕಾಮಾಯ ಮಾನಸಂ ಚಕ್ರೇ ತ್ಯಕ್ತಾ ಸಾ ಚ ಸುತೇತಿ ವೈ ॥ ೬೪ ॥

೬೦–೬೧. ಋಷಿಗಳು ಪುನಃ ಪ್ರಶ್ನೆಮಾಡಿದರು:—ಆ ಸಂಧ್ಯೆಯು ಹೇಗೆ ತಪಸ್ಸನ್ನು ಮಾಡಿದಳು? ಎಲ್ಲಿ, ಏತಕ್ಕೋಸ್ಕರ ಮಾಡಿದಳು? ಮತ್ತು ಶರೀರವನ್ನು ಹೇಗೆ ಬಿಟ್ಟು ಮೇಂಧಾತಿಥಿಯ ಮಗಳಾಗಿ ಜನಿಸಿದಳು? ಬ್ರಹ್ಮ ವಿಷ್ಣುಮಹೇಶ್ವರರು ಅವಳಿಗೆ ಏನನ್ನು ಹೇಳಿದರು? ಮತ್ತು ಆ ಅರುಂಧತಿಯು ಮಹಾತ್ಮನೂ ತಪಸ್ವಿಯೂ ಆದ ವಸಿಷ್ಠ ಮುನಿಯನ್ನು ಹೇಗೆ ವರಿಸಿದಳು?

೬೨–೬೩. ಮಹಾ ಪತಿವ್ರತೆಯಾದ ಆ ಅರುಂಧತಿಯ ಚರಿತ್ರೆಯನ್ನು ಕೇಳಬೇಕೆಂದು ನಮಗೆ ತುಂಬ ಕುತೂಹಲವಿರುವುದು. ಆದುದರಿಂದ ಅದೆಲ್ಲವನ್ನೂ ನಮಗೆ ವಿಸ್ತಾರವಾಗಿ ಹೇಳು.

೬೪. ಮಾರ್ಕಂಡೇಯ ಮುನಿಯು ಹೇಳಿದನು:—ಹಿಂದೆ ಬ್ರಹ್ಮನು ತನ್ನ ಮಗಳಾದ ಆ ಸಂಧ್ಯೆಯನ್ನು ನೋಡಿ ಕಾಮಸುಖದಲ್ಲಿ ಆಸಕ್ತಿಯುಳ್ಳವನಾದನು. ಆ ಮೇಲೆ ಸಂಧ್ಯೆಯು ತನ್ನ ಮಗಳೆಂದು ತಿಳಿದು ಆ ಅಭಿಪ್ರಾಯವನ್ನು ಬಿಟ್ಟನು.

ತಸ್ಯಾಂ ಚ ಚಲಿತಂ ಚಿತ್ತಂ ಕಾಮಬಾಣವಿಲೋಡಿತಂ ।
ಋಷೀಣಾಂ ಪ್ರೇಕ್ಷತಾಂ ತೇಷಾಂ ಮಾನಸಾನಾಂ ಮಹಾತ್ಮನಾಂ ॥೬೫॥

ಭರ್ಗಸ್ಯ ವಚನಂ ಶ್ರುತ್ವಾ ಸೋಪಹಾಸಂ ವಿಧಿಂ ಪ್ರತಿ ।
ಆತ್ಮನಶ್ಚಲಚಿತ್ತತ್ವಮಮರ್ಯಾದಮೃಷೀನ್ಪ್ರತಿ ॥ ೬೬ ॥

ಕಾಮಸ್ಯ ತಾದೃಶಂ ಭಾವಂ ಮುನಿಮೋಹಕರಂ ಮುಹುಃ ।
ದೃಷ್ಟ್ವಾ ಸಂಧ್ಯಾ ಸ್ವಯಂ ತತ್ರ ತ್ರಸಾಮಾಯಾತಿ ದುಃಖಿತಾ ॥ ೬೭ ॥

ತತಸ್ತು ಬ್ರಹ್ಮಣಾ ಶಪ್ತೇ ಮದನೇ ತದನಂತರಂ ।
ಅಂತರ್ಭೂತೇ ವಿಧೌ ಶಂಭೌ ಗತೇ ಚಾಪಿ ನಿಜಾಸ್ಪದಂ ।
ಅಮರ್ಷವಶಮಾಪನ್ನಾ ಸಂಧ್ಯಾ ಧ್ಯಾನಪರಾಽಭವತ್ ॥ ೬೮ ॥

ಧ್ಯಾಯಂತೀ ಕ್ಷಣಮೇವಾಶು ಪೂರ್ವವೃತ್ತಂ ಮನಸ್ವಿನೀ ।
ಇದಂ ವಿಮಮೃಷೇ ಸಂಧ್ಯಾ ತಸ್ಮಿನ್ಕಾಲೇ ಯಥೋಚಿತಂ ॥ ೬೯ ॥

---

೬೫. ಬ್ರಹ್ಮನ ಮಾನಸಪುತ್ರರೂ, ಮಹಾತ್ಮರೂ ಆದ ಆ ಋಷಿಗಳೆಲ್ಲರೂ ನೋಡುತ್ತಿರುವಂತೆಯೇ ಆ ಸಂಧ್ಯೆಯ ಮನಸ್ಸು ಮನ್ಮಥಬಾಣಗಳಿಂದ ಸ್ವಲ್ಪ ಚಂಚಲವಾಯಿತು.

೬೬–೬೭. ಆಮೇಲೆ ಶಂಕರನು ಬ್ರಹ್ಮನನ್ನು ಕುರಿತು ಆಡಿದ ಅಪಹಾಸ್ಯದ ಮಾತುಗಳನ್ನು ಕೇಳಿ, ಸಂಧ್ಯೆಯು ಋಷಿಗಳಿದುರಿನಲ್ಲಿ ತನ್ನ ಮರ್ಯಾದೆಯಿಲ್ಲದ ಚಿತ್ತಚಾಂಚಲ್ಯವನ್ನೂ, ಮುನಿಗಳನ್ನು ಮೋಹಗೊಳಿಸುತ್ತಲಿರುವ ಮನ್ಮಥನ ಚೇಷ್ಟೆಯನ್ನೂ ನೋಡಿ, ತುಂಬ ಲಜ್ಜೆಗೊಂಡು ದುಃಖಿತಳಾದಳು.

೬೮. ಬಳಿಕ ಬ್ರಹ್ಮನು ಮನ್ಮಥನನ್ನು ಶಪಿಸಿ ಅಂತರ್ಧಾನವಾಗಲು ಮತ್ತು ಶಂಕರನು ತನ್ನ ಸ್ಥಾನಕ್ಕೆ ಹೊರಟು ಹೋಗಲು, ಸಂಧ್ಯೆಯು ಕೋಪಗೊಂಡು ಚಿಂತಾಪರಳಾದಳು.

೬೯. ಆ ಸಂಧ್ಯೆಯು ಸ್ವಲ್ಪ ಹೊತ್ತು ನಡೆದದ್ದನ್ನು ಚಿಂತಿಸುತ್ತಿದ್ದು ಬಳಿಕ ಆಗ ಮಾಡಬೇಕಾದ ಕಾರ್ಯವೇನೆಂಬುದಾಗಿ ವಿಮರ್ಶೆಮಾಡಿದಳು.

ಉತ್ಪನ್ನಮಾತ್ರಾಂ ಮಾಂ ದೃಷ್ಟ್ವಾ ಯುವತೀಂ ಮದನೇರಿತಃ ।
ಅಕಾರ್ಷೀತ್ತಾನುರಾಗೋಽಯಮಭಿಲಾಷಂ ಪಿತಾಮಹಃ ॥ ೭೦ ॥

ಸರ್ವೇಷಾಂ ಮಾನಸಾನಾಂ ಚ ಮುನೀನಾಂ ಭಾವಿತಾತ್ಮನಾಂ ।
ದೃಷ್ಟ್ವೈವ ಮಾಮಮುರ್ಯಾದಂ ಸಕಾಮಮಭವನ್ಮನಃ ॥ ೭೧ ॥

ಮಮಾಪಿ ಮಥಿತಂ ಚಿತ್ತಂ ಮದನೇನ ದುರಾತ್ಮನಾ ।
ಯೇನ ದೃಷ್ಟ್ವಾ ಮುನೀನ್ಸರ್ವಾಞ್ಚಲಿತಂ ಮೇ ಮನೋ ಭೃಶಂ ॥ ೭೨ ॥

ಫಲಮೇತಸ್ಯ ಪಾಪಸ್ಯ ಮದನಃ ಸ್ವಯಮಾಪ್ತವಾನ್ ।
ಸ್ವಯಂ ಶಶಾಪ ಕುಪಿತಃ ಶಂಭೋರಗ್ರೇ ಪಿತಾಮಹಃ ॥ ೭೩ ॥

ಮನೋಚಿತಂ ಫಲಂ ಸರ್ವಂ ಪ್ರಾಪ್ತುಮಿಚ್ಛಾಮಿ ಸಾಂಪ್ರತಂ ।
ಯನ್ಮಾಂ ಪಿತಾ ಭ್ರಾತರಶ್ಚ ಸಕಾಮಾಮಪರೋಕ್ಷತಃ ।
ದೃಷ್ಟ್ವಾ ಚಕ್ರುಃ ಸ್ಪೃಹಾಂ ತಸ್ಮಾನ್ನ ಮತ್ತಃ ಕೋಽಪಿ ಪಾಪಕೃತ್ ॥೭೪॥

---

೭೦. ಆಗತಾನೇ ಜನಿಸಿದ ಯುವತಿಯಾದ ನನ್ನನ್ನು ನೋಡಿ ಬ್ರಹ್ಮನು ಮನ್ಮಥನಿಂದ ಪ್ರೇರಿಸಲ್ಪಟ್ಟು ಅನುರಾಗದಿಂದ ನನ್ನಲ್ಲಿ ಮನಸ್ಸುಳ್ಳವನಾದನು.

೭೧. ನನ್ನನ್ನು ನೋಡಿದೊಡನೆಯೇ ಅಲ್ಲಿದ್ದ ಜಿತೇಂದ್ರಿಯರಾದ ಮಾನಸ ಮುನಿಗಳ ಮನಸ್ಸೂ ಸಹ ಮರ್ಯಾದೆಯನ್ನು ಮೀರಿ, ಕಾಮ ವಿಕಾರವುಳ್ಳದ್ದಾಯಿತು.

೭೨. ದುಷ್ಟಸ್ವಭಾವವುಳ್ಳ ಮನ್ಮಥನಿಂದ ನನ್ನ ಮನಸ್ಸೂ ಕೂಡ. ಆ ಮುನಿಗಳನ್ನು ನೋಡಿದ್ದರಿಂದ ಚಂಚಲವಾಗಿ ಕಲುಷಿತವಾಯಿತು.

೭೩. ಈ ಪಾಪಕ್ಕೆ ಸರಿಯಾದ ಫಲವನ್ನು ಮನ್ಮಥನು ಪಡೆದನು. ಬ್ರಹ್ಮನು ಕೋಪಗೊಂಡು ಶಂಕರನ ಎದುರಿಗೆ ಆ ಮನ್ಮಥನನ್ನು ಶಪಿಸಿದನು.

೭೪. ಈಗ ನಾನು ನನ್ನ ಪಾಪಕ್ಕೆ ತಕ್ಕ ಫಲವನ್ನು ಪಡೆಯಲೇ ಬೇಕು. ಏಕೆಂದರೆ ನಾನು ಕಾಮಯುಕ್ತಳಾದುದನ್ನು ಪ್ರತ್ಯಕ್ಷವಾಗಿ ನೋಡಿ ತಂದೆಯಾದ ಬ್ರಹ್ಮನಿಗೂ, ಸಹೋದರರಾದ ದಕ್ಷಬ್ರಹ್ಮನೇ ಮೊದಲಾದವರಿಗೂ ಕಾಮೇಚ್ಛೆಯುಂಟಾಯಿತು. ಆದುದರಿಂದ ಅವರಾರೂ ಪಾಪಿಗಳಲ್ಲವು.

ಮಮಾಪಿ ಕಾಮುಭಾವೋಽಭೂದಮುರ್ಯಾದಂ ಸಮೀಕ್ಷ್ಯ ತಾನ್ ।
ಪತ್ಯಾವಿವ ಸ್ವಕೇ ತಾತೇ ಸರ್ವೇಷು ಸಹಜೇಷ್ವಪಿ ॥ ೭೫ ॥

ಕರಿಷ್ಯಾಮ್ಯುಸ್ಯ ಪಾಪಸ್ಯ ಪ್ರಾಯಶ್ಚಿತ್ತಮುಹಂ ಸ್ವಯಂ ।
ಆತ್ಮಾನಮುಗ್ನೌ ಹೋಷ್ಯಾಮಿ ವೇದಮಾರ್ಗಾನುಸಾರತಃ ॥ ೭೬ ॥

ಕಿಂ ತ್ವೇಕಾಂ ಸ್ಥಾಪಯಿಷ್ಯಾಮಿ ಮುರ್ಯಾದಾಮಿಹ ಭೂತಲೇ ।
ಉತ್ಪನ್ನಮಾತ್ರಾ ನ ಯಥಾ ಸಕಾಮಾಃ ಸ್ಯುಃ ಶರೀರಿಣಃ ॥ ೭೭ ॥

ಏತದರ್ಥಮುಹಂ ಕೃತ್ವಾ ತಪಃ ಪರಮುದಾರುಣಂ ।
ಮುರ್ಯಾದಾಂ ಸ್ಥಾಪಯಿತ್ವೈವ ಪಶ್ಚಾತ್ತ್ಯಕ್ಷ್ಯಾಮಿ ಜೀವಿತಂ ॥ ೭೮ ॥

ಯಸ್ಮಿನ್ಶರೀರೇ ಪಿತ್ರಾ ಮೇ ಹ್ಯಭಿಲಾಷಃ ಸ್ವಯಂ ತತಃ ।
ಭ್ರಾತೃಭಿಸ್ತೇನ ಕಾಯೇನ ಕಿಂಚಿನ್ನಾಸ್ತಿ ಪ್ರಯೋಜನಂ ॥ ೭೯ ॥

---

೭೫. ನನಗೂ ಆ ಮುನಿಗಳನ್ನು ನೋಡಿ, ಅವರು ನನಗೆ ಸಹೋದರರಾಗಿದ್ದರೂ, ತನ್ನಲ್ಲಿ ಅನುರಕ್ತನಾದ ಗಂಡನಲ್ಲಿ ಉಂಟಾಗುವ ಪ್ರೇಮದಂತೆ, ಆ ಮುನಿಗಳಲ್ಲಿ ಕಾಮಾಭಿಲಾಷೆಯು ಮಿತಿಯಿಲ್ಲದಷ್ಟು ಉತ್ಪನ್ನವಾಯಿತು.

೭೬. ಈ ನನ್ನ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ನಾನೇ ಮಾಡಿಕೊಳ್ಳುವೆನು. ನನ್ನ ಶರೀರವನ್ನು ಅಗ್ನಿಯಲ್ಲಿ ವೇದೋಕ್ತವಿಧಿಯಂತೆ ಹೋಮ ಮಾಡುವೆನು.

೭೭. ಆದರೀಗ ಹುಟ್ಟಿದೊಡನೆಯೇ ಪ್ರಾಣಿಗಳು ಕಾಮಮೋಹಿತ ರಾಗಕೂಡದೆಂಬ ಒಂದು ಮರ್ಯಾದೆಯನ್ನು ಭೂಲೋಕದಲ್ಲಿ ಸ್ಥಾಪಿಸುವೆನು.

೭೮. ಅದಕ್ಕೋಸ್ಕರವಾಗಿ ನಾನು ಉಗ್ರವಾದ ತಪಸ್ಸನ್ನಾಚರಿಸಿ ಆ ಮರ್ಯಾದೆಯನ್ನು ಸ್ಥಾಪಿಸುವೆನು. ಆ ಮೇಲೆ ಈ ಶರೀರವನ್ನು ಬಿಡುವೆನು.

೭೯. ಯಾವ ಶರೀರದಲ್ಲಿ ನನ್ನ ತಂದೆಯಾದ ಬ್ರಹ್ಮನೂ, ಸಹೋದರರಾದ ಈ ಮುನಿಗಳೂ ಕಾಮಾಭಿಲಾಷೆಗೊಂಡರೋ ಅಂತಹ ಈ ನನ್ನ ಶರೀರದಿಂದ ಸ್ವಲ್ಪವೂ ಪ್ರಯೋಜನವಿಲ್ಲ.

ಯೇನ ಸ್ವೇನ ಶರೀರೇಣ ತಾತೇ ಚ ಸಹಜೇ ಸ್ವಕೇ ।
ಉದ್ಭಾವಿತಃ ಕಾಮುಭಾವೋ ನ ತತ್ಸುಕೃತಸಾಧಕಂ ॥ ೮೦ ॥

ಇತಿ ನಿಶ್ಚಿತ್ಯ ಮನಸಾ ಸಂಧ್ಯಾ ಶೈಲವರಂ ತತಃ ।
ಜಗಾಮ ಚಂದ್ರಭಾಗಾಖ್ಯಂ ಚಂದ್ರಭಾಗಾ ಯತಃ ಸೃತಾ ॥೮೧ ॥

ತಯಾ ಸ ಶೈಲಃ ಸಮುಧಿಷ್ಠಿತಃ ಸದಾ
ಸುವರ್ಣಗೌರ್ಯ್ಯಾ ಸುಸಮಪ್ರಭಾಭೃತಾ ।
ಸೋಮೇನ ಸಂಧ್ಯಾಸಮಯೋದಿತೇನ
ಯಥೋದಯಾದ್ರಿರ್ವಿರರಾಜ ಶಶ್ವತ್ ॥ ೮೨ ॥

॥ ಇತಿ ಶ್ರೀಕಾಲಿಕಾಪುರಾಣೇ ಏಕೋನವಿಂಶೋಽಧ್ಯಾಯಃ ॥

---

೮೦. ಯಾವ ಈ ನನ್ನ ಶರೀರದಿಂದ ನನ್ನ ಸಾಕ್ಷಾತ್ ತಂದೆಯಲ್ಲಿಯೂ, ಸಹೋದರರಲ್ಲಿಯೂ ಕಾಮುವಿಕಾರವು ಉತ್ಪನ್ನವಾಯಿತೋ ಅಂತಹ ಈ ಶರೀರವು ಪುಣ್ಯ ಸಂಪಾದನೆಗೆ ಸಾಧನವಾಗಲಾರದು.

೮೧. ಹೀಗೆಂದು ಮನಸ್ಸಿನಲ್ಲಿ ನಿಶ್ಚಯಿಸಿ, ಆ ಸಂಧ್ಯೆಯು ಚಂದ್ರಭಾಗವೆಂಬ ಪರ್ವತಕ್ಕೆ ತೆರಳಿದಳು. ಆ ಬೆಟ್ಟದಿಂದಲೇ ಚಂದ್ರಭಾಗಾ ಎಂಬ ನದಿಯು ಉದ್ಭವಿಸಿ ಹೊರಟಿರುವುದು.

೮೨. ಚಿನ್ನದಂತೆ ಪ್ರಕಾಶಮಾನವಾದ ಶರೀರಕಾಂತಿಯುಳ್ಳ ಆ ಸಂಧ್ಯೆಯಿಂದ, ಚಂದ್ರಭಾಗ ಪರ್ವತವು, ಸಂಧ್ಯಾಸಮಯದಲ್ಲಿ ಉದಯಿಸಿದ ಚಂದ್ರನಿಂದ ಉದಯ ಪರ್ವತವು ಶೋಭಿಸುವಂತೆ, ಶೋಭಿಸಿತು.

ಇಲ್ಲಿಗೆ ಶ್ರೀಕಾಲಿಕಾಪುರಾಣದಲ್ಲಿ ಹತ್ತೊಂಭತ್ತನೆಯ ಅಧ್ಯಾಯವು ಮುಗಿದುದು

॥ ಶ್ರೀ ॥

॥ ಅಥ ಶ್ರೀಕಾಲಿಕಾಪುರಾಣೇ ವಿಂಶೋಽಧ್ಯಾಯಃ ॥

ಇಪ್ಪತ್ತನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ಅಥ ತತ್ರ ಗತಾಂ ದೃಷ್ಟ್ವಾ ಸಂಧ್ಯಾಂ ಗಿರಿವರಂ ಪ್ರತಿ ।
ತಪಸೇ ನಿಯತಾತ್ಮಾನಂ ಬ್ರಹ್ಮಾ ಪ್ರಾಹ ಸ್ವಕಂ ಸುತಂ ॥ ೧ ॥

ವಸಿಷ್ಠಂ ಸಂಶಿತಾತ್ಮಾನಂ ಸರ್ವಜ್ಞಂ ಜ್ಞಾನಯೋಗಿನಂ ।
ಸಮೀಪೇ ಸುಸಮಾಸೀನಂ ವೇದವೇದಾಂಗಪಾರಗಂ ॥ ೨ ॥

॥ ಬ್ರಹ್ಮೋವಾಚ ॥

ವಸಿಷ್ಠ ಗಚ್ಛ ಯತ್ರೈಷಾ ಸಂಧ್ಯಾ ಯಾತಾ ಮನಸ್ವಿನೀ ।
ತಪಸೇ ಧೃತಕಾಮಾ ಸಾ ದೀಕ್ಷಸ್ವೈನಾಂ ಯಥಾವಿಧಿ ॥ ೩ ॥

೧-೨. ಮಾರ್ಕಂಡೇಯ ಮುನಿಯು ಹೇಳತೊಡಗಿದನು:—ಅನಂತರ ಆ ಸಂಧ್ಯೆಯು ತಪಸ್ಸಿಗಾಗಿ ಚಂದ್ರಭಾಗ ಪರ್ವತಕ್ಕೆ ಹೋಗಿರುವುದನ್ನು ತಿಳಿದು, ಬ್ರಹ್ಮನು, ಜಿತೇಂದ್ರಿಯನೂ, ಅನುಷ್ಠಾನಪರನೂ, ಸರ್ವಜ್ಞನೂ, ಬ್ರಹ್ಮಜ್ಞಾನಿಯೂ, ವೇದವೇದಾಂಗಗಳನ್ನು ಅಧ್ಯಯನ ಮಾಡಿದವನೂ ಆದ ತನ್ನ ಸಮೀಪದಲ್ಲಿಯೇ ಕುಳಿತಿರುವ ತನ್ನ ಪುತ್ರ ವಸಿಷ್ಠಮುನಿಯನ್ನು ಕುರಿತು ಹೀಗೆ ಹೇಳಿದನು.

೩. ಬ್ರಹ್ಮನು ಹೇಳಿದನು:—ಎಲೈ ವಸಿಷ್ಠನೇ, ಸ್ಥಿರಸಂಕಲ್ಪದಿಂದ ತಪಸ್ಸಿಗಾಗಿ ಆ ಸಂಧ್ಯೆಯು ಹೋಗಿರುವ ಸ್ಥಳಕ್ಕೆ ಹೋಗಿ, ಅವಳಿಗೆ ತಪಸ್ಸನ್ನಾಚರಿಸುವ ಕ್ರಮವನ್ನು ಹೇಳಿ ಅವಳನ್ನು ಅದರಲ್ಲಿ ನಿಯಮಿಸು.

ಮುಂದಾಕ್ಷಮಭವತ್ತಸ್ಯಾಃ ಪುರಾ ದೃಷ್ಟ್ವೇಹ ಕಾಮುಕಾನ್ ।
ಯುಷ್ಮಾನ್ಮಾಂ ಚ ತಥಾತ್ಮಾನಂ ಸಕಾಮಾನ್ಮುನಿಸತ್ತಮ ॥ ೪ ॥
ಅಯುಕ್ತರೂಪಂ ತತ್ಕರ್ಮ ಪೂರ್ವವೃತ್ತಂ ವಿಮೃಷ್ಯ ಸಾ ।
ಅಸ್ಮಾಕಮಾತ್ಮನಶ್ಚಾಪಿ ಪ್ರಾಣಾನ್ತ್ಸಂತ್ಯಕ್ತುಮಿಚ್ಛತಿ ॥ ೫ ॥
ಅಮರ್ಯಾದೇಷು ಮರ್ಯಾದಾಂ ತಪಸಾ ಸ್ಥಾಪಯಿಷ್ಯತಿ ।
ತಪಃ ಕರ್ತುಂ ಗತಾ ಸಾಧ್ವೀ ಚಂದ್ರಭಾಗಾಯ ಸಾಂಪ್ರತಂ ॥ ೬ ॥
ನ ಭಾವಂ ತಪಸಸ್ತಾತ ಸಾ ತು ಜಾನಾತಿ ಕಂಚನ ।
ತಸ್ಮಾದ್ಯಥೋಪದೇಶಂ ಸಾ ಪ್ರಾಪ್ನೋತಿ ತ್ವಂ ತಥಾ ಕುರು ॥ ೭ ॥
ಇದಂ ರೂಪಂ ಪರಿತ್ಯಜ್ಯ ರೂಪಾಂತರಂ ಪರಂ ಭವಾನ್ ।
ಪರಿಗೃಹ್ಯಾಂತಿಕೇ ತಸ್ಯಾಸ್ತಪಶ್ಚರ್ಯಾಂ ನಿದೇಶತು ॥ ೮ ॥

---

೪. ಎಲೈ ಮುನಿಶ್ರೇಷ್ಠನೇ, ಹಿಂದೆ ಅವಳು, ನೀವೆಲ್ಲರೂ ನಾನೂ ತಾನೂ ಸಹ ಕಾಮವಿಕಾರವನ್ನು ಹೊಂದಿದುದನ್ನು ನೋಡಿ, ತುಂಬ ಲಜ್ಜೆಗೊಂಡಳು.

೫. ನಾವೂ, ಅವಳೂ ಹಿಂದೆ ಮಾಡಿದ ಆ ಕಾರ್ಯವು ಅಯೋಗ್ಯವಾದುದೆಂದು ವಿಮರ್ಶಿಸಿ, ಆ ಸಂಧ್ಯೆಯು ಅದರ ಪಾಪಪರಿಹಾರಕ್ಕಾಗಿ ಪ್ರಾಣವನ್ನು ಬಿಡಬೇಕೆಂದಿರುವಳು.

೬. ಪ್ರಾಣಿಗಳು, ಹುಟ್ಟಿದೊಡನೆಯೇ ಕಾಮ ವಿಕಾರವನ್ನು ಹೊಂದದಿರುವಂತಹ ಮರ್ಯಾದೆಯನ್ನು ಸ್ಥಾಪಿಸುವ ಸಲುವಾಗಿ, ತಪಸ್ಸನ್ನು ಮಾಡಲು ಆ ಸಾಧ್ವಿಯು ಚಂದ್ರಭಾಗ ಪರ್ವತಕ್ಕೆ ಹೋಗಿರುವಳು.

೭. ಅವಳು ತಪಸ್ಸನ್ನು ಮಾಡುವ ಕ್ರಮವನ್ನೇ ಅರಿಯಳು. ಆದುದರಿಂದ ನೀನು ಅವಳಿಗೆ ಉಪದೇಶಮಾಡಿ, ಅವಳು ತಪಸ್ಸನ್ನು, ಕ್ರಮವರಿತು ಮಾಡುವಂತೆ ಮಾಡು.

೮. ಈ ರೂಪವನ್ನು ಬಿಟ್ಟು ಬೇರೆ ರೂಪವನ್ನು ಧರಿಸಿ, ಆ ಸಂಧ್ಯೆಯಿರುವಲ್ಲಿಗೆ ಹೋಗಿ ಅವಳಿಗೆ ತಪಸ್ಸಿನ ಅನುಷ್ಠಾನಕ್ರಮವನ್ನು ಉಪದೇಶಿಸು.

ಇದಂ ಸ್ವರೂಪಂ ಭವತೋ ದೃಷ್ಟ್ವಾ ಪೂರ್ವಂ ಯಥಾ ತ್ರಪಾಂ ।
ತಥಾ ಪ್ರಾಪ್ಯ ನ ಕಿಂಚಿತ್ಸಾ ತ್ವದಗ್ರೇ ವ್ಯಾಹರಿಷ್ಯತಿ ॥ ೯ ॥

ಪರಿತ್ಯಜ್ಯ ಸ್ವಕಂ ರೂಪಂ ರೂಪಾಂತರಧರೋ ಭವಾನ್ ।
ತಸ್ಮಾತ್ಸಂಧ್ಯಾಂ ಮಹಾಭಾಗಾಮುಪದೇಷ್ಟುಂ ಪ್ರಗಚ್ಛತು ॥ ೧೦ ॥

॥ ಮಾರ್ಕಂಡೇಯ ಉವಾಚ ॥

ತಥೇತ್ಯುಕ್ತ್ವಾ ವಸಿಷ್ಠೋಽಪಿ ವರ್ಣೇ ಭೂತ್ವಾ ಜಟಾಧರಃ ।
ತರುಣಶ್ಚಂದ್ರಭಾಗಾಯ ಯಯೌ ಸಂಧ್ಯಾಂತಿಕಂ ಮುನಿಃ ॥ ೧೧ ॥

ತತ್ರ ದೇವಸರಃ ಪೂರ್ಣಂ ಗುಣೈರ್ಮಾನಸಸಂಮಿತಂ ।
ದದರ್ಶ ಸ ವಸಿಷ್ಠೋಽಥ ಸಂಧ್ಯಾಂ ತತ್ತೀರಗಾಮಿನೀಂ ॥ ೧೨ ॥

ತೀರಸ್ಥಯಾ ತಯಾ ರೇಜೇ ತತ್ಸರಃ ಕಮಲೋಜ್ಜ್ವಲಂ ।
ಉದ್ಯದಿಂದುಸನಕ್ಷತ್ರಂ ಪ್ರದೋಷೇ ಗಗನಂ ಯಥಾ ॥ ೧೩ ॥

---

೯. ಏಕೆಂದರೆ, ನಿನ್ನ ಇದೇ ರೂಪವನ್ನು ಆ ಸಂಧ್ಯೆಯು ನೋಡಿದರೆ, ಹಿಂದಿನಂತೆ ಲಜ್ಜೆಗೊಂಡು ನಿನ್ನೆದುರಿಗೆ ಏನೂ ವ್ಯವಹಾರ ಮಾಡಲಾರಳು.

೧೦. ಆದುದರಿಂದ ಈ ನಿನ್ನ ರೂಪವನ್ನು ಬಿಟ್ಟು ಬೇರೆ ರೂಪವನ್ನು ಧರಿಸಿ, ಆ ಪೂಜ್ಯಳಾದ ಸಂಧ್ಯೆಗೆ ಉಪದೇಶಿಸುವುದಕ್ಕಾಗಿ ಹೊರಡು.

೧೧. ಮಾರ್ಕಂಡೇಯ ಮುನಿಯು ಹೇಳಿದನು:—ಹಾಗೆಯೇ ಆಗಲೆಂದು ಹೇಳಿ ಆ ವಸಿಷ್ಠಮುನಿಯು, ತರುಣನಾದ ಬ್ರಹ್ಮಚಾರಿಯ ವೇಷವನ್ನು ಧರಿಸಿ ಜಟಾಧರನಾಗಿ, ಆ ಸಂಧ್ಯೆಯಿರುವ ಚಂದ್ರಭಾಗಪರ್ವತಕ್ಕೆ ಹೋದನು.

೧೨. ಅಲ್ಲಿ ಜಲದಿಂದ ಪೂರ್ಣವಾಗಿ, ಎಲ್ಲ ವಿಷಯದಲ್ಲಿಯೂ ಮಾನಸ ಸರೋವರಕ್ಕೆ ಸಮನಾಗಿರುವ ಒಂದು ದಿವ್ಯಸರೋವರವನ್ನೂ, ಅದರ ತೀರದಲ್ಲಿ ಸಂಧ್ಯೆಯನ್ನೂ, ಆ ವಸಿಷ್ಠಮುನಿಯು ನೋಡಿದನು.

೧೩. ಆ ಸರೋವರದ ತೀರದಲ್ಲಿರುವ ಸಂಧ್ಯೆಯಿಂದ, ಅರಳಿದ ಕಮಲಗಳಿಂದ ನಿಬಿಡವಾದ ಆ ಸರಸ್ಸು, ರಾತ್ರಿಯ ಕಾಲದಲ್ಲಿ ನಕ್ಷತ್ರಗಳೊಡನೆ ಉದಯಿಸುತ್ತಿರುವ ಚಂದ್ರನಿಂದ ಗಗನವು ಶೋಭಿಸುವಂತೆ, ಶೋಭಿಸಿತು.

ತಾಂ ತತ್ರ ದೃಷ್ಟ್ವಾऽಥ ಮುನಿಃ ಸಮಾಭಾಷ್ಯ ಸಕೌತುಕಃ ।
ವೀಕ್ಷಾಂಚಕ್ರೇ ಸರಸ್ತತ್ರ ಬೃಹಲ್ಲೋಹಿತಸಂಜ್ಞಕಂ ॥ ೧೪ ॥
ಚಂದ್ರಭಾಗಾ ನದೀ ತಸ್ಮಾತ್ತಾ್ಕಸಾರಾದ್ದಕ್ಷಿಣಾಂಬುಧಿಂ ।
ಯಾಂತೀ ನಿರ್ಭಿದ್ಯ ದದೃಶೇ ತೇನ ಸಾನುಗಿರೇರ್ಮಹತ್ ॥ ೧೫ ॥
ನಿರ್ಭಿದ್ಯ ಪಶ್ಚಿಮಂ ಸಾನುಂ ಚಂದ್ರಭಾಗಸ್ಯ ಸಾ ನದೀ ।
ಯಥಾ ಹಿಮವತೋ ಗಂಗಾ ತಥಾ ಗಚ್ಛತಿ ಸಾಗರಂ ॥ ೧೬ ॥

॥ ಋಷಯ ಊಚುಃ ॥

ಚಂದ್ರಭಾಗಾ ಕಥಂ ಸಿಂಧುಸ್ತತ್ರೋತ್ಪನ್ನಾ ಮಹಾಗಿರೌ ।
ಕೀದೃಕ್ಸರಸ್ತದ್ವಿಪ್ರೇಂದ್ರ ಬೃಹಲ್ಲೋಹಿತಸಂಜ್ಞಕಂ ॥ ೧೭ ॥
ಕಥಂ ಸ ಪರ್ವತಶ್ರೇಷ್ಠಶ್ಚಂದ್ರಭಾಗಾಹ್ವಯೋऽಭವತ್ ।
ಚಂದ್ರಭಾಗಾಹ್ವಯಾ ಕಸ್ಮಾನ್ನದೀ ಜಾತಾ ವೃಷೋದಕಾ ॥ ೧೮ ॥

---

೧೪. ಬಳಿಕ ವಸಿಷ್ಠನು ಆ ಸಂಧ್ಯೆಯನ್ನು ಅಲ್ಲಿ ನೋಡಿ ಅವಳನ್ನು ಮಾತನಾಡಿಸಿ, ಬೃಹಲ್ಲೋಹಿತವೆಂಬ ಆ ಸರೋವರವನ್ನು ಕುತೂಹಲದಿಂದ ನೋಡಿದನು.

೧೫. ಮತ್ತು ಆ ಬೃಹಲ್ಲೋಹಿತ ಸರಸ್ಸಿನಿಂದ ಹೊರಟು, ಚಂದ್ರಭಾಗ ಪರ್ವತದ ತಪ್ಪಲನ್ನು ಭೇದಿಸಿ, ದಕ್ಷಿಣ ಸಮುದ್ರದ ಕಡೆಗೆ ಹೋಗುತ್ತಲಿರುವ ಚಂದ್ರಭಾಗಾ ನದಿಯನ್ನು ನೋಡಿದನು.

೧೬. ಹಿಮವತ್ಪರ್ವತದ ತಪ್ಪಲನ್ನು ಭೇದಿಸಿ ಹೊರಟ ಗಂಗಾನದಿಯಂತೆ ಆ ನದಿಯೂ ಚಂದ್ರಭಾಗ ಗಿರಿಯ ಪಶ್ಚಿಮ ದಿಕ್ಕಿನ ತಪ್ಪಲನ್ನು ಭೇದಿಸಿ ಸಮುದ್ರದ ಕಡೆಗೆ ಹೋಗುತ್ತಲಿದೆ.

೧೭. ಋಷಿಗಳು ಪ್ರಶ್ನೆ ಮಾಡಿದರು:—ಓ ಬ್ರಾಹ್ಮಣೋತ್ತಮನೇ, ಚಂದ್ರಭಾಗಾ ನದಿಯು ಆ ಬೆಟ್ಟದಲ್ಲಿ ಹೇಗೆ ಹುಟ್ಟಿತು? ಬೃಹಲ್ಲೋಹಿತವೆಂಬ ಆ ಸರಸ್ಸು ಎಂತಹುದು?

೧೮. ಆ ಪರ್ವತೋತ್ತಮಕ್ಕೆ ಚಂದ್ರಭಾಗವೆಂಬ ಹೆಸರು ಏತಕ್ಕೆ ಉಂಟಾಯಿತು? ಆ ಪರ್ವತದಿಂದ ಹೆಚ್ಚಾದ ನೀರಿನಿಂದ ಕೂಡಿದ ಚಂದ್ರಭಾಗವೆಂಬ ನದಿಯು ಹೇಗೆ ಹುಟ್ಟಿತು?

ಏತನ್ನಃ ಶ್ರೋತುಮಾಣಾನಾಂ ಜಾಯತೇ ಕೌತುಕಂ ಮಹತ್ ।
ಮಾಹಾತ್ಮ್ಯಂ ಚಂದ್ರಭಾಗಾಯಾಃ ಕಾಸಾರಸ್ಯ ಗಿರೇಸ್ತಥಾ ॥ ೧೯ ॥

॥ ಮಾರ್ಕಂಡೇಯ ಉವಾಚ ॥

ಶ್ರೂಯತಾಂ ಚಂದ್ರಭಾಗಾಯಾ ಉತ್ಪತ್ತಿರ್ಮುನಿಸತ್ತಮಾಃ ।
ಯುಷ್ಮಾಭಿಶ್ಚಂದ್ರಭಾಗಸ್ಯ ಮಾಹಾತ್ಮ್ಯಂ ನಾಮಕಾರಣಂ ॥ ೨೦ ॥
ಹಿಮವದ್ಗಿರಿಸಂಸಕ್ತಃ ಶತಯೋಜನವಿಸ್ತೃತಃ ।
ಯೋಜನತ್ರಿಂಶದಾಯಾಮಃ ಕುಂದೇಂದುಧವಲೋ ಗಿರಿಃ ॥ ೨೧ ॥

ತಸ್ಮಿನ್ಗಿರೌ ಪುರಾ ವೇಧಾಶ್ಚಂದ್ರಂ ಶುದ್ಧಂ ಸುಧಾನಿಧಿಂ ।
ವಿಭಜ್ಯ ಕಲ್ಪಯಾಮಾಸ ದೇವಾನ್ನಂ ಸ ಪಿತಾಮಹಃ ॥ ೨೨ ॥

ಪಿತೃರ್ಥಂ ಚ ತಥಾ ತಸ್ಯ ತಿಥಿವೃದ್ಧಿಕ್ಷಯಾತ್ಮಕಂ ।
ಕಲ್ಪಯಾಮಾಸ ಜಗತಾಂ ಹಿತಾಯ ಕಮಲಾಸನಃ ॥ ೨೩ ॥

---

೧೯. ಈ ಚಂದ್ರಭಾಗಾ ನದಿಯ, ಚಂದ್ರಭಾಗ ಪರ್ವತದ, ಮತ್ತು ಬೃಹಲ್ಲೋಹಿತ ಸರೋವರದ ಮಾಹಾತ್ಮ್ಯವನ್ನು ಕೇಳಬೇಕೆಂದು ನಮಗೆ ಕುತೂಹಲವುಂಟಾಗಿರುವುದು, ಎಂದು ಕೇಳಿದರು.

೨೦. ಮಾರ್ಕಂಡೇಯ ಮುನಿಯು ಹೇಳಿದನು:—ಎಲೈ ಮುನಿ ಶ್ರೇಷ್ಠರೇ, ಕೇಳಿರಿ. ಚಂದ್ರಭಾಗ ಪರ್ವತ ಮತ್ತು ಚಂದ್ರಭಾಗಾ ನದಿಯ ಉತ್ಪತ್ತಿಯನ್ನೂ, ಅದರ ಮಾಹಾತ್ಮ್ಯವನ್ನೂ, ಆ ಹೆಸರು ಬರುವುದಕ್ಕೆ ಕಾರಣವನ್ನೂ ಹೇಳುವೆನು.

೨೧. ಆ ಚಂದ್ರಭಾಗಪರ್ವತವು ಹಿಮವತ್ಪರ್ವತಕ್ಕೆ ಹೊಂದಿಕೊಂಡು, ನೂರು ಯೋಜನ ಉದ್ದವಾಗಿಯೂ, ಮೂವತ್ತು ಯೋಜನ ಅಗಲವಾಗಿಯೂ, ಚಂದ್ರನಂತೆ ಶುಭ್ರವಾದ ಕಾಂತಿಯುಳ್ಳದ್ದಾಗಿಯೂ ಇರುವುದು.

೨೨. ಆ ಬೆಟ್ಟದಲ್ಲಿ ಬ್ರಹ್ಮನು ಹಿಂದೆ ಅಮೃತಕ್ಕೆ ನಿಧಿಯಾದ ಚಂದ್ರನನ್ನು ವಿಭಾಗಿಸಿ ದೇವತೆಗಳಿಗೆ ಆಹಾರವನ್ನು ಕಲ್ಪಿಸಿದನು.

೨೩. ಅಲ್ಲದೆ ಜಗತ್ತಿನ ಹಿತಕ್ಕಾಗಿಯೂ, ಪಿತೃದೇವತೆಗಳಿಗೋಸ್ಕರವೂ, ಬ್ರಹ್ಮನು ಆ ಚಂದ್ರನಿಗೆ ಶುಕ್ಲಪಕ್ಷದ ತಿಥಿಗಳಲ್ಲಿ ಕ್ರಮೇಣ ಅಭಿವೃದ್ಧಿಯನ್ನೂ, ಕೃಷ್ಣಪಕ್ಷದ ತಿಥಿಗಳಲ್ಲಿ ಕ್ಷಯವನ್ನೂ ಕಲ್ಪಿಸಿದನು.

ವಿಭಕ್ತಶ್ಚಂದ್ರಮಾಸ್ತಸ್ಮಿಞ್ಜೀವಮೂತೇ ದ್ವಿಜಸತ್ತಮಾಃ ।
ಅತೋ ದೇವಾಶ್ಚಂದ್ರಭಾಗಂ ನಾಮ್ನಾ ಚಕ್ರುಃ ಪುರಾ ಗಿರಿಂ ॥ ೨೪ ॥

॥ ಋಷಯ ಊಚುಃ ॥

ಯಜ್ಞಭಾಗೇಷು ತಿಷ್ಠತ್ಸು ತಥಾ ಕ್ಷೀರೋದಜೇಽಮೃತೇ ।
ಕಿಮರ್ಥಮಕರೋಚ್ಚಂದ್ರಂ ದೇವಾರ್ಥಂ ಮಂಗಲಾಸನಃ ॥ ೨೫ ॥

ತಥಾ ಕವ್ಯೇ ಸ್ಥಿತೇ ಕಸ್ಮಾತ್ಪಿತೃಣಾರ್ಥಂ ಸಮಕಲ್ಪಯತ್ ।
ತಿಥಿಕ್ಷಯೇ ತಥಾ ವೃದ್ಧೌ ಕಥಮಿಂದುರಭೂದ್ಗುರೋ ॥ ೨೬ ॥

ಏತನ್ನಃ ಸಂಶಯಂ ಬ್ರಹ್ಮಞ್ಛಿಂಧಿ ಸೂರ್ಯೋ ಯಥಾ ತಮಃ ।
ನಾನ್ಯೋಽಸ್ತಿ ಸಂಶಯಸ್ಯಾಸ್ಯ ಛೇತ್ತಾ ತ್ವತ್ತೋ ದ್ವಿಜೋತ್ತಮ ॥ ೨೭ ॥

---

೨೪. ಎಲೈ ಬ್ರಾಹ್ಮಣೋತ್ತಮರೇ, ಹೀಗೆ ಆ ಬೆಟ್ಟದಲ್ಲಿ ಬ್ರಹ್ಮನು ಚಂದ್ರನನ್ನು ವಿಭಾಗಿಸಿದುದರಿಂದ ಅದನ್ನು ಚಂದ್ರಭಾಗಪರ್ವತವೆಂದು ದೇವತೆಗಳು ಕರೆದರು.

೨೫. ಋಷಿಗಳು ಕೇಳಿದರು:—ಯಜ್ಞದಲ್ಲಿ ಕೊಡುವ ಹವಿರ್ಭಾಗಗಳೂ, ಕ್ಷೀರಸಾಗರದಲ್ಲಿ ಉದ್ಭವಿಸಿದ ಅಮೃತವೂ ದೇವತೆಗಳಿಗೆ ಆಹಾರವಾಗಿರಲು, ಮತ್ತೆ ಚಂದ್ರನನ್ನು ವಿಭಾಗಿಸಿ ದೇವತೆಗಳಿಗೆ ಆಹಾರವಾಗಿ ಏಕೆ ಬ್ರಹ್ಮನು ಕಲ್ಪಿಸಿದನು?

೨೬. ಹಾಗೆಯೇ ಶ್ರಾದ್ಧಾದಿಗಳಲ್ಲಿ ಕೊಡುವ ಕವ್ಯವಿರಲು, ಪಿತೃಗಳಿಗಾಗಿ ಚಂದ್ರನನ್ನೇಕೆ ಕಲ್ಪಿಸಿದನು? ಚಂದ್ರನು ಶುಕ್ಲಪಕ್ಷದಲ್ಲಿ ವೃದ್ಧಿಯನ್ನೂ, ಕೃಷ್ಣಪಕ್ಷದಲ್ಲಿ ಕ್ಷಯವನ್ನೂ ಏತಕ್ಕೆ ಹೊಂದಿದನು? ಎಲೈ ಗುರುವೇ, ಇದೆಲ್ಲವನ್ನೂ ನಮಗೆ ಹೇಳು.

೨೭. ಓ ಬ್ರಾಹ್ಮಣೋತ್ತಮನೇ, ಸೂರ್ಯನು ಕತ್ತಲೆಯನ್ನು ಹೋಗಲಾಡಿಸುವಂತೆ ನಮ್ಮ ಈ ಸಂದೇಹವನ್ನು ಹೋಗಲಾಡಿಸು. ನಿನ್ನ ಹೊರತು ಬೇರೆ ಯಾರೂ ಈ ಸಂಶಯವನ್ನು ಪರಿಹರಿಸಲಾರರು.

॥ ಮಾರ್ಕಂಡೇಯ ಉವಾಚ ॥

ಪುರಾ ದಕ್ಷಃ ಸ್ವತನಯಾ ಅಶ್ವಿನ್ಯಾದ್ಯಾ ಮನೋರಮಾಃ ।
ಷಡ್ವಿಂಶತಿಂ ತಥೈಕಾಂ ಚ ಸೋಮಾಯಾದಾತ್ಪ್ರಜಾಪತಿಃ ॥ ೨೮ ॥

ಸಮುಸ್ತಾಸ್ತಾಸ್ತತಃ ಸೋಮ ಉಪಯೇಮೇ ಯಥಾವಿಧಿ ।
ನಿನಾಯ ಚ ಸ್ವಕಂ ಸ್ಥಾನಂ ದಕ್ಷಸ್ಯಾನುಮತೇ ತದಾ ॥ ೨೯ ॥

ಅಥ ಚಂದ್ರಃ ಸಮುಸ್ತಾಸು ತಾಸು ಕನ್ಯಾಸು ರಾಗತಃ ।
ರೋಹಿಣ್ಯಾ ಸಾರ್ಧಮವಸದ್ಯುತೋತ್ಸವಕಲಾದಿಭಿಃ ॥ ೩೦ ॥

ರೋಹಿಣೀಮೇವ ಭಜತೇ ರೋಹಿಣ್ಯಾ ಸಹ ಮೋದತೇ ।
ವಿನೇಂದೂ ರೋಹಿಣೀಂ ಶಾಂತಿಂ ನ ಕಾಂಚಿಲ್ಲಭತೇ ಪುರಾ ॥ ೩೧ ॥

ರೋಹಿಣೀತತ್ಪರಂ ಚಂದ್ರಂ ವೀಕ್ಷ್ಯ ತಾಃ ಸರ್ವಕನ್ಯಕಾಃ ।
ಉಪಚಾರೈರ್ಬಹುವಿಧೈರ್ಭೇಜುಶ್ಚಂದ್ರಮಸಂ ಪ್ರತಿ ॥ ೩೨ ॥

---

೨೮. ಮಾರ್ಕಂಡೇಯ ಮುನಿಯು ಹೇಳಿದನು:—ಹಿಂದೆ ದಕ್ಷಬ್ರಹ್ಮನು ಅಶ್ವಿನಿಯೇ ಮೊದಲಾದ ಸುಂದರಿಯರಾದ ತನ್ನ ಇಪ್ಪತ್ತೈಳು ಜನ ಹೆಣ್ಣು ಮಕ್ಕಳನ್ನು ಚಂದ್ರನಿಗೆ ಮದುವೆ ಮಾಡಿಕೊಟ್ಟನು.

೨೯. ಆ ಸುಂದರಿಯರನ್ನೆಲ್ಲಾ ಚಂದ್ರನು ವಿಧಿಪೂರ್ವಕವಾಗಿ ಮದುವೆ ಮಾಡಿಕೊಂಡು, ದಕ್ಷಬ್ರಹ್ಮನ ಅನುಮತಿಯನ್ನು ಪಡೆದು ತನ್ನ ಸ್ಥಾನಕ್ಕೆ ಕರೆದುಕೊಂಡು ಹೋದನು.

೩೦. ಬಳಿಕ ಚಂದ್ರನು ಯುವತಿಯರಾದ ಆ ತನ್ನ ಪತ್ನಿಯರಲ್ಲಿ ಒಬ್ಬಳಾದ ರೋಹಿಣಿ ಎಂಬುವಳೊಡನೆ ಅನುರಕ್ತನಾಗಿ ಕಾಮಸುಖ ಮುಂತಾದ ಭೋಗಗಳನ್ನು ಅನುಭವಿಸುತ್ತಲಿದ್ದನು.

೩೧. ಆ ಚಂದ್ರನು ಯಾವಾಗಲೂ ರೋಹಿಣಿಯೊಡನೆಯೇ ಸೇರುವನು. ಅವಳೊಡನೆಯೇ ಸಂತೋಷದಿಂದ ವಿಹರಿಸುವನು. ಆ ರೋಹಿಣಿಯಿಲ್ಲದೆ ಒಂದು ಕ್ಷಣವೂ ಮನಸ್ಸಮಾಧಾನವನ್ನು ಹೊಂದುತ್ತಿರಲಿಲ್ಲವು.

೩೨. ಹೀಗೆ ಚಂದ್ರನು ರೋಹಿಣಿಯೊಬ್ಬಳಲ್ಲಿಯೇ ಅನುರಕ್ತನಾಗಿರುವುದನ್ನು ಕಂಡು ಮಿಕ್ಕ ಕನ್ಯೆಯರು ಆ ಚಂದ್ರನು ತಮ್ಮಲ್ಲಿಯೂ ಅನು

ನಿಷೇವ್ಯಮಾಣೋಽನುದಿನಂ ಯದಾ ನೈವಾಕರೋದ್ವಿಧುಃ ।
ತಾಸು ಭಾವಂ ತದಾ ಸರ್ವಾ ಅಮರ್ಷವಶಮಾಗತಾಃ ॥ ೩೩ ॥

ಅಥೋತ್ತರಾಫಲ್ಗುನೀತಿ ನಾಮ್ನಾ ಯಾ ಭರಣೀ ತಥಾ ।
ಕೃತ್ತಿಕಾರ್ದ್ರಾ ಮಘಾ ಚೈವ ವಿಶಾಖೋತ್ತರಭಾದ್ರಪತ್ ॥ ೩೪ ॥

ತಥಾ ಜ್ಯೇಷ್ಠೋತ್ತರಾಷಾಢೇ ನವೈತಾಃ ಕುಪಿತಾ ಭೃಶಂ ।
ಹಿಮಾಂಶುಮುಪಸಂಗಮ್ಯ ಪರಿವವ್ರುಃ ಸಮಂತತಃ ॥ ೩೫ ॥

ಪರಿವಾರ್ಯ ನಿಶಾನಾಥಂ ದದೃಶೂ ರೋಹಿಣೀಂ ತತಃ ।
ವಾಮಾಂಕಸ್ಥಾಂ ತಸ್ಯ ತೇನ ರಮಮಾಣಾಂ ಸ್ವಮಂಡಲೇ ॥ ೩೬ ॥

ತಾಂ ವೀಕ್ಷ್ಯ ತಾದೃಶೀಂ ಸರ್ವಾ ರೋಹಿಣೀಂ ವರವರ್ಣಿನೀಂ ।
ಜಜ್ವಲುಶ್ಚಾತಿಕೋಪೇನ ಹವಿಷೇವ ಹುತಾಶನಃ ॥ ೩೭ ॥

ರಕ್ತನಾಗಿರುವಂತೆ ಮಾಡಲು, ಅವನನ್ನು ಬಹುವಿಧ ಉಪಚಾರಗಳಿಂದ ಸೇವಿಸಿದರು.

೩೩. ಪ್ರತಿದಿನವೂ ಆ ಕನ್ಯೆಯರು ಅವನನ್ನು ಸೇವಿಸುತ್ತಿದ್ದರೂ ಆ ಚಂದ್ರನು ಅವರಲ್ಲಿ ಅನುರಕ್ತನಾಗಲಿಲ್ಲ. ಆಗ ಅವರೆಲ್ಲರೂ ಚಂದ್ರನಲ್ಲಿ ತುಂಬ ಕೋಪವುಳ್ಳವರಾದರು.

೩೪-೩೫. ಆಮೇಲೆ, ಉತ್ತರಾಫಲ್ಗುನೀ, ಭರಣೀ, ಕೃತ್ತಿಕೆ, ಆರ್ದ್ರೆ, ಮಘೇ, ವಿಶಾಖೆ, ಉತ್ತರಾಭಾದ್ರೆ, ಜ್ಯೇಷ್ಠೆ ಮತ್ತು ಉತ್ತರಾಷಾಢೇ ಎಂಬ ಹೆಸರಿನ ಒಂಬತ್ತು ಕನ್ಯೆಯರೂ ತುಂಬಾ ಕೋಪಗೊಂಡು, ಚಂದ್ರನ ಸಮೀಪಕ್ಕೆ ಬಂದು ಅವನ ಸುತ್ತಲೂ ನೆರೆದು ನಿಂತರು.

೩೬. ಚಂದ್ರನನ್ನು ಸುತ್ತುವರಿದು ನಿಂದ ಆ ಸ್ತ್ರೀಯರು ಚಂದ್ರನನ್ನೂ ಅವನ ಎಡತೊಡೆಯ ಮೇಲೆ ಕುಳಿತು ಅವನೊಡನೆ ಸರಸ ಸಲ್ಲಾಪಗಳನ್ನೆಸಗುತ್ತಿರುವ ರೋಹಿಣಿಯನ್ನೂ ನೋಡಿದರು.

೩೭. ಆ ರೀತಿ ಚಂದ್ರನೊಡನೆ ಕ್ರೀಡಿಸುತ್ತಿರುವ ಉತ್ತಮಸ್ತ್ರೀಯಾದ ರೋಹಿಣಿಯನ್ನು ನೋಡಿ ಆ ಸ್ತ್ರೀಯರೆಲ್ಲರೂ, ಹವಿಸ್ಸಿನಿಂದ ಅಗ್ನಿಯು ಜ್ವಲಿಸುವಂತೆ, ಮಹಾಕೋಪದಿಂದ ಉರಿಯತೊಡಗಿದರು.

ತತೋ ಮಘಾ ತ್ರಿಪೂರ್ವಾಶ್ಚ ಭರಣೀ ಕೃತ್ತಿಕಾ ತಥಾ ।
ಚಂದ್ರಾಂಕಸ್ಥಾಂ ಮಹಾಭಾಗಾಂ ರೋಹಿಣೀಂ ಜಗೃಹುರ್ಹಠಾತ್‌॥೩೮॥

ಊಚುಶ್ಚಾತೀವಕುಪಿತಾಃ ಪರುಷಂ ರೋಹಿಣೀಂ ಪ್ರತಿ ।
ಜೀವಂತ್ಯಾಂ ತ್ವಯಿ ದುಃಪ್ರಜ್ಞೇ ನಾಸ್ಮಾನಿಂದುಸ್ತು ಭಾವಭಾಕ್ ।
ಸಮುಪೈಷ್ಯತಿ ಕಸ್ಮಿಂಶ್ಚಿತ್ಸಮಯೇ ಸುರತೋತ್ಸುಕಃ ॥ ೩೯ ॥

ಬಹ್ವೀನಾಂ ಕ್ಷೇಮವೃದ್ಧ್ಯರ್ಥಂ ತ್ವಾಂ ಹನಿಷ್ಯಾಮ ದುರ್ಮತಿಂ ।
ನ ತ್ವಾಂ ಹತ್ವಾ ಭವೇತ್ಪಾಪಮಸ್ಮಾಕಮಪಿ ಕಿಂಚನ। ॥ ೪೦ ॥

ಪ್ರಜನಘ್ನೀಂ ಬಹುಸ್ತ್ರೀಣಾಮನೃತೌ ಪಾಪಕಾರಿಣೀಂ ॥ ೪೧ ॥

ಯಸ್ಮಿನ್ನರ್ಥೇ ಪುರಾ ಬ್ರಹ್ಮಾ ವ್ಯಾಜಹಾರ ಸುತಂ ಪ್ರತಿ ।
ನೀತಿಶಾಸ್ತ್ರೋಪದೇಶಾಯ ತನ್ನಃ ಸಂಶ್ರುತಮಸ್ತಿ ವೈ ॥ ೪೨ ॥

---

೩೮. ಆಮೇಲೆ ಮಘೆ, ಪೂರ್ವಫಲ್ಗುನೀ, ಪೂರ್ವಾಷಾಢೆ, ಪೂರ್ವಾಭಾದ್ರೇ, ಭರಣೀ, ಕೃತ್ತಿಕಾ ಇವರೆಲ್ಲರೂ ಸೇರಿ ಚಂದ್ರನ ತೊಡೆಯಲ್ಲಿ ಕುಳಿತಿದ್ದ ರೋಹಿಣಿಯನ್ನು ಬಲಾತ್ಕಾರದಿಂದ ಹಿಡಿದೆಳೆದರು.

೩೯. ಆ ಸ್ತ್ರೀಯರು ತುಂಬ ಕೋಪಗೊಂಡು ರೋಹಿಣಿಯನ್ನು ಕುರಿತು:—ಎಲೈ ದುಷ್ಟಬುದ್ಧಿಯವಳೇ, ನೀನು ಬದುಕಿರುವವರೆಗೆ ಚಂದ್ರನು ನಮ್ಮೊಡನೆ ಅನುರಾಗದಿಂದ ಕಾಮಸುಖವನ್ನು ಬಯಸುವುದಿಲ್ಲ.

೪೦-೪೧. ಅನೇಕ ಸ್ತ್ರೀಯರಿಗೆ ಸುಖವಾಗುವುದಕ್ಕಾಗಿ ದುರ್ಬುದಿಯುಳ್ಳ ನಿನ್ನನ್ನು ಕೊಲ್ಲುವೆವು. ನಿನ್ನನ್ನು ಕೊಂದರೆ ನಮಗೆ ಸ್ವಲ್ಪವೂ ಪಾಪವು ಬರುವುದಿಲ್ಲ. ಏಕೆಂದರೆ, ನೀನು ನಮ್ಮೆಲ್ಲರ ಕಾಮಸುಖವನ್ನು ಋತುಕಾಲವಲ್ಲದ ಇತರ ಕಾಲದಲ್ಲಿಯೂ ನಾಶಮಾಡಿರುವೆ. ಆದುದರಿಂದ ನೀನು ಮಹಾಪಾಪಿಯು.

೪೨. ಈ ವಿಷಯದಲ್ಲಿ ಬ್ರಹ್ಮನು ಪೂರ್ವದಲ್ಲಿ ತನ್ನ ಮಗನಾದ ದಕ್ಷನಿಗೆ ನೀತಿಯನ್ನು ಉಪದೇಶಿಸಿರುವನು. ಅದನ್ನು ನಾವು ಕೇಳಿರುವೆವು.

ಏಕಸ್ಯ ಯತ್ರ ನಿಧನೇ ಪ್ರವೃತ್ತೇ ದುಷ್ಟಕಾರಿಣಃ ।
ಬಹೂನಾಂ ಭವತಿ ಕ್ಷೇಮಂ ತಸ್ಯ ಪುಣ್ಯಪ್ರದೋ ವಧಃ ॥ ೪೩ ॥

॥ ಮಾರ್ಕಂಡೇಯ ಉವಾಚ ॥

ತಾಸಾಂ ತಾದೃಗಭಿಪ್ರಾಯಂ ಬುದ್ಧ್ವಾ ದೃಷ್ಟ್ವಾ ಚ ಕರ್ಮ ಚ ।
ಭೀತಾಂ ಚ ರೋಹಿಣೀಂ ದೃಷ್ಟ್ವಾ ಪ್ರಿಯಾಮತಿಮನೋರಮಾಂ ॥
ಆತ್ಮಾನಂ ಚಾಪರಾಧಂ ಚ ತದಸಂಭೋಗಜಂ ಮುಹುಃ
ವಿಚಿಂತ್ಯ ರೋಹಿಣೀಂ ಭೀರುಂ ತಾಸಾಂ ಹಸ್ತಾದಮೋಚಯತ್ ॥೪೪॥
ಮೋಚಯಿತ್ವಾ ಚ ಬಾಹುಭ್ಯಾಂ ಸಂಪರಿಷ್ವಜ್ಯ ರೋಹಿಣೀಂ ।
ವಾರಯಾಮಾಸ ತಾಃ ಸರ್ವಾಃ ಕೃತ್ತಿಕಾದ್ಯಾಃ ಸ ಭಾಮಿನೀಃ ॥ ೪೫ ॥
ತದೇಂದುಂ ವಾರಯಂತ್ಯಸ್ತಾಃ ಕೃತ್ತಿಕಾದ್ಯಾ ಮಹಾಂತಕಾಃ ।
ಸಾಮ್ಯಮೂಚುರ್ಮನಸ್ವಿನ್ಯಸ್ತಾಂ ವೀಕ್ಷಂತ್ಯೋಽಥ ರೋಹಿಣೀಂ ॥೪೬॥

---

೪೩. ಅದೇನೆಂದರೆ—ಕೆಟ್ಟಕಾರ್ಯವನ್ನು ಮಾಡುವ ಒಬ್ಬನು ಮೃತನಾದರೆ ಅನೇಕ ಜನಗಳಿಗೆ ಕ್ಷೇಮವುಂಟಾಗುವ ಸಂದರ್ಭದಲ್ಲಿ ಅಂತಹವನನ್ನು ಕೊಲ್ಲುವುದು ಪುಣ್ಯಕಾರ್ಯವೇ ಹೊರತು ಪಾಪ ಕೆಲಸವಲ್ಲ.

೪೪. ಮಾರ್ಕಂಡೇಯ ಮುನಿಯು ಹೇಳಿದನು:—ಆಗ ಚಂದ್ರನು ಆ ಸ್ತ್ರೀಯರ ಈ ವಿಧವಾದ ದುಷ್ಟ ಅಭಿಪ್ರಾಯವನ್ನೂ, ಅವರು ಮಾಡಲು ಪಕ್ರಮಿಸಿದ ಕಾರ್ಯವನ್ನೂ ನೋಡಿ, ಅವರೊಡನೆ ತಾನು ಸಂಭೋಗ ಮಾಡದೆ ಅಪರಾಧವನ್ನು ಮಾಡಿರುವೆನೆಂದು ಯೋಚಿಸಿ ತಿಳಿದು, ಅಲ್ಲಿ ಭಯದಿಂದ ಹೆದರಿ ಇರುವ ತನ್ನ ಪ್ರಿಯೆಯಾದ ರೋಹಿಣಿಯನ್ನು ಆ ಸ್ತ್ರೀಯರ ಕೈಯಿಂದ ಬಿಡಿಸಿದನು.

೪೫. ರೋಹಿಣಿಯನ್ನು ಬಿಡಿಸಿ, ಅವಳನ್ನು ತನ್ನ ಬಾಹುಗಳಿಂದ ಆಲಿಂಗಿಸಿಕೊಂಡು, ಕೃತ್ತಿಕೆಯೇ ಮೊದಲಾದ ಆ ಸ್ತ್ರೀಯರನ್ನು, ರೋಹಿಣಿಯನ್ನು ಹಿಂಸಿಸದಂತೆ ತಡೆದನು.

೪೬. ಆಗ ತಮ್ಮನ್ನು ತಡೆಯುತ್ತಿರುವ ಚಂದ್ರನನ್ನು ಕುರಿತು ಕೃತ್ತಿಕೆ ಮೊದಲುಗೊಂಡು ಮಘೆಯವರೆಗಿರುವ ಮಾನವತಿಯರಾದ ಆ ಸ್ತ್ರೀಯರೆಲ್ಲರೂ ರೋಹಿಣಿಯನ್ನು ನೋಡುತ್ತಾ ಹೀಗೆ ಹೇಳಿದರು.

ನ ತೇ ತ್ರಪಾ ವಾ ಭೀತಿರ್ವಾ ಪಾಪತೋಽಸ್ಮಾನ್ನಿರಂಸ್ಯತಃ ।
ಸಂಜಾಯತೇ ನಿಶಾನಾಥ ಪ್ರಾಕೃತಸ್ಯೇವ ವರ್ತತಃ ॥ ೪೭ ॥

ಕಥಮುಸ್ಮಾನ್ನಿರಾಕೃತ್ಯ ಚಾರಿತ್ರವ್ರತಧಾರಿಣೀಃ ।
ಸದಾ ಭಕ್ತಿಮತೀರೇಕಾಂ ಮೂಢವತ್ತ್ವಂ ನಿಷೇವಸೇ ॥ ೪೮ ॥

ಕಂ ತೇ ನಾವಗತೋ ಧರ್ಮೋ ವೇದಮೂಲಃ ಶ್ರುತಃ ಪುರಾ ।
ಯದ್ಧರ್ಮಹೀನಂ ಕುರುಷೇ ಕರ್ಮ ಸದ್ಭಿರ್ವಿಗರ್ಹಿತಂ ॥ ೪೯ ॥

ಧರ್ಮಶಾಸ್ತ್ರಾರ್ಥಗಂ ಕರ್ಮ ಚರಂತೀನಾಂ ಯಥೋಚಿತಂ ।
ಕಥಮುದ್ವಾಹಿತಾನಾಂ ತ್ವಂ ಮುಖಮಾತ್ರಂ ನ ವೀಕ್ಷಸೇ ॥ ೫೦ ॥

ಗದತೋ ಯಚ್ಛ್ರುತಂ ಪೂರ್ವಂ ನಾರದಾಯ ಪಿತುರ್ಮುಖಾತ್ ।
ದಕ್ಷಸ್ಯ ಧರ್ಮಶಾಸ್ತ್ರಾರ್ಥಂ ತಚ್ಛೃಣುಷ್ವ ನಿಶಾಪತೇ ॥ ೫೧ ॥

---

೪೭. ಎಲೈ ಚಂದ್ರನೇ, ನಿನಗೆ ನಮ್ಮನ್ನು ತಡೆಯಲು ನಾಚಿಕೆಯಾಗಲೀ, ಪಾಪಭೀತಿಯಾಗಲೀ ಇರುವುದಿಲ್ಲ. ನಿನ್ನ ನಡತೆಯು ಅನಾಗರಿಕನ ನಡತೆಯಂತೆ ಇರುವುದು.

೪೮. ಶೀಲವಂತೆಯರೂ, ಪತಿವ್ರತೆಯರೂ, ನಿನ್ನಲ್ಲಿ ಅನುರಾಗವುಳ್ಳವರೂ ಆದ ನಮ್ಮೆಲ್ಲರನ್ನೂ ನಿರಾಕರಿಸಿ ಆ ರೋಹಿಣಿಯೊಬ್ಬಳನ್ನೇ ಮೂಢನಂತೆ ಹೇಗೆ ಸೇವಿಸುವೆ?

೪೯. ವೇದಮೂಲವಾದ ಧರ್ಮವು ನಿನಗೆ ಗೊತ್ತಿಲ್ಲವೇ? ಅಥವಾ ಹಿಂದೆ ಕೇಳಿಯೇ ಇಲ್ಲವೋ? ಇಲ್ಲದಿದ್ದರೆ ಸತ್ಪುರುಷರು ನಿಂದಿಸುವ ಇಂತಹ ಅಧರ್ಮವಾದ ಕಾರ್ಯವನ್ನು ಏಕೆ ಮಾಡುತ್ತಲಿರುವೆ?

೫೦. ಧರ್ಮಶಾಸ್ತ್ರವಿಹಿತವಾದ ಕರ್ಮಗಳನ್ನು ಯೋಗ್ಯರೀತಿಯಿಂದ ಆಚರಿಸುತ್ತಿರುವ ಮತ್ತು ನಿನ್ನನ್ನು ವಿವಾಹವಾಗಿರುವ ನಮ್ಮಗಳ ಮುಖವನ್ನು ಕೂಡ ನೀನು ಏತಕ್ಕೆ ನೋಡುವುದಿಲ್ಲ?

೫೧. ನಾರದಮುನಿಗೆ ನಮ್ಮ ತಂದೆಯಾದ ದಕ್ಷಬ್ರಹ್ಮನು ಯಾವ ಧರ್ಮಶಾಸ್ತ್ರವನ್ನು ಹೇಳಿರುವನೋ ಅದನ್ನು ನಾವು ಕೇಳಿರುವೆವು. ಎಲೈ ಚಂದ್ರನೇ ಅದನ್ನು ಕೇಳು.

ಬಹುದಾರಃ ಪುಮಾನ್ಯಸ್ತು ರಾಗಾದೇಕಾಂ ಭಜೇತ್ಸ್ತ್ರಿಯಂ ।
ಸ ಪಾಪಭಾಕ್ಸ್ತ್ರೀಜಿತಶ್ಚ ತಸ್ಯಾಶೌಚಂ ಸನಾತನಂ ॥ ೫೨ ॥

ಯದ್ದುಃಖಂ ಜಾಯತೇ ಸ್ತ್ರೀಣಾಂ ಸ್ವಾನ್ಯಸಂಭೋಗಜಂ ವಿಧೋ ।
ನ ತಸ್ಯ ಸದೃಶಂ ದುಃಖಂ ಕಿಂಚಿದನ್ಯತ್ರ ವಿದ್ಯತೇ ॥ ೫೩ ॥

ಸತೀಮೃತುಮತೀಂ ಜಾಯಾಂ ಯೋ ನೇಯಾತ್ಪುರುಷಾಧಮಃ ।
ಋತುಘಸ್ರೇಷು ಶುದ್ಧೇಷು ಭ್ರೂಣಹಾ ಸ ಚ ಜಾಯತೇ ॥ ೫೪ ॥

ಭಾರ್ಯಾ ಸ್ಯಾದ್ಯಾವದಾತ್ರೇಯೀ ತಾವತ್ಕಾಲಂ ವಿಬೋಧನಂ ।
ತಸ್ಯಾಸ್ತು ಸಂಗಮೇ ಕಿಂಚಿದ್ವಿಹಿತಂ ಚಾಪಿ ನಾಚರೇತ್ ॥ ೫೫ ॥

ಬಹುಭಾರ್ಯಸ್ಯ ಭಾರ್ಯಾಣಾಮೃತುಮೈಥುನನಾಶನಂ ।
ನ ಕಿಂಚಿದ್ವಿದ್ಯತೇ ಕರ್ಮ ಶಾಸ್ತ್ರೇಷ್ವಪಿ ಯದೀರಿತಂ ॥ ೫೬ ॥

---

೫೨. ಯಾವ ಪುರುಷನು ಅನೇಕ ಪತ್ನಿಯರುಳ್ಳವನಾಗಿದ್ದರೂ, ಓರ್ವ ಸ್ತ್ರೀಯಲ್ಲಿ ಮಾತ್ರ ಅನುರಾಗದಿಂದ ವರ್ತಿಸುವನೋ ಅವನು ಪಾಪಿಯು-ಸ್ತ್ರೀವಶನಾದ ಅವನು ಯಾವಾಗಲೂ ಅಶುದ್ಧನು.

೫೩. ಎಲೈ ಚಂದ್ರನೇ, ಸ್ತ್ರೀಯರಿಗೆ ತಮ್ಮ ಪತಿಯಿಂದ ಕಾಮಸುಖವು ಲಭಿಸದಿದ್ದರೆ ಎಂತಹ ದುಃಖವುಂಟಾಗುವುದೋ ಅಂತಹ ದುಃಖವು ಬೇರೊಂದಿಲ್ಲ.

೫೪. ಪತಿವ್ರತೆಯಾದ ಪತ್ನಿಯು, ರಜಸ್ವಲೆಯಾಗಿ ಋತುಸ್ನಾನ ಮಾಡಿದ ದಿನದಲ್ಲಿ ಯಾವ ಪುರುಷನು ಅವಳೊಡನೆ ಸಂಪರ್ಕಮಾಡುವುದಿಲ್ಲವೋ, ಆ ಪುರುಷಾಧಮನು ಭ್ರೂಣಹತ್ಯೆ ಎಂದರೆ ಗರ್ಭವನ್ನು ನಾಶ ಮಾಡಿದ ಪಾಪಕ್ಕೆ ಗುರಿಯಾಗುವನು.

೫೫ ಹೆಂಡತಿಯು ಯಾವಾಗ ರಜಸ್ವಲೆಯಾಗಿ ಋತುಸ್ನಾನ ಮಾಡಿರುವಳೋ ಆಗ, ಮಾಡಬೇಕಾದ ಬೇರೆ ಯಾವ ಕಾರ್ಯವಿದ್ದರೂ ಅದನ್ನು ಬಿಟ್ಟು ಅವಳೊಡನೆ ಸೇರಬೇಕು.

೫೬. ಅನೇಕ ಹೆಂಡರಿರುವ ಪುರುಷನು ತನ್ನ ಪತ್ನಿಯರ ಋತು ಕಾಲದಲ್ಲಿ ಕಾಮಸುಖವನ್ನು ಉಪೇಕ್ಷೆಮಾಡಿ ಬೇರೆ ಕೆಲಸವನ್ನು ಮಾಡ ಬೇಕೆಂದು ಯಾವ ಶಾಸ್ತ್ರದಲ್ಲಿಯೂ ಹೇಳಿಲ್ಲ.

ತೋಷಯೇತ್ಸತತಂ ಭಾರ್ಯಾ ವಿಧಿವತ್ಪಾಣಿಪೀಡಿತಾಃ ।
ತಾಸಾಂ ತುಷ್ಟಾ ತು ಕಲ್ಯಾಣಮಕಲ್ಯಾಣಮತೋಽನ್ಯಥಾ ॥ ೫೭ ॥

ಸಂತುಷ್ಟೋ ಭಾರ್ಯಯಾ ಭರ್ತಾ ಭರ್ತ್ರಾ ಭಾರ್ಯಾ ತಥೈವ ಚ ।
ಯಸ್ಮಿನ್ನೇತತ್ಕುಲೇ ನಿತ್ಯಂ ಕಲ್ಯಾಣಂ ತತ್ರ ವೈ ಧ್ರುವಂ ॥ ೫೮ ॥

ಯಯಾ ವಿರುಧ್ಯತೇ ಸ್ವಾಮೀ ಸೌಭಾಗ್ಯಮದದೃಪ್ತಯಾ ।
ಸಪತ್ನೀಸಂಗಮಂ ಕರ್ತುಂ ಸಾ ಸ್ಯಾದ್ವೇಶ್ಯಾ ಭವಾಂತರೇ ॥ ೫೯ ॥

ಇಹಾಪಿ ಲೋಕೇಽವಾಚ್ಯತ್ವಮಧರ್ಮಂ ಚಾಪಿ ವಿಂದತಿ ।
ನ ಪಿತುಶ್ಚ ಕುಲಂ ಸ್ವಾಮಿಕುಲಂ ತಸ್ಯಾಃ ಪ್ರಮೋದತೇ ॥ ೬೦ ॥

ವಿರುಧ್ಯಮಾನೇ ಪತ್ಯೌ ಯತ್ಸಪತ್ನ್ಯಾ ವಾ ಪ್ರವರ್ತತೇ ।
ಅತೀವ ದುಃಖಂ ಭವತಿ ತದಕಲ್ಯಾಣಕೃತ್ತಯೋಃ ॥ ೬೧ ॥

---

೫೭. ಶಾಸ್ತ್ರವಿಧಿಯಂತೆ ಪಾಣಿಗ್ರಹಣ ಮಾಡಿಕೊಂಡ ಪತ್ನಿಯರನ್ನು ಯಾವಾಗಲೂ ಸಂತೋಷಗೊಳಿಸಬೇಕು. ಅವರು ಸಂತೋಷಗೊಂಡರೆ ಒಳ್ಳೆಯದಾಗುವುದು. ಇಲ್ಲದಿದ್ದರೆ ಕೆಡುಕಾಗುವುದು.

೫೮. ಗಂಡನಿಂದ ಹೆಂಡತಿಯೂ, ಹೆಂಡತಿಯಿಂದ ಗಂಡನೂ ಪರಸ್ಪರವಾಗಿ ಯಾವ ಮನೆಯಲ್ಲಿ ಸಂತೋಷಗೊಂಡಿರುವರೋ ಆ ಮನೆಯಲ್ಲಿ ನಿತ್ಯವೂ ಮಂಗಳವು ನೆಲಸಿರುವುದು.

೫೯. ಸೌಂದರ್ಯಮದದಿಂದ ಕೊಬ್ಬಿರುವ ಯಾವ ಸ್ತ್ರೀಯು, ತನ್ನ ಗಂಡನು ಮಿಕ್ಕ ಹೆಂಡರಲ್ಲಿ ಸೇರದಿರುವಂತೆ ಮಾಡುವಳೋ, ಅವಳು ಮುಂದಿನ ಜನ್ಮದಲ್ಲಿ ಸೂಳೆಯಾಗಿ ಜನಿಸುವಳು.

೬೦. ಅಂತಹ ಸ್ತ್ರೀಯು ಈ ಜನ್ಮದಲ್ಲಿಯೂ ಅಪವಾದವನ್ನೂ, ಪಾಪವನ್ನೂ ಪಡೆಯುವಳು. ಅಂಥವಳಿಂದ ತನ್ನ ತಂದೆಯ ವಂಶವಾಗಲಿ, ಪತಿಯ ವಂಶವಾಗಲೀ, ಸಂತೋಷಗೊಳ್ಳುವುದಿಲ್ಲ.

೬೧. ಪತಿಯು ಮಿಕ್ಕ ಹೆಂಡತಿಯರೊಡನೆ ಸೇರದೆ ವಿರೋಧವಾಗಿರುವಾಗ, ಇನ್ನೊಬ್ಬಳು ಅವನೊಡನೆ ಸೇರಿದರೆ, ಆ ದಂಪತಿಯರಿಬ್ಬರಿಗೂ ಅಮಂಗಳವಾಗುವುದು ಮತ್ತು ದುಃಖವು ಸಂಭವಿಸುವುದು—ಎಂದು ನುಡಿದರು.

ಇತ್ಯೇವಂ ಭಾಷವಾಣಾಸು ತಾಸು ಚಾತೀವ ನಿಷ್ಠುರಂ ।
ಚುಕೋಪ ಚಂದ್ರಮಾ ದೃಷ್ಟ್ವಾ ಮಲಿನಂ ರೋಹಿಣೀಮುಖಂ ॥೬೨॥
ರೋಹಿಣೀ ಚ ತದಾ ತಾಸಾಮವಲೋಕ್ಯಾಗ್ರತಾಂ ಮುಹುಃ ।
ನ ಕಿಂಚಿತ್ಸಾಪಿ ಪ್ರೋವಾಚ ಭಯಶೋಕತ್ರಪಾಕುಲಾ ॥ ೬೩ ॥
ಅಥಾಪಿ ಕುಪಿತಶ್ಚಂದ್ರಸ್ತಾಃ ಶಶಾಪ ತದಾ ಸ್ತ್ರಿಯಃ ।
ಯಸ್ಮಾನ್ಮಮ ಪುರಶ್ಚೋಗ್ರಾಸ್ತೀಕ್ಷ್ಣಾ ವಾಚಃ ಸಮೀರಿತಾಃ ॥ ೬೪ ॥
ಭವತೀಭಿಶ್ಚ ತಿಸೃಭಿರ್ಲೋಕೇಽಸ್ಮಿನ್ಕೃತ್ತಿಕಾದಿಭಿಃ ।
ಉಗ್ರಾ ತೀಕ್ಷ್ಣಾ ಇತಿ ಖ್ಯಾತಿಃ ಪ್ರಾಪ್ತವ್ಯಾ ತ್ರಿದಶೇಷ್ವಪಿ ॥ ೬೫ ॥
ತಸ್ಮಾದೇವಂ ವಿಧಾನೇನ ನವೈತಾಃ ಕೃತ್ತಿಕಾದಯಃ ।
ಯಾತ್ರಾಯಾಂ ನೋಪಯುಕ್ತಾ ಹಿ ಭವಿಷ್ಯಧ್ವಂ ದಿನೇ ದಿನೇ ॥೬೬॥

---

೬೨. ಮಾರ್ಕಂಡೇಯ ಮುನಿಯು ಹೇಳಿದನು:—ಹೀಗೆ ಆ ಸ್ತ್ರೀಯರು ಅತಿ ಕ್ರೂರವಾದ ಮಾತುಗಳನ್ನಾಡಲು, ಆದರಿಂದ ರೋಹಿಣಿಯು ಭಯ ಗೊಂಡಳು. ಚಂದ್ರನು ಅವಳ ಕಳೆಗುಂದಿದ ಮುಖವನ್ನು ನೋಡಿ ಬಹಳ ವಾಗಿ ಕೋಪಗೊಂಡನು.

೬೩. ರೋಹಿಣಿಯೂ ಸಹ ಆಗ ಆ ಕೃತ್ತಿಕೆ ಮೊದಲಾದ ಸ್ತ್ರೀಯರ ಕ್ರೂರತೆಯನ್ನು ನೋಡಿ, ಭಯ ದುಃಖ ಲಜ್ಜೆಗಳಿಂದ ಕೂಡಿದವಳಾಗಿ ಏನನ್ನೂ ಹೇಳಲಾರದವಳಾದಳು.

೬೪. ಬಳಿಕ ಚಂದ್ರನು ಕೋಪಗೊಂಡು ಆ ಸ್ತ್ರೀಯರನ್ನು ಹೀಗೆ ಶಪಿಸಿದನು:—ಎಲೈ ಸ್ತ್ರೀಯರೇ, ನನ್ನೆದುರಿಗೇ ನೀವು ಅತಿ ಕ್ರೂರವೂ, ಕಠಿಣವೂ ಆದ ಮಾತುಗಳನ್ನಾಡಿರುವಿರಿ.

೬೫. ಆದುದರಿಂದ ಕೃತ್ತಿಕೆಯೇ ಮೊದಲಾದ ನೀವು ಮೂವರು ಸ್ತ್ರೀಯರೂ ಭೂಲೋಕದಲ್ಲಿಯೂ, ಸ್ವರ್ಗದಲ್ಲಿಯೂ ಉಗ್ರಾ, ತೀಕ್ಷ್ಣಾ ಎಂಬ ಕೆಟ್ಟ ಹೆಸರುಗಳನ್ನು ಪಡೆಯುವಿರಿ.

೬೬. ಉಗ್ರಾ, ತೀಕ್ಷ್ಣಾ ಎಂಬ ಹೆಸರಿಗನುಸಾರವಾಗಿ ಕೃತ್ತಿಕೆ ಮೊದಲಾದ ನೀವು ಒಂಭತ್ತು ಮಂದಿಯೂ ಪ್ರಯಾಣಕ್ಕೆ ಉಪಯೋಗವಿಲ್ಲ ದಿರುವರಾಗಿರಿ.

ಯುಷ್ಮಾನ್ಪಶ್ಯಂತಿ ದೇವಾದ್ಯಾ ಮನುಷ್ಯಾದ್ಯಾಶ್ಚ ಯೇ ಕ್ಷಿತೌ ।
ಯಾತ್ರಾಯಾಂ ತೇನ ದೋಷೇಣ ತೇಷಾಂ ಯಾತ್ರಾ ನ ಚೇಷ್ಟದಾ ೬೭

ಅಥ ಸರ್ವಾಸ್ತದಾ ಶಾಪಂ ತಸ್ಯ ಶ್ರುತ್ವಾಽತಿದಾರುಣಂ ।
ಚಂದ್ರಸ್ಯ ಹೃದಯಂ ಜ್ಞಾತ್ವಾ ಶಾಪಾಚ್ಚಾತೀವನಿಷ್ಠುರಂ
ಜಗ್ಮುಃ ಸರ್ವಾಸ್ತದಾ ದಕ್ಷಭವನಂ ಪ್ರತ್ಯಮರ್ಷಿತಾಃ ॥ ೬೮ ॥

ಊಚುಶ್ಚ ದಕ್ಷಂ ಪಿತರಮಶ್ವಿನ್ಯಾದ್ಯಾಃ ಸಗದ್ಗದಂ ॥ ೬೯ ॥

ಸೋಮೋ ವಸತಿ ನಾಸ್ಮಾಸು ರೋಹಿಣೀಂ ಭಜತೇ ಸದಾ ।
ಸೇವಮಾನಾ ನ ಭಜತೇ ಸೋಽಸ್ಮಾನ್ಪರವಧೂರಿವ ॥ ೭೦ ॥

ನಾವಸ್ಥಾನೇ ನಾವಸಾನೇ ಭೋಜನೇ ಶ್ರವಣೇ ತಥಾ ।
ವಿನೇಂದೂ ರೋಹಿಣೀಂ ಶಾಂತಿಂ ಲಭತೇ ನ ಹಿ ಕಾಂಚನ ॥ ೭೧ ॥

---

೬೭. ದೇವತೆಗಳು ಮತ್ತು ಮನುಷ್ಯರು ಮೊದಲಾದವರು ಪ್ರಯಾಣ ಕಾಲದಲ್ಲಿ ನಿಮ್ಮನ್ನು ನೋಡಿದುದೇ ಆದರೆ ಆ ದೋಷದಿಂದ ಅವರ ಪ್ರಯಾಣವು ಫಲಕಾರಿಯಾಗುವುದಿಲ್ಲ.

೬೮. ಕೃತ್ತಿಕೆಯೇ ಮೊದಲಾದ ಸ್ತ್ರೀಯರು ಕ್ರೂರವಾದ ಆ ಶಾಪವನ್ನು ಕೇಳಿ, ಅದರಿಂದ ಆ ಚಂದ್ರನ ಮನಸ್ಸು ಅತಿಕಠಿಣವೆಂದು ತಿಳಿದು, ತುಂಬ ಕೋಪಗೊಂಡು, ತಮ್ಮ ತಂದೆಯಾದ ದಕ್ಷಬ್ರಹ್ಮನ ಮನೆಗೆ ಹೋದರು.

೬೯. ಅಶ್ವಿನಿಯೇ ಮೊದಲಾದವರು ಅಲ್ಲಿ ತಮ್ಮ ತಂದೆಯಾದ ದಕ್ಷನನ್ನು ಕುರಿತು ದುಃಖದಿಂದ ಅಳುತ್ತಾ ಹೀಗೆ ಹೇಳಿದರು.

೭೦. ಚಂದ್ರನು ನಮ್ಮಲ್ಲಿ ಅನುರಕ್ತನಾಗಿಲ್ಲ; ಯಾವಾಗಲೂ ರೋಹಿಣಿಯಲ್ಲಿಯೇ, ಆಸಕ್ತನಾಗಿರುವನು. ನಾವೆಷ್ಟು ವಿಧವಾಗಿ ಅವನನ್ನು ಸೇವಿಸಿ ಉಪಚರಿಸಿದರೂ ಪರಸ್ತ್ರೀಯರಂತೆ ನಮ್ಮಲ್ಲಿ ಆ ಚಂದ್ರನು ಸೇರುವುದೇ ಇಲ್ಲ.

೭೧. ಕುಳಿತಿರುವಾಗಲೂ, ನಿಂತಿರುವಾಗಲೂ, ಭೋಜನಸಮಯದಲ್ಲಿಯೂ, ಸಂಗೀತಶ್ರವಣಕಾಲದಲ್ಲಿಯೂ ರೋಹಿಣಿಯು ಸಮೀಪದಲ್ಲಿಲ್ಲದಿದ್ದರೆ ಆ ಚಂದ್ರನಿಗೆ ಮನಸ್ಸಮಾಧಾನವೇ ಆಗುವುದಿಲ್ಲ.

ರೋಹಿಣ್ಯಾ ವಸತಸ್ತಸ್ಯ ಸಮೀಪಂ ವೀಕ್ಷ್ಯತೇ ಸುತಾಃ ।
ಯಾಂತೀಃ ಸೋಽನ್ಯತ್ರ ನಯನಮಾಧಾಯ ನ ಹಿ ವೀಕ್ಷತೇ ॥ ೭೨ ॥

ಮಾಸ್ತ್ವನ್ಯಃ ಸ್ವಾಮಿಸದ್ಭಾವೋ ಮುಖಮಾತ್ರಂ ನ ವೀಕ್ಷತೇ ।
ಅಸ್ಮಿನ್ವಸ್ತುನಿ ಯತ್ಕಾರ್ಯಂ ತದಸ್ಮಾಭಿರ್ನಿಗದ್ಯತಾಂ ॥ ೭೩ ॥

ಅಸ್ಮಾಭಿರೇತತ್ಸಮಯೇಽಪ್ಯತಿರುದ್ಧಶ್ಚ ಚಂದ್ರಮಾಃ ।
ಸ ತತ್ಕೃತೇ ತತಶ್ಚಾಸ್ಮಚ್ಛಾಪಂ ತೀವ್ರಂ ತದಾಽಕರೋತ್ ॥ ೭೪ ॥

ದಾರುಣಾಶ್ಚಾತಿತೀಕ್ಷ್ಣಾಶ್ಚ ಲೋಕೇಽವಾಚ್ಯತ್ವಮಾಪ್ಯ ಚ ।
ಅಯಾತ್ರಿಕಾ ಭವಿಷ್ಯಧ್ವಂ ಯೂಯಮಿತ್ಯುಕ್ತವಾನ್ಹಿಧುಃ ॥ ೭೫ ॥

॥ ಮಾರ್ಕಂಡೇಯ ಉವಾಚ ॥

ಶ್ರುತ್ವಾ ವಾಕ್ಯಂ ಸ ಪುತ್ರೀಣಾಂ ತಾಭಿಃ ಸಾರ್ಧಂ ಪ್ರಜಾಪತಿಃ ।
ಜಗಾಮ ಯತ್ರ ಸೋಮೋಽಭೂದ್ರೋಹಿಣ್ಯಾ ಸಹಿತಸ್ತದಾ ॥ ೭೬ ॥

---

೭೨. ರೋಹಿಣಿಯೊಡನೆ ಅವನಿರುವಾಗ, ನಿನ್ನ ಮಕ್ಕಳಾದ ನಾವು ಸಮೀಪದಲ್ಲಿ ಹೋಗುತ್ತಿದ್ದರೆ, ಆ ಚಂದ್ರನು ತನ್ನ ದೃಷ್ಟಿಯನ್ನು ಬೇರೆ ಕಡೆಗೆ ತಿರುಗಿಸಿ, ನಮ್ಮನ್ನು ನೋಡುವುದೇ ಇಲ್ಲ.

೭೩. ನಮಗೆ ಪತಿಯಾದವನು ನಮ್ಮ ವಿಷಯದಲ್ಲಿ ಇಟ್ಟಿರಬೇಕಾದ ಅನುರಾಗವಂತಿರಲಿ; ಕೇವಲ ನಮ್ಮ ಮುಖವನ್ನೂ ಸಹ ನೋಡುತ್ತಿಲ್ಲ. ಆದುದರಿಂದ ಈ ವಿಷಯದಲ್ಲಿ ನಾವುಗಳು ಏನು ಮಾಡಬೇಕೆಂಬುದನ್ನು ತಿಳಿಸುವವನಾಗು.

೭೪. ಇಂತಹ ಸಮಯದಲ್ಲಿ ನಾವು ಆ ಚಂದ್ರನಿಗೆ ವಿರೋಧವಾಗಿ ವರ್ತಿಸಿದೆವು. ಅದಕ್ಕಾಗಿ ಅವನು ನಮಗೆ ಘೋರವಾದ ಶಾಪವನ್ನು ಕೊಟ್ಟಿರುವನು.

೭೫. ನೀವುಗಳು ಕ್ರೂರರೂ, ತೀಕ್ಷ್ಣರೂ ಎಂಬ ಅಪವಾದವನ್ನು ಹೊಂದಿ ಲೋಕದಲ್ಲಿ ಪ್ರಯಾಣಕ್ಕೆ ಅಶುಭರಾಗಿರೆಂದು ಚಂದ್ರನು ನಮಗೆ ಶಾಪವನ್ನು ಕೊಟ್ಟಿರುವನು.

೭೬. ಮಾರ್ಕಂಡೇಯ ಮುನಿಯು ಹೇಳಿದನು:—ಹೀಗೆ ಪುತ್ರಿಯರು ಹೇಳಿದ ಮಾತನ್ನು ಕೇಳಿ ದಕ್ಷಬ್ರಹ್ಮನು, ಅವರೊಡನೆ ಕೂಡಿ, ರೋಹಿಣೀ ಸಮೇತನಾಗಿ ಚಂದ್ರನಿರುವಲ್ಲಿಗೆ ಹೊರಟುಬಂದನು.

ದೂರಾದೇವ ವಿಧುರ್ದೃಷ್ಟ್ವಾ ದಕ್ಷಮಾಯಾಂತಮಾಸನಾತ್ ।
ಉತ್ತಸ್ಥಾವಂತಿಕೇ ಪ್ರಾಪ್ಯ ವವಂದೇ ಚ ಮಹಾಮುನಿಂ ॥ ೭೭ ॥

ಅಥ ದಕ್ಷಸ್ತದೋವಾಚ ಕೃತಾಸನಪರಿಗ್ರಹಃ ।
ಸಾಮುಪೂರ್ವಂ ಚಂದ್ರಮಸಂ ಕೃತಸಂವಂದನಂ ತಥಾ ॥ ೭೮ ॥

॥ ದಕ್ಷ ಉವಾಚ ॥

ಸಮಂ ವರ್ತಸ್ವ ಭಾರ್ಯಾಸು ವೈಷಮ್ಯಂ ತ್ವಂ ಪರಿತ್ಯಜ ।
ವೈಷಮ್ಯೇ ಬಹವೋ ದೋಷಾ ಬ್ರಹ್ಮಣಾ ಪರಿಕೀರ್ತಿತಾಃ ॥ ೭೯ ॥

ರತಿಪುತ್ರಫಲಾ ದಾರಾಸ್ತಾಸು ಕಾಮಾನುಬಂಧನಾತ್ ।
ಕಾಮಾನುಬಂಧಃ ಸಂಸರ್ಗಾತ್ಸಂಸರ್ಗಃ ಸಂಗಮಾದ್ಭವೇತ್ ॥ ೮೦ ॥

ಸಂಗಮಶ್ಚಾಪ್ಯಭಿಧ್ಯಾನಾದ್ವೀಕ್ಷಣಾದಭಿಜಾಯತೇ ॥ ೮೧ ॥

---

೭೭. ದಕ್ಷಬ್ರಹ್ಮನು ಬರುತ್ತಿರುವುದನ್ನು ದೂರದಿಂದಲೇ ಚಂದ್ರನು ನೋಡಿ ತನ್ನ ಆಸನದಿಂದೆದ್ದು ಅವನ ಸಮೀಪಕ್ಕೆ ಬಂದು, ಆ ಮಹಾ ಮುನಿಯಾದ ದಕ್ಷನಿಗೆ ನಮಸ್ಕಾರಮಾಡಿದನು.

೭೮. ಆಮೇಲೆ ದಕ್ಷಬ್ರಹ್ಮನು ಆಸನದಲ್ಲಿ ಕುಳಿತು, ನಮಸ್ಕಾರಮಾಡಿನಿಂತಿರುವ ಚಂದ್ರನನ್ನು ಕುರಿತು ಮೃದುವಾದ ವಾಕ್ಯದಿಂದ ಹೀಗೆ ಹೇಳಿದನು

೭೯. ದಕ್ಷನು ಹೇಳಿದನು:—ಎಲೈ ಚಂದ್ರನೇ, ಪತ್ನಿಯರೆಲ್ಲರಲ್ಲಿಯೂ ಒಂದೇ ಸಮನಾಗಿ ವರ್ತಿಸು, ಭೇದವನ್ನು ಮಾಡಬೇಡ. ಭೇದವನ್ನು ಮಾಡಿದಲ್ಲಿ ಅನೇಕ ದೋಷಗಳು ಬರುವವೆಂದು ಬ್ರಹ್ಮನು ಹೇಳಿರುವನು.

೮೦-೮೧. ರತಿಸುಖ ಮತ್ತು ಪುತ್ರಪ್ರಾಪ್ತಿಯು ಪತ್ನಿಯರಿಂದ ಆಗತಕ್ಕದು. ಈ ಫಲಗಳು ಅವರಲ್ಲಿ ಕಾಮಕ್ರೀಡೆಯನ್ನೆಸಗುವುದರಿಂದ ಉಂಟಾಗುವುದು. ಆ ಕ್ರೀಡೆಯು ಅವರ ಸಂಗದಿಂದುಂಟಾಗುವುದು; ಆ ಸಂಗವು ಅವರೊಡನೆ ಸೇರುವುದರಿಂದಾಗುವುದು; ಆ ಸೇರುವಿಕೆಯೂ ಅವರಲ್ಲಿ ಅನುರಾಗ ಪೂರ್ವಕವಾಗಿ ಮನಸ್ಸನ್ನಿಡುವುದರಿಂದಲೂ, ನೋಡುವುದರಿಂದಲೂ ಆಗುವುದು.

ತಸ್ಮಾದ್ಭಾರ್ಯಾಸ್ವಭಿಧ್ಯಾನಂ ಕುರು ತ್ವಂ ವೀಕ್ಷಣಾದಿಕಂ ।
ಯದ್ಯೇವಂ ನೈವ ಕುರುಷೇ ಮದ್ವಚೋ ಧರ್ಮಯುಂತ್ರಿತಂ ।
ತದಾ ಲೋಕವಚೋ ದುಷ್ಟಃ ಪಾಪವಾಂಸ್ತ್ವಂ ಭವಿಷ್ಯಸಿ ॥ ೮೨ ॥

॥ ಮಾರ್ಕಂಡೇಯ ಉವಾಚ ॥

ಏತಚ್ಛ್ರುತ್ವಾ ವಚಸ್ತಸ್ಯ ದಕ್ಷಸ್ಯ ಸುಮಹಾತ್ಮನಃ ।
ಏವಮಸ್ತ್ವಿತಿ ಚಂದ್ರೋಽಪಿ ನ್ಯಗದದ್ದಕ್ಷಶಂಕಯಾ ॥ ೮೩ ॥
ಅಥಾನುಮಂತ್ರ್ಯ ತನಯಾಶ್ಚಂದ್ರಂ ಜಾಮಾತರಂ ತಥಾ ।
ಯಯೌ ದಕ್ಷೋ ನಿಜಂ ಸ್ಥಾನಂ ಕೃತಕೃತ್ಯಸ್ತದಾ ಮುನಿಃ ॥ ೮೪ ॥
ಗತೇ ದಕ್ಷೇ ತತಶ್ಚಂದ್ರಸ್ತಾಂ ಸಮಾಸಾದ್ಯ ರೋಹಿಣೀಂ ।
ಜಗ್ರಾಹ ಪೂರ್ವವದ್ಭಾವಂ ತಾಸು ತಸ್ಯಾಂ ಚ ರಾಗತಃ ॥ ೮೫ ॥

---

೮೨. ಅದುವರಿಂದ ಪತ್ನಿಯರೆಲ್ಲರನ್ನೂ ಅನುರಾಗಪೂರ್ವಕವಾಗಿ ನೋಡುತ್ತ ಅವರಲ್ಲಿ ಆಸಕ್ತಿಯನ್ನಿಡು. ಧರ್ಮಯುಕ್ತವಾಗಿರುವ ಈ ನನ್ನ ಮಾತನ್ನು ನಡೆಸದಿದ್ದರೆ, ನೀನು ಲೋಕಾಪವಾದದಿಂದ ದುಷ್ಟನೆಂದು ಅಪ ಯಶಸ್ಸನ್ನು ಹೊಂದಿ ಪಾಪಿಯಾಗುವೆ.

೮೩. ಮಾರ್ಕಂಡೇಯ ಮುನಿಯು ಹೇಳಿದನು:—ಮಹಾತ್ಮನಾದ ದಕ್ಷಬ್ರಹ್ಮನ ಈ ರೀತಿಯಾದ ಮಾತುಗಳನ್ನು ಕೇಳಿ ಚಂದ್ರನು ಆ ದಕ್ಷನ ಭಯದಿಂದ, ಹಾಗೆಯೇ ಮಾಡುವೆನೆಂದು ಹೇಳಿದನು.

೮೪. ಆಮೇಲೆ ದಕ್ಷಮುನಿಯು ತನ್ನ ಹೆಣ್ಣುಮಕ್ಕಳ ಮತ್ತು ಅಳಿಯ ನಾದ ಚಂದ್ರನ ಅನುಮತಿಯನ್ನು ಪಡೆದು, ತನ್ನ ಕೆಲಸವಾಯಿತೆಂದು ತಿಳಿದು ತನ್ನ ಸ್ಥಾನಕ್ಕೆ ಹೊರಟುಹೋದನು.

೮೫. ದಕ್ಷಬ್ರಹ್ಮನು ಹೊರಟುಹೋದಮೇಲೆ ಚಂದ್ರನು ರೋಹಿಣಿ ಯೊಡನೆ ಸೇರಿ ಅವಳಲ್ಲಿಯೇ ಆಸಕ್ತನಾದನು. ಮಿಕ್ಕ ಪತ್ನಿಯರಲ್ಲಿ ಮೊದಲಿ ನಂತೆ ಅನುರಾಗವಿಲ್ಲದವನಾದನು.

ತತ್ರೈವ ರೋಹಿಣೀಂ ಪ್ರಾಪ್ಯ ನ ಕಾಶ್ಚಿದಪಿ ವೀಕ್ಷತೇ ।
ರೋಹಿಣ್ಯಾಮೇವ ವಸತೇ ತತಸ್ತಾಃ ಕುಪಿತಾಃ ಪುನಃ ॥ ೬೬ ॥

ಗತ್ವಾ ತಾಃ ಪಿತರಂ ಪ್ರಾಹುರ್ದೌರ್ಭಾಗ್ಯೋದ್ವಿಗ್ನಮಾನಸಾಃ ।
ಸೋಮೋ ವಸತಿ ನಾಸ್ಮಾಸು ರೋಹಿಣೀಂ ಭಜತೇ ಸದಾ ॥ ೬೭ ॥

ತವಾಪಿ ನಾಕರೋದ್ವಾಕ್ಯಂ ತಸ್ಮಾನ್ನಃ ಶರಣಂ ಭವ ॥ ೬೮ ॥

ಉದ್ವೇಗಕೋಪಸಂಯುಕ್ತ ಉತ್ತಸ್ಥೌ ತತ್ಕ್ಷಣಾನ್ಮುನಿಃ ।
ಜಗಾಮ ಮನಸಾ ಧ್ಯಾಯನ್ಕರ್ತವ್ಯಂ ನಿಕಟಂ ವಿಧೋಃ ॥ ೬೯ ॥

ಉಪಗಮ್ಯ ತದಾ ಪ್ರಾಹ ವಚಶ್ಚಂದ್ರಂ ಪ್ರಜಾಪತಿಃ ।
ಸಮಂ ವರ್ತಸ್ವ ಭಾರ್ಯಾಸು ವೈಷಮ್ಯಂ ತ್ವಂ ಪರಿತ್ಯಜ ॥ ೭೦ ॥

ನ ಚೇದಿದಂ ವಚೋಽಸ್ಮಾಕಂ ಮೌರ್ಖ್ಯಾತ್ತ್ವಂ ನಾವಬುಧ್ಯಸೇ ।
ಧರ್ಮಶಾಸ್ತ್ರಾತಿಗಾಯಾಹಂ ಶಪ್ಸ್ಯೇ ತುಭ್ಯಂ ನಿಶಾಪತೇ ॥ ೭೧ ॥

---

೬೬. ಹೀಗೆ ರೋಹಿಣಿಯಲ್ಲಿಯೇ ಆಸಕ್ತನಾಗಿ ಇತರ ಪತ್ನಿಯರನ್ನು ಕಣ್ಣಿನಿಂದಲೂ ನೋಡದೆ, ಯಾವಾಗಲೂ ರೋಹಿಣಿಯೊಡನೆಯೇ ಇರುತ್ತಿದ್ದನು. ಅದರಿಂದ ಮಿಕ್ಕ ಸ್ತ್ರೀಯರೆಲ್ಲರೂ ಪುನಃ ಕೋಪಗೊಂಡರು.

೬೭-೬೮. ಆಮೇಲೆ ಅವರು ತಮ್ಮ ದುರದೃಷ್ಟದಿಂದ ವ್ಯಥೆಗೊಂಡು ತಮ್ಮ ತಂದೆಯಾದ ದಕ್ಷನ ಬಳಿಗೆ ಹೋಗಿ,—ಓ ತಂದೆಯೇ, ಚಂದ್ರನು ನಮ್ಮೊಡನೆ ಸೇರುವುದಿಲ್ಲ, ಯಾವಾಗಲೂ ರೋಹಿಣಿಯಲ್ಲಿಯೇ ಆಸಕ್ತನಾಗಿರುವನು. ಅವನು ನಿನ್ನ ಮಾತನ್ನೂ ನಡೆಸಲಿಲ್ಲ. ಆದುದರಿಂದ ನೀನೇ ನಮಗೆ ಗತಿ ಎಂದು ಹೇಳಿದರು.

೬೯. ಆ ಮಾತನ್ನು ಕೇಳಿ ದಕ್ಷನು ಕೋಪಸಂತಾಪಗಳಿಂದ ಕೂಡಿ, ಆ ಕೂಡಲೇ ಅಲ್ಲಿಂದೆದ್ದು ಮುಂದೆ ಚಂದ್ರನ ವಿಷಯದಲ್ಲಿ ಏನು ಮಾಡಬೇಕೆಂದು ಯೋಚಿಸುತ್ತಾ ಚಂದ್ರನಿರುವಲ್ಲಿಗೆ ಹೋದನು.

೭೦–೭೧. ಅಲ್ಲಿ ಚಂದ್ರನನ್ನು ಕುರಿತು ಹೀಗೆ ಹೇಳಿದನು:—ಎಲೈ ಚಂದ್ರನೇ, ನಿನ್ನ ಪತ್ನಿಯರೆಲ್ಲರಲ್ಲೂ ಭೇದಭಾವವನ್ನು ಬಿಟ್ಟು ಸಮಭಾವದಿಂದ ವರ್ತಿಸು. ಮೂರ್ಖತನದಿಂದ ಈ ನನ್ನ ಮಾತನ್ನು ಕೇಳದಿದ್ದರೆ, ಧರ್ಮಶಾಸ್ತ್ರವನ್ನು ಮೀರಿ ನಡೆಯುವ ನಿನ್ನನ್ನು ಶಪಿಸುವೆನು.

॥ ಮಾರ್ಕಂಡೇಯ ಉವಾಚ ॥

ತತೋ ದಕ್ಷಭಯಾಚ್ಚಂದ್ರಸ್ತತ್ಕರ್ತುಂ ಪ್ರತಿ ತತ್ಪರಃ ।
ಅಂಗೀಚಕಾರಾತಿಶಯಾತ್ಕಾರ್ಯಮೇವಂ ಮುಹುಸ್ತ್ವಿತಿ ॥ ೯೨ ॥

ಸಮಂ ಪ್ರವರ್ತನಂ ಕರ್ತುಂ ಭಾರ್ಯಾಸ್ವಂಗೀಕೃತೇ ತತಃ ।
ವಿಧುನಾ ಪ್ರಯಯೌ ದಕ್ಷಃ ಸ್ವಸ್ಥಾನಂ ಚಂದ್ರಸಂಮತಃ ॥ ೯೩ ॥

ಗತೇ ದಕ್ಷೇ ನಿಶಾನಾಥೋ ರೋಹಿಣ್ಯಾ ಸಹಿತೋ ಭೃಶಂ ।
ರಮಮಾಣೋ ವಿಸಸ್ಮಾರ ದಕ್ಷಸ್ಯ ವಚನಂ ತು ಸಃ ॥ ೯೪ ॥

ಸೇವಮಾನಾಶ್ಚ ತಾಃ ಸರ್ವಾ ಅಶ್ವಿನ್ಯಾದ್ಯಾ ಮನೋರಮಾಃ ।
ನಾಭಜಚ್ಚಂದ್ರಮಾಸ್ತಾಸು ಅವಜ್ಞಾಮೇವ ಚಾ ಕರೋತ್ ॥ ೯೫ ॥

ಅವಜ್ಞಾತಾಸ್ತು ತಾಃ ಸರ್ವಾಶ್ಚಂದ್ರೇಣ ಪಿತುರಂತಿಕಂ ।
ಗತ್ವೈವಾರ್ತಸ್ವರಾಶ್ಚಾರ್ತಾ ರುದಂತ್ಯಶ್ಚೇದಮಬ್ರುವನ್ ॥ ೯೬ ॥

---

೯೨. ಮಾರ್ಕಂಡೇಯ ಮುನಿಯು ಹೇಳಿದನು:—ಆ ಮೇಲೆ ದಕ್ಷನ ಭಯದಿಂದ ಚಂದ್ರನು ಅವನೆದುರಿನಲ್ಲಿ ಅವನು ಹೇಳಿದಂತೆ ಆವಶ್ಯಕವಾಗಿಯೂ ಮಾಡುವೆನೆಂದು ತಿರುಗಿ ಒಪ್ಪಿಕೊಂಡನು.

೯೩. ಹೀಗೆ ಎಲ್ಲ ಪತ್ನಿಯರಲ್ಲೂ ಸಮನಾಗಿ ವರ್ತಿಸುವೆನೆಂದು ಚಂದ್ರನು ಒಪ್ಪಿಕೊಂಡಮೇಲೆ ದಕ್ಷಬ್ರಹ್ಮನು, ಅವನ ಅನುಮತಿಯನ್ನು ಪಡೆದು ಸ್ವಸ್ಥಾನಕ್ಕೆ ಹೊರಟು ಹೋದನು.

೯೪. ದಕ್ಷನು ಹೊರಟು ಹೋದಮೇಲೆ ಚಂದ್ರನು ಪುನಃ ರೋಹಿಣಿಯೊಡನೆ ಸೇರಿ ಮನಸ್ವಿಯಾಗಿ ವಿಹರಿಸುತ್ತಾ ದಕ್ಷನ ಮಾತನ್ನು ಮರೆತೇ ಬಿಟ್ಟನು.

೯೫. ತನ್ನನ್ನೇ ಸೇವಿಸುತ್ತಲಿರುವ ಆ ಅಶ್ವಿನಿಯೇ ಮೊದಲಾದ ಸುಂದರಿಯರಲ್ಲಿ ಸೇರದೆ, ಅವನು ಅವರನ್ನು ತಿರಸ್ಕಾರವನ್ನೇ ಮಾಡಿದನು.

೯೬. ಆ ಚಂದ್ರನಿಂದ ತಿರಸ್ಕರಿಸಲ್ಪಟ್ಟ ಆ ಸ್ತ್ರೀಯರೆಲ್ಲರೂ ತಮ್ಮ ತಂದೆಯ ಬಳಿಗೆ ಹೋಗಿ ದುಃಖದಿಂದ ದೀನವಾದ ಸ್ವರವುಳ್ಳವರಾಗಿ ಅಳುತ್ತಾ ಆವನನ್ನು ಕುರಿತು ಹೀಗೆ ಹೇಳಿದರು.

ನಾಕರೋದ್ವಚನಂ ಸೋಮಸ್ತವಾಪಿ ಮುನಿಸತ್ತಮ ।
ಅವಜ್ಞಾಂ ಕುರುತೇಽಸ್ಮಾಸು ಪೂರ್ವತೋಽಪ್ಯಧಿಕಂ ಸ ಚ ॥ ೯೭ ॥

ತಸ್ಮಾತ್ತೋಮೇನ ನಃ ಕಾರ್ಯಂ ನ ಕಿಂಚಿದಪಿ ವಿದ್ಯತೇ ।
ತಪಸ್ವಿನ್ಯೋ ಭವಿಷ್ಯಾಮಸ್ತಪಶ್ಚರ್ಯಾಂ ವಿದೇಶಯ ॥ ೯೮ ॥

ತಪಸಾ ಶೋಧಿತಾತ್ಮಾನಃ ಪರಿತ್ಯಕ್ಷ್ಯಾಮ ಜೀವಿತಂ ।
ಕಿಮಸ್ಮಾಕಂ ಜೀವಿತೇನ ದುರ್ಭಗಾನಾಂ ದ್ವಿಜೋತ್ತಮ ॥ ೯೯ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ತಾಸ್ತತಃ ಸರ್ವಾ ದಕ್ಷಜಾಃ ಕೃತ್ತಿಕಾದಯಃ ।
ಕಪೋಲಮಾಲಂಬ್ಯ ಕರೈರುಪೋಪ ವಿವಿಶುಃ ಕ್ಷಿತೌ ॥ ೧೦೦ ॥

---

೯೭. ಮುನಿಶ್ರೇಷ್ಠನಾದ ಓ ತಂದೆಯೇ, ನಿನ್ನ ಮಾತನ್ನು ಆ ಚಂದ್ರನು ನಡೆಸಲಿಲ್ಲ. ಮೊದಲಿಗಿಂತಲೂ ಹೆಚ್ಚಾಗಿ ಈಗ ಆವನು ನಮ್ಮನ್ನು ತಿರಸ್ಕಾರಮಾಡುತ್ತಿರುವನು.

೯೮. ಆದುದರಿಂದ ಆ ಚಂದ್ರನಿಂದ ನಮಗೆ ಆಗಬೇಕಾದ ಕಾರ್ಯ ವೇನೂ ಇರುವುದಿಲ್ಲ. ನಾವು ತಪಸ್ಸನ್ನು ಮಾಡುವೆವು; ನಮಗೆ ತಪಸ್ಸನ್ನು ಆಚರಿಸುವ ಕ್ರಮವನ್ನು ಹೇಳಿಕೊಡು.

೯೯. ಓ ಬ್ರಾಹ್ಮಣೋತ್ತಮನಾದ ತಂದೆಯೇ, ತಪಸ್ಸಿನಿಂದ ನಮ್ಮ ಶರೀರಮನಸ್ಸುಗಳನ್ನು ಶುದ್ಧಮಾಡಿಕೊಂಡು ಪ್ರಾಣವನ್ನು ಬಿಡುವೆವು. ದುರದೃಷ್ಟಶಾಲಿಗಳಾದ ನಾವು ಬದುಕಿದ್ದು ಪ್ರಯೋಜನವೇನು ?

೧೦೦. ಮಾರ್ಕಂಡೇಯ ಮುನಿಯು ಹೇಳಿದನು:—ಹೀಗೆ ಹೇಳಿ ಕೃತ್ತಿಕೆಯೇ ಮೊದಲಾದ ಆ ದಕ್ಷಪುತ್ರಿಯರೆಲ್ಲರೂ ದುಃಖದಿಂದ ಗಲ್ಲದ ಮೇಲೆ ಕೈಗಳನ್ನಿಟ್ಟುಕೊಂಡು ಭೂಮಿಯ ಮೇಲೆ ಕುಳಿತುಕೊಂಡರು.

ತಾಸ್ತು ದೃಷ್ಟ್ವಾ ತಥಾ ಭೂತಾ ದುಃಖವ್ಯಾಕುಲಿತೇಂದ್ರಿಯಾಃ ।
ಅತಿದೀನಮುಖಾ ದಕ್ಷಃ ಕೋಪಾಜ್ಜ್ವಾಲ ವಹ್ನಿವತ್ ॥ ೧೦೧ ॥

ಅಥ ಕೋಪಪರೀತಸ್ಯ ದಕ್ಷಸ್ಯ ಸುಮಹಾತ್ಮನಃ ।
ನಿಶ್ಚಕ್ರಾಮ ತದಾ ಯಕ್ಷ್ಮಾ ನಾಸಿಕಾಗ್ರಾದ್ವಿಭೀಷಣಃ ॥ ೧೦೨ ॥

ದಂಷ್ಟ್ರಾಕರಾಳವದನಃ ಕೃಷ್ಣಾಂಗಾರಸಮಪ್ರಭಃ
ಅತಿದೀರ್ಘಃ ಸ್ವಲ್ಪಕೇಶಃ ಕೃಶೋ ಧಮನಿಸಂತತಃ ॥ ೧೦೩ ॥

ಅಧೋಮುಖೋ ದಂಡಹಸ್ತಃ ಕಾಶಂ ವಿಶ್ರಮ್ಯ ಸಂತತಂ ।
ಕುರ್ವಾಣೋ ನಿಮ್ನನೇತ್ರಶ್ಚ ಯೋಷಾಸಂಭೋಗಲೋಲುಪಃ ॥೧೦೪॥

ಸ ಚೋವಾಚ ತದಾ ದಕ್ಷಂ ಕಸ್ಮಿಂಸ್ಥಾಸ್ಯಾಮ್ಯಹಂ ಮುನೇ ।
ಕಿಂ ವಾ ಚಾಹಂ ಕರಿಷ್ಯಾಮಿ ತನ್ಮೇ ವದ ಮಹಾಮತೇ ॥ ೧೦೫ ॥

---

೧೦೧. ಈರೀತಿ ಅತಿ ದುಃಖದಿಂದ ಕಂಗೆಟ್ಟು ಬಾಡಿದ ಮುಖವುಳ್ಳ ಆ ಕನ್ಯೆಯರನ್ನು ದಕ್ಷನು ನೋಡಿ, ಮಹಾ ಕೋಪದಿಂದ ಬೆಂಕಿಯಂತೆ ಉರಿಯ ತೊಡಗಿದನು.

೧೦೨. ಹೀಗೆ ಮಹಾ ಕೋಪಾವಿಷ್ಟನಾದ ಆ ದಕ್ಷಬ್ರಹ್ಮನ ಮೂಗಿನ ತುದಿಯಿಂದ ಭಯಂಕರಾಕಾರವುಳ್ಳ ಕ್ಷಯರೋಗಪುರುಷನು ಹೊರಬಿದ್ದನು.

೧೦೩. ಆ ಪುರುಷನ ಮುಖವು ಕೋರೆದಾಡೆಗಳಿಂದ ಭಯಂಕರವಾಗಿತ್ತು. ಶರೀರವು ಇಜ್ಜಲಿನಂತೆ ಕಪ್ಪಗಿದ್ದಿತು. ಅವನ ಶರೀರವು ಕೃಶವಾಗಿಯೂ ಉದ್ದವಾಗಿಯೂ, ತಲೆಯಲ್ಲಿ ಸ್ವಲ್ಪ ಕೂದಲೂ, ಮೈತುಂಬ ಎದ್ದು ಕಾಣುತ್ತಲಿರುವ ನರಗಳಿಂದ ಕೂಡಿಯೂ ಇದ್ದಿತು.

೧೦೪. ಮತ್ತು ಅವನು ಮುಖವನ್ನು ಬಗ್ಗಿಸಿಕೊಂಡು, ಕೈಯಲ್ಲಿ ದೊಣ್ಣೆಯನ್ನೂರಿಕೊಂಡು, ನಡೆಯಲಾರದೆ, ಮಧ್ಯೆ ಮಧ್ಯೆ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಲೂ, ಹೆಚ್ಚಾಗಿ ಕೆಮ್ಮುತ್ತಲೂ, ಗುಳಿಬಿದ್ದ ಕಣ್ಣುಗಳಿಂದ ಕೂಡಿಯೂ, ಸ್ತ್ರೀಯೊಡನೆ ಸಂಭೋಗದಲ್ಲಿ ಅತ್ಯಾಸಕ್ತಿಯುಳ್ಳವನಾಗಿಯೂ ಇದ್ದನು.

೧೦೫. ಆ ಕ್ಷಯಪುರುಷನು ದಕ್ಷನನ್ನು ಕುರಿತು:—ಎಲ್ಲೆ ಮಹಾ ಬುದ್ಧಿಶಾಲಿಯಾದ ಮುನಿಯೇ, ನಾನು ಎಲ್ಲಿ ನೆಲಸಲಿ? ನಾನು ಮಾಡ ಬೇಕಾದ ಕೆಲಸವೇನು? ಎಂಬುದನ್ನು ನನಗೆ ಹೇಳು, ಎಂದು ಕೇಳಿದನು.

ತತೋ ದಕ್ಷಸ್ತು ತಂ ಪ್ರಾಹ ಸೋಮಂ ಯಾತು ದ್ರುತಂ ಭವಾನ್ ।
ಸೋಮಮತ್ತು ಭವಾನ್ನಿತ್ಯಂ ಸೋಮೇ ತ್ವಂ ತಿಷ್ಠ ಸ್ವೇಚ್ಛಯಾ॥ ೧೦೬ ॥

॥ ಮಾರ್ಕಂಡೇಯ ಉವಾಚ ॥

ಇತಿ ಶ್ರುತ್ವಾ ವಚಸ್ತಸ್ಯ ದಕ್ಷಸ್ಯಾಥ ಮಹಾಮುನೇಃ ।
ಶನೈಃ ಶನೈಸ್ತತಃ ಸೋಮಮಾಸಸಾದ ಗದಃ ಸ ಚ ॥ ೧೦೭ ॥

ಆಸಾದ್ಯ ಸ ತದಾ ಸೋಮಂ ವಲ್ಮೀಕಂ ಪನ್ನಗೋ ಯಥಾ ।
ಪ್ರವಿವೇಶೇಂದುಹೃದಯಂ ಛಿದ್ರಂ ಪ್ರಾಪ್ಯ ಮಹಾಗದಃ ॥ ೧೦೮ ॥

ತಸ್ಮಿನ್ಪ್ರವಿಷ್ಟೇ ಹೃದಯೇ ದಾರುಣೇ ರಾಜಯಕ್ಷ್ಮಣಿ ।
ಮುಮೋಹ ಚಂದ್ರಸ್ತಂದ್ರಾಂ ಚ ವಿಷಮಾಂ ಪ್ರಾಪ್ತವಾಂಶ್ಚ ಸಃ ॥೧೦೯॥

---

೧೦೬. ಆಗ ದಕ್ಷನು ಅವನನ್ನು ಕುರಿತು:—ನೀನು ಚಂದ್ರನಿರುವಲ್ಲಿಗೆ ಹೋಗಿ, ಅವನ ಶರೀರದಲ್ಲಿ ಸೇರಿ, ಪ್ರತಿದಿನವೂ ಅವನನ್ನೇ ತಿನ್ನುತ್ತಾ (ಕ್ಷಯಿಸು) ಅವನಲ್ಲಿಯೇ ಯಥೇಚ್ಛವಾಗಿ ನೆಲಸು, ಎಂದು ಹೇಳಿದನು.

೧೦೭. ಮಾರ್ಕಂಡೇಯ ಮುನಿಯು ಹೇಳಿದನು:—ಈ ರೀತಿಯಾಗಿ ಮಹಾತಪಸ್ವಿಯಾದ ಆ ದಕ್ಷನ ಮಾತನ್ನು ಕೇಳಿ, ಆ ರೋಗಪುರುಷನು ಅಲ್ಲಿಂದ ಹೊರಟು ಮೆಲ್ಲಮೆಲ್ಲಗೆ ಚಂದ್ರನಿರುವಲ್ಲಿಗೆ ಹೋಗಿ ಸೇರಿದನು.

೧೦೮. ಚಂದ್ರನಲ್ಲಗೆ ಹೋಗಿ ಆ ಮಹಾರೋಗಪುರುಷನು, ಸಮಯವನ್ನು ನಿರೀಕ್ಷಿಸಿ, ಹುತ್ತವನ್ನು ಹಾವು ಸೇರುವಂತೆ, ಚಂದ್ರನ ಹೃದಯಕುಹರವನ್ನು ಪ್ರವೇಶಿಸಿದನು.

೧೦೯. ರಾಜಯಕ್ಷ್ಮವೆಂದು ಪ್ರಸಿದ್ಧನಾದ ಆ ಕ್ಷಯರೋಗ ಪುರುಷನು ಚಂದ್ರನ ಹೃದಯವನ್ನು ಪ್ರವೇಶಿಸಲು, ಚಂದ್ರನು ಮೋಹಗೊಂಡು ತುಂಬ ಆಲಸ್ಯಯುಕ್ತನಾದನು.

ಉತ್ಪದ್ಯ ಪ್ರಥಮಂ ಯಸ್ಮಾಲ್ಲೀನೋ ರಾಜನ್ಯಸೌ ಗದಃ ।
ರಾಜಯಕ್ಷ್ಮೇತಿ ಲೋಕೇಽಸ್ಮಿನ್ನಸ್ಯ ಖ್ಯಾತಿರಭೂದ್ದ್ವಿಜಾಃ ॥ ೧೧೦ ॥
ತತಸ್ತೇನಾಭಿಭೂತಃ ಸ ಯಕ್ಷ್ಮಣಾ ರೋಹಿಣೀಪತಿಃ ।
ಕ್ಷಯಂ ಜಗಾಮಾನುದಿನಂ ಗ್ರೀಷ್ಮೇ ಕ್ಷುದ್ರನದೀ ಯಥಾ ॥ ೧೧೧ ॥
ಅಥ ಚಂದ್ರೇ ಕ್ಷೀಯಮಾಣೇ ಸರ್ವೌಷಧ್ಯೋ ಗತಾಃ ಕ್ಷಯಂ ।
ಕ್ಷಯಂ ಯಾತಾಸ್ವೌಷಧೀಷು ನ ಯಜ್ಞಃ ಸಮವರ್ತತ ॥ ೧೧೨ ॥
ಯಜ್ಞಾಭಾವಾತ್ತು ದೇವಾನಾಮನ್ನಂ ಸರ್ವಂ ಕ್ಷಯಂ ಗತಂ ।
ಪರ್ಜನ್ಯಾಶ್ಚ ತತೋ ನಷ್ಟಾಸ್ತತೋ ವೃಷ್ಟಿರ್ನ ಚಾಭವತ್ ॥ ೧೧೩ ॥
ವೃಷ್ಟ್ಯಭಾವೇ ತು ಲೋಕಾನಾಮಾಹಾರಾಃ ಕ್ಷೀಣತಾಂ ಗತಾಃ ।
ದುರ್ಭಿಕ್ಷವ್ಯಸನೋಪೇತೇ ಸರ್ವಲೋಕೇ ದ್ವಿಜೋತ್ತಮಾಃ ॥ ೧೧೪ ॥

---

೧೧೦. ಎಲೈ ಬ್ರಾಹ್ಮಣರೇ ಕೇಳಿ:—ಹುಟ್ಟಿದೊಡನೆಯೇ ಮೊದಲು ದ್ವಿಜರಾಜನಲ್ಲಿ, ಎಂದರೆ ನಕ್ಷತ್ರಾಧಿಪತಿಯಾದ ಚಂದ್ರನಲ್ಲಿ, ಪ್ರವೇಶಿಸಿದುದರಿಂದ ಆ ಕ್ಷಯರೋಗಕ್ಕೆ ರಾಜಯಕ್ಷ್ಮವೆಂದು ಹೆಸರು ಲೋಕದಲ್ಲಿ ಪ್ರಸಿದ್ಧಿಯಾಯಿತು.

೧೧೧. ಬಳಿಕ ಚಂದ್ರನು, ಆ ಕ್ಷಯರೋಗದಿಂದ ವ್ಯಾಪಿಸಲ್ಪಟ್ಟು, ಬೇಸಗೆಯಲ್ಲಿ ಸಣ್ಣ ನದಿಯು ಕ್ರಮೇಣ ಬತ್ತಿಹೋಗುವಂತೆ, ದಿನದಿನವೂ ಕ್ಷಯಿಸತೊಡಗಿದನು.

೧೧೨. ಹೀಗೆ ಓಷಧಿರಾಜನಾದ ಚಂದ್ರನು ಕ್ಷಯಿಸತೊಡಗಲು, ವನಸ್ಪತಿಗಳೆಲ್ಲವೂ ನಾಶವನ್ನು ಹೊಂದಿದವು. ವನಸ್ಪತಿಗಳು ನಷ್ಟವಾಗಲು, ಯಜ್ಞಯಾಗಾದಿಗಳೆಲ್ಲವೂ ನಿಂತುಹೋದವು.

೧೧೩. ಯಾಗಗಳು ನಡೆಯದೇ ಇರಲು ದೇವತೆಗಳಿಗೆ ಆಹಾರವೇ ಇಲ್ಲವಾಯಿತು, ಮೇಘಗಳೂ ನಷ್ಟವಾದವು. ಆದರಿಂದ ಮಳೆಯೇ ಆಗಲಿಲ್ಲ.

೧೧೪. ಮಳೆಯಿಲ್ಲದೆ ಅನಾವೃಷ್ಟಿಯುಂಟಾದುದರಿಂದ ಜನಗಳಿಗೆ ಆಹಾರವಿಲ್ಲವಾಯಿತು. ದುರ್ಭಿಕ್ಷದಿಂದ ಸಮಸ್ತ ಪ್ರಪಂಚವೂ ತಲ್ಲಣಿಸಿ ಹೋದವು.

ದಾನಧರ್ಮಾದಿಕಂ ಕಿಂಚಿನ್ನ ಲೋಕಸ್ಯ ಪ್ರವರ್ತತೇ ।
ಸತ್ತ್ವಹೀನಾಃ ಪ್ರಜಾಃ ಸರ್ವಾ ಲೋಭೇನೋಪಹತೇಂದ್ರಿಯಾಃ ।
ಪಾಪಮೇವ ತದಾ ಚಕ್ರುಃ ಕುಕರ್ಮರತಯಶ್ಚ ತಾಃ ॥ ೧೧೫ ॥

ಏತಾನ್ದೃಷ್ಟ್ವಾ ತದಾ ಭಾವಾನ್ದಿಕ್ಪಾಲಾಃ ಸಪುರಂದರಾಃ ।
ಜಗ್ಮುಃ ಕ್ಷೋಭಂ ಪರಂ ದೇವಾಃ ಸಾಗರಾಶ್ಚ ಗ್ರಹಾಸ್ತಥಾ ॥ ೧೧೬ ॥

ತತೋ ದೃಷ್ಟ್ವಾ ಜಗತ್ಸರ್ವಂ ವ್ಯಾಕುಲಂ ದಸ್ಯುಪೀಡಿತಂ ।
ಬ್ರಹ್ಮಾಣಮಗಮನ್ದೇವಾಃ ಸರ್ವೇ ಶಕ್ರಪುರೋಗಮಾಃ ॥ ೧೧೭ ॥

ಉಪಸಂಗಮ್ಯ ದೇವೇಶಂ ಸ್ರಷ್ಟಾರಂ ಜಗತಾಂ ಪತಿಂ ।
ಪ್ರಣಮ್ಯಾಥ ಯಥಾಯೋಗ್ಯಮುಪವಿಷ್ಟಾಸ್ತದಾ ಸುರಾಃ ॥ ೧೧೮ ॥

---

೧೧೫. ಆಗ ಪ್ರಪಂಚದಲ್ಲಿ ದಾನಧರ್ಮಾದಿಸತ್ಕರ್ಮಾಚರಣೆಯೇ ನಿಂತುಹೋಯಿತು. ಪ್ರಜೆಗಳೆಲ್ಲರೂ ಅಶಕ್ತರಾಗಿ ಅತ್ಯಾಶೆಯಿಂದ ಬುದ್ಧಿಗೆಟ್ಟು ಯಾವಾಗಲೂ ಕೆಟ್ಟಕೆಲಸಗಳಲ್ಲಿಯೇ ಆಸಕ್ತರಾಗಿ ಪಾಪವನ್ನೇ ಆಚರಿಸತೊಡಗಿದರು.

೧೧೬. ಜಗತ್ತಿನ ಈ ವಿಧವಾದ ಸ್ಥಿತಿಯನ್ನು ನೋಡಿ, ಇಂದ್ರನೇ ಮೊದಲಾದ ದಿಕ್ಪಾಲಕರೂ, ದೇವತೆಗಳೂ ತಲ್ಲಣಿಸಿದರು. ಸಮುದ್ರಗಳೂ, ಸೂರ್ಯಾದಿ ಗ್ರಹಗಳೂ ಕ್ಷೋಭೆಗೊಂಡವು.

೧೧೭. ಈ ರೀತಿಯಾಗಿ ಜಗತ್ತೆಲ್ಲವೂ ಬರಗಾಲದಿಂಲೂ, ವ್ಯಸನದಿಂದಲೂ, ದುರ್ಜನರ ಅತ್ಯಾಚಾರಗಳಿಂದಲೂ ಕೂಡಿ ತಲ್ಲಣಿಸುತ್ತಿರುವುದನ್ನು ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ನೋಡಿ ಬ್ರಹ್ಮನ ಸಮೀಪಕ್ಕೆ ಹೋದರು.

೧೧೮. ದೇವದೇವನೂ, ಸೃಷ್ಟಿಕರ್ತನೂ, ಜಗದೊಡೆಯನೂ ಆದ ಬ್ರಹ್ಮನಿಗೆ ನಮಸ್ಕಾರಮಾಡಿ ದೇವತೆಗಳೆಲ್ಲರೂ ತಮತಮಗೆ ಯೋಗ್ಯವಾದ ಆಸನಗಳಲ್ಲಿ ಸುಮ್ಮನೆ ಕುಳಿತುಕೊಂಡರು.

ತಾನ್ ಮ್ಲಾನವದನಾನ್ಸರ್ವಾನ್ವೀಕ್ಷ್ಯ ಲೋಕಪಿತಾಮಹಃ ।
ಅಭಿಭೂತಾನ್ಪರೇಣೇವ ಹೃತಸ್ವವಿಷಯಾನಿವ ॥ ೧೧೯ ॥
ಪಪ್ರಚ್ಛ ಸಂಮುಖೀಕೃತ್ಯ ಗುರುಮಿಂದ್ರಂ ಹುತಾಶನಂ ॥ ೧೨೦ ॥

॥ ಬ್ರಹ್ಮೋವಾಚ ॥

ಸ್ವಾಗತಂ ಭೋ ಸುರಗಣಾಃ ಕಿಮರ್ಥಂ ಯೂಯಮಾಗತಾಃ ।
ದುಃಖೋಪಹತದೇಹಾಂಶ್ಚ ಯುಷ್ಮಾನ್ ಮ್ಲಾನಾಂಶ್ಚ ಲಕ್ಷಯೇ॥೧೨೧॥
ನಿರಾಬಾಧಾನ್ನಿರಾತಂಕಾನ್ಯುಷ್ಮಾನ್ಸರ್ವಾಂಶ್ಚ ಕಾಮುಗಾನ್ ।
ಕೃತ್ವಾ ಸ್ವವಿಷಯೇ ನ್ಯಸ್ತಾನ್ಕಥಂ ಪಶ್ಯಾಮಿ ದುಃಖಿತಾನ್ ॥ ೧೨೨ ॥
ಯದ್ವೋ ಭವದ್ದುಃಖಬೀಜಂ ಯುಷ್ಮಾನ್ವಾ ಯಸ್ತು ಬಾಧತೇ ।
ತತ್ಕಥ್ಯತಾಮಶೇಷೇಣ ಸಿದ್ಧಂ ಚಾಪ್ಯವಧಾರ್ಯತಾಂ ॥ ೧೨೩ ॥

೧೧೯-೧೨೦. ಶತ್ರುವಿನಿಂದ ಪರಾಜಿತರಾಗಿ ತಮ್ಮ ರಾಜ್ಯದಿಂದ ಓಡಿಸಲ್ಪಟ್ಟವರಂತೆ ಬಾಡಿದ ಮುಖವುಳ್ಳ ಆ ದೇವತೆಗಳನ್ನು ನೋಡಿ, ಬ್ರಹ್ಮನು ಅವರಲ್ಲಿ ಬೃಹಸ್ಪತಿ, ಇಂದ್ರ, ಅಗ್ನಿ ಇವರನ್ನು ತನ್ನೆದುರಿಗೆ ಕರೆಸಿ, ಹೀಗೆ ಪ್ರಶ್ನೆಮಾಡಿದನು.

೧೨೧. ಬ್ರಹ್ಮನು ಅವರನ್ನು ಕುರಿತು ಹೀಗೆ ಕೇಳಿದನು:—ಎಲೈ ದೇವತೆಗಳೇ, ನಿಮಗೆ ಸುಖಾಗಮನವು. ನೀವು ಏತಕ್ಕಾಗಿ ಇಲ್ಲಿಗೆ ಬಂದಿರುವಿರಿ? ನಿಮ್ಮನ್ನು ನೋಡಿದರೆ ದುಃಖಗೊಂಡವರಂತೆಯೂ, ಬಳಲಿದವರಂತೆಯೂ ತೋರುವುದು.

೧೨೨. ಯಾವ ತೊಂದರೆಯೂ, ಚಿಂತೆಯೂ ಇಲ್ಲದೆ ಬೇಕಾದ ಸುಖಗಳನ್ನನುಭವಿಸುತ್ತಾ ನಿಮ್ಮ ರಾಜ್ಯದಲ್ಲಿ ಇರಬೇಕಾದ ನೀವು ಈರೀತಿ ದುಃಖಿತರಾಗಿರಲು ಕಾರಣವೇನು?

೧೨೩. ನಿಮ್ಮ ದುಃಖಕ್ಕೆ ಕಾರಣವೇನು? ನಿಮ್ಮನ್ನಾವನು ಪೀಡಿಸುತ್ತಿರುವನು? ಅದೆಲ್ಲವನ್ನೂ ವಿಶದವಾಗಿ ಹೇಳಿರಿ. ನಿಮ್ಮ ದುಃಖವು ನಾಶವಾಗಿ ಇಷ್ಟಾರ್ಥವು ಕೈಗೂಡಿತೆಂದು ತಿಳಿಯಿರಿ.

॥ ಮಾರ್ಕಂಡೇಯ ಉವಾಚ ॥

ತತೋ ವೃದ್ಧಶ್ರವಾ ಜೀವಃ ಕೃಷ್ಣವರ್ತ್ಮಾ ಚ ಲೋಕಭೃತ್ ।
ಉವಾಚಾತ್ಮಭುವೇ ತಸ್ಮೈ ಸುರಾಣಾಂ ದುಃಖಕಾರಣಂ ॥ ೧೨೪ ॥

ಶೃಣು ಸರ್ವಜಗತ್ಕರ್ತಸ್ತ್ವಾಂ ಯೇನ ವಯಮಾಗತಾಃ ।
ಯದ್ವಾಸ್ಮಾಕಂ ದುಃಖಬೀಜಂ ಯತೋ ಮ್ಲಾನಶ್ರಿಯೋ ವಯಂ॥೧೨೫॥

ನ ಕ್ವಚಿತ್ಸಂಪ್ರವರ್ತಂತೇ ಯಜ್ಞಾ ಲೋಕೇ ಪಿತಾಮಹ ।
ನಿರಾಧಾರಾ ನಿರಾತಂಕಾಃ ಪ್ರಜಾಃ ಸರ್ವಾಃ ಕ್ಷಯಂ ಗತಾಃ ॥ ೧೨೬ ॥

ನ ಚ ದಾನಾದಿಧರ್ಮಶ್ಚ ನ ತಪಾಂಸಿ ಕ್ಷಿತೌ ಕ್ವಚಿತ್ ।
ನೈವ ವರ್ಷತಿ ಪರ್ಜನ್ಯಃ ಕ್ಷೀಣತೋಯಾಽಭವತ್ಕ್ಷಿತಿಃ ॥ ೧೨೭ ॥

ಕ್ಷೀಣಾಃ ಸರ್ವಾಸ್ತಥೌಷಧ್ಯಃ ಸಸ್ಯಾ ಲೋಕಾಃ ಸಮಾಕುಲಾಃ ।
ದಸ್ಯುಭಿಃ ಪೀಡಿತಾ ವಿಪ್ರಾ ವೇದವಾದಂ ನ ಕುರ್ವತೇ ॥ ೧೨೮ ॥

---

೧೨೪. ಮಾರ್ಕಂಡೇಯ ಮುನಿಯು ಹೇಳಿದನು:—ಆಮೇಲೆ ಇಂದ್ರನೂ, ಲೋಕವನ್ನು ಸಲಹುವ ಅಗ್ನಿಯೂ, ಬೃಹಸ್ಪತಿಯೂ ಬ್ರಹ್ಮನಿಗೆ ದೇವತೆಗಳ ದುಃಖಕ್ಕೆ ಕಾರಣವನ್ನು ಹೇಳಿದರು.

೧೨೫. ಎಲೈ ಸೃಷ್ಟಿಕರ್ತನಾದ ಬ್ರಹ್ಮನೇ, ನಾವು ಏತಕ್ಕಾಗಿ ನಿನ್ನಲ್ಲಿಗೆ ಬಂದಿರುವೆವೆಂಬುದನ್ನೂ, ನಮ್ಮ ದುಃಖಕ್ಕೆ ಕಾರಣವನ್ನೂ, ನಾವು ಏತಕ್ಕಾಗಿ ಕಳೆಗುಂದಿರುವೆವೆಂಬುದನ್ನೂ ಹೇಳುವೆವು, ಕೇಳು.

೧೨೬. ಓ ಬ್ರಹ್ಮನೇ, ಈ ಜಗತ್ತಿನಲ್ಲೆಲ್ಲಿಯೂ ಯಜ್ಞಗಳು ನಡೆಯುತ್ತಿಲ್ಲ. ಆಹಾರ ಮೊದಲಾದ ಯಾವ ಆಶ್ರಯವೂ, ಚಿಂತೆಯೂ ಇಲ್ಲದೆ ಪ್ರಜೆಗಳೆಲ್ಲರೂ ನಾಶವಾಗುತ್ತಿರುವರು.

೧೨೭. ದಾನವೇ ಮೊದಲಾದ ಧರ್ಮಗಳೂ, ತಪಸ್ಸೂ ಈಗ ಭೂಮಿಯಲ್ಲಿ ಇಲ್ಲವೇ ಇಲ್ಲ. ಮೇಘವು ಮಳೆಯನ್ನು ಸುರಿಸುವುದೇ ಇಲ್ಲ. ಅದರಿಂದ ಭೂಮಿಯಲ್ಲಿ ನೀರೇ ಇಲ್ಲವಾಗಿದೆ.

೧೨೮. ಸಸ್ಯೌಷಧಿ ವನಸ್ಪತಿಗಳೆಲ್ಲವೂ ನಾಶವಾಗಿರುವುವು. ಅದರಿಂದ ಜನಗಳು ದುಃಖಿತರಾಗಿರುವರು. ದುಷ್ಟರಿಂದ ಪೀಡಿತರಾಗಿ ಬ್ರಾಹ್ಮಣರು ವೇದಾಧ್ಯಯನವನ್ನೇ ಮಾಡುತ್ತಿಲ್ಲ.

ಅನ್ನವೈಕಲ್ಯಮಾಸಾದ್ಯ ಮ್ರಿಯಂತೇ ಬಹವಃ ಪ್ರಜಾಃ ।
ಕ್ಷೀಣೇಷು ಯಜ್ಞಭಾಗೇಷು ಭೋಗ್ಯಹೀನಾಸ್ತಥಾ ವಯಂ ॥ ೧೫೯ ॥
ದುರ್ಬಲಾಸ್ತು ಶ್ರಿಯಾ ಹೀನಾ ನೈವ ಶಾಂತಿಂ ಲಭಾಮಹೇ ।
ರೋಹಿಣ್ಯಾ ಮುಂದಿರೇ ಚಂದ್ರೋ ವಕ್ರಗತ್ಯಾ ಚಿರಂ ಸ್ಥಿತಃ ।
ವೃಷರಾಶೌ ಸ ಚ ಕ್ಷೀಣೋ ಜ್ಯೋತ್ಸ್ನಾಹೀನಶ್ಚ ವರ್ತತೇ ॥ ೧೬೦ ॥
ಯದೈವಾನ್ವಿಷ್ಯತೇ ದೇವೈಶ್ಚಂದ್ರೋ ನೈಷಾಂ ಪುರಃಸರಃ ।
ಕದಾಚಿದಪಿ ದೇವಾನಾಂ ಸಮಾಜೇ ವಾಭವದ್ವಿಧೇ ॥ ೧೬೧ ॥
ಕದಾಚಿದ್ರೋಹಿಣೀಂ ತ್ಯಕ್ತ್ವಾ ನೈವ ಕ್ವಚನ ಗಚ್ಛತಿ ।
ಯದ್ಯನ್ಯಃ ಕೋಽಪಿ ನ ಭವೇತ್ತದಾ ಚಂದ್ರೋ ಬಹಿರ್ಭವೇತ್ ॥ ೧೬೨ ॥
ದೃಶ್ಯತೇ ಸ ಕಲಾಹೀನಃ ಕಲಾಮಾತ್ರಾವಶೇಷಕಃ ।
ಇತಿ ಸರ್ವತ್ರ ಲೋಕೇಶ ವೃತ್ತಃ ಕರ್ಮವಿಪರ್ಯಯಃ ॥ ೧೬೩ ॥

---

೧೫೯. ಆಹಾರವಿಲ್ಲದೆ ಪ್ರಜೆಗಳೆಲ್ಲರೂ ಸಾಯುತ್ತಲಿರುವರು; ಹವಿರ್ಭಾಗವು ಸಿಕ್ಕದಿರಲು ನಾವೂ ಆಹಾರವಿಲ್ಲದವರಾಗಿರುವೆವು.

೧೬೦. ಆದರಿಂದ ಶಕ್ತಿಯಿಲ್ಲದೆ ಕಳೆಗುಂದಿ ನಾವು ಸುಖಶಾಂತಿಗಳನ್ನು ಹೊಂದುವಂತಿಲ್ಲ. ಚಂದ್ರನು, ವೃಷಭರಾಶಿಯಲ್ಲಿ ರೋಹಿಣಿಯ ಮನೆಯಲ್ಲಿ ನಿಂತು ಮುಂದಿನ ರಾಶಿಗೆ ಹೋಗದೆ ವಕ್ರಗತಿಯಲ್ಲಿಯೇ ಬಹಳ ದಿವಸಗಳಿಂದ ಕ್ಷಯವನ್ನು ಹೊಂದಿ ಕಾಂತಿಯಿಲ್ಲದವನಾಗಿರುವನು.

೧೬೧. ಎಲೈ ಬ್ರಹ್ಮನೇ, ದೇವತೆಗಳು ಎಷ್ಟು ಹುಡುಕಿದರೂ ಆ ಚಂದ್ರನು ಎದುರಿಗೆ ಸಿಕ್ಕುವುದೇ ಇಲ್ಲ. ದೇವತೆಗಳ ಸಮೂಹದಲ್ಲಿಯೂ ಅವನು ಸೇರುವುದಿಲ್ಲ.

೧೬೨. ರೋಹಿಣಿಯನ್ನು ಬಿಟ್ಟು ಅವನು ಎಲ್ಲಿಗೂ ಯಾವಾಗಲೂ ಹೋಗುವುದೇ ಇಲ್ಲ. ಯಾರೂ ಇಲ್ಲದಿರುವಾಗ ಅವನು ಹೊರಗೆ ಬರುವನು.

೧೬೩. ಓ ಬ್ರಹ್ಮನೇ, ಕಲೆಯೆಲ್ಲಾ ನಾಶವಾಗಿ ಅವನು ಈಗ ಒಂದೇ ಕಲೆಯುಳ್ಳವನಾಗಿರುವನು. ಹೀಗೆ ಲೋಕದಲ್ಲೆಲ್ಲಾ ಕರ್ಮವ್ಯತ್ಯಾಸವು ಆಗಿರುವುದು.

ತಂ ದೃಷ್ಟ್ವಾ ಕಾಂದಿಶೀಕಾಸ್ತು ವಯಂ ತ್ವಾಂ ಶರಣಂ ಗತಾಃ ।
ಪಾತಾಲಾದ್ಯಾವದುತ್ಥಾಯ ಕಾಲಕಂಜಾದಯೋಽಸುರಾಃ ॥ ೧೩೪ ॥

ನಾಸ್ಮಾಂಲ್ಲೋಕೇಶ ಬಾಧಂತೇ ತಾವನ್ನಸ್ತ್ರಾಹಿ ಸಾಧ್ವಸಾತ್ ॥ ೧೩೫ ॥

ಅಯಂ ಪ್ರವರ್ತತೇ ಕಸ್ಮಾಜ್ಜಗತಾಂ ವಾ ವ್ಯತಿಕ್ರಮಃ ।
ನ ಜಾನೀಮಸ್ತು ತತ್ಸರ್ವಂ ವಿಪ್ಲವೇ ವಾಪಿ ಕಾರಣಂ ॥ ೧೩೬ ॥

॥ ಮಾರ್ಕಂಡೇಯ ಉವಾಚ

ಏತತ್ಸುರಾಣಾಂ ವಚನಂ ದಿವ್ಯದರ್ಶೀ ಪಿತಾಮಹಃ ।
ಶ್ರುತ್ವಾ ಕ್ಷಣಮುಭಿಧ್ಯಾಯನ್ನಿಜಗಾದ ಸುರೋತ್ತಮಾನ್ ॥ ೧೩೭ ॥

॥ ಬ್ರಹ್ಮೋವಾಚ ॥

ಶೃಣ್ವಂತು ದೇವತಾಃ ಸರ್ವಾ ಯದರ್ಥಂ ಲೋಕವಿಪ್ಲವಃ ।
ಪ್ರವರ್ತತೇಽಧುನಾ ಯೇನ ಶಾಂತಿಸ್ತಸ್ಯ ಭವಿಷ್ಯತಿ ॥ ೧೩೮ ॥

೧೩೪-೧೩೫. ಇಂತಹ ಸ್ಥಿತಿಯನ್ನು ನೋಡಿ ಹೆದರಿದವರಾಗಿ ನಿನ್ನ ಮರೆಹೊಕ್ಕಿರುವೆವು. ಎಲೈ ಬ್ರಹ್ಮನೇ, ಕಾಲಕಂಜನೇ ಮೊದಲಾದ ರಾಕ್ಷಸರು ಪಾತಾಲದಿಂದ ಬಂದು ನಮ್ಮನ್ನು ಪೀಡಿಸುವುದರೊಳಗೆ ನಮ್ಮನ್ನು ಈ ಕಷ್ಟದಿಂದ ರಕ್ಷಿಸು.

೧೩೬. ಜಗತ್ತು ಹೀಗೆ ಏಕೆ ವ್ಯತ್ಯಾಸವಾಗುತ್ತಿರುವುದೆಂದು ನಮಗೆ ಗೊತ್ತಿಲ್ಲ. ಇಷ್ಟೊಂದು ಕಷ್ಟಕ್ಕೆ ಕಾರಣವೇನೆಂದೂ ತಿಳಿಯದು.

೧೩೭. ಮಾರ್ಕಂಡೇಯ ಮುನಿಯು ಹೇಳಿದನು:—ದೇವತೆಗಳು ಹೇಳಿದ ಮಾತನ್ನು ಕೇಳಿ ಬ್ರಹ್ಮನು ಜ್ಞಾನದೃಷ್ಟಿಯಿಂದ ಸ್ವಲ್ಪ ಹೊತ್ತು ಚಿಂತಿಸಿ, ಆ ದೇವತೆಗಳನ್ನು ಕುರಿತು ಹೀಗೆ ಹೇಳಿದನು.

೧೩೮. ಬ್ರಹ್ಮನು ಹೇಳಿದನು:—ಎಲೈ ದೇವತೆಗಳೇ, ಲೋಕಕ್ಕೆ ಈ ಕಷ್ಟವು ಯಾವ ಕಾರಣದಿಂದ ಬಂದಿರುತ್ತದೆ ಮತ್ತು ಅದು ನಿವಾರಣೆಯಾಗುವ ಬಗೆ ಹೇಗೆ ಎಂಬುವುದನ್ನು ಹೇಳುವೆನು, ಕೇಳಿ.

ಸೋಮೋ ದಾಕ್ಷಾಯಣೀಃ ಕನ್ಯಾಃ ಸಪ್ತವಿಂಶತಿಸಂಖ್ಯಕಾಃ ।
ಅಶ್ವಿನ್ಯಾದ್ಯಾ ವರವಧೂರ್ಭಾರ್ಯಾರ್ಥೇ ಪರಿಣೇತವಾನ್ ॥ ೧೫೯ ॥
ಪರಿಣೇಯ ಸ ತಾಃ ಸರ್ವಾ ರೋಹಿಣ್ಯಾಂ ಸತತಂ ವಿಧುಃ ।
ಪ್ರಾವರ್ತತಾನುರಾಗೇಣ ನ ಸಮಸ್ತಾಸು ವರ್ತತೇ ॥ ೧೬೦ ॥
ಅಶ್ವಿನ್ಯಾದ್ಯಾಸ್ತು ತಾಃ ಸರ್ವಾ ದೌರ್ಭಾಗ್ಯಜ್ವರಪೀಡಿತಾಃ ।
ಷಡ್ವಿಂಶತಿರ್ವರಾರೋಹಾಃ ಪಿತರಂ ಪ್ರಸ್ಥಿತಾಃ ಸ್ವಕಂ ॥ ೧೬೧ ॥
ಪ್ರವರ್ತತೇ ನಿಶಾನಾಥೋ ರೋಹಿಣ್ಯಾಂ ರಾಗತೋ ಯಥಾ ।
ತಥಾ ನ ತಾಸು ಭಜತೇ ತದ್ದಕ್ಷಾಯ ನ್ಯವೇದಯನ್ ॥ ೧೬೨ ॥
ತತೋ ದಕ್ಷೋ ಮಹಾಬುದ್ಧಿಃ ಸಾಮ್ನಾ ಸಂಸ್ತೂಯ ವಿಟ್ಪತಿಂ ।
ಬಹುಸೂನೃತಮಾಭಾಷ್ಯ ಪುತ್ರ್ಯರ್ಥೇ ಚಾನ್ವರೋಧತ ॥ ೧೬೩ ॥

---

೧೫೯. ಅದೇನೆಂದರೆ, ಚಂದ್ರನು ದಕ್ಷನ ಕನ್ಯೆಯರಾದ ಅಶ್ವಿನಿಯೇ ಮೊದಲಾದ ಇಪ್ಪತ್ತೇಳು ಜನ ಉತ್ತಮಸ್ತ್ರೀಯರನ್ನು ಮದುವೆಮಾಡಿ ಕೊಂಡನು.

೧೬೦. ಆ ಸ್ತ್ರೀಯರನ್ನೆಲ್ಲಾ ಮದುವೆಮಾಡಿಕೊಂಡರೂ ಚಂದ್ರನು ಕೇವಲ ರೋಹಿಣಿಯೊಬ್ಬಳಲ್ಲೇ ಅನುರಾಗದಿಂದ ಆಸಕ್ತನಾಗಿರುವನು. ಮಿಕ್ಕ ಸ್ತ್ರೀಯರಲ್ಲಿ ಅವನು ಸೇರುವುದೇ ಇಲ್ಲ.

೧೬೧. ಅಶ್ವಿನಿಯೇ ಮೊದಲಾದ ಮಿಕ್ಕ ಇಪ್ಪತ್ತಾರು ಜನ ಸುಂದರಿಯರು ಹೀಗೆ ತಮ್ಮ ದುರದೃಷ್ಟದಿಂದ ಬಹಳವಾಗಿ ನೊಂದು, ತಮ್ಮ ತಂದೆಯಾದ ದಕ್ಷಬ್ರಹ್ಮನ ಬಳಿಗೆ ಹೋದರು.

೧೬೨. ಚಂದ್ರನು ರೋಹಿಣಿಯೊಬ್ಬಳಲ್ಲಿಯೇ ಅನುರಕ್ತನಾಗಿರುವುದನ್ನೂ, ತಮ್ಮಲ್ಲಿ ಅವನು ಸೇರದಿರುವುದನ್ನೂ ಆ ದಕ್ಷಬ್ರಹ್ಮನಿಗೆ ತಿಳಿಸಿದರು.

೧೬೩. ಆಮೇಲೆ ತುಂಬ ಬುದ್ಧಿಶಾಲಿಯಾದ ದಕ್ಷಬ್ರಹ್ಮನು ಚಂದ್ರನಿಗೆ ಸಮಾಧಾನವಾಗಿ ಒಳ್ಳೆಯ ಮಾತುಗಳಿಂದ ತನ್ನ ಪುತ್ರಿಯರ ಹಿತಕ್ಕಾಗಿ ಎಲ್ಲರಲ್ಲಿಯೂ ಸಮವಾಗಿ ವರ್ತಿಸುವಂತೆ ಚಂದ್ರನಿಗೆ ಬುದ್ಧಿವಾದವನ್ನು ಹೇಳಿದನು.

ಅನುರುದ್ಧೋ ಯಥಾ ಕಾಮಂ ದಕ್ಷೇಣ ಸುಮಹಾತ್ಮನಾ ।
ಸಮಂ ಪ್ರವರ್ತಿತುಂ ತಾಸು ಸಮಯಂ ಕೃತವಾನ್ವಿಧುಃ ॥ ೧೪೪ ॥

ಸಮಮಂಗೀಕೃತೇ ಭಾವಂ ತಾಸು ಕರ್ತುಂ ಹಿಮಾಂಶುನಾ ।
ಸ್ವಂ ಜಗಾಮ ತತಃ ಸ್ಥಾನಂ ದಕ್ಷೋಽಪಿ ಮುನಿಸತ್ತಮಃ ॥ ೧೪೫ ॥

ಗತೇ ದಕ್ಷೇ ಮುನಿಶ್ರೇಷ್ಠೇ ವೈಷಮ್ಯಂ ತಾಸು ಚಂದ್ರಮಾಃ ।
ಜಹೌ ನ ಭಾವಂ ತಾಃ ಶಶ್ವತ್ಕುಪಿತಾಃ ಪಿತರಂ ಗತಾಃ ॥ ೧೪೬ ॥

ತತೋ ದಕ್ಷಃ ಪುನಶ್ಚಂದ್ರಮುವರುಧ್ಯ ಸುತಾಂತರೇ ।
ಸಮಾಂ ವೃತ್ತಿಂ ಪ್ರತಿಶಾಮ್ಯ ವಚನಂ ಚೇದಮುಬ್ರವೀತ್ ॥ ೧೪೭ ॥

ನ ಸಮಂ ವರ್ತತೇ ಚಂದ್ರ ಸರ್ವಾಸ್ವಾಸು ಭವಾನ್ಯದಿ ।
ತದಾ ಶಪ್ಸ್ಯೇ ತ್ವಹಂ ತುಭ್ಯಂ ತಸ್ಮಾತ್ಕುರು ಸಮಂಜಸಂ ॥ ೧೪೮ ॥

---

೧೪೪. ಮಹಾತ್ಮನಾದ ದಕ್ಷನು ಹೇಳಿದ ಬುದ್ಧಿವಾದದ ಮಾತುಗಳನ್ನು ಮೀರಲಾರದೆ ಚಂದ್ರನು ಆದರಂತೆ ಎಲ್ಲರಲ್ಲಿಯೂ ಸಮವಾಗಿ ವರ್ತಿಸುವೆನೆಂದು ಒಪ್ಪಿಕೊಂಡನು.

೧೪೫. ಹೀಗೆ ಎಲ್ಲ ಹೆಂಡತಿಯರಲ್ಲಿಯೂ ಸರಿಯಾಗಿರುವಂತೆ ಚಂದ್ರನು ಒಪ್ಪಿಕೊಳ್ಳಲು ಮುನಿಶ್ರೇಷ್ಠನಾದ ದಕ್ಷನು ತನ್ನ ಸ್ಥಾನಕ್ಕೆ ಹೊರಟು ಹೋದನು.

೧೪೬. ದಕ್ಷನು ಹೊರಟು ಹೋಗಲು, ಚಂದ್ರನು ಆಸ್ತ್ರೀಯರಲ್ಲಿ ಭೇದಭಾವವನ್ನು ಬಿಡಲೇ ಇಲ್ಲ. ಆದರಿಂದ ಅವರು ಕೋಪಿಷ್ಠರಾಗಿ ತಮ್ಮ ತಂದೆಯ ಬಳಿಗೆ ಹೋದರು.

೧೪೭. ಆಮೇಲೆ ದಕ್ಷನು ತಿರುಗಿ ಚಂದ್ರನಿಗೆ ಸಮಾಧಾನದಿಂದ ಎಲ್ಲ ಪತ್ನಿಯರಲ್ಲೂ ಸರಿಯಾಗಿರುವಂತೆ ತಿಳಿಸಿ ಮುಂದೆ ಈ ಮಾತನ್ನು ಹೇಳಿದನು.

೧೪೮. ಎಲೈ ಚಂದ್ರನೇ, ಈ ಎಲ್ಲ ಪತ್ನಿಯರಲ್ಲಿಯೂ ನೀನು ಸರಿಯಾಗಿ ವರ್ತಿಸದಿದ್ದರೆ ನಿನ್ನನ್ನು ಶಪಿಸುವೆನು. ಆದುದರಿಂದ ಸರಿಯಾಗಿ ವರ್ತಿಸು.

ತತೋ ಗತೇ ಪುನರ್ದಕ್ಷೇ ನ ಸಮಂ ವರ್ತತೇ ಯದಾ ।
ತಾಸು ಚಂದ್ರಸ್ತದಾ ದಕ್ಷಂ ಪುನರ್ಗತ್ವಾಬ್ರುವನ್ರುಷಾ ॥ ೧೪೯ ॥
ನ ತೇ ವಚಃ ಸತ್ಕುರುತೇ ನೈವಾಸ್ಮಾಸು ಪ್ರವರ್ತತೇ ।
ವಯಂ ತಪಶ್ಚರಿಷ್ಯಾಮಃ ಸ್ಥಾಸ್ಯಾಮಶ್ಚ ತವಾಂತಿಕೇ ॥ ೧೫೦ ॥
ತಾಸಾಮಿತಿ ವಚಃ ಶ್ರುತ್ವಾ ಕುಪಿತಃ ಸ ಮಹಾಮುನಿಃ ।
ಕ್ಷಯಾಯ ಚಂದ್ರಸ್ಯ ಪುನಃ ಶಾಪಾಯೋತ್ಸುಕತಾಂ ಗತಃ ॥ ೧೫೧ ॥
ಶಾಪಾಯೋದ್ಯುಕ್ತಮನಸಃ ಕುಪಿತಸ್ಯ ಮಹಾಮುನೇಃ ।
ಕ್ಷಯೋ ನಾಮ ಮಹಾರೋಗೋ ನಾಸಿಕಾಗ್ರಾದ್ವಿನಿರ್ಗತಃ ॥ ೧೫೨ ॥
ಪ್ರೇಷಿತಃ ಸ ಚ ಚಂದ್ರಾಯ ದಕ್ಷೇಣ ಮುನಿನಾ ತತಃ ।
ಪ್ರವಿಶ್ಯವಾಂಸ್ತಸ್ಯ ದೇಹೇ ಕ್ಷಯಿತಸ್ತೇನ ಚಂದ್ರಮಾಃ ॥ ೧೫೩ ॥

---

೧೪೯. ಆಮೇಲೆ ದಕ್ಷನು ತಿರುಗಿ ತನ್ನ ಸ್ಥಾನಕ್ಕೆ ಹೋಗಲು, ಚಂದ್ರನು ಮೊದಲಿನಂತೆಯೇ ಆ ಸ್ತ್ರೀಯರಲ್ಲಿ ಸಮಭಾವದಿಂದ ವರ್ತಿಸಲಿಲ್ಲ. ಆಗ ಆ ಸ್ತ್ರೀಯರು ತಿರುಗಿ ತಂದೆಯ ಬಳಿಗೆ ಹೋಗಿ ಕೋಪದಿಂದ ಹೀಗೆ ಹೇಳಿದರು.

೧೫೦. ಓ ತಂದೆಯೇ, ಚಂದ್ರನು ನೀನು ಹೇಳಿದ ಒಳ್ಳೆಯ ಮಾತನ್ನು ನಡೆಸುವುದಿಲ್ಲ. ನಮ್ಮೊಡನೆ ಸೇರುವುದೇ ಇಲ್ಲ. ಆದುದರಿಂದ ನಾವು ನಿನ್ನ ಬಳಿಯಲ್ಲಿಯೇ ಇದ್ದು ತಪಸ್ಸನ್ನು ಮಾಡುವೆವು.

೧೫೧. ಆ ಸ್ತ್ರೀಯರು ಹೇಳಿದ ಆರೀತಿಯ ಮಾತುಗಳನ್ನು ಕೇಳಿ, ಮಹಾತಪಸ್ವಿಯಾದ ದಕ್ಷನು ಕೋಪಗೊಂಡು, ಚಂದ್ರನು ಕ್ಷಯಿಸುವಂತೆ ಶಪಿಸಲು ಮನಸ್ಸುಮಾಡಿದನು.

೧೫೨. ಹೀಗೆ ಕೋಪಗೊಂಡು ಶಪಿಸಲುದ್ಯುಕ್ತನಾದ ಆ ದಕ್ಷಬ್ರಹ್ಮನ ನಾಸಿಕಾಗ್ರದಿಂದ ಕ್ಷಯವೆಂಬ ದೊಡ್ಡರೋಗವು ಹೊರಹೊರಟಿತು.

೧೫೩. ಬಳಿಕ ದಕ್ಷಮುನಿಯು ಆ ಕ್ಷಯರೋಗವನ್ನು ಚಂದ್ರನಲ್ಲಿಗೆ ಕಳುಹಿಸಿದನು. ಆ ಕ್ಷಯರೋಗವು ಚಂದ್ರನ ಶರೀರದಲ್ಲಿ ಪ್ರವೇಶಮಾಡಲು ಅದರಿಂದ ಚಂದ್ರನು ಕ್ಷಯವನ್ನು ಹೊಂದಿದನು.

ಕ್ಷೀಣೇ ಚಂದ್ರೇ ಕ್ಷಯಂ ಯಾತಾ ಜ್ಯೋತ್ಸ್ನಾಸ್ತಸ್ಯ ಮಹಾತ್ಮನಃ ।
ಕ್ಷೀಣಾಸು ಸರ್ವಜ್ಯೋತ್ಸ್ನಾಸು ಸರ್ವೌಷಧ್ಯಃ ಕ್ಷಯಂ ಗತಾಃ ॥ ೧೫೪ ॥

ಓಷಧ್ಯಭಾವಾಲ್ಲೋಕೇಽಸ್ಮಿನ್ನ ಯಜ್ಞಃ ಸಂಪ್ರವರ್ತತೇ ।
ಯಜ್ಞಾಭಾವಾದನಾವೃಷ್ಟಿಸ್ತತಃ ಸರ್ವಪ್ರಜಾಕ್ಷಯಃ ॥ ೧೫೫ ॥

ಯಜ್ಞಭಾಗೋಪಭೋಗೇನ ಹೀನಾನಾಂ ಭವತಾಂ ತಥಾ ।
ದುರ್ಬಲತ್ವಂ ಸಮುತ್ಪನ್ನಂ ವಿಕಾರಶ್ಚ ಸ್ವಗೋಚರೇ ॥ ೧೫೬ ॥

ಇತಿ ವಃ ಕಥಿತಂ ಸರ್ವಂ ಯಥಾಭೂಲ್ಲೋಕವಿಪ್ಲವಃ ।
ಯೇನೋಪಾಯೇನ ತಚ್ಛಾಂತಿಸ್ತಚ್ಛೃಣ್ವಂತು ಸುರೋತ್ತಮಾಃ ॥ ೧೫೭ ॥

॥ ಇತಿ ಶ್ರೀ ಕಾಲಿಕಾಪುರಾಣೇ ವಿಂಶೋಽಧ್ಯಾಯಃ ॥

---

೧೫೪. ಚಂದ್ರನು ಕ್ಷೀಣನಾಗಲು, ಅವನ ಪ್ರಕಾಶವೂ ನಾಶವಾಯಿತು. ಪ್ರಕಾಶನಾಶವಾದದ್ದರಿಂದ ಓಷಧಿವನಸ್ಪತಿಗಳೆಲ್ಲವೂ ನಾಶವಾದುವು.

೧೫೫. ವನಸ್ಪತಿಗಳಿಲ್ಲದಂತಾಗಲು, ಯಜ್ಞಗಳೂ ನಡೆಯದಂತಾದವು. ಯಜ್ಞವಿಲ್ಲದ್ದರಿಂದ ಅನಾವೃಷ್ಟಿಯುಂಟಾಗಿ, ಅದರಿಂದ ಪ್ರಜಾನಷ್ಟವುಂಟಾಯಿತು.

೧೫೬. ಅದರಿಂದ ಯಜ್ಞದಲ್ಲಿ ಕೊಡುವ ಹವಿರ್ಭಾಗವಿಲ್ಲದೆ, ನೀವೆಲ್ಲರೂ ಬಲವಿಲ್ಲದೆ ಬಳಲಿರುವಿರಿ.

೧೫೭. ಜಗತ್ತಿಗೆ ಕಷ್ಟವು ಹೇಗೆ ಪ್ರಾಪ್ತವಾಯಿತೆಂಬುದನ್ನು ಈಗ ನಿಮಗೆ ಹೇಳಿದುದಾಯಿತು. ಎಲ್ಲಿ ದೇವಶ್ರೇಷ್ಠರೇ! ಯಾವ ಉಪಾಯದಿಂದ ಆ ಕಷ್ಟ ನಿವಾರಣೆಯಾಗುವುದೆಂಬುದನ್ನು ಹೇಳುವೆನು, ಕೇಳಿ.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಇಪ್ಪತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಅಥ ಶ್ರೀ ಕಾಲಿಕಾಪುರಾಣೇ ಏಕವಿಂಶೋಽಧ್ಯಾಯಃ ॥

ಇಪ್ಪತ್ತೊಂದನೆಯ ಅಧ್ಯಾಯವು

॥ ಬ್ರಹ್ಮೋವಾಚ ॥

ಗಚ್ಛಂತು ಭೋ ಸುರಗಣಾ ದಕ್ಷಸ್ಯ ಸದನಂ ಪ್ರತಿ ।
ಪ್ರಸಾದಯತ ಚಂದ್ರಾರ್ಧೇ ಸ ಚ ಪೂರ್ಣೋ ಭವೇದ್ಯಥಾ ॥ ೧ ॥

ಪೂರ್ಣೇ ಚಂದ್ರೇ ಜಗತ್ಸರ್ವಂ ಪ್ರಕೃತಿಸ್ಥಂ ಭವಿಷ್ಯತಿ ।
ಯುಷ್ಮಾಕಂ ಚ ಭವೇಚ್ಛಾಂತಿರೋಷಧೀನಾಂ ಚ ಸಂಭವಃ ॥ ೨ ॥

॥ ಮಾರ್ಕಂಡೇಯ ಉವಾಚ ॥

ಇತಿ ಬ್ರಹ್ಮವಚಃ ಶ್ರುತ್ವಾ ದೇವಾಃ ಶಕ್ರಪುರೋಗಮಾಃ ।
ಪ್ರಯಯುರ್ಹೃಷ್ಟಮನಸಸ್ತದಾ ದಕ್ಷನಿವೇಶನಂ ॥ ೩ ॥

॥ ಇಪ್ಪತ್ತೊಂದನೆಯ ಅಧ್ಯಾಯವು ॥

೧-೨. ಬ್ರಹ್ಮನು ಹೇಳಿದನು:—ಎಲೈ ದೇವತೆಗಳೇ! ನೀವು ಈಗ ದಕ್ಷ ಬ್ರಹ್ಮನ ಮನೆಗೆ ಹೋಗಿ, ಚಂದ್ರನು ಕಲೆಗಳಿಂದ ಪೂರ್ಣವಾಗುವಂತೆ ಆ ದಕ್ಷನನ್ನು ಪ್ರಸನ್ನಗೊಳಿಸಿರಿ. ಚಂದ್ರನು ಪೂರ್ಣನಾದರೆ ಜಗತ್ತು ತನ್ನ ಪೂರ್ವದ ಸ್ಥಿತಿಗೆ ಬರುವುದು. ನಿಮಗೂ ಶಾಂತಿಸಮಾಧಾನಗಳುಂಟಾಗುವವು. ವನಸ್ಪತಿಗಳೂ ಜನಿಸುವವು.

೩-೪. ಮಾರ್ಕಂಡೇಯಮುನಿಯು ಹೇಳಿದುದು:—ಹೀಗೆ ಹೇಳಿದ ಬ್ರಹ್ಮನ ಮಾತನ್ನು ಕೇಳಿ, ಇಂದ್ರನೇ ಮೊದಲಾದ ದೇವತೆಗಳು ಸಂತೋಷಗೊಂಡು, ಆಗಲೇ

ಯಥಾನ್ಯಾಯಮುಪಸ್ಥಾಯ ಸರ್ವೇ ಮುನಿವರಂ ಸುರಾಃ ।
ಪ್ರೋಚುಃ ಪ್ರಜಾಪತಿಂ ದಕ್ಷಂ ಪ್ರಣಮ್ಯ ಶ್ಲಕ್ಷ್ಣಯಾ ಗಿರಾ ॥ ೪ ॥

॥ ದೇವಾ ಊಚುಃ ॥

ಪ್ರಸೀದ ಸೀದತಾಂ ಬ್ರಹ್ಮನ್ನಸ್ಮಾಕಂ ಬಹುದುಃಖಿನಾಂ ।
ಉದ್ಧರಸ್ವ ಮಹಾಬುದ್ಧೇ ತ್ರಾಹಿ ನಃ ಶೋಕಸಾಗರಾತ್ ॥ ೫ ॥

ಯದ್ರೂಪಂ ಬ್ರಹ್ಮಸಂಜ್ಞಂ ತು ಸೃಷ್ಟಿಕೃತ್ಪರಮಾತ್ಮನಃ ।
ತದಂಶಸ್ತ್ವಂ ಪರಂಜ್ಯೋತಿರ್ವಿಪ್ರರೂಪ ನಮೋಽಸ್ತು ತೇ ॥ ೬ ॥

ರಕ್ಷಣಾತ್ಸರ್ವಜಗತಾಂ ಪ್ರಜಾಪಾಲನಕಾರಣಾತ್ ।
ದಕ್ಷಃ ಪ್ರಜಾಪತಿಶ್ಚೇತಿ ಯೋಗೇಶಸ್ತ್ವಂ ನುಮೋ ವಯಂ ॥ ೭ ॥

ದಕ್ಷಾಯ ಸರ್ವಜಗತಾಂ ದಕ್ಷಾಯ ಕುಶಲಾತ್ಮನಾಂ ।
ದಕ್ಷಾಯಾತ್ಮಹಿತಾಯಾಶು ನಮಸ್ತುಭ್ಯಂ ಮಹಾತ್ಮನೇ ॥ ೮ ॥

ದಕ್ಷಬ್ರಹ್ಮನ ಮನೆಗೆ ಹೋಗಿ, ಆ ಮುನಿಶ್ರೇಷ್ಠನನ್ನು ಮರ್ಯಾದೆಯಿಂದ ನಮಸ್ಕರಿಸಿ ಅವನನ್ನು ಕುರಿತು ವಿನಯವಾದ ಮಾತಿನಿಂದ ಹೀಗೆ ಹೇಳಿದರು.

೫—೧೦. ದೇವತೆಗಳು ಹೇಳಿದರು :—ಓ ಬ್ರಹ್ಮನೇ! ಬಹುದುಃಖದಿಂದ ಬಳಲುತ್ತಿರುವ ನಮಗೆ ಅನುಗ್ರಹವನ್ನು ಮಾಡು. ಎಲೈ ಬುದ್ಧಿಶಾಲಿಯೇ! ಈ ದುಃಖವೆಂಬ ಸಮುದ್ರನನ್ನು ದಾಟಿಸಿ ನಮ್ಮನ್ನು ಸಲಹು. ಪರಮಾತ್ಮನು ಸೃಷ್ಟಿಮಾಡುವುದಕ್ಕಾಗಿ ಬ್ರಹ್ಮನೆಂಬ ಯಾವ ರೂಪವನ್ನು ಹೊಂದುವನೋ ಅಂತಹ ಅಂಶಸ್ವರೂಪನಾಗಿರುವ ನೀನು ಉತ್ಕೃಷ್ಟವಾದ ಪ್ರಕಾಶಸ್ವರೂಪವುಳ್ಳವನು. ನೀನು ಈಗ ಬ್ರಾಹ್ಮಣರೂಪದಿಂದ ಪ್ರಕಾಶಿಸುತ್ತಿರುವೆ. ಇಗೋ ನಿನಗೆ ನಮಸ್ಕಾರವನ್ನು ಮಾಡುವೆವು. ಎಲ್ಲ ಜಗತ್ತನ್ನೂ ರಕ್ಷಿಸುವುದರಿಂದ, ದಕ್ಷ ಅಥವಾ ಸಮರ್ಥನೆಂದೂ, ಪ್ರಜೆಗಳನ್ನು ಪಾಲಿಸುವ ಕಾರಣದಿಂದ ಪ್ರಜಾಪತಿಯೆಂದೂ ಪ್ರಸಿದ್ಧನಾಗಿರುವೆ. ಅಲ್ಲದೆ ಜಗತ್ತನ್ನು ರಕ್ಷಿಸುವುದರಲ್ಲಿ ಸಮರ್ಥನೂ, ಸತ್ಪುರುಷರಲ್ಲಿ ಉತ್ತಮನೂ, ನಮ್ಮೆಲ್ಲರಿಗೂ ಹಿತವನ್ನುಂಟುಮಾಡುವವನೂ, ಚತುರನೂ, ಮಹಾತ್ಮನೂ, ಜಿತೇಂದ್ರಿಯರಾದ ಯೋಗಿಗಣಂದ

ಸತತಂ ಚಿಂತ್ಯಮಾನಸ್ಯ ಯೋಗಿಭಿರ್ನಿಯತೇಂದ್ರಿಯೈಃ ।
ಸಾರಸ್ಯ ಸಾರಭೂತಸ್ತ್ವಂ ದಕ್ಷಾಯ ಪರಮಾತ್ಮನೇ ॥ ೯ ॥

ಯೋಗವೃತ್ತಿರನಾಧೃಷ್ಯಃ ಪಾರಗಾಣಾಂ ಪರಾಯಣಃ ।
ಆದ್ಯಂತಮುಕ್ತಃ ಸಪದಿ ತಸ್ಮೈ ತುಭ್ಯಂ ನಮೋ ನಮಃ ॥ ೧೦ ॥

ಇತಿ ತೇಷಾಂ ವಚಃ ಶ್ರುತ್ವಾ ದಕ್ಷೋ ಯಜ್ಞಭುಜಾಂ ತಥಾ ।
ಪ್ರಾಹ ಪ್ರಸನ್ನವದನಃ ಶಕ್ರಮಾಭಾಷ್ಯ ಮುಖ್ಯತಃ ॥ ೧೧ ॥

॥ ದಕ್ಷ ಉವಾಚ ॥

ಕುತಃ ಶಕ್ರ ಮಹಾಬಾಹೋ ಭವತಾಂ ದುಃಖಮಾಗತಂ ।
ದುಃಖಹೇತುಂ ವದ ವಿಭೋ ಶ್ರೋತುಮಿಚ್ಛಾಮ್ಯಹಂ ತು ತಂ ॥ ೧೨ ॥

ಮಮಾಸ್ತಿ ವಾ ಕಂ ಕರ್ತವ್ಯಂ ಭವತಾಂ ದುಃಖಹಾನಯೇ ।
ತದಹಂ ಯದಿ ಶಕ್ನೋಮಿ ಕರಿಷ್ಯಾಮಿ ಹಿತಂ ಸಮಂ ॥ ೧೩ ॥

ಯಾವಾಗಲೂ ಧ್ಯಾನಿಸಲ್ಪಡುವ ಪರಮಾತ್ಮಸ್ವರೂಪನೂ ಆಗಿರುವೆ. ಎಲೈ ದಕ್ಷನೇ ! ನೀನು ಉತ್ಕೃಷ್ಟವಸ್ತುಗಳಲ್ಲಿಯೂ ಉತ್ಕೃಷ್ಟನೆನಿಸಿದವನು, ಯೋಗನಿರತನು, ಅಪ್ರತಿಹತವಾದ ಸ್ವಭಾವವುಳ್ಳವನು, ಸಂಸಾರಸಾಗರವನ್ನು ದಾಟುವವರುಗಳಲ್ಲಿ ಅತಿಶಯನೆನಿಸಿದವನು, ಆದ್ಯಂತವಿಲ್ಲದವನು, ಇಂತಹ ನಿನಗೆ ನಮಿಸುವೆವು ಎಂದು ಸ್ತೋತ್ರ ಮಾಡಿದರು.

೧೧. ಹೀಗೆ ಹೇಳುತ್ತಿರುವ ದೇವತೆಗಳ ಸ್ತೋತ್ರರೂಪವಾದ ಮಾತುಗಳನ್ನು ಕೇಳಿ ದಕ್ಷಬ್ರಹ್ಮನು ನಗುಮುಖದಿಂದ ದೇವತೆಗಳನ್ನು, ಮುಖ್ಯವಾಗಿ ಇಂದ್ರನನ್ನು, ಕುರಿತು ಹೀಗೆ ಹೇಳಿದನು.

೧೨-೧೩. ದಕ್ಷಬ್ರಹ್ಮನು ಹೇಳಿದನು :-ವೀರನಾದ ಎಲೈ ಇಂದ್ರನೇ ! ನಿಮಗೆ ದುಃಖವೇಕೆ ಬಂದಿರುವುದು ? ಅದಕ್ಕೆ ಕಾರಣವನ್ನು ಹೇಳು, ನಾನು ಕೇಳಲಿಚ್ಛಿಸುವೆನು. ಈ ನಿಮ್ಮ ದುಃಖವನ್ನು ಹೋಗಲಾಡಿಸಲು ನಾನೇನಾದರೂ ಮಾಡಬೇಕಾಗಿರುವುದೇ ? ಅಂತಹುದನ್ನು ನಾನು ಮಾಡಬಲ್ಲೆನಾದರೆ ಅವಶ್ಯವಾಗಿ ಮಾಡುವೆನು.

॥ ಮಾರ್ಕಂಡೇಯ ಉವಾಚ ॥

ತಚ್ಛ್ರುತ್ವಾ ವಚನಂ ತಸ್ಯ ಬ್ರಹ್ಮಸೂನೋರ್ಮಹಾತ್ಮನಃ ।
ಜಗಾದ ವಾಕ್ಪತಿಃ ಶಕ್ರೋ ವೀತಿಹೋತ್ರೋಽಥ ತಂ ಮುನಿಂ ॥ ೧೪ ॥

॥ ತ ಊಚುಃ ॥

ಕ್ಷಯೀ ಜಾತೋ ನಿಶಾನಾಥಸ್ತಸ್ಮಿನ್ ಕ್ಷೀಣೇ ಕ್ಷಯಂ ಗತಾಃ ।
ಸರ್ವೌಷಧ್ಯೋ ದ್ವಿಜಶ್ರೇಷ್ಠ ತದ್ಧಾನಿರ್ಯಜ್ಞಹಾನಿಕೃತ್ ॥ ೧೫ ॥

ಯಜ್ಞೇ ವಿನಷ್ಟೇ ಸಕಲಾಃ ಪ್ರಜಾಃ ಕ್ಷುದ್ಭಯಕಾತರಾಃ ।
ವೃಷ್ಟ್ಯಭಾವಾನ್ಮಹದ್ದುಃಖಂ ಪ್ರಾಪ್ಯ ನಷ್ಟಾಶ್ಚ ಕಾಶ್ಚನ ॥ ೧೬ ॥

ಕ್ಷಯೋಽಯಂ ರಾತ್ರಿನಾಥಸ್ಯ ಯಸ್ತೇ ಕೋಪಾತ್ಪ್ರವರ್ತತೇ ।
ಸ ಸರ್ವಜಗತೋ ಬ್ರಹ್ಮನ್ನಭಾವಾರ್ಥಮುಪಸ್ಥಿತಃ ॥ ೧೭ ॥

---

೧೪. ಮಾರ್ಕಂಡೇಯಮುನಿಯು ಹೇಳಿದನು :— ಬ್ರಹ್ಮನ ಪುತ್ರನೂ, ಮಹಾತ್ಮನೂ ಆದ ದಕ್ಷಬ್ರಹ್ಮನ ಈ ಮಾತನ್ನು ಕೇಳಿ, ಬೃಹಸ್ಪತಿ, ಇಂದ್ರ, ಅಗ್ನಿ ಇವರುಗಳು ಅವನನ್ನು ಕುರಿತು ಹೀಗೆ ಹೇಳಿದರು.

೧೫—೧೭. ಓ ಬ್ರಾಹ್ಮಣಶ್ರೇಷ್ಠನೇ! ಚಂದ್ರನು ಕ್ಷಯವನ್ನು (ಕ್ಷಯರೋಗವನ್ನು) ಹೊಂದಿರುವನು. ಅವನು ಕ್ಷೀಣನಾಗಲು, ಸೋಮಲತೆಗಳೇ ಮೊದಲಾದ ವನಸ್ಪತಿಗಳೆಲ್ಲವೂ ನಾಶವನ್ನೈದಿರುವವು. ಓಷಧಿವನಸ್ಪತಿಗಳಿಲ್ಲದಿರಲು ಯಜ್ಞಗಳು ನಡೆಯಲು ಅವಕಾಶವಿಲ್ಲ. ಹೀಗೆ ಯಜ್ಞವೇ ನಡೆಯದಿರಲು, ಲೋಕದಲ್ಲಿ ಮಳೆ ಬೆಳೆಯಾಗದೆ, ಜನಗಳಿಗೆ ಆಹಾರವಿಲ್ಲದಿರುವುದು. ಹಸಿವಿನಿಂದ ಕಾತರರಾಗಿ ಆ ದುಃಖದಿಂದ ಕೆಲವರು ಆಗಲೇ ಮೃತಿಯನ್ನೈದಿರುವರು. ನಿನ್ನ ಕೋಪದ ನಿಮಿತ್ತ ಹುಟ್ಟಿ, ಚಂದ್ರನಲ್ಲಿ ನೆಲೆಸಿರುವ ಕ್ಷಯರೋಗವು ಹೀಗೆ ಸಕಲ ಜಗತ್ತನ್ನೂ ನಾಶಮಾಡುತ್ತಲಿದೆ. ಈಗ ಜಗತ್ತಿನಲ್ಲಿ ಕ್ಷೋಭೆಗೊಳ್ಳದಿರುವ ಪ್ರಾಣಿಯೇ ಇಲ್ಲ. ಓ ಬ್ರಾಹ್ಮಣೋತ್ತಮನೇ! ಚಲಿಸದಿರುವ ಪರ್ವತವೃಕ್ಷಾದಿಗಳೂ, ಆಕಾಶದಲ್ಲಿ ಸಂಚರಿಸುವ ಪಕ್ಷಿಗಳೂ ಸಹ ಸಂಕಟಕ್ಕೆ ಸಿಕ್ಕದೇ ಇಲ್ಲ. ಯಜ್ಞಗಳು ನಡೆಯುತ್ತಿಲ್ಲ; ಮುನಿಗಳು

ನಾಧುನಾ ತತ್ತ್ರಿಭುವನೇ ಯನ್ನಕ್ಷುಬ್ಧಂ ನು ಕಿಂಚನ ।
ವಿಪ್ಲುತಂ ವಾಸ್ತಿ ವಿಪ್ರೇಂದ್ರ ಸ್ಥಾವರಾಃ ಪತಗಾಶ್ಚವಾ ॥ ೧೮ ॥

ನ ಯಜ್ಞಾಃ ಸಂಪ್ರವರ್ತಂತೇ ನ ತಪಸ್ಯಂತಿ ತಾಪಸಾಃ ।
ಆಹಾರದುಃಖಾನ್ನಿಶ್ರೀಕಾಃ ಪ್ರಜಾಃ ಕ್ಷೀಣಾ ಭಯಾತುರಾಃ ॥ ೧೯ ॥

ಏವಂ ಪ್ರವೃತ್ತೇ ವಿಪ್ರೇಂದ್ರ ವಿಪ್ಲವೇಽಸ್ಮಾದ್ರಸಾತಲಾತ್ ।
ದೈತ್ಯಾ ನ ಯಾವದುತ್ಥಾಯ ಬಾಧಂತೇ ತಾವದುದ್ಧರ ॥ ೨೦ ॥

ಪ್ರಸೀದ ದಕ್ಷ ಚಂದ್ರಸ್ಯ ತಂ ಪೂರಯ ತಪೋಬಲಾತ್ ।
ಪೂರ್ಣೇ ಚಂದ್ರೇ ಜಗತ್ಸರ್ವಂ ಪ್ರಕೃತಿಸ್ಥಂ ಭವಿಷ್ಯತಿ ॥ ೨೧ ॥

॥ ಮಾರ್ಕಂಡೇಯ ಉವಾಚ ॥

ಇತಿ ತೇಷಾಂ ವಚಃ ಶ್ರುತ್ವಾ ಪ್ರಜಾಪತಿಸುತಸ್ತದಾ ।
ಉವಾಚ ತಾನ್ಸುರಗಣಾನ್ ಹೃದಯಾಚ್ಛಲ್ಯಮುದ್ಧರನ್ ॥ ೨೨ ॥

ತಪಸ್ಸನ್ನಾಚರಿಸುತ್ತಿಲ್ಲ; ಆಹಾರವಿಲ್ಲದ ದುಃಖದಿಂದ ಪ್ರಜೆಗಳು ಕಂಗೆಟ್ಟು ಭಯ ವಿಹ್ವಲರಾಗಿ ಕ್ಷೀಣಿಸುತ್ತಿರುವರು. ಓ ಬ್ರಾಹ್ಮಣಶ್ರೇಷ್ಠನೇ! ಹೀಗೆ ಇಷ್ಟೊಂದು ಕಷ್ಟವೊದಗಿರುವ ಕಾಲದಲ್ಲಿ, ಇದೇ ಸಮಯವೆಂದು ಪಾತಾಳದಿಂದ ರಾಕ್ಷಸರು ಬಂದು ನಮ್ಮನ್ನು ಬಾಧೆಪಡಿಸದಿರುವಂತೆ ನಮ್ಮನ್ನು ಉದ್ಧರಿಸು. ಎಲೈ ದಕ್ಷನೇ! ಚಂದ್ರನ ವಿಷಯದಲ್ಲಿ ಪ್ರಸನ್ನನಾಗಿ, ನಿನ್ನ ತಪಶ್ಶಕ್ತಿಯಿಂದ ಅವನನ್ನು ಮೊದಲಿನಂತೆ ಪೂರ್ಣನನ್ನಾಗಿ ಮಾಡು. ಚಂದ್ರನು ಪೂರ್ಣನಾದರೆ ಜಗತ್ತು ಮೊದಲಿನ ಸ್ಥಿತಿಗೆ ಬರುವುದು ಎಂದು ಪ್ರಾರ್ಥಿಸಿದರು.

೨೨. ಮಾರ್ಕಂಡೇಯಮುನಿಯು ಹೇಳಿದನು:—ಹೀಗೆ ಆ ದೇವತೆಗಳ ಮಾತನ್ನು ಕೇಳಿ ಬ್ರಹ್ಮನ ಪುತ್ರನಾದ ದಕ್ಷನು ಅವರ ಮನಸ್ಸಿನ ದುಃಖವನ್ನು ಹೋಗಲಾಡಿಸುತ್ತಾ ಹೀಗೆ ಹೇಳಿದನು.

॥ ದಕ್ಷ ಉವಾಚ ॥

ಯನ್ಮೋ ವಚೋ ನಿಶಾನಾಥೇ ಪ್ರವೃತ್ತಂ ಶಾಪಕಾರಣಂ ॥ ೨೩ ॥

ನ ಕೇನಾಪಿ ನಿದಾನೇನ ಮಿಥ್ಯಾಕರ್ತುಂ ತದುತ್ಸಹೇ ।
ಕಿಂತು ಮದ್ವಚನಂ ಯಸ್ಮಾನ್ನೈಕಾಂತೇನ ಮೃಷಾ ಭವೇತ್ ॥ ೨೪ ॥

ಚಂದ್ರೋಽಪಿ ವರ್ಧತೇ ಯಸ್ಮಾತ್ತದುಪಾಯಮುದೈಕ್ಷತ ।
ತತ್ರಾಪ್ಯಯಮುಪಾಯೋಽಸ್ತಿ ಮಾಸಾರ್ಧಂ ಯಾತು ಚಂದ್ರಮಾಃ ॥ ೨೫ ॥

ಕ್ಷಯಂ ವೃದ್ಧಿಂ ಚ ಮಾಸಾರ್ಧಂ ಸಮಂ ಭಾರ್ಯಾಸು ವರ್ತತಾಂ ।
ತಸ್ಯ ತದ್ವಚನಂ ಶ್ರುತ್ವಾ ತಂ ಪ್ರಸಾದ್ಯ ಪ್ರಜಾಪತಿಂ ॥ ೨೬ ॥

ಸರ್ವೇ ಸುರಗಣಾಸ್ತತ್ರ ಗತಾ ಯತ್ರಾಸ್ತಿ ಚಂದ್ರಮಾಃ ।
ಏವಮುಕ್ತೇ ತು ವಚಸೇ ದಕ್ಷೇಣ ಮುನಿನಾ ದ್ವಿಜಾಃ ॥ ೨೭ ॥

ಅಥ ಚಂದ್ರಂ ಸಮಾದಾಯ ಭಾರ್ಯಾಭಿಃ ಸಹಿತಂ ತದಾ ।
ಜಗ್ಮುಸ್ತೇ ಬ್ರಹ್ಮಭವನಂ ಮುದಿತಾಃ ಸುರಸತ್ತಮಾಃ ॥ ೨೮ ॥

೨೩—೨೫. ದಕ್ಷನು ಹೇಳಿದನು:—ಎಲೈ ದೇವತೆಗಳೇ! ಚಂದ್ರನಿಗೆ ನಾನು ಕೊಟ್ಟ ಶಾಪವಚನವು ಯಾವ ಕಾರಣದಿಂದಲೂ ಸುಳ್ಳಾಗಲಾರದು. ಆದರೆ, ನನ್ನ ಮಾತೂ ಸುಳ್ಳಾಗಬಾರದು, ಚಂದ್ರನೂ ವೃದ್ಧಿಯನ್ನು ಹೊಂದಬೇಕು. ಅಂತಹ ಒಂದು ಉಪಾಯವೊಂದಿರುವುದು ಅದನ್ನು ಹೇಳುವೆನು, ಕೇಳಿ. ಅರ್ಧಮಾಸವು ಚಂದ್ರನು ಕ್ಷಯವನ್ನು ಹೊಂದಲಿ, ಉಳಿದ ಅರ್ಧಮಾಸದಲ್ಲಿ ವೃದ್ಧಿಯನ್ನು ಹೊಂದಲಿ, ಈರೀತಿ ನಡೆಯುತ್ತಿರಲಿ. ಆದರೆ ಚಂದ್ರನು ತನ್ನ ಭಾರ್ಯೆಯರೆಲ್ಲರಲ್ಲೂ ಒಂದೇ ಸಮನಾಗಿ ವರ್ತಿಸುತ್ತಿರಬೇಕು.

೨೬. ಹೀಗೆ ದಕ್ಷನು ಹೇಳಿದ ಮಾತನ್ನು ಕೇಳಿ ದೇವತೆಗಳು ಅವನನ್ನು ಸಂತೋಷಗೊಳಿಸಿ, ಚಂದ್ರನಿರುವಲ್ಲಿಗೆ ಹೊರಟುಹೋದರು.

೨೭—೨೮. ಬಳಿಕ ಆ ದೇವತೆಗಳು ಚಂದ್ರನನ್ನೂ ಅವನ ಪತ್ನಿಯರನ್ನೂ

ತತ್ರ ಗತ್ವಾ ಮಹಾಭಾಗಾ ಯಥಾ ದಕ್ಷೇಣ ಭಾಷಿತಂ ।
ತತ್ಸರ್ವಂ ಕಥಯಾಮಾಸುರ್ಬ್ರಹ್ಮಣೇ ಪರಮಾತ್ಮನೇ ॥ ೨೯ ॥

ಬ್ರಹ್ಮಾ ದಕ್ಷವಚಃ ಶ್ರುತ್ವಾ ದೇವಾನಾಂ ವದನಾತ್ತದಾ ।
ಚಂದ್ರಭಾಗಂ ಮಹಾಶೈಲಂ ಜಗಾಮ ಸಹಿತಃ ಸುರೈಃ ॥ ೩೦ ॥

ತತ್ರ ಗತ್ವಾ ಸುರಶ್ರೇಷ್ಠಃ ಪ್ರಜಾನಾಂ ಹಿತಕಾಮ್ಯಯಾ ।
ಸ್ನಾಪಯಾಮಾಸ ಶುಭ್ರಾಂಶುಂ ಬೃಹಲ್ಲೋಹಿತಪುಷ್ಕರೇ ॥ ೩೧ ॥

ಭೂತಭವ್ಯಭವಜ್ಜ್ಞಾನಃ ಪೂರ್ವಮೇವ ಪಿತಾಮಹಃ ।
ಏತದರ್ಥಂ ಚಕಾರಾತ್ರ ಸರಃ ಪೂರ್ಣಂ ಜಗದ್ಗುರುಃ ॥ ೩೨ ॥

ತತ್ರ ಸ್ನಾತಸ್ಯ ಜಂತೋಸ್ತು ನೀರೋಗತ್ವಂ ಪ್ರಜಾಯತೇ ।
ಚಿರಾಯುಷ್ಟ್ವಂ ಚ ಸತತಂ ಬೃಹಲ್ಲೋಹಿತಸಂಜ್ಞಕೇ ॥ ೩೩ ॥

ತಮ್ಮೊಂದಿಗೆ ಕರೆದುಕೊಂಡು ಸಂತೋಷದಿಂದ ಬ್ರಹ್ಮನ ಸಮೀಪವನ್ನೈದಿ ದಕ್ಷನು ಹೇಳಿದ ಮಾತುಗಳೆಲ್ಲವನ್ನೂ ಬ್ರಹ್ಮನಿಗೆ ಅರಿಕೆಮಾಡಿದರು.

೩೦-೩೧. ದೇವತೆಗಳ ಮುಖದಿಂದ ದಕ್ಷನು ಹೇಳಿದ ಮಾತನ್ನು ಕೇಳಿ, ಬ್ರಹ್ಮನು ದೇವತೆಗಳೊಡನೆ ಚಂದ್ರಭಾಗವರ್ಪತಕ್ಕೆ ಹೋಗಿ ಪ್ರಜೆಗಳಿಗೆ ಹಿತವನ್ನು ಮಾಡಲೋಸುಗ ಬೃಹಲ್ಲೋಹಿತವೆಂಬ ಸರೋವರದಲ್ಲಿ ಚಂದ್ರನಿಗೆ ಸ್ನಾನಮಾಡಿಸಿದನು.

೩೨. ಜಗದ್ಗುರುವಾದ ಆ ಬ್ರಹ್ಮನು ಭೂತಭವಿಷ್ಯದ್ವರ್ತಮಾನಗಳ ಜ್ಞಾನವುಳ್ಳವನಾದುದರಿಂದ, ಕ್ಷಯರೋಗಿಯಾದ ಚಂದ್ರನಿಗೆ ಸ್ನಾನಮಾಡಿಸುವುದಕ್ಕಾಗಿಯೇ ಆ ಸರೋವರವನ್ನು ಹಿಂದೆಯೇ ನಿರ್ಮಿಸಿದ್ದನು. ಆ ಬೃಹಲ್ಲೋಹಿತಸರೋವರದಲ್ಲಿ ಸ್ನಾನಮಾಡಿದವನು ಯಾವ ರೋಗವೂ ಇಲ್ಲದವನಾಗಿ ಬಹುಕಾಲದವರಿಗೂ ಬಾಳುವನು.

೩೩. ಆ ಸರಸ್ಸಿನಲ್ಲಿ ಚಂದ್ರನು ಸ್ನಾನಮಾಡಿದೊಡನೆಯೇ ಅವನ ಶರೀರದಿಂದ ಕ್ಷಯರೋಗವು ಹಿಂದೆ ಹೇಳಿದ ರೂಪವುಳ್ಳದಾಗಿ ಹೊರಗೆ ಬಂದಿತು.

ತತ್ರ ಸ್ನಾತಸ್ಯ ಚಂದ್ರಸ್ಯ ಶರೀರಾತ್ತತ್ಕ್ಷಣಂ ಗದಃ ।
ರಾಜಯಕ್ಷ್ಮಾ ನಿಸ್ಸಸಾರ ಪೂರ್ವರೂಪೋ ಯಥೋದಿತಃ ॥ ೩೪ ॥

ನಿಃಸೃತ್ಯ ರಾಜಯಕ್ಷ್ಮಾಪಿ ಬ್ರಹ್ಮಾಣಂ ಚ ಜಗತ್ಪತಿಂ ।
ಪ್ರಣಮ್ಯಾಹಂ ಕಿಂ ಕರಿಷ್ಯೇ ಕ್ವ ಗಚ್ಛಾಮೀತ್ಯುವಾಚ ತಂ ॥ ೩೫ ॥

ಸ್ಥಾನಂ ಪತ್ನೀಂ ಚ ಲೋಕೇಶ ಕೃತ್ಯಂ ಮಮ ಸನಾತನಂ ।
ನಿದೇಶಯಾನುರೂಪಂ ಮೇ ಸೃಷ್ಟ್ವಾ ತ್ವಂ ಜಗತಾಂ ಯತಃ ॥ ೩೬ ॥

॥ ಮಾರ್ಕಂಡೇಯ ಉವಾಚ ॥

ತತೋ ಬ್ರಹ್ಮಾಪಿ ತಂ ಪುಷ್ಟಂ ನಿರೀಕ್ಷ್ಯೇಂದುಂ ಶರೀರಗೈಃ ।
ಅಮೃತೈಸ್ತೇನಾತಿಭುಕ್ತೈಃ ಕ್ಷೀಣಂ ಚಾಪಿ ನಿಶಾಪತಿಂ ॥ ೩೭ ॥

ದೋರ್ಭಿಃ ಸ್ವಯಂ ತಂ ಗೃಹೀತ್ವಾ ಗಿರೌ ನಿಷ್ಪಿಷ್ಯ ವೈ ಮುಹುಃ ।
ಅಮೃತಂ ಗಾಲಯಾಮಾಸ ಶರೀರಾದ್ರಾಜಯಕ್ಷ್ಮಣಃ ॥ ೩೮ ॥

೩೪-೩೫. ಚಂದ್ರನ ಶರೀರದಿಂದ ಈಚಿಗೆ ಹೊರಟುಬಂದ ಕ್ಷಯರೋಗವು ಜಗದೊಡೆಯನಾದ ಬ್ರಹ್ಮನಿಗೆ ನಮಸ್ಕಾರಮಾಡಿ, ನಾನೇನು ಮಾಡಬೇಕು? ಎಲ್ಲಿಗೆ ಹೋಗಲಿ? ಓ ಬ್ರಹ್ಮನೇ! ನೀನು ಜಗತ್ತನ್ನೆಲ್ಲಾ ಸೃಷ್ಟಿಸುವವನು. ಆದುದರಿಂದ ನನಗೆ ಇರಲು ಸ್ಥಾನವನ್ನೂ, ಪತ್ನಿಯನ್ನೂ, ನಾನು ಮಾಡಬೇಕಾದ ಕಾರ್ಯವನ್ನೂ ವಿಧಾಯಕಮಾಡು.

೩೬—೩೮. ಮಾರ್ಕಂಡೇಯಮುನಿಯು ಹೇಳಿದನು:—ಆಮೇಲೆ ಬ್ರಹ್ಮನು ಚಂದ್ರನ ಶರೀರದಲ್ಲಿದ್ದ ಅಮೃತವನ್ನು ಪಾನಮಾಡಿ ಚೆನ್ನಾಗಿ ಕೊಬ್ಬಿ ಬೆಳೆದಿರುವ ಕ್ಷಯರೋಗವನ್ನೂ, ಅದರಿಂದ ಕ್ಷೀಣನಾದ ಚಂದ್ರನನ್ನೂ ನೋಡಿ, ತನ್ನ ಎರಡು ಕೈಗಳಿಂದಲೂ ಆ ಕ್ಷಯರೋಗವನ್ನು ತಾನೇ ತೆಗೆದುಕೊಂಡು ಆ ಪರ್ವತದಮೇಲೆ ಮತ್ತೆಮತ್ತೆ ಅಪ್ಪಳಿಸಿ, ಅದರ ಶರೀರದಿಂದ ಅಮೃತವನ್ನೆಲ್ಲಾ ಹಿಂಡಿ ತೆಗೆದು ಅದನ್ನು ಕ್ಷೀರಸಮುದ್ರದ ಮಧ್ಯದಲ್ಲಿ ಯಾರೂ ನೋಡದಿರುವಂತಹ ಜಲಪ್ರದೇಶದಲ್ಲಿ ಚೆಲ್ಲಿದನು.

ಅಮೃತಾನಿ ಚ ಯಾನ್ಯಾಶು ಗಾಲಿತಾನಿ ತದಾ ಜಲೇ ।
ಕ್ಷೀರೋದಸ್ಯ ಸ ಚಿಕ್ಷೇಪ ಮಧ್ಯೇ ರಹಸಿ ಲೋಕಭೃತ್ ॥ ೩೯ ॥

ತಸ್ಮಾದಸ್ಯಾಮೃತಾದಿಂದೋಃ ಕಲಾಃ ಕ್ಷೀಣಾಸ್ತು ಯಾಃ ಪುರಾ ।
ತಾಸಾಂ ಜಗ್ರಾಹ ಲವಶಶ್ಚೂರ್ಣಾನ್ ಕ್ಷೀರೋದಸಾಗರಾತ್ ॥ ೪೦ ॥

ಕಲಾಮಾತ್ರಾವಶೇಷಸ್ಯ ಸಂಸರ್ಗಾದ್ರಾಜಯಕ್ಷ್ಮಣಃ ।
ಕ್ಷೀಣಾಃ ಕಲಾಃ ಪಂಚದಶ ಯಾಃ ಪೂರ್ವಮಮೃತಾತ್ಮಿಕಾಃ ॥ ೪೧ ॥

ತಾ ರಾಜಯಕ್ಷ್ಮಗರ್ಭಸ್ಥಾಶ್ಚೂರ್ಣೀಭೂತಾಸ್ತು ಪೀಡಯಾ ।
ತೇಜೋಜ್ಯೋತ್ಸ್ನಾಸುಧಾಭಿಸ್ತು ನಿಬದ್ಧಂ ಯತ್ಕಲಾಪತೇಃ ॥ ೪೨ ॥

ಶರೀರಂ ಪತ್ತ್ರಧಾಭೂತಂ ಗರ್ಭಸ್ಥಂ ರಾಜಯಕ್ಷ್ಮಣಃ ।
ಜ್ಯೋತಿಶ್ಚೂರ್ಣಮಭೂಜ್ಜ್ಯೋತ್ಸ್ನಾ ಲೀನಾ ರಾಜಾದಿಯಕ್ಷ್ಮಣಿ ॥ ೪೩ ॥

---

೩೯. ಮತ್ತು ಆ ಅಮೃತದೊಡನೆ ಸೇರಿರುವ, ಹಿಂದೆ ಕ್ಷೀಣವಾದ ಚಂದ್ರನ ಕಲೆಗಳನ್ನು ಕ್ಷೀರಸಾಗರದಿಂದ ಸ್ವಲ್ಪಸ್ವಲ್ಪವಾಗಿ ತೆಗೆದನು.

೪೦—೪೨. ಕ್ಷಯರೋಗದ ಸಂಬಂಧದಿಂದ ಚಂದ್ರನು ಒಂದೇ ಕಲೆಯುಳ್ಳವನಾಗಲು, ಮಿಕ್ಕ ಅಮೃತಮಯವಾದ ಯಾವ ಹದಿನೈದು ಕಲೆಗಳು ಕ್ಷೀಣವಾಗಿದ್ದವೋ ಆ ಕಲೆಗಳು ಕ್ಷಯರೋಗದ ಮಧ್ಯದಲ್ಲಿ ಸಿಕ್ಕಿ ಪೀಡಿಸಲ್ಪಟ್ಟು, ಚೂರುಚೂರಾಗಿದ್ದವು. ತೇಜಸ್ಸು, ಬೆಳದಿಂಗಳು, ಅಮೃತ ಇವುಗಳಿಂದ ನಿಬಿಡವಾದ ಚಂದ್ರನ ಶರೀರವು ಕ್ಷಯರೋಗದ ಮಧ್ಯದಲ್ಲಿ ಸಿಕ್ಕಿ ಮೂರುಭಾಗವಾಗಿದ್ದಿತು. ಅವನ ತೇಜಸ್ಸು ಚೂರುಚೂರಾಗಿದ್ದಿತು, ಜ್ಯೋತ್ಸ್ನೆಯು (ಬೆಳದಿಂಗಳು) ಕ್ಷಯದಲ್ಲಿ ಸೇರಿಹೋಗಿದ್ದಿತು, ಅಮೃತವೆಲ್ಲವೂ ಕರಗಿ ನೀರಾಗಿ ಕ್ಷಯರೋಗದ ಮಧ್ಯದಲ್ಲಿ ಅಡಗಿದ್ದಿತು.

೪೩. ಹೀಗಿರಲು ಬ್ರಹ್ಮನು ಯಾವಾಗ ಕ್ಷಯವನ್ನು ಮರ್ದಿಸಿ ಅದರ ಗಂಟಲಿನಿಂದ ಅಮೃತವನ್ನು ಹೊರಡಿಸಿದನೋ ಆಗ, ಬೆಳದಿಂಗಳೂ, ಅಮೃತವೂ, ತೇಜಸ್ಸೂ ಎಲ್ಲವೂ ಹೊರಗೆ ಬಂದವು.

ದ್ರವೀಭೂತಾಃ ಸುಧಾಃ ಸರ್ವಾ ಗರ್ಭೇ ರೋಗಸ್ಯ ಚ ಸ್ಥಿತಾಃ ।
ಯದಾ ನಿರ್ಗಾಲಯಾಮಾಸ ಸುಧಾಂ ಬ್ರಹ್ಮಾ ಗಲಾಂತರಾತ್ ॥ ೪೪ ॥

ತದಾ ಜ್ಯೋತ್ಸ್ನಾಸುಧಾಜ್ಯೋತಿಃ ಸರ್ವಂ ತಸ್ಮಾದ್ಬಹಿರ್ಗತಂ ।
ಕ್ಷೀರೋದಸಾಗರೇ ಕ್ಷಿಪ್ತಂ ತತ್ಸರ್ವಂ ವಿಧಿನಾ ತದಾ ॥ ೪೫ ॥

ದೇವಾನ್ ಗಿರೌ ಪರಿತ್ಯಜ್ಯ ಸ್ವಯಂ ಗತ್ವಾ ದ್ರುತಂ ತತಃ ।
ತತೋಽಮೃತಾನಿ ಪ್ರಕ್ಷಾಲ್ಯ ಕಲಾಚೂರ್ಣಾನಿ ನಾರಿಭಿಃ ॥ ೪೬ ॥

ಜ್ಯೋತ್ಸ್ನಾಂ ಚಾಪ್ಯಾಜಗಾಮಾಶು ಗೃಹೀತ್ವಾ ತತ್ಕ್ರಯಂ ಗಿರಿಂ ।
ಕ್ಷೀರೋದಾದ್ಗಿರಿಮಾಸಾದ್ಯ ಚಂದ್ರಭಾಗಂ ತದಾ ವಿಧಿಃ ॥ ೪೭ ॥

ದೇವಮಧ್ಯೇ ಕಲಾಚೂರ್ಣಂ ಸುಧಾಜ್ಯೋತ್ಸ್ನಾನ್ಯವೀವಿಶತ್ ।
ಸಂಸ್ಥಾಪ್ಯ ತತ್ರ ಯಂ ಬ್ರಹ್ಮಾ ದೇವಾನಾಂ ಮಧ್ಯತಃ ಸ್ಥಿತಃ ॥ ೪೮ ॥

---

೪೪. ಆಮೇಲೆ ಬ್ರಹ್ಮನು ದೇವತೆಗಳನ್ನು ಆ ಚಂದ್ರಭಾಗಪರ್ವತದಲ್ಲಿಯೇ ಬಿಟ್ಟು, ತಾನೊಬ್ಬನೇ ಆ ತೇಜಸ್ಸು, ಅಮೃತ, ಜ್ಯೋತ್ಸ್ನೆ ಇವುಗಳನ್ನು ತೆಗೆದು ಕೊಂಡು ಕ್ಷೀರಸಾಗರಕ್ಕೆ ಹೋಗಿ ಅಲ್ಲಿ ಅವುಗಳನ್ನು ಹಾಕಿದನು.

೪೫—೪೭. ಆಮೇಲೆ ಅಮೃತವನ್ನೂ, ಕಲೆಯ ಚೂರುಗಳನ್ನೂ, ಜ್ಯೋತ್ಸ್ನೆಯನ್ನೂ ಸಮುದ್ರದಲ್ಲಿ ನೀರಿನಲ್ಲಿ ತೊಳೆದು, ಅವುಗಳನ್ನು ತೆಗೆದುಕೊಂಡು ಚಂದ್ರಭಾಗಪರ್ವತಕ್ಕೆ ಹಿಂತಿರುಗಿ ಬಂದು ಆ ಕಲೆಗಳ ಚೂರನ್ನೂ, ಅಮೃತವನ್ನೂ, ಜ್ಯೋತ್ಸ್ನೆಯನ್ನೂ ದೇವತೆಗಳ ಮಧ್ಯದಲ್ಲಿ ಇರಿಸಿ, ಕ್ಷಯರೋಗವನ್ನು ಕುರಿತು, ಅದಕ್ಕೆ ವಾಸಸ್ಥಾನಾದಿಗಳನ್ನು ನಿರ್ದೇಶಿಸಲೋಸುಗ ಹೀಗೆ ಹೇಳಿದನು.

೪೮-೫೧. ಬ್ರಹ್ಮನು ಹೇಳಿದನು:—ಎಲ್ಲೆ ಕ್ಷಯರೋಗವೇ! ಯಾವನು ಹಗಲೂ, ರಾತ್ರಿಯೂ, ಸಂಧ್ಯಾಕಾಲದಲ್ಲಿಯೂ ಸ್ತ್ರೀಯಲ್ಲಿ ಆಸಕ್ತನಾಗಿ ಕಾಮಸುಖವನ್ನು ಅನುಭವಿಸುವನೋ ಅವನಲ್ಲಿ ನೀನು ನೆಲಸು. ಹೀನಸರೋಗ, ಕೆಮ್ಮು, ಗೂರಲು, ಕಫ, ಇವುಗಳಿಂದ ಕೂಡಿದ್ದರೂ, ಯಾವನು ಸದಾ ಕಾಮಸುಖದಲ್ಲಿ ಆಸಕ್ತನಾಗಿರುವನೋ ಅಂಥವನಲ್ಲಿಯೂ ನೀನು ನೆಲಸು. ಮೃತ್ಯುವಿನ ಮುಂದಿನ ಕೃಷ್ಣ

ಜಗಾದ ರಾಜಯಕ್ಷ್ಮಾಣಂ ತತ್ಸ್ಥಾನಾದಿ ನಿದೇಶಯನ್ ।

॥ ಬ್ರಹ್ಮೋವಾಚ ॥

ಸರ್ವದಾ ಯೋ ದಿವಾರಾತ್ರೌ ಸಂಧ್ಯಾಯಾಂ ವನಿತಾರತಃ ॥ ೪೯ ॥

ಸೇವತೇ ಸುರತಂ ತಸ್ಮಿನ್ ರಾಜಯಕ್ಷ್ಮನ್ ವಸಿಷ್ಯಸಿ ।
ಪ್ರತಿಶ್ಯಾಯ ಶ್ವಾಸಕಾಸಸಂಯುಕ್ತೋ ಮೈಥುನಂ ಚರೇತ್ ॥ ೫೦ ॥

ಸ ತೇ ಪ್ರವೇಶ್ಯಃ ಸತತಂ ಶ್ಲೇಷ್ಮಣಶ್ಚ ತಥಾವಿಧಃ ।
ಕೃಷ್ಣಾಖ್ಯಾ ಮೃತ್ಯುಪುತ್ರೀ ಯಾ ಭವತಃ ಸದೃಶೀ ಗುಣೈಃ ॥ ೫೧ ॥

ಸಾ ತೇಽಸ್ತು ಭಾರ್ಯಾ ಸತತಂ ಭವಂತಮನುಯಾಸ್ಯತಿ ।
ಕ್ಷೀಣತ್ವಂ ಭವತಃ ಕೃತ್ಯಂ ತತಸ್ತ್ವಂ ವಿಷಯಂ ಕುರು ॥ ೫೨ ॥

ದ್ರುತಂ ಗಚ್ಛ ಯಥಾಕಾಮಂ ಚಂದ್ರಾತ್ತ್ವಂ ವಿಮುಖೋ ಭವ ।

॥ ಮಾರ್ಕಂಡೇಯ ಉವಾಚ ॥

ಏವಂ ವಿಸೃಷ್ಟೋ ವಿಧಿನಾ ರಾಜಯಕ್ಷ್ಮಾ ಮಹಾಗದಃ ॥ ೫೩ ॥

ಎಂಬುವಳು ಗುಣಗಳಿಂದ ನಿನಗನುರೂಪಳಾಗಿರುವಳು. ಅವಳೇ ನಿನಗೆ ಪತ್ನಿಯು ಅವಳು ನಿನ್ನ ಕೆಲಸಕ್ಕೆ ಅನುಕೂಲಳಾಗಿರುವಳು. ಜನಗಳನ್ನು ಕ್ಷಯಿಸುವುದೇ ನಿನ್ನ ಕೆಲಸವು. ಅದನ್ನು ನೀನು ಮಾಡು. ಚಂದ್ರನನ್ನು ಬಿಟ್ಟು, ನಿನ್ನ ಕೆಲಸಕ್ಕಾಗಿ ಬೇಕಾದಕಡೆಗೆ ಬೇಗನೆ ಹೊರಟುಹೋಗು ಎಂದು ಅಪ್ಪಣೆಮಾಡಿದನು.

೫೩. ಮಾರ್ಕಂಡೇಯಮುನಿಯು ಹೇಳಿದನು:—ಹೀಗೆ ಬ್ರಹ್ಮನು ಕಳುಹಿಸಲು ಆ ಕ್ಷಯವೆಂಬ ಮಹಾರೋಗವು, ದೇವತೆಗಳು ನೋಡುತ್ತಿರುವಂತೆ ಅಲ್ಲಿಯೇ ಅದೃಶ್ಯವಾಯಿತು.

೫೩-೫೪. ಕ್ಷಯರೋಗವು ಅದೃಶ್ಯವಾಗಿ ಹೊರಟುಹೋದಮೇಲೆ, ಜಗತ್ತಿಗೆ ತಾತನೆನಿಸಿದ ಬ್ರಹ್ಮನು ಮಿಕ್ಕ ಹದಿನೈದು ಕಲೆಗಳಿಂದಲೂ ತಾನು ಕ್ಷೀರಸಾಗರದಲ್ಲಿ

ಪಶ್ಯತಾಂ ಸರ್ವದೇವಾನಾಮುಂತರ್ಧಾನಂ ಜಗಾಮ ಹ ।
ಅಂತರ್ಹಿತೇ ಮಹಾರೋಗೇ ಬ್ರಹ್ಮಾ ಲೋಕಪಿತಾಮಹಃ ॥ ೫೪ ॥

ಚಂದ್ರಂ ಸಮುಗ್ರಯಾಮಾಸ ಕಲಾಪಂಚದಶೈಧಿತಂ ।
ತೇನ ಕ್ಷೀರೋದಧೌ ತೇನ ಸುಧಾಪೂಗೇನ ಚಾತ್ಮಭೂಃ ॥ ೫೫ ॥

ಸ ಜ್ಯೋತ್ಸ್ನಾಮೃಸ್ತು ಕಲಾಚೂರ್ಣೈಃ ಪೂರ್ವವಚ್ಚಾಕರೋದ್ವಿಧುಂ ।
ಸ ಷೋಡಶಕಲಾಪೂರ್ಣಃ ಪೂರ್ವವದ್ವಿಬಭೌ ಯದಾ ॥ ೫೬ ॥

ಚಂದ್ರಸ್ತದಾ ಸರ್ವದೇವಾ ಮುನುಮುದುಸ್ತಸ್ಯ ದರ್ಶನಾತ್ ।
ಅಥ ಚಂದ್ರಸ್ತದಾ ಪೂರ್ಣಃ ಪ್ರಣಿಪತ್ಯ ಪಿತಾಮಹಂ

ಉವಾಚೇದಂ ಸುರಸದೋಮಧ್ಯಗೋ ನಾತಿಹರ್ಷಿತಃ । ॥ ೫೭ ॥

॥ ಸೋಮ ಉವಾಚ ॥

ನ ಸ್ಯಾಮ ಪೂರ್ವವದ್ಬ್ರಹ್ಮಞ್ಛರೀರೇ ಮಮ ವರ್ತತೇ ॥ ೫೮ ॥

ತೊಳೆದ, ಜ್ಯೋತ್ಸ್ನೆ, ಕಲಾಚೂರುಗಳು, ಅಮೃತ ಇವುಗಳಿಂದಲೂ ಚಂದ್ರನನ್ನು ಮೊದಲಿನಂತೆ ಪೂರ್ಣನನ್ನಾಗಿ ಮಾಡಿದನು.

೫೫. ಆಗ ಚಂದ್ರನು ತನ್ನ ಹದಿನಾರು ಕಲೆಗಳಿಂದಲೂ ಕೂಡಿ ಮೊದಲಿನಂತೆ ಪ್ರಕಾಶಿಸಿದನು. ಅದನ್ನು ನೋಡಿ ದೇವತೆಗಳೆಲ್ಲರೂ ತುಂಬಾ ಹರ್ಷಗೊಂಡರು.

೫೬-೫೭. ಇದರಿಂದ ಚಂದ್ರನಿಗೆ ಆಗ ಅಷ್ಟೇನೂ ಸಂತೋಷವಾಗಲಿಲ್ಲ. ಅವನು ಬ್ರಹ್ಮನನ್ನು ನಮಸ್ಕರಿಸಿ ದೇವತೆಗಳ ಮಧ್ಯದಲ್ಲಿ ನಿಂತು ಹೀಗೆ ಹೇಳಿದನು.

೫೮-೫೯. ಚಂದ್ರನು ಹೇಳಿದನು :—ಓ ಬ್ರಹ್ಮನೇ ! ಮೊದಲಿನಂತೆ ನನ್ನ ಶರೀರದಲ್ಲಿ ಬಲವಿಲ್ಲ. ತೇಜಸ್ಸಾಗಲೀ, ಉತ್ಸಾಹವಾಗಲೀ, ಯಾವುದೂ ಇಲ್ಲ. ನನ್ನ ಶರೀರದ ಅವಯವಗಳ ಸಂಧಿಗಳೆಲ್ಲವೂ ನಿರ್ಬಲವಾಗಿವೆ. ಆದುದರಿಂದ ಮೊದಲಿ

ನ ವೀರ್ಯಂ ವಾ ತಥೋತ್ಸಾಹೋ ನಿಷೀದಂತ್ಯಗಸಂಧಯಃ ।
ನೋತ್ಸಹೇ ಪೂರ್ವವಚ್ಚೇಷ್ಟಾಂ ವಿಧಾತುಂ ಸುತರಾಮಹಂ ॥ ೫೯ ॥

ಚೇಷ್ಟಾಹೀನಸ್ತ್ವನುದಿನಂ ವರ್ತೇಯಂ ಕೇನ ಲೋಕಕೃತ್ ।

॥ ಬ್ರಹ್ಮೋವಾಚ ॥

ಗ್ರಸ್ತಸ್ಯ ಯಕ್ಷ್ಮಣಾ ಸೋಮ ಯದಭೂದಂಗಸಂಧಯಃ ॥ ೬೦ ॥

ಪೂರ್ವಂ ವಿಶೀರ್ಣಾ ಭವತಸ್ತತ್ಪೂರ್ಣಮಭವನ್ನ ಹಿ ।
ಅಧುನಾ ಭವತೋ ದೇಹಜೀರ್ಣಾನ್ನಿಃಸಾರಿತಂ ಮಯಾ ॥ ೬೧ ॥

ಶರೀರಾತ್ಸಾಮೃತಜ್ಯೋತ್ಸ್ನಾಮಂಜಸಾ ರಾಜಯಕ್ಷ್ಮಣಃ ।
ತೇಷಾಂ ಪ್ರಕ್ಷಾಳನವಿಧೌ ಲವಶೋ ಯತ್ಸ್ಥಿತಂ ಜಲೇ ॥ ೬೨ ॥

ಜ್ಯೋತ್ಸ್ನಾಯಾಶ್ಚ ಸುಧಾಯಾಶ್ಚ ತೇನ ಹೀನೋ ಭವಾನ್ಯತಃ ।
ತತೋಂಗಸಂಧಯೋ ರಾಜಂಸ್ತವ ಸೀದಂತಿ ಸಾಂಪ್ರತಂ ॥ ೬೩ ॥

ನಂತೆ ಕಾರ್ಯವನ್ನು ಮಾಡಲಾರೆನು. ಓ ಬ್ರಹ್ಮನೇ! ಯಾವ ಕಾರ್ಯವನ್ನೂ ಮಾಡಲಾರದೆ ಪ್ರತಿದಿನವನ್ನೂ ಹೇಗೆ ಕಳೆಯಲಿ?

೬೦—೬೨. ಬ್ರಹ್ಮನು ಹೇಳಿದನು:—ಎಲೈ ಚಂದ್ರನೇ! ಕ್ಷಯರೋಗದಿಂದ ವ್ಯಾಪಿಸಲ್ಪಟ್ಟು ನಿನ್ನ ಮರ್ಮಸ್ಥಾನಗಳು ಕ್ಷೀಣವಾಗಿದ್ದವು. ಅವುಗಳಿನ್ನೂ ತುಂಬಿರುವುದಿಲ್ಲ. ಈಗ ನಾನು ಕಲಾರೂಪವಾದ ನಿನ್ನ ಶರೀರದ ಚೂರುಗಳನ್ನೂ, ಅಮೃತ ಮತ್ತು ಜ್ಯೋತ್ಸ್ನೆಗಳನ್ನೂ ಕ್ಷಯರೋಗದ ಶರೀರದಿಂದ ಹೊರಕ್ಕೆ ತೆಗೆದಿರುವೆನು. ಅವುಗಳನ್ನು ನಾನು ಕ್ಷೀರಸಾಗರದಲ್ಲಿ ತೊಳೆದಾಗ ಜ್ಯೋತ್ಸ್ನೆ ಮತ್ತು ಅಮೃತದ ಅಂಶಗಳು ನೀರಿನಲ್ಲಿ ಉಳಿದೇ ಇರುತ್ತವೆ. ಆದುದರಿಂದ ನೀನು ಇನ್ನೂ ಪೂರ್ಣವಾಗಿಲ್ಲ.

೬೩. ಆದುದರಿಂದ ಎಲೈ ಚಂದ್ರನೇ! ಈಗ ನಿನ್ನ ಮರ್ಮಸ್ಥಾನಗಳು ಅಶಕ್ತವಾಗಿರುವವು. ನೀನು ಪೀಡೆಯನ್ನು ಹೊಂದದಿರುವಂತೆ ಅದಕ್ಕೊಂದು ಉಪಾಯವನ್ನು ಮಾಡುವೆನು.

ತಸ್ಯೋಪಾಯಂ ವಿಧಾಸ್ಯಾಮಿ ಯಥಾ ಸಾರ್ತಿಂ ಲಭೇದ್ಭವಾನ್ ।
ಪ್ರಾಜಾಪತ್ಯಃ ಪುರೋಡಾಶೋ ಹವನೀಯಃ ಪುರೋಧ್ವರೇ ॥ ೬೪ ॥

ಐಂದ್ರಸ್ತತೋಽನು ಚಾಗ್ನೇಯಃ ಪ್ರದೇಯಃ ಸರ್ವತಃ ಕೃತೌ ।
ತತೋಽನು ಭವತೋ ಭಾಗಃ ಪುರೋಡಾಶೋ ಮಯಾ ಕೃತಃ ॥ ೬೫ ॥

ತೇನ ಭಾಗೇನ ಭುಕ್ತೇನ ನಿತ್ಯಂ ಯಜ್ಞಕೃತೇನ ಹಿ ।
ಪೂರ್ವವತ್ತೇ ಸಮುತ್ಸಾಹಃ ಸ್ಯಾನು ವೀರ್ಯಂ ಭವಿಷ್ಯತಿ ॥ ೬೬ ॥

ಯೇ ಚಾಮೃತಕಣಾಸ್ತ್ವೀಯೇ ಕ್ಷೀರೋದಸ್ಯ ಸ್ಥಿತಾಸ್ತವ ।
ಶರೀರಚೂರ್ಣಂ ವಾ ಯತ್ತೇ ಜ್ಯೋತ್ಸ್ನಾನಾಂ ಚಾಪಿ ಯೇ ಲವಾಃ ॥ ೬೭ ॥

ತತ್ಸರ್ವಂ ಭವತೋ ಜ್ಯೋತ್ಸ್ನಾಯೋಗಾದನುದಿನಂ ವಿಧೇ ।
ವೃದ್ಧಿಂ ಯಾಸ್ಯತಿ ಸತತಂ ಕ್ಷೀರಸಾಗರಗರ್ಭಗಂ ॥ ೬೮ ॥

ಸ್ವಾರೋಚಿಷೇಂತರೇ ಪ್ರಾಪ್ತೇ ದ್ವಿತೀಯೇ ಶಂಕರಾಂಶಜಃ ।
ದುರ್ವಾಸಾ ಭವಿತಾ ವಿಪ್ರಃ ಪ್ರಚಂಡಶ್ಚಂಡಭಾನುವತ್ ॥ ೬೯ ॥

೬೪—೬೬. ಯಜ್ಞದಲ್ಲಿ ಮೊದಲು ಪ್ರಜಾಪತಿಗೂ, ಬಳಿಕ ಇಂದ್ರನಿಗೂ ಆಮೇಲೆ ಅಗ್ನಿಗೂ ಪುರೋಡಾಶವೆಂಬ ಹವಿರ್ಭಾಗವನ್ನು ಕೊಡುವಂತೆ ಮಾಡುವೆನು. ಆನಂತರ ನಿನಗೂ ಒಂದು ಹವಿರ್ಭಾಗವನ್ನು ಕೊಡುವಂತೆ ಮಾಡುವೆನು. ಯಜ್ಞದಲ್ಲಿ ಕೊಡುವ ಆ ಹವಿರ್ಭಾಗದಿಂದ ನಿನಗೆ ಮೊದಲಿನಂತೆ ಉತ್ಸಾಹವೂ, ಬಲವೂ, ವೀರ್ಯವೂ ಉಂಟಾಗುವುವು.

೬೭-೬೮. ಅಲ್ಲದೆ ತೊಳೆಯುವಾಗ ಕ್ಷೀರಸಾಗರದಲ್ಲಿ ನಿಂತುಹೋದ ಸಿನ್ನ ಜ್ಯೋತ್ಸ್ನೆಯ ಮತ್ತು ಅಮೃತಕಣಗಳು, ಕಲಿಯ ಅಂಗಗಳು, ಇವೆಲ್ಲವೂ ಈಗಿನ ಕಿರಣ ಸಂಪರ್ಕದಿಂದ ದಿನದಿನವೂ ಕ್ಷೀರಸಾಗರದ ಮಧ್ಯದಲ್ಲಿ ವೃದ್ಧಿಹೊಂದುವವು.

೬೯-೭೦. ಮುಂದೆ ಎರಡನೆಯ ಸ್ವಾರೋಚಿಷನೆಂಬ ಮನ್ವಂತರವು ಒದಲು, ಶಂಕರನ ಅಂಶದಿಂದ ಸೂರ್ಯನಂತೆ ಅತಿ ತೇಜಸ್ವಿಯಾದ ದುರ್ವಾಸನೆಂಬ ಬ್ರಾಹ್ಮಣನು ಜನಿಸುವನು. ಆ ದುರ್ವಾಸನು, ದೇವೇಂದ್ರನು ಮಾಡಿದ ಅವಮಾನದಿಂದ

ಸ ದೇವೇಂದ್ರಸ್ಯಾವಿನಯಾಚ್ಛಾಪಂ ದತ್ವಾ ಸುದಾರುಣಂ ।
ಕರಿಷ್ಯತಿ ತ್ರಿಭುವನಂ ನಿಃಶ್ರೀಕಂ ಸಸುರಾಸುರಂ ॥ ೭೦ ॥

ಶ್ರಿಯಾ ಹೀನೇ ತತೋ ಲೋಕೇ ಭವಿತಾ ಲೋಕವಿಪ್ಲವಃ ।
ಯಥಾ ತವ ಕ್ಷಯಾತ್ಸೋಮ ಪ್ರವೃತ್ತಃ ಸರ್ವವಿಪ್ಲವಃ ॥ ೭೧ ॥

ತನ್ಮಾನುಷಪ್ರಮಾಣೇನ ತೃತೀಯೇ ತು ಕೃತೇ ಯುಗೇ ।
ಭವಿಷ್ಯತಿ ಸ್ಥಾಸ್ಯತಿ ಚ ಯಾವದ್ಯುಗಚತುಷ್ಟಯಂ ॥ ೭೨ ॥

ತತಶ್ಚತುರ್ಥೇ ಸಂಪ್ರಾಪ್ತೇ ಸಹ ದೇವೈಃ ಕೃತೇ ಯುಗೇ ।
ಕ್ಷೀರೋದಂ ನಿರ್ಮಥಿಷ್ಯಾವಃ ಶಂಭುರ್ವಿಷ್ಣುರಹಂ ತಥಾ ॥ ೭೩ ॥

ಮಂಥಾನಂ ಮಂದರಂ ಕೃತ್ವಾ ನೇತ್ರಂ ಕೃತ್ವಾ ತು ವಾಸುಕಿಂ ।
ಯಜ್ಞಭಾಗೇಷು ಹೀನೇಷು ದೇವಾನ್ನಾರ್ಥಂ ವಯಂ ತತಃ ॥ ೭೪ ॥

ಕೋಪಗೊಂಡು ಅವನಿಗೆ ಕ್ರೂರವಾದ ಶಾಪವನ್ನು ಕೊಟ್ಟು, ದೇವಾಸುರರಿಂದ ಸಹಿತವಾದ ಈ ಮೂರುಲೋಕವನ್ನೂ ಕಾಂತಿಹೀನವಾಗಿ ಮಾಡುವನು.

೭೧. ಎಲೈ ಚಂದ್ರನೇ ! ಹೀಗೆ ಜಗತ್ತು ಕಾಂತಿಹೀನವಾಗಲು, ನಿನ್ನ ಕ್ಷಯದಿಂದ ಜಗತ್ತಿಗೆಲ್ಲಾ ಹೇಗೆ ಕಷ್ಟವು ಒದಗಿತೋ ಅವರಂತೆ ಲೋಕಕ್ಕೆ ಮಹಾಕಷ್ಟವು ಆಗಲೂ ಬಂದೊದಗುವುದು.

೭೨. ಆ ಸಂಕಟವು ಮನುಷ್ಯಲೋಕದ ಗಣನೆಯಂತೆ ಮೂರನೆಯ ಕೃತ ಯುಗದಲ್ಲಿ ಆಗುವುದು. ಮುಂದೆ ಕೃತ, ತ್ರೇತಾ, ದ್ವಾಪರ, ಕಲಿ ನಾಲ್ಕು ಯುಗಗಳ ಪರ್ಯಂತ ಇರುವುದು.

೭೩. ನಾಲ್ಕನೆಯ ಕೃತಯುಗವು ಬರಲು ಅದರಲ್ಲಿ ದೇವತೆಗಳೊಂದಿಗೆ ನಾನೂ (ಬ್ರಹ್ಮನೂ) ಶಂಕರನೂ, ವಿಷ್ಣುವೂ ಸಪ ಕ್ಷೀರಸಾಗರವನ್ನು ಕಡೆಯುವೆವು.

೭೪. ಮಂದರಪರ್ವತವನ್ನು ಕಡೆಗೋಲನ್ನಾಗಿ ಮಾಡಿಕೊಂಡು, ವಾಸುಕಿ ಎಂಬ ಸರ್ಪವನ್ನು ಹಗ್ಗವನ್ನಾಗಿ ಮಾಡಿಕೊಂಡು, ಯಜ್ಞದ ಹವಿರ್ಭಾಗಗಳು ನಷ್ಟವಾಗಲು ದೇವತೆಗಳ ಆಹಾರಕ್ಕಾಗಿ, ದೇವತೆಗಳೊಡನೆಯೂ, ರಾಕ್ಷಸರೊಡನೆಯೂ, ಆ ಕ್ಷೀರಸಾಗರವನ್ನು ಕಡೆಯುವೆವು.

ಮಥಿಷ್ಯಾಮಃ ಸಮುಂ ದೇವೈಃ ಕ್ಷೀರೋದಂ ಸಹ ದಾನವೈಃ ।
ತ್ವಚ್ಛರೀರಾಮೃತಮಿದಂ ಯತ್ಸ್ಥಿತಂ ಕ್ಷೀರಸಾಗರೇ ॥ ೭೫ ॥

ತತ್ಪ್ರಮಥ್ಯ ಗ್ರಹೀಷ್ಯಾವೋ ರಾಶೀಭೂತಂ ತಥಾಽಕ್ಷಯಂ ।
ಸರ್ವೌಷಧ್ಯಂತರೇ ಕೃತ್ವಾ ತ್ವಚ್ಛರೀರಂ ತದಾ ವಯಂ ॥ ೭೬ ॥

ಕ್ಷೇಪ್ಸ್ಯಾಮಃ ಸಾಗರಜಲೇ ಶರೀರಾರ್ಧಂ ವಿಧೋ ತವ ।
ನಿರ್ಮಥ್ಯ ಸಾಗರಂ ಪಶ್ಚಾತ್ಸಮುದ್ಧಾರ್ಯಂ ಯದಾಽಮೃತಂ ॥ ೭೭ ॥

ತದಾ ತವ ವಪುಸ್ತಸ್ಮಿನ್ಪೂರ್ವವತ್ಸಂಭವಿಷ್ಯತಿ ।
ಓಜೋವೀರ್ಯಾದ್ಭುತಂ ಕಾಂತಮಕ್ಷಯಂ ಚ ಸುಧಾತ್ಮಕಂ ॥ ೭೮ ॥

ದೃಢಾಂಗಸಂಧಿಕಂ ಚಾರು ಭವಿಷ್ಯತಿ ವಪುಸ್ತವ ।

॥ ಮಾರ್ಕಂಡೇಯ ಉವಾಚ ॥

ಸುಧಾಂಶುಮೇವಮಾಭಾಷ್ಯ ಬ್ರಹ್ಮಾ ಲೋಕಪಿತಾಮಹಃ ॥ ೭೯ ॥

---

೭೫. ಆಗ ಕ್ಷಯವಿಲ್ಲದೆ ಕ್ಷೀರಸಮುದ್ರದಲ್ಲಿ ರಾಶಿಯಾಗಿರುವ ಈ ನಿನ್ನ ಶರೀರದ ಅಮೃತವನ್ನು ಕಡೆದು ತೆಗೆದುಕೊಳ್ಳುವೆವು.

೭೬. ಎಲೈ ಚಂದ್ರನೇ ! ಅಲ್ಲದೆ ಆಗ ಈ ನಿನ್ನ ಶರೀರವನ್ನು ಎಲ್ಲಾ ವನಸ್ಪತಿಗಳ ಮಧ್ಯದಲ್ಲಿ ಸೇರಿಸಿ ಸಮುದ್ರದ ಮಧ್ಯದಲ್ಲಿ ಹಾಕುವೆವು.

೭೭. ಹೀಗೆ ಯಾವಾಗ ಸಮುದ್ರವನ್ನು ಕಡೆದು ಅಮೃತವನ್ನು ತೆಗೆದು ಕೊಳ್ಳುವೆವೋ ಆಗ ಅಲ್ಲಿ ನಿನ್ನ ಶರೀರವು ಮೊದಲಿನಂತೆಯೇ ಆಗುವುದು.

೭೮. ಮತ್ತು ಆಗ ನಿನ್ನ ಶರೀರವು ಹೆಚ್ಚಾದ ಬಲ, ವೀರ್ಯ ಇವುಗಳುಳ್ಳದ್ದೂ, ಮನೋಹರವಾದುದೂ, ಕ್ಷಯವಿಲ್ಲದೆ ಇರುವುದೂ, ಅಮೃತಮಯವಾದುದೂ, ಬಲವಾದ ಶರೀರಸಂಧಿಯುಳ್ಳದೂ, ಸುಂದರವಾದುದೂ ಆಗುವುದು.

೭೯-೮೦. ಮಾರ್ಕಂಡೇಯನು ಹೇಳಿದನು :—ಹೀಗೆ ಚಂದ್ರನಿಗೆ ಹೇಳಿ, ಜಗತ್ತಿಗೆ ತಾತನೆನಿಸಿದ ಬ್ರಹ್ಮನು, ಚಂದ್ರನ ವೃದ್ಧಿಕ್ಷಯಗಳನ್ನು ಕ್ಲಿಪ್ತಮಾಡ

ವಿಧೋಃ ಕ್ಷಯಾಯ ಮಾಸಾರ್ಧಂ ವೃದ್ಧಯೇ ಯತ್ನವಾನಭೂತ್ ।
ಯಥಾ ದಕ್ಷೇಣ ಗದಿತಂ ಮಾಸಾರ್ಧಂ ಯಾತು ಚಂದ್ರಮಾಃ ॥ ೮೦ ॥

ಕ್ಷಯಂ ವೃದ್ಧಿಂ ಚ ಮಾಸಾರ್ಧಂ ಯತ್ನಂ ತತ್ಕಾಕರೋದ್ವಿಧಿಃ ।
ತತಃ ಷೋಡಶಧಾ ಚಂದ್ರಂ ಸುರಜ್ಯೇಷ್ಠೋ ವಿಭಕ್ತವಾನ್ ॥ ೮೧ ॥

ವಿಭಜ್ಯ ಚ ಸುರಾನ್ಸರ್ವಾನ್ಸಮುವಾಚೇದಮುತ್ತಮಂ ।
ಕಲಾಃ ಷೋಡಶ ಚಂದ್ರಸ್ಯ ತತ್ರೈಕಾ ಶಂಭುಮೂರ್ಧನಿ ॥ ೮೨ ॥

ತಿಷ್ಠತ್ವದ್ಯಾವಧಿ ಪರಾ ಕ್ಷಯಂ ಯಾಂತು ಕ್ಷಯಂ ವಿನಾ ।
ಕ್ಷಯೇಣ ಯದಿ ರೋಗೇಣ ಮಾಸಾರ್ಧಂ ದಕ್ಷವಾಕ್ಯತಃ ॥ ೮೩ ॥

ಕ್ಷಯಾಯ ಪೀಡ್ಯತೇ ಚಂದ್ರೋ ನೋಪಶಾಂತಿಸ್ತದಾ ಭವೇತ್ ।
ಕಿಂ ತ್ವಸ್ಯ ಯಾ ಕಲಾ ಶಂಭೌ ಜ್ಯೋತ್ಸ್ನಾ ಗಚ್ಛಂತು ತಾಂ ಪ್ರತಿ ॥ ೮೪ ॥

ಚತುರ್ದಶಕಲಾಸಂಸ್ಥಾಃ ಪ್ರತಿಮಾಸಂ ಸುರೋತ್ತಮಾಃ ।
ಚತುರ್ದಶಕಲಾಸಂಸ್ಥಾನ್ಯಮೃತಾನಿ ಪಿಬಂತು ವೈ ॥ ೮೫ ॥

ಬೇಕೆಂದು ಯೋಚಿಸಿ, ದಕ್ಷಬ್ರಹ್ಮನು ಹೇಳಿದಂತೆ ಚಂದ್ರನು ಅರ್ಧತಿಂಗಳ ಕ್ಷಯವನ್ನು ಹೊಂದಲಿ, ಅರ್ಧ ತಿಂಗಳು ವೃದ್ಧಿಹೊಂದಲಿ ಎಂದು ನಿಯಮಿಸಿದನು.

೮೧. ಆಮೇಲೆ ಬ್ರಹ್ಮನು ಚಂದ್ರನನ್ನು ಹದಿನಾರು ಭಾಗಗಳಾಗಿ ವಿಭಾಗ ಮಾಡಿ ದೇವತೆಗಳನ್ನು ಕುರಿತು ಹೀಗೆ ಹೇಳಿದನು.

೮೨. ಆ ಹದಿನಾರು ಕಲೆಗಳಲ್ಲಿ ಒಂದು ಶಂಕರನ ಜಟೆಯಲ್ಲಿರಲಿ. ಮಿಕ್ಕ ಕಲೆಗಳು ಕ್ಷಯವನ್ನೂ, ವೃದ್ಧಿಯನ್ನೂ ಒಂದಾಗುತ್ತಲೊಂದನ್ನು ಹೊಂದುತ್ತಿರಲಿ.

೮೩—೮೬. ದಕ್ಷಬ್ರಹ್ಮನ ವಾಕ್ಯದಂತೆ ಅರ್ಧತಿಂಗಳು ಕ್ಷಯರೋಗವು ಚಂದ್ರನನ್ನು ಪೀಡಿಸಿದರೆ ಆಗ ಲೋಕಕ್ಕೆ ಶಾಂತಿಯಾಗಲಾರದು. ಆದುದರಿಂದ ಆಗ ಮಿಕ್ಕ ಹದಿನಾಲ್ಕು ಕಲೆಗಳಲ್ಲಿರುವ (ಪ್ರಕಾಶವೂ) ಶಂಕರನ ಜಟೆಯಲ್ಲಿರುವ ಚಂದ್ರ ಕಲೆಯನ್ನು ಪ್ರತಿ ತಿಂಗಳೂ ಸೇರಲಿ. ಎಲೈ ದೇವತೆಗಳೇ ! ನೀವು ಆ ಹದಿನಾಲ್ಕು

ಪ್ರತಿಪತ್ತಿಥಿಮಾರಭ್ಯ ಭವಂತಸ್ತ್ಯಾಂ ಚತುರ್ದಶೀಂ ।
ತೇಜೋಭಾಗಾಃ ಸೂರ್ಯಬಿಂಬಂ ಚತುರ್ದಶತಿಥೌ ಕ್ರಮಾತ್ ॥ ೮೬ ॥

ಪ್ರವಿಶಂತು ಕ್ಷಯಂ ತ್ವೇನಂ ಕೃಷ್ಣಪಕ್ಷೇ ವಿಧೋರ್ಭವೇತ್ ।
ಯಾ ತು ಶೇಷಾ ಕಲಾ ದರ್ಶೇ ಪರಿತ್ಪತ್ರೇ ಪಲಾಯಿತಾ ॥ ೮೭ ॥

ತಿಷ್ಠತು ಪ್ರಥಮೇ ಭಾಗೇ ತಿಥೌ ತಸ್ಯಾಂ ನಿಶಾಪತೇಃ ।
ದ್ವಿತೀಯೇ ದರ್ಶಭಾಗೇ ತು ರೋಹಿಣ್ಯಾ ಯಾತು ಮಂದಿರಂ ॥ ೮೮ ॥

ತೃತೀಯೇ ತು ಸರಸ್ವತ್ಯಾಂ ಸ್ನಾತ್ವಾ ಸಮುತ್ಥಿತೋ ವಿಧುಃ ।
ಚತುರ್ಥೇ ಬಲಸಂಪೂರ್ಣಸ್ಥಿತಿಭಾಗೇ ವಿಭಾವಸೋಃ ॥ ೮೯ ॥

ಮಂಡಲಂ ಯಾತು ಚಂದ್ರೋಽಯಂ ಸಬಿಂಬರಥಘೋಟಕಃ ।
ಯಾವತ್ಯಾಲೀನ ಹಿ ಕಲಾ ಪ್ರಥಮಾ ಕ್ಷಯಮಾಪ್ನುಯಾತ್ ॥ ೯೦ ॥

ಕಲೆಗಳಲ್ಲಿರತಕ್ಕ ಅಮೃತವನ್ನು ಕೃಷ್ಣಪಕ್ಷ ಪಾಡ್ಯದಿಂದ ಚತುರ್ದಶಿಯ ಪರ್ಯಂತ ದಿನವೂ ಪಾನಮಾಡಿರಿ ಮತ್ತು ಕಲೆಗಳಿರುವ ತೇಜಸ್ಸು (ಪಾಡ್ಯದಿಂದ) ಕ್ರಮವಾಗಿ ಹದಿನಾಲ್ಕುದಿವಸಗಳಲ್ಲಿ ಸೂರ್ಯಮಂಡಲವನ್ನು ಸೇರಲಿ. ಹೀಗೆ ಕೃಷ್ಣಪಕ್ಷದಲ್ಲಿ ಚಂದ್ರನ ಕ್ಷಯಗತಿಯು ಕ್ರಮವಾಗಿ ಉಂಟಾಗುವುದು.

೮೭. ಉಳಿದ ಯಾವ ಇನ್ನೊಂದು ಚಂದ್ರನ ಕಲೆಯಿರುವುದೋ ಅದು ಅಮಾವಾಸ್ಯೆಯ ದಿನದ ಆದಿಭಾಗದಲ್ಲಿ ಸೂರ್ಯಮಂಡಲವನ್ನು ಸೇರಲಿ.

೮೮. ಆ ಅಮಾವಾಸ್ಯೆಯ ದಿನದ ಎರಡನೆಯ ಭಾಗದಲ್ಲಿ ರೋಹಿಣಿಯ ಮನೆಗೆ ಚಂದ್ರನು ಹೋಗಲಿ. ಮೂರನೆಯ ಭಾಗದಲ್ಲಿ ಸರಸ್ವತೀನದಿಯಲ್ಲಿ ಸ್ನಾನ ಮಾಡಿ ಚಂದ್ರನು ಶುದ್ಧನಾಗಬೇಕು.

೮೯. ಅಮಾವಾಸ್ಯೆಯ ನಾಲ್ಕನೆಯ ಭಾಗದಲ್ಲಿ ಚಂದ್ರನು ಸಂಪೂರ್ಣ ಬಲವುಳ್ಳವನಾಗಿ ತನ್ನ ಮಂಡಲ, ರಥ, ಕುದುರೆ ಇವುಗಳೊಡನೆ ಸೂರ್ಯಮಂಡಲವನ್ನು ಪ್ರವೇಶಿಸಲಿ.

೯೦-೯೧. ಕೃಷ್ಣಪಕ್ಷದಲ್ಲಿ ಯಾವಾಗ ಚಂದ್ರನ ಮೊದಲನೆಯ ಕಲೆಯು ಕ್ಷಯವನ್ನು ಹೊಂದುವುದೋ ಆಗ ಪ್ರತಿಪತ್ತು (ಪಾಡ್ಯ) ಆಗುವುದು. ಕೃಷ್ಣಪಕ್ಷ

ಏವಮೇವಂ ಕೃಷ್ಣಪಕ್ಷೇ ತಾವತ್ಸಾ ಪ್ರತಿಪದ್ಭವೇತ್ ।
ದ್ವಿತೀಯಾದೌ ಕೃಷ್ಣಪಕ್ಷೇ ವೃದ್ಧಿಹ್ರಾಸಸ್ತಥಾವಿಧಃ ॥ ೯೦ ॥

ತಿಥೀನಾಂ ವೃದ್ಧಿಹೇತುಶ್ಚ ಶುಕ್ಲೇಕೃಷ್ಣೇ ತಥಾ ಭವೇತ್ ।
ತತಃ ಪುನಃ ಶುಕ್ಲಪಕ್ಷೇ ಯಾವತ್ಪೂರ್ವಕಲೋದಿತಾ ॥ ೯೨ ॥

ವೃದ್ಧಿಂ ನೈತಿ ಭವೇ ತಾವತ್ಪ್ರತಿಪತ್ತಿಥಿರಾದಿತಃ ।
ತತೋ ದ್ವಿತೀಯಭಾಗಸ್ಯ ಯಾ ಜ್ಯೋತ್ಸ್ನಾ ಪರಮಾರ್ಧನಿ ॥ ೯೩ ॥

ಸ್ಥಿತಾ ಯಾ ವೈ ಕಲಾ ಯಾ ತು ಗತಾ ಸಾ ಪುನರೇಷ್ಯತಿ ।
ಯುಷ್ಮಾಭಿಸ್ತು ಭವೇತ್ಪೇಯಮಮೃತಂ ಯದ್ದಿನೇ ದಿನೇ ॥ ೯೪ ॥

ತದ್ದ್ವಿತೀಯಾದಿತಿಥಿಭಿಃ ಪೂರ್ಣಾಂತಾಭಿಃ ಸದೈವ ಹಿ ।
ಸ್ವಯಮುತ್ಪದ್ಯತೇ ಚಂದ್ರೋ ಜ್ಯೋತ್ಸ್ನಾಯೋಗಾತ್ಸುರೋತ್ತಮಾಃ
॥ ೯೫ ॥

ಮತ್ತು ಶುಕ್ಲಪಕ್ಷಗಳ ಬಿದಿಗೆಯೇ ಮೊದಲಾದ ತಿಥಿಗಳಲ್ಲಿ ಮೇಲೆ ಹೇಳಿದಂತೆ ಕ್ಷಯ ಮತ್ತು ವೃದ್ಧಿಯಾಗುವುದು.

೯೨. ಆಮೇಲೆ ತಿರುಗಿ ಶುಕ್ಲಪಕ್ಷದಲ್ಲಿ ಚಂದ್ರನ ಮೊದಲನೆಯ ಕಲೆಯು ಯಾವಾಗ ಕ್ಷೀಣವಾಗಿಯೇ ಉದಯಿಸುವುದೋ ಆಗ ಶುಕ್ಲ ಪ್ರತಿಪತ್ ಪ್ರಾರಂಭವಾಗಿ ಆವಿನದಿಂದ ಕಲೆಯು ಕ್ರಮವಾಗಿ ವೃದ್ಧಿಯನ್ನೈದುತ್ತಾ ಬರುವುದು.

೯೩. ಆಮೇಲೆ ಆ ಪ್ರತಿಪತ್ತಿನ ಎರಡನೆಯ ಭಾಗದಲ್ಲಿ ವೃದ್ಧಿಯನ್ನೈದದೆ ಶಂಕರನ ಜಡೆಯ ಚಂದ್ರಕಲೆಯಲ್ಲಿ ಹೋಗಿ ಸೇರಿದ್ದ ಜ್ಯೋತ್ಸ್ನೆಯು (ಪ್ರಕಾಶವು) ಬಂದು ಚಂದ್ರಮಂಡಲವನ್ನು ಸೇರಿಸುವುದು.

೯೪-೯೫. ಎಲೈ ದೇವತೆಗಳೇ ! ಕೃಷ್ಣಪಕ್ಷದಲ್ಲಿ ನೀವುಗಳು ಪಾನಮಾಡುವ ಅಮೃತವು ಶುಕ್ಲಪಕ್ಷದ ಬಿದಿಗೆಯಿಂದ ಹುಣ್ಣಿಮೆಯವರಿಗೆ ಚಂದ್ರಮಂಡಲವಲ್ಲಿ ದಿನ ದಿನವೂ ತುಂಬುವುದು. ಆ ಪ್ರಕಾಶ ಸಂಬಂಧದಿಂದ ಚಂದ್ರನು ಪ್ರತಿದಿನವೂ ತಾನೇ ಉದಯಕ್ಕೆ ಬರುವನು.

ಯಥಾ ದಿನೇ ದಿನೇ ಭಾಗಾಃ ಕ್ಷಯಂ ಯಾಂತಿ ತಥಾ ವಿಧೋಃ ।
ವೃದ್ಧಿಂ ಗಚ್ಛಂತ್ಯನುದಿನಂ ಶುಕ್ಲಪಕ್ಷೇಽನ್ವಹಂ ಸುರಾಃ ॥ ೯೬ ॥

ತೇಜೋಭಾಗಃ ಸೂರ್ಯಬಿಂಬಾತ್ಪುನರೇವ ಸಮೇಷ್ಯತಿ ।
ಪ್ರಯಾಸ್ಯತಿ ಕೃಷ್ಣಪಕ್ಷೇ ಯಥಾಭಾಗಕ್ರಮಂ ತಥಾ ॥ ೯೭ ॥

ಜ್ಯೋತ್ಸ್ನಾ ಹರಶಿರಶ್ಚಂದ್ರಾತ್ಪ್ರತ್ಯಹಂ ಪುನರೇಷ್ಯತಿ ।
ತೇಜೋಭಾಗಃ ಸೂರ್ಯಬಿಂಬಾದಮೃತಂ ವರ್ಷತಿ ಸ್ವಯಂ ॥ ೯೮ ॥

ಏವಂ ವೃದ್ಧಿಃ ಶುಕ್ಲಪಕ್ಷೇ ಸುಧಾಂಶೋಃ ಸಂಭವಿಷ್ಯತಿ ।
ಪಕ್ಷಯೋಃ ಶುಕ್ಲಕೃಷ್ಣತ್ವಂ ಚಂದ್ರವೃದ್ಧಿಕ್ಷಯಾದ್ಭವೇತ್ ॥ ೯೯ ॥

---

೯೬. ಕೃಷ್ಣಪಕ್ಷದಲ್ಲಿ ಚಂದ್ರನ ಕಲೆಗಳು ದಿನದಿನವೂ ಕ್ಷಯವನ್ನು ಹೇಗೆ ಹೊಂದುವುವೋ ಅದರಂತೆ ಶುಕ್ಲಪಕ್ಷದಲ್ಲಿಯೂ ಕಲೆಗಳು ದಿನದಿನವೂ ವೃದ್ಧಿಯನ್ನು ಹೊಂದುವುವು.

೯೭. ತೇಜಸ್ಸಿನ ಅಂಶವೂ ಸೂರ್ಯಬಿಂಬದಿಂದ ಶುಕ್ಲಪಕ್ಷದಲ್ಲಿ ಬಂದು ಸೇರುವುದು. ತಿರುಗಿ ಕೃಷ್ಣಪಕ್ಷದಲ್ಲಿ ಒಂದೊಂದು ಭಾಗವಾಗಿ ದಿನದಿನವೂ ಆ ತೇಜಸ್ಸು ಸೂರ್ಯಮಂಡಲವನ್ನೇ ಸೇರುವುದು.

೯೮. ಶುಕ್ಲಪಕ್ಷದಲ್ಲಿ ಶಂಕರನ ಜಡೆಯಲ್ಲಿರುವ ಚಂದ್ರಕಲೆಯಿಂದ ಜ್ಯೋತ್ಸ್ನೆಯು ಪ್ರತಿದಿನವೂ ಚಂದ್ರಮಂಡಲವನ್ನು ಬಂದು ಸೇರುವುದು. ಸೂರ್ಯಮಂಡಲದಿಂದ ತೇಜಸ್ಸಿನ ಅಂಶವು ಬಂದು ತಾನೇ ಅಮೃತವನ್ನು ಕಿರಣಗಳ ಮೂಲಕ ಸುರಿಸುವುದು.

೯೯. ಈರೀತಿಯಲ್ಲಿ ಶುಕ್ಲಪಕ್ಷದಲ್ಲಿ ಚಂದ್ರನು ವೃದ್ಧಿಯನ್ನು ಹೊಂದುವನು. ಚಂದ್ರನು ವೃದ್ಧಿಹೊಂದುವಪಕ್ಷಕ್ಕೆ ಶುಕ್ಲಪಕ್ಷವೆಂದೂ, ಕ್ಷಯವನ್ನು ಹೊಂದುವ ಪಕ್ಷಕ್ಕೆ ಕೃಷ್ಣಪಕ್ಷವೆಂದೂ ಹೆಸರಾಯಿತು.

ಯಾವತ್ಕಾಲೇನ ಯೋ ಭಾಗಃ ಕ್ಷಯಂ ವೃದ್ಧಿಂ ಚ ಯಾಸ್ಯತಿ ।
ತಾವತ್ಕಾಲಮಭಿವ್ಯಾಪ್ಯ ತಿಥಿಃ ಸ್ಥಾಸ್ಯತಿ ಸಾ ಪುನಃ ॥ ೧೦೦ ॥

ಚಿರೇಣ ವೃದ್ಧಿರ್ಯದಿ ವಾ ಕ್ಷಯೋ ವಾ
ದ್ರುತೇನ ವೃದ್ಧಿರ್ಯದಿ ವಾ ಕ್ಷಯೋ ವಾ ॥
ದ್ರುತಾತ್ತಿಥೀನಾಂ ತು ಸದಾ ಕ್ಷಯಃ ಸ್ಯಾ
ಚ್ಚಿರಸ್ತು ವೃದ್ಧಿಸ್ತಿಥಿಷು ಪ್ರವೇಶೇ ॥ ೧೦೧ ॥

ಹವ್ಯಂ ಕವ್ಯಂ ಚ ಚಂದ್ರೇಣ ವಿನಾ ನ ಸಂಭವಿಷ್ಯತಿ ।
ತಸ್ಮಾತ್ತಯೋಃ ಪ್ರವೃದ್ಧ್ಯರ್ಥಂ ಚಂದ್ರಂ ರಕ್ಷಂತು ದೇವತಾಃ ॥ ೧೦೨ ॥

ಆಶ್ವಾಸನೀಯಃ ಶುಭ್ರಾಂಶುಃ ಕಲಾಶೇಷೋಽನುಮಾಸತಃ ।
ಅಮಾವಾಸ್ಯಾಪರಾಹ್ಣೇ ತು ಪಿತೃಭೀ ರೋಹಿಣೀಗೃಹೇ ॥ ೧೦೩ ॥

---

೧೦೦. ಎಷ್ಟುಕಾಲ ಪರ್ಯಂತರ ಚಂದ್ರಕಲೆಯು ವೃದ್ಧಿಯನ್ನಾಗಲೀ, ಕ್ಷಯವನ್ನಾಗಲೀ ಹೊಂದುವುದೋ ಅಲ್ಲಿಯವರೆವಿಗೆ ಆ ತಿಥಿಯು ಇರುವುದು.

೧೦೧. ಕಲೆಯ ವೃದ್ಧಿಯು ಬಹಳಕಾಲವಾದರೆ ಆ ತಿಥಿಯು ವೃದ್ಧಿಯಾಗುವುದು. ಅದರಂತೆ ಕಲೆಯ ಕ್ಷಯವೂ, ಹೆಚ್ಚುಕಾಲವಾದರೆ ಆ ತಿಥಿಯೂ ಹಾಗೆಯೇ ಕ್ಷಯವನ್ನು ಹೊಂದುವುದು ಮತ್ತು ವೃದ್ಧಿಯು ಸ್ವಲ್ಪಹೊತ್ತಿನವರೆಗೆ ಇದ್ದರೆ ಆ ತಿಥಿಯೂ ಸ್ವಲ್ಪಹೊತ್ತು ವೃದ್ಧಿಯಿಂದಿರುವುದು. ಕ್ಷಯವು ಸ್ವಲ್ಪಹೊತ್ತಿನವರೆಗೆ ಇದ್ದರೆ ತಿಥಿಯೂ ಸ್ವಲ್ಪಹೊತ್ತಿನಲ್ಲಿಯೇ ಕ್ಷಯಿಸುವುದು.

೧೦೨. ಯಜ್ಞಗಳಲ್ಲಿ ಕೊಡುವ ಹವಿರ್ಭಾಗವೂ, ಶ್ರಾದ್ಧದಲ್ಲಿ ಕೊಡುವ ಕವ್ಯವೂ ಚಂದ್ರನಿಲ್ಲದಿದ್ದರೆ ಆಗುವುದಿಲ್ಲ. ಆದುದರಿಂದ ಎಲೈ ದೇವತೆಗಳೇ! ನೀವು ಈ ಚಂದ್ರನನ್ನು ರಕ್ಷಿಸಬೇಕು.

೧೦೩. ಪ್ರತಿ ಮಾಸದಲ್ಲಿಯೂ ಅಮಾವಾಸ್ಯೆಯ ಅಪರಾಹ್ಣಕಾಲದಲ್ಲಿ ಒಂದೇ ಕಲೆಯುಳ್ಳ ಮತ್ತು ರೋಹಿಣಿಯ ಮನೆಯಲ್ಲಿರುವ ಚಂದ್ರನನ್ನು ಪಿತೃದೇವತೆಗಳು ಸಮಾಧಾನಗೊಳಿಸಬೇಕು.

ತಸ್ಯೈವಾಸ್ವಾದನಾತ್ಕವ್ಯಂ ವೃದ್ಧಿಂ ಯಾಸ್ಯತಿ ಚಾನ್ವಹಂ ।
ತೇನ ಕವ್ಯೇನ ಪಿತರಸ್ತೃಪ್ತಿಂ ಯಾಸ್ಯಂತಿ ವೈ ಪರಾಂ ॥ ೧೦೪ ॥

॥ ಮಾರ್ಕಂಡೇಯ ಉವಾಚ ॥

ತತಃ ಸುರಗಣಾಃ ಸರ್ವೇ ಯಥೋಕ್ತಂ ವಿಧಿನಾ ತಥಾ ।
ಚಕ್ರುರ್ಲೋಕಹಿತಾರ್ಥಾಯ ಚಂದ್ರಸ್ಯ ಕ್ಷಯವೃದ್ಧಯೇ ॥ ೧೦೫ ॥

ಮಹಾದೇವೋಽಪಿ ಚಂದಾರ್ಧಂ ಸ್ವರೂಪಂ ಪರಮಾತ್ಮನಃ ।
ಜಗ್ರಾಹ ದೇವೈರ್ವಿಧಿನಾ ಶಿರಸಾ ಕ್ಷುಧಿತೋ ಭೃಶಂ ॥ ೧೦೬ ॥

ಯತ್ತೇಜಃ ಪರಮಂ ನಿತ್ಯಮಜಮವ್ಯಯಮಕ್ಷಯಂ ।
ತತ್ಸ್ವರೂಪಾ ಚಂದ್ರಕಲಾ ಶಾಪತಸ್ತು ಕ್ಷಯಂ ಗತಾ ॥ ೧೦೭ ॥

---

೧೦೪. ಆಗ ಚಂದ್ರನ ಕಿರಣಸಂಬಂಧದಿಂದ ಕವ್ಯವು ಎಂದರೆ ಪಿತೃಗಳ ಆಹಾರವು ವೃದ್ಧಿಯಾಗುವುದು. ಆ ಕವ್ಯದಿಂದ ಪಿತೃಗಳು ಹೆಚ್ಚಾದ ತೃಪ್ತಿಯನ್ನು ಹೊಂದುವರು.

೧೦೫. ಆಮೇಲೆ ದೇವತೆಗಳೆಲ್ಲರೂ ಬ್ರಹ್ಮನು ಹೇಳಿದಂತೆ ಲೋಕಕಲ್ಯಾಣಕ್ಕಾಗಿ ಚಂದ್ರನ ಕ್ಷಯ ಮತ್ತು ವೃದ್ಧಿಯಾಗುವುದಕ್ಕೆ ಅನುಕೂಲವಾಗಿ ತಮ್ಮತಮ್ಮ ಕಾರ್ಯವನ್ನು ನೆರವೇರಿಸಿದರು.

೧೦೬. ದೇವತೆಗಳ ಮತ್ತು ಬ್ರಹ್ಮನ ಪ್ರಾರ್ಥನೆಯನ್ನು ಮನ್ನಿಸಿ, ಶಂಕರನು ಪರಮಾತ್ಮನ ಸ್ವರೂಪವಾದ ಚಂದ್ರನ ಅರ್ಧವನ್ನು ತನ್ನ ಜಟೆಯಲ್ಲಿ ಧರಿಸಿದನು.

೧೦೭. ಉತ್ಪತ್ತಿಯಿಲ್ಲದುದೂ, ವೃದ್ಧಿ ಮತ್ತು ಪರಿಣಾಮವಿಲ್ಲದುದೂ, ಕ್ಷಯವಿಲ್ಲದುದೂ ನಿತ್ಯವೂ, ಉತ್ಕೃಷ್ಟವೂ ಆದ ಯಾವ ಬ್ರಹ್ಮತೇಜಸ್ಸಿರುವುದೋ ಅದರ ಸ್ವರೂಪವೇ ಆ ಚಂದ್ರಕಲೆಯು. ಅದು ದಕ್ಷನ ಶಾಪದಿಂದ ಕ್ಷಯವನ್ನು ಹೊಂದಿತು.

ಪ್ರವಿಶಂತಿ ಯದಾ ಜ್ಯೋತಿರಾನಂದಮಜಮವ್ಯಯಂ ।
ಯೋಗಿನಸ್ತು ತದಾ ತೇಷಾಂ ಚಿಂತನಂ ಲೀನಮೇಷ್ಯತಿ ॥ ೧೦೬ ॥

ಮಹಾದೇವಶಿರಃಸಂಸ್ಥೇ ಲೀನೋ ವಿತ್ತೇ ಸುಧಾನಿಧೌ ।
ಚಂದ್ರದ್ವಾರಾ ಭವೇನ್ಮುಕ್ತಿರಿತ್ಯೇವಂ ವೈದೀಕೀ ಶ್ರುತಿಃ ॥ ೧೦೯ ॥

ಏತಜ್ಞಾತ್ವಾ ಮಹಾದೇವಃ ಕ್ಷಯವೃದ್ಧ್ಯೈ ವಿನಾ ಕೃತಂ ।
ಹಿತಾಯ ಸರ್ವಲೋಕಾನಾಂ ಜಗ್ರಾಹ ಶಿರಸಾ ವಿಧುಂ ॥ ೧೧೦ ॥

ಚಂದ್ರಜ್ಯೋತ್ಸ್ನಾಸಮಾಯೋಗಾದೌಷಧ್ಯೋ ಯಾಂತಿ ವೃದ್ಧಯೇ ।
ಸರ್ವೌಷಧೀಷು ವೃದ್ಧಾಸು ಪ್ರವರ್ತಂತೇ ತತೋಽಧ್ವರಾಃ ॥ ೧೧೧ ॥

ಅಧ್ವರೇಷು ಪ್ರವೃತ್ತೇಷು ಸ್ವಾನ್ಸ್ವಾನ್ಭಾಗಾಂಸ್ತು ದೇವತಾಃ ।
ಪರಿಗೃಹ್ಣಂತಿ ಪಿತರಸ್ತಥಾ ಕವ್ಯಾನಿ ಭೂರಿಶಃ ॥ ೧೧೨ ॥

---

೧೦೬. ಆನಂದಸ್ವರೂಪವೂ, ನಾಶವಿಲ್ಲದ್ದೂ, ಯಾವ ವಿಕಾರವಿಲ್ಲದ್ದೂ, ಉತ್ಕೃಷ್ಟವಾದದ್ದೂ ಆದ ಆ ಬ್ರಹ್ಮಜ್ಯೋತಿಸ್ಸನ್ನು ಯಾವಾಗ ಯೋಗಿಗಳು ಪ್ರವೇಶಿಸುವರೋ ಆಗ ಅವರ ಚಿಂತೆಯೆಲ್ಲಾ ದೂರವಾಗುವುದು.

೧೦೯. ಶ್ರೀ ಶಂಕರನ ಜಟೆಯಲ್ಲಿ ಪ್ರಸಿದ್ಧವಾಗಿರುವ ಚಂದ್ರಕಲೆಯನ್ನು ಯೋಗಿಯು (ಯೋಗಸಾಧನೆಯಿಂದ) ಪ್ರವೇಶಿಸಿದರೆ ಅವನಿಗೆ ಮುಂದೆ ಚಂದ್ರನ ದ್ವಾರಾ ಮುಕ್ತಿಯಾಗುವುದೆಂದು ಶ್ರುತಿಯು ಸಾರುತ್ತಿರುವುದು.

೧೧೦. ಈ ವಿಷಯವನ್ನು ತಿಳಿದುಕೊಂಡು ಮಹಾದೇವನು ಕ್ಷಯ ಮತ್ತು ವೃದ್ಧಿಯಿಲ್ಲದಿರುವ ಚಂದ್ರನನ್ನು ಜಗತ್ತಿನ ಕ್ಷೇಮಕ್ಕಾಗಿ ತನ್ನ ಶಿರಸ್ಸಿನಲ್ಲಿ ಧರಿಸಿದನು.

೧೧೧. ಚಂದ್ರನ ಕಿರಣ ಸಂಪರ್ಕದಿಂದ ವನಸ್ಪತಿಗಳು ವೃದ್ಧಿಯನ್ನು ಹೊಂದುವುವು. ವನಸ್ಪತಿಗಳೆಲ್ಲಾ ವೃದ್ಧಿಯನ್ನು ಹೊಂದಲು ಮುಂದೆ ಯಜ್ಞಗಳು ನಡೆಯುವುವು.

೧೧೨—೧೧೩. ಯಜ್ಞಗಳು ಪ್ರಾರಂಭವಾಗಲು ತಮ್ಮತಮ್ಮ ಹವಿರ್ಭಾಗವನ್ನು ದೇವತೆಗಳು ತೆಗೆದುಕೊಳ್ಳುವರು. ಪಿತೃಗಳು ಕವ್ಯ (ಶ್ರಾದ್ಧಾದಿಗಳಲ್ಲಿ ಕೊಡುವ

ಅಮೃತಂ ಬ್ರಹ್ಮಣಾ ಸೃಷ್ಟಂ ಯದ್ದೇವೇಭ್ಯಃ ಪುರಾತನಂ ।
ತೇನ ತೃಪ್ಯಂತಿ ಹೀನಾ ಯೇ ಹವ್ಯಭಾಗೇನ ದೇವತಾಃ ॥ ೧೧೩ ॥

ಯಜ್ಞೇನಾऽऽಪ್ಯಾಯಿತಂ ತಚ್ಚ ಜ್ಯೋತ್ಸ್ನಾಭಿರ್ವೃದ್ಧಿಮೇತಿ ವೈ ।
ಯಜ್ಞಜ್ಯೋತ್ಸ್ನಾ ವಿನಾಭೂತಂ ತಚ್ಚ ಸ್ಯಾತ್ಕ್ಷೀಣಮನ್ಯಥಾ ॥ ೧೧೪ ॥

ಅತೋऽಮೃತಸ್ಯ ಯಜ್ಞಸ್ಯ ಚಂದ್ರಮಾಃ ಕಾರಣಂ ಸ್ವಯಂ ।
ಅತೋ ದಕ್ಷಸ್ಯ ಶಾಪಾತ್ತು ರಕ್ಷಾಯೈತಚ್ಚಿಕೀರ್ಷಿತಂ ॥ ೧೧೫ ॥

ಅದ್ಯಾಪಿ ಕೃಷ್ಣಪಕ್ಷೇ ತು ಸುಧಾಂಶುಃ ಪೀಯತೇ ಸುರೈಃ
ತೇಜಃ ಸೂರ್ಯಂ ಯಾತಿ ಶಂಭುಂ ಚಂದಾರ್ಧಂ ಜ್ಯೋತ್ಸ್ನಕಾ ತಥಾ
॥ ೧೧೬ ॥

ಪುನಶ್ಚ ಶುಕ್ಲಪಕ್ಷೇ ತು ಶೇಷೋದೇತಿ ಕಲಾ ತತಃ ।
ಜ್ಯೋತ್ಸ್ನಾ ದ್ವಿತೀಯಭಾಗಸ್ತು ತೇಜೋಭಾಗೋ ದ್ವಿತೀಯಕಃ ॥ ೧೧೭ ॥

ಹವಿರ್ಭಾಗ) ಗಳನ್ನು ಬೇಕಾದಂತೆ ತೆಗೆದುಕೊಳ್ಳುವರು. ಆ ಹವಿರ್ಭಾಗವು ಯಾವ ದೇವತೆಗಳಿಲ್ಲವೋ ಅವರು ಹಿಂದೆ ಬ್ರಹ್ಮನು ಸೃಷ್ಟಿಸಿದ ಅಮೃತವನ್ನು ಪಾನಮಾಡಿ ತೃಪ್ತಿಹೊಂದುವರು. ಆ ಅಮೃತವು ಯಜ್ಞದಿಂದಲೂ, ಚಂದ್ರಕಿರಣ ಸಂಪರ್ಕ ದಿಂದಲೂ ಅಭಿವೃದ್ಧಿಹೊಂದುವುದು; ಅವುಗಳ ಸಂಬಂಧವಿಲ್ಲದಿದ್ದರೆ ಆ ಅಮೃತವು ಕ್ಷೀಣವಾಗುವುದು. ಆದುದರಿಂದ ಅಮೃತಕ್ಕೂ ಯಜ್ಞಕ್ಕೂ ಚಂದ್ರನೇ ಕಾರಣವು.

೧೧೬-೧೧೭. ದಕ್ಷಬ್ರಹ್ಮನ ಶಾಪದಿಂದ ಅವನನ್ನು ರಕ್ಷಿಸಲು ಈ ವಿಧವಾದ ವೃದ್ಧಿಕ್ಷಯಗಳು ಉಂಟಾಗುವಂತೆ ಉಪಾಯವನ್ನು ಮಾಡಿದನು. ಈಗಲೂ ಕೂಡ ಕೃಷ್ಣಪಕ್ಷದಲ್ಲಿ ಚಂದ್ರನನ್ನು ದೇವತೆಗಳು ಪಾನಮಾಡುವರು. ಆಗ ಅವನ ತೇಜಸ್ಸು ಸೂರ್ಯನನ್ನು ಸೇರುವುದು. ಶಂಕರನ ಜಟೆಯಲ್ಲಿರುವ ಚಂದ್ರಕಲೆಯನ್ನು ಜ್ಯೋತ್ಸ್ನೆ ಸೇರುವುದು. ತಿರುಗಿ ಶುಕ್ಲಪಕ್ಷದ ಪ್ರತಿಪತ್ತಿನ ಮೊದಲನೆಯ ಭಾಗದಲ್ಲಿ ಉಳಿದ ಒಂದು ಕಲೆಯು ಉದಯಿಸುವುದು. ಶಂಕರನ ಚಂದ್ರಕಲೆಯಿಂದ ಜ್ಯೋತ್ಸ್ನೆಯ ಎರಡನೆಯ ಭಾಗವೂ ಸೂರ್ಯನಿಂದ ತೇಜಸ್ಸಿನ ಎರಡನೆಯ ಭಾಗವೂ ಬಂದು ಸೇರುವವು.

ಅನ್ಯೇಽತ್ಯುಗ್ರಶಿರಶ್ಚಂದ್ರಾತ್ಸೂರ್ಯಬಿಂಬಾದ್ಯಥಾಕ್ರಮಂ ।
ಕಲಾಃ ಷೋಡಶ ಚಂದ್ರಸ್ಯ ತತ್ರೈಕಾ ಶಂಭುಶೇಖರೇ ॥ ೧೧೪ ॥

ಸಿತಾಽಸಿತಾವುಭೌ ಪಕ್ಷೌ ಶೇಷಾಣಾಮುದಯಕ್ಷಯೌ ।
ಇತಿ ವಃ ಸರ್ವಮಾಖ್ಯಾತಂ ವಿಭಕ್ತಶ್ಚಂದ್ರಮಾ ಯಥಾ ॥ ೧೧೫ ॥

ಬ್ರಹ್ಮಣಾ ಪರ್ವತಶ್ರೇಷ್ಠೇ ಯಥಾ ತಚ್ಚಂದ್ರಭಾಗತಃ ।
ಯಜ್ಞಭಾಗೇ ಸ್ಥಿತೇ ಯಸ್ಮಾದ್ದೇವಾನ್ನಮಕರೋದ್ವಿಧುಂ ॥ ೧೧೦ ॥

ಕವ್ಯೇ ಸ್ಥಿತೇಽಪಿ ಪಿತೃನ್ನಂ ತಿಥಿವೃದ್ಧಿಕ್ಷಯೋ ಯಥಾ ।
ಇದಂ ಪುಣ್ಯತಮಾಖ್ಯಾನಂ ಯಃ ಶೃಣೋತಿ ಸಕೃನ್ನರಃ ॥ ೧೧೧ ॥

ರಾಜಯಕ್ಷ್ಮಾ ತಸ್ಯ ಕುಲೇ ನ ಕದಾಚಿದ್ಭವಿಷ್ಯತಿ ।
ಯಕ್ಷ್ಮಣಾ ಪರಿಭೂತೋ ಯಃ ಶೃಣೋತಿ ವಚನಂ ವಿಧೇಃ ॥ ೧೧೨ ॥

೧೧೪-೧೧೫. ಭಾಗಗಳು ದಿನದಿನವೂ ಕ್ರಮವಾಗಿ ಶಂಕರನ ಜಟಿಯ ಚಂದ್ರನಿಂದಲೂ, ಸೂರ್ಯಬಿಂಬದಿಂದಲೂ, ಬಂದು ಚಂದ್ರನನ್ನು ಸೇರುವುವು. ಹಿಂದೆ ಹೇಳಿದಂತೆ ಚಂದ್ರನ ಹದಿನಾರು ಕಲೆಗಳಲ್ಲಿ ಒಂದು ಶಂಕರನ ಜಟಿಯಲ್ಲಿರುವುದು. ಉಳಿದ ಹದಿನೈದು ಕಲೆಗಳು ಶುಕ್ಲ ಮತ್ತು ಕೃಷ್ಣಪಕ್ಷಗಳಲ್ಲಿ ಕ್ರಮವಾಗಿ ವೃದ್ಧಿ ಮತ್ತು ಕ್ಷಯವನ್ನು ಹೊಂದುವವು.

೧೧೬-೧೧೭. ಎಲೈ ಮುನಿಗಳೇ! ಈರೀತಿಯಾಗಿ ಚಂದ್ರನು ವಿಭಾಗ ಹೊಂದಿದ ಕ್ರಮವೇ ಮೊದಲಾದ ನೀವು ಕೇಳಿದುದೆಲ್ಲವನ್ನೂ ಹೇಳಿದುದಾಯ್ತು. ಹವಿರ್ಭಾಗವಿರುತ್ತಿರಲು ಚಂದ್ರಭಾಗಗಿರಿಯಲ್ಲಿ ಬ್ರಹ್ಮನು ಚಂದ್ರನನ್ನು ವಿಭಾಗಿಸಿ ದೇವತೆಗಳಿಗೆ ಆಹಾರವನ್ನೇಕೆ ಕಲ್ಪಿಸಿದನು ? ಶ್ರಾದ್ಧದಲ್ಲಿಯ ಕವಿರ್ಭಾಗವಿರುವ ಪಿತೃಗಳಿಗೆ ಆಹಾರವನ್ನಾಗಿ ಚಂದ್ರನನ್ನೇಕೆ ಮಾಡಿದನು ? ಮತ್ತು ತಿಥಿಯ ವೃದ್ಧಿ ಕ್ಷಯಗಳು ಹೇಗಾಗುತ್ತವೆ ಎಂಬ ನಿಮ್ಮ ಸಂಶಯಗಳನ್ನೂ ಪರಿಹರಿಸಿರುವೆನು.

೧೧೨. ಅತ್ಯಂತ ಪವಿತ್ರವಾದ ಈ ಕಥೆಯನ್ನು ಒಮ್ಮೆಯಾದರೂ ಯಾವನು ಕೇಳುವನೋ ಅವನ ವಂಶದಲ್ಲಿಯೇ ಕ್ಷಯರೋಗವು ಸಂಭವಿಸುವುದಿಲ್ಲ. ಕ್ಷಯರೋಗ

ನ ಚಿರಾದ್ಯಕ್ಷ್ಮಣಾ ಯುಕ್ತಃ ಸ ಭವೇನ್ನರಸತ್ತಮಃ ।
ಇದಂ ಸ್ವಸ್ತ್ಯಯನಂ ಪುಣ್ಯಂ ಗುಹ್ಯಾದ್ಗುಹ್ಯತಮಂ ಶುಭಂ ॥ ೧೨೩ ॥

ಯಃ ಶೃಣೋತ್ಯೇಕಚಿತ್ತಃ ಸನ್ನ್ಸ ಮಹಾಪುಣ್ಯಭಾಗ್ಭವೇತ್ ।

॥ ಇತಿ ಶ್ರೀ ಕಾಲಿಕಾಪುರಾಣೇ ಏಕವಿಂಶೋಽಧ್ಯಾಯಃ ॥

ದಿಂದ ಯಾವನು ಪೀಡಿಸಲ್ಪಡುತ್ತಿರುವನೋ ಬ್ರಹ್ಮನು ಹೇಳಿದ ಈ ವಾಕ್ಯವನ್ನು ಅವನು ಕೇಳಿದುದೇ ಆದರೆ, ಜಾಗ್ರತೆಯಾಗಿ ಕ್ಷಯರೋಗದಿಂದ ಬಿಡಲ್ಪಡುವನು.

೧೨೩. ಮಂಗಳಕರವೂ, ಪವಿತ್ರವೂ ಅತ್ಯಂತ ರಹಸ್ಯವೂ ಆದ ಈ ಇತಿಹಾಸವನ್ನು ಯಾವನು ಏಕಾಗ್ರಮನಸ್ಸಿನಿಂದ ಕೇಳುವನೋ ಆ ಮನುಜನು ಅತ್ಯಂತ ಪುಣ್ಯಕ್ಕೆ ಪಾತ್ರನಾಗುವನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಅಥ ಶ್ರೀ ಕಾಲಿಕಾಪುರಾಣೇ ದ್ವಾವಿಂಶೋಽಧ್ಯಾಯಃ ॥

ಇಪ್ಪತ್ತೆರಡನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ಯತ್ರ ದೇವಸಭಾ ಭೂತಾ ಸಾನೌ ತಸ್ಯ ಮಹಾಗಿರೇಃ ।
ತತ್ರ ಜಾತಾ ದೇವನದೀ ಸೀತಾಖ್ಯಾ ವಚನಾದ್ವಿಧೇಃ ॥ ೧ ॥

ಸ್ನಾಪಯಿತ್ವಾ ಯದಾ ಚಂದ್ರಂ ಸೀತಾತೋಯೈರ್ಮನೋಹರೈಃ ।
ಚಂದ್ರಂ ಪಪುರ್ಬ್ರಹ್ಮವಾಕ್ಯಾತ್ಸರ್ವೇ ತೇ ತ್ರಿದಿವೌಕಸಃ ॥ ೨ ॥

॥ ಇಪ್ಪತ್ತೆರಡನೆಯ ಅಧ್ಯಾಯವು ॥

೧. ಮಾರ್ಕಂಡೇಯಮುನಿಯು ಹೇಳಲುಪಕ್ರಮಿಸಿದನು:-ದೇವತೆಗಳೆಲ್ಲರೂ ಚಂದ್ರನನ್ನು ವೃದ್ಧಿಗೊಳಿಸಲು ಸರ್ವಶ್ರೇಷ್ಠವಾದ ಚಂದ್ರಭಾಗಗಿರಿಯ ಯಾವ ತಪ್ಪಲಿನಲ್ಲಿ ಸೇರಿದ್ದರೋ ಅಲ್ಲಿ ಬ್ರಹ್ಮನಾಜ್ಞೆಯಿಂದ ಸೀತಾ ಎಂಬ ನದಿಯು ಉತ್ಪನ್ನವಾಯಿತು.

೨. ದೇವತೆಗಳು ಬ್ರಹ್ಮನ ಮಾತಿನಂತೆ ಆ ಸೀತಾನದಿಯ ಮನೋಹರವಾದ ಜಲದಲ್ಲಿ ಚಂದ್ರನನ್ನು ಸ್ನಾನಮಾಡಿಸಿ ಅವನಲ್ಲಿದ್ದ ಅಮೃತವನ್ನು ಪಾನಮಾಡಿದರು.

ತದಾ ಸೀತಾಜಲಂ ಚಂದ್ರಸ್ನಾನಯೋಗಾಚ್ಚ ಸಾಮೃತಂ ।
ಭೂತ್ವಾ ನಿಪತಿತಂ ತಸ್ಮಿನ್ ಬೃಹಲ್ಲೋಹಿತಸಂಜ್ಞಕೇ ॥ ೩ ॥

ತದ್ವಿವೃದ್ಧಂ ತದಾ ತೋಯಂ ತಸ್ಮಿನ್ಸರಸಿ ನೋ ಮುಮೌ ।
ತದ್ದದರ್ಶ ಸ್ವಯಂ ಬ್ರಹ್ಮಾ ವಿವೃದ್ಧಂ ಸಾಮೃತಂ ಜಲಂ ॥ ೪ ॥

ತದ್ದರ್ಶನಾಜ್ಜಲಾತ್ತಸ್ಮಾದುತ್ಥಿತಾ ಕನ್ಯಕೋತ್ತಮಾ ।
ಚಂದ್ರಭಾಗೇತಿ ತನ್ನಾಮ ವಿಧಿಶ್ಚಕ್ರೇ ಸ್ವಯಂ ತತಃ ॥ ೫ ॥

ಭಾರ್ಯಾರ್ಥೇ ಸಾಗರಸ್ತಾಂ ತು ಜಗ್ರಾಹ ಬ್ರಹ್ಮಸಂಮತೇ ।
ತಯೈವಾಧಿಷ್ಠಿತಂ ತೋಯಂ ಗದಾಗ್ರೇಣ ನಿಶಾಪತಿಃ ॥ ೬ ॥

ನಿರ್ಭಿದ್ಯ ಪಶ್ಚಿಮೇ ಪಾರ್ಶ್ವೇ ಗಿರಿಂ ತಂ ಸಮುವಾಹಯತ್
ತಸ್ಯಾಮೃತಜಲಂ ಭಿತ್ವಾ ಬೃಹಲ್ಲೋಹಿತನಾಮಕಂ ॥ ೭ ॥

---

೩. ಚಂದ್ರನು ತನ್ನಲ್ಲಿ ಸ್ನಾನಮಾಡಿದ ಪ್ರಯುಕ್ತ ಆ ಸೀತಾನದಿಯ ಜಲವು ಅಮೃತವುಳ್ಳದುದಾಗಿ ಬೃಹಲ್ಲೋಹಿತವೆಂಬ ಸರೋವರದಲ್ಲಿ ಹರಿದುಹೋಗಿ ಬಿದ್ದಿತು.

೪-೫. ಆ ಸರೋವರದಲ್ಲಿ ಆ ಸೀತಾನದಿಯ ನೀರು ತುಂಬಿಹೋದುದರಿಂದ ಸರಸ್ಸು ಹಿಡಿಸದೆ ಹೋಯಿತು. ಆಗ ಉಕ್ಕಿ ಹರಿಯುತ್ತಲಿರುವ ಅಮೃತಮಯವಾದ ಆ ಜಲವನ್ನು ಬ್ರಹ್ಮನು ನೋಡಿದುದರಿಂದ, ಅದರಿಂದ ಸುಂದರಿಯಾದ ಕನ್ನಿಕೆಯೊಬ್ಬಳು ಜನಿಸಿದಳು. ಬ್ರಹ್ಮನು ಅವಳಿಗೆ ಚಂದ್ರಭಾಗಾ ಎಂದು ಹೆಸರಿಟ್ಟನು. ಬ್ರಹ್ಮನ ಅನುಮತಿಯಂತೆ ಸಮುದ್ರನು ಆ ಚಂದ್ರಭಾಗೆಯನ್ನು ಪತ್ನಿಯನ್ನಾಗಿ ಸ್ವೀಕರಿಸಿದನು.

೬. ಆ ಚಂದ್ರಭಾಗೆ ಇರತಕ್ಕ ಜಲವನ್ನು ಚಂದ್ರನು ತನ್ನ ಕಿರಣಸಂಪರ್ಕದಿಂದ ಅಲ್ಲಿಂದ ಹೊರಡಿಸಿ ಆ ಪರ್ವತದ ಪಶ್ಚಿಮಭಾಗವನ್ನು ಭೇದಿಸಿಕೊಂಡು ಹರಿಯುವಂತೆ ಮಾಡಿದನು.

೭. ಹೀಗೆ ಆ ಸೀತಾನದಿಯ ಅಮೃತಮಯವಾದ ಜಲವು ಬೃಹಲ್ಲೋಹಿತವೆಂಬ ಸರೋವರವನ್ನು ಒಡೆದುಕೊಂಡು ಸಮುದ್ರಕ್ಕೆ ಹರಿದುಹೋಯಿತು. ಅದೇ ಚಂದ್ರಭಾಗಾನದಿಯು.

ಕಾಸಾರಂ ಸಾಗರಂ ಯಾತಂ ಚಂದ್ರಭಾಗಾ ನದೀ ತು ಸಾ ।
ಸಾಗರೋಽಪಿ ತದಾ ಭಾರ್ಯಾಂ ಚಂದ್ರಭಾಗಾಂ ಮಹಾನದೀಂ ॥ ೪ ॥

ತೇನ ತೋಯಪ್ರವಾಹೇಣ ನಿನಾಯ ಭವನಂ ಸ್ವಕಂ ।
ಏವಂ ತಸ್ಮಿಂತ್ಸಮುತ್ಪನ್ನಾ ಚಂದ್ರಭಾಗಾಽಭವಾ ನದೀ ॥ ೯ ॥

ಚಂದ್ರಭಾಗೇ ಮಹಾಶೈಲೇ ಗುಣೈರ್ಗಂಗಾಸಮಾ ಸದಾ ।
ನದ್ಯಶ್ಚ ಪರ್ವತಾಃ ಸರ್ವೇ ದ್ವಿರೂಪಾಶ್ಚ ಸ್ವಭಾವತಃ ॥ ೧೦ ॥

ತೋಯಂ ನದೀನಾಂ ರೂಪಂ ತು ಶರೀರಮಪರಂ ತಥಾ ।
ಸ್ಥಾವರಂ ಪರ್ವತಾನಾಂ ತು ರೂಪಂ ಕಾಯಂ ತಥಾಪರಂ ॥ ೧೧ ॥

ಶುಕ್ತೀನಾಮಥ ಕಂಬೂನಾಂ ಯಥೈವಾಂತರ್ಗತಾ ತನುಃ ।
ಬಹಿರಸ್ಥಿ ಸ್ವರೂಪಂ ತು ಸರ್ವದೈವ ಪ್ರವರ್ತತೇ ॥ ೧೨ ॥

---

೮. ಸಮುದ್ರನೂ ಸಹ ಮಹಾನದಿಯಾದ ಚಂದ್ರಭಾಗೆಯೆಂಬ ತನ್ನ ಹೆಂಡತಿಯನ್ನು ಅದರ ಜಲಪ್ರವಾಹದ ಮೂಲಕ ತನ್ನ ಮನೆಗೆ ಕರೆದೊಯ್ದನು.

೯. ಗುಣಗಳಲ್ಲಿ ಗಂಗಾನದಿಗೆ ಸಮಾನವಾದ ಆ ಚಂದ್ರಭಾಗಾನದಿಯು ಚಂದ್ರಭಾಗಮಹಾಪರ್ವತದಲ್ಲಿ ಉತ್ಪನ್ನವಾಯಿತು.

೧೦. ನದಿಗಳಿಗೂ, ಬೆಟ್ಟಗಳಿಗೂ ಸ್ವಭಾವವಾಗಿ ಎರಡು ರೂಪಗಳಿರುವುವು. ಜಲವು ನದಿಗೆ ಹೊರಗಿನ ರೂಪವು. ಒಳಗೆ ಇನ್ನೊಂದು ರೂಪವಿರುವುದು.

೧೧-೧೨. ಪರ್ವತಗಳಿಗೆ ಹೊರಗೆ ಸ್ಥಿರವಾದ ರೂಪವಿರುವಂತೆಯೇ ಒಳಗೂ ಒಂದು ರೂಪವು ಇರುವುದು. ಹೇಗೆಂದರೆ, ಕಪ್ಪೆಚಿಪ್ಪು, ಶಂಖ ಇವುಗಳಿಗೆ ಹೊರಗೆ ಘಟ್ಟಿಯಾದ ಆವರಣವೂ, ಒಳಗೆ ಮೃದುವಾದ ಶರೀರವೂ ಇರುವಂತೆಯೇ ಪರ್ವತಗಳಿಗೆ ಹೊರಗೆ ಸ್ಥಾವರಶರೀರವೂ, ಒಳಗೆ ಮೃದುಶರೀರವೂ ಯಾವಾಗಲೂ ಇರುವವು.

ಏವಂ ಜಲಂ ಸ್ಥಾವರಂ ತು ನದೀಪರ್ವತಯೋಸ್ತದಾ ।
ಆಂತರ್ಗಸಿತಕಾಯಸ್ತು ಸತತಂ ಸೋಪಪದ್ಯತೇ ॥ ೧೩ ॥

ಆಪ್ಯಾಯ್ಯತೇ ಸ್ಥಾವರೇಣ ಶರೀರಂ ಪರ್ವತಸ್ಯ ತು ।
ತಥಾ ನದೀನಾಂ ಕಾಯಸ್ತು ತೋಯೇನಾಪ್ಯಾಯ್ಯತೇ ಸದಾ ॥ ೧೪ ॥

ನದೀನಾಂ ಕಾಮರೂಪಿತ್ವಂ ಪರ್ವತಾನಾಂ ತಥೈವ ಚ ।
ಜಗತ್ಸ್ಥಿತ್ಯೈ ಪುರಾ ವಿಷ್ಣುಃ ಕಲ್ಪಯಾಮಾಸ ಯತ್ನತಃ ॥ ೧೫ ॥

ತೋಯಹಾನೌ ನದೀದುಃಖಂ ಜಾಯತೇ ಸತತಂ ಸುರಾಃ ।
ವಿಶೀರ್ಣೇ ಸ್ಥಾವರೇ ದುಃಖಂ ಜಾಯತೇ ಗಿರಿಕಾಯಜಂ ॥ ೧೬ ॥

---

೧೩. ಇದರಂತೆಯೇ ಜಲವು ನದಿಗೆ ಹೊರಗಿನ ಸ್ಥಿರವಾದ ಶರೀರವು. ನದೀ ಮತ್ತು ಪರ್ವತಗಳಿಗೆ ಒಳಗೆ ಬೇರೊಂದು ಶರೀರವಿದ್ದೇ ಇರುವುದು. ಅದು ಯಾರಿಗೂ ಕಾಣಿಸುವುದಿಲ್ಲ.

೧೪. ಸ್ಥಿರವಾದ ಹೊರಗಿನ ಶರೀರದಿಂದ ಪರ್ವತದ ಒಳಶರೀರಕ್ಕೆ ಸುಖ ದುಃಖಾನುಭವಗಳುಂಟಾಗುವುವು. ಅದರಂತೆಯೇ ನದಿಗಳಿಗೂ ಹೊರಗಿನ ಶರೀರ ವಾದ ಜಲದಿಂದ ಒಳಶರೀರಕ್ಕೆ ಸುಖದುಃಖಾನುಭವಗಳುಂಟಾಗುವುವು.

೧೫. ನದಿಗಳಿಗೂ, ಪರ್ವತಗಳಿಗೂ ತಮಗೆ ಇಚ್ಛೆಬಂದಾಗ ಬೇಕಾದಂತೆ ಶರೀರವನ್ನು ಧರಿಸಲು ಶಕ್ತಿಯಿರುವುದು. ಇದನ್ನು ವಿಷ್ಣುವು ಪೂರ್ವದಲ್ಲಿ ಜಗತ್ತಿನ ರಕ್ಷಣೆಗಾಗಿ ಕಲ್ಪಿಸಿದನು.

೧೬. ನೀರು ಕಮ್ಮಿಯಾದರೆ ನದಿಗೆ ದುಃಖವುಂಟಾಗುವುದು. ಅದರಂತೆಯೇ ಪರ್ವತದ ಹೊರಗಿನ ಸ್ಥಾವರೂಪವನ್ನು ಭೇದಿಸಿದರೆ ಪರ್ವತಕ್ಕೆ ದುಃಖವುಂಟಾಗು ವುದು.

ತಸ್ಮಿನ್ಗಿರೌ ಚಂದ್ರಭಾಗೇ ಬೃಹಲ್ಲೋಹಿತತೀರಗಾಂ ।
ಸಂಧ್ಯಾಂ ದೃಷ್ಟ್ವಾಽಥ ಪಪ್ರಚ್ಛ ವಸಿಷ್ಠಃ ಸಾದರಂ ತದಾ ॥ ೧೭ ॥

॥ ವಸಿಷ್ಠ ಉವಾಚ ॥

ಕಮರ್ಥಮಾಗತಾ ಭದ್ರೇ ನಿರ್ಜನಂ ತ್ವಂ ಮಹೀಧರಂ ।
ಕಸ್ಯ ವಾ ತನಯಾ ಗೌರಿ ಕಂ ವಾ ತವ ಚಿಕೀರ್ಷಿತಂ ॥ ೧೮ ॥

ಏತದಿಚ್ಛಾಮ್ಯಹಂ ಶ್ರೋತುಂ ಯದಿ ಗುಹ್ಯಂ ನ ತೇ ಭವೇತ್ ।
ವದನಂ ಪೂರ್ಣಚಂದ್ರಾಭಂ ನಿಃಶ್ರೀಕಂ ವಾ ಕಥಂ ತವ ॥ ೧೯ ॥

॥ ಮಾರ್ಕಂಡೇಯ ಉವಾಚ ॥

ಏತಚ್ಛ್ರುತ್ವಾ ವಚಸ್ತಸ್ಯ ವಸಿಷ್ಠಸ್ಯ ಮಹಾತ್ಮನಃ ।
ದೃಷ್ಟ್ವಾ ಚ ತಂ ಮಹಾತ್ಮಾನಂ ಜ್ವಲಂತಮಿವ ಪಾವಕಂ ॥ ೨೦ ॥

---

೧೭. ಇಂತಹ ಆ ಚಂದ್ರಭಾಗಪರ್ವತದಲ್ಲಿ ಬೃಹಲ್ಲೋಹಿತಸರೋವರದ ತೀರದಲ್ಲಿರುವ ಸಂಧ್ಯೆಯನ್ನು ನೋಡಿ, ವಸಿಷ್ಠಮುನಿಯು ಅವಳನ್ನು ಕುರಿತು ಆದರ ಪೂರ್ವಕವಾಗಿ ಹೀಗೆ ಕೇಳಿದನು.

೧೮-೧೯. ವಸಿಷ್ಠಮುನಿಯಿಂತೆಂದನು:-ಎಲೌ ಮಂಗಳಸ್ವರೂಪಳೇ! ಜನ ಸುಳಿವೇ ಇಲ್ಲದಿರುವ ಈ ಪರ್ವತಕ್ಕೆ ಏನು ಕಾರ್ಯಾರ್ಥವಾಗಿ ಬಂದಿರುವೆ? ನೀನಾರ ಮಗಳು? ಇಲ್ಲಿ ನೀನು ಏನುಮಾಡಬೇಕೆಂದಿರುವೆ? ಇದೆಲ್ಲವನ್ನೂ ಕೇಳಿ ತಿಳಿದುಕೊಳ್ಳಬೇಕೆಂದಿರುವೆನು. ರಹಸ್ಯವಾದುದಲ್ಲವಾದರೆ ಹೇಳು. ಪೂರ್ಣಚಂದ್ರನಂತಿರುವ ಈ ನಿನ್ನ ಮುಖವು ಕಾಂತಿಯಿಲ್ಲದೆ ಬಾಡಿರುವುದೇಕೆ?

೨೦-೨೧. ಮಾರ್ಕಂಡೇಯಮುನಿಯು ಹೇಳಿದನು:— ಮಹಾತ್ಮನಾದ ವಸಿಷ್ಠನ ಈರೀತಿಯಾದ ಮಾತನ್ನು ಕೇಳಿ ಆ ಸಂಧ್ಯೆಯು ಮಹಾತ್ಮನೂ, ಜ್ವಲಿಸುತ್ತಿರುವ ಅಗ್ನಿಯಂತೆ ತೇಜಸ್ಸುಳ್ಳವನೂ, ಶರೀರವನ್ನು ಧರಿಸಿಬಂದ ಬ್ರಹ್ಮಚರ್ಯದಂತಿ

ಶರೀರಧೃಗ್ಬ್ರಹ್ಮಚರ್ಯಸದೃಶಂ ತಂ ಜಟಾಧರಂ ।
ಸಾದರಂ ಪ್ರಣಿಪತ್ಯಾಥ ಸಂಧ್ಯೋವಾಚ ತಪೋಧನಂ ॥ ೨೧ ॥

ಯದರ್ಥಮಾಗತಾ ಶೈಲಂ ಸಿದ್ಧಂ ತನ್ಮೇ ದ್ವಿಜೋತ್ತಮ ।
ತವ ದರ್ಶನಮಾತ್ರೇಣ ತನ್ಮೇ ಸೇತ್ಸ್ಯತಿ ನಾ ವಿಭೋ ॥ ೨೨ ॥

ತಪಃ ಕರ್ತುಮಹಂ ಬ್ರಹ್ಮನ್ನಿರ್ಜನಂ ಶೈಲಮಾಗತಾ ।
ಬ್ರಹ್ಮಣೋಽಹಂ ಮನೋಜಾತಾ ಸಂಧ್ಯಾನಾಮ್ನಾ ಚ ವಿಶ್ರುತಾ ॥ ೨೩ ॥

ನೋಪದೇಶಮಹಂ ಜಾನೇ ತಪಸೋ ಮುನಿಸತ್ತಮ ।
ಯದಿ ತೇ ಯುಜ್ಯತೇ ಗುಹ್ಯಂ ಮಾ ತ್ವಂ ಸಮುಪದೇಶಯ ॥ ೨೪ ॥

ಏತಚ್ಚಿಕೀರ್ಷಿತಂ ಗುಹ್ಯಂ ನಾನ್ಯತ್ಕಿಂಚನ ವಿದ್ಯತೇ ।
ಅಜ್ಞಾತ್ವಾ ತಪಸೋ ಭಾವಂ ತಪೋವನಸಮುಪಾಶ್ರಿತಾ ॥ ೨೫ ॥

ರುವವನೂ, ಜಟೆಯನ್ನು ಧರಿಸಿ ಮಹಾತಪಸ್ವಿಯಾದ ಆ ವಸಿಷ್ಠಮುನಿಯನ್ನು ನೋಡಿ, ಭಕ್ತಿಯಿಂದ ನಮಸ್ಕರಿಸಿ ಅವನನ್ನು ಕುರಿತು ಹೀಗೆ ಹೇಳಿದಳು.

೨೨—೨೫. ಓ ಬ್ರಾಹ್ಮಣೋತ್ತಮನೇ! ನಿನ್ನನ್ನು ನೋಡಿದ ಮಾತ್ರದಿಂದಲೇ ನಾನು ಈ ಪರ್ವತಕ್ಕೆ ಬಂದ ಕಾರ್ಯವು ನೆರವೇರಿದಂತಾಯಿತು. ತಪಸ್ಸನ್ನು ಮಾಡಲೋಸುಗ ಜನಸಂಚಾರವಿಲ್ಲದ ಈ ಪರ್ವತಕ್ಕೆ ಬಂದಿರುವೆನು. ನಾನು ಬ್ರಹ್ಮನ ಮನಸ್ಸಿನಿಂದ ಜನಿಸಿದವಳು. ಸಂಧ್ಯೆಯೆಂದು ನನ್ನ ಹೆಸರು. ಓ ಮುನಿಶ್ರೇಷ್ಠನೇ! ತಪಸ್ಸನ್ನು ಮಾಡುವ ಕ್ರಮವು ನನಗೆ ತಿಳಿಯದು. ನಿನಗೆ ಯುಕ್ತವಾಗಿ ತೋರಿದರೆ ಆ ತಪಸ್ಸನ್ನು ಮಾಡುವ ರಹಸ್ಯವನ್ನು ನನಗೆ ಉಪದೇಶಮಾಡು. ಇದೇ ನಾನು ಮಾಡಬೇಕೆಂದಿರುವ ರಹಸ್ಯಕಾರ್ಯವು, ಇನ್ನೇನೂ ಇಲ್ಲವು. ತಪಸ್ಸನ್ನು ಮಾಡುವ ಕ್ರಮವನ್ನೂ ತಿಳಿಯದೆ ತಪೋವನಕ್ಕೆ ಹೊರಟುಬಂದಿರುವೆನು. ಅದೇ ಚಿಂತೆಯಿಂದ ಪರಿತಪಿಸುತ್ತಿರುವೆನು ಎಂದು ನುಡಿದಳು.

॥ ಮಾರ್ಕಂಡೇಯ ಉವಾಚ ॥

ಆಕರ್ಣ್ಯ ತಸ್ಯಾ ವಚನಂ ವಸಿಷ್ಠೋ ಬ್ರಹ್ಮಣಃ ಸುತಃ ॥ ೨೬ ॥

ಸ್ವಯಂ ಸ ಸರ್ವತತ್ತ್ವಜ್ಞೋ ನಾನ್ಯತ್ಕಿಂಚನ ಪೃಷ್ಟವಾನ್ ।
ಅಥ ತಾಂ ನಿಯತಾತ್ಮಾನಂ ತಪಸೇಽತಿಧೃತೋದ್ಯಮಾಂ ॥ ೨೭ ॥

ವಸಿಷ್ಠೋ ಮಂತ್ರಯಾಂಚಕ್ರೇ ಗುರುವಚ್ಛಿಷ್ಯವತ್ತದಾ ॥ ೨೮ ॥

॥ ವಸಿಷ್ಠ ಉವಾಚ ॥

ಪರಮಂ ಯೋ ಮಹತ್ತತ್ತ್ವಂ ಪರಮಂ ಯೋ ಮಹತ್ತಪಃ ।
ಪರಮೋ ಯಃ ಸಮಾರಾಧ್ಯಃ ವಿಷ್ಣುರ್ಮನಸಿ ಧೀಯತಾಂ ॥ ೨೯ ॥

ಧರ್ಮಾರ್ಥಕಾಮಮೋಕ್ಷಾಣಾಂ ಯ ಏಕಸ್ತ್ವಧಿಕಾರಣಂ ।
ತಮೇಕಂ ಜಗತಾಮಾದ್ಯಂ ಭಜಸ್ವ ಪುರುಷೋತ್ತಮಂ ॥ ೩೦ ॥

೨೬—೨೮. ಮಾರ್ಕಂಡೇಯಮುನಿಯು ಹೇಳಿದನು :—ಆ ಸಂಧ್ಯೆಯ ಮಾತನ್ನು ಕೇಳಿ ಬ್ರಹ್ಮಪುತ್ರನಾದ ವಸಿಷ್ಠನು ಸ್ವಯಂ ಸರ್ವಜ್ಞನಾದುದರಿಂದ ಅವಳನ್ನು ಕುರಿತು ಮತ್ತೇನನ್ನೂ ಕೇಳಲಿಲ್ಲ. ಜಿತೇಂದ್ರಿಯಳಾಗಿಯೂ, ತಪಸ್ಸನ್ನು ಮಾಡಬೇಕೆಂದು ತುಂಬ ಆಸಕ್ತಿಯುಳ್ಳವಳಾಗಿಯೂ ಇರುವ ಆ ಸಂಧ್ಯೆಗೆ ಗುರುವು ಶಿಷ್ಯನಿಗೆ ಉಪದೇಶಿಸುವಂತೆ ಮಂತ್ರವನ್ನು ಉಪದೇಶಮಾಡಿದನು.

೨೯. ವಸಿಷ್ಠಮುನಿಯು ಹೇಳಿದನು :—ಸಮಸ್ತವಿಶ್ವದಲ್ಲಿಯೂ, ಮಹದಾದಿ ತತ್ತ್ವಸ್ವರೂಪಗಳಿಂದ ವ್ಯಾಪಿಸಿರುವವನೂ, ಮಹಾತಪಸ್ಸ್ವರೂಪನೂ, ಎಂದರೆ, ತಪೋನುಷ್ಠಾನದಿಂದ ತಿಳಿಯಲ್ಪಡುವ ಸ್ವರೂಪವುಳ್ಳವನೂ, ಆರಾಧಿಸಲ್ಪಡುವ ದೇವತೆಗಳಲ್ಲಿ ಅತ್ಯಂತ ಶ್ರೇಷ್ಠನೂ ಆದ ವಿಷ್ಣುವನ್ನು ಮನಸ್ಸಿನಲ್ಲಿ ಧ್ಯಾನಮಾಡು.

೩೦. ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧಪುರುಷಾರ್ಥಗಳ ಸಾಧನೆಗೆ ಮುಖ್ಯಕಾರಣನಾಗಿಯೂ, ಜಗತ್ತಿಗೆ ಮೊದಲಿನವನೂ, ಪುರುಷಶ್ರೇಷ್ಠನೂ, ಅದ್ವಿತೀಯನೂ ಆದ ಆ ವಿಷ್ಣುವನ್ನು ಸೇವಿಸು.

ಶಂಖಚಕ್ರಗದಾಪದ್ಮಧರಂ ಕಮಲಲೋಚನಂ ।
ಶುದ್ಧಸ್ಫಟಿಕಸಂಕಾಶಂ ಕೃಷ್ಣನೀಲಾಂಬುದಚ್ಛವಿಂ ॥ ೩೧ ॥

ಗರುಡೋಪರಿ ಶುಕ್ಲಾಬ್ಜೇ ಪದ್ಮಾಸನಗತಂ ಹರಿಂ ।
ಶ್ರೀವತ್ಸವಕ್ಷಸಂ ಶಾಂತಂ ವನಮಾಲಾಧರಂ ಪರಂ ॥ ೩೨ ॥

ಕೇಯೂರಕುಂಡಲಧರಂ ಕಿರೀಟಮುಕುಟೋಜ್ಜ್ವಲಂ ।
ನಿರಾಕಾರಂ ಜ್ಞಾನಗಮ್ಯಂ ಸಾಕಾರಂ ದೇಹಧಾರಿಣಾಂ ॥ ೩೩ ॥

ನಿತ್ಯಾನಂದಂ ನಿರಾಲಂಬಂ ಸೂರ್ಯಮಂಡಲಮಧ್ಯಗಂ ।
ಮಂತ್ರೇಣಾನೇನ ದೇವೇಶಂ ವಿಷ್ಣುಂ ಭಜ ಶುಭಾನನೇ ॥ ೩೪ ॥

೩೧—೩೪. ಆ ವಿಷ್ಣುವನ್ನು ಧ್ಯಾನಿಸುವ ಕ್ರಮವನ್ನು ಹೇಳುವೆನು ಕೇಳು :- ಆ ಮಹಾವಿಷ್ಣುವು ತನ್ನ ನಾಲ್ಕು ಕೈಗಳಲ್ಲಿಯೂ ಕ್ರಮವಾಗಿ ಶಂಖ, ಚಕ್ರ, ಗದಾ, ಪದ್ಮ ಇವುಗಳನ್ನು ಧರಿಸಿರುವನು. ಅವನ ಕಣ್ಣುಗಳು ಕಮಲದಂತೆ ಸುಂದರವಾಗಿರುವುವು. ಸ್ವಚ್ಛವಾದ ಸ್ಫಟಿಕದಂತೆ ಶರೀರಕಾಂತಿಯುಳ್ಳವನು ; ಕೆಲವೆಡೆಗಳಲ್ಲಿ ಎಂದರೆ ಕೃಷ್ಣಾವ್ಯವತಾರಗಳಲ್ಲಿ ನೀಲಮೇಘದಂತೆ ಕಪ್ಪಾದ ಕಾಂತಿಯುಳ್ಳವನು ; ಗರುಡನ ಮೇಲೆ ಬಿಳಿಯ ಕಮಲವನ್ನೇ ಆಸನವನ್ನಾಗಿಮಾಡಿ ಕುಳಿತಿರುವನು ; ಎದೆಯಲ್ಲಿ ಶ್ರೀವತ್ಸವನ್ನೂ, ವನಮಾಲಿಕೆಯನ್ನೂ ಧರಿಸಿ ಶೋಭಿಸುತ್ತಿರುವನು ; ಭುಜಗಳಲ್ಲಿ ಭುಜಕೀರ್ತಿ, ಕರ್ಣಗಳಲ್ಲಿ ಕುಂಡಲ, ಶಿರಸ್ಸಿನಲ್ಲಿ ರತ್ನಖಚಿತವಾದ ಕಿರೀಟ ಮೊದಲಾದ ಆಭರಣಗಳನ್ನು ಧರಿಸಿ ಪ್ರಕಾಶಿಸುತ್ತಿರುವನು ; ಈ ಪರತತ್ತ್ವಸ್ವರೂಪನಾದ ದೇವನಿಗೆ ಆಕಾರವಿಲ್ಲದಿದ್ದರೂ ಭಕ್ತರಾದ ದೇವಮನುಷ್ಯಾದಿಗಳು ಆರಾಧಿಸಲು ಅನುಕೂಲವಾಗುವಂತೆ ಮಂಗಳಕರವಾದ ಶರೀರವನ್ನು ಧರಿಸುವವನು ; ಯಾವಾಗಲೂ ಆನಂದಸ್ವರೂಪನು ; ಇವನು ಮತ್ತಾವ ವಸ್ತುವಿನ ಆಶ್ರಯವಿಲ್ಲದೆ ಸ್ವತಂತ್ರನಾಗಿರುವನು ; ಪ್ರತ್ಯಕ್ಷದೇವನಾದ ಸೂರ್ಯನಲ್ಲಿ ಅಂತರ್ಯಾಮಿಯಾಗಿ ನೆಲಸಿ, ಜಗತ್ತಿಗೆ ಮಂಗಳವನ್ನುಂಟುಮಾಡುವವನು. ಇಂತಹ ದೇವತೆಗಳಿಗೆ ಒಡೆಯನಾದ ವಿಷ್ಣುವನ್ನು " ಓಂ ನಮೋ ವಾಸುದೇವಾಯ ಓಂ " ಎಂಬ ಮಂತ್ರದಿಂದ ಯಾವಾಗಲೂ ಭಕ್ತಿಯಿಂದ ಭಜಿಸು.

ಓಂ ನಮೋ ವಾಸುದೇವಾಯ ಓಮಿತ್ಯಂತೇನ ಸಂತತಂ ।
ತಪಸ್ಯಾಮಾರಭೇನ್ನೀ ತತ್ಕೃತಾನ್ನಿಯಮಾಞ್ಛೃಣು ॥ ೩೫ ॥

ಸ್ನಾನಂ ಮೌನೇನ ಕರ್ತವ್ಯಂ ಮೌನೇನೈವ ತು ಪೂಜನಂ ।
ಷ್ಠಂಷೋಃ ಪರ್ಣಜಲಾಹಾರಂ ಪ್ರಥಮಂ ಷಷ್ಠಕಾಲಯೋಃ ॥ ೩೬ ॥

ತೃತೀಯೇ ಷಷ್ಠಕಾಲೇ ತು ಉಪವಾಸಪರೋ ಭವೇತ್ ।
ಏವಂ ತಪಃಸಮಾಪ್ತೌ ತು ಷಷ್ಠೇ ಕಾಲೇ ಕ್ರಿಯಾ ಭವೇತ್ ॥ ೩೭ ॥

ವೃಷ್ಣಿಸಲ್ಕಲವಾಸಾಶ್ಚ ಕಾಲೇ ಭೂಮಿಶಯಸ್ತಥಾ ।
ಏವಂ ಮೌನೀ ತಪಸ್ಯಾಖ್ಯಾ ವ್ರತಚರ್ಯಾ ಫಲಪ್ರದಾ ॥ ೩೮ ॥

ಏವಂ ತಪಃ ಸಮುದ್ದಿಶ್ಯ ಕಾಮಂ ಚಿಂತಯ ಮಾಧವಂ ।
ಸ ತೇ ಪ್ರಸನ್ನ ಇಷ್ಟಾರ್ಥಂ ನ ಚಿರಾದೇವ ದಾಸ್ಯತಿ ॥ ೩೯ ॥

---

೩೫. ತಪಸ್ಸನ್ನು ಯಾವರೀತಿ ಮಾಡಬೇಕು ಎಂಬುದನ್ನು ಹೇಳುವೆನು, ಕೇಳು :—ಸ್ನಾನವನ್ನು ಮೌನದಿಂದ ಮಾಡಬೇಕು. ಬಳಿಕ ಮೌನದಿಂದಲೇ ಪೂಜೆಯನ್ನೂ ಮಾಡಬೇಕು.

೩೬-೩೭. ಒಂದು ದಿನವನ್ನು ಎಂದರೆ ಹಗಲಿನ ಪ್ರಮಾಣವನ್ನು ಆರುಭಾಗವಾಗಿ ವಿಭಾಗಿಸಿದರೆ ಆಗುವ ಒಂದುಭಾಗಕ್ಕೆ ಷಷ್ಠಕಾಲವೆಂದು ಹೆಸರು. ಮೊದಲಿನ ಎರಡು ಷಷ್ಠಕಾಲಗಳಲ್ಲಿ ಕ್ರಮವಾಗಿ ಎಲೆಗಳನ್ನೂ, ಜಲವನ್ನೂ ಆಹಾರವನ್ನಾಗಿ ತೆಗೆದುಕೊಳ್ಳಬೇಕು. ಮೂರನೇ ಷಷ್ಠಕಾಲದಲ್ಲಿ ಆಹಾರವನ್ನು ತೆಗೆದುಕೊಳ್ಳದೆ ಉಪವಾಸವನ್ನೇ ಮಾಡಬೇಕು. ಈರೀತಿ ದಿನವನ್ನು ತಪಸ್ಸಿನ ಆಚರಣೆಯಿಂದ ಕಳೆದು ಅಂತ್ಯದಲ್ಲಿ ಬಹಿರ್ವ್ಯಾಪಾರಾದಿಗಳಲ್ಲಿ ತೊಡಗಬಹುದು.

೩೮. ತಪೋನುಷ್ಠಾನಕಾಲದಲ್ಲಿ ನಾರುಬಟ್ಟೆಗಳನ್ನು ಮಾತ್ರ ಉಡಬೇಕು. ಶಯ್ಯಾದಿಗಳನ್ನು ವರ್ಜಿಸಿ ಭೂಮಿಯ ಮೇಲೆಯೇ ಮಲಗಬೇಕು. ಈರೀತಿ ಮೌನವ್ರತದಿಂದ ತಪಸ್ಸನ್ನು ಆಚರಿಸಿದರೆ, ಫಲಪ್ರಾಪ್ತಿಯಾಗುವುದು.

೩೯. ಈರೀತಿಯಾಗಿ ತಪಸ್ಸನ್ನು ಆಚರಿಸುತ್ತಾ ವಿಷ್ಣುವನ್ನು ಭಕ್ತಿಯಿಂದ ಧ್ಯಾನಿಸು. ಅವನು ನಿನಗೆ ಪ್ರಸನ್ನನಾಗಿ ಬೇಗನೆ ನಿನ್ನ ಇಷ್ಟಾರ್ಥಗಳನ್ನು ಕೊಡುವನು.

॥ ಮಾರ್ಕಂಡೇಯ ಉವಾಚ ॥

ಉಪದಿಶ್ಯ ವಸಿಷ್ಠೋಽಥ ಸಂಧ್ಯಾಯೈ ತಪಸಃ ಕ್ರಿಯಾಂ ।
ತಾಮಾಭಾಷ್ಯ ಯಥಾನ್ಯಾಯಂ ತತ್ರೈವಾಂತರ್ದಧೇ ಮುನಿಃ ॥ ೪೦ ॥

ಸಂಧ್ಯಾಪಿ ತಪಸೋ ಭಾವಂ ಜ್ಞಾತ್ವಾ ಮೋದಮುವಾಪ್ಯ ಚ ।
ತಪಃ ಕರ್ತುಂ ಸಮಾರೇಭೇ ಬೃಹಲ್ಲೋಹಿತತೀರಗಾ ॥ ೪೧ ॥

ಯಥೋಕ್ತಂ ತು ವಸಿಷ್ಠೇನ ಮಂತ್ರಂ ತಪಸಿ ಸಾಧನಂ ।
ವ್ರತೇನ ತೇನ ಗೋವಿಂದಂ ಪೂಜಯಾಮಾಸ ಭಕ್ತಿತಃ ॥ ೪೨ ॥

ಏಕಾಂತಮನಸಸ್ತಸ್ಯಾಃ ಕುರ್ವಂತ್ಯಾಃ ಸುಮಹತ್ತಪಃ ।
ವಿಷ್ಣೌ ವಿನ್ಯಸ್ತಮನಸೋ ಗತಮೇಕಂ ಚತುರ್ಯುಗಂ ॥ ೪೩ ॥

---

೪೦. ಮಾರ್ಕಂಡೇಯಮುನಿಯು ಹೇಳಿದನು:— ಈರೀತಿ ಆ ಸಂಧ್ಯೆಗೆ ತಪಸ್ಸಿನ ಕ್ರಮವನ್ನು ಉಪದೇಶಮಾಡಿ, ಯಥೋಚಿತವಾಗಿ ತಿಳುವಳಿಕೆಯನ್ನೂ ಹೇಳಿ, ವಸಿಷ್ಠಮುನಿಯು ಅಲ್ಲಿಯೇ ಅಂತರ್ಧಾನನಾದನು.

೪೧. ಆ ಸಂಧ್ಯೆಯೂ ಸಹ ತಪಸ್ಸು ಮಾಡುವ ರೀತಿಯನ್ನು ತಿಳಿದು, ಸಂತೋಷಗೊಂಡು ಆ ಬೃಹಲ್ಲೋಹಿತಸರೋವರದ ತೀರದಲ್ಲಿ ತಪಸ್ಸನ್ನು ಮಾಡಲು ಪ್ರಾರಂಭಿಸಿದಳು.

೪೨. ವಸಿಷ್ಠನು ಹೇಳಿದ ರೀತಿಯಲ್ಲಿಯೇ ವ್ರತಾಚರಣೆಯನ್ನು ಮಾಡುತ್ತಾ, ತಪಸ್ಸಿಗೆ ಸಾಧನಾಭೂತವಾದ " ಓಂ ನಮೋ ವಾಸುದೇವಾಯ " ಎಂಬ ಮಂತ್ರದಿಂದ ವಿಷ್ಣುವನ್ನು ಭಕ್ತಿಯಿಂದ ಭಜಿಸಿದಳು.

೪೩. ಹೀಗೆ ಒಂದೇ ಮನಸ್ಸಿನಿಂದ ವಿಷ್ಣುವನ್ನು ಧ್ಯಾನಿಸುತ್ತಾ ಆ ಸಂಧ್ಯೆಯು ದೊಡ್ಡ ತಪಸ್ಸನ್ನು ಮಾಡುತ್ತಿರಲು ನಾಲ್ಕು ಯುಗಗಳು ಕಳೆದುಹೋದುವು.

ನ ಕೋಽಪಿ ವಿಸ್ಮಯಂ ನಾಪ ತಸ್ಯಾ ದೃಷ್ಟ್ವಾ ತಪೋಽದ್ಭುತಂ ।
ನ ತಾದೃಶೀ ತಪಶ್ಚರ್ಯಾ ಭವಿಷ್ಯತಿ ಚ ಕಸ್ಯಚಿತ್ ॥ ೪೪ ॥

ಮಾನುಷೇಣಾಥ ಮಾನೇನ ಗತೇ ತ್ವೇಕಚತುರ್ಯುಗೇ ।
ಅಂತರ್ಬಹಿಸ್ತಥಾಕಾಶೇ ದರ್ಶಯಿತ್ವಾ ನಿಜಂ ವಪುಃ ॥ ೪೫ ॥

ಪ್ರಸನ್ನಸ್ತೇನ ರೂಪೇಣ ಯದ್ರೂಪಂ ಚಿಂತಿತಂ ತಯಾ ।
ಪುರಃ ಪ್ರತ್ಯಕ್ಷತಾಂ ಯಾತಸ್ತಸ್ಯಾ ವಿಷ್ಣುರ್ಜಗತ್ಪತಿಃ ॥ ೪೬ ॥

ಅಥ ಸಾ ಪುರತೋ ದೃಷ್ಟ್ವಾ ಮನಸಾ ಚಿಂತಿತಂ ಹರಿಂ ।
ಶಂಖಚಕ್ರಗದಾಪದ್ಮಧಾರಿಣಂ ಪದ್ಮಲೋಚನಂ ॥ ೪೭ ॥

ಕೇಯೂರಕುಂಡಲಧರಂ ಕಿರೀಟಮುಕುಟೋಜ್ಜ್ವಲಂ
ತಾರ್ಕ್ಷ್ಯಸ್ಥಂ ಪುಂಡರೀಕಾಕ್ಷಂ ನೀಲೋತ್ಪಲದಲಚ್ಛವಿಂ ॥ ೪೮ ॥

---

೪೪. ಅವಳು ಮಾಡುತ್ತಿರುವ ಅದ್ಭುತವಾದ ಆ ತಪಸ್ಸನ್ನು ನೋಡಿ ಆಶ್ಚರ್ಯ ಪಡದವನು ಒಬ್ಬನೂ ಇರಲಿಲ್ಲ. ಅಂತಹ ತಪಸ್ಸನ್ನು ಇನ್ನಾವನೂ ಮಾಡಲಾರನು.

೪೫-೪೬. ಮನುಷ್ಯಗಣನೆಯಂತೆ ನಾಲ್ಕು ಯುಗಗಳು ಕಳೆಯಲು, ವಿಷ್ಣುವು ಅವಳ ಶರೀರದ ಒಳಗೂ ಹೊರಗೂ ಆಕಾಶದಲ್ಲೂ ತನ್ನ ರೂಪವನ್ನು ಪ್ರಕಟಿಸಿ, ಆ ಸಂಧ್ಯೆಯು ಯಾವ ರೂಪವನ್ನು ಧ್ಯಾನಿಸುತ್ತಿದ್ದಳೋ ಅದೇ ರೂಪದಿಂದ ಅವಳೆದುರಿಗೆ ಪ್ರತ್ಯಕ್ಷನಾದನು.

೪೭—೪೯. ಆಗ ಸಂಧ್ಯೆಯು ತಾನು ಮನಸ್ಸಿನಲ್ಲಿ ಧ್ಯಾನಿಸುತ್ತಿರುವಂತೆಯೇ, ಶಂಖಚಕ್ರಗದಾಪದ್ಮಗಳನ್ನು ಧರಿಸಿ, ಕಮಲದಂತೆ ಸುಂದರವಾದ ನೇತ್ರಗಳಿಂದ ಒಪ್ಪುತ್ತ, ಕೇಯೂರ ಕುಂಡಲ ಕಿರೀಟಾದಿಗಳನ್ನು ಧರಿಸಿ, ಗರುಡನ ಮೇಲೆ ಕುಳಿತು, ಕನ್ನೈದಿಲೆಯಂತೆ ಶರೀರಕಾಂತಿಯುಳ್ಳ ದಿವ್ಯರೂಪವನ್ನು ಧರಿಸಿ, ತನ್ನ ಎದುರಿಗೆ ಬಂದು ನಿಂತಿರುವುದನ್ನು ನೋಡಿ, ಭಯಸಂಭ್ರಮಗಳಿಂದ ಏನೂ ತೋರದೆ ಇಂತಹ

ಸಸಾಧ್ವಸಮುಹಂ ವಕ್ಷ್ಯೇ ಕಿಂ ಕಥಂ ಸ್ತೌಮಿ ವಾ ಹರಿಂ ।
ಇತಿ ಚಿಂತಾಪರಾ ಭೂತ್ವಾ ನ್ಯಮೀಲಯತ ಚಕ್ಷುಷೀ ॥ ೪೯ ॥

ನಿಮೀಲಿತಾಕ್ಷ್ಯಾಸ್ತಸ್ಯಾಸ್ತು ಪ್ರವಿಶ್ಯ ಹೃದಯಂ ಹರಿಃ ।
ದಿವ್ಯಂ ಗೀತಂ ದದೌ ತಸ್ಯೈ ವಾಚಂ ದಿವ್ಯೇ ಚ ಚಕ್ಷುಷೀ ॥ ೫೦ ॥

ದಿವ್ಯಂ ಜ್ಞಾನಂ ದಿವ್ಯಚಕ್ಷುರ್ದಿವ್ಯಾಂ ವಾಚಮವಾಪ್ಯ ಚ
ಪ್ರತ್ಯಕ್ಷಂ ವೀಕ್ಷ್ಯ ಗೋವಿಂದಂ ತುಷ್ಟಾವ ಜಗತಾಂ ಪತಿಂ ॥ ೫೧ ॥

॥ ಸಂಧ್ಯೋವಾಚ ॥

ನಿರಾಕಾರಂ ಜ್ಞಾನಗಮ್ಯಂ ಪರಂ ಯ
ನ್ನೈವ ಸ್ಥೂಲಂ ನಾಪಿ ಸೂಕ್ಷ್ಮಂ ನ ಚೋಚ್ಚೈಃ ॥
ಅಂತಶ್ಚಿಂತ್ಯಂ ಯೋಗಿಭಿರ್ಯಸ್ಯ ರೂಪಂ
ತಸ್ಮೈ ತುಭ್ಯಂ ಹರಯೇ ಮೇ ನಮೋಽಸ್ತು ॥ ೫೨ ॥

ದಿವ್ಯರೂಪಧರನಾದ ಹರಿಯನ್ನು ಕುರಿತು ಏನು ಹೇಳಲಿ? ಸ್ತೋತ್ರವನ್ನೆಂತುಮಾಡಲಿ ಎಂದು ಚಿಂತಿಸುತ್ತಾ ಕ್ಷಣಕಾಲ ತನ್ನ ಕಣ್ಣುಗಳನ್ನು ಸ್ವಲ್ಪ ಮುಚ್ಚಿದಳು.

೫೦. ಹೀಗೆ ಏನೂ ತೋರದೆ ಕಣ್ಣನ್ನು ಮುಚ್ಚಿರುವ ಆ ಸಂಧ್ಯೆಯ ಹೃದಯವನ್ನು ವಿಷ್ಣುವು ಪ್ರವೇಶಿಸಿ, ಅವಳಿಗೆ ಗಾನಮಾಡಲು ದಿವ್ಯವಾದ ಕಂಠವನ್ನೂ, ಸ್ತುತಿಸಲು ಮಾತನಾಡುವ ಸಾಮರ್ಥ್ಯವನ್ನೂ, ತನ್ನ ರೂಪವನ್ನು ನೋಡಲು ದಿವ್ಯ ದೃಷ್ಟಿಯನ್ನೂ ಕೊಟ್ಟನು.

೫೧. ದಿವ್ಯಜ್ಞಾನವನ್ನೂ, ದಿವ್ಯದೃಷ್ಟಿಯನ್ನೂ, ದಿವ್ಯವಾಕ್ಸಾಮರ್ಥ್ಯವನ್ನೂ ಪಡೆದು, ಆ ಸಂಧ್ಯೆಯು ಜಗದೊಡೆಯನಾದ ಆ ವಿಷ್ಣುವನ್ನು ಪ್ರತ್ಯಕ್ಷವಾಗಿ ನೋಡಿ ಹೀಗೆ ಸ್ತುತಿಸಿದಳು.

೫೨. ಸಂಧ್ಯೆಯು ಹೀಗೆ ಸ್ತುತಿಸಿದಳು :—ಆಕಾರವಿಲ್ಲದುದೂ, ಜ್ಞಾನದಿಂದ ಪಡೆಯಲ್ಪಡುವುದೂ, ಉತ್ಕೃಷ್ಟವಾದುದೂ, ಸ್ಥೂಲತ್ವ, ಸೂಕ್ಷ್ಮತ್ವ, ದೀರ್ಘತ್ವ ಮುಂತಾದ ವಿಕಾರವಿಲ್ಲದುದೂ, ಯೋಗಿಗಳಿಂದ ಹೃದಯದಲ್ಲಿ ಧ್ಯಾನಿಸಲ್ಪಡತಕ್ಕ

ಶಿವಂ ಶಾಂತಂ ನಿರ್ಮಲಂ ನಿರ್ವಿಕಾರಂ ।
ಜ್ಞಾನಾತ್ಪರಂ ಸುಪ್ರಕಾಶಂ ವಿಸಾರಿ ॥
ರವಿಪ್ರಖ್ಯಂ ಧ್ವಾಂತಭಾಗಾತ್ಪರಸ್ತಾ
ದ್ರೂಪಂ ಯಸ್ಯ ತ್ವಾಂ ನಮಾಮಿ ಪ್ರಸನ್ನಂ ॥ ೫೩ ॥

ಏಕಂ ಶುದ್ಧಂ ದೀಪ್ಯಮಾನಂ ವಿನೋದಂ
ಚಿತ್ತಾನಂದಂ ಸತ್ತ್ವಜಂ ಪಾಪಹಾರಿ ॥
ನಿತ್ಯಾನಂದಂ ಸತ್ಯಭೂರಿ ಪ್ರಸನ್ನಂ
ಯಸ್ಯ ಶ್ರೀದಂ ರೂಪಮಸ್ಮೈ ನಮೋಽಸ್ತು ॥ ೫೪ ॥

ವಿದ್ಯಾಕಾರೋದ್ಭವನೀಯಂ ಪ್ರಭಿನ್ನಂ
ಸತ್ತ್ವಂ ಛನ್ನಂ ಧ್ಯೇಯಮಾತ್ಮಸ್ವರೂಪಂ ॥

ದುಮೂ ಆದ ಯಾವ ಪರಬ್ರಹ್ಮಸ್ವರೂಪವುಂಟೋ ಅಂತಹ ಬ್ರಹ್ಮಸ್ವರೂಪನಾದ ನಾರಾಯಣನಾದ ನಿನಗೆ ನಮಸ್ಕಾರವು.

೫೩. ಮಂಗಳಕರವೂ, ಶಾಂತವೂ, ನಿರ್ಮಲವೂ, ಉತ್ಪತ್ತಿಯೇ ಮೊದಲಾದ ವಿಕಾರಗಳಿಲ್ಲದುದೂ, ಲೌಕಿಕಜ್ಞಾನದಿಂದ ತಿಳಿಯಲಸಾಧ್ಯವಾದುದೂ, ಪ್ರಕಾಶಸ್ವರೂಪವಾದುದೂ, ಎಲ್ಲೆಡೆಯಲ್ಲಿಯೂ ವ್ಯಾಪಿಸಿರುವುದೂ, ಸೂರ್ಯನಂತೆ ಪ್ರಕಾಶಿಸುವುದೂ, ಅಜ್ಞಾನಸಂಬಂಧವಿಲ್ಲದುದೂ ಆದ ಯಾವ ಪರಸ್ವರೂಪವಿರುವುದೋ ಅಂತಹ ಸ್ವರೂಪನಾಗಿಯೂ, ಪ್ರಸನ್ನನಾಗಿಯೂ ಇರುವ ನಿನ್ನನ್ನು ನಮಸ್ಕರಿಸುವೆನು.

೫೪. ತನಗೆ ಸದೃಶವಾದ ಯಾವ ವಸ್ತುವೂ ಇಲ್ಲದುದರಿಂದ ಅದ್ವಿತೀಯನಾಗಿಯೂ ಎಂದರೆ ಎಲ್ಲೆಡೆಯಲ್ಲಿಯೂ ತಾನೇತಾನಾಗಿ ವ್ಯಾಪಿಸಿ ಇರುವುದೂ, ಶುದ್ಧವೂ, ಪ್ರಕಾಶಸ್ವರೂಪವೂ, ಆನಂದಸ್ವರೂಪವೂ, ಸತ್ಯಗುಣಪ್ರಧಾನವಾದುದೂ, ಪಾಪವನ್ನು ನಾಶಮಾಡತಕ್ಕುದೂ, ಸದಾಕಾಲದಲ್ಲಿಯೂ ಆನಂದಸ್ವರೂಪವೇ ಆಗಿರುವುದೂ, ಎಲ್ಲೆಡೆಯಲ್ಲಿಯೂ ವ್ಯಾಪಿಸಿರುವುದೂ, ಉಪಾಸನೆ ಮಾಡುವವರಿಗೆ ಮಂಗಳವನ್ನುಂಟುಮಾಡುವುದೂ ಆದ ಯಾವ ನಿನ್ನ ಪ್ರಸನ್ನರೂಪವುಂಟೋ ಅವಕ್ಕೆ ನಮಸ್ಕಾರವು.

ಸಾರಂ ಪಾರಂ ಪಾವನಾನಾಂ ಪವಿತ್ರಂ
ತಸ್ಮೈ ರೂಪಂ ಯಸ್ಯ ಚೈವಂ ನಮಸ್ತೇ ॥ ೫೫ ॥
ನಿತ್ಯಾರ್ಜವಂ ವ್ಯಯಹೀನಂ ಗುಣೌಘೈ
ರಷ್ಟಾಂಗೈರ್ಯಶ್ಚಿಂತ್ಯತೇ ಯೋಗಯುಕ್ತೈಃ ॥
ತತ್ತ್ವವ್ಯಾಪಿ ಪ್ರಾಪ್ಯ ಯಜ್ಜ್ಞಾನಯೋಗೇ ।
ಪರಂ ಯಾತಾ ಯೋಗಿನಸ್ತನ್ನಮಸ್ತೇ ॥ ೫೬ ॥
ಯತ್ಸಾಕಾರಂ ಶುದ್ಧರೂಪಂ ಮನೋಜ್ಞಂ
ಗರುತ್ಮಸ್ಥಂ ನೀಲಮೇಘಪ್ರಕಾಶಂ ॥
ಶಂಖಂ ಚಕ್ರಂ ಪದ್ಮಗದೇ ದಧಾನಂ
ತಸ್ಮೈ ನಮೋ ಯೋಗಯುಕ್ತಾಯ ತುಭ್ಯಂ ॥ ೫೭ ॥

---

೫೫. ಜ್ಞಾನಸ್ವರೂಪವಾದುದರಿಂದ ಜ್ಞಾನದಿಂದ ಮಾತ್ರ ತಿಳಿಯಲ್ಪಡ ತಕ್ಕುದೂ, ಒಂದೇ ವಸ್ತುವಾದರೂ ಅನೇಕ ರೂಪಗಳಾಗಿ ತೋರುತ್ತಿರುವುದೂ, ಸತ್ತ್ವ ಗುಣಪ್ರಧಾನವಾಗಿ ಧ್ಯಾನಿಸಲ್ಪಡತಕ್ಕುದೂ, ಪರಮಾತ್ಮಸ್ವರೂಪವೂ, ಶ್ರೇಷ್ಠವಾದುದೂ, ಪವಿತ್ರವಾದ ವಸ್ತುಗಳಲ್ಲಿಯೂ ಅತ್ಯಂತ ಪವಿತ್ರವಾದುದೂ ಆದ ಯಾವ ನಿನ್ನ ರೂಪವುಂಟೋ ಅದಕ್ಕೆ ನಮಸ್ಕಾರಮಾಡುವೆನು.

೫೬. ಯಾವಾಗಲೂ ಕರುಣಾಶಾಲಿಯಾಗಿಯೂ, ನಾಶವಿಲ್ಲದುದಾಗಿಯೂ, ವ್ರತಾನುಷ್ಠಾನಾದಿ ಗುಣಯುಕ್ತರಾದ ಯೋಗಿಗಳಿಂದ ಯಮನಿಯಮ, ಆಸನ, ಪ್ರಾಣಾಯಾಮ, ವ್ರತ್ಯಾಹಾರ, ಧಾರಣ, ಧ್ಯಾನ ಸಮಾಧಿಗಳೆಂಬ ಎಂಟು ಸಾಧನ ಭೂತವಾದ ಅಂಗಗಳಿಂದ ಧ್ಯಾನಿಸಲ್ಪಡತಕ್ಕುದೂ ಮತ್ತು ಜ್ಞಾನಿಗಳು ಧ್ಯಾನಯೋಗ ಗಳಿಂದ ಉತ್ಕೃಷ್ಟವೂ, ಸರ್ವವ್ಯಾಪಕವೂ ಆದ ಯಾವ ಪರತತ್ತ್ವವನ್ನು ಆರಾಧಿಸಿ ಪರಮಪದವನ್ನು ಹೊಂದುವರೋ ಅಂತಹ ಸ್ವರೂಪವನ್ನುಳ್ಳ ನಿನ್ನನ್ನು ನಮಸ್ಕರಿಸುವೆನು.

೫೭. ನಿನ್ನ ಆಕಾರಸಹಿತವಾದ ರೂಪವು ಶುದ್ಧವಾಗಿಯೂ, ಮನೋಹರವಾಗಿಯೂ, ಗರುಡನಮೇಲೆ ಕುಳಿತು ನೀಲಮೇಘದ ಕಾಂತಿಯಂತೆ ಪ್ರಕಾಶಿಸುತ್ತ ಶಂಖ ಚಕ್ರ ಕಮಲ ಗದೆ ಇವುಗಳನ್ನು ನಾಲ್ಕು ಕೈಗಳಲ್ಲಿ ಧರಿಸಿ ಶೋಭಿಸುತ್ತಿರುವುದು. ಇಂತಹ ಯೋಗಸ್ವರೂಪನಾದ ನಿನಗೆ ನಮಸ್ಕಾರವು.

ಗಗನಂ ಭೂರ್ದಿಶಶ್ಚೈವ ಸಲಿಲಂ ಜ್ಯೋತಿರೇವ ಚ ।
ವಾಯುಃ ಕಾಲಶ್ಚ ರೂಪಾಣಿ ಯಸ್ಯ ತಸ್ಮೈ ನಮೋಽಸ್ತು ತೇ ॥ ೫೮ ॥

ಪ್ರಧಾನಪುರುಷೌ ಯಸ್ಯ ಕಾರ್ಯಾಂಗತ್ವೇ ನಿವರ್ತ್ಯತಃ ।
ತಸ್ಮಾದವ್ಯಕ್ತರೂಪಾಯ ಗೋವಿಂದಾಯ ನಮೋ ಸ್ತು ತೇ ॥ ೫೯ ॥

ಯಃ ಸ್ವಯಂ ಯಶ್ಚ ಭೂತಾನಿ ಯಃ ಸ್ವಯಂ ತದ್ಗುಣಃ ಪರಃ ।
ಯಃ ಸ್ವಯಂ ಜಗದಾಧಾರಸ್ತಸ್ಮೈ ತುಭ್ಯಂ ನಮೋ ನಮಃ ॥
ಪರಃ ಪುರಾಣಃ ಪುರುಷಃ ಪರಮಾತ್ಮಾ ಜಗನ್ಮಯಃ ।
ಅಕ್ಷಯೋ ಯೋಽವ್ಯಯೋ ದೇವಸ್ತಸ್ಮೈ ತುಭ್ಯಂ ನಮೋ ನಮಃ ॥ ೬೦ ॥

ಯೋ ಬ್ರಹ್ಮಾ ಕುರುತೇ ಸೃಷ್ಟಿಂ ಯೋ ವಿಷ್ಣುಃ ಕುರುತೇ ಸ್ಥಿತಿಂ ।
ಸಂಹರಿಷ್ಯತಿ ಯೋ ರುದ್ರಸ್ತಸ್ಮೈ ತುಭ್ಯಂ ನಮೋ ನಮಃ ॥ ೬೧ ॥

---

೫೮. ಆಕಾಶ, ಭೂಮಿ, ದಿಕ್ಕುಗಳು, ಜಲ, ತೇಜಸ್ಸು, ವಾಯು, ಕಾಲ ಇವು ಗಳೆಲ್ಲವೂ ನಿನ್ನ ರೂಪಗಳೇ! ಇಂತಹ ರೂಪಗಳುಳ್ಳ ನಿನಗೆ ನಮಸ್ಕಾರವು.

೫೯. ನೀನು ಅವ್ಯಕ್ತ ಎಂದರೆ ಚರ್ಮಚಕ್ಷುಸ್ಸಿಗೆ ಅಗೋಚರನಾದರೂ ಸೃಷ್ಟಿ ಕಾರ್ಯಕ್ಕಾಗಿ ಪ್ರಕೃತಿ, ಪುರುಷ ಎಂಬ ಸಾಧನಗಳನ್ನು ಉಪಯೋಗಿಸಿ ವ್ಯಕ್ತರೂಪ ನಾಗಿ ಗೋಚರಿಸುವೆಯೋ ಅಂತಹ ನಿನಗೆ ನಮಸ್ಕಾರವು.

೬೦. ನೀನು ಜೀವರೂಪನಾದುದರಿಂದ ಸರ್ವಪ್ರಾಣಿಸ್ವರೂಪನು ಮತ್ತು ಅವುಗಳ ಗುಣಗಳೂ ಉಳ್ಳವನು; ಜಗತ್ತಿಗೆ ಆಧಾರನು; ಸರ್ವಶ್ರೇಷ್ಠನು; ಆದ್ಯಂತ ರಹಿತನು; ಜಗದ್ರೂಪನು; ಸಮಸ್ತ ಪ್ರಾಣಿಗಳಲ್ಲಿಯೂ ನೆಲಸಿರುವವನು; ನಾಶವಿಲ್ಲ ದವನು ಮತ್ತು ವಿಕಾರವಿಲ್ಲದವನು. ಇಂತಹ ಸ್ವರೂಪವುಳ್ಳ ನಿನಗೆ ನಮಸ್ಕಾರವು.

೬೧. ಜಗತ್ತನ್ನು ಸೃಷ್ಟಿಸುವ ಬ್ರಹ್ಮನೂ ನೀನೆ; ಪಾಲಿಸುವ ವಿಷ್ಣುವೂ ನೀನೆ; ಸಂಹರಿಸುವ ರುದ್ರನೂ ನೀನೆ; ಇಂತಹ ನಿನಗೆ ನಮಿಸುವೆನು.

ನಮೋ ನಮಃ ಕಾರಣಕಾರಣಾಯ
ದಿವ್ಯಾಮೃತಜ್ಞಾನವಿಭೂತಿದಾಯ ॥
ಸಮಸ್ತಲೋಕಾಂತರಮೋಹದಾಯ
ಪ್ರಕಾಶರೂಪಾಯ ಪರಾತ್ಪರಾಯ ॥ ೬೨ ॥

ಯಸ್ಯ ಪ್ರಪಂಚೋ ಜಗದುಚ್ಯತೇ ಮಹಾನ್
ಕ್ಷಿತಿರ್ದಿಶಃ ಸೂರ್ಯ ಇಂದುರ್ಮನೋಜವಃ ॥
ವಹ್ನಿರ್ಮುಖಾನ್ನಾಭಿತಶ್ಚಾಂತರಿಕ್ಷಂ
ತಸ್ಮೈ ತುಭ್ಯಂ ಹರಯೇ ತೇ ನಮೋಽಸ್ತು ॥ ೬೩ ॥

ತ್ವಂ ಪರಃ ಪರಮಾತ್ಮಾ ಚ ತ್ವಂ ವಿದ್ಯಾ ವಿವಿಧಾ ಹರೇ ।
ಶಬ್ದಬ್ರಹ್ಮ ಪರಂಬ್ರಹ್ಮ ವಿಚಾರಣಪರಾತ್ಪರಃ ॥ ೬೪ ॥

ಯಸ್ಯ ನಾದಿರ್ನ ಮಧ್ಯಂ ಚ ನಾಂತಮಸ್ತಿ ಜಗತ್ಪತೇಃ ।
ಕಥಂ ಸ್ತೋಷ್ಯಾಮಿ ತಂ ದೇವಂ ವಾಙ್ಮನೋಗೋಚರಾದ್ಬಹಿಃ ॥ ೬೫ ॥

ಜಗತ್ತಿಗೆ ಕಾರಣರಾದ ಬ್ರಹ್ಮನೇ ಮೊದಲಾದವರಿಗೆ ಕಾರಣನೂ (ಆದಿಕಾರಣನೂ), ಶ್ರೇಷ್ಠವಾದ ಅಮೃತ, ಜ್ಞಾನ, ಐಶ್ವರ್ಯಗಳನ್ನು ಕೊಡುವವನೂ, ಎಲ್ಲಾ ಪ್ರಾಣಿಗಳನ್ನು ಮೋಹಗೊಳಿಸುವವನೂ, ಪ್ರಕಾಶಸ್ವರೂಪನೂ, ಅತ್ಯಂತ ಉತ್ಕೃಷ್ಟನೂ ಆದ ನಿನಗೆ ನಮಸ್ಕಾರವಿರಲಿ.

೬೩. ಪೃಥ್ವೀ, ದಿಕ್ಕುಗಳು, ಸೂರ್ಯಚಂದ್ರರು, ವಾಯು ಮೊದಲಾದ ಈ ಎಲ್ಲಾ ಪ್ರಪಂಚವೂ ನಿನ್ನ ಸ್ವರೂಪವು. ನಿನ್ನ ಮುಖದಿಂದ ಅಗ್ನಿಯೂ, ನಾಭಿ (ಹೊಕ್ಕಳು) ಯಿಂದ ಆಕಾಶವೂ ಜನಿಸಿರುವುದು. ಇಂತಹ ನಿನಗೆ ನಮಸ್ಕಾರವು.

೬೪. ಓ ಹರಿಯೇ! ನೀನೇ ಪರಮಾತ್ಮನು. ಅನೇಕ ಬಗೆಯ ವಿದ್ಯೆಯೂ ನೀನೆ. ಶಬ್ದವೇ ಬ್ರಹ್ಮ ಎಂದರೆ ನಾದಬ್ರಹ್ಮವೇ ಬ್ರಹ್ಮಸ್ವರೂಪವು. ಈ ವಿಚಾರವನ್ನು ಜ್ಞಾನಿಗಳು ಧ್ಯಾನದಿಂದಲೂ, ವಿಮರ್ಶೆಯಿಂದಲೂ ತಿಳಿಯುವರು.

೬೫. ಜಗದೊಡೆಯನಾದ ನಿನಗೆ ಆದಿಯೂ, ಮಧ್ಯವೂ, ಕೊನೆಯೂ ಇಲ್ಲ. ವಾಕ್ಕು ಮತ್ತು ಮನಸ್ಸುಗಳಿಗೆ ಅಗೋಚರನಾದ (ತಿಳಿಯಲಸಾಧ್ಯನಾದ) ಪ್ರಕಾಶಸ್ವರೂಪನಾದ ನಿನ್ನನ್ನು ಹೇಗೆತಾನೇ ಸ್ತುತಿಸಲಿ ?

ಯಸ್ಯ ಬ್ರಹ್ಮಾದಯೋ ದೇವಾ ಮುನಯಶ್ಚ ತಪೋಧನಾಃ ।
ನ ವಿವೃಣ್ವಂತಿ ರೂಪಾಣಿ ವರ್ಣನೀಯಃ ಕಥಂ ಸ ಮೇ ॥ ೬೬ ॥

ಸ್ತ್ರಿಯಾ ಮಯಾ ತೇ ಕಿಂ ಜ್ಞೇಯಾ ನಿರ್ಗುಣಸ್ಯ ಗುಣಾಃ ಪ್ರಭೋಃ ।
ನೈವ ಜಾನಂತಿ ಯದ್ರೂಪಂ ಸೇಂದ್ರಾ ಅಪಿ ಸುರಾಸುರಾಃ ॥ ೬೭ ॥

ನಮಸ್ತುಭ್ಯಂ ಜಗನ್ನಾಥ ನಮಸ್ತುಭ್ಯಂ ತಪೋಮಯ ।
ಪ್ರಸೀದ ಭಗವಂಸ್ತುಭ್ಯಂ ಭೂಯೋ ಭೂಯೋ ನಮೋ ನಮಃ ॥ ೬೮ ॥

॥ ಮಾರ್ಕಂಡೇಯ ಉವಾಚ ॥

ಅಥ ತಸ್ಯಾಃ ಶರೀರಂ ತು ವಲ್ಕಲಾಜಿನಸಂವೃತಂ ।
ಪರಿಕ್ಷೀಣಂ ಜಟಾವ್ರಾತೈಃ ಪವಿತ್ರೈರ್ಮೂರ್ಧ್ನಿ ರಾಜಿತಂ ॥ ೬೯ ॥

---

೬೬. ಬ್ರಹ್ಮನೇ ಮೊದಲಾದ ದೇವತೆಗಳೂ, ಮಹಾತಪಸ್ವಿಗಳಾದ ಮುನಿಗಳೂ ಯಾವ ನಿನ್ನ ರೂಪವನ್ನು ವಿವರಿಸಲಾರರೋ ಅಂತಹ ನಿನ್ನ ರೂಪವನ್ನು ನಾನು ವರ್ಣಿಸುವ ಬಗೆಯೆಂತು?

೬೭. ಪರಮಾರ್ಥವಾಗಿ ಯಾವ ಗುಣಗಳೂ ಇಲ್ಲದ ನಿನ್ನ ಮಾಯಾಮಯವಾದ ಗುಣಗಳನ್ನು ಹೆಂಗಸಾದ ನಾನು ಹೇಗೆ ತಿಳಿಯಲಿ? ಓ ಪ್ರಭುವೇ! ನಿನ್ನ ಯಾವ ರೂಪವನ್ನು ಇಂದ್ರನೇ ಮೊದಲಾದ ದೇವತೆಗಳೂ, ರಾಕ್ಷಸರೂ ತಿಳಿಯಲಾರರೋ ಅಂತಹ ರೂಪವನ್ನು ನಾನು ತಿಳಿಯಲು ಸಾಧ್ಯವೇ?

೬೮. ಓ ಜಗದೊಡೆಯನೆ! ನಿನಗೆ ನಮಸ್ಕಾರವು. ಓ ಜ್ಞಾನರೂಪನೇ! ನಿನಗೆ ನಮಿಸುವೆನು. ಓ ಭಗವಂತನೇ! ನಿನಗೆ ಪುನಃಪುನಃ ನಮಸ್ಕರಿಸುವೆನು.

೬೯-೭೦. ಮಾರ್ಕಂಡೇಯಮುನಿಯು ಹೇಳಿದನು:— ಈರೀತಿ ಸ್ತೋತ್ರ ಮಾಡುತ್ತಲಿರುವ ಸಂಧ್ಯೆಯನ್ನು ನೋಡಿ ಹರಿಯು ಅವಳಲ್ಲಿ ದಯೆಯನ್ನು ತೋರಿಸಿದನು. ನಾರುಬಟ್ಟೆಗಳನ್ನೂ, ಮೃಗಚರ್ಮಗಳನ್ನೂ ಧರಿಸಿ ಉಗ್ರವಾದ ತಪಸ್ಸನ್ನು ಮಾಡಿದ್ದರಿಂದ ಅವಳ ಶರೀರವು ತುಂಬಾ ಕೃಶವಾಗಿದ್ದಿತು. ತಲೆಯಲ್ಲಿ ಜಟೆಗಳು

ಹಿಮಾನೀತರ್ಜಿತಾಂಭೋಜಸದೃಶಂ ವದನಂ ತಥಾ ।
ನಿರೀಕ್ಷ್ಯ ಕೃಪಯಾವಿಷ್ಟೋ ಹರಿಃ ಶ್ಲೋಕಾವಾಚ ತಾಮಿದಂ ॥ ೭೦ ॥

॥ ಶ್ರೀ ಭಗವಾನುವಾಚ ॥

ಪ್ರೀತೋಽಸ್ಮಿ ತಪಸಾ ಭದ್ರೇ ಭವತ್ಯಾ ಪರಮೇಣ ವೈ ।
ಸ್ತವೇನ ಚ ಶುಭಪ್ರಜ್ಞೇ ವರಂ ವರಯ ಸಾಂಪ್ರತಂ ॥ ೭೧ ॥

ಯೇನ ತೇ ವಿದ್ಯತೇ ಕಾರ್ಯಂ ಪರೇಣಾಸ್ತಿ ಮನೋಗತಂ ।
ತತ್ಕರಿಷ್ಯೇ ಚ ಭದ್ರಂ ತೇ ಪ್ರಸನ್ನೋಽಹಂ ತವ ವ್ರತೈಃ ॥ ೭೨ ॥

॥ ಸಂಧ್ಯೋವಾಚ ॥

ಯದಿ ದೇವ ಪ್ರಸನ್ನೋಽಸಿ ತಪಸಾ ಮಮ ಸಾಂಪ್ರತಂ ।
ವೃತಸ್ತ್ವಯಾಽಯಂ ಪ್ರಭವೋ ವರೋ ಮಮ ವಿಧೀಯತಾಂ ॥ ೭೩ ॥

ಉತ್ಪನ್ನಮಾತ್ರಾ ದೇವೇಶ ವ್ಯಾಧಿನೋಽಸ್ಮಿನ್ನ ಭಸ್ತಲೇ
ನ ಭವಂತು ಕ್ರಮೇಣೈವ ಸಕಾಮಾಃ ಸಂಭವಂತು ವೈ ॥ ೭೪ ॥

ಬಿಳಿದಿದ್ದವು. ಮುಖದಲ್ಲಿ ಬೆವರುಹನಿಗಳು ಆವರಿಸಿ ಮುಖಕ್ಕೆ ಅಪೂರ್ವ ಕಾಂತಿಯನ್ನುಂಟುಮಾಡುತ್ತಿದ್ದುವು. ಇಂತಹ ಸ್ಥಿತಿಯಲ್ಲಿರುವ ಸಂಧ್ಯೆಯನ್ನು ನೋಡಿ ಹೀಗೆ ಹೇಳಿದನು.

೭೧-೭೨. ಭಗವಂತನಾದ ಹರಿಯು ಹೇಳಿದನು:—ಎಲೈ ಮುಂಗಳಾಂಗಿಯೆ! ನಿನ್ನ ಈ ಶ್ರೇಷ್ಠವಾದ ತಪಸ್ಸಿನಿಂದಲೂ, ಸ್ತೋತ್ರದಿಂದಲೂ ಸಂತುಷ್ಟನಾಗಿರುವೆನು. ಈಗ ನಿನಗೆ ಬೇಕಾದ ವರವನ್ನು ಕೇಳಿಕೋ. ನಿನ್ನ ಮನಸ್ಸಿನಲ್ಲಿ ಯಾವ ಕಾರ್ಯ ಆಗಬೇಕೆಂದಿರುವುದೋ ಹೇಳು, ಅದನ್ನು ನಡೆಸಿಕೊಡುವೆನು. ನಿನ್ನ ವ್ರತಗಳಿಂದ ನಾನು ಪ್ರಸನ್ನನಾಗಿರುವೆನು.

೭೩—೭೬. ಸಂಧ್ಯೆಯು ಹೇಳಿದಳು:—ಓ ದೇವನೇ! ನನ್ನ ತಪಸ್ಸಿನಿಂದ ನೀನು ಪ್ರಸನ್ನನಾಗಿದ್ದರೆ ಮುಂದೆ ಹೇಳುವ ಈ ಮೊದಲನೆಯ ವರವನ್ನು ಕೊಡು. ಜಗತ್ತಿನಲ್ಲಿ ಪ್ರಾಣಿಗಳು ಹುಟ್ಟಿದೊಡನೆಯೇ ಕಾಮವಿಕಾರವನ್ನು ಹೊಂದಬಾರದು.

ಪತಿವ್ರತಾತ್ವಂ ಲೋಕೇಷು ತಿಷ್ಠತ್ವಪಿ ಪ್ರಥಿತಾ ಯಥಾ ।
ಭವಿಷ್ಯತ್ಯಪಿ ತಥಾ ನಾಸ್ಯಾ ವರ ಏಕೋ ವೃಣೋ ಮಮ ॥ ೭೫ ॥

ಸಕಾಮಾ ಮಮ ದೃಷ್ಟಿಸ್ತು ಕುತ್ರಚಿನ್ನ ಪತಿಷ್ಯತಿ ।
ಭರ್ತೇ ಪತಿಂ ಜಗನ್ನಾಥ ಸೋಽಪಿ ಮೇಽತಿಸುಹೃತ್ತರಃ ॥ ೭೬ ॥

ಯೋ ದ್ರಕ್ಷ್ಯತಿ ಸಕಾಮೋ ಮಾಂ ಪುರುಷಸ್ತಸ್ಯ ಪೌರುಷಂ ।
ನಾಶಂ ಗಮಿಷ್ಯತಿ ತದಾ ಸ ತು ಕ್ಲೀಬೋ ಭವಿಷ್ಯತಿ ॥ ೭೭ ॥

॥ ಶ್ರೀ ಭಗವಾನುವಾಚ ॥

ಪ್ರಥಮಃ ಶೈಶವೋ ಭಾವಃ ಕೌಮಾರಾಖ್ಯೋ ದ್ವಿತೀಯಕಃ ।
ತೃತೀಯೋ ಯೌವನೋ ಭಾವಾಶ್ಚತುರ್ಥೋ ವಾರ್ಧಕಸ್ತಥಾ ॥ ೭೮ ॥

ತೃತೀಯೇ ತ್ವಥ ಸಂಪ್ರಾಪ್ತೇ ವಯೋಭಾಗೇ ಶರೀರಿಣಃ ।
ಸಕಾಮಾಃ ಸ್ಯುರ್ದ್ವಿತೀಯಾಂತೇ ಭವಿಷ್ಯಂತಿ ಕ್ವಚಿತ್ಕ್ವಚಿತ್ ॥ ೭೯ ॥

ಕ್ರಮವಾಗಿ ಎಂದರೆ ಯೌವ್ವನಕಾಲದಲ್ಲಿ ಕಾಮವಿಕಾರವುಳ್ಳವರಾಗಲಿ. ನಾನು ಪತಿವ್ರತೆಯಾಗಿದ್ದು ಮೂರುಲೋಕದಲ್ಲಿಯೂ ಪ್ರಸಿದ್ಧಳಾಗಬೇಕು. ಇದು ಎರಡನೆಯ ವರವು. ನನ್ನ ಪತಿಯಲ್ಲಿ ಹೊರತು ಬೇರೆ ಎಲ್ಲಿಯೂ ನನ್ನ ದೃಷ್ಟಿಯು ಕಾಮವುಳ್ಳ ದ್ದಾಗಿ ಬೀಳಬಾರದು. ಆ ನನ್ನ ಪತಿಯು ನನ್ನಲ್ಲಿ ಹೆಚ್ಚಾದ ಅನುರಾಗವುಳ್ಳವನಾಗಿರ ಬೇಕು. ಇದು ಮೂರನೆಯ ವರವು. ಯಾವ ಪುರುಷನು ನನ್ನನ್ನು ಕಾಮಾಭಿಲಾಷೆ ಯಿಂದ ನೋಡುವನೋ ಅವನ ಪುರುಷತ್ವವೇ ಹೋಗಿ ನಪುಂಸಕನಾಗಬೇಕು. ಈ ನಾಲ್ಕು ವರಗಳನ್ನು ನನಗೆ ಅನುಗ್ರಹಿಸಬೇಕು ಎಂದು ಪ್ರಾರ್ಥಿಸಿದಳು.

೭೮. ಭಗವಂತನು ಹೇಳಿದನು:—ಪ್ರಾಣಿಗೆ (ಹುಟ್ಟಿದೊಡನೆ) ಮೊದಲನೆ ಯದು ಬಾಲ್ಯಾವಸ್ಥೆಯು, ಎರಡನೆಯದು ಕೌಮಾರಾ (ಹುಡುಗತನ) ವಸ್ಥೆಯು, ಮೂರನೆಯದು ಯೌವನಾವಸ್ಥೆಯು, ನಾಲ್ಕನೇಯದೇ (ವಾರ್ಧಕಾವಸ್ಥೆ) ಮುಪ್ಪು.

೭೯. ಮೂರನೆಯದಾದ ಯೌವನಾವಸ್ಥೆಯು ಬರಲು ಪ್ರಾಣಿಗಳು ಕಾಮ ವಿಕಾರವುಳ್ಳವರಾಗುವರು. ಕೆಲವೆಡೆ ಕೌಮಾರಾವಸ್ಥೆಯ ಕೊನೆಯಲ್ಲಿಯೇ ಕಾಮ ಭಿಲಾಷೆಯು ಉತ್ಪನ್ನವಾಗುವುದು.

ತಪಸಾ ತವ ಮರ್ಯಾದಾ ಜಗತಿ ಸ್ಥಾಪಿತಾ ಮಯಾ ।
ಉತ್ಪನ್ನಮಾತ್ರಾ ನ ಯಥಾ ಸಕಾಮಾಃ ಸ್ಯುಃ ಶರೀರಿಣಃ ॥ ೮೦ ॥

ತ್ವಂ ಚ ಲೋಕೇ ಸತೀಭಾವಂ ತಾದೃಶಂ ಸಮವಾಪ್ಸ್ಯಸಿ ।
ತ್ರಿಷು ಲೋಕೇಷು ನಾನ್ಯಸ್ಯಾ ಯಾದೃಶಂ ಸಂಭವಿಷ್ಯತಿ ॥ ೮೧ ॥

ಯಃ ಪಶ್ಯತಿ ಸಕಾಮಸ್ತ್ವಾಂ ಪಾಣಿಗ್ರಹಮೃತೇ ತವ
ಸ ಸದ್ಯಃ ಕ್ಲೀಬತಾಂ ಪ್ರಾಪ್ಯ ದುರ್ಬಲತ್ವಂ ಗಮಿಷ್ಯತಿ ॥ ೮೨ ॥

ಪತಿಸ್ತವ ಮಹಾಭಾಗಸ್ತಪೋರೂಪಸಮನ್ವಿತಃ ।
ಸಪ್ತಕಲ್ಪಾಂತಜೀವೀ ಚ ಭವಿಷ್ಯತಿ ಸಹ ತ್ವಯಾ ॥ ೮೩ ॥

ಇತಿ ಯೇ ತೇ ವರಾ ಮತ್ತಃ ಪ್ರಾರ್ಥಿತಾಸ್ತೇ ಕೃತಾ ಮಯಾ ।
ಅನ್ಯಚ್ಚ ತೇ ವಕ್ಷ್ಯಾಮಿ ಪೂರ್ವಂ ಯನ್ಮನಸಿ ಸ್ಥಿತಂ ॥ ೮೪ ॥

---

೮೦. ನಿನ್ನ ತಪಸ್ಸಿನಿಂದ ಪ್ರೀತನಾಗಿ ನಾನು, ಪ್ರಾಣಿಗಳು ಹುಟ್ಟಿದೊಡನೆಯೇ ಕಾಮವಿಕಾರವನ್ನು ಹೊಂದದಿರುವಂತೆ ನಿಯಮವನ್ನು ಜಗತ್ತಿನಲ್ಲಿ ಸ್ಥಾಪಿಸಿರುವೆನು.

೮೧. ನೀನೂ ಸಹ ಮೂರುಲೋಕದಲ್ಲಿ ಯಾವ ಸ್ತ್ರೀಯಳೂ ಸಹ ಆಚರಿಸದಿರುವ ಪಾತಿವ್ರತ್ಯವನ್ನು ಹೊಂದಿ ಶೋಭಿಸುವೆ.

೮೨. ಅಲ್ಲದೆ ಯಾವ ಪುರುಷನು ನಿನ್ನನ್ನು ಮದುವೆಯಾಗದೆ ಕಾಮದೃಷ್ಟಿಯಿಂದ ನೋಡುವನೋ ಅವನು ಕೂಡಲೇ ನಪುಂಸಕನಾಗಿ ದುರ್ಬಲನಾಗುವನು.

೮೩. ನಿನ್ನ ಪತಿಯು ತುಂಬಾ ಭಾಗ್ಯಶಾಲಿಯೂ, ತಪಸ್ಸು ರೂಪುಗಳಿಂದ ಕೂಡಿದವನಾಗಿಯೂ ಇದ್ದು, ನಿನ್ನೊಡನೆ ಏಳು ಕಲ್ಪಗಳ ಪರ್ಯಂತ ಬದುಕಿರುವನು.

೮೪-೮೫. ಹೀಗೆ ನೀನು ಕೇಳಿದ ವರಗಳನ್ನೆಲ್ಲಾ ಕೊಟ್ಟಿರುವೆನು. ಅಲ್ಲದೆ ನಿನ್ನ ಮನಸ್ಸಿನಲ್ಲಿರುವ ಇನ್ನೊಂದು ವಿಷಯವನ್ನು ಹೇಳುವೆನು. ಹಿಂದೆ ನೀನು

ಅಗ್ನೌ ಶರೀರತ್ಯಾಗಸ್ತೇ ಪೂರ್ವಮೇವ ಪ್ರತಿಶ್ರುತಃ ।
ಸ ಚ ಮೇಧಾತಿಥೇರ್ಯಜ್ಞೇ ಮುನೇರ್ದ್ವಾದಶವಾರ್ಷಿಕೇ ॥ ೮೫ ॥

ಹುತಪ್ರಜ್ವಲಿತೇ ವಹ್ನೌ ನ ಚಿರಾತ್ಕ್ರಿಯತಾಂ ತ್ವಯಾ ।
ಏತಚ್ಛೈಲೋಪತ್ಯಕಾಯಾಂ ಚಂದ್ರಭಾಗಾನದೀತಟೇ ॥ ೮೬ ॥

ಮೇಧಾತಿಥಿರ್ಮಹಾಯಜ್ಞಂ ಕುರುತೇ ತಾಪಸಾಶ್ರಮೇ ।
ತತ್ರ ಗತ್ವಾ ಸ್ವಯಂ ಛನ್ನಾ ಮುನಿಭಿರ್ನೋಪಲಕ್ಷಿತಾ ॥ ೮೭ ॥

ಮತ್ಪ್ರಸಾದಾದ್ವಹ್ನಿಜಾತಾ ತಸ್ಯ ಪುತ್ರೀ ಭವಿಷ್ಯಸಿ ।
ಯಸ್ತ್ವಯಾ ವಾಂಛನೀಯೋಽಸ್ತಿ ಸ್ವಾಮೀ ಮನಸಿ ಕಲ್ಪನ ॥ ೮೮ ॥

ತಂ ನಿಧಾಯ ನಿಜಸ್ವಾಂತೇ ತ್ಯಜ ವಹ್ನೌ ವಪುಃ ಸ್ವಕಂ ।
ಯದಾ ತ್ವಂ ದಾರುಣೇ ಸಂಧ್ಯೇ ತಪಶ್ಚರಸಿ ಪರ್ವತೇ ॥ ೮೯ ॥

ಅಗ್ನಿಯಲ್ಲಿ ಶರೀರವನ್ನು ಬಿಡಬೇಕೆಂದು ಸಂಕಲ್ಪಮಾಡಿರುವೆ. ಆ ಸಂಕಲ್ಪವನ್ನು ಮೇಧಾತಿಥಿಮುನಿಯು ಹನ್ನೆರಡುವರ್ಷ ಪರ್ಯಂತ ಮಾಡುವ ಯಜ್ಞದಲ್ಲಿ ಜ್ವಲಿಸುತ್ತಿರುವ ಅಗ್ನಿಯಲ್ಲಿ ನೆರವೇರಿಸು.

೮೬. ಆ ಮೇಧಾತಿಥಿಮುನಿಯು ಈ ಬೆಟ್ಟದ ತಪ್ಪಲಲ್ಲಿ ಚಂದ್ರಭಾಗಾನದಿಯ ದಡದಲ್ಲಿರುವ ಋಷ್ಯಾಶ್ರಮದಲ್ಲಿ ದೊಡ್ಡ ಯಾಗವನ್ನು ಮಾಡುತ್ತಲಿರುವನು.

೮೭-೮೮. ಅಲ್ಲಿಗೆ ಹೋಗಿ ಮುನಿಗಳು ಕಾಣದಂತೆ ಮರೆಯಾಗಿದ್ದು, ಅಗ್ನಿಗೆ ಪ್ರವೇಶಿಸು. ಮುಂದೆ ನನ್ನ ಅನುಗ್ರಹದಿಂದ ನೀನು ಆ ಮೇಧಾತಿಥಿಯ ಮಗಳಾಗಿ ಜನಿಸುವೆ. ನೀನು ಯಾವನನ್ನು ಪತಿಯನ್ನಾಗಿ ವರಿಸಬೇಕೆಂದಿರುವೆಯೋ ಅವನನ್ನು ಮನಸ್ಸಿನಲ್ಲಿ ಧ್ಯಾನಿಸಿಕೊಂಡು ಅಗ್ನಿಯಲ್ಲಿ ಶರೀರವನ್ನು ಬಿಡು.

೮೯-೯೩. ಎಲೌ ಸಂಧ್ಯೆಯೇ ! ನೀನು ಯಾವಾಗ ಘೋರವಾದ ತಪಸ್ಸನ್ನು ನಾಲ್ಕುಯುಗಗಳ ಪರ್ಯಂತ ಮಾಡುತ್ತಿದ್ದೆಯೋ ಆ ಮಧ್ಯೆ ಕೃತಯುಗ ಕಳೆಯಲು ತ್ರೇತಾಯುಗದ ಮೊದಲನೆಯ ಭಾಗದಲ್ಲಿ ದಕ್ಷಬ್ರಹ್ಮನಿಗೆ ಇಪ್ಪತ್ತೇಳುಮಂದಿ ಕನ್ಯೆ

ಯಾವಚ್ಚತುರ್ಯುಗಂ ತಸ್ಯ ವ್ಯತೀತೇ ತು ಕೃತೇ ಯುಗೇ ।
ತ್ರೇತಾಯಾಃ ಪ್ರಥಮೇ ಭಾಗೇ ಜಾತಾ ದಕ್ಷಸ್ಯ ಕನ್ಯಕಾ ॥ ೯೦ ॥

ಸ ದದೌ ಕನ್ಯಕಾಃ ಸಪ್ತವಿಂಶತಿಂ ಚ ಸುಧಾಂಶವೇ ।
ತಾಸಾಂ ಹೇತೋರ್ಯದಾ ಶಪ್ತಶ್ಚಂದ್ರೋ ದಕ್ಷೇಣ ಕೋಪಿನಾ ॥ ೯೧ ॥

ತದಾ ಭವತ್ಯಾ ನಿಕಟೇ ಸರ್ವೇ ದೇವಾಃ ಸಮಾಗತಾಃ ।
ನ ದೃಷ್ಟಾಶ್ಚ ತ್ವಯಾ ಸಂಜ್ಞೇ ದೇವಾಶ್ಚ ಬ್ರಹ್ಮಣಾ ಸಹ ॥ ೯೨ ॥

ಮಯಿ ವಿನ್ಯಸ್ತಮನಸಾ ತ್ವಂ ಚ ದೃಷ್ಟಾ ನ ತೈಃ ಪುನಃ ।
ಚಂದ್ರಸ್ಯ ಶಾಪಮೋಕ್ಷಾರ್ಥಂ ಚಂದ್ರಭಾಗಾ ನದೀ ಯಥಾ ॥ ೯೩ ॥

ಸೃಷ್ಟಾ ಧಾತ್ರಾ ತದೈವಾತ್ರ ಮೇಧಾತಿಥಿರುಪಸ್ಥಿತಃ ।
ತಪಸಾ ತತ್ಸಮೋ ನಾಸ್ತಿ ನ ಭೂತೋ ನ ಭವಿಷ್ಯತಿ ॥ ೯೪ ॥

ತೇನ ಯಜ್ಞಃ ಸಮಾರಬ್ಧೋ ಜ್ಯೋತಿಷ್ಟೋಮೋ ಮಹಾವಿಧಿಃ ।
ತತ್ರ ಪ್ರಜ್ವಲಿತೋ ವಹ್ನಿಸ್ತಸ್ಮಿಂಸ್ತ್ಯಜ ವಪುಃ ಸ್ವಕಂ ॥ ೯೫ ॥

ಯರು ಜನಿಸಿದರು. ದಕ್ಷಬ್ರಹ್ಮನು ಆ ಇಪ್ಪತ್ತೇಳುಮಂದಿ ಕನ್ನಿಯರನ್ನು ಚಂದ್ರನಿಗೆ ಮದುವೆಮಾಡಿಕೊಟ್ಟನು. ಆ ಕನ್ಯೆಯರ ನಿಮಿತ್ತವಾಗಿ ಮುಂದೆ ಚಂದ್ರನನ್ನು ದಕ್ಷನು ಕೋಪದಿಂದ (ಕ್ಷಯವನ್ನು ಹೊಂದುವಂತೆ) ಶಪಿಸಿದನು. ಆಗ ಆ ಶಾಪನಿವೃತ್ತಿಗಾಗಿ ದೇವತೆಗಳು ಬ್ರಹ್ಮನೊಡನೆ ನಿನ್ನ ಸಮಾಪದಲ್ಲಿಯೇ ಬಂದಿದ್ದರು. ನನ್ನಲ್ಲಿಯೇ ನಟ್ಟ ಮನಸ್ಸುಳ್ಳ ನೀನು ಆ ದೇವತೆಗಳನ್ನು ನೋಡಲಿಲ್ಲ. ಅಲ್ಲದೆ ಬ್ರಹ್ಮನು ಚಂದ್ರಶಾಪ ನಿವೃತ್ತಿಗಾಗಿ ಚಂದ್ರಭಾಗಾನದಿಯನ್ನು ಹೇಗೆ ನಿರ್ಮಿಸಿದನೆಂಬುದೂ ನಿನಗೆ ತಿಳಿಯಲಿಲ್ಲ.

೯೪—೯೬. ಆ ಚಂದ್ರಭಾಗಾನದಿಯ ದಡದಲ್ಲಿಯೇ ಋಷ್ಯಾಶ್ರಮದಲ್ಲಿ ಮೇಧಾತಿಥಿಮುನಿಯು ಇರುವನು. ಅವನಂತಹ ತಪಸ್ವಿಯು ಹಿಂದೆ ಜನಿಸಿಲ್ಲ, ಮುಂದೆ ಜನಿಸಲೂಬಾರನು. ಆ ಮುನಿಯು ಈಗ ಜ್ಯೋತಿಷ್ಟೋಮವೆಂಬ ದೊಡ್ಡ ಯಾಗವನ್ನು ಮಾಡಲು ಪ್ರಾರಂಭಿಸಿರುವನು. ಅಲ್ಲಿ ಪ್ರಜ್ವಲಿಸುತ್ತಿರುವ ಅಗ್ನಿಯಲ್ಲಿ

ಏತನ್ಮಯಾ [illegible]ಪಿತಂ ತೇ ಕಾರ್ಯಾರ್ಘಂ ಭೋಸ್ತಪಸ್ವಿನಿ ।
ತತ್ಕುರುಷ್ವ ಮಹಾಭಾಗೇ ಯಾಹಿ ಯಜ್ಞಂ ಮಹಾಮುನೇಃ ॥ ೯೬ ॥

॥ ಮಾರ್ಕಂಡೇಯ ಉವಾಚ ॥

ನಾರಾಯಣಃ ಸ್ವಯಂ ಸಂಧ್ಯಾಂ ಪಸ್ಪರ್ಶಾಥಾಗ್ರಪಾಣಿನಾ ।
ತತಃ ಪುರೋಡಾಶಮಯಂ ತಚ್ಛರೀರಮಭೂತ್ಕ್ಷಣಾತ್ ॥ ೯೭ ॥

ಮಹಾಮುನೇರ್ಮಯಾ ಯಜ್ಞೇ ತಸ್ಮಿನ್ವಿಶ್ವೋಪಕಾರಿಣಿ ।
ನಾಗ್ನಿಃ ಕ್ರವ್ಯಾದತಾಂ ಯಾತು ತ್ವೇತದರ್ಘಂ ತಥಾ ಕೃತಂ ॥ ೯೮ ॥

ಏವಂ ಕೃತ್ವಾ ಜಗನ್ನಾಥಸ್ತ್ರೈವಾಂತರಧೀಯತ ।
ಸಂಧ್ಯಾಪ್ಯಗಚ್ಛತ್ತತ್ಸತ್ರೇ ಯತ್ರ ಮೇಧಾತಿಥಿರ್ಮುನಿಃ ॥ ೯೯ ॥

ನಿನ್ನ ಶರೀರವನ್ನು ತ್ಯಾಗಮಾಡು. ಮಹಾತಪಸ್ವಿಯಾದ ಎಲೌ ಸಂಧ್ಯೆಯೇ ! ನಿನ್ನ ಕಾರ್ಯಕ್ಕಾಗಿ ಮೇಧಾತಿಥಿಯ ಯಜ್ಞವನ್ನು ತೋರಿಸಿರುವೆನು. ಮಹಾಮುನಿಯಾದ ಮೇಧಾತಿಥಿಯ ಯಜ್ಞಕ್ಕೆ ಹೋಗಿ ಅಲ್ಲಿ ನಾನು ಹೇಳಿದುದನ್ನು ಮಾಡು.

೯೭. ಮಾರ್ಕಂಡೇಯಮುನಿಯು ಹೇಳಿದನು;—ನಾರಾಯಣನು ಹೀಗೆ ಹೇಳಿ ಆ ಸಂಧ್ಯೆಯನ್ನು ಕೈಯಿಂದ ಸ್ಪರ್ಶಿಸಿದನು. ಆ ಕೂಡಲೆ ಅವಳ ಶರೀರವು ಪುರೋಡಾಶ (ಯಾಗದಲ್ಲಿ ಹೋಮಮಾಡುವ ಅರ್ಧ ಬೆಂದ ಹಿಟ್ಟು ಅಥವಾ ರೊಟ್ಟಿ) ರೂಪವಾಯಿತು.

೯೮. ಅಗ್ನಿಯು ಎಂದಿಗೂ ಕ್ರವ್ಯಾದ (ನರಮಾಂಸವನ್ನು ತಿನ್ನುವವ) ನಲ್ಲ. ಆದುದರಿಂದ ಮೇಧಾತಿಥಿಮಹಾಮುನಿಯು ಜಗತ್ತಿಗೆ ಹಿತವನ್ನುಂಟುಮಾಡುವುದಕ್ಕಾಗಿ ಮಾಡುತ್ತಿದ್ದ ಯಜ್ಞದಲ್ಲಿ ಸಂಧ್ಯೆಯು ಪುರೋಡಾಶರೂಪದಿಂದ ಶರೀರವನ್ನು ಬಿಡಬೇಕಾಯಿತು.

೯೯. ಹೀಗೆ ಆ ಸಂಧ್ಯೆಯನ್ನು ಪುರೋಡಾಶವಾಗಿ ಮಾಡಿ, ನಾರಾಯಣನು ಅಲ್ಲಿಯೇ ಅಂತರ್ಧಾನನಾದನು. ಆ ಸಂಧ್ಯೆಯೂ ಸಹ (ಪುರೋಡಾಶ ಶರೀರದಿಂದ) ಮೇಧಾತಿಥಿಯ ಯಜ್ಞಕ್ಕೆ ತೆರಳಿದಳು.

ಅಥ ವಿಷ್ಣೋಃ ಪ್ರಸಾದೇನ ಕೇನಾಪ್ಯನುಪಲಕ್ಷಿತಾ ।
ಪ್ರವಿವೇಶ ತದಾ ಯಜ್ಞಂ ಸಂಧ್ಯಾ ಮೇಧಾತಿಥೇರ್ಮುನೇಃ ॥ ೧೦೦ ॥

ವಸಿಷ್ಠೇನ ಪುರಾ ಸಾ ತು ವರ್ಣಿತೇ ಭೂತ್ವಾ ತಪಸ್ವಿನೀ ।
ಉಪದಿಷ್ಟಾ ತಪಶ್ಚರ್ತುಂ ವಚನಾತ್ಪರಮೇಷ್ಠಿನಃ ॥ ೧೦೧ ॥

ತಮೇವ ಕೃತ್ವಾ ಮನಸಿ ತಪಶ್ಚರ್ಯೋಪದೇಶಕಂ
ಪತಿತ್ವೇನ ತದಾ ಸಂಧ್ಯಾ ಬ್ರಾಹ್ಮಣಂ ಬ್ರಹ್ಮಚಾರಿಣಂ ॥ ೧೦೨ ॥

ಸಮಿದ್ಧೇಽಗ್ನೌ ಮಹಾಯಜ್ಞೇ ಮುನಿಭಿರ್ಽಪಲಕ್ಷಿತಾ ।
ತದಾ ವಿಷ್ಣೋಃ ಪ್ರಸಾದೇನ ಸಂವಿಶೇಶ ವಿಧೇಃ ಸುತಾ ॥ ೧೦೩ ॥

ತಸ್ಯಾಃ ಪುರೋಡಾಶಮಯಂ ಶರೀರಂ ತತ್ಕ್ಷಣಾತ್ತತಃ ।
ದಗ್ಧಂ ಪುರೋಡಾಶಗಂಧಂ ವ್ಯಸ್ತಾರಯದಲಕ್ಷಿತಂ ॥ ೧೦೪ ॥

ವಹ್ನಿಸ್ತಸ್ಯಾಃ ಶರೀರಂ ತು ದಗ್ಧ್ವಾ ಸೂರ್ಯಸ್ಯ ಮಂಡಲೇ ।
ಶುದ್ಧಂ ಪ್ರವೇಶಯಾಮಾಸ ವಿಷ್ಣೋರೇವಾಜ್ಞಯಾ ಪುನಃ ॥ ೧೦೫ ॥

---

೧೦೦. ಆಮೇಲೆ ನಾರಾಯಣನ ಅನುಗ್ರಹದಿಂದ ಯಾರಿಗೂ ಕಾಣಿಸದಂತೆ ಸಂಧ್ಯೆಯು ಮೇಧಾತಿಥಿಯ ಯಜ್ಞಶಾಲೆಯನ್ನು ಪ್ರವೇಶಿಸಿದಳು.

೧೦೧—೧೦೩. ಹಿಂದೆ ವಸಿಷ್ಠಮುನಿಯು ಬ್ರಹ್ಮನ ಮಾತಿನಂತೆ ಬ್ರಹ್ಮಚಾರಿಯಾಗಿ ಆ ಸಂಧ್ಯೆಗೆ ತಪಸ್ಸನ್ನು ಆಚರಿಸುವ ಕ್ರಮವನ್ನು ಉಪದೇಶಿಸಿದ್ದನಷ್ಟೆ ? ತನಗೆ ತಪಶ್ಚರ್ಯೆಯನ್ನು ಉಪದೇಶಿಸಿದ ಆ ಬ್ರಾಹ್ಮಣ ಬ್ರಹ್ಮಚಾರಿಯನ್ನೇ ಮುಂದಿನ ಜನ್ಮದಲ್ಲಿ ತನಗೆ ಪತಿಯಾಗಬೇಕೆಂದು ಮನಸ್ಸಿನಲ್ಲಿ ಧ್ಯಾನಿಸಿ, ನಾರಾಯಣನ ವರದಿಂದ ಮುನಿಗಳಿಗೆ ಕಾಣಿಸದಂತೆ ಜ್ವಲಿಸುತ್ತಿರುವ ಯಜ್ಞಾಗ್ನಿಯಲ್ಲಿ ಪ್ರವೇಶಿಸಿದಳು.

೧೦೪. ಪುರೋಡಾಶರೂಪವಾದ ಅವಳ ಶರೀರವು ಆ ಕೂಡಲೆ ಭಸ್ಮವಾಗಿ ಹೋಯಿತು. ಸುಟ್ಟ ಪುರೋಡಾಶದ ವಾಸನೆಯು ಅಲ್ಲೆಲ್ಲಾ ಹರಡಿತು.

೧೦೫. ಆಗ ಅಗ್ನಿಯು, ಸಂಧ್ಯೆಯ ಪುರೋಡಾಶಾರೂಪವಾದ ಶರೀರವನ್ನು ಸುಟ್ಟು ಶುದ್ಧವಾದ ಅವಳ ಶರೀರವನ್ನು ವಿಷ್ಣುವಿನ ಆಜ್ಞೆಯಂತೆ ಸೂರ್ಯಮಂಡಲಕ್ಕೆ ಪ್ರವೇಶಮಾಡಿಸಿದನು.

ಸೂರ್ಯೋ ದ್ವಿಧಾ ವಿಭಜ್ಯಾಥ ತಚ್ಛರೀರಂ ತದಾ ರಥೇ ।
ಸ್ವಕೇ ಸಂಸ್ಥಾಪಯಾಮಾಸ ಪ್ರೀತಯೇ ಪಿತೃದೇವಯೋಃ ॥ ೧೦೬ ॥

ಯದೂರ್ಧ್ವಭಾಗಾಸ್ತಸ್ಯಾಸ್ತು ಶರೀರಸ್ಯ ದ್ವಿಜೋತ್ತಮಾಃ ।
ಪ್ರಾತಃಸಂಧ್ಯಾಽಭವತ್ತಾ ತು ಅಹೋರಾತ್ರಾದಿಮಧ್ಯಗಾ ॥ ೧೦೭ ॥

ಯಚ್ಛೇಷಭಾಗಸ್ತಸ್ಯಾಸ್ತು ಅಹೋರಾತ್ರಾಂತಮಧ್ಯಗಾ ।
ಸಾ ಸಾಯಮುಭವತ್ಸಂಧ್ಯಾ ಪಿತೃಪ್ರೀತಿಪ್ರದಾ ಸದಾ ॥ ೧೦೮ ॥

ಸೂರ್ಯೋದಯಾತ್ತು ಪ್ರಥಮಂ ಯದಾ ಸ್ಯಾದರುಣೋದಯಃ ।
ಪ್ರಾತಃಸಂಧ್ಯಾ ತದೋದೇತಿ ದೇವಾನಾಂ ಪ್ರೀತಿಕಾರಿಣೀ ॥ ೧೦೯ ॥

ಅಸ್ತಂಗತೇ ತತಃ ಸೂರ್ಯೇ ಶೋಣಪದ್ಮನಿಭಾ ಸದಾ ।
ಉದೇತಿ ಸಾಯಂಸಂಧ್ಯಾಪಿ ಪಿತೄಣಾಂ ಮೋದಕಾರಿಣೀ ॥ ೧೧೦ ॥

---

೧೦೬. ಸೂರ್ಯನು ಅವಳ ಶರೀರವನ್ನು ಎರಡಾಗಿ ವಿಭಾಗಿಸಿ ಪಿತೃಗಳ ಮತ್ತು ದೇವತೆಗಳ ಪ್ರೀತಿಗಾಗಿ ತನ್ನ ರಥದಲ್ಲಿ ಸ್ಥಾಪಿಸಿದನು.

೧೦೭-೧೦೮. ಎಲೈ ಬ್ರಾಹ್ಮಣೋತ್ತಮರೇ! ಆ ಸಂಧ್ಯೆಯ ಶರೀರದ ಮೇಲ್ಭಾಗಗಳು ರಾತ್ರಿ ಮತ್ತು ಹಗಲಿನ ಮಧ್ಯದಲ್ಲಿ ಬರುವ ಪ್ರಾತಸ್ಸಂಧ್ಯಾಕಾಲವಾಯಿತು. ಆ ಶರೀರದ ಮಿಕ್ಕ ಭಾಗವು, ಹಗಲು ಮತ್ತು ರಾತ್ರಿಯ ಮಧ್ಯದಲ್ಲಿ ಬರುವ ಪಿತೃದೇವತೆಗಳಿಗೆ ಪ್ರೀತಿಯನ್ನುಂಟುಮಾಡುವ ಸಾಯಂಸಂಧ್ಯೆಯಾಯಿತು.

೧೦೯. ಸೂರ್ಯನು ಉದಯಿಸುವುದಕ್ಕಿಂತಲೂ ಮುಂಚೆ ಅರುಣೋದಯವಾಗುವಾಗ ದೇವತೆಗಳಿಗೆ ಪ್ರೀತಿಯನ್ನುಂಟುಮಾಡುವ ಪ್ರಾತಃಸಂಧ್ಯೆಯು ಉದಯಿಸುವಳು.

೧೧೦. ಅನಂತರ ಸೂರ್ಯನು ಅಸ್ತಮಿಸಲು, ರಕ್ತಕಮಲದಂತೆ ಕೆಂಪಾದ ವರ್ಣವುಳ್ಳವಳಾಗಿ ಪಿತೃಗಳಿಗೆ ಪ್ರೀತಿಯನ್ನುಂಟುಮಾಡುವ ಸಾಯಂಸಂಧ್ಯೆಯು ಉದಯಿಸುವಳು.

ತಸ್ಯಾಃ ಪ್ರಾಣಾಸ್ತು ಮನಸಾ ವಿಷ್ಣುನಾ ಪ್ರಭವಿಷ್ಣುನಾ ।
ದಿವ್ಯೇನ ತು ಶರೀರೇಣ ಚಕ್ರೇಽಥ ಶರೀರಿಣಃ ॥ ೧೧೧ ॥

ಮುನೇರ್ಯಜ್ಞಾವಸಾನೇ ತು ಸಂಪ್ರಾಪ್ತೇ ಮುನಿನಾ ತು ಸಾ ।
ಪ್ರಾಪ್ತಾ ಪುತ್ರೀ ವಹ್ನಿಮಧ್ಯೇ ತಪ್ತಕಾಂಚನಸುಪ್ರಭಾ ॥ ೧೧೨ ॥

ತಾಂ ಜಗ್ರಾಹ ತದಾ ಪುತ್ರೀಂ ಮುನಿರಾಮೋದಸಂಯುತಃ ।
ಯಜ್ಞಾರ್ಥತೋಯೈಃ ಸಂಸ್ನಾಪ್ಯ ನಿಜಕ್ರೋಡೇ ಕೃಪಾಯುತಃ ॥ ೧೧೩ ॥

ಅರುಂಧತೀತಿ ತಸ್ಯಾಸ್ತು ನಾಮ ಚಕ್ರೇ ಮಹಾಮುನಿಃ ।
ಶಿಷ್ಯೈಃ ಪರಿವೃತಸ್ತತ್ರ ಮಹಾಮೋದಮವಾಪ ಚ ॥ ೧೧೪ ॥

ನ ಖಣಿದ್ಧಿ ಯಕೋ ಧರ್ಮಂ ಸಾ ಕೇನಾಪಿ ಚ ಕಾರಣಾತ್ ।
ಅತಸ್ತ್ರಿಲೋಕವಿದಿತಂ ನಾಮ ಸಾ ಪ್ರಾಪ ಸಾನ್ವಯಂ ॥ ೧೧೫ ॥

---

೧೧೧. ಅವಳ ಪ್ರಾಣಗಳನ್ನು ಸರ್ವಸಮರ್ಥನಾದ ವಿಷ್ಣುವು ಮನಸ್ಸಿನಿಂದ ಮನೋಹರವಾದ ಶರೀರವುಳ್ಳವುಗಳನ್ನಾಗಿಮಾಡಿದನು.

೧೧೨-೧೧೩. ಇತ್ತ ಮೇಧಾತಿಥಿಯ ಯಾಗವು ಮುಗಿಯುವಾಗ, ಆ ಮುನಿಗೆ ಅಗ್ನಿಯ ಮಧ್ಯದಲ್ಲಿ ಪುಟಕ್ಕೆ ಹಾಕಿದ ಸುವರ್ಣದಂತೆ ಹೊಳೆಯುತ್ತಿರುವ ಓರ್ವ ಕನ್ಯೆಯು ಗೋಚರಿಸಿದಳು. ಆ ಕನ್ಯೆಯನ್ನು ನೋಡಿ ಮುನಿಯು ಸಂತೋಷಗೊಂಡು ಅವಳನ್ನು ತನ್ನ ಮಗಳಾಗಿ ಸ್ವೀಕರಿಸಿದನು. ಮತ್ತು ಪ್ರೀತಿಯಿಂದ ಅವಳನ್ನು ಯಜ್ಞಕ್ಕಾಗಿ ತಂದಿರುವ ಅವಭೃಥಜಲಗಳಿಂದ ಸ್ನಾನಮಾಡಿಸಿ, ತನ್ನ ಮನೆಯಲ್ಲಿ ಇಟ್ಟುಕೊಂಡು ಕಾಪಾಡುತ್ತಿದ್ದನು.

೧೧೪. ಆ ಕನ್ಯೆಗೆ ಮುನಿಯು ಅರುಂಧತಿಯೆಂದು ಹೆಸರಿಟ್ಟನು. ಅವಳ ಲಾಭದಿಂದ ಆ ಮುನಿಗೂ ಅವನ ಶಿಷ್ಯರಿಗೂ ತುಂಬ ಸಂತೋಷವಾಯಿತು.

೧೧೫. ಆ ಅರುಂಧತಿಯು ಎಂತಹ ಸಂದರ್ಭಗಳಲ್ಲಿಯೂ ಧರ್ಮಕ್ಕೆ ವಿರೋಧವನ್ನಾಚರಿಸುತ್ತಿರಲಿಲ್ಲ. ಆದುದರಿಂದಲೇ ಅವಳ ಹೆಸರು ಮೂರುಲೋಕಗಳಲ್ಲಿಯೂ ಪ್ರಸಿದ್ಧವಾಯಿತು.

ಯಜ್ಞಂ ಸಮಾಪ್ಯ ಸ ಮುನಿಃ ಕೃತಕೃತ್ಯಭಾವ
ಮಾಸಾದ್ಯ ಸಂಮುದಯುತಸ್ತನಯಾಪ್ರಲಂಭಾತ್ ॥
ತಸ್ಮಿನ್ನಿಜಾಶ್ರಮಪದೇ ಸಹ ಶಿಷ್ಯವರ್ಗೈ
ಸ್ತಾಮೇವ ಸಂತತಮಸೌ ದಯತೇ ಮಹರ್ಷಿಃ ॥ ೧೧೬ ॥

॥ ಇತಿ ಶ್ರೀ ಕಾಲಿಕಾಪುರಾಣೇ ದ್ವಾವಿಂಶೋಽಧ್ಯಾಯಃ ॥

---

೧೧೬. ಆಮೇಲೆ ಆ ಮೇಧಾತಿಥಿಮುನಿಯು ಯಾಗವನ್ನು ಮುಗಿಸಿ ಕೃತಕೃತ್ಯನಾಗಿ, ವಿಶೇಷವಾದ ಪುತ್ರಿಯ ಲಾಭದಿಂದ ತುಂಬಾ ಹರ್ಷಗೊಂಡನು. ತನ್ನ ಆಶ್ರಮದಲ್ಲಿ ಶಿಷ್ಯರೊಡನೆ ವಾಸಿಸುತ್ತಾ ಆ ಅರುಂಧತಿಯಲ್ಲಿ ಯಾವಾಗಲೂ ಪ್ರೀತಿಯುಳ್ಳವನಾಗಿದ್ದನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀ ಕಾಲಿಕಾಪುರಾಣೇ ತ್ರಯೋವಿಂಶೋಽಧ್ಯಾಯಃ

ಇಪ್ಪತ್ತಮೂರನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ಅಥ ಸಾ ವವೃಧೇ ದೇವೀ ತಸ್ಮಿನ್ಮುನಿವರಾಶ್ರಮೇ ।
ಚಂದ್ರಭಾಗಾನದೀತೀರೆ ತಾಪಸಾರಣ್ಯಸಂಜ್ಞಕೇ ॥ ೧ ॥

ಯಥಾ ಚಂದ್ರಕಲಾ ಶುಕ್ಲಪಕ್ಷೇ ನಿತ್ಯಂ ವಿವರ್ಧತೇ ।
ಯಥಾ ಜ್ಯೋತ್ಸ್ನಾ ತಥಾ ಸಾಽಪಿ ಪ್ರಾಪ ವೃದ್ಧಿಮರುಂಧತೀ ॥ ೨ ॥

ಸಾ ಪ್ರಾಪ್ತೇ ಪಂಚಮೇ ವರ್ಷೇ ಚಂದ್ರಭಾಗಾಂ ತದಾ ಗುಣೈಃ ।
ತಾಪಸಾರಣ್ಯಮಪಿ ಸಾ ಪವಿತ್ರಮಕರೋತ್ಸತೀ ॥ ೩ ॥

॥ ಇಪ್ಪತ್ತಮೂರನೆಯ ಅಧ್ಯಾಯವು ॥

೧-೨. ಮಾರ್ಕಂಡೇಯಮುನಿಯು ಹೇಳಿದನು :—ಅನಂತರ ಅರುಂಧತಿಯು ಚಂದ್ರಭಾಗಾನದೀತೀರದಲ್ಲಿದ್ದ ಆ ಮೇಧಾತಿಥಿಮುನಿಶ್ರೇಷ್ಠನ ತಾಪಸಾರಣ್ಯವೆಂಬ ಆಶ್ರಮದಲ್ಲಿ, ಶುಕ್ಲಪಕ್ಷದಲ್ಲಿ ದಿನದಿನವೂ ಚಂದ್ರನಕಲೆಯೂ, ಪ್ರಕಾಶವೂ ಹೇಗೆ ವೃದ್ಧಿಹೊಂದುವವೋ ಅದರಂತೆ ದಿನದಿನವೂ ವೃದ್ಧಿಹೊಂದುತ್ತಿದ್ದಳು.

೩-೪. ಐದನೆಯವರ್ಷವು ತುಂಬಲು ಆ ಅರುಂಧತಿಯು ತನ್ನ ಸೌಶೀಲ್ಯ, ಪವಿತ್ರತೆ ಮೊದಲಾದ ಗುಣಗಳಿಂದ ಚಂದ್ರಭಾಗಾನದಿಯನ್ನೂ, ತಾಪಸಾರಣ್ಯವನ್ನೂ

ತತ್ರ ತೀರ್ಥಂ ಮಹಾಪುಣ್ಯಂ ಮೇಧಾತಿಥಿನಿಸೇವಿತಂ ।
ಕ್ರೀಡಾಸ್ಥಾನಮರುಂಧತ್ಯಾಃ ಪೂತಂ ಬಾಲ್ಯೇಚಿತಂ ಕೃತಂ ॥ ೪ ॥

ಅದ್ಯಾಪಿ ತಾಪಸಾರಣ್ಯೇ ಚಂದ್ರಭಾಗಾನದೀಜಲೇ ।
ಅರುಂಧತೀತೀರ್ಥತೋಯೇ ಸ್ನಾತ್ವಾ ಯಾತಿ ಹರಿಂ ನರಃ ॥ ೫ ॥

ಕಾರ್ತಿಕೇ ಸಕಲಂ ಮಾಸಂ ಚಂದ್ರಭಾಗಾನದೀಜಲೇ ।
ಸ್ನಾತ್ವಾ ವಿಷ್ಣುಗೃಹಂ ಗತ್ವಾ ಕ್ಷಯಂತೇ ಮೋಕ್ಷಮವಾಪ್ನುಯಾತ್ ॥ ೬ ॥

ಮಾಘೇ ಮಾಸಿ ಪೌರ್ಣಮಾಸ್ಯಾಮಮಾಯಾಂ ವಾ ತಥೈವ ಚ ।
ಚಂದ್ರಭಾಗಾಜಲೇ ಸ್ನಾನಂ ಯಃಕುರ್ಯಾತ್ಸಕೃತ್ಸಕೃತ್ ॥ ೭ ॥

ತಸ್ಯ ವಂಶೇ ರಾಜಯಕ್ಷ್ಮಾ ನ ಕದಾಚಿದ್ಭವಿಷ್ಯತಿ ।
ದೇಹಾಂತೇ ಚಂದ್ರಭವನಂ ಗತ್ವಾ ಯಾತಿ ಹರೇರ್ಗೃಹಂ ॥ ೮ ॥

ಪುಣ್ಯಕ್ಷಯಾದಿಹಾಗತ್ಯ ವೇದಜ್ಞೋ ಬ್ರಾಹ್ಮಣೋ ಭವೇತ್ ।
ಚಂದ್ರಭಾಗಾಜಲಂ ಪೀತ್ವಾ ಚಂಪ್ರಲೋಕಮವಾಪ್ನುಯಾತ್ ॥ ೯ ॥

ಪವಿತ್ರವನ್ನಾಗಿ ಮಾಡಿದಳು. ಅಲ್ಲದೆ ಮೇಧಾತಿಥಿಮುನಿಯು ನಿತ್ಯವೂ ಸ್ನಾನಮಾಡುತ್ತಿದ್ದ ಮಹಾಪವಿತ್ರವಾದೊಂದು ತೀರ್ಥವಿದ್ದಿತು. ಅರುಂಧತಿಯ ಬಾಲ್ಯದ ಆಟದ ಸ್ಥಾನವಾಗಿದ್ದುದರಿಂದ ಅದೂ ಪವಿತ್ರವಾಯಿತು.

೫-೬. ಈಗಲೂ ಆ ಚಂದ್ರಭಾಗಾನದಿಯ ತೀರದಲ್ಲಿರುವ ಅರುಂಧತೀತೀರ್ಥದಲ್ಲಿ ಯಾವನು ಸ್ನಾನಮಾಡುವನೋ ಅವನು ವಿಷ್ಣುಲೋಕವನ್ನು ಸೇರುವನು. ಅಲ್ಲದೆ ಕಾರ್ತಿಕಮಾಸದಲ್ಲಿ ಒಮ್ಮೆಯಾದರೂ ಚಂದ್ರಭಾಗಾನದಿಯಲ್ಲಿ ಸ್ನಾನಮಾಡಿದ ಮನುಜನು ವಿಷ್ಣುಲೋಕವನ್ನು ಪಡೆದು, ಕೊನೆಗೆ ಮುಕ್ತಿಯನ್ನು ಹೊಂದುವನು.

೭—೧೦. ಮಾಘಮಾಸದ ಹುಣ್ಣಿಮೆಯಲ್ಲಿಯೂ, ಅಮಾವಾಸ್ಯೆಯಲ್ಲಿಯೂ ಚಂದ್ರಭಾಗಾನದಿಯಲ್ಲಿ ಯಾವನು ಸ್ನಾನಮಾಡುವನೋ ಅವನ ವಂಶದಲ್ಲಿಯೇ ಕ್ಷಯರೋಗವು ಬರುವುದಿಲ್ಲ. ಮೃತನಾದಮೇಲೆ ಅವನು ಚಂದ್ರಲೋಕಕ್ಕೆ ಹೋಗಿ ಅಲ್ಲಿಂದ ವಿಷ್ಣುಲೋಕಕ್ಕೆ ಹೋಗುವನು. ಮುಂದೆ ಅವನ ಪುಣ್ಯವು ನಾಶವಾಗಲು

ಸಕೃತ್ಸ್ನಾತ್ವಾ ತು ವಿಧಿವದ್ವಾಜಿಮೇಧಾಯುತಂ ಲಭೇತ್ ।
ಚಂದ್ರಭಾಗಾಜಲೇ ಸ್ನಾತ್ವಾ ಕ್ರೀಡಂತೀಂ ಬಾಲಲೀಲಯಾ ॥ ೧೦ ॥

ಪಿತುಃ ಸಮೀಪೇ ತತ್ತೀರೇ ಕೆಚಾರ್ಜತ್ತಾಮರುಂಧತೀಂ ।
ಗಚ್ಛನ್ನಾಕಾಶಮಾರ್ಗೇಣ ದದರ್ಶ ಕಮಲಾಸನಃ ॥ ೧೧ ॥

ಅಥಾವತೀರ್ಯ ಭಗವಾನ್ಬ್ರಹ್ಮಾ ಲೋಕಪಿತಾಮಹಃ ।
ಅರುಂಧತ್ಯಾಸ್ತದಾ ಕಾಲಮುಪದೇಶೇ ದದರ್ಶ ಹ ॥ ೧೨ ॥

ಅಥೋವಾಚ ತದಾ ಬ್ರಹ್ಮಾ ಮುನಿಭಿಃ ಪರಿಪೂಜಿತಃ ।
ಮೇಧಾತಿಥಿಪ್ರಭೃತಿಭಿರುಚಿತಂ ತಂ ಮಹಾಮುನಿಂ ॥ ೧೩ ॥

॥ ಬ್ರಹ್ಮೋವಾಚ ॥

ಉಪದೇಶಸ್ಯ ಕಾಲೋಽಯಮರುಂಧತ್ಯಾ ಮಹಾಮುನೇ ।
ತಸ್ಮಾದೇನಾಂ ಸತೀನಾಂ ತು ಸ್ತ್ರೀಣಾಂ ತ್ವಂ ಕುರು ಸನ್ನಿಧೌ ॥ ೧೪ ॥

ಭೂಲೋಕಕ್ಕೆ ಬಂದು ಸೇದವೇದಾಂಗಗಳನ್ನು ಬಲ್ಲ ಬ್ರಾಹ್ಮಣನಾಗಿ ಜನಿಸುವನು. ಅಲ್ಲದೆ ಚಂದ್ರಭಾಗಾನದಿಯ ಜಲವನ್ನು ಕುಡಿದುದೇ ಆದರೆ ಚಂದ್ರಲೋಕವು ಲಭಿಸುವುದು. ವಿಧಿಯಂತೆ ಚಂದ್ರಭಾಗಾನದಿಯಲ್ಲಿ ಒಂದೇಬಾರಿ ಸ್ನಾನಮಾಡಿದರೂ ಅಶ್ವಮೇಧಯಾಗವನ್ನು ಮಾಡಿದ ಫಲವನ್ನು ಹೊಂದುವನು.

೧೧. ತಂದೆಯಾದ ಮೇಧಾತಿಥಿಯ ಸಮೀಪದಲ್ಲಿ ಆಡುತ್ತಲಿದ್ದ ಅರುಂಧತಿಯನ್ನು ಬ್ರಹ್ಮನು ಆಕಾಶಮಾರ್ಗದಲ್ಲಿ ಹೋಗುತ್ತಿರುವಾಗ ನೋಡಿದನು.

೧೨. ಆಮೇಲೆ ಪೂಜ್ಯನೂ, ಲೋಕಕ್ಕೆ ತಾತನೂ ಆದ ಬ್ರಹ್ಮನು ಕೆಳಗಿಳಿದು ಆಗ ಅರುಂಧತಿಗೆ ಉಪದೇಶಕ್ಕೆ ತಕ್ಕ ಕಾಲವೆಂದು ತಿಳಿದನು.

೧೩. ಬಳಿಕ ಮೇಧಾತಿಥಿಯೇ ಮೊದಲಾದ ಮುನಿಗಳಿಂದ ಯೋಗ್ಯವಾಗಿ ಪೂಜಿತನಾದ ಬ್ರಹ್ಮನು ಆ ಮೇಧಾತಿಥಿಮುನಿಯನ್ನು ಕುರಿತು ಹೀಗೆ ಹೇಳಿದನು.

೧೪—೧೬. ಅರುಂಧತಿಗೆ ಉಪದೇಶಮಾಡಲು ಇದೇ ತಕ್ಕ ಸಮಯವೆಂದು ತಿಳಿದ ಬ್ರಹ್ಮನು ಕೆಳಗಿಳಿದು ಮೇಧಾತಿಥಿಯ ಆಶ್ರಮಕ್ಕೆ ಬಂದನು. ಅತಿಥಿಯಾಗಿ

ಸ್ತ್ರೀಭಿಸ್ತ್ರಿಯಶ್ಚೋಪದೇಶ್ಯಾಃ ಕಾಚಿದನ್ಯತ್ರ ವಿದ್ಯತೇ ।
ಬಹುಲಾಯಾಶ್ಚ ಸಾವಿತ್ರ್ಯಾಃ ಪುತ್ರೀಂ ತ್ವಂ ಸ್ಥಾಪಯಾಂತಿಕೇ ॥ ೧೫ ॥

ತಯೋಃ ಸಂಸರ್ಗಮಾಸಾದ್ಯ ಪುತ್ರೀ ತವ ಮಹಾಮುನೇ ।
ಮಹಾಗುಣ್ಯೈಶ್ವರ್ಯಯುತಾ ನ ಚಿರಾತ್ತು ಭವಿಷ್ಯತಿ ॥ ೧೬ ॥

ಮೇಧಾತಿಥಿರ್ವಚಃ ಶ್ರುತ್ವಾ ಬ್ರಹ್ಮಣಃ ಪರಮಾತ್ಮನಃ ।
ಏವಮೇವೇತಿ ಪ್ರೋವಾಚ ತಂ ತದಾ ಮುನಿಸತ್ತಮಃ ॥ ೧೭ ॥

ತತೋ ಗತೇ ಸುರಶ್ರೇಷ್ಠೇ ಪುತ್ರೀಂ ಮೇಧಾತಿಥಿರ್ಮುನಿಃ ।
ಸಮಾದಾಯ ಯಯೌ ಸೂರ್ಯಭವನಂ ಪ್ರತಿ ತತ್ಕ್ಷಣಾತ್ ॥ ೧೮ ॥

ದದರ್ಶ ತತ್ರ ಸಾವಿತ್ರೀಂ ಸೂರ್ಯಮಂಡಲಮಧ್ಯಗಾಂ ।
ಪದ್ಮಾಸನಗತಂ ದೇವೀಮಕ್ಷಮಾಲಾಧರಾಂ ಸಿತಾಂ ॥ ೧೯ ॥

ಬಂದ ಬ್ರಹ್ಮನನ್ನು ಮೇಧಾತಿಥಿಯು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಲು, ಒಳಿಕ ಆ ಬ್ರಹ್ಮನು ಆ ಮುನಿಯನ್ನು ಕುರಿತು, ಎಲೈ ಮುನಿಶ್ರೇಷ್ಠನೇ ! ಈಗ ಅರುಂಧತಿಗೆ ಉಪದೇಶದ ಕಾಲವು. ಆದಕಾರಣ ಇವಳು ಪತಿವ್ರತೆಯರಾದ ಸ್ತ್ರೀಯರ ಸಹವಾಸದಲ್ಲಿರಬೇಕು. ಸ್ತ್ರೀಯರಿಗೆ, ಸ್ತ್ರೀಯರೇ ಉಪದೇಶಿಸಬೇಕು. ಆದಕಾರಣ ಸೂರ್ಯನ ಪತ್ನಿಯಾದ ಬಹುಲೆಯ ಮತ್ತು ಸಾವಿತ್ರಿಯ ಸಮೀಪದಲ್ಲಿ ನಿನ್ನ ಮಗಳಾದ ಅರುಂಧತಿಯನ್ನು ಬಿಡು. ಆ ಬಹುಲಾ ಮತ್ತು ಸಾವಿತ್ರಿಯರ ಸಹವಾಸವನ್ನು ಹೊಂದಿ ನಿನ್ನ ಮಗಳಾದ ಅರುಂಧತಿಯು ಸ್ವಲ್ಪದಿವಸಗಳಲ್ಲಿಯೇ ಮಹಾಗುಣವತಿಯಾಗುವಳು ಎಂದು ಹೇಳಿದನು.

೧೭. ಬ್ರಹ್ಮನ ಮಾತುಗಳನ್ನು ಕೇಳಿ ಮೇಧಾತಿಥಿಮುನಿಯು, ಹಾಗೆಯೇ ಆಗಲಿ ಎಂದು ಒಪ್ಪಿಕೊಂಡನು.

೧೮—೨೦. ಇತ್ತ ಬ್ರಹ್ಮನು ಹೊರಟುಹೋಗಲು ಮೇಧಾತಿಥಿಯು, ಅರುಂಧತಿಯನ್ನು ಕರೆದುಕೊಂಡು ಆ ಕೂಡಲೇ ಸೂರ್ಯಲೋಕಕ್ಕೆ ಹೋಗಿ, ಸೂರ್ಯಮಂಡಲದ ಮಧ್ಯದಲ್ಲಿ, ಕೈಯ್ಯಲ್ಲಿ ಜಪಮಾಲೆಯನ್ನು ಧರಿಸಿ, ಕಮಲದಲ್ಲಿ ಕುಳಿತಿರುವ

ದೃಷ್ಟ್ವಾ ಸಾ ತೇನ ಮುನಿನಾ ನಿಃಸೃತ್ಯ ರವಿಮಂಡಲಾತ್ ।
ಬಹುಲಾ ಸಾ ಗತಾ ತೂರ್ಣಂ ಪ್ರಸ್ಥಂ ಮಾನಸಭೂಭೃತಃ ॥ ೨೦ ॥

ಪ್ರತ್ಯಹಂ ತತ್ರ ಸಾವಿತ್ರೀ ಗಾಯಿತ್ರೀ ಬಹುಲಾ ತಥಾ ।
ಸರಸ್ವತೀ ಚ ದ್ರುಪದಾ ಪಂಚೈತಾ ಮಾನಸಾಚಲೇ ॥ ೨೧ ॥

ಧರ್ಮಾಖ್ಯಾನೈಸ್ತಥಾ ಸಾಧ್ವೀಕಥಾಃ ಕೃತ್ವಾ ಪರಸ್ಪರಂ ।
ಸ್ವಂ ಸ್ವಂ ಸ್ಥಾನಂ ಪುನರ್ಯಾಂತಿ ಲೋಕಾನಾಂ ಹಿತಕಾಮ್ಯಯಾ ॥ ೨೨ ॥

ಮೇಧಾತಿಥಿಸ್ತು ತಾಃ ಸರ್ವಾ ದೃಷ್ಟ್ವೈವ ಕತ್ರ ತಪೋಧನಃ ।
ಮಾತ್ಯಃ ಸರ್ವಸ್ಯ ಲೋಕಸ್ಯ ಪ್ರಣನಾಮ ಪೃಥಕ್ಪೃಥಕ್ ॥ ೨೩ ॥

ಉವಾಚ ಚ ಸ ತಾಃ ಸರ್ವಾ ಋಷಿಃ ಶ್ಲಕ್ಷ್ಣಂ ತಪೋಧನಃ ।
ಸಸಾಧ್ವಸೋ ವಿಸ್ಮಿತಶ್ಚ ತಾಸಾಮೇಕತ್ರ ದರ್ಶನಾತ್ ॥ ೨೪ ॥

ಶುಭ್ರವಾದ ಸಾವಿತ್ರೀದೇವಿಯನ್ನೂ, ಬಹುಲೆಯನ್ನೂ ನೋಡಿದನು. ಅವಳು ಆಗ ಸೂರ್ಯಮಂಡಲದಿಂದ ಹೊರಟು ಜಾಗ್ರತೆಯಾಗಿ ಮಾನಸವೆಂಬ ಪರ್ವತದ ತಪ್ಪಲಿಗೆ ಹೊರಟಿದ್ದಳು.

೨೧-೨೨. ಆ ಬೆಟ್ಟದ ತಪ್ಪಲಲ್ಲಿ, ಪ್ರತಿದಿನವೂ ಸಾವಿತ್ರಿ, ಗಾಯತ್ರಿ, ಬಹುಲೆ, ಸರಸ್ವತಿ, ದ್ರುಪದೇ ಈ ಐದುಜನ ಸ್ತ್ರೀಯರೂ ಸೇರಿ ಧರ್ಮಪ್ರಧಾನವಾದ ಇತಿಹಾಸವನ್ನೂ, ಪತಿವ್ರತೆಯರ ಕಥೆಗಳನ್ನೂ ಪರಸ್ಪರ ಹೇಳಿಕೊಳ್ಳುತ್ತಾ ಇದ್ದು ಅನಂತರ ತಮ್ಮತಮ್ಮ ಸ್ಥಾನಗಳಿಗೆ ಹೊರಟುಹೋಗುತ್ತಿದ್ದರು. ಅದೇರೀತಿಯಾಗಿ ಆದಿವಸವೂ ಆ ಐದುಜನಗಳೂ ಅಲ್ಲಿ ಸೇರಿದ್ದರು.

೨೩. ಆಗ ಮೇಧಾತಿಥಿಮುನಿಯು ಲೋಕಮಾತೆಯರಾದ ಸಾವಿತ್ರಿಯೇ ಮೊದಲಾದವರು ಒಂದೆಡೆಯಲ್ಲಿ ಸೇರಿರುವುದನ್ನು ನೋಡಿ, ಬೇರೆಬೇರೆಯಾಗಿ ಅವರೆಲ್ಲರನ್ನೂ ನಮಸ್ಕರಿಸಿದನು.

೨೪—೨೭. ಅವರೆಲ್ಲರೂ ಹೀಗೆ ಒಂದೆಡೆಯಲ್ಲಿ ಸೇರಿರುವುದನ್ನು ನೋಡಿದುದರಿಂದ ಆ ಮುನಿಗೆ ತುಂಬಾ ವಿಸ್ಮಯ ಉಂಟಾಯಿತು. ಆಗ ಅವರನ್ನು ಕುರಿತು

॥ ಮೇಧಾತಿಥಿರುವಾಚ ॥

ಮಾತಃ ಸಾವಿತ್ರಿ ಬಹುಲೇ ಮತ್ಪುತ್ರೀಯಂ ಮಹಾಯಶಾಃ ।
ಕಾಲೋಽಯಮುಪದೇಶೇಽಸ್ಯಾಸ್ತದರ್ಥಮಹಮಾಗತಃ ॥ ೨೫ ॥

ಜಗತ್ಸ್ರಷ್ಟಾ ಸಮಾದಿಷ್ಟಾ ಪ್ರಯಾತು ತವ ಶಿಷ್ಯತಾಂ ।
ಏಷಾ ತೇನ ಭವತ್ಪಾರ್ಶ್ವಮಾನೀತಾ ಪುತ್ರಿಕಾ ಮಮ ॥ ೨೬ ॥

ಸೌಚರಿತ್ರ್ಯಂ ಯಥಾಽಸ್ಯಾಃ ಸ್ಯಾತ್ತಥೈನಾಂ ಬಾಲಿಕಾಂ ಮಮ ।
ಯುವಾಂ ವಿನಯತಂ ದೇವ್ಯೌ ಮಾತರ್ಮೂರ್ತರ್ನಮೋಽಸ್ತು ವಾಂ ॥ ೨೭ ॥

ಅಥೋವಾಚ ತದಾ ದೇವೀ ಸಾವಿತ್ರೀ ಮುನಿಸತ್ತಮಂ ।
ಸ್ಮಿತಪೂರ್ವಂ ಬಹುಲಯಾ ಸಹಿತಾ ತಾಂ ಚ ಬಾಲಿಕಾಂ ॥ ೨೮ ॥

॥ ತೇ ಊಚತುಃ ॥

ಬ್ರಹ್ಮನ್ವಿಷ್ಣೋಃ ಪ್ರಸಾದೇನ ಸುಚರಿತ್ರಾ ಭವತ್ಸುತಾ ।
ಪೂರ್ವಮೇವ ಮುನೇ ಭೂತಾ ತದುದ್ದೇಶೇನ ಕಂ ಪುನಃ ॥ ೨೯ ॥

ಮೇಧಾತಿಥಿಮುನಿಯು, ಓ ಸಾವಿತ್ರಿ ಬಹುಲೆಯರೇ ! ಕೀರ್ತಿವಂತಳಾದ ಈ ಅರುಂಧತಿಯು ನನ್ನ ಮಗಳು. ಇವಳಿಗೆ ಈಗ ಉಪದೇಶಕಾಲವು ಸನ್ನಿಹಿತವಾಗಿರುವುದು ಅದಕ್ಕಾಗಿ ನಾನು ನಿಮ್ಮಲ್ಲಿಗೆ ಬಂದಿರುವೆನು. ಬ್ರಹ್ಮನು ಇವಳನ್ನು ನಿಮ್ಮ ಶಿಷ್ಯಳಾಗಲಿ ಎಂದು ಅಪ್ಪಣೆಮಾಡಿರುವುದರಿಂದ ಇವಳನ್ನು ನಿಮ್ಮಲ್ಲಿಗೆ ಕರೆದುಕೊಂಡು ಬಂದಿರುವೆನು. ಈ ಅರುಂಧತಿಯು ಒಳ್ಳೆಯ ಆಚರಣೆಯುಳ್ಳವಳಾಗುವಂತೆ ನೀವು ಇವಳನ್ನು ಶಿಕ್ಷಿಸಿ, ಉಪದೇಶಿಸಬೇಕು. ಓ ಮಾತೆಯರೇ ! ನಿಮಗೆ ನಮಿಸುವೆನು ಎಂದು ಹೇಳಿದನು.

೨೮. ಆಮೇಲೆ ಸಾವಿತ್ರೀದೇವಿಯೂ, ಬಹುಲೆಯೂ, ಮೇಧಾತಿಥಿಮುನಿಯನ್ನೂ, ಅರುಂಧತಿಯನ್ನೂ ಕುರಿತು ಮಂದಹಾಸಪೂರ್ವಕವಾಗಿ ಹೀಗೆ ಹೇಳಿದರು.

೨೯—೩೨. ಆ ಸಾವಿತ್ರಿ, ಬಹುಲೆಯರು ಹೇಳಿದರು:—ಬ್ರಾಹ್ಮಣೋತ್ತಮನಾದ ಓ ಮೇಧಾತಿಥಿಮುನಿಯೇ ! ಈ ನಿನ್ನ ಮಗಳು ವಿಷ್ಣುವಿನ ಅನುಗ್ರಹದಿಂದ

ಕಿಂ ತ್ವಹಂ ಬ್ರಹ್ಮವಾಕ್ಯೇನ ಬಹುಲಾ ಚ ಮಹಾಸತೀ ।
ವಿನೇಷ್ಯಾವಸ್ತವ ಸುತಾಂ ಧೀರಾ ಸ್ಯಾನ್ನ ಚಿರಾದ್ಯಥಾ ॥ ೩೦ ॥

ಬ್ರಹ್ಮಣಃ ಪೂರ್ವದುಹಿತಾ ಭವತಸ್ತು ತಪೋಬಲಾತ್ ।
ತಥಾ ವಿಷ್ಣೋಃ ಪ್ರಸಾದೇನ ಸುತಾ ತೇಽಭೂದರುಂಧತೀ ॥ ೩೧ ॥

ಕುಲಂ ಪುನಾತಿ ಭವತಃ ಸತ್ಯಸೌ ವರ್ಧಯಿಷ್ಯತಿ ।
ಲೋಕಾನಾಮುಥ ದೇವಾನಾಂ ಶಿವಮೇಷಾ ಕರಿಷ್ಯತಿ ॥ ೩೨ ॥

॥ ಮಾರ್ಕಂಡೇಯ ಉವಾಚ ॥

ಅಥ ತಾಭಿರ್ವಿಸೃಷ್ಟಃ ಸ ಮುನಿರ್ಮೇಧಾತಿಥಿಃ ಸುತಾಂ ।
ಆಶ್ವಾಸ್ಯಾರುಂಧತೀಂ ನತ್ವಾ ತಾಃ ಸ್ವಸ್ಥಾನಂ ಜಗಾಮ ಹ ॥ ೩೩ ॥

ಗತೇ ತಸ್ಮಿನ್ಮುನಿವರೇ ಸಹ ತಾಭ್ಯಾಮರುಂಧತೀ ।
ಮಾತೃಭ್ಯಾಮಿವ ನಿರ್ಭೀತಾ ಪಾಲಿತಾ ಮೋದಮಾಪ ಸಾ ॥ ೩೪ ॥

ಮೊದಲೇ ಒಳ್ಳೆಯ ಆಚರಣೆಯುಳ್ಳವಳಾಗಿರುತ್ತಾಳೆ. ಅವಳಿಗೆ ಉಪದೇಶಿಸಬೇಕಾದುದೇನೂ ಇಲ್ಲ. ಆದರೆ ಬ್ರಹ್ಮನ ಮಾತಿನಂತೆ ನಾನೂ ಮತ್ತು ಬಹುಲೆಯೂ ಅರುಂಧತಿಯನ್ನು ಸ್ವಲ್ಪದಿವಸಗಳಲ್ಲಿಯೇ ಬುದ್ಧಿವಂತಳಾಗುವಂತೆ ಶಿಕ್ಷಿಸುವೆವು. ಈ ಅರುಂಧತಿಯು ಮೊದಲು ಬ್ರಹ್ಮನ ಮಾನಸಪುತ್ರಿಯು. ಈಗ ನಿನ್ನ ತಪಸ್ಸಿನ ಮಹಿಮೆಯಿಂದಲೂ, ವಿಷ್ಣುವಿನ ಅನುಗ್ರಹದಿಂದಲೂ ನಿನ್ನ ಮಗಳಾಗಿರುವಳು. ಸಾಧ್ವಿಯಾದ ಇವಳು ನಿನ್ನ ವಂಶವನ್ನು ಪವಿತ್ರವನ್ನಾಗಿಮಾಡುವಳು ಮತ್ತು ವೃದ್ಧಿಹೊಂದಿಸುವಳು. ಜಗತ್ತಿಗೂ, ದೇವತೆಗಳಿಗೂ ಮಂಗಳವನ್ನು ಉಂಟುಮಾಡುವವಳಾಗಿರುವಳು ಎಂದು ನುಡಿದರು.

೩೩. ಮಾರ್ಕಂಡೇಯನು ಹೇಳಿದನು :—ಆಮೇಲೆ ತನ್ನ ಮಗಳಾದ ಅರುಂಧತಿಯನ್ನು ಸಮಾಧಾನಪಡಿಸಿ, ಆ ಸಾವಿತ್ರಿಯೇ ಮೊದಲಾದವರಿಂದ ಅನುಮತಿಯನ್ನು ಪಡೆದು ಅವರನ್ನು ನಮಸ್ಕರಿಸಿ, ಮೇಧಾತಿಥಿಮುನಿಯು ತನ್ನ ಸ್ಥಾನಕ್ಕೆ ತೆರಳಿದನು.

೩೪-೩೫. ಮೇಧಾತಿಥಿಮುನಿಯು ಹೊರಟುಹೋಗಲು ಇತ್ತ ಅರುಂಧತಿಯನ್ನು ಸಾವಿತ್ರೀಬಹುಲೆಯರು ತಾಯಿಯಂತೆ ಸಲಹುತ್ತಿದ್ದರು. ಅರುಂಧತಿಯೂ

ಕದಾಚಿತ್ಸಹ ಸಾವಿತ್ರ್ಯಾ ರಾತ್ರೌ ಯಾತಿ ರವೇರ್ಗೃಹಂ ।
ತಥಾ ಬಹುಲಯಾ ಯಾತಿ ಶಕ್ರಗೇಹಂ ಕದಾಚನ ॥ ೩೫ ॥

ಏವಂ ತಾಭ್ಯಾಂ ಸನುಂ ದೇವೀ ವಿಹರಂತೀ ಸುರಾಲಯೇ ।
ನಿನಾಯ ದಿವ್ಯಮಾನೇನ ಸಾ ಸಪ್ತ ಪರಿವತ್ಸರಾನ್ ॥ ೩೬ ॥

ತಾಭ್ಯಾಂ ತಥೋಪದಿಷ್ಟಾ ಸಾ ಸ್ತ್ರೀಧರ್ಮಮಚಿರಾತ್ಸತೀ ।
ಸರ್ವಂ ಜ್ಞಾತವತೀ ಭೂತಾ ಸಾವಿತ್ರೀಬಹುಲಾಧಿಕಾ ॥ ೩೭ ॥

ಅಥ ತಸ್ಯಾಸ್ತದಾ ಕಾಲೇ ಸಂಪ್ರಾಪ್ತೇ ಉಚಿತೇಽಭವತ್
ಶೋಭನೋ ಯೌವನೋದ್ಭೇದಃ ಪದ್ಮಿನೀನಾಂ ರುಚಿರ್ಯಥಾ ॥ ೩೮ ॥

ಉದ್ಭೂತಯೌವನಾ ಸಾತು ವಸಿಷ್ಠಂ ಮಾನಸಾಚಲೇ ।
ವಿಹರಂತೀ ದದರ್ಶೈಕಾ ಚಾರುತೇಜಸ್ವಿನಂ ಮುನಿಂ ॥ ೩೯ ॥

ಸಹ ಯಾವ ಭಯವೂ ಇಲ್ಲದೆ ಸಂತೋಷದಿಂದ ದೇವಲೋಕದಲ್ಲಿ ದೇವಗಣನೆಯಂತೆ ಏಳುವರ್ಷಗಳವರೆಗೆ ವಿಹರಿಸಿದಳು.

೩೬-೩೭. ಒಮ್ಮೆ ಸಾವಿತ್ರಿಯೊಡನೆ ರಾತ್ರಿಯಲ್ಲಿ ಆ ಅರುಂಧತಿಯು ಸೂರ್ಯನ ಮನೆಗೆ ಹೋಗುವಳು, ಒಮ್ಮೆ ಬಹುಲೆಯೊಡನೆ ಇಂದ್ರನ ಮನೆಗೆ ಹೋಗುವಳು. ಹೀಗೆ ಆ ಸಾವಿತ್ರೀ ಬಹುಲೆಯರಿಂದ ಸಕಲ ಸ್ತ್ರೀಧರ್ಮವನ್ನು ತಿಳಿದು ಅರುಂಧತಿಯು ಜ್ಞಾನಾನುಷ್ಠಾನಗಳಲ್ಲಿ ಅವರನ್ನು ಮೀರಿಸಿದಳು.

೩೮. ಆಮೇಲೆ ಯೋಗ್ಯಕಾಲವು ಬರಲು, ಸರಸ್ಸಿನಲ್ಲಿ ಕಮಲಗಳ ಕಾಂತಿಯು ಉದಯಿಸುವಂತೆ ಅರುಂಧತಿಯ ಶರೀರದಲ್ಲಿ ಯೌವನವು ಪ್ರಾದುರ್ಭವಿಸಿತು.

೩೯-೪೦. ಹೀಗಿರಲೊಂದುದಿನ ಯೌವನವತಿಯಾದ ಅವಳು, ಮಾನಸ ಪರ್ವತದಲ್ಲಿ ಓರ್ವಳೇ ವಿಹರಿಸುತ್ತಿರುವಾಗ ಸುಂದರನೂ, ತೇಜಸ್ವಿಯೂ ಆದ ವಸಿಷ್ಠ ಮುನಿಯನ್ನು ನೋಡಿದಳು. ನೋಡಿದಕೂಡಲೇ ಬಾಲಸೂರ್ಯನಂತೆ ತೇಜಿಸ್ವಿಯೂ,

ದೃಷ್ಟ್ವಾ ತಮಿಚ್ಛಯಾಂಚಕ್ರೇ ಕಾಮಭಾವೇನ ಸಾ ಸತೀ ।
ಬಾಲಸೂರ್ಯಪ್ರಭಂ ಚಾರುರೂಪಂ ಬ್ರಾಹ್ಮ್ಯಶ್ರಿಯಾ ಯುತಂ ॥ ೪೦ ॥

ಅಥ ಸೋಽಪಿ ಮಹಾತೇಜಾ ವಸಿಷ್ಠೋ ವರವರ್ಣಿನೀಂ ।
ದೃಷ್ಟ್ವೈವೋದ್ಭೂತಮದನೋ ವೀಕ್ಷ್ಯಾಂಚಕ್ರೇ ತ್ವರುಂಧತೀಂ ॥೪೧ ॥

ತಯೋಃ ಪರಸ್ಪರಂ ದೃಷ್ಟ್ವಾ ವವೃಧೇ ಹೃಚ್ಛಯೋ ಮಹಾನ್ ।
ಅಮರ್ಯಾದಂ ದ್ವಿಜಶ್ರೇಷ್ಠಾಃ ಪ್ರಾಕೃತೇ ಮದನೋ ಯಥಾ ॥ ೪೨ ॥

ಅಥ ಧೈರ್ಯಂ ಸಮಾಲಂಬ್ಯ ತಥಾ ಮೇಧಾತಿಥೇಃ ಸುತಾ ।
ಆತ್ಮಾನಂ ಧಾರಯಾಮಾಸ ಮನಶ್ಚ ಮದನೇರಿತಂ ॥ ೪೩ ॥

ವಸಿಷ್ಠೋಽಪಿ ಮಹಾತೇಜಾ ಧೈರ್ಯಮಾಲಂಬ್ಯ ಚಾತ್ಮನಃ ।
ಮನಃ ಸಂಸ್ತಂಭಯಾಮಾಸ ಮದನೋನ್ಮಥಿತಂ ತತಃ ॥ ೪೪ ॥

ಸುಂದರನೂ, ಬ್ರಹ್ಮವರ್ಚಸ್ಸಿನಿಂದ ಶೋಭಿಸುವವನೂ ಆದ ಆ ವಸಿಷ್ಠಮುನಿಯಲ್ಲಿ ಅರುಂಧತಿಗೆ ಅನುರಾಗವುಂಟಾಯಿತು.

೪೧-೪೨. ಆಗ ತೇಜಸ್ವಿಯಾದ ವಸಿಷ್ಠಮುನಿಯೂ ಸಹ ಉತ್ತಮಸ್ತ್ರೀಯಾದ ಅರುಂಧತಿಯನ್ನು ನೋಡಿದೊಡನೆಯೇ ಕಾಮವಿಕಾರವುಳ್ಳವನಾಗಿ ಅವಳನ್ನು ಪುನಃಪುನಃ ನೋಡಿದನು. ಪರಸ್ಪರನೋಟದಿಂದ ಅವರಿಗೆ ಕಾಮವಿಕಾರವು ಸಾಮಾನ್ಯ ಮನುಷ್ಯರಂತೆ ಮೇರೆ ಮೀರುವಷ್ಟು ಉಂಟಾಯಿತು.

೪೩. ಆಮೇಲೆ ಅರುಂಧತಿಯು ಧೈರ್ಯನ್ನವಲಂಬಿಸಿ ತನ್ನನ್ನೂ ಮನ್ಮಥ ವಿಕಾರದಿಂದ ವ್ಯಾಕುಲಗೊಂಡಿರುವ ತನ್ನ ಮನಸ್ಸನ್ನೂ ಸಮಾಧಾನಕ್ಕೆ ತಂದಳು.

೪೪. ಆದರಂತೆ ವಸಿಷ್ಠಮುನಿಯೂ ಸಹ ತನ್ನಲ್ಲಿ ಧೈರ್ಯವನ್ನು ಸಹ ತಂದುಕೊಂಡು ಮನ್ಮಥವಿಕಾರವನ್ನು ತಡೆದು, ತನ್ನ ಮನಸ್ಸನ್ನು ಚಂಚಲತೆ, ಹೊಂದದಂತೆ ಮಾಡಿದನು.

ಅರುಂಧತೀ ತತೋ ದೇವೀ ವಿಹಾಯ ಮುನಿಸಂನಿಧಿಂ ।
ಜಗಾಮ ಯತ್ರ ಸಾವಿತ್ರೀ ನಿಂದಂತೀ ಸ್ವಂ ಮನೋ ವಪುಃ ॥ ೪೫ ॥

ಬಾಧ್ಯಮಾನಾತಿದುಃಖೇನ ಮಾನಸೇನ ಮಹಾಸತೀ ।
ಸತೀಭಾವಃ ಪರಿತ್ಯಕ್ತಶ್ಚಿಂತಯಂತೀ ಮಯೇತಿ ವೈ ॥ ೪೬ ॥

ತಸ್ಯಾ ಮನೋಜದುಃಖೇನ ವಿವರ್ಣಮಭವನ್ಮುಖಂ ।
ಶರೀರಂ ಸಕಲಂ ಮ್ಲಾನಂ ಗತಿಶ್ಚ ವಲಿತಾಽಭವತ್ ॥ ೪೭ ॥

ಇದಂ ವಿಮುಮೃಷೇ ಸಾ ಚ ಗರ್ಹಯಂತೀ ಸ್ವಕಂ ಮನಃ ।
ಮೃಣಾಲತಂತುವತ್ಸೂಕ್ಷ್ಮಾ ಛಿನ್ನಾ ಚ ತತ್ಕ್ಷಣಾದಪಿ ॥ ೪೮ ॥

ಸ್ಥಿತಿಃ ಸತೀನಾಮಲ್ಪೇನ ಚಾಪಲ್ಯೇನೈವ ನಶ್ಯತಿ ।
ಇತಿ ಸ್ತ್ರೀಧರ್ಮಮಧ್ಯಾಪ್ಯ ಮಾಮಾಪ ಚರಿತವ್ರತಾ ॥ ೪೯ ॥

ಸಾವಿತ್ರೀ ಸಾರಮೇತದ್ಧಿ ಸತೀಧರ್ಮಸ್ಯ ಚೋದ್ಧೃತಂ ।
ತದದ್ಯ ನಾಶಿತಂ ಪುಂಸಿ ಪರಕೀಯೇ ಮನೋರಥೇ ॥ ೫೦ ॥

---

೪೫. ಅನಂತರ ಅರುಂಧತಿಯು ವಸಿಷ್ಠಮುನಿಯ ಸಮೀಪವನ್ನು ಬಿಟ್ಟು ತನ್ನ ಮನಸ್ಸನ್ನೂ, ಶರೀರವನ್ನೂ ನಿಂದಿಸುತ್ತಾ ಸಾವಿತ್ರಿ ಇರುವಲ್ಲಿಗೆ ಹೋದಳು.

೪೬. ಮಹಾಸಾಧ್ವಿಯಾದ ಆ ಅರುಂಧತಿಯು ತಾನು ಪತಿವ್ರತೆಯಭಾವವನ್ನು ಉಲ್ಲಂಘಿಸಿದೆನೆಂದು ಚಿಂತಿಸುತ್ತಾ ಮನೋವ್ಯಥೆಯಿಂದ ತುಂಬಾ ನೊಂದಳು.

೪೭. ಮನೋವ್ಯಥೆಯಿಂದ ಅವಳ ಮುಖವೂ, ಶರೀರವೂ ಬಳಲಿದುವು. ಅಶಕ್ತತೆಯಿಂದ ಅವಳ ಗಮನವು ವಕ್ರವಾಯಿತು.

೪೮—೫೧. ಆಗ ಅನಳು ತನ್ನ ಮನಸ್ಸನ್ನು ನಿಂದಿಸುತ್ತಾ ಹೀಗೆ ಯೋಚಿಸಿದಳು:—ತಾವರೆದಂಟಿನ ನಾರಿನಂತೆ ಪತಿವ್ರತೆಯರ ಸ್ಥಿತಿಯು ಅತ್ಯಂತ ಸೂಕ್ಷ್ಮವು. ಸ್ವಲ್ಪ ಚಾಪಲ್ಯದಿಂದಲೇ ಪಾತಿವ್ರತ್ಯವು ನಾಶವಾಗುವುದು. ಹೀಗೆಂದು ಪತಿವ್ರತೆಯಾದ ಸಾವಿತ್ರಿಯು ಪಾತಿವ್ರತ್ಯದ ಧರ್ಮದ ಸಾರವನ್ನು ನನಗೆ ಉಪದೇಶಿಸಿರುವಳು.

ವರ್ಧಯಂತ್ಯಾ ತದಾ ಕಿಂ ಮೇ ಪರತ್ರೇಹ ಭವಿಷ್ಯತಿ ।
ಇತಿ ಸಂಚಿಂತಯಂತೀ ಸಾ ಪುತ್ರೀ ಮೇಧಾತಿಥೇಸ್ತದಾ ॥ ೫೦ ॥

ದುಃಖಾರ್ತಾ ಬಹುಲಾಂ ದೇವೀಂ ಸಾವಿತ್ರೀಂ ಚಾಽಽಸಸಾದ ಹ ।
ತಥಾವಿಧಾಂ ತು ತಾಂ ದೃಷ್ಟ್ವಾ ವಿವರ್ಣವದನಾಂ ಸತೀಂ ॥ ೫೨ ॥

ಧ್ಯಾನಚಿಂತಾಪರಾ ಭೂತಾ ಸಾವಿತ್ರೀ ವಿಮಮರ್ಶ ಹ ।
ವಿಮೃಶ್ಯ ದಿವ್ಯಜ್ಞಾನೇನ ಸರ್ವಂ ಜ್ಞಾತವತೀ ಸತೀ ॥ ೫೩ ॥

ವಸಿಷ್ಠೇನ ಹ್ಯರುಂಧತ್ಯಾ ಯಥಾಽಭೂದ್ದರ್ಶನಂ ತಥಾ ।
ಯಥಾ ತಯೋಃ ಸಂಪ್ರವೃದ್ಧೋ ಮನೋಜಶ್ಚಾತಿದುಃಸಹಃ ॥ ೫೪ ॥

ಮುಖವೈವರ್ಣ್ಯಹೇತುಶ್ಚ ಸಾವಿತ್ರೀ ದಿವ್ಯದರ್ಶಿನೀ ।
ಅಥ ಮೇಧಾತಿಥೇಃ ಪುತ್ರ್ಯಾ ಮೂರ್ಧ್ನಿ ಹಸ್ತಂ ನಿವೇಶ್ಯ ಸಾ ॥ ೫೫ ॥

ಇದಮಾಹ ಮಹಾದೇವೀ ಸಾವಿತ್ರೀ ಚರಿತವ್ರತಾ ।
ವತ್ಸೇ ತವ ಮುಖಂ ಕಸ್ಮಾದ್ವಿವರ್ಣಮುಭೂದಿದಂ ॥ ೫೬ ॥

ಈಗ ನಾನು ಪರಪುರುಷನಲ್ಲಿ ಅನುರಾಗವನ್ನು ಹೊಂದಿದವಳಾಗಿ ಅಂತಹ ಪಾತಿವ್ರತ್ಯ ಧರ್ಮವನ್ನು ಉಲ್ಲಂಘಿಸಿರುವೆನು. ಇಂತಹ ನನಗೆ ಈ ಲೋಕದಲ್ಲಿಯೂ, ಪರ ಲೋಕದಲ್ಲಿಯೂ ಗತಿಯೇ ಇಲ್ಲ.

೫೨—೫೫. ಹೀಗೆ ಚಿಂತಿಸುತ್ತಾ ಆ ಮೇಧಾತಿಥಿ ಪುತ್ರಿಯಾದ ಅರುಂಧತಿಯು ತುಂಬಾ ದುಃಖಿಗೊಂಡು ಬಹುಲಾ ಮತ್ತು ಸಾವಿತ್ರಿಯ ಬಳಿಗೆ ಬಂದಳು. ಅರುಂಧತಿಯ ಬಳಲಿದ ಮುಖವನ್ನು ನೋಡಿ ಸಾವಿತ್ರಿಯು, ತನ್ನ ದಿವ್ಯಜ್ಞಾನದಿಂದ ವಿಮರ್ಶಿಸಿ, ಈ ಅರುಂಧತಿಯು ವಸಿಷ್ಠನನ್ನು ನೋಡಿದುದೇ ಮೊದಲಾದ ಎಲ್ಲಾ ವಿಷಯವನ್ನೂ ತಿಳಿದಳು ಮತ್ತು ಅರುಂಧತೀ ವಸಿಷ್ಠರ ಮನೋವಿಕಾರವು ತಡೆಯಲಾರದಷ್ಟು ವೃದ್ಧಿಹೊಂದಿದುದನ್ನೂ ಮುಖವು ಬಾಡಿರುವುದಕ್ಕೆ ಕಾರಣವನ್ನೂ ಸಹ ತನ್ನ ದಿವ್ಯ ದೃಷ್ಟಿಯಿಂದ ತಿಳಿದಳು.

೫೬–೫೮. ಆಮೇಲೆ ಅರುಂಧತಿಯು ತಿರಸ್ಸಿನಲ್ಲಿ ಹಸ್ತವನ್ನಿಟ್ಟು ಪತಿವ್ರತೆಯಾದ ಸಾವಿತ್ರಿದೇವಿಯು ತವಳನ್ನು ಕುರಿತು ಎಲೌ ಮಂಗಳಾಂಗಿ! ನಿನ್ನ ಮುಖವು ಏಕೆ ಬಾಡಿ

ಛಿನ್ನನಾಲಂ ಯಥಾ ಪದ್ಮಂ ಸೂರ್ಯಾಂಶುಪರಿತಾಪಿತಂ ।
ಕಥಂ ಶರೀರಮಭವನ್ಮ್ಲಾನಂ ತೇ ಗುಣವತ್ತಮೇ ॥ ೫೭ ॥

ಯಥಾ ನಿಶಾಪತೇರ್ಬಿಂಬಂ ತನುಕೃಷ್ಣಾಭ್ರಸಂವೃತಂ ।
ಅಂತರ್ಮನಶ್ಚ ತೇ ಭದ್ರೇ ಸಂಚಿಂತಮಿವ ಲಕ್ಷ್ಯತೇ ।
ತನ್ಮೇ ಕಥಯ ತೇ ಗುಹ್ಯಂ ನೈತಚ್ಚೇದ್ದುಃಖಕಾರಣಂ ॥ ೫೮ ॥

॥ ಮಾರ್ಕಂಡೇಯ ಉವಾಚ ॥

ಅಥ ಸಾಽಧೋಮುಖೀ ಭೂತ್ವಾ ಕಿಂಚಿನ್ನೋವಾಚ ಲಜ್ಜಯಾ ।
ಸಾವಿತ್ರೀಂ ಮಾತರಂ ಗುರ್ವೀಂ ತಥಾ ಪೃಷ್ಟಾಽಪ್ಯರುಂಧತೀ ॥ ೫೯ ॥

ಯದಾ ನೋಕ್ತವತೀ ಕಿಂಚಿತ್ತದಾ ಮೇಧಾತಿಥೇಃ ಸುತಾ ।
ಸ್ವಯಂ ಪ್ರಕಾಶ್ಯ ಸಾವಿತ್ರೀ ತಾಮುವಾಚ ತಪಸ್ವಿನೀ ।
ವತ್ಸೇ ಯೋಽಸೌ ತ್ವಯಾ ದೃಷ್ಟೋ ಮುನಿರ್ಭಾಸ್ಕರಸನ್ನಿಭಃ ॥ ೬೦ ॥

ರುವುದು ? ನಾಳದಿಂದ ಕಿತ್ತು ಬಿಸಿಲಿನಿಂದ ಒಣಗಿದ ಕಮಲದಂತೆ ನಿನ್ನ ಮುಖವು ತೋರುವುದು. ಎಲೌ ಗುಣಶಾಲಿನಿಯೇ ! ನಿನ್ನ ಶರೀರವು ನೀಲಮೇಘದಿಂದ ಆವೃತವಾಗಿರುವ ಚಂದ್ರಬಿಂಬದಂತೆ ಕಾಂತಿಹೀನವಾಗಿರುವುದು. ಒಳಗೆ ನಿನ್ನ ಮನಸ್ಸು ಏನನ್ನೋ ಚಿಂತಿಸುತ್ತಿರುವಂತೆ ತೋರುವುದು. ರಹಸ್ಯವಿಲ್ಲದಿದ್ದರೆ ನಿನ್ನ ದುಃಖಕ್ಕೆ ಕಾರಣವೇನೆಂಬುದನ್ನು ನನಗೆ ಹೇಳು ಎಂದು ಕೇಳಿದಳು.

೫೯. ಮಾರ್ಕಂಡೇಯನು ಹೇಳಿದನು :— ಆಮೇಲೆ ಸಾವಿತ್ರಿಯು ಹಾಗೆ ಪ್ರಶ್ನಿಸಿದರೂ ಅರುಂಧತಿಯು ಲಜ್ಜೆಯಿಂದ ತಲೆಯನ್ನು ಕೆಳಗೆ ಬಗ್ಗಿಸಿ ದೊಡ್ಡವಳೂ, ಮಾತೆಯೂ ಆದ ಸಾವಿತ್ರಿಗೆ ಏನನ್ನೂ ಹೇಳಲಿಲ್ಲ.

೬೦—೬೫. ಆದರೂ ಆಗ ಸಾವಿತ್ರಿಯು ತಾನೇ ವಿಷಯವನ್ನು ಪ್ರಸ್ತಾಪಿಸಿ ಎಲೌ ಪುತ್ರಿ ! ಸೂರ್ಯನಂತೆ ತೇಜಸ್ವಿಯಾದ, ನೀನು ನೋಡಿದ ಮುನಿಯು, ಬ್ರಹ್ಮಮಾನಸಪುತ್ರನಾದ ವಸಿಷ್ಠನು. ಮುಂದೆ ಅವನೇ ನಿನಗೆ ಪತಿಯಾಗುವನು. ಆ ಮುನಿಗೂ ನಿನಗೂ ಬ್ರಹ್ಮನು ಮೊದಲೇ ಪತಿಪತ್ನಿಯರ ಭಾವವನ್ನು ಕಲ್ಪಿಸಿರು

ಸ ವಸಿಷ್ಠೋ ಬ್ರಹ್ಮಸುತಸ್ತವ ಸ್ವಾಮೀ ಭವಿಷ್ಯತಿ ।
ತವ ತಸ್ಯ ಚ ದಾಂಪತ್ಯಂ ಪುರಾ ಧಾತ್ರೈವ ನಿರ್ಮಿತಂ ॥ ೬೧ ॥

ಅತಸ್ತವ ಸತೀಭಾವೋ ನ ಹೀನಸ್ತಸ್ಯ ದರ್ಶನಾತ್ ।
ಯದ್ವಾ ತವಾಭೂದ್ಧೃದಯಂ ಸಕಾಮಂ ತಸ್ಯ ದರ್ಶನಾತ್ ॥ ೬೨ ॥

ನ ತದ್ದೋಷಕರಂ ಪುತ್ರಿ ಮುನೋಽದುಃಖಂ ತತಸ್ತ್ಯಜ ।
ತ್ವಯಾ ಪರಂ ತಪಃ ಕೃತ್ವಾ ಪೂರ್ವಜನ್ಮನಿ ಶೋಭನೇ ॥ ೬೩ ॥

ವೃತಃ ಸ ಏವ ದಯಿತಃ ಸಕಾಮಸ್ತೇನ ಸ ತ್ವಯಿ ।
ಶೃಣು ಪೂರ್ವಂ ತ್ವಯಾ ವತ್ಸೇ ವಸಿಷ್ಠೋಽಯಂ ವೃತಃ ಪತಿಃ ॥ ೬೪ ॥

ಯಥಾ ತಪಃ ಕೃತಂ ತತ್ರ ಯೇನ ಭಾವೇನ ಸಂತತಂ ।

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಸಾ ಚ ಸಾವಿತ್ರೀ ಯಥಾ ಸಂಧ್ಯಾಽಭವತ್ಪುರಾ ॥ ೬೫ ॥

ಕೃತಂ ತಪೋ ಯದರ್ಥಂ ತು ಚಂದ್ರಭಾಗಾಹ್ವಯೇ ಗಿರೌ ।
ವಸಿಷ್ಠೇನ ಯಥಾ ಪೂರ್ವಂ ವರ್ಣಿರೂಪೇಣ ವೇಧಸಃ ॥ ೬೬ ॥

ವನು. ಆದಕಾರಣ ನೀನು ಅವನನ್ನು ಅನುರಾಗದಿಂದ ನೋಡಿದರೂ ನಿನ್ನ ಪಾತಿವ್ರತ್ಯಧರ್ಮಕ್ಕೆ ಲೋಪವಿಲ್ಲ. ಆದಕಾರಣದಿಂದಲೇ ನೀನು ಅವನನ್ನು ನೋಡಿದುದರಿಂದ ಹೃದಯದಲ್ಲಿ ಕಾಮವಿಕಾರ ಉಂಟಾದುದು ದೋಷವಲ್ಲ. ಆದುದರಿಂದ ವ್ಯಥೆಯನ್ನು ಬಿಡು. ಹಿಂದಿನ ಜನ್ಮದಲ್ಲಿ ತುಂಬಾ ತಪಸ್ಸನ್ನಾಚರಿಸಿ ಆ ವಸಿಷ್ಠಮುನಿಯೇ ಪತಿಯಾಗಬೇಕೆಂದು ಕೇಳಿಕೊಂಡಿರುವೆ. ಆದುದರಿಂದಲೇ ಆ ಮುನಿಯು ನಿನ್ನಲ್ಲಿ ಕಾಮವಿಕಾರವುಳ್ಳವನಾಗಿರುವನು. ಎಲೌ ಮಗಳೇ! ಹಿಂದಿನ ಜನ್ಮದಲ್ಲಿ ನೀನು ವಸಿಷ್ಠನನ್ನು ಪತಿಯನ್ನಾಗಿ ಹೇಗೆ ವರಿಸಿರುವೆ ಎಂಬುದನ್ನೂ, ತಪಸ್ಸನ್ನು ಹೇಗೆ ಆಚರಿಸಿರುವೆ ಎಂಬುದನ್ನೂ ಹೇಳುವೆನು ಕೇಳು ಎಂದು ಅರುಂಧತಿಯ ಪೂರ್ವವೃತ್ತಾಂತವನ್ನು ವಿವರಿಸಿದಳು.

೬೬—೬೮. ಮಾರ್ಕಂಡೇಯನು ಹೇಳಿದನು :—ಆ ಅರುಂಧತಿಯು ಹಿಂದಿನ ಜನ್ಮದಲ್ಲಿ ಸಂಧ್ಯೆಯಾಗಿ ಜನಿಸಿದುದನ್ನೂ, ಚಂದ್ರಭಾಗಾಗಿರಿಯಲ್ಲಿ ಯಾವುದಕ್ಕಾಗಿ

ವಚನಾದುಪದಿಷ್ಟಾ ಸಾ ತಪಶ್ಚರ್ಯಾಂ ದುರತ್ಯಯ್ಯಾಂ ।
ಯಥಾ ಪ್ರಸನ್ನೋ ಭಗವಾನ್ವಿಷ್ಣುಃ ಪ್ರತ್ಯಕ್ಷತಾಂ ಗತಃ ॥ ೬೭ ॥

ವರಂ ಯಥಾ ದದೌ ತಸ್ಯೈ ಮರ್ಯಾದಾ ಸ್ಥಾಪಿತಾ ಯಥಾ ।
ಯಥಾ ವಾ ವಾಂಛಿತಃ ಸ್ವಾಮೀ ವಸಿಷ್ಠಃ ಸ ತಯಾ ಮುನಿಃ ॥ ೬೮ ॥

ಮೇಧಾತಿಥೇರ್ಯಥಾ ಯಜ್ಞೇ ವಹ್ನೌ ತ್ಯಕ್ತಂ ತಯಾ ವಪುಃ ।
ತಥಾ ತತ್ತನಯಾ ಜಾತಾ ತಸ್ಯೈ ತದ್ವಿಸ್ತರಾತ್ತದಾ ॥ ೬೯ ॥

ಸಾವಿತ್ರೀ ಕಥಯಾಮಾಸ ಕ್ರಮಾದ್ಬಹುಲಯಾ ಸಹ ।
ಅಥ ತಸ್ಯಾ ವಚಃ ಶ್ರುತ್ವಾ ಯದಭೂತ್ಪೂರ್ವಜನ್ಮನಿ ॥ ೭೦ ॥

ತಚ್ಛ್ರುತ್ವಾ ಪೈ ತದಾ ಜ್ಞಾತಂ ಮಮ ಸರ್ವಂ ಮನೋಗತಂ ।
ಇತ್ಯತೀವ ತ್ರಪಾಂ ಪ್ರಾಪ್ಯ ಸಾऽತೀವಾಭೂದಧೋಮುಖೀ ॥ ೭೧ ॥

ತಪಸ್ಸನ್ನಾಚರಿಸಿದಳೋ ಅದನ್ನೂ, ಆಗ ಬ್ರಹ್ಮನ ಅಪ್ಪಣೆಯಂತೆ ವಸಿಷ್ಠಮುನಿಯು ಬ್ರಹ್ಮಚಾರಿಯ ರೂಪದಿಂದ ಬಂದು ಅವಳಿಗೆ ಕಷ್ಟವಾದ ತಪಸ್ಸಿನ ಕ್ರಮವನ್ನು ಉಪದೇಶಿಸಿದುದನ್ನೂ, ಆ ತಪಸ್ಸಿನಿಂದ ಪ್ರಸನ್ನನಾಗಿ ವಿಷ್ಣುವು ಪ್ರತ್ಯಕ್ಷನಾದುದನ್ನೂ, ಅವಳಿಗೆ ಬೇಕಾದ ವರವನ್ನು ಕೊಟ್ಟು, ಪ್ರಜೆಗಳು ಪ್ರಪಂಚದಲ್ಲಿ ಜನಿಸಿದೊಡನೆಯೇ ಕಾಮವಿಕಾರವನ್ನು ಹೊಂದಬಾರದೆಂಬ ಮರ್ಯಾದೆಯನ್ನು ಸ್ಥಾಪಿಸಿದುದನ್ನೂ, ಸಹ ಸಾವಿತ್ರಿಯು ಅರುಂಧತಿಗೆ ಹೇಳಿದಳು.

೬೯-೭೦. ಮತ್ತು ವಸಿಷ್ಠಮುನಿಯನ್ನು ಪತಿಯನ್ನಾಗಿ ಮನಸ್ಸಿನಲ್ಲಿ ವರಿಸಿ ಸಂಧ್ಯೆಯು ಮೇಧಾತಿಥಿಯ ಯಜ್ಞದಲ್ಲಿ ಜ್ವಲಿಸುತ್ತಿದ್ದ ಅಗ್ನಿಯಲ್ಲಿ ಶರೀರವನ್ನು ತ್ಯಜಿಸಿದ ವಿವರವನ್ನೂ, ಮುಂದೆ ಮೇಧಾತಿಥಿಯ ಮಗಳಾದ ಅರುಂಧತಿಯಾಗಿ ಹೇಗೆ ಜನಿಸಿದಳೆಂಬುದನ್ನೂ, ವಿಸ್ತಾರವಾಗಿ ಸಾವಿತ್ರಿಯು ಬಹುಲೆಯೊಡನೆ ಆ ಅರುಂಧತಿಗೆ ಹೇಳಿದಳು.

೭೧. ಆಮೇಲೆ ಸಾವಿತ್ರಿಯು ಹೇಳಿದ ತನ್ನ ಪೂರ್ವಜನ್ಮದ ವೃತ್ತಾಂತವನ್ನು ಕೇಳಿ ಅರುಂಧತಿಯು, ತನ್ನ ಮನಸ್ಸಿನಲ್ಲಿರುವ ರಹಸ್ಯವು ಸಾವಿತ್ರಿಗೆ ಗೊತ್ತಾಗಿರುವು ದೆಂದು ತುಂಬಾ ಲಜ್ಜೆಯಿಂದ ತಲೆಯನ್ನು ಬಗ್ಗಿಸಿ ನಿಂತುಕೊಂಡಳು.

ಸಾವಿತ್ರೀವಚನಾದ್ಭೂತಾ ಪೂರ್ವಜನ್ಮಸ್ಮರಾ ಚ ಸಾ ।
ತಥೈವಾಧೋಮುಖೀ ಭೂತ್ವಾ ಯದ್ವೃತ್ತಂ ಪೂರ್ವಜನ್ಮನಿ ॥ ೭೨ ॥

ತಸ್ಯ ಸರ್ವಸ್ಯ ಸಸ್ಮಾರ ದಿವ್ಯಜ್ಞಾನಮುಂಧತೀ ತದಾ ।
ಪೂರ್ವಂ ವಿಷ್ಣುಪ್ರಸಾದೇನ ಸಾ ಭೂತ್ವಾ ದಿವ್ಯದರ್ಶಿನೀ ॥ ೭೩ ॥

ಅಧುನಾ ಬಾಲ್ಯಭಾವೇನ ಪ್ರಚ್ಛನ್ನಾ ದಿವ್ಯದರ್ಶನಾ ।
ಸಾವಿತ್ರೀವಚನಾಚ್ಛ್ರುತ್ವಾ ವೃತ್ತಾಂತಂ ಪೂರ್ವಜನ್ಮನಃ ॥ ೭೪ ॥

ಪ್ರತ್ಯಕ್ಷಮಿವ ತತ್ಸರ್ವಂ ಪೂರ್ವಜ್ಞಾನಮುವಾಪ ಸಾ ।
ಅವಾಪ್ಯ ಪೂರ್ವಂ ಜ್ಞಾನಂ ತದ್ಯದ್ದತ್ತಂ ವಿಷ್ಣುನಾ ಪುರಾ ॥ ೭೫ ॥

ವಸಿಷ್ಠೋಽಯಂ ವೃತಃ ಸ್ವಾಮೀ ಮಯಾ ವೈ ಪೂರ್ವಜನ್ಮನಿ ।
ಇತಿ ಜ್ಞಾತವತೀ ದೇವೀ ಸಾಮೋದಾರುಂಧತೀ ಸ್ವಯಂ ॥ ೭೬ ॥

---

೭೨. ಸಾವಿತ್ರಿಯ ವಾಕ್ಯದಿಂದ ಅರುಂಧತಿಗೆ ತನ್ನ ಪೂರ್ವಜನ್ಮದ ಸ್ಮರಣೆ ಯುಂಟಾಯಿತು. ಆಗ ಅವಳು ಹಾಗೆಯೇ ಶಿರಸ್ಸನ್ನು ಬಗ್ಗಿಸಿಕೊಂಡು ನಿಂತಿದ್ದು ತನ್ನ ಪೂರ್ವಜನ್ಮದ ವೃತ್ತಾಂತವನ್ನೆಲ್ಲಾ ದಿವ್ಯದೃಷ್ಟಿಯಿಂದ ತಿಳಿದುಕೊಂಡಳು.

೭೩—೭೫. ಹಿಂದೆ ವಿಷ್ಣುವಿನ ವರದಿಂದ ಅವಳು ದಿವ್ಯದೃಷ್ಟಿಯನ್ನು ಪಡೆದಿದ್ದಳು. ಆ ದಿವ್ಯದೃಷ್ಟಿಯು ಈವರೆಗೆ ಬಾಲ್ಯಸ್ವಭಾವದಿಂದ ಮುಚ್ಚಿಹೋಗಿದ್ದಿತು. ಈಗ ಸಾವಿತ್ರಿಯು ಹೇಳಿದ ತನ್ನ ಹಿಂದಿನ ಜನ್ಮದ ವೃತ್ತಾಂತವನ್ನು ಕೇಳಿ, ಹಿಂದೆ ವಿಷ್ಣುವು ಅನುಗ್ರಹಿಸಿದ ದಿವ್ಯದೃಷ್ಟಿಯನ್ನು ಪಡೆದು, ಹಿಂದಿನದೆಲ್ಲವನ್ನೂ ಪ್ರತ್ಯಕ್ಷವಾಗಿ ಈಗ ನಡೆದಂತೆ ಅರುಂಧತಿಯು ತಿಳಿದುಕೊಂಡಳು.

೭೬—೭೮. ವಸಿಷ್ಠಮುನಿಯನ್ನು ತಾನು ಹಿಂದಿನಜನ್ಮದಲ್ಲಿ ಮನಸ್ಸಿನಲ್ಲಿ ಪತಿಯಾಗಿ ವರಿಸಿರುವೆನೆಂದು ತಿಳಿದು, ಅರುಂಧತಿಯು ತುಂಬಾ ಹರ್ಷಗೊಂಡಳು. ಅಲ್ಲದೆ ತಾನು ವಸಿಷ್ಠನನ್ನು ನೋಡಿ ಮನಸ್ಸಿನಲ್ಲಿ ವಿಕಾರವಾದುದರಿಂದ ಪಾತಿವ್ರತ್ಯ ನಾಶ

ವಸಿಷ್ಠದರ್ಶನೋದ್ಭೂತೇ ಪೂರ್ವಂ ತಸ್ಯಾಸ್ತು ಹೃಚ್ಛಯೇ ।
ಯಥಾತಂಕಃ ಸಮುತ್ಪನ್ನಃ ಸತೀತ್ವಸ್ಯ ನಿವಾರಣೇ ॥ ೭೭ ॥

ತಂ ಚ ಸ್ವಯಂ ಸಾ ತತ್ಯಾಜ ತದಾ ಮೇಧಾತಿಥೇಃ ಸುತಾ ।
ತ್ಯಕ್ತೇಚಿಂತಾಂ ತತಸ್ತಾಂ ತು ವಿಜ್ಞಾಯಾರುಂಧತೀಂ ಸತೀಂ ॥ ೭೮ ॥

ಸಾವಿತ್ರೀ ಸೂರ್ಯಭವನಂ ತಯಾ ಸಾರ್ಧಂ ಜಗಾಮ ಹ ।
ಅರುಂಧತೀಂ ನಿನೇಶ್ಯಾಥ ಸಾವಿತ್ರೀ ಸೂರ್ಯಮಂದಿರೇ ॥ ೭೯ ॥

ಜಗಾಮ ಬ್ರಹ್ಮಭವನಂ ಸರ್ವಜ್ಞಾ ಸಾ ಸತೀ ವರಾ ।
ಅಥ ಪ್ರಣಮ್ಯ ಬ್ರಹ್ಮಾಣಂ ಪೃಷ್ಟಾ ತೇನೈವ ತತ್ಕ್ಷಣಾತ್ ॥ ೮೦ ॥

ಇದಂ ಜಗಾದ ಸಾವಿತ್ರೀ ಬ್ರಹ್ಮಾಣಮಮಿತೌಜಸಂ ।
ಭಗವಞ್ಜಗತಾಂ ನಾಥ ವಸಿಷ್ಠಂ ಭವತಃ ಸುತಂ ॥ ೮೧ ॥

ಮಾನಸಸ್ಯ ಗಿರೇಃ ಸಾನೌ ದದರ್ಶಾರುಂಧತೀ ಸತೀ ।
ತಯೋರ್ದರ್ಶನಮಾತ್ರೇಣ ವವೃಧೇ ಹೃಚ್ಛಯೋ ಮಹಾನ್ ॥ ೮೨ ॥

ವಾಯಿತೆಂಬ ಚಿಂತೆಯನ್ನು ತಾನಾಗಿಯೇ ಬಿಟ್ಟಳು. ಇದನ್ನು ತಿಳಿದು ಸಾವಿತ್ರಿಯು ಅವಳೊಡನೆ ಸೂರ್ಯಲೋಕಕ್ಕೆ ಹೋದಳು.

೭೯—೮೪. ಅರುಂಧತಿಯನ್ನು ಸೂರ್ಯನ ಮನೆಯಲ್ಲಿ ಬಿಟ್ಟು, ಎಲ್ಲವನ್ನೂ ಬಲ್ಲವಳಾದ್ದರಿಂದ ಉತ್ತಮ ಪತಿವ್ರತೆಯಾದ ಆ ಸಾವಿತ್ರಿಯು ಬ್ರಹ್ಮಲೋಕಕ್ಕೆ ಹೋಗಿ ಅಲ್ಲಿ ಬ್ರಹ್ಮನನ್ನು ಕಂಡು ನಮಸ್ಕರಿಸಲು, ಬಂದ ಕಾರಣವೇನೆಂದು ಬ್ರಹ್ಮನು ಕೇಳಿದನು. ಆಗ ಸಾವಿತ್ರಿಯು ತೇಜಸ್ವಿಯಾದ ಬ್ರಹ್ಮನನ್ನು ಕುರಿತು ಜಗದೊಡೆಯನೂ, ಪೂಜ್ಯನೂ ಆದ ಓ ಬ್ರಹ್ಮನೇ! ನಿನ್ನ ಮಾನಸಪುತ್ರನಾದ ವಸಿಷ್ಠಮುನಿಯನ್ನು ಅರುಂಧತಿಯು ಮಾನಸಗಿರಿಯ ತಪ್ಪಲಲ್ಲಿ ನೋಡಿದಳು. ನೋಡಿದ ಮಾತ್ರದಿಂದಲೇ ಆ ಅರುಂಧತೀವಸಿಷ್ಠರಿಗೆ ಪರಸ್ಪರ ಮನೋವಿಕಾರ ಉಂಟಾಗಿ ಅವರು ಅನ್ಯೋನ್ಯ ಅನುರಾಗವುಳ್ಳವರಾದರು. ಆದರೂ ಅವರು ಧೈರ್ಯದಿಂದ ತಮ್ಮತಮ್ಮ ಮನೋವಿಕಾರವನ್ನು ತಡೆದುಕೊಂಡು ತಮ್ಮ ಅನೀತಿಗಾಗಿ ಚಿಂತಿಸುತ್ತಾ ಮನೋ

ಪರಸ್ಪರಂ ತೌ ಸ್ಪೃಹಯಾಂ ಚಕ್ರತುಶ್ಚ ಪ್ರಜಾಪತೇ ।
ತತೋ ಧೈರ್ಯಾತ್ತು ಸಂಸ್ತಭ್ಯ ಮನೋಜಂ ತೌ ಸುದುಃಖಿತೌ ॥ ೬೩ ॥

ವಿಮನಸ್ಕೌ ಗತೌ ಸ್ಥಾನಂ ಲಜ್ಜಿತೌ ತೌ ಸ್ವಕಂ ಸ್ವಕಂ ।
ಏವಂ ಪ್ರವೃತ್ತೇ ಯದ್ಯೋಗ್ಯಂ ತದಾ ತ್ವೇತದ್ವಿಧೀಯತಾಂ ॥ ೬೪ ॥

ಆಯತ್ಯಾಂ ಚ ಸುರಶ್ರೇಷ್ಠ ಲೋಕಾನಾಂ ಹಿತ್ಯಕಾಮ್ಯಯಾ ।
ಇತಿ ಶ್ರುತ್ವಾ ವಚಸ್ತಸ್ಯಾ ಬ್ರಹ್ಮಾ ಸರ್ವಜಗದ್ಗುರುಃ ॥ ೬೫ ॥

ದದರ್ಶ ದಿವ್ಯಜ್ಞಾನೇನ ಪ್ರವೃತ್ತಿಂ ಭಾವಿಕರ್ಮಣಃ ।
ಇದಂ ಚ ಸ್ವಾಗತಂ ಪ್ರೋಚೇ ತದಾ ಲೋಕೇಪಿತಾಮಹಃ ॥ ೬೬ ॥

ತಯೋರ್ದಾಂಪತ್ಯಭಾವಸ್ಯ ಕಾಲೋಽಯಂ ಸಮುಪಸ್ಥಿತಃ ।
ತತೋ ಲೋಕಹಿತಾರ್ಥಾಯ ಯಾಸ್ಯೇಽಹಂ ತತ್ಪ್ರವೃತ್ತಯೇ ॥ ೬೭ ॥

ಇತಿ ನಿಶ್ಚಿತ್ಯ ಮನಸಾ ಸಾವಿತ್ರೀಸಹಿತೋ ವಿಧಿಃ ।
ಜಗಾಮ ಮಾನಸಪ್ರಸ್ಥಂ ಯತ್ರಾಭೂದ್ದರ್ಶನಂ ತಯೋಃ ॥ ೬೮ ॥

ವ್ಯಥೆಯಿಂದಲೂ, ಲಜ್ಜೆಯಿಂದಲೂ ತಮ್ಮ ತಮ್ಮ ಸ್ಥಾನಕ್ಕೆ ಹೋದರು. ಹೀಗೆ ನಡೆದಿರುವ ಸಮಾಚಾರವನ್ನು ನಿನಗೆ ತಿಳಿಸಿರುವೆನು. ಮುಂದೆ ಏನುಮಾಡಿದರೆ ಲೋಕಹಿತವಾಗುವುದೆಂಬುದನ್ನು ಯೋಚಿಸಿ, ಯಾವುದು ಸೂಕ್ತವೆಂದು ಕಂಡುಬರುವುದೋ ಅದನ್ನು ಮಾಡು ಎಂದು ಹೇಳಿದಳು.

೬೫—೬೭. ಸಾವಿತ್ರಿಯು ಹೀಗೆ ಹೇಳಿದುದನ್ನು ಕೇಳಿ, ಜಗದ್ಗುರುವಾದ ಬ್ರಹ್ಮನು ತನ್ನ ದಿವ್ಯದೃಷ್ಟಿಯಿಂದ ಮುಂದೆ ಏನಾಗುವುದೆಂಬುದನ್ನು ತಿಳಿದು ತನ್ನಲ್ಲಿಯೇ ಹೀಗೆ ಯೋಚಿಸಿದನು. ಅರುಂಧತೀ ವಸಿಷ್ಠರಿಗೆ ವರಸ್ಪರ ಅನುರಾಗವುಂಟಾದುದು ಒಳ್ಳೆಯದೇ ಆಯಿತು. ಅವರಿಗೆ ಪತಿಪತ್ನಿಯರ ಭಾವವನ್ನು ಹೊಂದುವ ಕಾಲವು ಬಂದಿರುವುದು. ಆದಕಾರಣ ಲೋಕಕ್ಷೇಮಕ್ಕಾಗಿ ಅರುಂಧತೀ ವಸಿಷ್ಠರಿಗೆ ಮದುವೆಯಾಗುವಂತೆ ಪ್ರಯತ್ನಿಸಲು ಹೋಗುವೆನು.

೬೮. ಹೀಗೆಂದು ಬ್ರಹ್ಮನು ನಿಶ್ಚಯಿಸಿ ಸಾವಿತ್ರಿಯೊಡನೆ, ಆ ಮಾನಸಗಿರಿಯಲ್ಲಿ ಅರುಂಧತೀ ವಸಿಷ್ಠರಿಗೆ ಪರಸ್ಪರದರ್ಶನವು ನಡೆದಿರುವ ತಪ್ಪಲಿಗೆ ತೆರಳಿದನು.

ಪಿತಾಮಹೇ ತತ್ರ ಯಾತೇ ಶರ್ವಃ ಸುರಗಣೈರ್ಯುತಃ ।
ನಂದಿಭೃಂಗಿಪ್ರಭೃತಿಭಿಃ ಸಮಾಯಾತೋ ವೃಷಧ್ವಜಃ ॥ ೮೯ ॥

ಭಗವಾನಾಸುದೇವೋಽಪಿ ಬ್ರಹ್ಮಣಾ ಪರಿಚಿಂತಿತಃ ।
ಭಕ್ತ್ಯಾ ಸೋಽಪಿ ಜಗನ್ನಾಥಃ ಶಂಖಚಕ್ರಗದಾಧರಃ ॥ ೯೦ ॥

ಸ್ಥಿತೌ ಬ್ರಹ್ಮಹರೌ ಯತ್ರ ತತ್ರೈವ ಸ್ವಯಮಾಗತಃ ।
ಅಥ ತೇ ಜಗತಾಂ ನಾಥಾ ಬ್ರಹ್ಮವಿಷ್ಣುಮಹೇಶ್ವರಾಃ ॥ ೯೧ ॥

ನಾರದಂ ಪ್ರೇಷಯಾಮಾಸುರ್ದೂತಂ ಮೇಧಾತಿಥಿಂ ಪ್ರತಿ ।
ಯಾಹಿ ದ್ರುತಂ ನಾರದ ತ್ವಂ ಚಂದ್ರಭಾಗಾಪ್ವಯಂ ಗಿರಿಂ ॥ ೯೨ ॥

ಮುನಿಸ್ತಸ್ಯೋಪತ್ಯಕಾಯಾಮಾಸ್ತೇ ಮೇಧಾತಿಥಿಃ ಪರಃ ।
ತಮಾನಯ ಯಥಾಕಾಮಮುಸ್ಮಾಕಂ ವಚನಾತ್ಸ್ವಯಂ ॥ ೯೩ ॥

---

೮೯. ಬ್ರಹ್ಮನು ಅಲ್ಲಿಗೆ ಹೋಗಲು, ಶಂಕರನೂ ತನ್ನ ಗಣಗಳೊಂದಿಗೂ, ದೇವತೆಗಳೊಂದಿಗೂ ಕೂಡಿಕೊಂಡು ನಂದಿಯನ್ನೇರಿ ಆ ತಪ್ಪಲಿಗೆ ಬಂದನು.

೯೦. ಭಕ್ತಿಪೂರ್ವಕವಾಗಿ ಬ್ರಹ್ಮನು ಧ್ಯಾನಿಸಲು, ಪೂಜ್ಯನಾದ ನಾರಾಯಣನೂ ಸಹ ಶಂಖ, ಚಕ್ರ, ಗದೆಗಳನ್ನು ಧರಿಸಿ ಬ್ರಹ್ಮನೂ ಶಂಕರನೂ ಇರುವಲ್ಲಿಗೆ ಸಾಕ್ಷಾತ್ತಾಗಿ ಬಂದನು

೯೧—೯೩. ಆಮೇಲೆ ಜಗದೊಡೆಯರಾದ ಆ ಬ್ರಹ್ಮ ವಿಷ್ಣು ಮಹೇಶ್ವರರು ಮೇಧಾತಿಥಿಮುನಿಯಲ್ಲಿಗೆ ನಾರದನನ್ನು ದೂತನನ್ನಾಗಿ ಕಳುಹಿಸಬೇಕೆಂದು ಯೋಚಿಸಿ ಎಲೈ ನಾರದನೇ! ನೀನು ಜಾಗ್ರತೆಯಾಗಿ ಚಂದ್ರಭಾಗಗಿರಿಗೆ ಹೋಗು. ಆ ಗಿರಿಯ ತಪ್ಪಲಲ್ಲಿ ಮುನಿಶ್ರೇಷ್ಠನಾದ ಮೇಧಾತಿಥಿಯು ಇರುವನು. ಆ ಮುನಿಗೆ ನಾವು ಬರ ಹೇಳಿರುವೆವೆಂದು ತಿಳಿಸಿ ಜಾಗ್ರತೆ ನೀನು ಅವನನ್ನು ಕರೆದುಕೊಂಡು ಬರಬೇಕು ಎಂದು ಹೇಳಿಕಳುಹಿಸಿದರು.

ಮೇಧಾತಿಥಿಂ ಸಮಾದಾಯ ಭವಾನಾಗಚ್ಛತು ದ್ರುತಂ ।
ಬ್ರಹ್ಮಾದೀನಾಂ ವಚಃ ಶ್ರುತ್ವಾ ನಾರದೋಽಪಿ ದ್ರುತಂ ಯಯೌ ॥ ೯೪ ॥

ಮೇಧಾತಿಥಿಂ ಸಮಾನೇತುಂ ಮಹಾಕಾರ್ಯಸ್ಯ ಸಿದ್ಧಯೇ ।
ಮೇಧಾತಿಥಿಂ ಸಮಾಭಾಷ್ಯ ದೇವಾನಾಂ ವಚನೈಸ್ತತಃ ॥ ೯೫ ॥

ಮೇಧಾತಿಥಿಂ ಸಮಾದಾಯ ಯಯೌ ಮಾನಸಪರ್ವತಂ ।
ಸೇಂದ್ರಾ ದೇವಗಣಾಃ ಸರ್ವೇ ಮುನಯಶ್ಚ ತಪೋಧನಾಃ ॥ ೯೬ ॥

ಸಾಧ್ಯಾ ವಿದ್ಯಾಧರಾ ಯಕ್ಷಾ ಗಂಧರ್ವಾಶ್ಚ ಸಮಾಗತಾಃ ।
ದೇವಾಶ್ಚ ಸರ್ವೇ ದೇವ್ಯಶ್ಚ ಯೇ ದೇವಾನುಚರಾಸ್ತಥಾ ॥ ೯೭ ॥

ತೇ ಸರ್ವೇ ಮಾನಸಪ್ರಸ್ಥಂ ಯಾತಾಶ್ಚಾನ್ಯೇ ಚ ಜಂತವಃ ।
ಅಥ ಭೂತೇ ಸಮಾಜೇ ತು ದೇವಾನಾಂ ಕಮಲಾಸನಃ ॥ ೯೮ ॥

ಮೇಧಾತಿಥಿಂ ಮುನಿಂ ಪಾಕ್ಯಮಿದಮಾಹಾತಿದೇಶಯನ್ ॥ ೯೯ ॥

೯೪-೯೫. ಬ್ರಹ್ಮನೇ ಮೊದಲಾದವರು ಹೇಳಿದ ಈ ಮಾತನ್ನು ಕೇಳಿ ನಾರದನು ಆ ಮಹಾಕಾರ್ಯವು ಸಿದ್ಧಿಸುವುದಕ್ಕಾಗಿ ಜಾಗ್ರತೆ ಮೇಧಾತಿಥಿಯನ್ನು ಕರೆದುಕೊಂಡುಬರಲು ಹೊರಟು, ಆ ಮುನಿಯ ಆಶ್ರಮಕ್ಕೆ ಬಂದು ಅವನಿಗೆ ಬ್ರಹ್ಮಾದಿಗಳ ಮಾತನ್ನು ತಿಳಿಸಿ, ಅವನನ್ನು ತನ್ನ ಜತೆಯಲ್ಲಿಯೇ ಕರೆದುಕೊಂಡು ಮಾನಸಗಿರಿಗೆ ಹಿಂತಿರುಗಿ ಬಂದನು.

೯೬-೯೭. ಇಂದ್ರನೇ ಮೊದಲಾದ ದೇವತೆಗಳೂ, ತಪಸ್ವಿಗಳಾದ ಮುನಿಗಳೂ, ಸಾಧ್ಯ ಮತ್ತು ವಿದ್ಯಾಧರರೂ, ಯಕ್ಷರೂ, ಗಂಧರ್ವರೂ, ಉಳಿದ ಎಲ್ಲಾ ದೇವತೆಗಳೂ, ದೇವತಾಸ್ತ್ರೀಯರೂ, ದೇವತೆಗಳ ಪರಿವಾರದವರೂ, ಎಲ್ಲಾ ಪ್ರಾಣಿಗಳೂ ಆ ಮಾನಸಪರ್ವತದ ತಪ್ಪಲಿಗೆ ಬಂದು ಸೇರಿದರು.

೯೮—೧೦೨. ಆನಂತರ ಅಲ್ಲಿ ದೇವತೆಗಳ ಸಭೆಯು ಸೇರಲು, ಬ್ರಹ್ಮನು ಎಲ್ಲರಿಗೂ ಕೇಳಿಸುವಂತೆ ಮೇಧಾತಿಥಿಮುನಿಯನ್ನು ಕುರಿತು ಎಲೈ ಮೇಧಾತಿಥಿಯೇ ! ಆಚಾರಶೀಲಳಾದ ನಿನ್ನ ಮಗಳನ್ನು ಈ ದೇವತೆಗಳ ಸಭೆಯಲ್ಲಿ ಈಗ ಬ್ರಾಹ್ಮಣಿವಾತ

॥ ಬ್ರಹ್ಮೋವಾಚ ॥

ಮೇಧಾತಿಥೇ ವಸಿಷ್ಠಾಯ ಪುತ್ರೀಂ ತೇ ಚರಿತವ್ರತಾಂ ।
ದೇಹಿ ಬ್ರಾಹ್ಮೇಣ ವಿಧಿನಾ ಸಮಾಜೇ ತ್ರಿದಿವೌಕಸಾಂ ।
ವಧೂವರತ್ವಮನಯೋಃ ಪೂರ್ವಂ ಸೃಷ್ಟಂ ಮಯೈವ ಹಿ ॥ ೧೦೦ ॥

ಹರಿಣಾ ಚಾಪ್ಯನುಜ್ಞಾತಂ ಕರ್ಮ ಚೈತತ್ಸಮಂಜಸಂ ।
ಏವಂ ಕೃತೇ ತವ ಕುಲೇ ಭವಿಷ್ಯತಿ ಮಹದ್ಯಶಃ ॥ ೧೦೧ ॥

ಹಿತಂ ಚ ಸರ್ವಭೂತಾನಾಂ ದೇಹಿ ತಾಂ ಮಾಚಿರಂ ಕೃಥಾಃ ।
ತತೋ ಬ್ರಹ್ಮವಚಃ ಶ್ರುತ್ವಾ ಹ್ಯತಿಪ್ರಮುದಿತೋ ಮುನಿಃ ॥ ೧೦೨ ॥

ಏವಮಸ್ತ್ವಿತಿ ಚೋವಾಚ ನತ್ವಾ ತಾನ್ಸುರಪುಂಗವಾನ್ ।
ಏಷಾಂ ತು ವಚನಾತ್ಪುತ್ರೀಮಾದಾಯಾರುಂಧತೀಂ ಮುನಿಃ ॥ ೧೦೩ ॥

ಧ್ಯಾನಸ್ಥಸ್ಯ ವಸಿಷ್ಠಸ್ಯ ದೇವೈಃ ಸಹ ಜಗಾಮ ಹ ।
ಗತ್ವಾ ವಸಿಷ್ಠನಿಕಟಂ ದೇವೈಃ ಪರಿವೃತೋ ಮುನಿಃ ॥ ೧೦೪ ॥

ದಂತೆ ವಸಿಷ್ಠಮುನಿಗೆ ಧಾರೆಯೆರೆದು ಕೊಡು. ಈ ಅರುಂಧತೀ ವಸಿಷ್ಠರಿಗೆ ಪತಿಪತ್ನಿ ಭಾವವಾಗುವಂತೆ ನಾನು ಹಿಂದೆಯೇ ಕಲ್ಪಿಸಿರುವೆನು. ಈ ಕಾರ್ಯವು ಸರಿಯಾದುದೆಂದು ಹರಿಯೂ ಅನುಮತಿಯನ್ನಿತ್ತಿರುವನು. ಹೀಗೆ ಮಾಡಿದರೆ ನಿನ್ನ ಕುಲಕ್ಕೆ ತುಂಬಾ ಕೀರ್ತಿಯು ಬರುವುದು. ಎಲ್ಲಾ ಪ್ರಾಣಿಗಳಿಗೂ ಕ್ಷೇಮವಾಗುವುದು. ಆದಕಾರಣ ವಸಿಷ್ಠಮುನಿಗೆ ಅರುಂಧತಿಯನ್ನು ಸಾವಕಾಶಮಾಡದೆ ಮದುವೆಮಾಡಿಕೊಡು ಎಂದು ಹೇಳಿದನು.

೧೦೩. ಈರೀತಿಯಾದ ಬ್ರಹ್ಮನ ಮಾತನ್ನು ಕೇಳಿ ಮೇಧಾತಿಥಿಮುನಿಯು ತುಂಬಾ ಹರ್ಷಗೊಂಡು ಆ ದೇವಶ್ರೇಷ್ಠನನ್ನು ನಮಸ್ಕರಿಸಿ ಹಾಗೆಯೇ ಆಗಲಿ ಎಂದು ಹೇಳಿದನು.

೧೦೪—೧೦೬. ಆ ದೇವಶ್ರೇಷ್ಠರ ಮಾತಿನಂತೆ ತನ್ನ ಮಗಳಾದ ಅರುಂಧತಿಯನ್ನು ಕರೆದುಕೊಂಡು ದೇವತೆಗಳೊಡಗೂಡಿ, ವಸಿಷ್ಠನು ಧ್ಯಾನಮಗ್ನನಾಗಿ ಕುಳಿತಿ

ಬ್ರಾಹ್ಮಶ್ರಿಯಾ ದೀಪ್ಯಮಾನಂ ಜ್ವಲಂತಮಿವ ಪಾವಕಂ ।
ಧರ್ಮಾರ್ಥಕಾಮಮೋಕ್ಷೇಷು ಧೃತಬುದ್ಧಿಂ ಪೃಥಕ್ಪೃಥಕ್ ॥ ೧೦೫ ॥

ದದರ್ಶ ಮುನಿಮಾಸೀನಂ ಮಾನಸಾಚಲಕಂದರೇ ।
ವಸಿಷ್ಠಮೋಜಸ್ವಿವರಂ ಬಾಲಸೂರ್ಯಮಿವೋದಿತಂ ॥ ೧೦೬ ॥

ಅಥ ಪುತ್ರೀಮಗ್ರಗತಾಂ ಕೃತ್ವಾ ಮೇಧಾತಿಥಿರ್ಮುನಿಃ ।
ವಸಿಷ್ಠಂ ನಿಯತಾತ್ಮಾನಮುವಾಚಾರುಂಧತೀಪಿತಾ ॥ ೧೦೭ ॥

॥ ಋಷಿರುವಾಚ ॥

ಭಗವನ್ ಬ್ರಹ್ಮಣಃ ಪುತ್ರ ಪುತ್ರೀಂ ಮೇ ಚರಿತವ್ರತಾಂ ।
ಪತ್ನೀಂ ಪ್ರತಿಗೃಹಾಣೈನಾಂ ಮಯಾ ಬ್ರಾಹ್ಮೇಣ ಧರ್ಮತಃ ॥ ೧೦೮ ॥

ಯತ್ರ ಯತ್ರಾಶ್ರಮೇ ಬ್ರಹ್ಮನ್ತ್ವೇಚ್ಛಯಾ ನಿವಸಿಷ್ಯಸಿ ।
ತ್ವದ್ಭಕ್ತ್ಯೈಷಾ ಭವಿತ್ರೀ ಚ ಛಾಯೇವಾನುಗತಾ ತವ ॥ ೧೦೯ ॥

ರುವಲ್ಲಿಗೆ ಹೋಗಿ, ಅಲ್ಲಿ ಜ್ವಲಿಸುತ್ತಿರುವ ಅಗ್ನಿಯಂತೆ ಬ್ರಹ್ಮವರ್ಚಸ್ಸಿನಿಂದ ಪ್ರಕಾಶಿಸುತ್ತಲಿರುವನೂ, ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ನೆಟ್ಟಮನಸ್ಸುಳ್ಳವನೂ, ಆಗತಾನೆ ಉದಯಿಸಿರುವ ಸೂರ್ಯನಂತೆ ಪ್ರಕಾಶಮಾನನೂ, ತೇಜಸ್ವಿಯೂ ಆದ ವಸಿಷ್ಠನನ್ನು ಮಾನಸಪರ್ವತದ ಗುಹೆಯಲ್ಲಿ ನೋಡಿದನು.

೧೦೭. ಆಮೇಲೆ ಅರುಂಧತಿಯ ತಂದೆಯಾದ ಮೇಧಾತಿಥಿಮುನಿಯು ಅರುಂಧತಿಯನ್ನು ಎದುರಿಗಿಟ್ಟುಕೊಂಡು ಜಿತೇಂದ್ರಿಯನಾದ ವಸಿಷ್ಠಮುನಿಯನ್ನು ಕುರಿತು ಹೀಗೆ ಹೇಳಿದನು.

೧೦೮—೧೧೦. ಮೇಧಾತಿಥಿಮುನಿಯು ಹೇಳಿದನು :—ಪೂಜ್ಯನೂ, ಬ್ರಹ್ಮಪುತ್ರನೂ ಆದ ಓ ವಸಿಷ್ಠಮುನಿಯೇ ! ಆಚಾರಶೀಲಳಾದ ಈ ನನ್ನ ಮಗಳನ್ನು ನಿನಗೆ ಬ್ರಾಹ್ಮವಿವಾಹ ನಿಯಮದಂತೆ ಪದುವೆಮಾಡಿಕೊಡುವೆನು, ಇವಳನ್ನು ಸ್ವೀಕರಿಸು. ನಿನ್ನಿಷ್ಟದಂತೆ ನೀನು ಯಾವಯಾವ ಆಶ್ರಮದಲ್ಲಿ ವಾಸಿಸುವೆಯೋ

ತತ್ರ ತತ್ರೈವ ಮೇ ಪುತ್ರೀ ಸಮಾನವ್ರತಧಾರಿಣೀ ।
ಪತಿವ್ರತಾ ವರಾರೋಹಾ ಶುಶ್ರೂಷಾಂ ತೇ ಕರಿಷ್ಯತಿ ॥ ೧೧೦ ॥

॥ ಮಾರ್ಕಂಡೇಯ ಉವಾಚ ॥

ಇತಿ ಶ್ರುತ್ವಾ ವಸಿಷ್ಠಸ್ತು ಮುನೇರ್ಮೇಧಾತಿಥೇರ್ವಚಃ ।
ದೃಷ್ಟ್ವಾ ಸಮಾಗತಾನ್ದೇವಾನ್ಬ್ರಹ್ಮವಿಷ್ಣುಶಿವಾದಿಕಾನ್ ॥ ೧೧೧ ॥

ಅವಶ್ಯಮೇತದ್ಭವೀತಿ ನಿಶ್ಚಿತ್ಯ ದಿವ್ಯಚಕ್ಷುಷಾ ।
ಬ್ರಹ್ಮಣಃ ಸಂಮತೇ ಪುತ್ರೀಂ ತದಾ ಮೇಧಾತಿಥೇರ್ಮುನೇಃ ॥ ೧೧೨ ॥

ವಸಿಷ್ಠಃ ಪ್ರತಿಜಗ್ರಾಹ ಬಾಢಮಿತ್ಯುಕ್ತವಾಂಶ್ಚ ಪ ।
ಗೃಹೀತಪಾಣಿಃ ಸಾ ದೇವೀ ವಸಿಷ್ಠೇನ ಮಹಾತ್ಮನಾ ॥ ೧೧೩ ॥

ಪತ್ಯುಃ ಪಾದಯುಗೇ ಚಕ್ಷುರ್ಯುಗಂ ನ್ಯಸ್ತವತೀ ಸತೀ ।
ತತೋ ಬ್ರಹ್ಮಾ ಚ ವಿಷ್ಣುಶ್ಚ ರುದ್ರಾಶ್ಚಾನ್ಯೇ ತಥಾಽಮರಾಃ ॥ ೧೧೪ ॥

ಅಲ್ಲೆಲ್ಲಾ ಇವಳು ನೆರಳಿನಂತೆ ನಿನ್ನೊಡನಿದ್ದು ನಿನ್ನನ್ನು ಸೇವಿಸುವಳು ಮತ್ತು ಅಲ್ಲೆಲ್ಲಾ ನಿನ್ನಂತೆ ವ್ರತವನ್ನು ಅನುಷ್ಠಾನಮಾಡುತ್ತಾ ಪತಿವ್ರತೆಯೂ, ಉತ್ತಮ ಸ್ತ್ರೀಯೂ ಆದ ಈ ಅರುಂಧತಿಯು ನಿನ್ನ ಸೇವೆಯನ್ನು ಮಾಡುವಳು.

೧೧೧—೧೧೩. ಮಾರ್ಕಂಡೇಯನು ಹೇಳಿದನು:— ಹೀಗೆ ಮೇಧಾತಿಥಿ ಮುನಿಯು ಹೇಳಿದ ಮಾತುಗಳನ್ನು ಕೇಳಿ ವಸಿಷ್ಠನು, ಬ್ರಹ್ಮ ವಿಷ್ಣು ಶಂಕರರೇ ಮೊದಲಾದ ದೇವತೆಗಳು ಬಂದಿರುವುದನ್ನು ನೋಡಿ ತನ್ನ ದಿವ್ಯದೃಷ್ಟಿಯಿಂದ ಮುಂದೆ ಹೀಗೆಯೇ ಆಗಬೇಕಾಗಿರುವುದೆಂದು ತಿಳಿದು, ಬ್ರಹ್ಮನ ಅನುಮತಿಯಂತೆ ತುಂಬಾ ಸಂತೋಷವೆಂದು ಹೇಳಿ ಅರುಂಧತಿಯನ್ನು ಪತ್ನಿಯನ್ನಾಗಿ ಸ್ವೀಕರಿಸಿದನು.

೧೧೪. ಹೀಗೆ ಮಹಾತ್ಮನಾದ ವಸಿಷ್ಠನನ್ನು ಮದುವೆಯಾಗಿ ಆ ಅರುಂಧತಿಯು ಪತಿಯಾದ ಆ ಮುನಿಯ ಪಾದಗಳಲ್ಲಿ ದೃಷ್ಟಿಯನ್ನು ಇಟ್ಟಳು.

ವಿವಾಹವಿಧಿನಾ ತೌ ತು ಮೋದಯಾಂ ಚಕ್ರುರುತ್ಸವೈಃ ।
ಸಾವಿತ್ರೀಪ್ರಮುಖಾ ದೇವ್ಯೋ ದೇವಾಶ್ಚೇಂದ್ರಾದಯಸ್ತಥಾ ॥ ೧೧೫ ॥

ದಕ್ಷಾದ್ಯಾಃ ಕಶ್ಯಪಾದ್ಯಾಸ್ತು ಮುನಯೋಽತಿತಪೋಧನಾಃ ।
ಉನ್ಮಜ್ಯ ಬ್ರಹ್ಮವಚನಾದ್ವಲ್ಕಲಂ ಚಾಜಿನಂ ಜಟಾಃ ॥ ೧೧೬ ॥

ಮಂದಾಕಿನೀಜಲೇನಾಶು ಸ್ನಾಪಯಿತ್ವಾ ಸುತಂ ವಿಧೇಃ ।
ಜಾಂಬೂನದೈಸ್ತಥಾ ದಿವ್ಯೈರ್ಭೂಷಣೈಶ್ಚ ಮನೋಹರೈಃ ॥ ೧೧೭ ॥

ವಸಿಷ್ಠಂ ಭೂಷಯಾಂ ಚಕ್ರುಸ್ತಥೈವಾರುಂಧತೀಂ ಸತೀಂ ।
ಭೂಷಯಿತ್ವಾಥ ತೌ ತತ್ರ ಸನ್ಯಾಪ್ಯ ಮುನಿಭಿರ್ವಿಧಿಂ ॥ ೧೧೮ ॥

ವಿವಾಹಾವಭೃಥಂ ಚಕ್ರುಸ್ತಯೋರ್ವಿಧಿಹರೀಶ್ವರಾಃ ।
ನಿಧಾಯ ಸರ್ವತೀರ್ಥಾನಾಂ ತೋಯಮಂ ಜಾಂಬೂನದೇ ಘಟೇ ॥ ೧೧೯ ॥

---

೧೧೫. ಆಗ ಬ್ರಹ್ಮನೂ, ವಿಷ್ಣುವೂ, ರುದ್ರನೂ, ಮಿಕ್ಕದೇವತೆಗಳೂ ವಿವಾಹ ನಿಗದಿಮಾಡಿದಂತೆ ಆಯಾಯ ಉತ್ಸವಗಳಿಂದ ಆ ದಂಪತಿಗಳನ್ನು ಸಂತೋಷಗೊಳಿಸಿದರು.

೧೧೬-೧೧೭. ಆಗ ಸಾವಿತ್ರೀ ಮೊದಲಾದ ದೇವಸ್ತ್ರೀಯರೂ, ಇಂದ್ರನೇ ಮೊದಲಾದ ದೇವತೆಗಳೂ, ತುಂಬಾ ತಪಸ್ವಿಗಳಾದ ದಕ್ಷ ಮತ್ತು ಕಶ್ಯಪನೇ ಮೊದಲಾದ ಮುನಿಗಳೂ ಸಹ ಬ್ರಹ್ಮನ ಅಪ್ಪಣೆಯಂತೆ ಅರುಂಧತೀ ವಸಿಷ್ಠರು ಉಟ್ಟಿದ್ದ ನಾರುಬಟ್ಟೆಯನ್ನೂ, ವ್ಯಾಘ್ರಾಜಿನ, ಕೃಷ್ಣಾಜಿನಗಳನ್ನೂ ತೆಗೆದು ಜಟೆಯನ್ನು ಬಿಚ್ಚಿ ಗಂಗಾನದಿಯಲ್ಲಿ ಸ್ನಾನಮಾಡಿಸಿ ಬ್ರಹ್ಮಪುತ್ರನಾದ ವಸಿಷ್ಠನನ್ನೂ, ಅರುಂಧತಿಯನ್ನೂ ಸುವರ್ಣಮಯವಾದ ಮನೋಹರವಾದ ದಿವ್ಯಾಭರಣಗಳಿಂದ ಅಲಂಕರಿಸಿದರು.

೧೧೮. ಹೀಗೆ ಅಲಂಕರಿಸಿದ ದಂಪತಿಗಳನ್ನು ಪೀಠದಲ್ಲಿ ಕುಳ್ಳಿರಿಸಿ, ಮುನಿಗಳು ಅವರ ವಿವಾಹವಿಧಿಯನ್ನು ಮುಗಿಸಿದನಂತರ ಬ್ರಹ್ಮ ವಿಷ್ಣು ಶಂಕರರು ಕೊನೆಯಲ್ಲಿ ಅವರಿಗೆ ಮಂಗಳಸ್ನಾನವನ್ನು ಮಾಡಿಸಿದರು.

೧೧೯-೧೨೦. ಸುವರ್ಣಕಲಶದಲ್ಲಿ ಎಲ್ಲಾ ತೀರ್ಥಗಳ ಜಲವನ್ನು ತುಂಬಿ

ಆಶೀರ್ವಾದಕರೈರ್ಮಂತ್ರೈರ್ಗಾಯತ್ರ್ಯಾದ್ಯುಪದಾದಿಭಿಃ ।
ಸ್ವಯಂ ತೌ ಸ್ನಾಪಯಾಂ ಚಕ್ರುರ್ಬ್ರಹ್ಮವಿಷ್ಣುಮಹೇಶ್ವರಾಃ ॥ ೧೨೦ ॥

ತತೋ ಮಹರ್ಷಯಶ್ಚಾನ್ಯೇ ತಥಾ ದೇವರ್ಷಯಶ್ಚ ಯೇ ।
ತೇ ಸರ್ವೇ ಋಗ್ಯಜುಸ್ಸಾಮವೇದಭಾಗೈರ್ಮಹಾಸ್ವರೈಃ ॥ ೧೨೧ ॥

ಗಂಗಾಸರಿತಾಂ ತೋಯೈಶ್ಚಕ್ರುಃ ಶಾಂತಿಂ ತಯೋರ್ಮುಹುಃ ।
ಭುವನತ್ರಯಸಂಚಾರಿ ವಿಮಾನಂ ಸೂರ್ಯವಚಸಂ ॥ ೧೨೨ ॥

ಅವ್ಯಾಹತಗತಿಂ ಬ್ರಹ್ಮಾ ಸತೋಯಂ ಚ ಕಮಂಡಲುಂ ।
ತಾಭ್ಯಾಂ ದಾಯಂ ದದೌ ವಿಷ್ಣುರ್ದುಷ್ಪ್ರಾಪಂ ಸ್ಥಾನಮುತ್ತಮಂ
॥ ೧೨೩ ॥
ಯದೂರ್ಧ್ವಂ ಸರ್ವದೇವಾನಾಂ ಮರೀಚ್ಯಾದೇಃ ಸಮಾಪತಃ ।
ಸಪ್ತಕಲ್ಪಾಂತಜೀವಿತ್ವಂ ರುದ್ರಃ ಪ್ರಾದಾತ್ತಯೋರ್ವರಂ ॥ ೧೨೪ ॥

ಗಾಯತ್ರೀ ದ್ಯುಪದಾದಿವ ಮಂಚತು ಮುಂತಾವ ಮಂತ್ರಗಳಿಂದ ಬ್ರಹ್ಮ ವಿಷ್ಣು ಶಂಕರರು ತಾನೇ ಆ ದಂಪತಿಗಳಿಗೆ ಮಂಗಳಸ್ನಾನವನ್ನು ಮಾಡಿಸಿದರು.

೧೨೧. ಅನಂತರ ಮಹರ್ಷಿಗಳೂ, ನಾರದನೇ ಮೊದಲಾವ ದೇವಋಷಿಗಳೂ ಸಹ ಋಗ್ವೇದ, ಯಜುರ್ವೇದ, ಸಾಮವೇದಗಳನ್ನು ಸುಸ್ವರವಾಗಿ ಹೇಳುತ್ತಾ ಗಂಗೆಯೇ ಮೊದಲಾದ ನದಿಗಳ ಜಲದಿಂದ ಆ ದಂಪತಿಗಳಿಗೆ ಶಾಂತಿಯನ್ನು ಮಾಡಿದರು.

೧೨೨. ಬ್ರಹ್ಮನು ಆ ಅರುಂಧತೀ ವಸಿಷ್ಠರಿಗೆ ಮೂರು ಲೋಕಗಳಲ್ಲಿಯೂ ಸಂಚರಿಸುವಂತಹುದೂ, ತಡೆಯಿಲ್ಲದ ಗನುನವುಳ್ಳದ್ದೂ, ಸೂರ್ಯನಂತೆ ತೇಜಸ್ವಿಯಾದುದೂ ಆದ ವಿಮಾನವೊಂದನ್ನೂ, ಜಲಪೂರ್ಣವಾದ ಕಮಂಡಲುವನ್ನೂ ಉಡುಗೆರೆಯಾಗಿ ಕೊಟ್ಟನು.

೧೨೩-೧೨೪. ವಿಷ್ಣುವು ಸಾಮಾನ್ಯರಿಂದ ಪಡೆಯಲಸಾಧ್ಯವಾದುದೂ, ದೇವಲೋಕಕ್ಕಿಂತಲೂ ಮೇಲಿರುವುದೂ, ಮರೀಚಿಮುನಿಯೇ ಮೊದಲಾವವರ ಸಮಿಾಪದಲ್ಲಿರುವಂತಹುದೂ ಆದ ಉತ್ತಮಸ್ಥಾನವನ್ನು ಆ ದಂಪತಿಗಳಿಗೆ ಕಲ್ಪಿಸಿದನು.

ಅದಿತಿಃ ಕುಂಡಲಯುಗಂ ಬ್ರಹ್ಮಣಾ ನಿರ್ಮಿತಂ ಸ್ವಕಂ ।
ದದೌ ಸ್ವಕರ್ಣಾದಾಕೃಷ್ಯ ಪುತ್ರೈಃ ಮೇಧಾತಿಥೇಸ್ತದಾ ॥ ೧೨೫ ॥

ಪತಿವ್ರತಾತ್ವಂ ಸಾವಿತ್ರೀ ಬಹುಲಾ ಬಹುಪುತ್ರತಾಂ ।
ದೇವೇಂದ್ರೋ ಬಹುರತ್ನಾನಿ ಧನೇಶೇನ ಸಮಂ ದದೌ ॥ ೧೨೬ ॥

ಏವಂ ದೇವಾಶ್ಚ ಮುನಯೋ ದೇವ್ಯಶ್ಚಾನ್ಯೇ ಚ ಯೇ ಸ್ಥಿತಾಃ ।
ದದುಸ್ತತ್ರ ಯಥಾಯೋಗ್ಯಂ ದಾಯಂ ತಾಭ್ಯಾಂ ಪೃಥಕ್ಪೃಥಕ್ ॥ ೧೨೭ ॥

ಏವಂ ವಿವಾಹ್ಯ ವಿಧಿವತ್ಸೌವರ್ಣೇ ಮಾನಸಾಚಲೇ ।
ಅರುಂಧತ್ಯಾ ವಸಿಷ್ಠಸ್ತು ಮೋದಮಾಪ ತಯಾ ಸಹ ॥ ೧೨೮ ॥

ತತ್ರ ಯತ್ಪತಿತಂ ಕೋಯಂ ಮಾನಸಾಚಲಕಂದರೇ ।
ವಿವಾಹಾವಭೃಥಾರ್ಥಾಯ ಶಾಂತ್ಯರ್ಥೇ ಚ ಸುರಾಹೃತಂ ॥ ೧೨೯ ॥

---

೧೨೫. ಶಂಕರನು ಆ ದಂಪತಿಗಳಿಗೆ ಏಳುಕಲ್ಪಗಳವರೆಗೆ ಆಯಸ್ಸನ್ನು ವರವಾಗಿ ಕೊಟ್ಟನು. ದೇವಮಾತೆಯಾದ ಅದಿತಿಯು, ಬ್ರಹ್ಮನು ನಿರ್ಮಿಸಿ ತನಗೆ ಕೊಟ್ಟಿರುವ ಕುಂಡಲಗಳೆರಡನ್ನೂ ಆಗಲೇ ತನ್ನ ಕಿವಿಗಳಿಂದ ತೆಗೆದು ಅರುಂಧತಿಗೆ ಕೊಟ್ಟಳು.

೧೨೬. ಸಾವಿತ್ರಿಯು, ಪತಿವ್ರತೆಯಾಗಿರುವಂತೆ ಅರುಂಧತಿಯನ್ನು ಆಶೀರ್ವದಿಸಿದಳು. ಇಂದ್ರನೂ, ಕುಬೇರನೂ ಅನೇಕ ರತ್ನಗಳನ್ನು ಆ ದಂಪತಿಗಳಿಗೆ ಕೊಟ್ಟರು.

೧೨೭. ಹೀಗೆಯೇ ಮಿಕ್ಕ ದೇವತೆಗಳೂ ದೇವಸ್ತ್ರೀಯರೂ ಉಳಿದವರೆಲ್ಲರೂ ಆ ದಂಪತಿಗಳಿಗೆ ತಮ್ಮತಮ್ಮ ಯೋಗ್ಯತೆಗೆ ತಕ್ಕಂತೆ ಉಡುಗೆರೆಯನ್ನು ಓದಿಸಿದರು.

೧೨೮. ಹೀಗೆ ವಿಧಿಯಂತೆ ಸುವರ್ಣಮಯವಾದ ಮಾನಸಗಿರಿಯಲ್ಲಿ ಆ ಅರುಂಧತಿಯನ್ನು ಮದುವೆಯಾಗಿ ವಸಿಷ್ಠನು ಅವಳೊಡಗೂಡಿ ತುಂಬಾ ಹರ್ಷಗೊಂಡನು.

೧೨೯—೧೩೫. ಅಲ್ಲಿ ಮದುವೆಯ ಮಂಗಲಸ್ನಾನಕ್ಕಾಗಿಯೂ, ಶಾಂತಿಗಾಗಿಯೂ, ಯಾವ ಜಲವನ್ನು ದೇವತೆಗಳೂ, ಬ್ರಹ್ಮ, ವಿಷ್ಣು, ಶಂಕರರೂ ಸ್ವಯಂಕೈ

ಬ್ರಹ್ಮವಿಷ್ಣುಮಹಾದೇವಪಾಣಿಭಿಃ ಸಮುದೀರಿತಂ ।
ತತ್ತ್ರೀಯಂ ಸಪ್ತಧಾ ಭೂತ್ವಾ ಪತಿತಂ ಮಾನಸಾಚಲಾತ್ ॥ ೧೩೦ ॥

ಹಿಮಾದ್ರೇಃ ಕಂದರೇ ಸಾನೌ ಸರಸ್ಯಾಂ ಚ ಪೃಥಕ್ಪೃಥಕ್ ।
ತತ್ತ್ರೀಯಂ ಪತಿತಂ ಸಿಪ್ರೇ ದೇವಭೋಗ್ಯೇ ಸರೋವರೇ ॥ ೧೩೧ ॥

ತೇನ ಸಿಪ್ರಾನದೀ ಜಾತಾ ವಿಷ್ಣುನಾ ಪ್ರೇರಿತಾ ಕ್ಷಿತೌ ।
ಮಹಾಕೋಷೀಪ್ರಯಾತೇ ತು ಯದ್ವಾರಿ ಪತಿತಂ ತು ವೈ ॥ ೧೩೨ ॥

ಕೌಶಿಕೀನಾಮ ಸಾ ಜಾತಾ ವಿಶ್ವಾಮಿತ್ರಾವತಾರಿತಾ
ಉಮಾಕ್ಷೇತ್ರೇ ಯತ್ಪತಿತಂ ತೋಯಂ ತೇನ ಮಹಾನದೀ ॥ ೧೩೩ ॥

ಕಾವೇರೀನಾಮ ಸಾ ಜಾತಾ ಕಾವೇರಸರಸಸ್ಪೃತಾ ।
ಮಹಾಕಾಲೇ ಸರಃಶ್ರೇಷ್ಠೇ ಪತಿತಂ ತಜ್ಜಲಂ ಗಿರೇಃ ॥ ೧೩೪ ॥

ಹಿಮಾದ್ರೇಃ ಪಾರ್ಶ್ವಭಾಗೇ ತು ದಕ್ಷಿಣೇ ಶಂಭುಸನ್ನಿಧೌ ।
ಗೋಮತೀನಾಮ ತೈರ್ಜಾತಾ ನದೀ ಗೋಮುದುದೀರಿತಾ ॥ ೧೩೫ ॥

ಸಿದರೋ ಆ ನೀರು ಏಳುಭಾಗಗಳಾಗಿ ಮಾನಸಗಿರಿಯಲ್ಲಿಯೂ, ಹಿಮಾಲಯದ ಗುಹೆಗಳಲ್ಲಿಯೂ. ತಪ್ಪಲಲ್ಲಿಯೂ, ಸರೋವರದಲ್ಲಿಯೂ ಬೇರೆಬೇರೆಯಾಗಿ ಬಿದ್ದಿತು ಮತ್ತು ದೇವತೆಗಳು ವಿಹರಿಸುವ " ಶಿಪ್ರ " ವೆಂಬ ಸರಸ್ಸಿನಲ್ಲಿಯೂ ಆ ನೀರು ಬಿದ್ದಿತು.

೧೩೨. ಶಿಪ್ರಸರಸ್ಸಿನಲ್ಲಿ ಬಿದ್ದ ಆ ನೀರಿನಿಂದ " ಶಿಪ್ರಾ " ಎಂಬ ನದಿಯಾಯಿತು. ಆ ನದಿಯನ್ನು ವಿಷ್ಣುವು ಭೂಲೋಕಕ್ಕೆ ಬಿಟ್ಟನು. ಮಹಾಕೌಷೀ ಎಂಬ ಬೆಟ್ಟದ ಝರಿಯಲ್ಲಿ ಬಿದ್ದ ನೀರು ಕೌಶೀ ಯೆಂಬ ನದಿಯಾಯಿತು. ಆ ನದಿಯನ್ನು ಮುಂದೆ ವಿಶ್ವಾಮಿತ್ರಮುನಿಯು ಭೂಲೋಕದಲ್ಲಿ ಹರಿಯುವಂತೆ ಮಾಡಿದನು.

೧೩೩. ಉಮಾಕ್ಷೇತ್ರವೆಂಬ ಸ್ಥಳದಲ್ಲಿರುವ ಕವೇರವೆಂಬ ಸರಸ್ಸಿನಲ್ಲಿ ಬಿದ್ದ ಆ ವಿವಾಹಜಲವು ಕಾವೇರಿಯೆಂಬ ಮಹಾನದಿಯಾಯಿತು.

೧೩೪-೧೩೫. ಹಿಮಾಲಯದ ದಕ್ಷಿಣಭಾಗದಲ್ಲಿ ಶಂಕರನು ವಾಸಿಸುವ ಸ್ಥಳದಲ್ಲಿರುವ ಮಹಾಕಾಲವೆಂಬ ಸರಸ್ಸಿನಲ್ಲಿ ಆ ವಿವಾಹಜಲವು ಬಿದ್ದು ಅದರಿಂದ ನದಿಯೊಂದು ಜನಿಸಿತು. ಶಂಕರನು ಅದಕ್ಕೆ ಗೋಮತಿಯೆಂದು ಹೆಸರಿಟ್ಟನು.

ಮೈನಾಕೋ ನಾಮ ಯಃ ಪುತ್ರಃ ಶೈಲರಾಜಸ್ಯ ತತ್ಸಮಃ ।
ತಸ್ಮಿನ್ತ್ಸನೌ ಸಮುತ್ಪನ್ನೋ ಮೇನಕೋದರತಃ ಪುರಾ ॥ ೧೩೬ ॥

ಯತ್ತತ್ರ ಪತಿತಂ ತೋಯಂ ತೇನ ಜಾತಾ ಮಹಾನದೀ ।
ದೇವಿಕಾಖ್ಯಾ ಮಹಾದೇವಪ್ರೇರಿತಾ ಸಾಗರಂ ಪ್ರತಿ ॥ ೧೩೭ ॥

ಯತ್ತ್ರೋಯಂ ಸಂಗತಂ ದರ್ಯಾಂ ಹಂಸಾವತರಸನ್ನಿಧೌ ।
ತೇನಭೂತ್ಸರಯೂರ್ನಾಮ್ನಾ ನದೀ ಪುಣ್ಯತಮಾ ಸ್ಮೃತಾ ॥ ೧೩೮ ॥

ಯಾನ್ಯಂಭಾಂಸಿ ಮಹಾತೋಯಖಾಂಡವಾರಣ್ಯಸನ್ನಿಧೌ ।
ಹಿಮವತ್ಕಂದರೇ ಯಾಮ್ಯೇ ಇರಾಯಾ ಹ್ರದಮಧ್ಯತಃ ॥ ೧೩೯ ॥

ಇರಾವತೀ ನಾಮ ನದೀ ತೈರ್ಜಾತಾ ಚ ಸರಿದ್ವರಾ ।
ಏತಾಃ ಸರ್ವಾಃ ಸ್ನಾನಪಾನಸೇವನೈರ್ಜಾಹ್ನವೀ ಯಥಾ ॥ ೧೪೦ ॥

೧೩೬-೧೩೭. ಹಿಮವಂತನಿಗೆ ಸಮಾನನೂ, ಆ ಹಿಮಾಲಯನ ಪುತ್ರನೂ ಆದ ಮೈನಾಕನು, ಮೇನಕಾಗರ್ಭದಿಂದ ಎಲ್ಲಿ ಜನಿಸಿದನೋ ಆ ತಪ್ಪಲಿನಲ್ಲಿ ಬಿದ್ದ ಈ ವಿವಾಹೋದಕವು ದೇವಿಕಾ ಎಂಬ ಮಹಾನದಿಯಾಯಿತು. ಆ ನದಿಯನ್ನು ಶಂಕರನು ಸಮುದ್ರದ ಕಡೆಗೆ ಹರಿಯಗೊಟ್ಟನು.

೧೩೮. ಕ್ರೌಂಚಪರ್ವತದ ಗುಹೆಯಲ್ಲಿ ಬಿದ್ದ ಆ ವಿವಾಹಜಲವು ಅತ್ಯಂತ ಪವಿತ್ರವಾದ ಸರಯೂ ಎಂಬ ನದಿಯಾಯಿತು.

೧೩೯. ಮತ್ತು ಖಾಂಡವವನದ ಸಮೀಪದಲ್ಲಿ ಹಿಮಾಲಯದ ದಕ್ಷಿಣದಿಕ್ಕಿನ ಗುಹೆಯಲ್ಲಿ ಹೆಚ್ಚಾದ ಜಲವುಳ್ಳ ಇರಾ ಎಂಬ ಮಡುವಿನಲ್ಲಿ ಬಿದ್ದ ವಿವಾಹಜಲವು ಶ್ರೇಷ್ಠವಾದ ಇರಾವತೀಯೆಂಬ ನದಿಯಾಯಿತು. ಈರೀತಿ ಶಿಪ್ರಾ, ಕಾಳಿಕೀ, ಕಾವೇರೀ, ಗೋಮತೀ, ದೇವಿಕಾ, ಸರಯೂ, ಇರಾವತೀ ಎಂದು ಏಳು ನದಿಗಳು ಜನಿಸಿದುವು.

೧೪೦. ದಕ್ಷಿಣಸಮುದ್ರವನ್ನು ಸೇರುವ ಆ ನದಿಗಳೆಲ್ಲವೂ ಗಂಗಾನದಿಯಂತೆ ಸ್ನಾನ, ಪಾನ ಮತ್ತು ಸೇವನೆಗಳಿಂದ ಜನಗಳಿಗೆ ಒಳ್ಳೆಯ ಫಲಗಳನ್ನು ಕೊಡುವುವು.

ಫಲಂ ದದತಿ ಮರ್ತ್ಯಾನಾಂ ದಕ್ಷಿಣೋದಧಿಗಾಃ ಸದಾ ।
ಧರ್ಮಾರ್ಥಕಾಮಮೋಕ್ಷಾಣಾಂ ಬೀಜಭೂತಾಃ ಸನಾತನಾಃ ॥ ೧೪೧ ॥

ಮಹಾನದ್ಯಸ್ತು ಸಪ್ತೈವ ಸರ್ವದಾ ದೇವಭೋಗದಾಃ ।
ಏವಂ ನದ್ಯಃ ಸಪ್ತ ಜಾತಾಃ ಸದಾ ಪುಣ್ಯತಮೋದಕಾಃ ॥ ೧೪೨ ॥

ಅರುಂಧತ್ಯಾ ವಸಿಷ್ಠಸ್ಯ ವಿವಾಹೇ ದೇವಸನ್ನಿಧೌ ।
ಏವಂ ವಿವಾಹ್ಯ ಸ ತಪಾ ವಸಿಷ್ಠಸ್ತಾಮರುಂಧತೀಂ ॥ ೧೪೩ ॥

ದೇವೈರ್ದತ್ತಂ ತದಾಸ್ಥಾನಂ ವಿಮಾನೇನ ಜಗಾಮ ಹ ।
ಬ್ರಹ್ಮವಿಷ್ಣುಮಹೇಶಾನಾಂ ವಚನಾನ್ಮುನಿಸತ್ತಮಃ ॥ ೧೪೪ ॥

ಹಿತಾಯ ಸರ್ವಜಗತಾಂ ತ್ರಿಷು ಲೋಕೇಷು ಸರ್ವದಾ ।
ಯಸ್ಮಿನ್ಯಸ್ಮಿನ್ಯುಗೇ ಯಾದೃಕ್ಸ್ತ್ರೀಣಾಂ ಭವತಿ ತಾದೃಶಂ ॥ ೧೪೫ ॥

---

೧೪೧. ಅನಾದಿಯಾಗಿ ಹರಿದುಬಂದಿರುವ ಈ ಏಳು ಮಹಾನದಿಗಳು ಧರ್ಮಾರ್ಥಕಾಮಮೋಕ್ಷಗಳನ್ನು ಉಂಟುಮಾಡುವವಲ್ಲದೆ ಸದಾ ದೇವಲೋಕದ ಸುಖವನ್ನೂ ಉಂಟಮಾಡುವವು.

೧೪೨. ಹೀಗೆ ದೇವತೆಗಳ ಸನ್ನಿಧಿಯಲ್ಲಿ ನಡೆದ ಆ ಅರುಂಧತೀ ವಸಿಷ್ಠರ ಮದುವೆಯಲ್ಲಿ ಪ್ರೋಕ್ಷಿಸಿದ ಜಲದಿಂದ ಅತ್ಯಂತ ಪವಿತ್ರವಾದ ಜಲವುಳ್ಳ ಏಳು ಮಹಾ ನದಿಗಳು ಜನಿಸಿದುವು.

೧೪೩. ವಿವಾಹವಿಧಿಯು ಮುಗಿದಮೇಲೆ ವಸಿಷ್ಠಮುನಿಯು ಅರುಂಧತಿಯನ್ನು ಕರೆದುಕೊಂಡು ದೇವತೆಗಳು ತನಗೆ ಕಲ್ಪಿಸಿದ ಸ್ಥಾನವನ್ನು ಕುರಿತು ವಿಮಾನವನ್ನೇರಿ ಹೊರಟುಹೋದನು.

೧೪೪—೧೪೬. ಬ್ರಹ್ಮವಿಷ್ಣುಮಹೇಶ್ವರರ ಮಾತನ್ನು ಗೌರವಿಸಿ, ಆ ವಸಿಷ್ಠಮುನಿಯು ಲೋಕಹಿತಕ್ಕಾಗಿ ಮೂರು ಲೋಕಗಳಲ್ಲಿಯೂ ಸಂಚಾರಮಾಡುತ್ತಾ ಪುರುಷರೂ, ಸ್ತ್ರೀಯರೂ ಯಾವ ಯಾವ ಯುಗದಲ್ಲಿ ಯಾವ ಯಾವ ರೀತಿ ಇರಬೇಕೋ ಅಂತಹ ಯುಗಧರ್ಮಗಳನ್ನೂ ಆಯಾ ಕಾಲಕ್ಕೆ ತಕ್ಕಂತೆ ವೇಷಭಾವಾದಿ

ವೇಷಂ ಭಾವಂ ಶರೀರಂ ಚ ಕೃತ್ವಾ ಧರ್ಮೇ ನಿಯೋಜಯನ್ ।
ವಿಚರತ್ಯೇಷ ಲೋಕಾಂಸ್ತ್ರೀನಪ್ರಮತ್ತಃ ಪ್ರಸನ್ನಧೀಃ ॥ ೧೪೬ ॥

ಏವಂ ಪುರಾ ವಸಿಷ್ಠೇನ ಪರಿಣೀತಾ ತ್ವರುಂಧತೀ ।
ಸಾ ಹಿತಾರ್ಥಾಯ ಜಗತಾಂ ದೇವಾನಾಂ ವಚನಾತ್ಪುರಾ ॥ ೧೪೭ ॥

ಯ ಇದಂ ಶೃಣುಯಾನ್ನಿತ್ಯಮಾಖ್ಯಾನಂ ಧರ್ಮಸಾಧನಂ ।
ಸರ್ವಕಲ್ಯಾಣಸಂಯುಕ್ತಂ ಚಿರಾಯುರ್ವಿತ್ತವಾನ್ಭವೇತ್ ॥ ೧೪೮ ॥

ಯಾ ಸ್ತ್ರೀ ಶೃಣೋತಿ ಸತತಮರುಂಧತ್ಯಾಃ ಕಥಾಮಿಮಾಂ ।
ಪತಿವ್ರತಾ ಸಾ ಭೂತ್ವೇಹ ಪರತ್ರ ಸ್ವರ್ಗಮಾಪ್ನುಯಾತ್ ॥ ೧೪೯ ॥

ಇದಂ ಪರಂ ಸ್ವಸ್ತ್ಯಯನಮಿದಂ ಧರ್ಮಪ್ರದಂ ಪರಂ ।
ಆಖ್ಯಾನಂ ಸರ್ವದಾ ಕೀರ್ತಿಯಶಃಪುಣ್ಯವಿವರ್ಧನಂ ॥ ೧೫೦ ॥

ಗಳನ್ನೂ, ಸ್ತ್ರೀಯರು ಅನುಸರಿಸಬೇಕಾದ ವ್ರತಾಚಾರಗಳನ್ನೂ ಸಹ ಕಲ್ಪಿಸಿ, ಜನರು ಆ ಆಚಾರಗಳಲ್ಲಿ ಪ್ರವೃತ್ತರಾಗುವಂತೆ ನಿಯಮಿಸಿದನು.

೧೪೬. ಹೀಗೆ ಹಿಂದೆ, ಜಗತ್ತಿನ ಕ್ಷೇಮಕ್ಕಾಗಿ ದೇವತೆಗಳ ವಚನದಂತೆ ವಸಿಷ್ಠಮುನಿಯು ಅರುಂಧತಿಯನ್ನು ಮದುವೆಯಾದನು.

೧೪೭. ಧರ್ಮಕ್ಕೆ ಸಾಧನವೂ, ಮಂಗಳವನ್ನುಂಟುಮಾಡುವುದೂ ಆದ ಆ ಅರುಂಧತೀ ವಸಿಷ್ಠರ ಮದುವೆಯ ಇತಿಹಾಸವನ್ನು ಕೇಳುವ ಮನುಜನು ಬಹಳ ಆಯುಸ್ಸುಳ್ಳವನೂ, ಧನವಂತನೂ ಆಗುವನು.

೧೪೯. ಸ್ತ್ರೀಯು ಈ ಅರುಂಧತಿಯ ಕಥೆಯನ್ನು ಕೇಳಿದರೆ, ಈ ಜನ್ಮದಲ್ಲಿ ಪತಿವ್ರತೆಯಾಗಿದ್ದು ಮುಂದೆ ಸ್ವರ್ಗವನ್ನು ಪಡೆಯುವಳು.

೧೫೦. ಶ್ರೇಷ್ಠವಾದ ಮಂಗವನ್ನುಂಟುಮಾಡುವುದೂ, ಧರ್ಮಪ್ರದವಾದುದೂ ಆದ ಈ ಉಪಾಖ್ಯಾನವನ್ನು ಕೇಳುವುದರಿಂದ ಕೀರ್ತಿ, ಪುಣ್ಯ ಇವುಗಳು ವೃದ್ಧಿಯನ್ನೈದುವವು.

ವಿವಾಹೇ ಪುಂಸಿ ಯಾತ್ರಾಯಂ ಯಃ ಶ್ರಾದ್ಧೇ ಶ್ರಾವಯೇತ್ಕಥಾ ।
ಸ್ಥೈರ್ಯಂ ಪುಂಸವನಂ ಸಿದ್ಧಿಃ ಪಿತೃಪ್ರೀತಿಶ್ಚ ಜಾಯತೇ ॥ ೧೫೧ ॥

ಇತಿ ವಃ ಕಥಿತಂ ಸರ್ವಂ ವಸಿಷ್ಠಸ್ಯ ಮಹಾತ್ಮನಃ ।
ಅರುಂಧತೀ ಯಥಾ ಭೂತಾ ಭಾರ್ಯಾ ವಾಪಿ ಪತಿವ್ರತಾ ॥ ೧೫೨ ॥

ಯಸ್ಯ ವಾ ತನಯಾ ಜಾತಾ ಯಥೋತ್ಪನ್ನಾ ಚ ಯತ್ರ ಚ ।
ಯಥಾ ಬ್ರಹ್ಮಹರೀಶಾನಾಂ ವಚನಾತ್ಸ ವೃತಃ ಪತಿಃ ॥ ೧೫೩ ॥

ಏತದ್ವಃ ಸರ್ವಮಾಖ್ಯಾತಂ ಗುಹ್ಯಾದ್ಗುಹ್ಯತರಂ ಪರಂ ।
ಪುಣ್ಯದಂ ಪಾಪಹರಣಮಾಯುರಾರೋಗ್ಯವರ್ಧನಂ ॥ ೧೫೪ ॥

---

೧೫೧. ಈ ಇತಿಹಾಸವನ್ನು ಮದುವೆಯಲ್ಲಿ ಹೇಳಿದರೆ ಯಾವ ತೊಂದರೆಯೂ ಇಲ್ಲದಂತೆ ಮದುವೆ ನೆರವೇರುವುದು. ಪುಂಸವನ ಕರ್ಮದಲ್ಲಿ ಹೇಳಿದರೆ, ಪುತ್ರ ಸಂತಾನ ಪ್ರಾಪ್ತಿಯಾಗುವುದು. ಪ್ರಯಾಣಕಾಲದಲ್ಲಿ ಹೇಳಿದರೆ, ಅದರ ಉದ್ದೇಶವು ಸಿದ್ಧಿಸುವುದು. ಶ್ರಾದ್ಧದಲ್ಲಿ ಹೇಳಿದರೆ ಪಿತೃಗಳಿಗೆ ಪ್ರೀತಿಯಾಗುವುದು.

೧೫೨-೧೫೩. ಎಲೈ ಬ್ರಾಹ್ಮಣೋತ್ತಮರೇ ! ಹೀಗೆ ನಿಮಗೆ ವಸಿಷ್ಠನ ವೃತ್ತಾಂತವೆಲ್ಲವನ್ನೂ ಪತಿವ್ರತೆಯಾದ ಅರುಂಧತಿಯು ಅವನನ್ನು ಮದುವೆಯಾದ ಕ್ರಮವನ್ನೂ ಹೇಳಿರುವೆನು. ಆ ಅರುಂಧತಿಯು ಯಾರ ಮಗಳು ? ಹೇಗೆ ಎಲ್ಲಿ ಜನಿಸಿದಳು ? ಬ್ರಹ್ಮ ವಿಷ್ಣು ಮಹೇಶ್ವರರ ಮಾತಿನಂತೆ ವಸಿಷ್ಠನನ್ನು ಹೇಗೆ ವರಿಸಿದ ಳೆಂಬುದನ್ನೂ ಹೇಳಿರುವೆನು.

೧೫೪. ಹೀಗೆ ಅತ್ಯಂತ ರಹಸ್ಯವೂ, ಪುಣ್ಯವನ್ನುಂಟುಮಾಡುವುದೂ, ಪಾಪ ನಾಶಕವೂ, ಆಯುಸ್ಸು ಆರೋಗ್ಯಗಳನ್ನು ವೃದ್ಧಿಹೊಂದಿಸುವಂತಹುದೂ ಆದ ಇತಿ ಹಾಸವನ್ನೆಲ್ಲಾ ಹೇಳಿರುವೆನು.

ಇತಿ ವಿಪುಲವೃಷೌಘಕ್ಷೇಮಕಾರೀತಿಹಾಸಂ ।
ಸದಸಿ ಸಕೃದಪೀಹ ಶ್ರಾವಯೇದ್ಯೋ ದ್ವಿಜಾನಾಂ ॥
ಸ ಭವತಿ ಕಲುಷೌಘೈರ್ಹೀನದೇಹಃ ಸಮೇತೋ ।
ಮುನಿವರಸಪಚರ್ಯಾಂ ಪ್ರೇತ್ಯ ಗೀರ್ವಾಣ ಏವ ॥ ೧೫೫ ॥

॥ ಇತಿ ಶ್ರೀ ಕಾಲಿಕಾಪುರಾಣೇ ತ್ರಯೋವಿಂಶೋಽಧ್ಯಾಯಃ ॥

---

೧೫೫. ಶ್ರೇಷ್ಠವೂ, ಪುಣ್ಯಸಾಧನವೂ, ಕ್ಷೇಮವನ್ನುಂಟುಮಾಡುವುದೂ ಆದ ಈ ಇತಿಹಾಸವನ್ನು ಬ್ರಾಹ್ಮಣರ ಸಭೆಯಲ್ಲಿ ಒಮ್ಮೆ ಹೇಳಿದರೆ, ಅವನು ಈ ಲೋಕದಲ್ಲಿ ಪಾಪವಿಲ್ಲದ, ಶುದ್ಧವಾದ ಶರೀರವುಳ್ಳವನಾಗಿ ಮುನಿಶ್ರೇಷ್ಠರ ಸಹವಾಸವನ್ನು ಹೊಂದುವನು. ಮುಂದೆ ಮೃತನಾದಮೇಲೆ ದೇವನೇ ಆಗುವನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಇಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀ ಕಾಲಿಕಾಪುರಾಣೇ ಚತುರ್ವಿಂಶೋಽಧ್ಯಾಯಃ

ಇಪ್ಪತ್ತನಾಲ್ಕನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ತತೋ ಹಿಮವತಃ ಪ್ರಸ್ಥೇ ಗಿರೇಃ ಸಿಪ್ರಸರಸ್ತಟೇ ।
ಉಪವಿಷ್ಟೋ ಮಹಾದೇವಸ್ತತ್ಸರೋಽಪಶ್ಯದಂತಿಕೇ ॥ ೧ ॥

ಪುನಃ ಪುನಃ ಪ್ರೇಷ್ಯಮಾಣೋ ಬ್ರಹ್ಮಣಾ ಹರಿಣಾ ಚ ಸಃ ।
ಧ್ಯಾನಂ ಕರ್ತುಂ ತತ್ರ ಮನಃ ಸ್ಥಿರಂ ಕೃತ್ವಾ ದೃಢಾತ್ಮವಾನ್ ॥ ೨ ॥

ಆತ್ಮಾನಮಾತ್ಮನಾ ದ್ರಷ್ಟುಮಾತ್ಮನ್ಯೇವ ವಿಶೇಷತಃ ।
ಪರಮಂ ಯತ್ನಮಕರೋದ್ಧ್ಯಾನೇನ ಸ್ಮರಶಾಸನಃ ॥ ೩ ॥

॥ ಇಪ್ಪತ್ತನಾಲ್ಕನೆಯ ಅಧ್ಯಾಯವು ॥

೧. ಮಾರ್ಕಂಡೇಯಮುನಿಯು ಹೇಳಿದನು:— ಅನಂತರ ಶಂಕರನು ಹಿಮಾಲಯದ ತಪ್ಪಲಲ್ಲಿರುವ ಶಿಪ್ರವೆಂಬ ಸರಸ್ಸಿನ ದಡದಲ್ಲಿ ಕುಳಿತು ಆ ಸರೋವರವನ್ನು ನೋಡಿದನು.

೨-೩. ಪುನಃಪುನಃ ಬ್ರಹ್ಮನಿಂದಲೂ, ಹರಿಯಿಂದಲೂ ಪ್ರೇರಿತನಾಗಿ ಆ ಶಂಕರನು, ಮನಸ್ಸನ್ನು ಸ್ಥಿರವಾಗಿ ಮಾಡಿಕೊಂಡು, ಇಂದ್ರಿಯಗಳನ್ನು ಜಯಿಸಿ, ತನ್ನಲ್ಲಿಯೇ ತನ್ನ ಸ್ವರೂಪವನ್ನು ಧ್ಯಾನದಿಂದ ತಾನು ತಿಳಿಯಲೋಸುಗ ತುಂಬಾ ಪ್ರಯತ್ನ ಮಾಡಿದನು.

ಧ್ಯಾನೇ ಪ್ರವಿಷ್ಟಚಿತ್ತಂ ತು ತಂ ವೃಷ್ಟ್ವಾ ದ್ರುಹಿಣಾದಯಃ ।
ಹರೇ ಪ್ರವಿಷ್ಟಾಂ ಮಾಯಾಖ್ಯಾಂ ತುಷ್ಟುವುರ್ಯತಮಾನಸಾಃ ॥ ೪ ॥

ಮಾಯಯಾ ಮೋಹಿತೋ ಭರ್ಗಃ ಸತೀಶೋಕಾಕುಲೋ ಭೃಶಂ ।
ವಿಲಪತ್ಯೇವ ತಾಂ ತಸ್ಮಿನ್ಮೋಹಹೇತುಂ ಜಗತ್ಪ್ರಸೂಂ ॥ ೫ ॥

ಸ್ತುತ್ವಾ ಶಂಭುಶರೀರಾತ್ತು ನಿಃಸಾರ್ಯೈನಾಂ ನಿರಾಕುಲಾಂ ।
ಶಂಭುಚಿತ್ತಂ ಕರಿಷ್ಯಾಮೋ ಧ್ಯಾನಾಸಕ್ತಂ ನಿರಂಜನಂ ॥ ೬ ॥

ಯಾವತ್ಸತೀ ಪುನರ್ದೇಹಂ ಗೃಹೀತ್ವಾ ಹರಭಾಮಿನೀ ।
ಭವಿತ್ರೀ ತಾವದೇವೈಷ ವಿಶೋಕೋ ಧ್ಯಾತು ನಿಷ್ಕಲಂ ॥ ೭ ॥

ಇತಿ ಸಂಚಿಂತ್ಯ ಮನಸಾ ಬ್ರಹ್ಮಾದ್ಯಾಸ್ತ್ರಿದಿವೌಕಸಃ ।
ಯೋಗನಿದ್ರಾಂ ಮಹಾಮಾಯಾಂ ಸ್ತೋತುಮೇವಂ ಸಮಾರಭನ್ ॥ ೮ ॥

---

೪. ಶಂಕರನು ಹೀಗೆ ಧ್ಯಾನಮಗ್ನನಾಗಲು ಬ್ರಹ್ಮನೇ ಮೊದಲಾದ ದೇವತೆಗಳ ಅವನ ಶರೀರವನ್ನು ಪ್ರವೇಶಿಸಿರುವ ಮಾಯೆಯನ್ನು ಹೊರಗೆಬರುವಂತೆ ಸ್ತುತಿಸಬೇಕೆಂದು ಹೀಗೆ ಯೋಚಿಸಿದರು.

೫—೮. ಮಾಯೆಯಿಂದ ಮೋಹಗೊಳಿಸಲ್ಪಟ್ಟ ಶಂಕರನು ಸತೀದೇವಿಯ ವಿಯೋಗದಿಂದ ದುಃಖಿತನಾಗಿ ಅವಳನ್ನು ಕುರಿತು ಪ್ರಲಾಪಿಸುತ್ತಿರುವನು. ಆದ ಕಾರಣ ಜಗತ್ತಿಗೆ ಕಾರಣಳಾದ ಆ ಮಾಯೆಯು, ಅವನನ್ನು ಬಿಟ್ಟು ಹೊರಗೆಬರುವಂತೆ ಆ ದೇವಿಯನ್ನು ಸ್ತುತಿಸಿ ಆ ಮಾಯೆಯನ್ನು ಶಂಕರನ ಶರೀರದಿಂದ ಹೊರಗೆ ಬರುವಂತೆ ಮಾಡಿ, ಶಂಕರನ ಮನಸ್ಸನ್ನು ಶೋಕವಿಲ್ಲದಂತೆಯೂ, ನಿರ್ಮಲವಾದುದಾಗಿಯೂ ಮಾಡಿ, ಧ್ಯಾನದಲ್ಲಿ ಆಸಕ್ತನಾಗುವಂತೆ ಮಾಡೋಣ. ತಿರುಗಿ ಶರೀರವನ್ನು ಧರಿಸಿ ಸತೀದೇವಿಯು ಯಾವಾಗ ಶಂಕರನನ್ನು ಮೋಹಿಸುವಳೋ ಅಲ್ಲಿಯವರೆಗೆ ಈ ಶಂಕರನು ಶೋಕರಹಿತನಾಗಿ, ನಿರವಯವವಾದ ಆತ್ಮಸ್ವರೂಪವನ್ನು ಧ್ಯಾನಿಸುತ್ತಿರಲಿ. ಹೀಗೆಂದು ಯೋಚಿಸಿ ಬ್ರಹ್ಮನೇ ಮೊದಲಾದ ದೇವತೆಗಳು ಯೋಗನಿದ್ರಾರೂಪಳಾದ ಆದಿಮಾಯೆಯನ್ನು ಈರೀತಿ ಸ್ತುತಿಸಲು ಪ್ರಾರಂಭಿಸಿದರು.

॥ ದೇವಾ ಊಚುಃ ॥

ಶ್ರೀಶಕ್ತಿಂ ಪಾವನೀಂ ತಾಂ ತು ಪುಷ್ಟಿಂ ಪರಮನಿಷ್ಕಲಾಂ ।
ವಯಂ ಸ್ತುಮೋ ಮಹಾಭಕ್ತ್ಯಾ ಮಹದವ್ಯಕ್ತರೂಪಿಣೀಂ ॥ ೯ ॥

ಶಿವಾಂ ಶಿವಕರೀಂ ಶುದ್ಧಾಂ ಸ್ಥೂಲಾಂ ಸೂಕ್ಷ್ಮಾಂ ಪರಾವರಾಂ ।
ಅಂತರ್ವಿದ್ಯಾಮವಿದ್ಯಾಖ್ಯಾಂ ಪ್ರೀತಿಮೇಕಾಗ್ರಯೋಗಿನೀಂ ॥ ೧೦ ॥

ತ್ವಂ ಮೇಧಾ ತ್ವಂ ಧೃತಿಸ್ತ್ವಂ ಹಿ ತ್ವಮೇಕಾ ಸರ್ವಗೋಚರಾ ।
ತ್ವಂ ದೀಧಿತಿಃ ಸೂರ್ಯಗತಾ ಸುಪ್ರಪಂಚಪ್ರಕಾಶಿನೀ ॥ ೧೧ ॥

ಯಾ ತು ಬ್ರಹ್ಮಾಂಡಸಂಸ್ಥಾನಂ ಜಗದ್ಬೀಜೇಷು ಯಾ ಜಗತ್ ।
ಆಪ್ಯಾಯಯತಿ ಬ್ರಹ್ಮಾದೀಂಸ್ತಂಬಾಂತಾ ಯಾ ತ್ವಮಾಪಗಾ ॥ ೧೨ ॥

೯-೧೦. ದೇವತೆಗಳು ಸ್ತೋತ್ರಮಾಡಿದರು:—ಓ ದೇವಿ! ನೀನು ಲಕ್ಷ್ಮಿಯೆಂಬ ಶಕ್ತಿಸ್ವರೂಪಳು, ಪುಷ್ಟಿರೂಪಳು, ಜಗತ್ತನ್ನು ಪಾವನಮಾಡುವವಳು, ಮಂಗಳಸ್ವರೂಪಳು, ಜನರಿಗೆ ಮಂಗಳವನ್ನುಂಟುಮಾಡುವವಳು, ಉತ್ಕೃಷ್ಟಕನಿಷ್ಟ, ಸ್ಥೂಲ ಸೂಕ್ಷ್ಮ, ವಿದ್ಯಾವಿದ್ಯ ಇವುಗಳ ಸ್ವರೂಪಳು, ಪ್ರೀತಿಸ್ವರೂಪಳು, ನಾಮರೂಪಭೇದಗಳಿಲ್ಲದೆ ಅವ್ಯಕ್ತರೂಪದಿಂದ ಪ್ರಕಾಶಿಸುವವಳು. ಆದುದರಿಂದ ಧ್ಯಾನದಿಂದ ಮಾತ್ರವೇ ಪಡೆಯಲ್ಪಡತಕ್ಕವಳು. ಇಂತಹ ಮಾಯೆಯನ್ನು ನಾವು ಭಕ್ತಿಯಿಂದ ಸ್ತೋತ್ರಮಾಡುವೆವು.

೧೧. ನೀನು ಪ್ರಜ್ಞೆಯು, ಮತ್ತು ಧೈರ್ಯಸ್ವರೂಪಳು, ನೀನೊಬ್ಬಳೇ ಎಲ್ಲರಲ್ಲಿಯೂ ವ್ಯಾಪಿಸಿರುವೆ. ನೀನು ಸೂರ್ಯನಲ್ಲಿ ಕಿರಣಗಳ ರೂಪದಿಂದಿದ್ದು ಪ್ರಪಂಚವನ್ನು ಪ್ರಕಾಶಗೊಳಿಸುವೆ.

೧೨. ನೀನು ಬ್ರಹ್ಮಾಂಡದ ಸಂಸ್ಥಾನ (ಆಕಾರ) ವಾಗಿರುವಳು. ಜಗತ್ತಿಗೆ ಕಾರಣಳು ಮತ್ತು ಜಗದ್ರೂಪಳು. ಬ್ರಹ್ಮ ಮೊದಲುಗೊಂಡು ಸಣ್ಣ ಕ್ರಿಮಿಯ ಪರ್ಯಂತವಾಗಿರುವ ಸಕಲ ಪ್ರಾಣಿಗಳನ್ನೂ ನೀನು ಆಪ್ಯಾಯನ ಮಾಡುವುದರಿಂದ ಎಂದರೆ ಸಂತೋಷಗೊಳಿಸುವುದರಿಂದ ಆಪಗಾ ಎಂದು ಪ್ರಸಿದ್ಧಳಾಗಿರುವೆ.

ಯ ಏಕಃ ಸರ್ವಜಗತಾಂ ಪ್ರಾಣಭೂತಃ ಸದಾ ಗತಿಃ ।
ದೇವಾನಾಂ ಚ ಯ ಆಧಾರಃ ಸ ನಭಸ್ವಾಂಸ್ತ್ವಾಂಶಕಃ ॥ ೧೩ ॥

ಏಕಂ ವಿಸಾರಿ ಯತ್ತೇಜಃ ಸರ್ವತ್ರೈವ ಸಮಿಧ್ಯತೇ ।
ತತ್ತೇ ರೂಪಂ ಜಗದ್ಬೀಜಂ ಬಹುಧಾ ಯಚ್ಚ ದೃಶ್ಯತೇ ॥ ೧೪ ॥

ಯಾ ಬ್ರಹ್ಮಲೋಕಪಾತಾಲಸಾಂತರಾಲಗತಾ ಸದಾ ।
ಸಾ ತ್ವಂ ವಿಯನ್ಮಧ್ಯಬಹಿರ್ಬ್ರಹ್ಮಾಂಡಸ್ಯ ಚ ಸರ್ವತಃ ॥ ೧೫ ॥

ಅಚಲಾಚಲಚಕ್ರೇಣ ಯಂತ್ರಿತಾ ಯಾ ಪ್ರಪಂಚಸೂಃ ।
ಜಗದ್ಧಾತ್ರೀ ಲೋಕಮಾತಾ ಸಾ ಚ ತ್ವಂ ಮಾಧವೀ ಕ್ಷಿತಿಃ ॥ ೧೬ ॥

ತ್ವಂ ಬುದ್ಧಿಸ್ತ್ವಂ ತದ್ವಿಷಯಾ ಮಾತೈವ ಛಂದಸಾಂ ಗತಿಃ ।
ಗಾಯತ್ರೀ ತ್ವಂ ವೇದಮಾತಾ ತ್ವಂ ಸಾವಿತ್ರೀ ಸರಸ್ವತೀ ॥ ೧೭ ॥

---

೧೩. ಜಗತ್ತಿಗೆ ಪ್ರಾಣಭೂತನೂ, ಯಾವಾಗಲೂ ಸಂಚರಿಸುವವನೂ, ದೇವತೆಗಳಿಗೂ ಸಹ ಆಧಾರನೂ ಆದ ವಾಯುವೂ ನಿನ್ನ ಅಂಶವು.

೧೪. ವ್ಯಾಪಕವೂ, ಎಲ್ಲಿಡೆಗಳಲ್ಲಿಯೂ ಪ್ರಕಾಶಿಸುವಂತಹುದೂ ಆದ ಯಾವ ತೇಜಸ್ಸಿರುವುದೋ ಅದು ನಿನ್ನ ಸ್ವರೂಪವು. ಅದೇ ಜಗತ್ತಿಗೆ ಕಾರಣವು ಮತ್ತು ಅನೇಕಬಗೆಯಿಂದ ಅದೇ ತೋರುತ್ತಲಿರುವುದು.

೧೫. ಮತ್ತು ನೀನು ಬ್ರಹ್ಮಲೋಕ ಮತ್ತು ಪಾತಾಳಗಳ ಮಧ್ಯದಲ್ಲಿಯೂ ಬ್ರಹ್ಮಾಂಡದ ಒಳಗೂ ಹೊರಗೂ ಎಲ್ಲೆಲ್ಲಿಯೂ ವ್ಯಾಪಿಸಿರುವೆ.

೧೬. ಪರ್ವತದ ಸಮೂಹಗಳಿಂದ ದೃಢವಾಗಿ ನಿಂತಿರುವುದೂ, ಜಗತ್ತಿಗೆ ಕಾರಣವೂ, ಜಗತ್ತನ್ನು ಧರಿಸಿರುವುದೂ, ಜಗತ್ತಿಗೆ ತಾಯಿಯೂ ಆದ ಭೂಮಿಯೂ ನೀನೇ.

೧೭. ನೀನು ಬುದ್ಧಿಯು. ಆ ಬುದ್ಧಿಯಿಂದ ತಿಳಿಯತಕ್ಕ ವಿಷಯಗಳೂ ನೀನೇ. ನೀನು ಸಕಲರಿಗೂ ಮಾತೆಯು, ನೀನು ಛಂದಸ್ಸಿನ ಸ್ವರೂಪಳು, ಗಾಯತ್ರಿಯೂ, ವೇದಮಾತೆಯೂ, ಸಾವಿತ್ರಿಯೂ, ಸರಸ್ವತಿಯೂ ಸಹ ನೀನೆ.

ತ್ವಂ ವಾರ್ತಾ ಸರ್ವಜಗತಾಂ ತ್ವಂ ತ್ರಯೀ ಕಾಮರೂಪಿಣೀ ।
ತ್ವಂ ಹಿ ನಿದ್ರಾಸ್ವರೂಪೇಣ ಪ್ರಾಣಿನೋ ನಿರ್ಜರಾದಯಃ ॥ ೧೮ ॥

ಯೇ ಸ್ವರ್ಗಾದ್ಯೌಕಸಃ ಸರ್ವಾನ್ತ್ವಂ ಸ್ವಪಂತೀ ಪ್ರಮೋಹಸಿ ।
ತ್ವಂ ಲಕ್ಷ್ಮೀಃ ಪುಣ್ಯಕರ್ತ್ರೀಣಾಂ ಪಾಪಿನಾಂ ತ್ವಂ ಹಿ ಯಾತನಾ ॥ ೧೯ ॥

ತಥಾ ನೀತಿಭೃತಾಂ ಶ್ರೀಶ್ಚ ಸುಖಜಾನೈಶಿಕೀ ಧೃತಿಃ ।
ತ್ವಂ ಶಾಂತಿಃ ಸರ್ವಜಗತಾಂ ತ್ವಂ ಕಾಂತಿಶ್ಚಂದ್ರಗೋಚರಾ ॥ ೨೦ ॥

ತ್ವಂ ಧಾತ್ರೀ ಸರ್ವಭೂತಾನಾಂ ಲಕ್ಷ್ಮೀಸ್ತ್ವಂ ವಿಷ್ಣುಮೋಹಿನೀ ।
ತ್ವಂ ತತ್ತ್ವರೂಪಾ ಭೂತಾನಾಂ ಪಂಚಾನಮಪಿ ಸಾರಕೃತ್ ॥ ೨೧ ॥

---

೧೮. ನೀನು ಎಲ್ಲಾ ಜಗತ್ತುಗಳ ವಾರ್ತಾರೂಪಳು ಮತ್ತು ಋಗ್ಯಜುಃ ಸಾಮವೇದಸ್ವರೂಪಳು, ಇಚ್ಛಾನುಸಾರವಾದ ರೂಪವುಳ್ಳವಳು, ನಿದ್ರೆಯ ರೂಪ ದಿಂದ ನೀನು ಎಲ್ಲಾ ಪ್ರಾಣಿಗಳನ್ನೂ, ಸ್ವರ್ಗವಾಸಿಗಳಾದ ದೇವತೆಗಳನ್ನೂ ಮೋಹ ಗೊಳಿಸುವೆ.

೧೯. ಪುಣ್ಯವನ್ನು ಮಾಡುವವರಿಗೆ ನೀನು ಲಕ್ಷ್ಮಿಯು, ಪಾಪಿಗಳಿಗೆ ಯಾತ ನೆಯು, ನೀತಿವಂತರ ಐಶ್ವರ್ಯವೂ ನೀನೇ. ನೀನು ಸುಖವನ್ನು ಕೊಡುವವಳೂ, ಧೈರ್ಯರೂಪಳೂ ಆಗಿರುವೆ.

೨೦. ನೀನು ಜಗತ್ತಿಗೆ ಶಾಂತಿರೂಪಳು, ಚಂದ್ರನಲ್ಲಿರುವ ಕಾಂತಿಯೂ ನೀನು, ಎಲ್ಲಾ ಪ್ರಾಣಿಗಳನ್ನು ಧರಿಸಿರುವವಳೂ ನೀನು, ವಿಷ್ಣುವನ್ನು ಮೋಹಗೊಳಿ ಸುವ ಲಕ್ಷ್ಮಿಯೂ ನೀನೇ.

೨೧. ಪಂಚಭೂತಗಳಲ್ಲಿ ಸಾರಭೂತವಾದ ತತ್ತ್ವವೂ ನೀನು, ಮೂರು ಲೋಕಗಳ ಸ್ವರೂಪಳೂ ನೀನೇ ಮತ್ತು ನೀತಿಯು ನೀನು, ಜಗತ್ತನ್ನು ಮೋಹಗೊಳಿ ಸುವ ಆದಿಮಾಯೆಯು ನೀನು.

ತ್ವಂ ತ್ರಿಲೋಕೇ ಮಹಾನಾಯಾ ತ್ವಂ ನೀತಿರ್ಮೋಹಕಾರಿಣೀ ।
ಸಂಸಾರಚಕ್ರೇಷ್ವಾರೋಪ್ಯ ಸರ್ವಭೂತಂ ಮಹೇಶ್ವರಃ ॥ ೨೨ ॥

ಭ್ರಾಮಯನ್ನಸ್ತಿ ಚ ಯಥಾ ಸಾ ತ್ವಂ ಮಾಯಾ ಮಹೇಶ್ವರಿ ।
ಜಯಂತೀ ಜಯಯುಕ್ತಾನಾಂ ಹ್ರೀರ್ವಿದ್ಯಾ ನೀತಿರುತ್ತಮಾ ।
ಗೀತಿಸ್ತ್ವಂ ಸಾಮವೇದಸ್ಯ ಗ್ರಂಥಿಸ್ತ್ವಂ ಯಜುಷಾಂ ಮತಿಃ ॥ ೨೩ ॥

ಸಮಸ್ತಗೀರ್ವಾಣಗಣಸ್ಯ ಶಕ್ತಿ
ಸ್ತಮೋಮಯೀ ಸತ್ತ್ವಗುಣೈಕದೃಶ್ಯಾ ॥
ರಜಃಪ್ರಪಂಚಾನುಭವೈಕಕಾರಿಣೀ
ಯಾ ನಃ ಸ್ತುತಾ ಭವ್ಯಕರೀಹ ಸಾಽಸ್ತು ॥ ೨೪ ॥

ಸಂಸಾರಸಾಗರಕರಾಲತರಂಗದುಃಖ
ನಿಸ್ತಾರಕಾರಿತರಣಿಶ್ಚಿತರೀತಿಹೀನಾ ॥
ಯಾಷ್ಟಾಂಗರೂಪಪರಪಾವನಕೇ ನಿಪಾತ
ವಿಕ್ಷೇಪಕಾರಿಣಿ ಗಿರೌ ಪ್ರಣನಾಮ ತಾಂ ವೈ ॥ ೨೫ ॥

---

೨೨. ಮಹೇಶ್ವರನು ಯಾರ ಸಹಾಯದಿಂದ ಸಮಸ್ತ ಪ್ರಾಣಿಗಳನ್ನೂ, ಸಂಸಾರಚಕ್ರದಲ್ಲಿ ಸಿಲುಕಿಸಿ ತಿರುಗಿಸುವನೋ ಆ ಮಾಯೆಯೂ ನೀನೇ ಆಗಿರುವೆ.

೨೩. ಜಯಶಾಲಿಗಳಲ್ಲಿಯ ಜಯವು ನೀನು. ಲಜ್ಜೆಯೂ, ವಿದ್ಯೆಯೂ, ಉತ್ತಮವಾದ ನೀತಿಯೂ ನೀನು, ಸಾಮಗಾನವೂ ನೀನು, ಯಜುರ್ವೇದದ ಗ್ರಂಥಿಯು ನೀನು, ಯಾಗಹೋಮಗಳೂ ನೀನು.

೨೪. ಎಲ್ಲಾ ದೇವತೆಗಳಿಗೆ ಶಕ್ತಿರೂಪಳೂ, ತಮೋಗುಣರೂಪಳೂ, ಸತ್ತ್ವ ಗುಣವೇ ಪ್ರಧಾನವಾಗಿರುವವರಿಂದ ನೋಡಲ್ಪಡತಕ್ಕವಳೂ, ರಜೋಗುಣಪ್ರಧಾನ ವಾದ ಪ್ರಪಂಚದ ಅನುಭವವನ್ನುಂಟುಮಾಡುವವಳೂ ಆದ ನೀನು ಸ್ತುತಿಸುತ್ತಿರುವ ನಮಗೆ ಮಂಗಳವನ್ನುಂಟುಮಾಡು.

೨೫. ಸಂಸಾರವೆಂಬ ಕಡಲಿನಲ್ಲಿ ಒರುವ ದುಃಖಗಳೆಂಬ ಭಯಂಕರವಾದ ಅಲೆಗಳನ್ನು ದಾಟಲು ನೀನು ಎಂದಿಗೂ ಒಡೆದುಹೋಗದಂತಹ ನಾವೆಯೂ ಆಗಿರು

ನಾಸಾಕ್ಷಿವಕ್ತ್ರಭುಜವಕ್ಷಸಿ ಮಾನಸೇ ಚ ।
ಧೃತ್ವಾ ಸುಖಾನಿ ವಿದಧಾತಿ ಸದೈವ ಜಂತೋಃ ॥
ನಿದ್ರೇತಿ ಯಾತಿಸುಭಗಾ ಜಗತೀಭವಾನಾಂ ।
ಸಾ ನಃ ಪ್ರಸೀದತು ಧೃತಿಸ್ಮೃತಿವೃತ್ತಿರೂಪಾ ॥ ೨೬ ॥

ಸೃಷ್ಟಿಸ್ಥಿತ್ಯಂತರೂಪಾ ಯಾ ಸೃಷ್ಟಿಸ್ಥಿತ್ಯಂತಕಾರಿಣೀ ।
ಸೃಷ್ಟಿಸ್ಥಿತ್ಯಂತಶಕ್ತಿರ್ಯಾ ಸಾ ಮಾಯಾ ನಃ ಪ್ರಸೀದತು ॥ ೨೭ ॥

॥ ಮಾರ್ಕಂಡೇಯ ಉವಾಚ ॥

ಯೋಗನಿದ್ರಾ ಮಹಾಮಾಯಾ ಸಂಸ್ತುತೇಯಂ ತದಾ ಸುರೈಃ ।
ಹರಸ್ಯ ಹೃದಯಾತ್ಕ್ಷಿಪ್ರಂ ನಿಃಸಸಾರ ತದಾಂಜಸಾ ॥ ೨೮ ॥

ತ್ರೀಯೆ. ಅಚಲವೂ, ಪವಿತ್ರವೂ ಆದ ಅಷ್ಟಾಂಗಯೋಗಗಳೆಂಬ ಪರ್ವತದಲ್ಲಿ ವಾಸಿಸುವಳು ನೀನು. ಇಂತಹ ನಿನ್ನನ್ನು ನಾವು ನಮಸ್ಕರಿಸುವೆವು.

೨೬. ಪ್ರಾಣಿಗಳ ನಾಸಿಕ, ಕಣ್ಣು, ಮುಖ, ಭುಜ, ಎದೆ, ಮನಸ್ಸು ಇವುಗಳನ್ನು ಧರಿಸಿದ್ದು, ಆ ಪ್ರಾಣಿಗಳಿಗೆ ಸುಖವನ್ನು ನೀಡುವವಳೂ ಮತ್ತು ಪ್ರಾಣಿಗಳ ನಿದ್ರೆಯ ರೂಪಳೂ, ಧೈರ್ಯ ಮತ್ತು ಸ್ಮರಣರೂಪಳೂ ಆದ ಆದಿಶಕ್ತಿಯು ನಮಗೆ ಪ್ರಸನ್ನಳಾಗಲಿ.

೨೭. ಸೃಷ್ಟಿ ಸ್ಥಿತಿ ಲಯರೂಪಳೂ, ಆ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವವಳೂ, ಅವುಗಳನ್ನು ಮಾಡುವುದಕ್ಕೆ ಸಹಾಯವಾದ ಶಕ್ತಿರೂಪಳೂ ಆದ ಆ ಮಾಯೆಯು ಪ್ರಸನ್ನಳಾಗಲಿ.

೨೮. ಮಾರ್ಕಂಡೇಯನು ಹೇಳಿದನು:-ಯೋಗಾನಿದ್ರಾರೂಪಳಾದ ಮಹಾಮಾಯೆಯು ಹೀಗೆ ದೇವತೆಗಳಿಂದ ಸ್ತುತಿಸಲ್ಪಟ್ಟು, ಆ ಕೂಡಲೆ ಶಂಕರನ ಹೃದಯದಿಂದ ಹೊರಗೆಬಂದಳು.

ವಿನಿಃಸೃತಾಯಾಂ ತಸ್ಯಾಂ ತು ವಿವೇಶ ಮಧುಸೂದನಃ ।
ಶಂಭೋರಂತಃ ಸ್ವಯಂ ತಸ್ಯ ಶಾಂತ್ಯರ್ಥಂ ವಿಶ್ವರೂಪಧೃಕ್ ॥ ೨೯ ॥

ಪ್ರವಿಶ್ಯ ಹೃದಯಂ ತಸ್ಯ ಕಲ್ಪೇ ಕಲ್ಪೇ ಯಥಾಽಭವತ್ ।
ಸೃಷ್ಟಿಃ ಸ್ಥಿತಿಸ್ತಥೈವಾಂತಸ್ತಥಾಽದರ್ಶಯದಚ್ಯುತಃ ॥ ೩೦ ॥

ಯಥಾ ಸತೀ ತಸ್ಯ ಜಾಯಾ ಭೂತಾ ಸಾ ಯಾ ಚ ಯತ್ಸುತಾ ।
ತತ್ಸರ್ವಂ ದರ್ಶಯಾಮಾಸ ಮುಕ್ತದೇಹಾ ಚ ಸಾ ಯಥಾ ॥ ೩೧ ॥

ಬಹಿರ್ವ್ಯಕ್ತಂ ತು ನಿಸ್ಸಾರಂ ಪ್ರಪಂಚಂ ರಾಜಸಂ ಬಹು ।
ದರ್ಶಯಿತ್ವಾ ಪರಂ ಜ್ಯೋತಿರ್ಗತಚಿತ್ತಂ ತದಾಽಕರೋತ್ ॥ ೩೨ ॥

ತತೋ ಹರೋಽಪಿ ತಾನ್ಸರ್ವಾನ್ಪ್ರಪಂಚಾನ್ವೀಕ್ಷ್ಯ ಚಾಸಕೃತ್ ।
ನಿಸ್ಸಾರಾಞ್ಜ್ಞ ತದಾ ಮತ್ವಾ ಸಾರೇ ಚಿತ್ತಂ ನ್ಯವೇಶಯತ್ ॥ ೩೩ ॥

---

೨೯. ಆದಿಮಾಯೆಯು ಶಂಕರನ ಹೃದಯದಿಂದ ಹೊರಟ ಒಡನೆಯೇ ಸಕಲ ರೂಪಗಳನ್ನು ಧರಿಸಬಲ್ಲ ವಿಷ್ಣುವು ಅವನಿಗೆ ಶಾಂತಿಯನ್ನುಂಟುಮಾಡುವುದಕ್ಕಾಗಿ ಶಂಕರನ ಹೃದಯವನ್ನು ಪ್ರವೇಶಿಸಿದನು.

೩೦. ಶಂಕರನ ಹೃದಯವನ್ನು ಪ್ರವೇಶಿಸಿ, ವಿಷ್ಣುವು ಪ್ರತಿ ಕಲ್ಪಗಳಲ್ಲಿಯೂ ಸೃಷ್ಟಿ ಸ್ಥಿತಿ ಲಯಗಳು ಹೇಗೆ ಆಗುವುವೆಂಬುದನ್ನು ಶಂಕರನಿಗೆ ತೋರಿಸಿದನು.

೩೧. ಮತ್ತು ಸತಿಯು ಅವನ ಪತ್ನಿಯು ಹೇಗಾದಳು? ಯಾರ ಮಗಳು? ಶರೀರವನ್ನು ಹೇಗೆ ತ್ಯಜಿಸಿದಳು? ಎಂದೆಲ್ಲವನ್ನೂ ತೋರಿಸಿದನು.

೩೨. ಪ್ರಪಂಚವು ಪ್ರತ್ಯಕ್ಷವಾಗಿ ಸಾರವಿಲ್ಲದುದೆಂದೂ, ರಜೋಗುಣಮಯವಾದುದೆಂಬುದನ್ನೂ ತೋರಿಸಿ ಶಂಕರನ ಮನಸ್ಸನ್ನು ಪರಂಜ್ಯೋತಿಸ್ವರೂಪವಾದ ಬ್ರಹ್ಮನಲ್ಲಿ ಆಸಕ್ತವಾಗುವಂತೆ ಮಾಡಿದನು.

೩೩. ಆಗ ಶಂಕರನೂ ಸಹ, ಹರಿಯು ತೋರಿಸಿದ ಆ ಎಲ್ಲಾ ಪ್ರಪಂಚಗಳನ್ನೂ ನೋಡಿ, ಅವೆಲ್ಲವೂ ಸಾರವಿಲ್ಲದವುಗಳೆಂದು ತಿಳಿದು ವಿರಕ್ತಿಯನ್ನು ಹೊಂದಿ, ಸಾರವಾದ ಬ್ರಹ್ಮವಸ್ತುವಿನಲ್ಲಿಯೇ ಮನಸ್ಸನ್ನಿಟ್ಟನು.

ಬ್ರಹ್ಮಾದೀನಾಂ ತದಾ ಮಾಯಾ ದೇವಾನಾಂ ತೈಃ ಪರಿಷ್ಟುತಾ ।
ಪ್ರತಿಶ್ರುತ್ಯ ಚ ಕರ್ತವ್ಯಂ ತತ್ರೈವಾಂತರ್ದಧೇ ದ್ರುತಂ ॥ ೩೪ ॥

ಭಗವಾನಪಿ ವೈಕುಂಠಃ ಶಂಭೋಶ್ಚಿತ್ತಂ ಪದೇ ಪದೇ ।
ಸಂಯಮ್ಯ ನಿಃಸೃತ್ಯ ಕಾಯಾದ್ರಾಜೇವ ರವಿಮಂಡಲಾತ್ ॥ ೩೫ ॥

ಕೃತಕೃತ್ಯಾಸ್ತದಾ ದೇವಾ ಬ್ರಹ್ಮನಾರಯಣಾದಯಃ ।
ಸ್ವಂ ಸ್ವಂ ಸ್ಥಾನಂ ಯಯುಃ ಪ್ರೀತಿಯುತಾಸ್ತ್ಯಕ್ತ್ವಾ ಹರಂ ಗಿರೌ ॥ ೩೬ ॥

ಧ್ಯಾನಾಸಕ್ತಂ ಮಹಾದೇವಂ ಪ್ರಣಮ್ಯೇಂದ್ರಾದಯಃ ಸುರಾಃ ।
ವಿಜ್ಞಾಪ್ಯ ಮೌನಿನಂ ದೇವಂ ಜಗ್ಮುಃ ಸ್ಥಾನಂ ಸ್ವಕಂ ಸ್ವಕ್ಷಂ ॥ ೩೭ ॥

ಯಾತೇಷು ತೇಷು ದೇವೇಷು ಕಪರ್ದೀ ವೃಷವಾಹನಃ ।
ಸಹಸ್ರಂ ದಿವ್ಯಮಾನೇನ ದಧ್ಯೌ ಜ್ಯೋತಿಃ ಪರಂ ಸಮಾಃ ॥ ೩೮ ॥

---

೩೪. ಶಂಕರನ ಶರೀರದಿಂದ ಹೊರಹೊರಟ ಮಾಯೆಯು ದೇವತೆಗಳಿಂದ ಸ್ತುತಿಸಲ್ಪಟ್ಟು ತಾನು ಮಾಡಬೇಕಾದ ಕರ್ತವ್ಯವನ್ನು ನೆರವೇರಿಸಿ, ಅಲ್ಲಿಯೇ ಅಂತರ್ಧಾನಳಾದಳು.

೩೫. ಆಮೇಲೆ ಭಗವಂತನಾದ ನಾರಾಯಣನು ಶಂಕರನ ಮನಸ್ಸನ್ನು ಪುನಃ ಪುನಃ ಸ್ಥಿರಗೊಳಿಸಿ, ಸೂರ್ಯಮಂಡಲದಿಂದ ಚಂದ್ರನು ಶುಕ್ಲಪ್ರತಿಪತ್ತಿನಲ್ಲಿ ಹೊರಟು ಬರುವಂತೆ ಅವನ ಶರೀರದಿಂದ ಹೊರಟುಬಂದನು.

೩೬. ಹೀಗೆ ಕೃತಕೃತ್ಯರಾಗಿ ಬ್ರಹ್ಮ ಮತ್ತು ನಾರಾಯಣನೇ ಮೊದಲಾದ ದೇವತೆಗಳು ಹರ್ಷಗೊಂಡು, ಶಂಕರನನ್ನು ಹಿಮಾಲಯದಲ್ಲಿಯೇ ಬಿಟ್ಟು ತಮ್ಮತಮ್ಮ ಸ್ಥಾನಗಳಿಗೆ ತೆರಳಿದರು.

೩೭. ಇಂದ್ರನೇ ಮೊದಲಾದ ದೇವತೆಗಳು ಸಹ ಧ್ಯಾನಮಗ್ನನಾದ ಮಹಾದೇವನನ್ನು ನಮಸ್ಕರಿಸಿ, ಮೌನವ್ರತಧಾರಿಯಾದ ಅವನಿಂದ ಬೀಳ್ಕೊಂಡು ತಮ್ಮ ತಮ್ಮ ಸ್ಥಾನಕ್ಕೆ ತೆರಳಿದರು.

೩೮. ದೇವತೆಗಳೆಲ್ಲಾ ಹೊರಟುಹೋದಮೇಲೆ ನಂದಿವಾಹನನಾದ ಶಂಕರನು ದೇವಗಣನೆಯಂತೆ ಸಾವಿರವರ್ಷಗಳವರೆಗೆ ಬ್ರಹ್ಮವಸ್ತುವನ್ನು ಧ್ಯಾನಿಸಿದನು.

॥ ಋಷಯ ಊಚುಃ ॥

ಕಥಂ ಮಧುರಿಪುಃ ಶಂಭೋಃ ಪ್ರವಿಶ್ಯ ಹೃದಯೇಽಜ್ಞಸಾ ।
ಕಲ್ಪೇ ಕಲ್ಪೇ ಸ್ಥಿತಿಂ ಸೃಷ್ಟಿಂ ಸಂಯಮಂ ಚಾಪ್ಯದರ್ಶಯತ್ ॥ ೩೯ ॥

ಯಥಾ ಜಗತ್ಪ್ರಪಂಚಾಯ ರಾಜಸಾ ಜಗತೀಂ ಗತಾಃ ।
ನಿಃಸಾರತಾ ಕಥಂ ತೇಷಾಂ ದರ್ಶಿತಾ ಕೈಟಭಾರಿಣಾ ॥ ೪೦ ॥

ಕಿಂ ತು ಸಾರತರಂ ಗುಹ್ಯಂ ಪರಂಜ್ಯೋತಿಃ ಸನಾತನಂ ।
ದರ್ಶಿತಂ ತೇನ ತತ್ಸರ್ವಮಾಚಕ್ಷ್ವ ದ್ವಿಜಸತ್ತಮ ॥ ೪೧ ॥

ಶ್ರೋತುಮಿಚ್ಛಾಮ ಇತಿ ತೇ ಮುನೀಂದ್ರಾದ್ಭುತಮುತ್ತಮಂ ।
ವಿಸ್ತಾರಾನ್ವಿದಮಾಖ್ಯಾಹಿ ಧರ್ಮ್ಯಂ ನಿಃಶ್ರೇಯಸಂ ಪರಂ ॥ ೪೨ ॥

॥ ಇತಿ ಶ್ರೀ ಕಾಲಿಕಾಪುರಾಣೇ ಚತುರ್ವಿಂಶೋಽಧ್ಯಾಯಃ ॥

೩೯—೪೨. ಕಮಠನೇ ಮೊದಲಾದ ಮುನಿಗಳು ಕೇಳುವರು:—ಓ ಮಾರ್ಕಂಡೇಯನೇ! ವಿಷ್ಣುವು ಶಂಕರನ ಶರೀರವನ್ನು ಪ್ರವೇಶಿಸಿ ಪ್ರತಿ ಕಲ್ಪಗಳಲ್ಲಿಯೂ ನಡೆಯುವ ಸೃಷ್ಟಿ ಸ್ಥಿತಿ ಲಯಗಳನ್ನು ಶಂಕರನಿಗೆ ಹೇಗೆ ತೋರಿಸಿದನು? ಜಗತ್ತಿನ ವಿಸ್ತಾರಕ್ಕಾಗಿ ರಾಜಸ ವಸ್ತುಗಳು ಪೃಥಿವಿಯಲ್ಲಿ ಸೇರಿರುತ್ತವೆಯಷ್ಟೆ. ಅವುಗಳ ನಿಸ್ಸಾರತೆಯನ್ನು ಹರಿಯು ಹೇಗೆ ತೋರಿಸಿದನು? ಅಲ್ಲದೆ ಅತ್ಯಂತ ಸಾರಭೂತವೂ, ರಹಸ್ಯವೂ, ಅನಾದಿಯೂ ಆದ ಪರಂಜ್ಯೋತಿಯನ್ನು ಶಂಕರನಿಗೆ ತೋರಿಸಿದ ಬಗೆ ಹೇಗೆ? ಓ ಬ್ರಾಹ್ಮಣೋತ್ತಮನೇ! ಉತ್ತಮವೂ, ಧರ್ಮಪ್ರದವೂ, ಶ್ರೇಯಸ್ಸಾಧನವೂ ಆದ ಈ ವಿಷಯಗಳನ್ನೆಲ್ಲ ಕೇಳಲಿಚ್ಛಿಸುವೆವು. ಆದುದರಿಂದ ಇವೆಲ್ಲವನ್ನೂ ವಿಸ್ತಾರವಾಗಿ ನಮಗೆ ತಿಳಿಯಹೇಳು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀ ಕಾಲಿಕಾಪುರಾಣೇ ಪಂಚವಿಂಶೋಽಧ್ಯಾಯಃ

ಇಪ್ಪತ್ತೈದನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ಆದಿಸರ್ಗಮಹಂ ವಕ್ಷ್ಯೇ ವಾರಾಹಂ ದ್ವಿಜಸತ್ತಮಾಃ ।
ಕಲ್ಪೇ ಕಲ್ಪೇ ಯಥಾ ಸೃಷ್ಟಿರ್ವಾರಾಹೇ ಯಾದೃಶೀ ಭವೇತ್ । ॥ ೧ ॥

ಆದಿಸೃಷ್ಟಿಂ ದರ್ಶಯಿತ್ವಾ ಪ್ರತಿಸ್ವರ್ಗಂ ತಥಾ ಹರಿಃ ।
ಶಂಭವೇ ದರ್ಶಯಾಮಾಸ ಪ್ರಲಯಾದೀನ್ಯಬೋಧತ ॥ ೨ ॥

॥ ಇಪ್ಪತ್ತೈದನೆಯ ಅಧ್ಯಾಯವು ॥

೧-೨. ಮಾರ್ಕಂಡೇಯನು ಹೇಳಿದನು :-ಎಲೈ ಮುನಿಶ್ರೇಷ್ಠರೇ ! ವಾರಾಹ ಕಲ್ಪದಲ್ಲಿ ನಡೆದ ಮೊದಲನೆಯ ಸೃಷ್ಟಿಯನ್ನು ಹೇಳುವೆನು ಮತ್ತು ಪ್ರತಿ ಕಲ್ಪಗಳ ಲ್ಲಿಯೂ ಸೃಷ್ಟಿಯು ಯಾವರೀತಿ ಆಗುವುದು ? ವಾರಾಹಕಲ್ಪದಲ್ಲಿ ಸೃಷ್ಟಿಯ ವಿಧಾನ ವೇನು ? ನಾರಾಯಣನು ಪ್ರತಿಸರ್ಗದಲ್ಲಿಯೂ, ಮೊದಲನೆಯದಾದ ಸೃಷ್ಟಿಯನ್ನು ತೋರಿಸಿ ಮುಂದೆ ಪ್ರಳಯಾದಿಗಳನ್ನು ಶಂಕರನಿಗೆ ಹೇಗೆ ತೋರಿಸಿದನು? ಇವೆಲ್ಲ ವನ್ನೂ ಹೇಳುವೆನು ಕೇಳಿರಿ.

ಪ್ರಲಯಂ ಪ್ರಥಮಂ ವಕ್ಷ್ಯೇ ಸರ್ಗಮಾದಿಂ ತತಃ ಪರಂ ।
ಪ್ರತಿಸರ್ಗಂ ತತೋ ವಿಪ್ರಾ ವಾರಾಹಂ ವಿನಿಬೋಧತ ॥ ೩ ॥

ನಿಮೇಷೋ ನಾಮ ಕಾಲಾಂಶೋ ನೇತ್ರೋನ್ಮೇಷವಿಲಕ್ಷಿತಃ ।
ತೈರಷ್ಟಾದಶಭಿಃ ಕಾಷ್ಠಾ ಕಾಷ್ಠಾನಾಂ ತ್ರಿಂಶತಾ ಕಲಾ ॥ ೪ ॥

ಕಲಾಭಿಸ್ತಾವತೀಭಿಸ್ತು ಕ್ಷಣಾಖ್ಯಃ ಪರಿಕೀರ್ತಿತಃ ।
ಕ್ಷಣೈರ್ದ್ವಾದಶಭಿಃ ಪ್ರೋಕ್ತೋ ಮುಹೂರ್ತಸ್ತೈಸ್ತು ತ್ರಿಂಶತಾ ॥ ೫ ॥

ಮಾನುಷಃ ಸ್ಯಾದಹೋರಾತ್ರಃ ಪಕ್ಷಸ್ತೇ ದಶ ಪಂಚ ಚ ।
ಪಕ್ಷಾಭ್ಯಾಂ ಮಾನುಷೋ ಮಾಸಃ ಪಿತ್ರ್ಯಾಣಾಂ ತದಹರ್ನಿಶಂ ॥ ೬ ॥

ಮಾಸೈರ್ದ್ವಾದಶಭಿರ್ವರ್ಷೋ ದೇವಾನಾಂ ತದಹರ್ನಿಶಂ ।
ಕೃಷ್ಣಪಕ್ಷಃ ಪಿತ್ರ್ಯಾಣಾಂ ತು ಕರ್ಮಾರ್ಥಂ ದಿವಸೋ ಮತಃ ॥ ೭ ॥

---

೩. ಮೊದಲು ಪ್ರಳಯವನ್ನು ಹೇಳುವೆನು. ಆಮೇಲೆ ಮೊದಲನೆಯದಾದ ಸೃಷ್ಟಿಯನ್ನೂ, ಆಮೇಲೆ ಪ್ರತಿ ಕಲ್ಪಗಳ ಸೃಷ್ಟಿಯನ್ನೂ ಹೇಳುವೆನು. ಈಗ ವರಾಹ ಕಲ್ಪವನ್ನು ಕೇಳಿರಿ.

೪-೫. ಒಂದು ರೆಪ್ಪೆಹೊಡೆಯುವ ಕಾಲಕ್ಕೆ ನಿಮೇಷವೆಂದು ಹೆಸರು. ಇಂತಹ ಹದಿನೆಂಟು ನಿಮೇಷಗಳಿಗೆ ಒಂದು ಕಾಷ್ಠಾ ಎಂದು ಹೆಸರು. ಮೂವತ್ತು ಕಾಷ್ಠಗಳಿಗೆ ಒಂದು ಕಲೆ ಎಂದು ಹೆಸರು. ಮೂವತ್ತು ಕಲೆಗಳಿಗೆ ಒಂದು ಕ್ಷಣವು. ಹದಿನಾರು ಕ್ಷಣಗಳಿಗೆ ಮುಹೂರ್ತವೆಂದು ಹೆಸರು. ಮೂವತ್ತು ಮುಹೂರ್ತಗಳಿಗೆ ಒಂದು ದಿವಸವು.

೬. ಅಂತಹ ಹದಿನೈದು ದಿವಸಗಳಿಗೆ ಒಂದು, ಪಕ್ಷವು. ಇಂತಹ ಎರಡು ಪಕ್ಷಗಳಾದರೆ ಮನುಷ್ಯರಿಗೆ ಒಂದು ತಿಂಗಳು. ಈ ಒಂದು ತಿಂಗಳು ಪಿತೃದೇವತೆಗಳಿಗೆ ಒಂದು ದಿವಸವು. ಅಂತಹ ಹನ್ನೆರಡು ತಿಂಗಳಿಗೆ ಒಂದು ಮನುಷ್ಯವರ್ಷವು. ಈ ಒಂದುವರ್ಷವು ದೇವತೆಗಳಿಗೆ ಒಂದು ದಿನವು.

೭. ಪಿತೃಯಜ್ಞವನ್ನು ಕೃಷ್ಣಪಕ್ಷದ ದಿವಸಗಳಲ್ಲಿಯೇ ಮಾಡಬೇಕು. ಮನುಷ್ಯರಿಗೆ ಶುಕ್ಲಪಕ್ಷವು ಕರ್ಮಕ್ಕೆ ವಿಹಿತವಾಗಿದೆ. ರಾತ್ರಿಯು ಸಿದ್ಧಿಗಾಗಿ ನಿಯಮಿಸಲ್ಪಟ್ಟಿದೆ.

ಸ್ವಪ್ನಾರ್ಥಂ ಶುಕ್ಲಪಕ್ಷಸ್ತು ರಜನೀ ಪರಿಕೀರ್ತಿತಾ ।
ದೇವಾನಾಂ ತು ದಿನಂ ಪ್ರೋಕ್ತಂ ಷಣ್ಮಾಸಾ ಉತ್ತರಾಯಣಂ ॥ ೮ ॥

ರಾತ್ರಿಃ ಸ್ವಪ್ನಾಯ ದೇವಾನಾಂ ಷಣ್ಮಾಸಾ ದಕ್ಷಿಣಾಯನಂ ।
ದ್ವಾಭ್ಯಾಂ ದ್ವಾಭ್ಯಾಂ ತು ಮಾಸಾಭ್ಯಾಮರ್ಕಜಾಭ್ಯಾಮೃತುಃ ಸ್ಮೃತಃ॥ ೯ ॥

ಋತುಭಿಶ್ಚಾಯನಂ ಪ್ರೋಕ್ತಂ ತ್ರಿಭಿಸ್ತನ್ಮಾನುಷಂ ಮತಂ ।
ಋತುಭಿರ್ವತ್ಸರಃ ಷಡ್ಭಿಸ್ತಾಂಶ್ಚ ಶೃಣು ಪೃಥಕ್ಪೃಥಕ್ ॥ ೧೦ ॥

ಚೈತ್ರಾದಿಮಾಸಯುಗಲೈಃ ಸಂಜ್ಞಾಭೇದಾದ್ವಿಜೋತ್ತಮಾಃ ।
ವಸಂತಶ್ಚೈತ್ರವೈಶಾಖೌ ಗ್ರೀಷ್ಮೋ ಜ್ಯೇಷ್ಠಃ ಶುಚಿಸ್ತಥಾ ॥ ೧೧ ॥

ಪ್ರಾವೃಣ್ಣಭೋನಭಸ್ಯೌ ತು ಶರತ್ಸ್ಯಾದಿಷಕಾರ್ತಿಕಾ ।
ಸಹಃಪೌಷೌ ಚ ಹೇಮಂತಃ ಶಿಶಿರೋ ಮಾಘಫಾಲ್ಗುನೌ ॥ ೧೨ ॥

---

೮. ಉತ್ತರಾಯಣದ ಆರುತಿಂಗಳ ದಿವಸಗಳು ದೇವತೆಗಳಿಗೆ ಒಂದು ಹಗಲು. ಆಗ ಯಜ್ಞವನ್ನು ಮಾಡಬೇಕು. ದಕ್ಷಿಣಾಯನದ ಆರುತಿಂಗಳು ದೇವತೆಗಳಿಗೆ ಒಂದು ರಾತ್ರಿಯು.

೯-೧೦. ಎರಡೆರಡು ತಿಂಗಳಿಗೆ ಒಂದೊಂದು ಋತುಗಳು ಬರುವುವು. ಮೂರು ಋತುಗಳಿಗೆ ಒಂದು ಮನುಷ್ಯರ ಅಯನವು. ಆರು ಋತುಗಳಿಗೆ ಒಂದು ವರ್ಷವು. ಆ ವರ್ಷಗಳನ್ನು ಬೇರೆಬೇರೆಯಾಗಿ ಹೇಳುವೆನು ಕೇಳಿರಿ.

೧೧-೧೨. ಚೈತ್ರವೇ ಮೊದಲಾದ ಎರಡೆರಡು ಮಾಸಗಳಿಗೆ ಒಂದೊಂದು ಋತುವು. ಹೇಗೆಂದರೆ ಚೈತ್ರ ವೈಶಾಖ ಮಾಸಗಳಲ್ಲಿ ವಸಂತಋತುವು. ಜ್ಯೇಷ್ಠ ಆಷಾಢಗಳಲ್ಲಿ ಗ್ರೀಷ್ಮಋತುವು, ಶ್ರಾವಣ ಭಾದ್ರಪದಗಳಲ್ಲಿ ವರ್ಷಋತು, ಆಶ್ವಯುಜ ಕಾರ್ತೀಕಮಾಸಗಳು ಶರದೃತುವು, ಮಾರ್ಗಶಿರ ಪುಷ್ಯಮಾಸಗಳು ಹೇಮಂತಋತು, ಮಾಘ ಫಾಲ್ಗುಣಮಾಸಗಳು ಶಿಶಿರಋತುವು.

ಷಡಿಮೇ ಋತವಃ ಪ್ರೋಕ್ತಾ ಯಜ್ಞಾದೌ ವಿನಿಯೋಜಿತಾಃ ।
ನೃಣಾಂ ಮಾನೇನ ದಶಭಿರ್ಲಕ್ಷೈಃ ಸಪ್ತಭಿರುತ್ತರೈಃ ॥ ೧೩ ॥

ಆಷ್ಟಾವಿಂಶತಿಸಾಹಸ್ರೈರ್ಮಾನಂ ಕೃತಯುಗಸ್ಯ ತು ।
ಸಂಧ್ಯಾಚತುಶ್ಶತಾನೀಹ ವರ್ಷಾಣಾಮಂತರಾಲತಃ ॥ ೧೪ ॥

ಸಂಧ್ಯಾಂಶಸ್ತಾವತಾ ಪ್ರೋಕ್ತಸ್ತದಂತರ್ಗತ ಈಪ್ಸಿತಃ ।
ತ್ರೇತಾ ದ್ವಾದಶಭಿರ್ಲಕ್ಷೈರ್ಮಾನುಷೈರ್ವರ್ತ್ಸರೈರ್ಭವೇತ್ ॥ ೧೫ ॥

ಷಣ್ಣವತ್ಯಾ ಸಹಸ್ರೈಶ್ಚ ಸಂಧ್ಯಾ ಚಾಸ್ಯ ಶತತ್ರಯಂ ।
ಶತತ್ರಯಂ ತು ಸಂಧ್ಯಾಂಶಸ್ತದಂತಃ ಪರಿಕೀರ್ತಿತಃ ॥ ೧೬ ॥

ಚತುಃಷಷ್ಟಿಸಹಸ್ರಾಣಿ ಲಕ್ಷಾಣ್ಯಷ್ಟೌ ಪ್ರಮಾಣತಃ ।
ಭವೇದ್ದ್ವಾಪರಮಾಖ್ಯಂ ತೇಷು ಸಂಧ್ಯಾಶತದ್ವಯಂ ॥ ೧೭ ॥

೧೩-೧೪. ಹೀಗೆ ಆರು ಋತುಗಳಿರುವವು. ಯಜ್ಞಾದಿಗಳಿಗೆ ಯಾವಯಾವ ಋತುಗಳು ಯೋಗ್ಯವಾದವುಗಳೆಂದು ಹೇಳಿಯಾಯಿತು. ಮನುಷ್ಯಲೋಕದ ಗಣನೆಯಂತೆ ಹದಿನೇಳುಲಕ್ಷ ಇಪತ್ತೆಂಟುಸಾವಿರ (೧೭೨೮೦೦೦) ವರ್ಷಗಳವರೆಗೆ ಕೃತಯುಗವು. ಈ ವರ್ಷಗಳ ಮಧ್ಯದಲ್ಲಿ (೪೦೦) ಸಂಧ್ಯೆಗಳು ಎಂದರೆ ಸಂಧಿಕಾಲಗಳು ಬರುವುವು. ಅಷ್ಟೇ (೪೦೦) ಸಂಧ್ಯಾಂಶಗಳೂ ಬರುವುವು.

೧೫. ತ್ರೇತಾಯುಗದ ಪ್ರಮಾಣವು ಹನ್ನೆರಡುಲಕ್ಷ ತೊಂಭತ್ತಾರುಸಾವಿರ (೧೨೯೬೦೦) ವರ್ಷಗಳು. ಈ ವರ್ಷಗಳಲ್ಲಿ ಮೂರುನೂರು (೩೦೦) ಸಂಧ್ಯೆಗಳು ಬರುವುವು. ಮೂರುನೂರು ಸಂಧ್ಯಾಂಶಗಳು ಬರುವುವು.

೧೬—೧೭. ಎಂಟುಲಕ್ಷ ಅರವತ್ತುನಾಲ್ಕುಸಾವಿರ (೮೬೪೦೦) ವರ್ಷಗಳು ದ್ವಾಪರಯುಗದ ಪ್ರಮಾಣವು. ಅಲ್ಲಿ ಇನ್ನೂರು (೨೦೦) ಸಂಧ್ಯೆಗಳು ಅಷ್ಟೇ ಸಂಧ್ಯಾಂಶಗಳು ಬರುವುವು.

ಶತದ್ವಯಂ ತು ಸಂಧ್ಯಾಂಶಸ್ತದಂತರ್ಗತ ಇಷ್ಯತೇ ।
ದ್ವಾತ್ರಿಂಶತ್ತು ಸಹಸ್ರಾಣಿ ಚತುರ್ಲಕ್ಷಾಣಿ ವೈ ಕಲೇಃ ॥ ೧೮ ॥

ಸಂವತ್ಸರೈರ್ಭವೇನ್ಮಾನಂ ಸಂಧ್ಯೈಕಂ ಪ್ರೋಚ್ಯತೇ ಶತಂ ।
ವತ್ಸರಾಣಾಮೇಕಶತಂ ಸಂಧ್ಯಾಂಶಶ್ಚ ತದಂತರೇ ॥ ೧೯ ॥

ಏವಂ ಕೃತಶ್ಚ ತ್ರೇತಾ ಚ ದ್ವಾಪರಶ್ಚ ತಥಾ ಕಲಿಃ ।
ಮಾನುಷೇಣ ಪ್ರಮಾಣೇನ ಭವೇದ್ಯುಗಚತುಷ್ಟಯಂ ॥ ೨೦ ॥

ತ್ರಿಚತ್ವಾರಿಂಶತಾಲಕ್ಷೈರ್ಮಾನಂ ಚಾತುರ್ಯುಗಂ ಭವೇತ್ ।
ಸಹಸ್ರೈರಪಿ ವಿಂಶತ್ಯಾ ಸಂಧ್ಯಾಸಂಧ್ಯಾಂಶಸಂಯುತಂ ॥ ೨೧ ॥

ದೈವಂ ದಿನಂ ವತ್ಸರೇಣ ಮಾನುಷೇಣ ಸರಾತ್ರಕಂ ।
ಏವಂ ಕ್ರಮಂ ಗಣಿತ್ವಾ ತು ಮಾನುಷೀಯೈಶ್ಚತುರ್ಯುಗೈಃ ॥ ೨೨ ॥

೧೮-೧೯. ನಾಲ್ಕುಲಕ್ಷದ ಮೂವತ್ತೆರಡುಸಾವಿರ (೪೩೨೦೦) ವರ್ಷಗಳು ಕಲಿಯುಗದ ಪ್ರಮಾಣವು. ಈ ವರ್ಷಗಳಲ್ಲಿ ಒಂದುನೂರು ಸಂಧ್ಯೆಗಳೂ ಅಷ್ಟೇ ಸಂಧ್ಯಾಂಶಗಳೂ ಬರುವುವು.

೨೦. ಹೀಗೆ ಮನುಷ್ಯಗಣನೆಯಂತೆ, ಮೇಲೆ ಹೇಳಿದಷ್ಟು ವರ್ಷಪ್ರಮಾಣಗಳುಳ್ಳ ಕೃತ, ತ್ರೇತಾ, ದ್ವಾಪರ, ಕಲಿ ಎಂಬ ನಾಲ್ಕು ಯುಗಗಳಾಗುವುವು.

೨೧. ಒಟ್ಟು ನಲವತ್ತುಮೂರುಲಕ್ಷ (೪೩೦೦೦೦) ವರ್ಷಗಳು ನಾಲ್ಕು ಯುಗಗಳ ಪ್ರಮಾಣವು. ಇಪ್ಪರಲ್ಲಿ ಇಪ್ಪತ್ತುಸಾವಿರ ಸಂಧ್ಯೆಗಳೂ ಅಷ್ಟೇ ಸಂಧ್ಯಾಂಶಗಳೂ ಇರುವುವು.

೨೨. ಮನುಷ್ಯರ ಒಂದು ವರ್ಷವು ದೇವತೆಗಳಿಗೆ ಒಂದು ದಿವಸವು. ಹಿಂದಿನಂತೆ ಪ್ರಮಾಣವುಳ್ಳ ನಾಲ್ಕು ಯುಗಗಳಿಗೆ ದೇವತೆಗಳ ಹದಿನಾರುಸಾವಿರ (೧೬೦೦೦) ವರ್ಷಗಳಾಗುವುವು.

ದೈವಂ ದ್ವಾದಶಸಾಹಸ್ರಂ ವತ್ಸರಾಣಾಂ ಪ್ರಕೀರ್ತಿತಂ ।
ದೈವೈರ್ದ್ವಾದಶಸಾಹಸ್ರೈರ್ವರ್ತ್ಸರೈರ್ದೈವಿಕಂ ಯುಗಂ ॥ ೨೩ ॥

ತದ್ವೈ ಚತುರ್ಯುಗಂ ನೃಣಾಂ ಸಂಧ್ಯಾಸಂಧ್ಯಾಂಶಸಂಯುತಂ ।
ದೇವಾನಾಂ ತು ಕೃತಂ ತ್ರೇತಾ ದ್ವಾಪರಾದಿವ್ಯವಸ್ಥಯಾ ॥ ೨೪ ॥

ನ ಯುಗವ್ಯವಹಾರೋಽಸ್ತಿ ನ ಚ ಧರ್ಮಾದಿಭಿನ್ನತಾ ।
ಕಿಂ ತು ಚಾತುರ್ಯುಗಂ ನಾರಂ ಭವೇದ್ದೈವಯುಗಂ ಸದಾ ॥ ೨೫ ॥

ದೈವಿಕೈರೇಕಸಪ್ತತ್ಯಾ ಯುಗೈರ್ಮನ್ವಂತರಂ ಭವೇತ್ ।
ದೈವೇ ಯುಗಸಹಸ್ರೇ ದ್ವೇ ಬ್ರಹ್ಮಣಃ ಸ್ಯಾದಹರ್ನಿಶಂ ॥ ೨೬ ॥

ಚತುರ್ಯುಗಸಹಸ್ರೇ ದ್ವೇ ನೃಣಾಂ ಮಾನೇನ ತದ್ಭವೇತ್ ।
ಏಕಸ್ಮಿನ್ಬ್ರಾಹ್ಮದಿವಸೇ ಮನವಃ ಸ್ಯುಶ್ಚತುರ್ದಶ ॥ ೨೭ ॥

ಏವಂ ಬ್ರಾಹ್ಮೇಣ ಮಾನೇನ ದಿವಸೈಸ್ತು ತ್ರಿಭಿಃ ಶತೈಃ ।
ಸಷಷ್ಟಿಭಿರ್ವತ್ಸರಃ ಸ್ಯಾದ್ಬ್ರಾಹ್ಮೋ ವರ್ಷೋ ನೃಣಾಂ ಯಥಾ ॥ ೨೮ ॥

---

೨೩. ಈ ಹದಿನಾರುಸಾವಿರ (೧೬೦೦೦) ದೇವವರ್ಷಗಳಿಗೆ ಒಂದು ದೇವ ಯುಗವು. ಈ ದೇವಯುಗವೇ ಮನುಷ್ಯರ ಸಂಧ್ಯೆಸಂಧ್ಯಾಂಶಗಳಿಂದ ಕೂಡಿದ ನಾಲ್ಕು ಯುಗಗಳು.

೨೪. ದೇವತೆಗಳಿಗೆ ಕೃತ, ತ್ರೇತ, ದ್ವಾಪರ, ಕಲಿಗಳೆಂದು ಯುಗಭೇದಗಳಾ ಗಲೀ ಧರ್ಮಭೇದಗಳಾಗಲಿ ಇರುವುದಿಲ್ಲ.

೨೫. ಆದರೆ ಮನುಷ್ಯರ ನಾಲ್ಕು ಯುಗಗಳಿಗೆ ಒಂದು ದೇವಯುಗವಾಗು ವುದು. ಇಂತಹ ಎಪ್ಪತ್ತೊಂದು ದೇವಯುಗಗಳಿಗೆ ಒಂದು ಮನ್ವಂತರವಾಗುವುದು.

೨೬. ಈ ಎರಡುಸಾವಿರ ದೇವಯುಗಗಳಿಗೆ ಬ್ರಹ್ಮನ ಒಂದುದಿವಸ (ಹಗಲು ರಾತ್ರಿ) ಆಗುವುದು. ಈ ಬ್ರಹ್ಮನ ದಿವಸಕ್ಕೆ ಮನುಷ್ಯರ ಎರಡುಸಾವಿರ ಚತುರ್ಯುಗ ಗಳಾಗುವವು.

೨೭–೨೮. ಇಂತಹ ಬ್ರಹ್ಮನ ಒಂದು ದಿವಸದಲ್ಲಿ ಹದಿನಾಲ್ಕು ಮನುಗಳು ಆಗುವರು. ಇಂತಹ ಮುನ್ನೂರರವತ್ತುದಿವಸಗಳಿಗೆ ಬ್ರಹ್ಮನಿಗೆ ಮನುಷ್ಯರಂತೆ ಒಂದು ವರ್ಷವಾಗುವುದು.

ಬ್ರಾಹ್ಮೈಃ ಪಂಚಾಶತಾವರ್ಷೈಃ ಪರಾರ್ಧಃ ಪರಿಕೀರ್ತಿತಃ ।
ತದೀಶ್ವರಸ್ಯ ದಿವಸಸ್ತಾವತೀ ರಾತ್ರಿರೀರ್ಯತೇ ॥ ೨೯ ॥

ಶತೇನ ಬ್ರಾಹ್ಮಣೋ ವರ್ಷೋ ಕಾಲಃ ಸ್ಯಾದ್ದ್ವಿಪರಾರ್ಧಕಃ ।
ಪರಾರ್ಧದ್ವಿತಯೇಽತೀತೇ ಬ್ರಹ್ಮಣಃ ಪ್ರಲಯೋ ಭವೇತ್ ॥ ೩೦ ॥

ಪ್ರಲೀನೇ ಬ್ರಹ್ಮಣಿ ಪರೇ ಜಗತಾಂ ಪ್ರಾಕೃತೋ ಲಯಃ ।
ಸಮಸ್ತಜಗದಾಧಾರಮವ್ಯಯಂ ಯತ್ಪರಾತ್ಪರಂ ॥ ೩೧ ॥

ತಸ್ಯ ಬ್ರಹ್ಮಸ್ವರೂಪಸ್ಯ ದಿವಾರಾತ್ರಂ ಚ ಯದ್ಭವೇತ್ ।
ತತ್ಪರಂ ನಾಮ ತಸ್ಯಾರ್ಧಂ ಪರಾರ್ಧಮಭಿಧೀಯತೇ ॥ ೩೨ ॥

ಜಗತ್ಸ್ವರೂಪೀ ಭಗವತ್ಪರಮಾತ್ಮಾಕ್ಷಯೋಽವ್ಯಯಃ ।
ಸ್ಥೂಲಾತ್ಸ್ಥೂಲತಮಃ ಸೂಕ್ಷ್ಮಾದ್ಯಸ್ತು ಸೂಕ್ಷ್ಮತಮೋ ಮತಃ ॥ ೩೩ ॥

---

೨೯. ಬ್ರಹ್ಮನ ಇಂತಹ ಐವತ್ತುವರ್ಷಗಳಿಗೆ ಪರಾರ್ಧವೆಂದು ಹೆಸರು. ಅದು ಈಶ್ವರನಿಗೆ ಒಂದು ಹಗಲು ಮತ್ತು ರಾತ್ರಿಯು.

೩೦. ಬ್ರಹ್ಮನ ನೂರುವರ್ಷಗಳಿಗೆ ಎರಡು ಪರಾರ್ಧಗಳು. ಈ ಎರಡು ಪರಾರ್ಧಗಳು ಕಳೆದರೆ ಬ್ರಹ್ಮನಿಗೆ ಪ್ರಳಯವು ಆಗುವುದು.

೩೧. ಬ್ರಹ್ಮನು ಪ್ರಳಯವನ್ನು ಹೊಂದಲು (ಪರಬ್ರಹ್ಮನನ್ನು ಸೇರಲು) ಜಗತ್ತಿಗೂ ಪ್ರಳಯವಾಗುವುದು. ಅದಕ್ಕೆ ಪ್ರಕೃತಿಲಯ ಅಥವಾ ಕಾರಣಲಯವೆಂದು ಹೆಸರು.

೩೨. ಸಕಲ ಜಗತ್ತಿಗೆ ಆಧಾರನೂ, ನಾಶವಿಲ್ಲದವನೂ, ಉತ್ಕೃಷ್ಟನೂ ಆದ ಪರಬ್ರಹ್ಮನ ಒಂದು ದಿವಸಕ್ಕೆ ಪರವೆಂದು ಹೆಸರು. ಅರ್ಧದಿವಸಕ್ಕೆ ಪರಾರ್ಧವೆಂದು ಹೆಸರು.

೩೩. ಆ ಪರಬ್ರಹ್ಮನು ಜಗದ್ರೂಪನೂ, ಸಕಲೈಶ್ವರ್ಯಸಂಪನ್ನನೂ, ಪರಮಾತ್ಮನೂ, ಯಾವತರಹೆಯ ನಾಶವಿಲ್ಲದವನೂ, ಸ್ಥೂಲವಾದ ವಸ್ತುವಿಗಿಂತಲೂ ಅತಿ ಸ್ಥೂಲನೂ, ಅತಿ ಸಣ್ಣ ವಸ್ತುವಿಗಿಂತಲೂ ಸೂಕ್ಷ್ಮನೂ ಆಗಿರುವನು.

ನ ತಸ್ಯಾಸ್ತಿ ದಿವಾರಾತ್ರಿವ್ಯವಹಾರೋ ನ ವತ್ಸರಃ ।
ಕಂ ತು ಪೌರಾಣಿಕೈಃ ಪೂರ್ವೈರಸ್ಮಾಭಿರಪಿ ತಾದೃಶೈಃ ॥ ೩೪ ॥
ಸೃಷ್ಟಿಪ್ರಲಯಬೋಧಾರ್ಥಂ ಕಲ್ಪ್ಯತೇ ತದಹರ್ನಿಶಂ

ಸ ಏವ ರಾತ್ರಿಃ ಸ ದಿವಾ ಸ ವರ್ಷಃ
ಸ ವೈ ಕ್ಷಿತಿಃ ಸೃಷ್ಟಿಕರೋ ಹರಶ್ಚ
ಸ ವಿಷ್ಣುರೂಪೀ ಪುರುಷಃ ಪುರಾಣ
ಸ್ತಸ್ಮಿನ್ನಸ್ತಂ ಚ ವಿಭಾತಿ ತದ್ವತ್ ॥ ೩೫ ॥

ತತೋ ಬ್ರಹ್ಮಣಿ ಲೀನೇ ತು ಪರಮಾತ್ಮನಿ ಶಾಶ್ವತೇ ।
ಜಗತ್ಸರ್ವಂ ಕ್ರಮೇಣೈವ ತದ್ರೂಪತ್ವಾಯ ಗಚ್ಛತಿ ॥ ೩೬ ॥

ಬ್ರಹ್ಮಣಃ ಶತವರ್ಷಾಂತೇ ರುದ್ರರೂಪೀ ಜನಾರ್ದನಃ ।
ಜಗದಂತಂ ಸ್ವಯಂ ಕೃತ್ವಾ ಪರಮೇ ಲೀನಮೇತಿ ವೈ ॥ ೩೭ ॥

---

೩೪. ಆ ಪರಮಾತ್ಮನಿಗೆ ರಾತ್ರಿ ಹಗಲು ಎಂಬ ವ್ಯವಹಾರವಾಗಲೀ, ಸಂವತ್ಸರ ಮೊದಲಾದ ಕಾಲಗಣನೆಯಾಗಲೀ ಇರುವುದಿಲ್ಲ. ಆದರೆ ಪ್ರಾಚೀನರಾದ ಪೌರಾಣಿಕರೂ, ನಾವೂ ಸಹ ಸೃಷ್ಟಿ ಮತ್ತು ಪ್ರಳಯಗಳ ತಿಳಿವಳಿಕೆಗಾಗಿ ಆ ಪರಮಾತ್ಮನಿಗೂ ರಾತ್ರಿ ಹಗಲುಗಳನ್ನು ಕಲ್ಪಿಸುವೆವು.

೩೫. ಆ ಪರಮಾತ್ಮನೇ ರಾತ್ರಿಯೂ ಮತ್ತು ಹಗಲು ಎಂದರೆ ಕಾಲಸ್ವರೂಪನು, ಅವನೇ ಭೂಮಿಯು. ಬ್ರಹ ವಿಷ್ಣು ಮಹೇಶ್ವರರೂ ಅವನೆಯೇ. ಅವನು ಅನಾದಿಯಾದ ಪುರುಷನು, ಅವನಲ್ಲಿಯೇ ಎಲ್ಲಾ ಜಗತ್ತೂ ಪ್ರಕಾಶಿಸುವುದು.

೩೬. ಆಮೇಲೆ ನಿತ್ಯವಾದ ಪರಮಾತ್ಮನಲ್ಲಿ (ಬ್ರಹ್ಮ) ಲಯವನ್ನು ಹೊಂದಲು ಜಗತ್ತೆಲ್ಲವೂ ಕ್ರಮವಾಗಿ ಆ ಪರಮಾತ್ಮನ ರೂಪವಾಗುವುದು. ಆಗ ಪರಮಾತ್ಮನು ಹೊರತು ಬೇರೆ ಜಗತ್ತೇ ಇರುವುದಿಲ್ಲ.

೩೭. ಹೀಗೆ ಬ್ರಹ್ಮನಿಗೆ ನೂರುವರ್ಷವು ಮುಗಿಯಲು ರುದ್ರನ ರೂಪದಿಂದ ಜನಾರ್ಧನನು ಜಗತ್ತನ್ನೆಲ್ಲಾ ನಾಶಮಾಡಿ ರುದ್ರರೂಪನೂ ಪರಬ್ರಹ್ಮನಲ್ಲಿ ಲೀನನಾಗುವನು.

ಪ್ರಥಮಂ ಸವಿತಾ ಸರ್ವಂ ಸ್ಥಾವರಂ ಜಂಗಮಂ ತಥಾ ।
ತೀವ್ರೈಃ ಕರೈಃ ಶೋಷಯಿತ್ವಾ ಜಲಂ ಸರ್ವಂ ಗ್ರಹೀಷ್ಯತಿ ॥ ೩೮ ॥

ಶುಷ್ಕಾ ವೃಕ್ಷಾಸ್ತೃಣಗಣಾಃ ಪ್ರಾಣಿನಃ ಪರ್ವತಾಸ್ತಥಾ ।
ಚೂರ್ಣೀಕೃತಾ ವಿಶೀರ್ಣಾಃ ಸ್ಯುರ್ದಿವ್ಯವರ್ಷಶತೇನ ತು ॥ ೩೯ ॥

ತಶೋ ದ್ವಾದಶಸೂರ್ಯಸ್ಯ ರಶ್ಮಯಃ ಪ್ರಬಲಾ ಭೃಶಂ ।
ಅಭವನ್ದ್ವಾದಶಾದಿತ್ಯಾ ಜಗದ್ಭೋಗ್ಯೋಪಬೃಂಹಿತಾಃ ॥ ೪೦ ॥

ರಶ್ಮಿದ್ವಾರೇಣ ಸಕಲಂ ಸೂರ್ಯಾಸ್ತೇ ಭುವನಾನಿ ಚ ।
ಅದಹನ್ಪೃಥಿವೀ ದ್ಯೌಶ್ಚ ಮೇದಿನೀ ಜೋಷ್ಣತಾಂ ಗತಾ ॥ ೪೧ ॥

ತತೋ ವಿನಷ್ಟೇ ಸಕಲೇ ಸ್ಥಾವರೇ ಜಂಗಮೇ ತಥಾ ।
ಆದಿತ್ಯರಶ್ಮಿತೋ ದೇವೋ ರುದ್ರರೂಪೀ ಜನಾರ್ದನಃ ॥ ೪೨ ॥

---

೩೮. ಆ ಪ್ರಳಯಕಾಲದಲ್ಲಿ ಮೊದಲು ಸೂರ್ಯನು ಸ್ಥಿರಚರಾತ್ಮಕವಾದ ಜಗತ್ತೆಲ್ಲವನ್ನು ತನ್ನ ಅತ್ಯಂತ ತೀವ್ರವಾದ ಕಿರಣಗಳಿಂದ ಒಣಗಿಸಿ ಅದರ ಜಲವನ್ನೆಲ್ಲಾ ಸ್ವೀಕರಿಸುವನು.

೩೯. ಮರಗಳೂ, ಹುಲ್ಲುಗಳೂ ಒಣಗಿ, ಪ್ರಾಣಿಗಳೂ, ಪರ್ವತಗಳೂ ಚೂರು ಚೂರಾಗಿ ಹೋಗುವುವು. ಆ ಪ್ರಳಯವು ದೇವಗಣನೆಯಂತೆ ನೂರುವರ್ಷಗಳವರೆಗೆ ನಡೆಯುವುದು.

೪೦. ಆಮೇಲೆ ದ್ವಾದಶ ಸೂರ್ಯರ ಕಿರಣಗಳು ತುಂಬಾ ಉಷ್ಣಗಳಾಗುವುವು. ಅದರಿಂದ ಆ ದ್ವಾದಶಾದಿತ್ಯರೂ ಸಹ ಜಗತ್ತನ್ನು ನಾಶಮಾಡಲು ತೊಡಗುವರು.

೪೧. ಕಿರಣಗಳಿಂದ ಸಕಲ ಪ್ರಪಂಚವನ್ನೂ ಆ ದ್ವಾದಶಾದಿತ್ಯರು ದಹಿಸುವರು. ಅದರಿಂದ ಭೂಮಿಯೂ, ಆಕಾಶವೂ ಅತ್ಯುಷ್ಣವಾಗಿ ಸುಟ್ಟುಹೋಗುವವು.

೪೨. ಆಮೇಲೆ ಸ್ಥಿರ ಮತ್ತು ಚರರೂಪವಾದ ಸಕಲ ಜಗತ್ತೂ ನಷ್ಟವಾಗಲು ರುದ್ರರೂಪಿಯಾದ ಜನಾರ್ದನನು ಸೂರ್ಯಕಿರಣಗಳಿಂದ ಹೊರಗೆಬಂದು ಪಾತಾಳವನ್ನು ಪ್ರವೇಶಿಸಿದನು.

ನಿಃಸೃತ್ಯ ಪ್ರಥಮಂ ಯಾತಃ ಪಾತಾಲತಲಮುನ್ನತಃ ।
ಸಪ್ತಪಾತಾಲಸಂಸ್ಥಾಂಸ್ತು ನಾಗಗಂಧರ್ವರಾಕ್ಷಸಾನ್ ॥ ೪೨ ॥

ದೇವಾನ್ಋಷೀಂಶ್ಚ ಶೇಷಂ ಚ ಜಘಾನ ವರಶೂಲಧೃಕ್ ।
ಏವಂ ಸ್ವರ್ಗೇ ಚ ಪಾತಾಲೇ ಪೃಥಿವ್ಯಾಂ ಸಾಗರೇಷು ಚ ॥ ೪೪ ॥

ಯೇ ಪ್ರಾಣಿನಸ್ತಾನ್ಸ್ಸಮಸ್ತಾಂಶ್ಚ ಜಘಾನ ಸ ಜನಾರ್ದನಃ ।
ತತೋ ಮುಖಾನ್ಮಹಾವಾಯುಂ ರುದ್ರಶ್ಚ ಸೃಷ್ಟವಾನ್ತ್ಸ್ವಯಂ ॥ ೪೫ ॥

ಸೋಽವ್ಯಾಹತಗತಿರ್ಗಾಢಂ ಸಸಾರ ಭುವನತ್ರಯೇ ।
ಯಾವದ್ವರ್ಷಶತಂ ವಾಯುರ್ಭ್ರಮನ್ಭುವನಗರ್ಭಗಃ ॥ ೪೬ ॥

ಸರ್ವಮುತ್ಸಾರಯಾಮಾಸ ಯತ್ಕಿಂಚಿತ್ತೂಲರಾಶಿವತ್ ।
ಸಮಸ್ತಂ ತತ್ಸಮುತ್ಸಾರ್ಯ ಜಗದ್ಬರ್ತಿ ಸಮಂತತಃ ॥ ೪೭ ॥

---

೪೩. ಅಲ್ಲಿ ಶೂಲಧಾರಿಯಾದ ಆ ರುದ್ರನು ಏಳು ಪಾತಾಳಲೋಕಗಳಲ್ಲಿರುವ ಸರ್ಪ, ಗಂಧರ್ವ ಮತ್ತು ರಾಕ್ಷಸರು, ದೇವತೆಗಳು ಋಷಿಗಳು ಇವರೆಲ್ಲರನ್ನೂ ಸಂಹರಿಸಿದನು.

೪೪. ಹೀಗೆ ಸ್ವರ್ಗದಲ್ಲಿಯೂ, ಪಾತಾಳದಲ್ಲಿಯೂ, ಸಮುದ್ರದಲ್ಲಿಯೂ, ಭೂಲೋಕದಲ್ಲಿಯೂ ಇರುವ ಸಕಲ ಪ್ರಾಣಿಗಳನ್ನೂ ಆ ರುದ್ರರೂಪಿ ಜನಾರ್ದನನು ಸಂಹರಿಸಿದನು.

೪೫. ಆಮೇಲೆ ಆ ರುದ್ರನು ತನ್ನ ಮುಖದಿಂದ ದೊಡ್ಡದೊಂದು ವಾಯುವನ್ನು ಸೃಜಿಸಿದನು.

೪೬-೪೭. ಆ ವಾಯುವು ನೂರುವರ್ಷಗಳವರೆಗೆ ಪ್ರಪಂಚದಲ್ಲಿ ಯಾವ ತಡೆಯೂ ಇಲ್ಲದೆ ವೇಗವಾಗಿ ಸಂಚರಿಸುತ್ತಾ, ಪ್ರಪಂಚದಲ್ಲುಳಿದ ವಸ್ತುಗಳನ್ನೆಲ್ಲಾ ಹತ್ತಿಯ ರಾಶಿಯಂತೆ ಹಾರಿಸಿ, ಅತಿ ವೇಗಶಾಲಿಯಾದ ಆ ವಾಯುವು ದ್ವಾದಶಾದಿತ್ಯರನ್ನು ಪ್ರವೇಶಿಸಿತು.

ವಿವೇಶ ದ್ವಾದಶಾದಿತ್ಯಾನ್ತ್ಸ ವಾಯುರ್ಜವನಾಧಿಕಃ ।
ಪ್ರವಿಶ್ಯ ಮಂಡಲಂ ತೇಷಾಂ ತೇಜೋಭಿಃ ಸಹ ಮಾರುತಃ ॥ ೪೮ ॥

ಮಹಾಮೇಘಾನ್ತ್ಸಮಾರೇಭೇ ರುದ್ರೇಣ ಪ್ರತಿಯೋಜಿತಃ ।
ತತಸ್ತೇ ಪ್ರೇರಿತಾ ಮೇಘಾಸ್ತೇನ ವಾತೇನ ವೇಗಿನಾ ॥ ೪೯ ॥

ರುದ್ರೇಣಾಪ್ಯತಿರೌದ್ರೇಣ ಪರ್ಯಾವವ್ರುರ್ನಭಃ ಸಮಂ ।
ಸಂವರ್ತಾಖ್ಯಾ ಮಹಾಮೇಘಾ ಭಿನ್ನಾಂಜನಚಯೋಪಮಾಃ ॥ ೫೦ ॥

ಕೇಚಿದ್ಧೂಮ್ರಾಃ ಶೋಣವರ್ಣಾಃ ಶುಕ್ಲಾಶ್ಚಿತ್ರಾಶ್ಚ ಭೀಷಣಾಃ ।
ಕೇಚಿಚ್ಚ ಪರ್ವತಾಕಾರಾಃ ಕೇಚಿನ್ನಾಗಸಮಪ್ರಭಾಃ ॥ ೫೧ ॥

ಪ್ರಾಸಾದಸದೃಶಾಃ ಕೇಚಿತ್ಕೇಚಿತ್ಕಾಂಚವರ್ಣಾ ವಿಭೀಷಣಾಃ ।
ಗರ್ಜಂತಸ್ತೇ ಮಹಾಮೇಘಾ ವರ್ಷಾಣಾಮಧಿಕಂ ಶತಂ ॥ ೫೨ ॥

೪೮-೪೯. ಹೀಗೆ ದ್ವಾದಶಸೂರ್ಯರ ಮಂಡಲವನ್ನು ಪ್ರವೇಶಿಸಿ ಅವರ ತೇಜಸ್ಸಿನೊಂದಿಗೆ ಕೂಡಿಕೊಂಡು, ಆ ಮಹಾವಾಯುವು ರುದ್ರನಿಂದ ಪ್ರೇರಿಸಲ್ಪಟ್ಟುದಾಗಿ ದೊಡ್ಡದೊಡ್ಡ ಮೇಘಗಳನ್ನು ಹಾರಿಸಿತು. ಆ ಮಹಾಮೇಘಗಳು ಆಕಾಶವನ್ನೆಲ್ಲಾ ಮುಚ್ಚಿದುವು.

೫೦. ಆ ಸಂವರ್ತಗಳೆಂಬ ಮಹಾಮೇಘಗಳ ಸಮೂಹವು ಭಿನ್ನವಾದ ಕಾಡಿಗೆ ಪರ್ವತದಂತೆ ಕಪ್ಪಾಗಿದ್ದುವು.

೫೧. ಕೆಲವು ಮೇಘಗಳು ಪಿಂಗಳವರ್ಣವಾಗಿದ್ದುವು. ಕೆಲವು ಕೆಂಪಗೂ, ಕೆಲವು ಬೆಳ್ಳಗೂ. ಚಿತ್ರವಾಗಿಯೂ ಇದ್ದು ಭಯಂಕರವಾಗಿದ್ದುವು. ಇನ್ನು ಕೆಲವು ಬೆಟ್ಟಗಳಂತೆಯೂ, ಆನೆಗಳಂತೆಯೂ ಇದ್ದುವು.

೫೨-೫೩. ಕೆಲವು ಮೇಘಗಳು ಅರಮನೆಯಂತಿದ್ದುವು, ಕೆಲವು ಬಕಪಕ್ಷಿಯಂತೆ ಬಣ್ಣವುಳ್ಳವುಗಳಾಗಿದ್ದು ಭಯಂಕರವಾಗಿದ್ದುವು. ಆ ಮೇಘಗಳು ಘಟ್ಟಿಯಾಗಿ ಘರ್ಜಿಸುತ್ತಾ ನೂರುವರ್ಷಗಳಿಗಿಂತಲೂ ಹೆಚ್ಚಾಗಿ ಮಳೆಸುರಿಸಿ ಮೂರು

ವವೃಷುಸ್ತ್ರೀನಥೋ ಲೋಕಾನ್ಪ್ಲಾಯಂತೋ ಮಹಾಸ್ವನಾಃ ।
ರಥಚಕ್ರಪ್ರಮಾಣೇನ ಧಾರಾಪಾತೇನ ವೈ ದೃಢಂ ॥ ೫೩ ॥

ಧಾರಾಸಾರೇಣ ಮಹತಾ ಪೂರಿತಂ ಭುವನತ್ರಯಂ ।
ಆಧ್ರುವಸ್ಥಾನಮಾಸಾದ್ಯ ತೋಯಮಾಶೌ ಸ್ಥಿತೇ ತತಃ ॥ ೫೪ ॥

ಸ ಮುಖಾದಸೃಜದ್ವಾಯುಂ ರುದ್ರರೂಪೀ ಜನಾರ್ದನಃ ।
ತೇನೌಘವಾಯುನಾ ಕ್ಷಿಪ್ತಾ ಮೇಘಾಃ ಸಂವತ್ಸರಾಜ್ಜಿತಂ ॥ ೫೫ ॥

ಅವ್ಯಾಹತಗತೇನಾಶು ವಿಧ್ವಸ್ತಾ ಅಭವಂಸ್ತತಃ ।
ನಷ್ಟೇಷು ತೇಷು ಮೇಘೇಷು ಜನೋಲೋಕಾದಿಕಂ ಪುನಃ ॥ ೫೬ ॥

ರುದ್ರಸ್ತ್ವಬ್ರಹ್ಮಭುವನಂ ಧ್ವಂಸಯಾಮಾಸ ನಿರ್ದಯಃ ।
ವಿಧ್ವಸ್ತೇಷು ಸಮಸ್ತೇಷು ಭುವನೇಷು ವಿಶೇಷತಃ ॥ ೫೭ ॥

ಲೋಕಗಳನ್ನು ತೊಳೆದುಹಾಕಿದುವು. ಬಂಡಿಯ ಗಾಲಿಯಷ್ಟು ದೊಡ್ಡದಾದ ಮಳೆಯ ಧಾರೆಯನ್ನು ಆ ಮೇಘಗಳು ಸುರಿಸಿದುವು.

೫೪. ಇಂತಹ ದೊಡ್ಡ ಜಡಿಮಳೆಯಿಂದ ಲೋಕತ್ರಯವು ತುಂಬಿ ಧ್ರುವ ಮಂಡಲದವರೆಗೂ ಜಲಸಮುದ್ರವಾಯಿತು.

೫೫. ರುದ್ರರೂಪಿಯಾದ ಆ ಜನಾರ್ದನನು ತಿರುಗಿ ತನ್ನ ಮುಖದಿಂದ ವೇಗವುಳ್ಳ ವಾಯುವನ್ನು ಸೃಜಿಸಿದನು. ಆ ತಡೆಯಿಲ್ಲದ ಗಮನವುಳ್ಳ ವಾಯುವು ಒಂದುನೂರುವರ್ಷಗಳವರೆಗೆ ಬೀಸುತ್ತಲಿದ್ದು ಸಂವರ್ತಕವೇ ಮೊದಲಾದ ಮೇಘ ಗಳನ್ನು ಹೊಡೆದು ಹಾರಿಸಿ ಸಂಪೂರ್ಣವಾಗಿ ನಾಶಮಾಡಿತು.

೫೬—೫೮. ಮೇಘಗಳು ನಷ್ಟವಾಗಲು, ಭೂಲೋಕವೇ ಮೊದಲಾಗಿ ಬ್ರಹ್ಮ ಲೋಕದವರೆಗೂ ಇರುವ ಸಕಲ ಜಗತ್ತನ್ನೂ ದಯೆಯಿಲ್ಲದೆ ರುದ್ರನು ಧ್ವಂಸಮಾಡಿ

ವಿನಷ್ಟೇ ಬ್ರಹ್ಮಲೋಕೇ ಚ ರುದ್ರೋಽಗಾದ್ದ್ವಾದಶಾರುಣಾನ್ ।
ಸ ಗತ್ವಾ ದ್ವಾದವಾದಿತ್ಯಾನ್ವೇಗೇನ ಮಹತಾ ಹರಿಃ ॥ ೫೮ ॥

ಅಗ್ರಸಚ್ಚಾತಿಜಜ್ವಾಲ ತೈಗರ್ಭಸ್ಥೈರ್ದಿವಾಕರೈಃ ।
ತತೋ ಬ್ರಹ್ಮಾಂಡಮಾಸಾದ್ಯ ರುದ್ರಃ ಕಾಲಾಂತಕೋಪಮಃ ॥ ೫೯ ॥

ಚೂರ್ಣೀಚಕಾರ ಸಕಲಂ ಮುಷ್ಟಿಪೇಷಂ ಮಹಾಬಲಃ ।
ಚೂರ್ಣೀಕುರ್ವಂಸ್ತು ಬ್ರಹ್ಮಾಂಡಂ ಪೃಥಿವ್ಯಪಿ ವಿಚೂರ್ಣಿತಾ ॥ ೬೦ ॥

ತೋಯಾನಿ ಚ ಸಮುಸ್ತಾನಿ ಸ ದಧ್ರೇ ಯೋಗತೋ ಹರಿಃ ।
ಯದ್ಬ್ರಹ್ಮಾಂಡಾದ್ಬಹಿಸ್ತೋಯಂ ಸ್ಥಿತಂ ಪೂರ್ವಂ ಸಮಂತತಃ ॥ ೬೧ ॥

ಯದ್ವಾಽಭ್ಯಂತರ್ಗತಂ ತೋಯಂ ತತ್ಸರ್ವಂ ಚೈಕತಾಂ ಗತಂ ।
ಏಕೀಭೂತೇಷು ತೋಯೇಷು ಸರ್ವವ್ಯಾಪಿಷು ಸರ್ವತಃ ॥ ೬೨ ॥

ತುಂಬಾ ವೇಗದಿಂದ ದ್ವಾದಶಾದಿತ್ಯರಲ್ಲಿಗೆ ಹೋಗಿ ಅವರನ್ನೂ ನುಂಗಿದನು. ಗರ್ಭದಲ್ಲಿರುವ ಆ ಆದಿತ್ಯರಿಂದ ರುದ್ರನು ತುಂಬಾ ಜ್ವಲಿಸಿದನು.

೫೯. ಆಮೇಲೆ ಪ್ರಾಣಿಗಳನ್ನು ನಾಶಮಾಡುವ ಯಮನಂತಿರುವನೂ, ಮಹಾ ಬಲನೂ ಆದ ರುದ್ರನು ಸಕಲ ಬ್ರಹ್ಮಾಂಡವನ್ನು ಮುಷ್ಟಿಯಿಂದ ಚೂರುಚೂರು ಮಾಡಿದನು.

೬೦. ಬ್ರಹ್ಮಾಂಡವು ಚೂರ್ಣಿತವಾಗಲು ಪೃಥಿವಿಯೂ ಚೂರುಚೂರಾಯಿತು. ಆಗ ಸಕಲ ಜನಗಳನ್ನೂ ಹರಿಯು ತನ್ನ ಯೋಗಶಕ್ತಿಯಿಂದ ಧರಿಸಿದನು.

೬೧. ಹಿಂದೆ ಬ್ರಹ್ಮಾಂಡದ ಹೊರಗೂ ಒಳಗೂ ಸುತ್ತಲೂ ಯಾವ ಜಲಗಳಿದ್ದುವೋ ಆ ಜಲಗಳೆಲ್ಲವೂ ಒಟ್ಟುಗೂಡಿ ಎಲ್ಲೆಡೆಯಲ್ಲಿಯೂ ಆವರಿಸಿ ನಿಂತಿತು.

೬೨. ಹೀಗೆ ನೀರೆಲ್ಲಾ ಒಂದಾಗಿ ಎಲ್ಲೆಡೆಯಲ್ಲಿಯೂ ವ್ಯಾಪಿಸಲು ಆ ಜಲದಲ್ಲಿ ಬ್ರಹ್ಮಾಂಡದ ಚೂರುಗಳೆಲ್ಲವೂ ಸೇರಿ ಚಿಕ್ಕಚಿಕ್ಕ ಹಡಗುಗಳಂತೆ ತೇಲುತ್ತಿದ್ದುವು.

ಬ್ರಹ್ಮಾಂಡಖಂಡಪೂರ್ಣೋಘಃ ಪ್ಲವನ್ನಾಸೀತ್ಸನೌರಿವ ।
ತತಃ ಪೃಥಿವ್ಯಾಃ ಸಾರಂ ತು ಗಂಧಂ ತನ್ಮಾತ್ರಕಂ ಕ್ರಮಾತ್ ॥ ೬೩ ॥

ಅಂಭೋ ಜಗ್ರಾಹ ಸಕಲಂ ವಿನಷ್ಟಾ ಪೃಥಿವೀ ತತಃ ।
ಪುನಸ್ಸ ರುದ್ರಸ್ತೇಜಾಂಸಿ ಗರ್ಭಸ್ಥಾನಿ ಸ್ವಕಾಯತಃ ॥ ೬೪ ॥

ನಿಃಸಾರಯಾಮಾಸ ಪುನಃ ಪುಂಜೀಭೂತಾನಿ ಭೀಷಣಃ ।
ತಾನಿ ತೇಜಾಂಸಿ ಸಕಲಂ ಜಗೃಹುಃ ಸರ್ವತಃ ಸ್ಥಿತಂ ॥ ೬೫ ॥

ಅಂತರ್ಬಹಿಶ್ಚ ಬ್ರಹ್ಮಾಂಡಾತ್ತೇಜೋ ಯಚ್ಚಾನ್ಯತೋ ಗತಂ ।
ಜಗದ್ಗತಂ ಸರ್ವತೇಜೋ ಗೃಹೀತ್ವಾ ಚೈಕತೋ ಜ್ವಲನ್ ॥ ೬೬ ॥

ರೌದ್ರಬ್ರಹ್ಮಾಂಡಖಂಡಾನಿ ತೇಜೋಽಥ ನ್ಯದಹಜ್ಜಲೇ ।
ದಗ್ಧ್ವಾ ಬ್ರಹ್ಮಾಂಡಚೂರ್ಣಾನಿ ತೇಜಾಂಸ್ಯುಜ್ಜ್ವಲಿತಾನಿ ಚ ॥ ೬೭ ॥

---

೬೩. ಅನಂತರ ಪೃಥಿವಿಯಿಂದ ಸಾರವಾದ ಗಂಧತನ್ಮಾತ್ರವನ್ನು ಜಲವು ಸ್ವೀಕರಿಸಿತು ಎಂದರೆ ಜಲದಲ್ಲಿ ಲೀನವಾಯಿತು. ಆಗ ಸಕಲ ಪೃಥಿವಿಯೂ ನಷ್ಟವಾಯಿತು.

೬೪. ಭಯಂಕರವಾದ ರುದ್ರನು ತಿರುಗಿ ತನ್ನ ಹೊಟ್ಟೆಯಲ್ಲಿ ಒಂದಾಗಿ ಸೇರಿರುವ ತೇಜಸ್ಸನ್ನು ತನ್ನ ಶರೀರದಿಂದ ಹೊರಗೆ ತೆಗೆದನು.

೬೫-೬೬. ಮತ್ತು ಆ ತೇಜಸ್ಸನ್ನೂ, ಬ್ರಹ್ಮಾಂಡದ ಹೊರಗೂ ಒಳಗೂ ಎಲ್ಲೆಡೆಯಲ್ಲಿಯೂ ಇರುವ ಎಲ್ಲಾ ತೇಜಸ್ಸುಗಳನ್ನೂ ಆ ರುದ್ರನು ಒಟ್ಟುಗೂಡಿಸಿ ಅದರಿಂದ ಜಲದಲ್ಲಿರುವ ಬ್ರಹ್ಮಾಂಡದ ಚೂರುಗಳನ್ನೆಲ್ಲಾ ದಹಿಸಿದನು.

೬೭. ಬ್ರಹ್ಮಾಂಡವನ್ನು ದಹಿಸಿ ಜ್ವಲಿಸುತ್ತಿರುವ ಆ ತೇಜಸ್ಸು ಜಲದಿಂದ ರಸತನ್ಮಾತ್ರವೆಂಬ ಸಾರವಾದ ಸೂಕ್ಷ್ಮಭೂತವನ್ನು ಸ್ವೀಕರಿಸಿತು ಎಂದರೆ ಜಲವು ತೇಜಸ್ಸಿನಲ್ಲಿ ಲೀನವಾಯಿತು.

ಜಲೇಭ್ಯೋ ರಸತನ್ಮಾತ್ರಂ ಸಾರಭೂತಂ ತತೋಽಗ್ರಹೀತ್ ।
ಗೃಹೀತಸಾರಸ್ತಾ ಆಪಃ ಪ್ರನಷ್ಟಾಸ್ತೇಜಸಾ ತತಃ ॥ ೬೮ ॥

ಅಪ್ಸು ನಷ್ಟಾಸು ತತ್ತೇಜಃ ಪ್ರವಿಶ್ಯಾಥ ಸದಾಗತಿಃ ।
ವಿಕೀಭೂತೋ ಮಹಾಭಾಗೋ ರೂಪಂ ತನ್ಮಾತ್ರಮಗ್ರಹೀತ್ ॥ ೬೯ ॥

ಗೃಹೀತೇ ರೂಪತನ್ಮಾತ್ರೇ ತೇಜಾಂಸಿ ಸಕಲಾನ್ಯಥ ।
ವಿನಷ್ಟಾನಿ ತತೋ ವಾಯುಃ ಪ್ರಬಲೋಽಭೂದವಾರಿತಃ ॥ ೭೦ ॥

ಮಹಾಸ್ವನಂ ತತೋ ವಾಯುಮಾಸಾದ್ಯಾಗ್ನಿರಿವ ಜ್ವಲನ್ ।
ರುದ್ರಃ ಸಂಕ್ಷೋಭಯಾಮಾಸ ತದಾಕಾಶಂ ಸ್ವಯಂ ತತಃ ॥ ೭೧ ॥

ತೇನ ಮುಂಕ್ಷೂರ್ಧ್ವಮಾಕಾಶಮಗ್ರಹೀನ್ಮರುತಸ್ತತಃ ।
ತದ್ಗತಂ ಸ್ಪರ್ಶತನ್ಮಾತ್ರಂ ತತೋ ನಷ್ಟಃ ಪ್ರಭಂಜನಃ ॥ ೭೨ ॥

೬೮-೬೯. ಹೀಗೆ ತೇಜಸ್ಸಿನಿಂದ ಜಲವು ನಷ್ಟವಾದಮೇಲೆ ವಾಯುವು ಒಂದು ಗುಂಪಾಗಿ ಬಂದು, ತೇಜಸ್ಸಿನಿಂದ ರೂಪತನ್ಮಾತ್ರವೆಂಬ ಸಾರವಾದ ಸಣ್ಣ ಭೂತವನ್ನು ಸ್ವೀಕರಿಸಿತು ಎಂದರೆ ತೇಜಸ್ಸು ವಾಯುವಿನಲ್ಲಿ ಅಂತರ್ಗತವಾಯಿತು.

೭೦. ರೂಪತನ್ಮಾತ್ರವು ವಾಯುವಿನಿಂದ ಗೃಹೀತವಾದಮೇಲೆ ತೇಜಸ್ಸು ನಷ್ಟವಾಯಿತು. ಆಗ ವಾಯುವು ಯಾವ ತಡೆಯೂ ಇಲ್ಲದುದಾಗಿ ಎಲ್ಲೆಲ್ಲಿಯೂ ತಾನೇತಾನಾಗಿ ಪ್ರಬಲವಾಯಿತು.

೭೧. ತುಂಬಾ ಶಬ್ದ ಮಾಡುತ್ತಲಿರುವ ಆ ಮಹಾವಾಯುವನ್ನು, ಅಗ್ನಿಯಂತೆ ಜ್ವಲಿಸುತ್ತಿರುವ ರುದ್ರನು ಆಕಾಶದಲ್ಲಿ ಚೆನ್ನಾಗಿ ಕ್ಷೋಭಗೊಳಿಸಿದನು.

೭೨. ಆಗ ಆಕಾಶವು ವಾಯುವಿನಲ್ಲಿ ಸಾರವಾದ ಸ್ಪರ್ಶತನ್ಮಾತ್ರವೆಂಬ ಸೂಕ್ಷ್ಮ ಭೂತವನ್ನು ಸ್ವೀಕರಿಸಿತು. ವಾಯುವು ಆಕಾಶದಲ್ಲಿ ಲೀನವಾಯಿತು. ಅದರಿಂದ ವಾಯುವು ನಷ್ಟವಾಯಿತು.

ನಷ್ಟೇ ವಾಯೌ ತತೋ ರುದ್ರ ಆಕಾಶಾತ್ಸಾರಮಗ್ರಹೀತ್ ।
ಶಬ್ದತನ್ಮಾತ್ರಕಂ ತಸ್ಮಿನ್ಗೃಹೀತೇ ವಿಗತಂ ವಿಯತ್ ॥ ೭೩ ॥

ನಷ್ಟೇ ನಭಸಿ ರುದ್ರೋಽಸೌ ಕಾಯೇ ಬ್ರಾಹ್ಮೇ ತದಾಽವಿಶತ್ ।
ಬ್ರಾಹ್ಮಂ ತದಾಕುಲಂ ಕಾಯಂ ನಿರಾಧಾರಂ ನಿರಾಕುಲಂ ॥ ೭೪ ॥

ವಿವೇಶ ವೈಷ್ಣವೇ ಕಾಯೇ ಶಂಖಚಕ್ರಗದಾಧರೇ ।
ತತಃ ಶೌರಿರ್ಮಹಾತೇಜಾಃ ಕಾಯಂ ತತ್ಪಾಂಚಭೌತಿಕಂ ॥ ೭೫ ॥

ಶಂಖಚಕ್ರಗದಾಶಾರ್ಙ್ಗವರಾಸಿಧರಮಚ್ಯುತಂ ।
ಸ್ವಶಕ್ತ್ಯಾ ಸಂಜಹಾರಾಶು ಸಾರಮಾದಾಯ ಸರ್ವತಃ ॥ ೭೬ ॥

ನಿರಾಧಾರಂ ನಿರಾಕಾರಂ ನಿಃಸತ್ತ್ವಂ ನಿರವಗ್ರಹಂ ।
ಆನಂದಮಯಮದ್ವೈತಂ ದ್ವೈತಹೀನಾವಿಶೇಷಣಂ ॥ ೭೭ ॥

---

೭೩. ಹೀಗೆ ವಾಯುವು ನಷ್ಟವಾಗಲು ರುದ್ರನು ಆಕಾಶದಲ್ಲಿ ಸಾರವಾದ ಶಬ್ದತನ್ಮಾತ್ರವೆಂಬ ಸೂಕ್ಷ್ಮಭೂತವನ್ನು ತಾನು ಸ್ವೀಕರಿಸಿದನು. ಅದರಿಂದ ಆ ಆಕಾಶವೂ ನಷ್ಟವಾಯಿತು.

೭೪-೭೫. ಆಕಾಶವು ನಷ್ಟವಾದಮೇಲೆ ರುದ್ರನು ತಾನು ಬ್ರಹ್ಮನ ಶರೀರದಲ್ಲಿ ಸೇರಿದನು. ಆಗ ಬ್ರಹ್ಮಶರೀರವು ಆ ರುದ್ರಪ್ರವೇಶದಿಂದ ಸೇರಿ ಆಧಾರವಿಲ್ಲದೆ ಶಂಖ, ಚಕ್ರ, ಗದೆಗಳನ್ನು ಧರಿಸಿರುವ ವಿಷ್ಣುಶರೀರದಲ್ಲಿ ಯಾವ ತೊಂದರೆಯೂ ಇಲ್ಲದೆ ಪ್ರವೇಶಿಸಿತು.

೭೬. ಆಮೇಲೆ ವಿಷ್ಣುವು ಪಂಚಭೂತಗಳಿಂದಾಗಿರುವುದೂ, ಶಂಖ, ಚಕ್ರ, ಗದೆ, ಶಾರ್ಙ್ಗಧನುಸ್ಸು, ಖಡ್ಗ ಇವುಗಳನ್ನು ಧರಿಸಿರುವುದೂ ಆದ ತನ್ನ ಶರೀರವನ್ನು ಅದರ ಸಾರವನ್ನೆಲ್ಲಾ ತೆಗೆದು ತಾನೇ ಉಪಸಂಹರಿಸಿದನು.

೭೭-೭೮. ಆಗ ಇವೆಲ್ಲವನ್ನೂ ಒಳಗೊಂಡ ಬ್ರಹ್ಮವಸ್ತುವೊಂದೇ ಎಲ್ಲೆಡೆಯಲ್ಲಿಯೂ ವ್ಯಾಪಿಸಿದ್ದಿತು. ಆ ಪರಬ್ರಹ್ಮವಸ್ತುವಿಗೆ ಆಧಾರವಾಗಲೀ, ಆಕಾರವಾಗಲೀ ಯಾವುದೂ ಇಲ್ಲ. ಸತ್ತ್ವರಜಸ್ತಮೋಗುಣಗಳೂ ಇಲ್ಲ ಎಂದರೆ ಆ ಮೂರು ಗುಣ

ನ ಸ್ಥೂಲಂ ನ ಚ ಸೂಕ್ಷ್ಮಂ ಯಜ್ಜ್ಞಾನಂ ನಿತ್ಯಂ ನಿರಂಜನಂ ।
ಏಕಮಾಸೀತ್ಪರಂ ಬ್ರಹ್ಮ ಸ್ವಪ್ರಕಾಶಂ ಸಮಂತತಃ ॥ ೭೮ ॥

ನಾಹೋ ನ ರಾತ್ರಿರ್ನ ವಿಯನ್ನ ಪೃಥ್ವೀ
ನಾಸೀತ್ತಮೋ ಜ್ಯೋತಿರಭೂನ್ನ ಚಾನ್ಯತ್ ॥
ಶ್ರೋತ್ರಾದಿಬುದ್ಧ್ಯಾದ್ಯುಪಲಭ್ಯಮೇಕಂ
ಪ್ರಾಧಾನಿಕಂ ಬ್ರಹ್ಮ ಪುಮಾಂಸ್ತದಾಽಽಸೀತ್ ॥ ೭೯ ॥

ಏವಂ ಯಾವತ್ಸ್ಥಿತಾ ಸೃಷ್ಟಿಸ್ತಾವತ್ಕಾಲಮಸೃಷ್ಟಿಕಂ ।
ಆಸೀದೇಕಂ ಪರಂ ತತ್ತ್ವಂ ತತಃ ಸೃಷ್ಟಿಃ ಪ್ರವರ್ತತೇ ॥ ೮೦ ॥

ಪ್ರಕೃತೌ ಸಂಸ್ಥಿತೋ ಯಸ್ಮಾತ್ಸರ್ವತನ್ಮಾತ್ರಸಂಚಯಃ ।
ಅಹಂಕಾರಂ ಮಹತ್ತತ್ತ್ವಂ ಗತೋ ಯತ್ಪ್ರಾಕೃತೋ ಲಯಃ ॥ ೮೧ ॥

ಗಳೂ ಸಮಭಾವದಿಂದ ಇದ್ದುದರಿಂದ ಯಾವ ಒಂದು ಗುಣದ ಪ್ರಭಾವವೂ ಪ್ರಕಾಶಿಸುವಂತಿರಲಿಲ್ಲ. ಅದಕ್ಕೆ ತಡೆಯೇ ಇಲ್ಲದೆ ಎಲ್ಲೆಲ್ಲಿಯೂ ವ್ಯಾಪಿಸಿದ್ದಿತು. ಯಾವಾಗಲೂ ಆನಂದಮಯವಾಗಿಯೇ ಇರುವ ಈ ಬ್ರಹ್ಮವಸ್ತುವಿಗೆ ಸ್ಥೂಲಸೂಕ್ಷ್ಮವೆಂಬ ಭೇದಗಳಾಗಲಿ, ನಾಮರೂಪಾದಿ ವಿಭಾಗಗಳಾಗಲಿ ಇಲ್ಲ. ಇದಕ್ಕೆ ಸದೃಶವಾದ ಮತ್ತೊಂದು ವಸ್ತುವೇ ಇಲ್ಲ. ಸ್ವಯಂಪ್ರಕಾಶವಾಗಿ ಎಲ್ಲೆಲ್ಲಿಯೂ ತಾನೇತಾನಾಗಿ ವ್ಯಾಪಿಸಿದ್ದಿತು.

೭೯. ಮತ್ತು ಆ ಕಾಲದಲ್ಲಿ ಹಗಲಾಗಲೀ, ರಾತ್ರಿಯಾಗಲೀ ಇರಲಿಲ್ಲ. ಆಕಾಶವಾಗಲೀ, ಭೂಮಿಯಾಗಲೀ, ಇರಲಿಲ್ಲ. ಕತ್ತಲೆಯಾಗಲೀ, ಸೂರ್ಯನೇ ಮೊದಲಾದ ತೇಜಸ್ಸಾಗಲೀ ಇರಲಿಲ್ಲ. ಶ್ರೋತ್ರೇಂದಿಯ, ಬುದ್ಧಿ, ಮೊದಲಾದವುಗಳೂ, ಅವುಗಳಿಂದ ತಿಳಿಯಲ್ಪಡತಕ್ಕ ವಿಷಯಗಳೂ, ಇವಾವುದೂ ಇರಲಿಲ್ಲ. ಪರಬ್ರಹ್ಮವಸ್ತುವೊಂದೇ ಎಲ್ಲೆಲ್ಲಿಯೂ ಪ್ರಧಾನವಾಗಿ ಇದ್ದಿತು.

೮೦. ಹೀಗೆ ತಿರುಗಿ ಸೃಷ್ಟಿಯಾಗುವವರೆಗೂ ಯಾವುದೂ ಇಲ್ಲದೆ ಪರಬ್ರಹ್ಮವಸ್ತುವೊಂದೇ ಇದ್ದಿತು. ಆಮೇಲೆ ಸೃಷ್ಟಿಯು ಮುಂದೆ ಪ್ರಾರಂಭವಾಗುವುದು.

೮೧. ಪೃಥಿವೀ ಮೊದಲಾದವುಗಳಲ್ಲಿರುವ ಗಂಧತನ್ಮಾತ್ರವೇ ಮೊದಲಾದ ಸೂಕ್ಷ್ಮಭೂತಗಳು ತಮ್ಮತಮ್ಮ ಪ್ರಕೃತಿಗಳಾದ ಜಲವೇ ಮೊದಲಾದುದನ್ನು ಸೇರಿ,

ಪ್ರಕೃತೌ ಸಂಸ್ಥಿತಂ ವ್ಯಕ್ತಮತೀತಪ್ರಲಯಂ ತು ತತ್ ।
ತಸ್ಮಾತ್ಪ್ರಾಕೃತಸಂಜ್ಞೋಽಯಮುಚ್ಯತೇ ಪ್ರತಿಸಂಚರಃ ॥ ೮೨ ॥

ಅಯಂ ವಃ ಕಥಿತೋ ವಿಪ್ರಾಃ ಪ್ರಾಕೃತಾಖ್ಯೋ ಮಹಾಲಯಃ ।
ಆದಿಸೃಷ್ಟಿಂ ಶೃಣುಷ್ವೇಮಾಂ ಕಥ್ಯಮಾನಾಂ ಮಯಾ ಪುನಃ ॥ ೮೩ ॥

॥ ಇತಿ ಶ್ರೀ ಕಾಲಿಕಾಪುರಾಣೇ ಪಂಚವಿಂಶೋಽಧ್ಯಾಯಃ ॥

ಮುಂದೆ ಅಹಂಕಾರ ಮತ್ತು ಮಹತತ್ತ್ವಗಳನ್ನು ಸೇರಿದುದರಿಂದ ಈ ಪ್ರಳಯಕ್ಕೆ ಪ್ರಕೃತಿಲಯವೆಂದು ಹೆಸರಾಯಿತು.

೮೨. ಹೀಗೆ ಸಕಲ ಪ್ರಪಂಚವೂ ತಮ್ಮತಮ್ಮ ಪ್ರಕೃತಿಗಳಲ್ಲಿ ಲಯವನ್ನು ಹೊಂದಿದುದರಿಂದ ಈ ಲಯಕ್ಕೆ ಪ್ರಾಕೃತಲಯ ಅಥವಾ ಪ್ರಕೃತಿಪ್ರಳಯವೆಂದು ಹೆಸರು. ಎಂದರೆ ಸೃಷ್ಟಿಕಾಲದಲ್ಲಿ ಪರಬ್ರಹ್ಮನಿಂದ ಮಹತತ್ತ್ವ, ಅಹಂಕಾರತತ್ತ್ವ, ಆಕಾಶ, ವಾಯು, ಅಗ್ನಿ, ಜಲ, ಪೃಥಿವೀ, ಇವುಗಳು ಒಂದರಿಂದೊಂದು ಉತ್ಪತ್ತಿಯಾಗುವವು. ಲಯಕಾಲದಲ್ಲಿ ಪೃಥಿವ್ಯಾದಿಭೂತಗಳು ತಮಗೆ ಕಾರಣಭೂತವಾದ ತನ್ಮಾತ್ರೆಗಳಲ್ಲಿ ಕ್ರಮವಾಗಿ ಲೀನವಾಗುತ್ತಾ ಕಡೆಗೆ ಎಲ್ಲವೂ ಬ್ರಹ್ಮನಲ್ಲಿ ಸೇರಿಹೋಗುವವು. ಎಂದರೆ ಪೃಥಿವಿಯು ತನಗೆ ಕಾರಣಭೂತವಾದ ಜಲದಲ್ಲಿ ಲೀನವಾಗುವುದು ಎಂದರೆ ಸೇರಿಹೋಗಿ ಅಲ್ಲಿಯೇ ಐಕ್ಯವಾಗುವುದು. ಅದರಂತೆಯೇ ಜಲವು ತೇಜಸ್ಸಿನಲ್ಲಿಯೂ, ತೇಜಸ್ಸು ವಾಯುವಿನಲ್ಲಿಯೂ, ಆಕಾಶವು ಅಹಂಕಾರತತ್ತ್ವದಲ್ಲಿಯೂ, ಅಹಂಕಾರತತ್ತ್ವವು ಮಹತತ್ತ್ವದಲ್ಲಿಯೂ, ಮಹತತ್ತ್ವವು ಪರಬ್ರಹ್ಮನಲ್ಲಿಯೂ ಲೀನವಾಗುವುದು. ಈರೀತಿ ಸಮಸ್ತಪ್ರಪಂಚವೂ ಲೀನವಾಗುವುದರಿಂದ ಉಳಿದ ಪರಬ್ರಹ್ಮವಸ್ತುವೊಂದೇ ನಾಮರೂಪಭೇದಗಳಿಲ್ಲದೆ ಸ್ವಯಂಪ್ರಕಾಶಸ್ವರೂಪವಾಗಿ ಎಲ್ಲೆಡೆಯಲ್ಲಿಯೂ ವ್ಯಾಪಿಸಿ ಬೆಳಗುತ್ತಿರುವುದು.

೮೩. ಎಲ್ಲಿ ಬ್ರಾಹ್ಮಣೋತ್ತಮರೇ! ಹೀಗೆ ಪ್ರಾಕೃತಲಯವನ್ನು ಹೇಳಿದುದಾಯ್ತು. ಮುಂದೆ ಆದಿಸೃಷ್ಟಿಯನ್ನು ಹೇಳುವೆನು ಕೇಳಿರಿ.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಅಥ ಶ್ರೀ ಕಾಲಿಕಾಪುರಾಣೇ ಷಡ್ವಿಂಶೋಽಧ್ಯಾಯಃ ॥

ಇಪ್ಪತ್ತಾರನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ಕಾಲೋ ನಾಮ ಸ್ವಯಂ ದೇವಃ ಸೃಷ್ಟಿಸ್ಥಿತ್ಯಂತಕಾರಕಃ ।
ಅವಿಚ್ಛಿನ್ನಃ ಸ ಪ್ರಲಯಸ್ತೇನ ಭಾಗೇನ ಕೇನಚಿತ್ ॥ ೧ ॥

ಲಯಭಾಗೇ ವ್ಯತೀತೇ ತು ಸಿಸೃಕ್ಷಾ ಸಮಜಾಯತ ।
ಜ್ಞಾನಸ್ವರೂಪಸ್ಯ ತದಾ ಪರಮಬ್ರಹ್ಮಣೋ ವಿಭೋಃ ॥ ೨ ॥

॥ ಇಪ್ಪತ್ತಾರನೆಯ ಅಧ್ಯಾಯವು ॥

೧. ಮಾರ್ಕಂಡೇಯನು ಹೇಳಿದನು :—ಬ್ರಹ್ಮರೂಪಿಯಾದ ಕಾಲವೇ ಸೃಷ್ಟಿ ಸ್ಥಿತಿ, ಲಯ ಈ ಮೂರನ್ನೂ ಮಾಡುವುದು. ಆ ಕಾಲವು ಅವಿಚ್ಛಿನ್ನವಾದುದು ಎಂದರೆ ಯಾವಾಗಲೂ ಎಡಬಿಡದೆ ಸಾಗುತ್ತಿರುವುದು. ಆ ಮಹಾಕಾಲದ ಒಂದು ಭಾಗವು ಪ್ರಳಯಕಾಲವು.

೨. ಈ ಲಯಭಾಗವು ಕಳೆದನಂತರ ಜ್ಞಾನರೂಪವಾದ ಪರಬ್ರಹ್ಮನಿಗೆ ಸೃಷ್ಟಿ ಸಬೇಕೆಂಬ ಇಚ್ಛೆಯುಂಟಾಯಿತು.

ತತೋಽಸ್ಯ ಪ್ರಕೃತಿಸ್ತೇನ ಸಮ್ಯಕ್ಸಂಕ್ಷೋಭಿತಾ ಭಿಯಾ ।
ಸಂಕ್ಷುಬ್ಧಾ ಸರ್ವಕಾರ್ಯಾರ್ಥಮಭೂತ್ಸಾ ತ್ರಿಗುಣಾತ್ಮಿಕಾ ॥ ೩ ॥

ಯಥಾ ಸಂನಿಧಿಮಾತ್ರೇಣ ಗಂಧಃ ಕ್ಷೋಭಾಯ ಜಾಯತೇ ।
ಮನಸೋ ಲೋಕಕರ್ತೃತ್ವಾತ್ತಥಾಽಸೌ ಪರಮೇಶ್ವರಃ ॥ ೪ ॥

ಸ ಏವ ಕ್ಷೋಭಕೋ ಬ್ರಹ್ಮನ್ ಕ್ಷೋಭ್ಯಶ್ಚ ಪರಮೇಶ್ವರಃ ।
ಸ ಸಂಕೋಚವಿಕಾಸಾಭ್ಯಾಂ ಪ್ರಧಾನತ್ವೇಽಪಿ ಚ ಸ್ಥಿತಃ ॥ ೫ ॥

ಇಚ್ಛಾಮಾತ್ರೇಣ ಪುರುಷಃ ಸೃಷ್ಟ್ಯರ್ಥೇ ಪರಮೇಶ್ವರಃ ।
ತತಃ ಸಂಕ್ಷೋಭಯಾಮಾಸ ಪುನರೇವ ಜಗತ್ಪತಿಃ ॥ ೬ ॥

ಗುಣಸಾಮ್ಯಾತ್ತತಸ್ತಸ್ಮಾತ್ಕ್ಷೇತ್ರಜ್ಞಾಧಿಷ್ಠಿತಾತ್ತತಃ ।
ಗುಣವ್ಯಂಜನಸಂಭೂತಿಃ ಸರ್ಗಕಾಲೇ ಬಭೂವ ಹ ॥ ೭ ॥

---

೩. ಆಮೇಲೆ ಆ ಬ್ರಹ್ಮನು ತನ್ನ ಪ್ರಕೃತಿಯನ್ನು ಸೃಷ್ಟಿಗಾಗಿ ಕ್ಷೋಭಗೊಳಿಸಿದನು. ಆಗ ಪ್ರಕೃತಿಯಲ್ಲಿ ಸಮತಾವಸ್ಥೆಯಲ್ಲಿದ್ದ ತ್ರಿಗುಣಗಳು ವಿಷಮಾವಸ್ಥೆಗೆ ಬಂದು ಸತ್ತ್ವರಜಸ್ತಮೋಗುಣಗಳುಳ್ಳದ್ದಾಯಿತು.

೪. ಗಂಧವು ಸಮೀಪದಲ್ಲಿದ್ದ ಮಾತ್ರದಿಂದ ಮನಸ್ಸನ್ನು ಹೇಗೆ ಕ್ಷೋಭಗೊಳಿಸುವುದೋ ಅದರಂತೆ ಆ ಪರಮೇಶ್ವರನು ಪ್ರಕೃತಿಯಲ್ಲಿ ಸನ್ನಿಹಿತನಾಗಿದ್ದು ಲೋಕಸೃಷ್ಟಿಗಾಗಿ ಅದನ್ನು ಕ್ಷೋಭಗೊಳಿಸಿದನು.

೫. ಎಲೈ ಬ್ರಾಹ್ಮಣೋತ್ತಮರೇ! ಆ ಪರಮೇಶ್ವರನೇ ಪ್ರಧಾನರೂಪದಿಂದ ಕ್ಷೋಭಿಸುವವನೂ, ಪ್ರಕೃತಿರೂಪದಿಂದ ಸಂಕೋಚ ಮತ್ತು ವಿಕಾಸಗಳನ್ನು ಹೊಂದಿ ಕ್ಷೋಭಿಸಲ್ಪಡುವವನೂ ಆಗಿರುವನು.

೬. ಹೀಗೆ ತನ್ನ ಇಚ್ಛೆಯಿಂದಲೇ ಜಗದೊಡೆಯನಾದ ಪರಮೇಶ್ವರನು ಸೃಷ್ಟಿಗಾಗಿ ಪ್ರಕೃತಿಯನ್ನು ಪುನಃ ಕ್ಷೋಭಿಸಿದನು.

೭. ಆಗ ಸತ್ತ್ವರಜಸ್ತಮೋಗುಣಗಳುಳ್ಳ ಪರಮೇಶ್ವರನ ಸ್ವರೂಪನೇ ಆದ ಪ್ರಕೃತಿಯಿಂದ ಆಯಾಯ ಗುಣಪ್ರಧಾನವಾದ ವಸ್ತುಗಳ ಸೃಷ್ಟಿಯು ಆಯಿತು.

ಪ್ರಧಾನತತ್ತ್ವಾದುದ್ಭೂತಮೀಶ್ವರೇಚ್ಛಾಸಮೀರಿತಾತ್ ।
ಮಹತ್ತತ್ತ್ವಂ ಪ್ರಥಮತಸ್ತತ್ಪ್ರಧಾನಂ ಸಮಾವೃಣೋತ್ ॥ ೮ ॥

ಪ್ರಧಾನೇನಾವೃತಾತ್ತಸ್ಮಾದಹಂಕಾರೋ ವ್ಯಜಾಯತ ।
ವೈಕಾರಿಕಸ್ತೈಜಸಶ್ಚ ಭೂತಾದಿಶ್ಚೈವ ತಾಮಸಃ ॥ ೯ ॥

ತ್ರಿವಿಧೋಽಯಮಹಂಕಾರೋ ಯೋ ಜಾತೋ ಮಹತೋಽಗ್ರತಃ ।
ಭೂತಾನಾಮಿಂದ್ರಿಯಾಣಾಂ ಚ ಸ ವೈ ಹೇತುಃ ಸನಾತನಃ ॥ ೧೦ ॥

ಸ ಮಹಾಂಸ್ತಮಹಂಕಾರಂ ಜಾತಮಾತ್ರಂ ಸಮಾವೃಣೋತ್ ।
ತನ್ಮಾತ್ರಾಣಿ ತತಃ ಪಂಚ ಜಜ್ಞಿರೇಽಸ್ಮಾತ್ಸಮಾವೃತಾತ್ ॥ ೧೧ ॥

ಪ್ರಥಮಂ ಶಬ್ದತನ್ಮಾತ್ರಂ ಸ್ಪರ್ಶತನ್ಮಾತ್ರಮಂತರಂ ।
ತೃತೀಯಂ ರೂಪತನ್ಮಾತ್ರಂ ರಸತನ್ಮಾತ್ರಮೇವ ಚ ॥ ೧೨ ॥

---

೮. ಈಶ್ವರೇಚ್ಛೆಯಿಂದ ಪ್ರೇರಿಸಲ್ಪಟ್ಟ ಪ್ರಕೃತಿಯಿಂದ ಮೊದಲು ಮಹತತ್ತ್ವವು ಜನಿಸಿತು. ಆ ಮಹತತ್ತ್ವವನ್ನು ಪ್ರಧಾನವು ತಿರುಗಿ ವ್ಯಾಪಿಸಿತು.

೯. ಆಗ ಪ್ರಧಾನದಿಂದ ವ್ಯಾಪಿಸಿರುವ ಮಹತತ್ತ್ವದಿಂದ ವೈಕಾರಿಕ, ತೈಜಸ, ತಾಮಸಗಳೆಂಬ ತ್ರಿಗುಣಪ್ರಧಾನವಾದ ಭೂತಾದಿಗಳೆಂಬ ಮೂರುವಿಧವಾದ ಅಹಂಕಾರತತ್ತ್ವವು ಜನಿಸಿದುವು.

೧೦. ಹೀಗೆ ಮಹತತ್ತ್ವದಿಂದ ಮೊದಲು ಜನಿಸಿದ ಮೂರುವಿಧವಾದ ಅಹಂಕಾರತತ್ತ್ವವೇ ಪಂಚಭೂತಗಳಿಗೂ, ಇಂದ್ರಿಯಗಳಿಗೂ ಕಾರಣವು.

೧೧. ಅಹಂಕಾರತತ್ತ್ವವು ಹುಟ್ಟಿದೊಡನೆಯೇ ಅದನ್ನು ಮಹತತ್ತ್ವವು ಆವರಿಸಿತು. ಆಗ ಆ ಅಹಂಕಾರದಿಂದ ಐದು ಸೂಕ್ಷ್ಮಭೂತಗಳು ಜನಿಸಿದುವು.

೧೨. ಮೊದಲು ಶಬ್ದತನ್ಮಾತ್ರವೆಂಬ ಸೂಕ್ಷ್ಮಭೂತವೂ, ಅಮೇಲೆ ಸ್ಪರ್ಶತನ್ಮಾತ್ರವೂ, ಮೂರನೆಯದಾದ ರೂಪತನ್ಮಾತ್ರವೂ, ನಾಲ್ಕನೆಯದಾದ ರಸತನ್ಮಾತ್ರವೂ, ಐದನೆಯದಾದ ಗಂಧತನ್ಮಾತ್ರವೂ ಎಂಬ ಐದು ಸೂಕ್ಷ್ಮಭೂತಗಳು ಕ್ರಮವಾಗಿ ಜನಿಸಿದುವು.

ಪಂಚಮಂ ಗಂಧತನ್ಮಾತ್ರಮೇತಾನಿ ಕ್ರಮಶೋಽಭವನ್ ।
ಪ್ರತ್ಯೇಕಂ ಸರ್ವತನ್ಮಾತ್ರಮಹಂಕಾರಃ ಸಮಾವೃಣೋತ್ ॥ ೧೩ ॥

ಸಸರ್ಜ ಶಬ್ದತನ್ಮಾತ್ರಾದಾಕಾಶಂ ಶಬ್ದಲಕ್ಷಣಂ ।
ಶಬ್ದಮಾತ್ರಂ ತಥಾಕಾಶಂ ಭೂತಾದಿಃ ಸ ಸಮಾವೃಣೋತ್ ॥ ೧೪ ॥

ಶಬ್ದತನ್ಮಾತ್ರಸಹಿತಾತ್ಸ್ಪರ್ಶತನ್ಮಾತ್ರತಸ್ತತಃ ।
ವಾಯುಃ ಸಮಭವತ್ಸ್ಪರ್ಶಗುಣಶಬ್ದಸಮನ್ವಿತಃ ॥ ೧೫ ॥

ಆಕಾಶವಾಯುಸಂಯುಕ್ತಾದ್ರೂಪತನ್ಮಾತ್ರತಸ್ತತಃ
ತೇಜಃ ಸಮಭವದ್ದೀಪ್ತಂ ಸರ್ವತಸ್ತದವರ್ಧತ ॥ ೧೬ ॥

ತಚ್ಛಬ್ದವತ್ಸ್ಪರ್ಶವಚ್ಚ ರೂಪವಚ್ಚ ವ್ಯಜಾಯತ ।
ತತೋ ವಿಯದ್ವಾಯುತೇಜೋಯುಕ್ತಾತ್ತ್ವೋಯಂ ಸಸರ್ಜ ಹ ॥ ೧೭ ॥

---

೧೩. ಆ ಐದು ಸೂಕ್ಷ್ಮಭೂತಗಳನ್ನು ಅಹಂಕಾರವು ಪ್ರತ್ಯೇಕವಾಗಿ ಆವರಿಸಿತು. ಆಗ ಶಬ್ದತನ್ಮಾತ್ರದಿಂದ ಶಬ್ದವೆಂಬ ಗುಣವುಳ್ಳ ಆಕಾಶವು ಜನಿಸಿತು.

೧೪-೧೫. ಆ ಶಬ್ದಗುಣವುಳ್ಳ ಆಕಾಶವನ್ನು ಭೂತಾದಿಯೆಂಬ ಅಹಂಕಾರವು ಆವರಿಸಿತು. ಆಗ ಶಬ್ದತನ್ಮಾತ್ರದಿಂದ ಕೂಡಿದ, ಸ್ಪರ್ಶತನ್ಮಾತ್ರದಿಂದ ಸ್ಪರ್ಶ ಮತ್ತು ಶಬ್ದಗಳುಳ್ಳ ವಾಯುವು ಜನಿಸಿತು.

೧೬. ಆಕಾಶ ಮತ್ತು ವಾಯುಗಳಿಂದ ಕೂಡಿದ ರೂಪತನ್ಮಾತ್ರದಿಂದ ಪ್ರಕಾಶಮಾನವಾದ ತೇಜಸ್ಸು ಜನಿಸಿತು. ಅದು ಎಲ್ಲೆಡೆಯಲ್ಲಿಯೂ ವೃದ್ಧಿಹೊಂದಿತು. ಆ ತೇಜಸ್ಸು, ಶಬ್ದ, ಸ್ಪರ್ಶ, ಮತ್ತು ರೂಪಗಳುಳ್ಳದಾಗಿ ಜನಿಸಿತು.

೧೭. ಆಮೇಲೆ ಆಕಾಶ, ವಾಯು, ತೇಜಸ್ಸು ಇವುಗಳಿಂದ ಕೂಡಿದ ರಸತನ್ಮಾತ್ರದಿಂದ ಜಲವು ಜನಿಸಿ ಎಲ್ಲೆಡೆಯಲ್ಲಿಯೂ ಹರಡಿತು.

ರಸತನ್ಮಾತ್ರತಃ ಸಮ್ಯಕ್ತೇನ ವ್ಯಾಪ್ತಂ ಸಮಂತತಃ ।
ತೋಯಾನ್ಯಾಧಾರಶಕ್ತಿರ್ಯಾ ವಿಷ್ಣೋರಮಿತತೇಜಸಃ ॥ ೧೮ ॥

ಸಾ ದಧ್ರೇಽಥ ನಿರಾಧಾರಾಣ್ಯಲಿನಾಂದೋಲಿತಾನಿ ವೈ ।
ತೇಷು ಬೀಜಂ ಪ್ರಥಮತಃ ಸಸರ್ಜ ಪರಮೇಶ್ವರಃ ॥ ೧೯ ॥

ತದಂಡಮಭವದ್ಧೈಮಂ ಸಹಸ್ರಾಂಶುಸಮಪ್ರಭಂ ।
ಮಹದಾದಿವಿಶೇಷಾಂತೈರಾವೃತಂ ಸರ್ವತೋ ವೃತಂ ॥ ೨೦ ॥

ವಾರಿವಹ್ನ್ಯನಿಲಾಕಾಶೈಸ್ತಮೋಭೂತಾದಿನಾ ಬಹಿಃ ।
ವೃತಂ ದಶಗುಣೈರಂಡಂ ಭೂತಾದಿರ್ಮಹತಾ ತಥಾ ॥ ೨೧ ॥

ಬೀಜಂ ಯಥಾ ಬಾಹ್ಯದಲೈರ್ವ್ಯಾಪ್ತಮಂಡಂ ತಥಾ ಪುನಃ ।
ತೋಯಾದಿಭಿಸ್ತಥಾ ವ್ಯಾಪ್ತಂ ಬ್ರಹ್ಮಾಂಡಮತುಲಂ ದ್ವಿಜಾಃ ॥ ೨೨ ॥

---

೧೮. ಆಧಾರವಿಲ್ಲದೆ ವಾಯುವಿನಿಂದ ಕ್ಷೋಭಿಸಲ್ಪಟ್ಟ ಜಲವನ್ನು ತುಂಬಾ ಶಕ್ತಿವಂತನಾದ ವಿಷ್ಣುವಿನ ಆಧಾರಶಕ್ತಿಯು ಧರಿಸಿತು.

೧೯. ಆ ಜಲದಲ್ಲಿ ಪರಮೇಶ್ವರನು ಮೊದಲೊಂದು ಬೀಜವನ್ನು ಸೃಜಿಸಿದನು. ಆ ಬೀಜವು ಸೂರ್ಯನಂತೆ ಪ್ರಕಾಶಮಾನವಾದ ಸುವರ್ಣಮಯ ಗೋಳವಾಯಿತು.

೨೦-೨೧. ಮಹತ್ತತ್ತ್ವವೇ ಮೊದಲಾದ ಕಾರಣಗಳಿಂದ ಜನಿಸಿದ ಆ ಗೋಳವು, ಸುತ್ತಲೂ ಜಲ, ಅಗ್ನಿ, ವಾಯು, ಆಕಾಶ, ತಮಸ್ಸು, ಅಹಂಕಾರ, ಮಹತ್ತತ್ತ್ವ ಮುಂತಾದುವುಗಳಿಂದ ವ್ಯಾಪಿಸಲ್ಪಟ್ಟಿತು.

೨೨. ಸಾಮಾನ್ಯವಾದ ಬೀಜವನ್ನು ಹೊರಗೆ ಎಲೆ ಮುಂತಾದುವುಗಳು ಹೇಗೆ ವ್ಯಾಪಿಸಿರುವುವೋ ಅದರಂತೆ ಆ ದೊಡ್ಡ ಗೋಳವನ್ನು ಜಲ ಮೊದಲಾದವುಗಳು ವ್ಯಾಪಿಸಿದುವು.

ತದಂಡಮಧ್ಯೇ ಸ್ವಯಮೇವ ವಿಷ್ಣು-
ರ್ಬ್ರಹ್ಮಸ್ವರೂಪಂ ವಿನಿಧಾಯ ಕಾಯಂ ।
ದಿವ್ಯೇನ ಮಾನೇನ ಸ ವರ್ಷಮೇಕಂ ।
ಸ್ಥಿತೋಽಗ್ರಹೀದ್ಬೀಜಗಣಂ ಸ್ವಬುದ್ಧ್ಯಾ ॥ ೨೩ ॥

ಧ್ಯಾನೇನ ಚಾಂಡಂ ಸ್ವಯಮೇವ ಕೃತ್ವಾ
ದ್ವಿಧಾ ಸ ತಸ್ಥೌ ಕ್ಷಣಮಾತ್ರಮಸ್ಮಿನ್ ।
ತದೈವ ತನ್ಮಾತ್ರಗಣೈಃ ಸಮಸ್ತೈ
ರ್ಗಂಧೋತ್ತರೈರ್ಭೂರಮುನೈವ ಸೃಷ್ಟಾ ॥ ೨೪ ॥

ಸ್ಪರ್ಶಸ್ಯ ಶಬ್ದಸ್ಯ ಸಮಸ್ತರೂಪ
ಗುಣಸ್ಯ ಗಂಧಸ್ಯ ರಸಸ್ಯ ಚೈಷಾ
ಆಧಾರಭೂತಾ ಸಕಲೈಃ ಕೃತಾ ಯ-
ತ್ತನ್ಮಾತ್ರವರ್ಗೈರಖಿಲಾ ಧರಿತ್ರೀ ॥ ೨೫ ॥

---

೨೩. ಆ ಬ್ರಹ್ಮಾಂಡದ ಮಧ್ಯದಲ್ಲಿ ವಿಷ್ಣುವು ತನ್ನ ಬ್ರಹ್ಮರೂಪವಾದ ಶರೀರವನ್ನಿಟ್ಟು ದೇವಗಣನೆಯಂತೆ ಒಂದು ವರ್ಷ ಪರ್ಯಂತ ಆ ಗೋಳದಲ್ಲಿಯೇ ಇದ್ದು, ಅದರಲ್ಲಿರುವ ಬೀಜಗಳನ್ನೆಲ್ಲಾ ತನ್ನ ಬುದ್ಧಿಯಿಂದ ಸ್ವೀಕರಿಸಿದನು.

೨೪. ಮುಂದೆ ಆ ವಿಷ್ಣುವು ಧ್ಯಾನದಿಂದ ಆ ಗೋಳವನ್ನು ಎರಡುಭಾಗ ಮಾಡಿ ಸ್ವಲ್ಪಹೊತ್ತು ಹಾಗೆಯೇ ಇದ್ದನು. ಬಳಿಕ ಗಂಧತನ್ಮಾತ್ರವೇ ಪ್ರಧಾನವಾಗಿಯೂ, ಮಿಕ್ಕ ತನ್ಮಾತ್ರಗಳಿಂದಲೂ ಕೂಡಿದುದಾಗಿಯೂ ಇರುವ ಭೂಮಿಯನ್ನು ಸೃಜಿಸಿದನು.

೨೫. ಸ್ಪರ್ಶತನ್ಮಾತ್ರವೇ ಮೊದಲಾದ ಸಕಲ ಸೂಕ್ಷ್ಮಭೂತಗಳಿಂದಲೂ ಈ ಭೂಮಿಯು ಜನಿಸಿತು. ಆದ್ದರಿಂದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ಗುಣಗಳೆಲ್ಲವೂ ಭೂಮಿಯಲ್ಲಿ ಇರುತ್ತದೆ.

ಜಾತಸ್ತದುತ್ಥೈಃ ಕನಕಾಚಲೋಽಸೌ
ಜರಾಯುಭಿಃ ಪರ್ವತಸಂಚಯೋಽಭೂತ್ ।।
ಗರ್ಭಾದಿಕೈಃ ಸಪ್ತಪಯೋಧಯಸ್ತು
ಸ್ಕಂಧದ್ವಯೇನ ತ್ರಿದಶಾಲಯೋಽಭೂತ್ ॥ ೨೬ ॥

ಸ್ಕಂಧದ್ವಯೇನಾಪರದೇಶಜೇನ
ಸಪ್ತಾಭವನ್ನಾಗಗೃಹಾಣಿ ತಾನಿ ।
ಪಾತಾಲಸಂಜ್ಞಾನಿ ಮಹಾಸುಖಾನಿ
ಯತ್ರ ಸ್ವಯಂ ಸ್ಯಾತ್ಪರತೋ ಮಹೇಶಃ ॥ ೨೭ ॥

ತೇಜೋಗಣಾತ್ತಸ್ಯ ಬಭೂವ ಲೋಕೋ
ಯೋಽಸೌ ಮಹರ್ಲೋಕ ಇತಿ ಶ್ರುತೋಽಭೂತ್ ।
ಜನಾಹ್ವಯೋಽಭೂನ್ಮರುತೋಽಥ ಗರ್ಭಾ-
ದ್ಧ್ಯಾನಾತ್ತಪೋಲೋಕವರೋ ಬಭೂವ ॥ ೨೮ ॥

---

೨೬. ಆ ಗೋಳಶರೀರದ ಅಗ್ರಭಾಗದಿಂದ ಮೇರುಪರ್ವತವಾಯಿತು. ಗರ್ಭವನ್ನು ಸುತ್ತಿಕೊಂಡಿರುವ ಜರಾಯುವಿನಿಂದ ಮಿಕ್ಕ ಬೆಟ್ಟಗಳು ಜನಿಸಿದುವು. ಮಧ್ಯ ಭಾಗದಿಂದ ಏಳು ಸಮುದ್ರಗಳಾದುವು. ಒಂದು ಭಾಗದ ಶಾಖೆಗಳೆರಡರಿಂದ ಸ್ವರ್ಗವು ಆಯಿತು.

೨೭. ಇನ್ನೊಂದು ಭಾಗದ ಶಾಖೆಗಳೆರಡರಿಂದ ಏಳು ಪಾತಾಳಲೋಕಗಳು ಆದುವು. ಸುಖಮಯವಾದ ಆ ಲೋಕಗಳಲ್ಲಿ ಸಾಕ್ಷಾತ್ತಾಗಿ ಪರಮೇಶ್ವರನೇ ಯಾವಾಗಲೂ ಸನ್ನಿಹಿತನಾಗಿರುವನು.

೨೮. ಆ ಬ್ರಹ್ಮಾಂಡದಲ್ಲಿರುವ ತೇಜಸ್ಸುಗಳಿಂದ ಮಹರ್ಲೋಕವಾಯಿತು. ವಾಯುಗರ್ಭದಿಂದ ಜನೋಲೋಕವಾಯಿತು. ವಿಷ್ಣುವಿನ ಧ್ಯಾನದಿಂದ ತಪೋಲೋಕವು ಆಯಿತು.

ಅಂಡೋರ್ಧ್ವಗತ್ಯಾಮಭವತ್ತು ಸತ್ಯಂ
ಬ್ರಹ್ಮಾಂಡಖಂಡೋಪರಿ ವಿಷ್ಣುರಚ್ಯುತಃ ।
ಪರಂ ಪದಂ ಯನ್ನಿಗದಂತಿ ಧೀರಾ
ಯಜ್ಜ್ಞಾನಗಮ್ಯಂ ಪರಿನಿಷ್ಕರೂಪಂ ॥ ೨೯ ॥

ಏವಂ ವಿಧಾಯ ಪ್ರಥಮಂ ಬಭೂವ
ವಿಷ್ಣುಸ್ವರೂಪೀ ಸ್ಥಿತಯೇ ಸ ಏವ ।
ಸ್ವಯಂ ಸಮುದ್ಧೃತತನುರ್ಯತೋಽಯಂ
ಸ್ವಭೂರಿತಿ ಖ್ಯಾತಿಮವಾಪ ವಿಷ್ಣುಃ ॥ ೩೦ ॥

ತತೋಽಭವದ್ಯಜ್ಞವರಾಹರೂಪೀ
ವಿಷ್ಣುರ್ಭುವಃ ಪ್ರೋದ್ಧರಣಾಯ ಪೀನಃ ।
ನಿಮಜ್ಜಮಾನಾಂ ಪೃಥಿವೀಂ ಸ ಮಧ್ಯೇ
ಭಿತ್ವಾ ಗತೋ ಧರ್ತುಮಧೋಽತಿವೇಗಾತ್ ॥ ೩೧ ॥

---

೨೯. ಆ ಬ್ರಹ್ಮಾಂಡದ ಮೇಲುಪ್ರದೇಶದಲ್ಲಿ ಸತ್ಯಲೋಕವಾಯಿತು. ಅದಕ್ಕಿಂತಲೂ ಮೇಲೆ ಶ್ರೇಷ್ಠವಾದ ಗತಿಯೆಂದೂ, ಜ್ಞಾನದಿಂದ ಮಾತ್ರವೇ ತಿಳಿಯಲ್ಪಡತಕ್ಕದ್ದೆಂದೂ, ಪರಮಪದವೆಂದೂ, ಪಂಡಿತರು ಹೇಳುವಂಥ ತನ್ನ ರೂಪದಿಂದ ವಿಷ್ಣುವು ಇರುವನು.

೩೦. ಹೀಗೆ ಜಗತ್ತನ್ನು ಕಲ್ಪಿಸಿ, ಆ ವಿಷ್ಣುವು ಅದರ ಪಾಲನೆಗಾಗಿ ತಾನೇ ತಿರುಗಿ ಶರೀರವನ್ನು ಸ್ವೀಕರಿಸಿದುದರಿಂದ ತಾನಾಗಿಯೇ ಜನಿಸಿದವನು ಎಂದು ಪ್ರಸಿದ್ಧಿಯನ್ನು ಪಡೆದನು.

೩೧-೩೨. ಅನಂತರ ಆ ವಿಷ್ಣುವು ಜಲರಾಶಿಯಲ್ಲಿ ಮುಳುಗುತ್ತಿರುವ ಭೂಮಿಯನ್ನು ಧರಿಸಲೋಸುಗ ಆದಿವರಾಹರೂಪವನ್ನು ಧರಿಸಿ, ಜಲರಾಶಿಯನ್ನು ಭೇದಿಸಿಕೊಂಡು ತುಂಬಾ ವೇಗದಿಂದ ಬಹಳ ದೂರದವರಿಗೂ ಕೆಳಕ್ಕೆ ಹೋಗಿ, ತನ್ನ ಕೋರೆ

ದಂಷ್ಟ್ರಾಗ್ರದೇಶೇ ವಿನಿಧಾಯ ಪೃಥ್ವೀಂ
ಸ ಉದ್ಗತಃ ಸರ್ವಮತೀತ್ಯ ತೋಯಂ ।
ತತೋಽಭವತ್ಸಪ್ತಫಣಾನ್ವಿತೋಽಯ
ಮನಂತಮೂರ್ತಿಃ ಪೃಥಿವೀಂ ವಿಧರ್ತುಂ ॥ ೩೨ ॥

ಪ್ರಸಾರ್ಯ ಶೇಷೋಽಪಿ ಫಣಾಃ ಸ ವೈಷ
ಮಧ್ಯೇ ನಿಧಾಯೈಕಫಣಾಂ ಧರಿತ್ರೀಂ ।
ದಧಾರ ತೋಯೋಪರಿ ತೋಯಸಂಸ್ಥಿತ-
ಸ್ತತೋಽತ್ಯಜದ್ಯಜ್ಞವರಾಹ ಉರ್ವೀಂ ॥ ೩೩ ॥

ಪ್ರಸಾದಿತಾಃ ಫಣಾಃ ಸರ್ವಾಸ್ತಾಸಾಮೇಕಾತ್ತು ಪೂರ್ವತಃ ।
ಅಪರಾ ಪಶ್ಚಿಮಾಯಾಂ ತು ದಕ್ಷಿಣೋತ್ತರಯೋಃ ಪರೇ ।
ಏಕಾ ಗತಾ ಫಣೈಶಾನ್ಯಾಮಾಗ್ನೇಯ್ಯಾಮಪರಾ ದಿಶಿ ॥ ೩೪ ॥

ಪೃಥ್ವೀಮಧ್ಯೇ ಸ್ಥಿತಾ ಚೈಕಾ ನೈರ್ಋತ್ಯಾಂ ತಸ್ಯ ವೈ ತನುಃ ।
ಶೂನ್ಯಾ ದಿಗ್ವಾಯವೀ ತತ್ರ ತತೋ ನಮ್ರಾ ಸ್ಥಿತಾ ಕ್ಷಿತಿಃ ॥ ೩೫ ॥

ದಾಡೆಗಳಲ್ಲಿ ಭೂಮಿಯನ್ನಿಟ್ಟುಕೊಂಡು ಮೇಲಕ್ಕೆ ಬಂದನು. ಅನಂತರ ಆ ಭೂಮಿಯನ್ನು ಧರಿಸಲು ಏಳು ಹೆಡೆಗಳುಳ್ಳ ಸರ್ಪರಾಜ ರೂಪವನ್ನು ಧರಿಸಿದನು.

೩೩. ಆ ಆದಿಶೇಷನು ತನ್ನ ಹೆಡೆಗಳನ್ನು ಹರಡಿ, ಮಧ್ಯದ ಒಂದು ಹೆಡೆಯಿಂದ ಭೂಮಿಯನ್ನು ಧರಿಸಿದನು. ಆಗ, ಜಲದಲ್ಲಿ ನಿಂತು ಭೂಮಿಯನ್ನು ಧರಿಸಿದ್ದ ಆದಿವರಾಹನು ಶೇಷನ ಶಿರಸ್ಸಿನಲ್ಲಿ ಭೂಮಿಯನ್ನಿಟ್ಟನು.

೩೪-೩೫. ಆ ಆದಿಶೇಷನು ಪೂರ್ವದಿಕ್ಕಿಗೆ ಒಂದು ಹೆಡೆಯನ್ನು ಚಾಚಿದನು. ಇನ್ನೊಂದನ್ನು ಪಶ್ಚಿಮದಿಕ್ಕಿಗೂ ಮತ್ತೆರಡನ್ನು ದಕ್ಷಿಣ ಮತ್ತು ಉತ್ತರದಿಕ್ಕುಗಳಿಗೂ ಚಾಚಿದನು. ಒಂದು ಹೆಡೆಯು ಈಶಾನ್ಯದಿಕ್ಕಿಗೂ ಮತ್ತೊಂದು ಆಗ್ನೇಯದಿಕ್ಕಿಗೂ ಹೋಯಿತು. ಇನ್ನೊಂದು ಹೆಡೆಯು ಭೂಮಿಯ ಮಧ್ಯದಲ್ಲಿ ನೈರುತ್ಯದಿಕ್ಕಿನಲ್ಲಿರುವುದು. ವಾಯವ್ಯದಿಕ್ಕಿನಲ್ಲಿ ಒಂದು ಹೆಡೆಯೂ ಇರುವುದಿಲ್ಲ. ಆದಕಾರಣ ಆ ದಿಕ್ಕಿನ ಭೂಮಿಯು ಯಾವಾಗಲೂ ಹಳ್ಳವಾಗಿರುವುದು.

ಸ ತು ದೀರ್ಘತನುಸ್ತೋಯೇ ಯದಾನಂತೋ ನ ಚಾಶಕತ್ ।
ಕೂರ್ಮರೂಪೀ ತದಾ ಭೂತ್ವಾಽನಂತಕಾಯಮುಧಾದ್ಧರಿಃ ॥ ೩೬ ॥

ಅಧೋ ಬ್ರಹ್ಮಾಂಡಖಂಡಂ ಸ ಪದ್ಭ್ಯಾಕ್ರಮ್ಯ ಕಚ್ಛಪಃ ।
ಗ್ರೀವಾಂ ವಿತತ್ಯ ವಾಯವ್ಯಾಂ ಪೃಷ್ಠೇಽನಂತಮುಧಾರಯತ್ ॥ ೩೭ ॥

ಅನಂತಃ ಕೂರ್ಮಪೃಷ್ಠೇ ತು ನವಭಿರ್ವೇಷ್ಟನೈಸ್ತನುಂ ।
ನಿಧಾಯ ಪೃಥಿವೀಂ ದಧ್ರೇ ಸುಖೇನೈವ ಮಹಾತನುಃ ॥ ೩೮ ॥

ತತಃ ಫಣಾಸ್ವನಂತಸ್ಯ ಚಲಂತೀ ಪೃಥಿವೀ ಸ್ಥಿತಾ ।
ವರಾಹಃ ಕರ್ತುಮಚಲಾಮಚಲಾಮಕರೋದ್ದೃಢಾಂ ॥ ೩೯ ॥

ಮೇರುಂ ಖುರಪ್ರಹಾರೇಣ ಪ್ರಕೃತ್ಯ ಪೃಥಿವೀತಲಂ ।
ನ್ಯಖನತ್ಸ ವಿವೇಶಾಥ ಪೃಥ್ವೀಂ ಭಿತ್ವಾಂತರಂ ತತಃ ॥ ೪೦ ॥

---

೩೬. ದೀರ್ಘವಾದ ಶರೀರವುಳ್ಳ ಆದಿಶೇಷನು ಆ ಜಲರಾಶಿಯಲ್ಲಿ ಭೂಮಿಯನ್ನು ಧರಿಸಲಶಕ್ತನಾಗಲು, ಹರಿಯು ಆಗ ಕೂರ್ಮರೂಪವನ್ನು ತಾಳಿ, ಜಲದಲ್ಲಿ ಆದಿಶೇಷನನ್ನು ತಾನೇ ಧರಿಸಿದನು.

೩೭. ಆ ಕೂರ್ಮವು ಬ್ರಹ್ಮಾಂಡದ ಕೆಳಭಾಗವನ್ನೆಲ್ಲ ತನ್ನ ಕಾಲುಗಳಿಂದ ಆಕ್ರಮಿಸಿ ವಾಯವ್ಯದಿಕ್ಕಿನಲ್ಲಿ ತನ್ನ ಕತ್ತನ್ನು ವಿಸ್ತರಿಸಿ ಮಧ್ಯಭಾಗದಿಂದ ಆದಿಶೇಷನನ್ನು ಧರಿಸಿತು.

೩೮. ಆಗ ದೊಡ್ಡ ಶರೀರವುಳ್ಳ ಆದಿಶೇಷನು ಆ ಕೂರ್ಮದ ಬೆನ್ನಿನಮೇಲೆ ನಿಂತು ತನ್ನ ಏಳು ಹೆಡೆಗಳಿಂದ ಸುಖವಾಗಿ ಭೂಮಿಯನ್ನು ಧರಿಸಿದನು.

೩೯-೪೦. ಆದರೂ ಆದಿಶೇಷನ ಹೆಡೆಗಳಲ್ಲಿ ಭೂಮಿಯು ಸರಿಯಾಗಿ ನಿಲ್ಲದೆ ಅಲುಗಾಡುತ್ತಿತ್ತು. ಆಗ ಆದಿವರಾಹವು ಅದನ್ನು ಚಲಿಸದಂತೆ ದೃಢವಾಗಿ ನಿಲ್ಲಿಸಲು ತನ್ನ ಗೊರಸುಗಳಿಂದ ಭೂಮಿಯನ್ನು ಭೇದಿಸಿ ಮೇರುಪರ್ವತವನ್ನು ಆ ಭೂಮಿಯಲ್ಲಿ ಹೂಳಿತು.

ಯೋಜನಾನಾಂ ಸಹಸ್ರಾಣಿ ಷೋಡಶೈವ ರಸಾತಲಂ ।
ಪ್ರವಿವೇಶ ಮಹಾಶೈಲೋ ವರಾಹಾಂಘ್ರಿಪ್ರಹಾರತಃ ॥ ೪೧ ॥

ದ್ವಾತ್ರಿಂಶತ್ತು ಸಹಸ್ರಾಣಿ ಯೋಜನಾನಾಂ ತು ವಿಸ್ತೃತಂ ।
ಮೇರೋಃ ಶಿರೋಽಭವತ್ತೇನ ಪ್ರಹಾರೇಣ ದ್ವಿಜೋತ್ತಮಾಃ ॥ ೪೨ ॥

ಮರ್ಯಾದಾಪರ್ವತಾನಸ್ಯ ಪಾರ್ಶ್ವೇ ಪೋತ್ರೀ ತದಾಽಕರೋತ್ ।
ಯಥಾ ಚಲತಿ ನೈವೈಷ ಪರ್ವತಃ ಪೃಥಿವೀಧರಃ ॥ ೪೩ ॥

ಹಿಮವತ್ಪ್ರಭೃತೀನಾಂ ಚ ಭಾಗಂ ಭಾಗಂ ಸಪಂಚಮಂ ।
ಪದಾ ಕ್ಷಿತ್ಯಂತರಂ ಚಕ್ರೇ ತದುಚ್ಛ್ರಾಯಪ್ರಮಾಣತಃ ॥ ೪೪ ॥

ತತೋ ಬ್ರಹ್ಮಾ ವರಾಹಾಯ ನಮಸ್ಕೃತ್ಯ ಮಹೌಜಸೇ ।
ಅರ್ಧನಾರೀಶ್ವರಂ ಕಾಯಾದ್ದೇವದೇವಂ ವ್ಯಜಾಯತ ॥ ೪೫ ॥

ಪ್ರಥಮಂ ಜಾತಮಾತ್ರಃ ಸ ಪ್ರರುರೋದ ಮಹಾಸ್ವನಃ
ಕಿಂ ರೋದಿಷೀತಿ ತಂ ಬ್ರಹ್ಮಾ ರುದಂತಂ ಪ್ರತ್ಯುವಾಚ ಹ ॥ ೪೬ ॥

೪೧-೪೨. ಆದಿವರಾಹದ ಗೊರಸಿನ ಪೊಡೆತದಿಂದ ಆ ಮೇರುಪರ್ವತವು ಹದಿನಾರುಸಾವಿರ ಯೋಜನದಷ್ಟು ಪಾತಾಳಕ್ಕೆ ಹೋಯಿತು ಮತ್ತು ಅದರಲ್ಲಿ ಮೂವತ್ತೆರಡುಸಾವಿರ ಯೋಜನ ವಿಸ್ತಾರವಾದ ಶಿಖರಗಳಾದುವು.

೪೩-೪೪. ಪೃಥಿವಿಯನ್ನು ಧರಿಸಿರುವ ಆ ಮೇರುಪರ್ವತವು ಚಲಿಸದಿರುವಂತೆ ಮಾಡಲು, ಆದಿವರಾಹವು ಅದರ ಸುತ್ತಲೂ ಬೇರೆಬೇರೆ ಪರ್ವತಗಳನ್ನೂ ಸ್ಥಾಪಿಸಿತು. ಮತ್ತು ಆರೀತಿ ಹೂಳಿದ ಹಿಮಾಲಯವೇ ಮೊದಲಾದ ಪರ್ವತಗಳ ಮೇಲಳತೆಯ ಐದನೆಯ ಒಂದು ಭಾಗವು ಭೂಮಟ್ಟದಿಂದ ಕೆಳಭಾಗದಲ್ಲಿರುವುದು.

೪೫. ಆಮೇಲೆ ಬ್ರಹ್ಮನು ವಿಷ್ಣುರೂಪಿಯಾದ ಮಹಾತೇಜಸ್ವಿಯಾದ ವರಾಹಕ್ಕೆ ನಮಸ್ಕರಿಸಿ, ತನ್ನ ಶರೀರದಿಂದ ಅರ್ಧನಾರೀಶ್ವರನನ್ನು ಸೃಜಿಸಿದನು.

೪೬-೪೭. ಹುಟ್ಟಿದೊಡನೆಯೇ ಆ ದೇವನು ಘಟ್ಟಿಯಾಗಿ ಅಳತೊಡಗಿದನು. ಆಗ ಬ್ರಹ್ಮನು ಏಕೆ ಅಳುವೆ ಎಂದು ಕೇಳಲು, ಆ ದೇವನು, ತನಗೆ ಸರಿಯಾದ ಹೆಸ

ನಾಮ ದೇಹೀತಿ ತಂ ಸೋಽಥ ಪ್ರತ್ಯುವಾಚ ಮಹೇಶ್ವರಃ ।
ರುದ್ರನಾಮಾ ರೋದನಾತ್ತ್ವಂ ಮಾ ರೋದೀಸ್ತ್ವಂ ಮಹಾಶಯ ॥ ೪೭ ॥

ಏವಮುಕ್ತಃ ಪುನಃ ಸೋಽಥ ಸಪ್ತವಾರಾನ್ರುರೋದ ಸಃ ।
ತತೋಽಪರಾಣಿ ನಾಮಾನಿ ಸಪ್ತ ಬ್ರಹ್ಮಾಽಕರೋತ್ಪುನಃ ॥ ೪೮ ॥

ಶರ್ವಂ ಭವಂ ಚ ಭೀಮಂ ಚ ಮಹಾದೇವಂ ಚತುರ್ಥಕಂ ।
ಪಂಚಮಂ ಚೋಗ್ರಮೀಶಾನಂ ಷಷ್ಠಂ ಪಶುಪತಿಂ ಪರಂ ॥ ೪೯ ॥

ಮಯಾ ಯಥಾ ವಿಭಕ್ತೋಸ್ತ್ವಂ ತಥಾತ್ಮಾ ಸ್ವೋ ವಿಭಜ್ಯತಾಂ ।
ತ್ವಯಾಪಿ ಭೂರಿಸೃಷ್ಟ್ಯರ್ಥಂ ಭವಾಂಶ್ಚಾಪಿ ಪ್ರಜಾಪತಿಃ ॥ ೫೦ ॥

ತತೋ ಬ್ರಹ್ಮಾದ್ವಿಧಾ ಭೂತ್ವಾ ಪುರುಷೋರ್ಧೇಽನ ಸೋಽಭವತ್।
ಅರ್ಧೇನ ನಾರೀ ತಸ್ಯಾಂ ತು ವಿರಾಜಮಸೃಜತ್ಪ್ರಭುಃ ॥ ೫೧ ॥

ರನ್ನು ಕಲ್ಪಿಸೆಂದು ಹೇಳಿದನು. ಆಗ ಬ್ರಹ್ಮನು ಅವನಿಗೆ ಎಲೈ ಬುದ್ಧಿಶಾಲಿಯೇ ! ನೀನು ಹುಟ್ಟಿದೊಡನೆಯೇ ರೋದನಮಾಡಿದುದರಿಂದ ನಿನಗೆ “ರುದ್ರ” ನೆಂದು ಹೆಸರಾಗಲಿ ಇನ್ನು ನೀನು ಅಳಬೇಡವೆಂದು ಹೇಳಿ ಸಮಾಧಾನಪಡಿಸಿದನು.

೪೮-೫೦. ಹೀಗೆ ಹೇಳಿದರೂ ಆ ರುದ್ರನು ತಿರುಗಿ ಏಳುಸಾರಿ ರೋದಿಸಿದನು. ಆದುದರಿಂದ ತಿರುಗಿ ಬ್ರಹ್ಮನು ಅವನಿಗೆ ಏಳು ಹೆಸರುಗಳನ್ನು ಕಲ್ಪಿಸಿದನು. ಮೊದಲನೆಯ ಹೆಸರು ಶರ್ವನೆಂದೂ, ಎರಡನೆಯದು ಭವ, ಮೂರನೆಯದು ಭೀಮ, ನಾಲ್ಕನೆಯದು ಮಹಾದೇವ, ಐದನೆಯದು ಉಗ್ರ, ಆರನೆಯದು ಈಶಾನ, ಏಳನೆಯದು ಪಶುಪತಿ. ಈರೀತಿಯಾಗಿ ಏಳು ಹೆಸರುಗಳನ್ನು ಕಲ್ಪಿಸಿ ಬಳಿಕ ಅವನನ್ನು ಕುರಿತು ಎಲೈ ರುದ್ರನೇ ! ನಾನು ನಿನ್ನನ್ನು ಹೇಗೆ ಹೆಸರುಗಳಿಂದ ವಿಭಾಗಿಸಿದೆನೋ ಅದರಂತೆ ನೀನು ಸೃಷ್ಟಿಗಾಗಿ ನಿನ್ನ ಸ್ವರೂಪವನ್ನು ಬೇರೆಬೇರೆ ವಿಭಾಗಮಾಡಿಕೋ. ನನ್ನಂತೆ ನೀನೂ ಅನೇಕ ಸೃಷ್ಟಿಗಳನ್ನು ಮಾಡುವುದರಿಂದ ನೀನು ಪ್ರಜೆಗಳಿಗೆ ಒಡೆಯನು.

೫೧-೫೨. ಆಮೇಲೆ ಬ್ರಹ್ಮನು ತನ್ನ ಶರೀರವನ್ನು ಸ್ತ್ರೀಪುರುಷರೂಪವಾದ ಎರಡು ಭಾಗಗಳಾಗಿ ಮಾಡಿ ಆ ಸ್ತ್ರೀಯಲ್ಲಿ ವಿರಾಟ್ಪುರುಷನನ್ನು ಸೃಜಿಸಿ ಎಲೈ ಪ್ರಜಾ

ತಮಾಹ ಭಗವಾನ್ಬ್ರಹ್ಮಾ ಕುರು ಸೃಷ್ಟಿಂ ಪ್ರಜಾಪತೇ ।
ತಪಸ್ತಪ್ತ್ವಾ ವಿರಾಟ್ಸೋಽಪಿ ಮನುಂ ಸ್ವಾಯಂಭುವಂ ತತಃ ॥ ೫೨ ॥

ಸಸರ್ಜ ಸೋಽಪಿ ತಪಸಾ ಬ್ರಹ್ಮಾಣಂ ಪರ್ಯತೋಷಯತ್ ।
ತೋಷಿತಸ್ತೇನ ಮನಸಾ ದಕ್ಷಂ ಸೃಷ್ಟ್ಯೈ ಸಸರ್ಜ ಸಃ ॥ ೫೩ ॥

ಸೃಷ್ಟೇ ದಕ್ಷೇಣ ದಶಧಾ ಪ್ರಣತೋ ಮನುನಾ ವಿಧಿಃ ।
ಪುನರೇವ ಸುತಾನನ್ಯಾನ್ಸಸರ್ಜ ದಶ ಮಾನಸಾನ್ ॥ ೫೪ ॥

ಮರೀಚಿಮತ್ರ್ಯಂಗಿರಸೌ ಪುಲಸ್ತ್ಯಂ ಪುಲಹಂ ಕ್ರತುಂ ।
ಪ್ರಚೇತಸಂ ವಸಿಷ್ಠಂ ಚ ಭೃಗುಂ ನಾರದಮೇವ ಚ ॥ ೫೫ ॥

ಏತಾನುತ್ಪಾದ್ಯ ಮನಸಾ ಮನುಂ ಸ್ವಾಯಂಭುವಂ ಪುನಃ ।
ಯೂಯಂ ಸೃಜಧ್ವಮಿತ್ಯುಕ್ತ್ವಾ ಲೋಕೇಶೋಽನ್ತರ್ದಧೇ ಪುನಃ ॥ ೫೬ ॥

ಪತಿಯೇ ! ಸೃಷ್ಟಿಯನ್ನು ಮಾಡು ಎಂದು ಅವನಿಗೆ ಹೇಳಿದನು. ಆಗ ವಿರಾಟನು ತಪಸ್ಸನ್ನು ಮಾಡಿ ಸ್ವಾಯಂಭುವೆಂಬ ಮನುವನ್ನು ಸೃಜಿಸಿದನು.

೫೩. ಆ ಸ್ವಾಯಂಭುವಮನುವೂ ಸಹ ಬ್ರಹ್ಮನನ್ನು ತಪಸ್ಸಿನಿಂದ ಸಂತೋಷಗೊಳಿಸಿದನು. ಆಗ ಸಂತುಷ್ಟನಾದ ಬ್ರಹ್ಮನು, ಮುಂದೆ ಸೃಷ್ಟಿಸುವುದಕ್ಕಾಗಿ ದಕ್ಷ ಬ್ರಹ್ಮನನ್ನು ತನ್ನ ಮನಸ್ಸಿನಿಂದ ಸೃಜಿಸಿದನು.

೫೪-೫೬ ದಕ್ಷನು ಜನಿಸಿದಮೇಲೆ ತಿರುಗಿ ಮನುವು ಬ್ರಹ್ಮನನ್ನು ಹತ್ತುಬಾರಿ ತಪಸ್ಸಿನಿಂದ ಸಂತೋಷಗೊಳಿಸಲು, ಆಗ ಬ್ರಹ್ಮನು ತಿರುಗಿ ಹತ್ತುಜನ ಮಾನಸಪುತ್ರರನ್ನು ಸೃಷ್ಟಿಸಿದನು. ಮರೀಚಿ, ಅತ್ರಿ, ಅಂಗಿರಸ್ಸು, ಪುಲಸ್ತ್ಯ, ಪುಲಹ, ಕ್ರತು, ಪ್ರಜೇತಸ, ವಸಿಷ್ಠ, ಭೃಗು, ನಾರದ ಎಂಬುದಾಗಿ ಈ ಹತ್ತುಜನಗಳೇ ಮಾನಸ ಪುತ್ರರು. ಈ ಮಾನಸಪುತ್ರರನ್ನು ಸೃಜಿಸಿ ಬ್ರಹ್ಮನು, ಅವರನ್ನೂ ಸ್ವಾಯಂಭುವ ಮನುವನ್ನೂ ಕುರಿತು, ಇನ್ನು ನೀವು ಸೃಷ್ಟಿಸುವ ಕಾರ್ಯವನ್ನು ಕೈಗೊಳ್ಳಬಹುದೆಂದು ಹೇಳಿ ಅಲ್ಲಿಯೇ ಅಂತರ್ಧಾನನಾದನು.

ವರಾಹೋಽಪ್ಯಥ ಪೋತ್ರೇಣ ಖನಿತ್ವಾ ಸಪ್ತ ಸಾಗರಾನ್ ।
ಪೃಥಿವ್ಯಾಂ ವಲಯಾಕಾರಾನ್ತ್ಸಸರ್ಜ ಪರಮೇಶ್ವರಃ ॥ ೫೭ ॥

ಸಪ್ತಧಾ ಭ್ರಮಣೇನಾಸೌ ಸೃಷ್ಟ್ವಾ ಸಪ್ತಾಥ ಸಾಗರಾನ್ ।
ಸಪ್ತದ್ವೀಪಾನವಚ್ಛಿದ್ಯ ಪೃಥಿವ್ಯಂತಂ ತತೋಽ ಗತಃ ॥ ೫೮ ॥

ಲೋಕಾಲೋಕಾಹ್ವಯಂ ಶೈಲಂ ಕೃತ್ವಾ ಪೃಥ್ವ್ಯಾಸ್ತು ವೇಷ್ಟನಂ ।
ಲಕ್ಷದ್ವಯೋಚ್ಛ್ರಿತಂ ಮಾನಾದ್ಯೋಜನಾನಾಂ ಸಮಂತತಃ ॥ ೫೯ ॥

ಸುದೃಢಂ ಸ್ಥಾಪಯಾಮಾಸ ಭಿತ್ತಿಸ್ಥಾಂತೇ ಯಥಾ ಗೃಹಂ ।
ಆದಿಸೃಷ್ಟಿರಿಯಂ ವಿಪ್ರಾಃ ಕಥಿತಾ ಭವತಾಂ ಮಯಾ ॥ ೬೦ ॥

ಪ್ರತಿಸರ್ಗಮಹಂ ವಕ್ಷ್ಯೇ ತಚ್ಛೃಣ್ವಂತು ಮಹರ್ಷಯಃ ।

॥ ಇತಿ ಶ್ರೀ ಕಾಲಿಕಾಪುರಾಣೇ ಷಡ್ವಿಂಶೋಽಧ್ಯಾಯಃ ॥

---

೫೭. ಅನಂತರ ಪರಮೇಶ್ವರಸ್ವರೂಪಿಯಾದ ಆದಿವರಾಹವು ತನ್ನ ದಾಡೆಗಳಿಂದ ಭೂಮಿಯನ್ನು ಮಂಡಲಾಕಾರವಾಗಿ ಅಗೆದು ಸಪ್ತಸಮುದ್ರಗಳನ್ನು ಸೃಜಿಸಿತು.

೫೮-೫೯. ಏಳುಬಾರಿ ಭ್ರಮಣದಿಂದ ಸಪ್ತಸಮುದ್ರಗಳನ್ನೂ, ಏಳು ದ್ವೀಪಗಳನ್ನೂ ನಿರ್ಮಿಸಿ, ಭೂಮಿಯ ಕೊನೆಗೆ ಹೋಗಿ ಅಲ್ಲಿ ಎರಡುಲಕ್ಷ ಯೋಜನ ಎತ್ತರವಾಗಿರುವ ಲೋಕಾಲೋಕ ಎಂಬ ಪರ್ವತವು, ಮನೆಗೆ ಗೋಡೆಯಿರುವಂತೆ ಭೂಮಿಯನ್ನು ಸುತ್ತಿಕೊಂಡು ಹಿಡಿದುಕೊಂಡಿರುವಂತೆ ದೃಢವಾಗಿಮಾಡಿ, ಆ ಬೆಟ್ಟವೇ ಲೋಕಕ್ಕೆ ಗಡಿಯಾಗಿರುವಂತೆ ಅದನ್ನು ಅಲ್ಲಿ ಸ್ಥಾಪನೆಮಾಡಿತು.

೬೦. ಎಲೈ ಬ್ರಾಹ್ಮಣರೇ ! ಇದು ಮೊದಲನೆಯ ಸೃಷ್ಟಿಯು, ಇದನ್ನು ನಿಮಗೆ ಹೇಳಿರುವೆನು. ಇನ್ನು ಪ್ರತಿ ಕಲ್ಪಗಳಲ್ಲಿಯೂ ನಡೆಯುವ ಸೃಷ್ಟಿಯನ್ನು ಹೇಳುವೆನು ಕೇಳಿರಿ.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಅಥ ಶ್ರೀ ಕಾಲಿಕಾಪುರಾಣೇ ಸಪ್ತವಿಂಶೋಽಧ್ಯಾಯಃ ॥

ಇಪ್ಪತ್ತೇಳನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ವಾರಾಹೋಽಯಂ ಶ್ರುತಃ ಸರ್ಗೋ ವರಾಹಾಧಿಷ್ಠಿತೋ ಯತಃ ।
ಪ್ರತಿಸರ್ಗಃ ಶ್ರುತಃ ಸರ್ವೈರ್ದಕ್ಷಾದ್ಯೈರ್ಯಃ ಕೃತಃ ಪೃಥಕ್ ॥ ೧ ॥

ರುದ್ರೋ ವಿರಾಣ್ಮನುರ್ದಕ್ಷೋ ಮರೀಚ್ಯಾದ್ಯಾಸ್ತು ಮಾನಸಾಃ ।
ಯಂ ಯಂ ಸರ್ಗಂ ಪೃಥಕ್ಚಕ್ರುಃ ಪ್ರತಿಸರ್ಗಶ್ಚ ಸ ಸ್ಮೃತಃ ॥ ೨ ॥

॥ ಇಪ್ಪತ್ತೇಳನೆಯ ಅಧ್ಯಾಯವು ॥

೧. ಮಾರ್ಕಂಡೇಯನು ಹೇಳಿದನು:—ಎಲೈ ಬ್ರಾಹ್ಮಣೋತ್ತಮರೇ! ಈಗ ನೀವು ಆದಿವರಾಹನಿಂದ ಆದ ವರಾಹವೆಂಬ ಸೃಷ್ಟಿಯನ್ನೂ, ದಕ್ಷಬ್ರಹ್ಮನೇ ಮೊದಲಾದವರು ಮಾಡಿದ ಬೇರೆಬೇರೆ ಸೃಷ್ಟಿಯನ್ನೂ ಕೇಳಿರುವಿರಿ.

೨. ರುದ್ರ, ವಿರಾಟ್, ಮನು, ದಕ್ಷಬ್ರಹ್ಮ, ಮರೀಚಿಯೇ ಮೊದಲಾದ ಮಾನಸಪುತ್ರರುಗಳು, ಬೇರೆಬೇರೆ ಮಾಡಿದ ಸೃಷ್ಟಿಗೆ ಪ್ರತಿಸರ್ಗವೆಂದು ಹೆಸರು.

ವಿರಾಟ್ಪುತೋಽಸೃಜದ್ವಂಶ್ಯಾನ್ಮನೂನ್ಯೈರ್ವಿತತಂ ಜಗತ್ ।
ಮನುಃ ಸಪ್ತಮನೂನ್ತ್ಸೃಷ್ಟ್ವಾ ಚಕಾರ ಬಹುಶಃ ಪ್ರಜಾಃ ॥ ೩ ॥

ಪ್ರಜಾಃ ಸಿಸೃಕ್ಷುಃ ಸ ಮನುರ್ಯೋಽಸೌ ಸ್ವಾಯಂಭುವಾಹ್ವಯಃ ।
ಅಸೃಜತ್ಪ್ರಥಮಂ ಷಡ್ವೈ ಮನೂನ್ಯೋಽಥ ಪರಾನ್ತ್ಸತಾನ್ ॥ ೪ ॥

ಸ್ವಾರೋಚಿಷಶ್ಚೌತ್ತಮಿಶ್ಚ ತಾಮಸೋ ರೈವತಸ್ತಥಾ ।
ಚಾಕ್ಷುಷಶ್ಚ ಮಹಾತೇಜಾ ವಿವಸ್ವಾನಪರಸ್ತಥಾ ॥ ೫ ॥

ಯಕ್ಷರಕ್ಷಃಪಿಶಾಚಾಂಶ್ಚ ನಾಗಗಂಧರ್ವಕಿನ್ನರಾನ್ ।
ವಿದ್ಯಾಧರಾನಪ್ಸರಸಃ ಸಿದ್ಧಾನ್ಭೂತಗಣಾನ್ಬಹೂನ್ ॥ ೬ ॥

---

೩. ವಿರಾಟ್ಪುರುಷನ ಮಗನಾದ ಸ್ವಾಯಂಭುವಮನುವು ತನ್ನ ವಂಶೀಯರಾದ ಏಳುಜನ ಮನುಗಳನ್ನು ಸೃಜಿಸಿ ತನ್ಮೂಲಕ ಅನೇಕ ಪ್ರಜೆಗಳನ್ನೂ ಸೃಷ್ಟಿಸಿದನು. ಆ ಏಳು ಮನುಗಳಿಂದಲೂ, ಅವರ ಸಂತತಿಗಳಿಂದಲೂ ಮುಂದೆ ಜಗತ್ತು ತುಂಬಿಹೋಯಿತು.

೪. ಪ್ರಜೆಗಳನ್ನು ಸೃಷ್ಟಿಸುವ ಇಚ್ಛೆಯಿಂದ ಆ ಸ್ವಾಯಂಭುವಮನುವು ಮೊದಲು ಆರುಜನ ಮನುಗಳನ್ನೂ, ಇನ್ನೂ ಕೆಲವರು ಮಕ್ಕಳನ್ನೂ ಸೃಷ್ಟಿಸಿದನು.

೫. ಸ್ವಾರೋಚಿಷ, ಔತ್ತಮಿ, ತಾಮಸ, ರೈವತ, ಚಾಕ್ಷುಷ, ಮಹಾತೇಜಸ್ವಿಯಾದ ವಿವಸ್ವಾ (ಸೂರ್ಯ) ಇವರುಗಳೇ ಸ್ವಾಯಂಭುವಮನುವು ಸೃಷ್ಟಿಸಿದ ಆರು ಜನ ಮನುಗಳು.

೬. ಯಕ್ಷರು, ರಾಕ್ಷಸರು, ಪಿಶಾಚಿಗಳು, ನಾಗ, ಗಂಧರ್ವ ಮತ್ತು ಕಿನ್ನರರು, ವಿದ್ಯಾಧರರು, ಅಪ್ಸರಸ್ತ್ರೀಯರು, ಸಿದ್ಧರು, ಅನೇಕ ಭೂತಗಣಗಳು ಇವುಗಳನ್ನೆಲ್ಲಾ ಸೃಷ್ಟಿಸಿದನು.

ಮೇಘಾನ್ಸವಿದ್ಯುತೋ ವೃಕ್ಷಾಂಲ್ಲತಾಗುಲ್ಮತೃಣಾದಿಕಾನ್ ।
ಮತ್ಸ್ಯಾನ್ಪಶೂಂಶ್ಚ ಕೀಟಾಂಶ್ಚ ಜಲಜಾನ್ ಸ್ಥಲಜಾಂಸ್ತಥಾ ॥ ೭ ॥

ಏತಾದೃಶಾನಿ ಸರ್ವಾಣಿ ಮನುಃ ಸ್ವಾಯಂಭುವಃ ಸುತೈಃ ।
ಸಹಿತಃ ಸಸೃಜೇ ಸೋಽನ್ಯಃ ಪ್ರತಿಸರ್ಗಃ ಪ್ರಕೀರ್ತಿತಃ ॥ ೮ ॥

ಅನ್ಯೇ ಷಣ್ಮನವೋ ಯೇ ಯೇ ನೈ ತೇಽಪಿ ಸ್ವೇ ಸ್ವೇಽನ್ತರೇಽನ್ತರೇ ।
ಪ್ರತಿಸರ್ಗಂ ಸ್ವಯಂ ಕೃತ್ವಾ ಪ್ರಾಪ್ನುವಂತಿ ಚರಾಚರಂ ॥ ೯ ॥

ಯಜ್ಞಸ್ಯ ಸಂಭೃತಂ ಯಜ್ಞಂ ಯೂಪಂ ಪ್ರಾಗ್ವಂಶಮೇವ ಚ ।
ಧರ್ಮಾಧರ್ಮೌ ಗುಣಾನ್ಸರ್ವಾನ್ಸರಾಹ ಇವ ಸೃಷ್ಟವಾನ್ ॥ ೧೦ ॥

ಸುತಾನ್ಬಹೂನ್ತ್ಸಮುತ್ಪಾದ್ಯ ದಕ್ಷೋ ದೇವರ್ಷಿಸತ್ತಮಾನ್ ।
ಮಹರ್ಷೀನ್ಸೋಮಪಾನೀಂಶ್ಚ ಬಹೂನ್ಪಿತೃಗಣಾಂಸ್ತಥಾ ॥ ೧೧ ॥

---

೭. ಮೇಘಗಳು, ಮಿಂಚುಗಳು ಮರಗಳು, ಲತೆಗಳು, ಸಣ್ಣ ಗಿಡಗಳು, ಹುಲ್ಲು ಮುಂತಾದುವುಗಳು, ಮೀನು, ಪಶುಗಳು, ಕ್ರಿಮಿಗಳು, ಜಲಜಂತುಗಳು, ಸ್ಥಳಜಂತುಗಳು ಇವುಗಳನ್ನೂ ಸ್ವಾಯಂಭುವಮನುವು ಸೃಜಿಸಿದನು.

೮. ಇನ್ನೂ ಇಂತಹ ಅನೇಕ ವಸ್ತುಗಳನ್ನು ಸ್ವಾಯಂಭುವಮನುವು ತನ್ನ ಮಕ್ಕಳೊಡನೆ ಸೃಜಿಸಿದನು. ಇದು ಇನ್ನೊಂದು ಪ್ರತಿಸರ್ಗವು.

೯. ಉಳಿದ ಸ್ವಾರೋಚಿಷನೇ ಮೊದಲಾದ ಮನುಗಳು ತಮ್ಮತಮ್ಮ ಮನ್ವಂತರಗಳಲ್ಲಿ, ತಾವೂ ಪ್ರತಿಸರ್ಗವನ್ನು ಮಾಡಿ ಸಕಲ ಪ್ರಪಂಚವನ್ನೂ ಸೃಷ್ಟಿಸುವರು.

೧೦. ದಕ್ಷಬ್ರಹ್ಮನು ಯಜ್ಞಸಾಮಗ್ರಿಗಳಿಂದ ಸಹಿತವಾದ ಯಜ್ಞವನ್ನೂ, ಪಶುಸ್ತಂಭವನ್ನೂ, ಪ್ರಾಗ್ವಂಶವನ್ನೂ, ಧರ್ಮ, ಅಧರ್ಮ ಮುಂತಾದ ಗುಣಗಳು ಇವೆಲ್ಲವನ್ನೂ ಆದಿವರಾಹನು ಸೃಷ್ಟಿಸಿದಂತೆಯೇ ಸೃಷ್ಟಿಸಿದನು.

೧೧. ಮತ್ತು ಆ ದಕ್ಷಬ್ರಹ್ಮನು ಅನೇಕ ಮಕ್ಕಳನ್ನೂ, ದೇವಋಷಿಶ್ರೇಷ್ಠರನ್ನೂ, ಮಹರ್ಷಿಗಳನ್ನೂ, ಸೋಮಪಾನ ಮಾಡುವಂತಹ ಶ್ರೋತ್ರಿಯರು ಮೊದಲಾದವರನ್ನೂ, ಅನೇಕ ಪಿತೃಗಣಗಳನ್ನೂ ಸೃಷ್ಟಿಸಿದನು. ಇದು ದಕ್ಷಬ್ರಹ್ಮನು ಮಾಡಿದ ಪ್ರತಿಸರ್ಗವು.

ಸೃಷ್ಟಿಂ ಪ್ರವರ್ತಯಾಮಾಸ ಪ್ರತಿಸರ್ಗೋಽಸ್ಯ ಸ ಸ್ಮೃತಃ ।
ಅಜಾಯಂತ ಮುಖಾದ್ವಿಪ್ರಾಃ ಕ್ಷತ್ರಿಯಾ ಬಾಹುಯುಗ್ಮತಃ ॥ ೧೨ ॥

ಊರ್ವೋರ್ವೈಶ್ಯಾಃ ಪದಃ ಶೂದ್ರಾಶ್ಚತುರ್ವೇದಾಶ್ಚತುರ್ಮುಖಾತ್ ।
ಬ್ರಹ್ಮಣಃ ಪ್ರತಿಸರ್ಗೋಽಯಂ ಬ್ರಾಹ್ಮಃ ಸರ್ಗಃ ಸ್ಮೃತಸ್ತತಃ ॥ ೧೩ ॥

ಮರೀಚೇಃ ಕಶ್ಯಪೋ ಜಾತಃ ಕಶ್ಯಪಾತ್ಸಕಲಂ ಜಗತ್ ।
ದೇವಾ ದೈತ್ಯಾ ದಾನವಾಶ್ಚ ತಸ್ಯ ಸರ್ಗಃ ಪ್ರಕೀರ್ತಿತಃ ॥ ೧೪ ॥

ಅತ್ರೇರ್ನೇತ್ರಾದಭೂಚ್ಚಂದ್ರಶ್ಚಂದ್ರವಂಶಸ್ತತೋಽಭವತ್ ।
ತೇನ ವ್ಯಾಪ್ತಂ ಜಗತ್ಸರ್ವಂ ಸೋಽಸ್ಯ ಸರ್ಗಃ ಪ್ರಕೀರ್ತಿತಃ ॥ ೧೫ ॥

ಅಥರ್ವಾಂಗಿರಸೀ ಕೃತ್ಯಾ ಪುತ್ರಾಶ್ಚ ಬಹುಶೋಽಪರೇ ।
ಮಂತ್ರಯಂತ್ರಾದಯೋ ಯೇ ವೈ ತೇ ಸರ್ವೇಽಙ್ಗಿರಸಃ ಸ್ಮೃತಾಃ ॥ ೧೬ ॥

೧೨-೧೩. ಅಲ್ಲದೆ, ಬ್ರಹ್ಮನ ಮುಖದಿಂದ ಬ್ರಾಹ್ಮಣರು ಜನಿಸಿದರು. ಬಾಹುಗಳಿಂದ ಕ್ಷತ್ರಿಯರು, ತೊಡೆಗಳಿಂದ ವೈಶ್ಯರೂ, ಕಾಲುಗಳಿಂದ ಶೂದ್ರರೂ, ನಾಲ್ಕು ಮುಖಗಳಿಂದ ನಾಲ್ಕು ವೇದಗಳೂ ಜನಿಸಿದುವು. ಇದು ಬ್ರಹ್ಮನ ಪ್ರತಿಸರ್ಗವು.

೧೪. ಮರೀಚಿಮುನಿಯಿಂದ ಕಶ್ಯಪಮುನಿಯು ಜನಿಸಿದನು. ಅವನಿಂದ ದೇವತೆಗಳು, ರಾಕ್ಷಸರು, ದೈತ್ಯರು ಎಲ್ಲಾ ಜಗತ್ತೂ ಜನಿಸಿದುವು. ಇದು ಕಶ್ಯಪನ ಪ್ರತಿಸರ್ಗವು.

೧೫. ಅತ್ರಿಮುನಿಯ ಕಣ್ಣಿನಿಂದ ಚಂದ್ರನು ಜನಿಸಿದನು. ಅವನಿಂದ ಚಂದ್ರವಂಶವು ಜನಿಸಿತು. ಮುಂದೆ ಅದು ಪ್ರಪಂಚದಲ್ಲೆಲ್ಲಾ ಹರಡಿತು. ಇದು ಅತ್ರಿಮುನಿಯಿಂದ ಆದ ಸೃಷ್ಟಿಯು.

೧೬. ಆಂಗಿರಸಮುನಿಯಿಂದ ಅನೇಕ ಮಕ್ಕಳುಗಳೂ, ಮಂತ್ರ, ಯಂತ್ರ ಮೊದಲಾದವುಗಳೂ ಜನಿಸಿದುವು.

ಆಜ್ಯಸಾಖ್ಯಾಃ ಪುಲಸ್ತ್ಯಸ್ಯ ಪುತ್ರಾಶ್ಚಾನ್ಯೇ ಚ ರಾಕ್ಷಸಾಃ ।
ಪ್ರತಿಸರ್ಗಂ ಪುಲಸ್ತ್ಯಸ್ಯ ಬಲವೇಗಸಮನ್ವಿತಾಃ ॥ ೧೭ ॥

ಕಾದ್ರವೇಯಾ ಗಜಾ ಅಶ್ವಾಃ ಪ್ರಜಾ ಬಹುತರಾಸ್ತಥಾ ।
ಸಸೃಜೇ ಪುಲಹೇನೈಷ ಸರ್ಗಸ್ತಸ್ಯ ಪ್ರಕೀರ್ತಿತಃ ॥ ೧೮ ॥

ಕ್ರತೋಃ ಪುತ್ರಾ ವಾಲಖಿಲ್ಯಾಃ ಸರ್ವಜ್ಞಾ ಭೂರಿತೇಜಸಃ ।
ಅಷ್ಟಾಶೀತಿಸಹಸ್ರಾಣಿ ಜ್ವಲದ್ಭಾಸ್ಕರಸಂನಿಭಾಃ ॥ ೧೯ ॥

ಪ್ರಚೇತಸಃ ಸುತಾಃ ಸರ್ವೇ ಯೇ ವೈ ಪ್ರಾಚೇತಸಾಃ ಸ್ಮೃತಾಃ ।
ಷಡಶೀತಿಸಹಸ್ರಾಣಿ ಪಾವಕೋಪಮತೇಜಸಃ ॥ ೨೦ ॥

ಸ್ವಕಾಲಿನೋ ವಸಿಷ್ಠಸ್ಯ ಪುತ್ರಾಶ್ಚಾನ್ಯೇ ಚ ಯೋಗಿನಃ ।
ಆರುಂಧತೇಯಾಃ ಪಂಚಾಶದ್ವಾಸಿಷ್ಠ ಸರ್ಗ ಉಚ್ಯತೇ ॥ ೨೧ ॥

---

೧೭. ಪುಲಸ್ತ್ಯಬ್ರಹ್ಮನಿಂದ ಆಜ್ಯಪರೆಂಬುವರೂ, ಬಲ ಮತ್ತು ವೇಗಶಾಲಿಗಳಾದ ರಾಕ್ಷಸರೂ ಜನಿಸಿದರು. ಇದು ಪುಲಸ್ತ್ಯನ ಪ್ರತಿಸರ್ಗವು.

೧೮. ಪುಲಹಬ್ರಹ್ಮನಿಂದ, ಕೆಲವು ಸರ್ಪಗಳೂ, ಆನೆ, ಕುದುರೆಗಳೂ, ಇತರ ಅನೇಕ ಪ್ರಜೆಗಳೂ ಜನಿಸಿದವು. ಇದು ಪುಲಹನ ಪ್ರತಿಸರ್ಗವು.

೧೯. ಸರ್ವಜ್ಞರೂ, ಜ್ವಲಿಸುತ್ತಿರುವ ಸೂರ್ಯನಂತೆ ತುಂಬಾ ತೇಜಸ್ವಿಗಳೂ ಆದ ಎಂಭತ್ತೆಂಟುಸಾವಿರ (೮೮,೦೦೦) ವಾಲಖಿಲ್ಯರೆಂಬ ಮುನಿಗಳು ಕ್ರತುಮುನಿಯಿಂದ ಜನಿಸಿದರು.

೨೦. ಪ್ರಚೇತಸಮುನಿಯಿಂದ ಎಂಭತ್ತಾರುಸಾವಿರ (೮೬,೦೦೦) ಜನ ಅಗ್ನಿಯಂತೆ ತುಂಬಾ ತೇಜಸ್ವಿಗಳಾದ ಪ್ರಾಚೇತಸರೆಂಬ ಮುನಿಗಳು ಜನಿಸಿದರು.

೨೧. ಸ್ವಕಾಲಿಗಳೆಂಬ ಪಿತೃಗಳೂ, ಕೆಲವರು ಯೋಗಿಗಳೂ, ಅರುಂಧತಿಯಲ್ಲಿ ಜನಿಸಿದ ಐವತ್ತುಜನ ಪುತ್ರರೂ ವಸಿಷ್ಠಮುನಿಯಿಂದ ಸೃಷ್ಟಿಸಲ್ಪಟ್ಟರು.

ಭೃಗೋಶ್ಚ ಭಾರ್ಗವಾ ಜಾತಾ ಯೇ ವೈ ದೈತ್ಯಪುರೋಧಸಃ ।
ಕವಯಸ್ತೇ ಮಹಾಸ್ಪ್ರಾಜ್ಞಾಸ್ತೈರ್ವಾ ವ್ಯಪ್ತಮಖಿಲಂ ಜಗತ್ ॥ ೨೨ ॥

ನಾರದಾತ್ತಾರಕಾ ಜಾತಾ ವಿಮಾನಾನಿ ತಥೈವ ಚ ।
ಪ್ರಶ್ನೋತ್ತರಾಸ್ತಥೈವಾನ್ಯೇ ನೃತ್ಯಗೀತಂ ಚ ಕೌತುಕಂ ॥ ೨೩ ॥

ಏತೇ ದಕ್ಷಮರೀಚ್ಯಾದ್ಯಾಃ ಕೃತದಾರಾನ್ಬಹೂನ್ಸುತಾನ್ ।
ಉತ್ಪಾದ್ಯೋತ್ಪಾದ್ಯ ಪೃಥಿವೀಂ ದಿವಂ ಚ ಸಮಪೂರಯನ್ ॥ ೨೪ ॥

ತೇಷಾಂ ಸುತೇಭ್ಯಶ್ಚ ಸುತಾಸ್ತತ್ಪುತ್ರೇಭ್ಯಃ ಪರೇ ಸುತಾಃ
ಸಮುತ್ಪನ್ನಾಃ ಪ್ರವರ್ತಂತೇ ಹ್ಯದ್ಯಾಪಿ ಭುವನೇಷು ವೈ ॥ ೨೫ ॥

---

೨೨. ಭೃಗುಮುನಿಯಿಂದ ಭಾರ್ಗವರೆಂಬುವವರು ಜನಿಸಿದರು. ಅವರೆಲ್ಲರೂ ಕವಿಗಳೂ, ತುಂಬಾ ಬುದ್ಧಿಶಾಲಿಗಳೂ ಆಗಿದ್ದರು. ರಾಕ್ಷಸರುಗಳಿಗೆ ಅವರೇ ಪುರೋಹಿತರು. ಇಂತಹ ಭಾರ್ಗವರು ಜಗತ್ತಿನಲ್ಲೆಲ್ಲಾ ಹರಡಿದರು.

೨೩. ನಾರದಮುನಿಯಿಂದ -ಕೆಲವು ನಕ್ಷತ್ರಗಳೂ, ವಿಮಾನಗಳೂ, ಪ್ರಶ್ನೆ ಮತ್ತು ಉತ್ತರಗಳೂ, ನರ್ತನ, ಗಾನ ಮೊದಲಾದ ಆನಂದ ಸಾಧನಗಳೂ ಜನಿಸಿದುವು.

೨೪. ಹೀಗೆ ದಕ್ಷ ಮತ್ತು ಮರೀಚಿಯೇ ಮೊದಲಾದ ಮಾನಸಪುತ್ರರು ಮದುವೆಯನ್ನು ಮಾಡಿಕೊಂಡು ಅನೇಕ ಮಕ್ಕಳನ್ನು ಪುನಃಪುನಃ ಉತ್ಪಾದನೆಮಾಡಿ ಭೂಲೋಕವನ್ನೂ, ಸ್ವರ್ಗವನ್ನೂ ತುಂಬಿದರು.

೨೫. ಆ ಮುನಿಗಳ ಮಕ್ಕಳುಗಳಿಂದ ಅವರ ಮಕ್ಕಳುಗಳು, ಅವರಿಂದ ಮತ್ತೆ ಮಕ್ಕಳುಗಳು, ಅವರ ಮಕ್ಕಳುಗಳು ಹೀಗೆ ಸೃಷ್ಟಿಯು ಬೆಳೆದು ಈ ಲೋಕದಲ್ಲಿ ಆ ಮಾನಸಪುತ್ರರ ಗೋತ್ರದವರೇ ತುಂಬಿರುವರು.

ವಿಷ್ಣೋಸ್ತು ಚಕ್ಷುಷೋಃ ಸೂರ್ಯೋ ಮನಸಶ್ಚಂದ್ರಮಾಃ ಸ್ಮೃತಃ ।
ಶ್ರೋತ್ರಾದ್ವಾಯುಃ ಸಮುದ್ಭೂತೋ ಮುಖಾದಗ್ನಿರಜಾಯತ ॥ ೨೬ ॥

ಪ್ರತಿಸರ್ಗೋ ಹ್ಯಯಂ ವಿಷ್ಣೋಸ್ತಥಾ ಚಾಪಿ ದಿಶೋ ದಶ ।
ಸೃಷ್ಟ್ಯರ್ಥಂ ಚಂದ್ರಮಾಃ ಪೂರ್ವಾದತ್ರಿನೇತ್ರಾದವಾತರತ್ ॥ ೨೭ ॥

ಭಾಸ್ಕರಃ ಕಶ್ಯಪಾಜ್ಜಾತೋ ಭಾರ್ಯಯಾ ಚ ಸಮನ್ವಿತಃ ।
ರುದ್ರಾಚ್ಚ ಬಹವೋ ಜಾತಾ ಭೂತಗ್ರಾಮಾಶ್ಚತುರ್ವಿಧಾಃ ॥ ೨೮ ॥

ಶ್ವವರಾಹೋಷ್ಟ್ರರೂಪಾಶ್ಚ ಪ್ಲವಗೋಮಾಯುಗೋಮುಖಾಃ ।
ಋಕ್ಷಮಾರ್ಜಾರವದನಾಃ ಸಿಂಹವ್ಯಾಘ್ರಮುಖಾಃ ಪರೇ ॥ ೨೯ ॥

ನಾನಾಶಸ್ತ್ರಧರಾಃ ಸರ್ವೇ ನಾನಾರೂಪಾ ಮಹಾಬಲಾಃ ।
ಏಷ ವಃ ಪ್ರತಿಸರ್ಗೋಽಪಿ ಕಥಿತೋ ದ್ವಿಜಸತ್ತಮಾಃ ॥ ೩೦ ॥

---

೨೬. ವಿಷ್ಣುವಿನ ಕಣ್ಣುಗಳಿಂದ ಸೂರ್ಯನೂ, ಮನಸ್ಸಿನಿಂದ ಚಂದ್ರನೂ, ಕಿವಿಯಿಂದ ವಾಯುವೂ, ಮುಖದಿಂದ ಅಗ್ನಿಯೂ ಜನಿಸಿದರು. ಮೇಲೆ ಹೇಳಿದುದೂ ದಶದಿಕ್ಕುಗಳೂ ವಿಷ್ಣುವಿನ ಸೃಷ್ಟಿಯು.

೨೭. ತಮ್ಮೇಲೆ ಚಂದ್ರನು, ತಾನು ಸೃಷ್ಟಿಸುವುದಕ್ಕಾಗಿ ಅತ್ರಿಮುನಿಯ ನೇತ್ರದಿಂದ ಜನಿಸಿದನು. ಸೃಷ್ಟಿಗಾಗಿಯೇ ಸೂರ್ಯನು ತರುಗಿ ಕಶ್ಯಪಬ್ರಹ್ಮನಿಂದ ಜನಿಸಿ ಮುಂದೆ ಪತ್ನಿಯನ್ನು ಪರಿಗ್ರಹಿಸಿದನು.

೨೮—೩೦. ರುದ್ರನಿಂದ ನಾಲ್ಕುವಿಧವಾದ ಭೂತಗಣಗಳು ಜನಿಸಿದುವು. ನಾಯಿ, ಹಂದಿ, ಒಂಟೆ, ಕಪಿ, ನರಿ, ಗೋವಿನಂತೆ ಮುಖವುಳ್ಳ ಜಿಂಕೆ ಮೊದಲಾದ ಪ್ರಾಣಿಗಳು, ಬೆಕ್ಕಿನಂತೆ ಮುಖವುಳ್ಳ ಪ್ರಾಣಿಗಳು, ಹುಲಿ, ಸಿಂಹಗಳಂತೆ ಮುಖವುಳ್ಳವುಗಳೂ ಆದ ಭೂತಗಣಂಗಳು ರುದ್ರನಿಂದ ಜನಿಸಿದುವು. ಇವರೆಲ್ಲರೂ ಅನೇಕ ಆಯುಧಗಳನ್ನು ಧರಿಸಿ, ಅನೇಕ ರೂಪವುಳ್ಳವರೂ, ಬಲಶಾಲಿಗಳೂ ಆಗಿದ್ದರು. ಇಂತಹ ಅನೇಕ ಗಣಗಳು ರುದ್ರನಿಂದ ಜನಿಸಿದರು. ಎಲೈ ಋಷಿಗಳೇ! ಹೀಗೆ ಮಾನಸಪುತ್ರರು ಮಾಡಿದ ಬೇರೆಬೇರೆ ಸೃಷ್ಟಿಗಳನ್ನು ನಿಮಗೆ ಹೇಳಿರುವೆನು.

ದೈನಂದಿನಂ ಚ ಪ್ರಲಯಂ ಶೃಣುಧ್ವಂ ಕಲ್ಪಶೇಷತಃ ॥ ೩೧ ॥

॥ ಇತಿ ಶ್ರೀ ಕಾಲಿಕಾಪುರಾಣೇ ಸಪ್ತವಿಂಶೋಽಧ್ಯಾಯಃ ॥

---

೩೧. ಇನ್ನು ಬ್ರಹ್ಮನ ಪ್ರತಿದಿನದಲ್ಲಿಯೂ ಆಗುವ ದೈನಂದಿನವೆಂಬ ಅವಾಂತರಪ್ರಳಯಕ್ರಮವನ್ನು ಹೇಳುವೆನು ಕೇಳಿರಿ.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

॥ ಓಂ ॥

॥ ಅಥ ಶ್ರೀ ಕಾಲಿಕಾಪುರಾಣೇಽಷ್ಟವಿಂಶೋಽಧ್ಯಾಯಃ ॥

ಇಪ್ಪತ್ತೆಂಟನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ಮನ್ವಂತರಂ ಮನೋಃ ಕಾಲೋ ಯಾವತ್ಪಾಲಯತೇ ಪ್ರಜಾಃ ।
ಏಕೋ ಮನಸ್ಸ ಕಾಲಸ್ತು ಮನ್ವಂತರಮಿತಿ ಶ್ರುತಂ ॥ ೧ ॥

ತದೇಕಸಪ್ತತಿಯುಗೈರ್ದೇವಾನಾಮಿಹ ಜಾಯತೇ ।
ತೈಶ್ಚತುರ್ದಶಭಿಃ ಕಲ್ಪೋ ದಿನಮೇಕಂ ತು ವೇಧಸಃ ॥ ೨ ॥

॥ ಇಪ್ಪತ್ತೆಂಟನೆಯ ಅಧ್ಯಾಯವು ॥

೧. ಮಾರ್ಕಂಡೇಯನು ಹೇಳಿದನು:—ಒಬ್ಬ ಮನುವು ಎಷ್ಟುಕಾಲದವರೆಗೆ ಪ್ರಜೆಗಳನ್ನು ಪಾಲಿಸುವನೋ ಅಲ್ಲಿಯವರೆಗಿನ ಕಾಲಕ್ಕೆ ಮನ್ವಂತರವೆಂದು ಹೆಸರು.

೨. ಎಪ್ಪತ್ತೊಂದು ದೇವಯುಗಗಳಿಗೆ ಒಂದು ಮನ್ವಂತರವಾಗುವುದು. ಇಂತಹ ಹದಿನಾಲ್ಕು ಮನ್ವಂತರಗಳಿಗೆ ಒಂದು ಕಲ್ಪವೆಂದು ಹೆಸರು. ಅದು ಬ್ರಹ್ಮನಿಗೆ ಒಂದು ಹಗಲು.

ದಿನಾಂತೇ ಬ್ರಹ್ಮಣೋ ಜಾತೇ ಸುಷುಪ್ಸಾ ತಸ್ಯ ಜಾಯತೇ ।
ಯೋಗನಿದ್ರಾ ಮಹಾಮಾಯಾ ಸಮಾಯಾತಿ ಪಿತಾಮಹಂ ॥ ೩ ॥

ನಾಭಿಪದ್ಮಂ ಪ್ರವಿಶ್ಯಾಥ ವಿಷ್ಣೋರಮಿತತೇಜಸಃ ।
ಸುಖಂ ಶೇತೇ ಸ ಭಗವಾನ್ಬ್ರಹ್ಮಾ ಲೋಕಪಿತಾಮಹಃ ॥ ೪ ॥

ತತೋ ವಿಷ್ಣುಃ ಸ್ವಯಂ ಭೂತ್ವಾ ರುದ್ರರೂಪೀ ಜನಾರ್ದನಃ ।
ಪೂರ್ವವನ್ನಾಶಯಾಮಾಸ ಸ ಸರ್ವಂ ಭುವನತ್ರಯಂ ॥ ೫ ॥

ವಾಯುನಾ ವಹ್ನಿನಾ ಸಾರ್ಧಂ ದಾಹಯಾಮಾಸ ವೈ ತಥಾ ।
ಮಹಾಪ್ರಲಯಕಾಲೇಷು ತಥಾ ಸರ್ವಂ ಜಗತ್ತ್ರಯಂ ॥ ೬ ॥

ಜನಂ ಯಾಂತಿ ಪ್ರತಾಪಾರ್ತಾ ಮಹರ್ಲೋಕನಿವಾಸಿನಃ ।
ತ್ರೈಲೋಕ್ಯದಾಹಸಮಯೇ ಪೀಡಿತಾ ದಾರುಣಾಗ್ನಿನಾ ॥ ೭ ॥

---

೩. ಅಂತಹ ಒಂದು ಹಗಲು ಕಳೆಯಲು ಬ್ರಹ್ಮನಿಗೆ ನಿದ್ರಿಸಬೇಕೆಂಬ ಇಚ್ಛೆಯುಂಟಾಗುವುದು. ಆಗ ಆದಿಮಾಯೆಯಾದ ಯೋಗನಿದ್ರೆಯು ಬಂದು ಅವನನ್ನು ಆವರಿಸುವಳು.

೪. ಅನಂತರ ಲೋಕಕ್ಕೆ ತಾತನೆನಿಸಿದ ಭಗವಾ ಬ್ರಹ್ಮನು ಮಹಾಮಹಿಮನಾದ ವಿಷ್ಣುವಿನ ನಾಭಿಕಮಲವನ್ನು ಪ್ರವೇಶಿಸಿ ಅಲ್ಲಿ ಸುಖವಾಗಿ ನಿದ್ರಿಸುವನು.

೫-೬. ಅನಂತರ ವಿಷ್ಣುವು ತಾನೇ ರುದ್ರರೂಪವನ್ನು ಧರಿಸಿ ಹಿಂದಿನಂತೆ ಎಂದರೆ ಮಹಾಪ್ರಳಯದಂತೆ ಈಗಲೂ ವಾಯುವಿನಿಂದಲೂ, ಬೆಂಕಿಯಿಂದಲೂ, ಮೂರು ಲೋಕಗಳನ್ನೂ ಭಸ್ಮಮಾಡುವನು.

೭. ಆಗ ಮೂರು ಲೋಕಗಳೂ ಭಯಂಕರವಾದ ಅಗ್ನಿಯಿಂದ ಸುಡುತ್ತಿರಲು, ಮಹರ್ಲೋಕವಾಸಿಗಳಾದ ಜನಗಳೂ ಸಹ ಆ ತಾಪದಿಂದ ಪೀಡಿತರಾಗಿ ಅಲ್ಲಿಂದ ಹೊರಟುಹೋಗುವರು.

ತತಃ ಕಾಲಾಂತಕೈರ್ಮೇಘೈರ್ನಾನಾವರ್ಣೈರ್ಮಹಾಸ್ವನೈಃ ।
ಸಮುತ್ಪಾದ್ಯ ಮಹಾವೃಷ್ಟಿಮಾಪೂರ್ಯ ಭುವನತ್ರಯಂ ॥ ೮ ॥

ಚಲತ್ತರಂಗೈಸ್ತೋಯೌಘೈರಾಧ್ರುವಸ್ಥಾನಸಂಗತೈಃ ।
ನಿಧಾಯ ಜಠರೇ ಲೋಕಾನಿಮಾಂಸ್ತ್ರೀನ್ತ್ಸ ಜನಾರ್ದನಃ ॥ ೯ ॥

ನಾಗಪರ್ಯಂಕಶಯನೇ ಶೇತೇ ಸ ಪರಮೇಶ್ವರಃ ।
ಶಯಾನನ್ನಾಭಿಕಮಲೇ ಬ್ರಹ್ಮಾಣಂ ಸ ಜಗದ್ಗುರುಃ ॥ ೧೦ ॥

ಸಂಸ್ಥಾಪ್ಯ ತ್ರೀನಿಮಾಂಲ್ಲೋಕಾನ್ದಗ್ಧ್ವಾ ಜಗ್ಧ್ವಾ ಶ್ರಿಯಾ ಸಹ ।
ಶೇತೇ ಸ ಭೋಗಿಶಯ್ಯಾಯಾಂ ಬ್ರಹ್ಮಾ ನಾರಾಯಣಾತ್ಮಕಃ ॥ ೧೧ ॥

೮-೯. ಅನಂತರ ನಾನಾವರ್ಣಗಳಿಂದ ಕೂಡಿದ ಪ್ರಳಯಕಾಲದ ಮೇಘಗಳು ಮಹಾಗರ್ಜನೆಯನ್ನು ಮಾಡುತ್ತಾ ಬಹುವಾಗಿ ಮಳೆಯನ್ನು ಸುರಿಸಿ ಮೂರು ಲೋಕಗಳನ್ನೂ ಮುಳುಗಿಸುವವು. ಎಲ್ಲೆಲ್ಲಿಯೂ ನೀರುತುಂಬಿ, ಎಡಬಿಡದೆ ಚಲಿಸುತ್ತಿರುವ ಅಲೆಗಳಿಂದ ಕೂಡಿದ ಆ ನೀರು ಧ್ರುವಮಂಡಲದವರೆಗೂ ತುಂಬುವುದು. ಆಗ ಪರಮೇಶ್ವರನು ತನ್ನ ಹೊಟ್ಟೆಯಲ್ಲಿ ಮೂರು ಲೋಕಗಳನ್ನು ಇಟ್ಟುಕೊಂಡು ಆದಿಶೇಷನಮೇಲೆ ಮಲಗುವನು.

೧೦. ಅನಂತರ ನಾರಾಯಣರೂಪನಾದ ಪರಬ್ರಹ್ಮನು ನಾಭಿಕಮಲದಲ್ಲಿ ಮಲಗಿರುವ ಲೋಕಗುರುವಾದ ಬ್ರಹ್ಮನನ್ನು ಅಲ್ಲಿಯೇ ಸ್ಥಾಪಿಸಿ, ಮೂರು ಲೋಕಗಳನ್ನೂ ದಹಿಸಿ ತನ್ನ ಉದರದಲ್ಲಿಟ್ಟುಕೊಂಡು, ಲಕ್ಷ್ಮ್ಯಾಯೊಡನೆ ಶೇಷಶಯ್ಯೆಯಲ್ಲಿ ಮಲಗುವನು.

೧೧. ಮೂರು ಲೋಕಗಳನ್ನೂ ಉದರದಲ್ಲಿಟ್ಟುಕೊಂಡ ಆಯಾಸದಿಂದ ಆ ವಿಷ್ಣುವು ಯೋಗನಿದ್ರೆಗೆ ಅಧೀನನಾದನು.

ಯೋಗನಿದ್ರಾವಶಂ ಜಾತಸ್ತ್ರೈಲೋಕ್ಯಗ್ರಾಸಬೃಂಹಿತಃ ।
ತ್ರೈಲೋಕ್ಯಮಖಿಲಂ ದಗ್ಧಂ ಯದಾ ಕಾಲಾಗ್ನಿನಾ ತದಾ ॥ ೧೨ ॥

ಅನಂತಃ ಪೃಥಿವೀಂ ತ್ಯಕ್ತ್ವಾ ವಿಷ್ಣೋರಂತಿಕಮಾಗತಃ ।
ತೇನ ತ್ಯಕ್ತಾ ತು ಪೃಥಿವೀ ಕ್ಷಣಮಾತ್ರಾದಧೋಗತಾ ॥ ೧೩ ॥

ಪತಿತಾ ಕೂರ್ಮಪೃಷ್ಠೇ ಚ ವಿಶೀರ್ಣೇವ ತದಾಽಭವತ್ ।
ಕೂರ್ಮೋಽಪಿ ಮಹತೋ ಯತ್ನಾಚ್ಚಲಂತೀಂ ಪೃಥಿವೀಂ ಜಲೇ ॥ ೧೪ ॥

ಬ್ರಹ್ಮಾಂಡಂ ಪದ್ಭ್ಯಾಕ್ರಮ್ಯ ಪೃಷ್ಠೇ ದಧ್ರೇ ಧರಾಂ ತದಾ ।
ಬ್ರಹ್ಮಾಂಡಖಂಡಸಂಯೋಗಾಚ್ಚೂರ್ಣಿತಾ ಪೃಥಿವೀ ಭವೇತ್ ॥ ೧೫ ॥

ಇತಿ ತಾಂ ಪರಿಜಗ್ರಾಹ ಕೂರ್ಮರೂಪೀ ಜನಾರ್ದನಃ ।
ಚಲಜ್ಜಲೌಘಸಂಸರ್ಗಾಚ್ಚಲಂತ್ಯಾ ಧರಯಾ ತದಾ ॥ ೧೬ ॥

೧೨—೧೪. ಪ್ರಳಯಾಗ್ನಿಯಿಂದ ಮೂರು ಲೋಕಗಳೂ ಸುಟ್ಟುಹೋದ ಕೂಡಲೆ, ಆದಿಶೇಷನು ತಾನು ಹೊತ್ತಿದ್ದ ಭೂಮಿಯನ್ನು ಬಿಟ್ಟು ವಿಷ್ಣುವಿನಲ್ಲಿಗೆ ಬಂದನು. ಆದಿಶೇಷನು ಬಿಟ್ಟಕೂಡಲೆ ಭೂಮಿಯು ಕೆಳಕ್ಕೆ ಹೋಗಿ ಕೂರ್ಮದ ಮೇಲೆ ಬಿದ್ದು ಚೂರುಚೂರಾಯಿತು. ಆಗ ವಿಷ್ಣುಸ್ವರೂಪವಾದ ಕೂರ್ಮವು ಸಹ ಬ್ರಹ್ಮಾಂಡವನ್ನು ತನ್ನ ಕಾಲುಗಳಿಂದ ಆಕ್ರಮಿಸಿ, ಜಲದಲ್ಲಿ ಚಲಿಸುತ್ತಿರುವ ಭೂಮಿಯನ್ನು ತುಂಬಾ ಪ್ರಯತ್ನದಿಂದ ತನ್ನ ಬೆನ್ನಿನ ಮೇಲೆ ಧರಿಸಿತು.

೧೫. ಏಕೆಂದರೆ, ಬ್ರಹ್ಮಾಂಡಗಳ ಸಂಬಂಧದಿಂದ ಭೂಮಿಯು ಒಡೆದು ಹೋದೀತೆಂದು ಅದನ್ನು ಕೂರ್ಮರೂಪಿಯಾದ ನಾರಾಯಣನು ಆರೀತಿ ತನ್ನ ಬೆನ್ನಿನ ಧರಿಸಿದನು.

೧೬. ನೀರಿನ ಅಲೆಗಳ ಹೊಡೆತದಿಂದ ಚಲಿಸುವ ಭೂಮಿಯನ್ನು ಹೊತ್ತಿದ್ದ ಕೂರ್ಮದ ಬೆನ್ನು ಹಳ್ಳತಿಟ್ಟುಗಳಿಂದ ನಿಬಿಡವಾಯಿತು.

ಕೂರ್ಮಪೃಷ್ಠಂ ಬಹುತರೈರ್ವರಂಡೈರ್ವಿತತೀಕೃತಂ ।
ಅನಂತಸ್ತತ್ರ ಗತ್ವಾ ತು ಯತ್ರ ಕ್ಷೀರೋದಸಾಗರಃ ॥ ೧೭ ॥

ತತ್ರ ಸ್ವಯಂ ಶ್ರಿಯಾ ಯುಕ್ತಂ ಸುಷುಪ್ಸಂತಂ ಜನಾರ್ದನಂ ।
ಫಣಯಾ ಮಧ್ಯಯಾ ದಧ್ರೇ ತ್ರೈಲೋಕ್ಯಗ್ರಾಸಬೃಂಹಿತಂ ॥ ೧೮ ॥

ಪೂರ್ವಂ ಫಣಾವಿತತ್ಯೋರ್ಧ್ವಂ ಪದ್ಮಂ ಕೃತ್ವಾ ಮಹಾಬಲಃ ।
ವಿಷ್ಣುಮಾಚ್ಛಾದಯಾಮಾಸ ಶೇಷಾಖ್ಯಃ ಪರಮೇಶ್ವರಂ ॥ ೧೯ ॥

ತಸ್ಯೋಪಧಾನಮಕರೋದನಂತೋ ದಕ್ಷಿಣಾಂ ಫಣಾಂ ।
ಉತ್ತರಾಂ ಪಾದಯೋಶ್ಚಕ್ರೇ ಉಪಧಾನಂ ಮಹಾಬಲಃ ॥ ೨೦ ॥

ಕಾಲವ್ಯಂತಂ ತದಾ ಚಕ್ರೇ ಸ ಶೇಷಃ ಪಶ್ಚಿಮಾಂ ಫಣಾಂ ।
ಸ್ವಪಂತಂ ವೀಜಯಾಮಾಸ ಶೇಷರೂಪೀ ಜನಾರ್ದನಃ ॥ ೨೧ ॥

೧೭-೧೮. ಇತ್ತ ಮೂರು ಲೋಕಗಳನ್ನು ತನ್ನ ಉದರದಲ್ಲಿಟ್ಟುಕೊಂಡಿರುವುದರಿಂದ ಆಯಾಸಗೊಂಡ ವಿಷ್ಣುವು, ಕ್ಷೀರಸಮುದ್ರದಲ್ಲಿ ಲಕ್ಷ್ಮಿಯೊಡನೆ ನಿದ್ರಿಸಬೇಕೆಂದಿರುವುದನ್ನು ತಿಳಿದು ಆದಿಶೇಷನು ಅಲ್ಲಿಗೆ ಹೋಗಿ, ತನ್ನ ಮಧ್ಯದ ಹೆಡೆಯಿಂದ ವಿಷ್ಣುವನ್ನು ಧರಿಸಿ ನಿಂತನು.

೧೯. ಮೊದಲು ಹೆಡೆಯನ್ನು ವಿಸ್ತರಿಸಿ ಪದ್ಮಾಕಾರವಾಗಿ ಮಾಡಿ ಮಹಾಬಲಶಾಲಿಯಾದ ಆದಿಶೇಷನು ಪರಮೇಶ್ವರನಾದ ವಿಷ್ಣುವನ್ನು ಆಚ್ಛಾದಿಸಿದನು.

೨೦. ದಕ್ಷಿಣ ಹೆಡೆಯನ್ನು ವಿಷ್ಣುವಿಗೆ ತಲೆದಿಂಬಾಗಿ ಮಾಡಿದನು. ಉತ್ತರ ಹೆಡೆಯನ್ನು ಅವನ ಕಾಲುಗಳಿಗೆ ದಿಂಬಾಗಿ ಮಾಡಿದನು.

೨೧. ಪಶ್ಚಿಮ ಹೆಡೆಯನ್ನು ಬೀಸಣಿಗೆಯಾಗಿ ಮಾಡಿಕೊಂಡು ಆದಿಶೇಷನು ನಿದ್ರಿಸುತ್ತಿರುವ ವಿಷ್ಣುವನ್ನು ಬೀಸತೊಡಗಿದನು.

ಶಂಖಚಕ್ರಂ ನಂದಕಾಸಿಮಿಷುಧೀ ದ್ವೇ ಬಹ್ವಾಬಲಃ ।
ಐಶಾನ್ಯಯಾಥ ಫಣಯಾ ಸ ದಧ್ರೇ ಗರುಡಂ ತಥಾ ॥ ೨೨ ॥

ಗದಾಂ ಪದ್ಮಂ ಚ ಶಾರ್ಙ್ಗಂ ಚ ತಥೈವ ವಿವಿಧಾಯುಧಂ ।
ಯಾನಿ ಚಾನ್ಯಾನಿ ತಸ್ಯಾಸನ್ನಾಗ್ನೇಯ್ಯಾ ಫಣಯಾ ದಧೌ ॥ ೨೩ ॥

ಏವಂ ಕೃತ್ವಾ ಸ್ವಕಂ ಕಾಯಂ ಶಯನೀಯಂ ತದಾ ಹರೇಃ ।
ಪೃಥ್ವೀಮಧರಕಾಯೇನ ಮಗ್ನಾಮಾಕ್ರಮ್ಯ ಚಾಂಭಸಿ ॥ ೨೪ ॥

ತ್ರೈಲೋಕ್ಯಂ ಬ್ರಹ್ಮಸಹಿತಂ ಸಲಕ್ಷ್ಮೀಕಂ ಜನಾರ್ದನಂ ।
ಸೋಽಪಾಸಂಗಂ ಜಗದ್ಬೀಜಂ ಜಗತ್ಕಾರಣಕಾರಣಂ ॥ ೨೫ ॥

ನಿತ್ಯಾನಂದಂ ವೇದಮಯಂ ಬ್ರಹ್ಮಣ್ಯಂ ಪರಮೇಶ್ವರಂ ।
ಜಗತ್ಕಾರಣಕರ್ತಾರಂ ಜಗತ್ಕಾರಣಕಾರಣಂ ॥ ೨೬ ॥

೨೨-೨೩. ವಿಷ್ಣುವಿನ ಶಂಖ, ಚಕ್ರ, ನಂದಕವೆಂಬ ಖಡ್ಗ, ಎರಡು ಬತ್ತಳಿಕೆ, ಗರುಡ ಇವುಗಳನ್ನು ಬಲಿಷ್ಠನಾದ ಆದಿಶೇಷನು ತನ್ನ ಈಶಾನ್ಯದಿಕ್ಕಿನ ಹೆಡೆಯಿಂದಲೂ ಧರಿಸಿದನು. ಗದೆ, ಪದ್ಮ, ಶಾರ್ಙ್ಗವೆಂಬ ಧನಸ್ಸು ಮತ್ತು ಇತರ ಅನೇಕ ಆಯುಧಗಳು ಇವೆಲ್ಲವನ್ನೂ ಆಗ್ನೇಯದಿಕ್ಕಿನ ಹೆಡೆಯಿಂದಲೂ ಧರಿಸಿದನು.

೨೪. ಆದಿಶೇಷನು ತನ್ನ ಶರೀರವನ್ನು ವಿಷ್ಣುವು ಮಲಗುವುದಕ್ಕೆ ಅನುಕೂಲವಾದ ಶಯನವಾಗಿ ಮಾಡಿ, ಕೆಳಶರೀರದಿಂದ ನೀರಿನಲ್ಲಿ ಮುಳಗಿರುವ ಭೂಮಿಯನ್ನು ಆಕ್ರಮಿಸಿ ನಿಂತನು.

೨೫—೨೭. ಈರೀತಿಯಾಗಿ ಆದಿಶೇಷನು ಮೂರು ಲೋಕಗಳನ್ನೂ, ಬ್ರಹ್ಮ, ಲಕ್ಷ್ಮಿ ಇವರುಗಳಿಂದ ಸಹಿತವಾದ ವಿಷ್ಣುವನ್ನೂ ಧರಿಸಿದನು. ಆ ವಿಷ್ಣುವಾದರೋ ಜಗತ್ತಿಗೆ ಕಾರಣನು. ಜಗತ್ಸೃಷ್ಟಿಗೆ ಕಾರಣವಾದ ಮಹದಾದಿತತ್ತ್ವಗಳಿಗೂ ಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನಿಗೂ ಸಹ ಮೂಲಕಾರಣನು. ಯಾವಾಗಲೂ ಆನಂದಸ್ವರೂಪನು. ವೇದಗಳ ಸ್ವರೂಪನು. ಬ್ರಹ್ಮನೇ ಮೊದಲಾದ ದೇವತೆಗಳಿಗೆ ಕಾರಣಕರ್ತನು ಮತ್ತು ಅವರಿಗೆ ಒಡೆಯನು. ಭೂತಭವಿಷ್ಯದ್ವರ್ತಮಾನಗಳನ್ನು

ಭೂತಭವ್ಯಭವಂ ನಾಥಂ ಪರಾಪರಗತಿಂ ಹರಿಂ ।
ದಧಾರ ಶಿರಸಾ ತಂ ತು ಸ್ವಯಮೇವ ಸ್ವಕಾಂ ತನುಂ ॥ ೨೭ ॥

ಏವಂ ಬ್ರಹ್ಮದಿನಸ್ಯೈವ ಪ್ರಮಾಣೇನ ನಿಶಾಂ ಹರಿಃ ।
ಸಂಧ್ಯಾಂ ಚ ಸಮಭಿವ್ಯಾಪ್ಯ ಶೇತೇ ನಾರಯಣೋಽವ್ಯಯಃ ॥ ೨೮ ॥

ಯಸ್ಮಾದಯಂ ತು ಪ್ರಲಯೋ ಬ್ರಹ್ಮಣಃ ಸ್ಯಾದ್ದಿನೇ ದಿನೇ ।
ತಸ್ಮಾದ್ದೈನಂದಿನಮಿತಿ ಖ್ಯಾಪಯಂತಿ ಪುರಾವಿದಃ ॥ ೨೯ ॥

ವ್ಯತೀತಾಯಾಂ ನಿಶಾಯಾಂ ತು ಬ್ರಹ್ಮಾ ಲೋಕಪಿತಾಮಹಃ ।
ತ್ಯಕ್ತ್ವಾ ನಿದ್ರಾಂ ಸಮುತ್ತಸ್ಥೌ ಸ ಪುನಃ ಸೃಷ್ಟಯೇ ಹಿತಃ ॥ ೩೦ ॥

ತ್ರೈಲೋಕ್ಯಂ ತೋಯಸಂಪೂರ್ಣಂ ಶಯಾನಂ ಪುರುಷೋತ್ತಮಂ ।
ನಿರೀಕ್ಷ್ಯ ವೈಷ್ಣವೀಂ ಮಾಯಾಂ ಮಹಾಮಾಯಾಂ ಜಗನ್ಮಯಾಂ ॥ ೩೧ ॥

ತಿಳಿದಿರುವವನು. ಪರಾಪರಸ್ವರೂಪನು. ಇಂತಹ ವಿಷ್ಣುವನ್ನು ಆದಿಶೇಷನು ಕ್ಷೀರ ಸಮುದ್ರದಲ್ಲಿ ಧರಿಸಿ ನಿಂತನು.

೨೮. ಹೀಗೆ ಬ್ರಹ್ಮನ ಹಗಲಿನಷ್ಟೆ ಪ್ರಮಾಣವುಳ್ಳ ಸಂಧ್ಯೆಯೂ ಸೇರಿ ಆಗುವ ರಾತ್ರಿಯಲ್ಲಿ ನಿತ್ಯನಾದ ನಾರಾಯಣನು ಮಲಗಿ ನಿದ್ರಿಸುವನು.

೨೯. ಈ ಪ್ರಳಯವು ಬ್ರಹ್ಮನ ಪ್ರತಿದಿವಸಗಳಲ್ಲೂ ಆಗುವುದರಿಂದ ಇದನ್ನು ದೈನಂದಿನ ಪ್ರಳಯವೆಂದು ತಿಳಿದವರು ಹೇಳುವರು.

೩೦-೩೧. ರಾತ್ರಿಯು ಕಳೆಯಲು, ಲೋಕಪಿತಾಮಹನಾದ ಬ್ರಹ್ಮನು ನಿದ್ರೆಯಿಂದೆಚ್ಚೆತ್ತು, ತಿರುಗಿ ಸೃಷ್ಟಿಮಾಡಬೇಕೆಂಬ ಇಚ್ಛೆಯಾಗಲು, ಮೂರು ಲೋಕಗಳೂ ನೀರಿನಿಂದ ತುಂಬಿರುವುದನ್ನೂ, ನಾರಾಯಣನು ನಿದ್ರಿಸುತ್ತಿರುವುದನ್ನೂ ನೋಡಿ, ಜಗದ್ರೂಪಳೂ, ವಿಷ್ಣುವಿನ ಶರೀರವನ್ನೆಲ್ಲಾ ವ್ಯಾಪಿಸಿರುವವಳೂ, ವಿಷ್ಣುಮಾಯಾ ಸ್ವರೂಪಳೂ ಆದ ಯೋಗನಿದ್ರೆಯನ್ನು ಹೀಗೆ ಸ್ತುತಿಸಿದನು.

ಯೋಗನಿದ್ರಾಂ ಸ ತುಷ್ಟಾವ ಹರೇರಂಗೇಷು ಸಂಸ್ಥಿತಾಂ ।

॥ ಬ್ರಹ್ಮೋವಾಚ ॥

ಜಿತಶಕ್ತಿಂ ನಿರ್ವಿಕಾರಾಂ ಪರಬ್ರಹ್ಮಸ್ವರೂಪಿಣೀಂ ॥ ೩೨ ॥

ಪ್ರಣಮಾಮಿ ಮಹಾಮಾಯಾಂ ಯೋಗನಿದ್ರಾಂ ಸನಾತನೀಂ ।
ತ್ವಂ ವಿದ್ಯಾ ಯೋಗಿನಾಂ ದೇವಿ ತ್ವಂ ಗತಿಸ್ತ್ವಂ ಮತಿಃ ಸ್ತುತಿಃ ॥ ೩೩ ॥

ತ್ವಂ ಸೃಷ್ಟಿಸ್ತ್ವಂ ಸ್ಥಿತಿಃ ಸ್ವಾಹಾ ಸ್ವಧಾ ತ್ವಮಿಹ ಗೀತಿಕಾ ।
ತ್ವಂ ಸಾಮಗೀತಿಸ್ತ್ವಂ ನೀತಿಸ್ತ್ವಂ ಹ್ರೀಃ ಶ್ರೀಸ್ತ್ವಂ ಸರಸ್ವತೀ ॥ ೩೪ ॥

ಯೋಗನಿದ್ರಾ ಮಹಾಮಾಯಾ ಮೋಹನಿದ್ರಾ ತ್ವಮೀಶ್ವರೀ ।
ತ್ವಂ ಕಾಂತಿಃ ಸರ್ವಶಕ್ತಿಸ್ತ್ವಂ ತ್ವಂ ತನುರ್ವೈಷ್ಣವೀ ಶಿವಾ ॥ ೩೫ ॥

---

೩೨. ಓ ದೇವಿ! ನೀನು ಜ್ಞಾನಶಕ್ತಿಗಳ ಸ್ವರೂಪಳು, ವಿಕಾರಗಳಿಲ್ಲದವಳು, ಪರಬ್ರಹ್ಮಸ್ವರೂಪಳು, ಮಹಾಮಾಯೆಯೆಂದೂ, ಯೋಗನಿದ್ರೆಯೆಂದೂ ಪ್ರಸಿದ್ಧಳಾದವಳು, ಆದ್ಯಂತರಹಿತಳು, ಇಂತಹ ನಿನ್ನನ್ನು ನಮಸ್ಕರಿಸುವೆನು.

೩೩. ಓ ದೇವಿ! ನೀನು ಯೋಗಿಗಳಿಗೆ ಯೋಗವಿದ್ಯೆಯು. ಗತಿ, ಬುದ್ಧಿ, ಸ್ತುತಿ, ಸೃಷ್ಟಿ, ಸ್ಥಿತಿ ಇವುಗಳ ಸ್ವರೂಪಳು, ಯಜ್ಞದಲ್ಲಿ ದೇವತೆಗಳಿಗೆ ಹವಿರ್ಭಾಗವನ್ನು ಅರ್ಪಿಸುವ ಸ್ವಾಹಾಕಾರವೂ, ಪಿತೃಗಳಿಗೆ ಕವ್ಯವನ್ನು ವಹಿಸುವ ಸ್ವಧಾಕಾರವೂ, ಭಕ್ತರು ಸ್ತೋತ್ರಮಾಡುವ ಗಾನವೂ ಸಹ ನೀನೇ ಆಗಿರುವೆ.

೩೪. ಸಾಮಗಾನವೂ ನೀತಿ ಲಜ್ಜೆಗಳೂ ನೀನೇ. ಸರಸ್ವತಿಯೂ, ಯೋಗನಿದ್ರೆಯೂ, ಜನಗಳನ್ನು ಮೋಹಗೊಳಿಸುವ ನಿದ್ರೆಯೂ, ಜಗದೊಡೆಯಳೂ ಎಲ್ಲವೂ ನೀನೇ ಆಗಿರುವೆ.

೩೫-೩೬. ನೀನು ಕಾಂತಿರೂಪಳೂ, ಸಮಸ್ತ ಶಕ್ತಿಗಳ ಸ್ವರೂಪಳೂ ಆಗಿರುವೆ. ವಿಷ್ಣುವಿನ ವೈಷ್ಣವೀಶಕ್ತಿ ಯಾವುದುಂಟೋ ಮತ್ತು ಪ್ರಾಣಿಗಳಲ್ಲಿ ನೆಲಸಿರುವ

ತ್ವಂ ಧಾತ್ರೀ ಸರ್ವಲೋಕಾನಾಮವಿದ್ಯಾ ತ್ವಂ ಶರೀರಿಣಾಂ ।
ಆಧಾರಶಕ್ತಿಸ್ತ್ವಂ ದೇವೀ ತ್ವಂ ಹಿ ಬ್ರಹ್ಮಾಂಡಧಾರಿಣೀ ॥ ೩೬ ॥

ತ್ವಮೇವ ಸರ್ವಜಗತಾಂ ಪ್ರಕೃತಿಸ್ತ್ರಿಗುಣಾತ್ಮಿಕಾ ।
ತ್ವಂ ಸಾವಿತ್ರೀ ಚ ಗಾಯತ್ರೀ ಸೌಮ್ಯಾಽಸೌಮ್ಯಾ ಚ ಶೋಭನಾ ॥ ೩೭ ॥

ತ್ವಂ ಸಿಸೃಕ್ಷಾ ಹರೇರ್ನಿತ್ಯಾ ಸುಷುಪ್ಸಾ ತ್ವಂ ಸುಷುಪ್ತಿಕಾ ।
ಪುಷ್ಟಿರ್ಲಜ್ಜಾ ಕ್ಷಮಾ ಶಾಂತಿಸ್ತ್ವಂ ಧೃತಿಃ ಪರಮೇಶ್ವರೀ ॥ ೩೮ ॥

ತ್ವಮೇವ ಕ್ಷಿತಿರೂಪೇಣ ಧ್ರಿಯಸೇ ಸಚರಾಚರಂ ।
ತ್ವಮಾಪಸ್ತ್ವಮಪಾಂ ಮಾತಾ ಸರ್ವಾಂತರ್ಗತಚಾರಿಣೀ ॥ ೩೯ ॥

ಅವಿದ್ಯೆಯೆಂಬ ಅಜ್ಞಾನ ಯಾವುದುಂಟೋ ಅದೆಲ್ಲವೂ ನಿನ್ನ ಸ್ವರೂಪವೇ ಆಗಿರುವುದು. ಸಕಲ ಜಗತ್ತನ್ನೂ ನೀನೇ ಧರಿಸಿರುವೆ.

೩೭. ನೀನು ಸಾವಿತ್ರಿಯೂ, ಗಾಯಿತ್ರೀದೇವಿಯೂ, ಶಾಂತಸ್ವರೂಪಳೂ, ಕೋಪಸ್ವಭಾವದವಳೂ, ಮಂಗಳರೂಪಳೂ ಆಗಿರುವೆ. ಹರಿಯು ಸೃಷ್ಟಿಸುವ ಇಚ್ಛೆಯೂ, ನಿದ್ರಿಸುವ ಇಚ್ಛೆಯೂ, ನಿದ್ರೆಯೂ ನೀನಲ್ಲದೆ ಬೇರೆಯಲ್ಲ.

೩೮. ಬೆಳವಣಿಗೆಯೂ, ಲಜ್ಜೆ, ಸಹನೆ, ಶಾಂತಿ, ಧೈರ್ಯ, ಇವುಗಳೆಲ್ಲವೂ ನೀನೇ. ಓ ಪರಮೇಶ್ವರಿ! ಭೂಮಿಯ ರೂಪದಿಂದ ಚರಾಚರಾತ್ಮಕವಾದ ಸಕಲ ವಸ್ತುಗಳನ್ನೂ ನೀನು ಧರಿಸಿರುತ್ತೀಯೆ.

೩೯. ಜಲವೂ, ಜಲಗಳಿಗೆ ಮಾತೃಸ್ಥಾನವೂ ನೀನೇ. ನೀನು ಎಲ್ಲರಲ್ಲಿಯೂ ಅಂತರ್ಯಾಮಿಯಾಗಿ ನೆಲಸಿರುವವಳು. ಸ್ತೋತ್ರ, ಸ್ತುತಿಸಲ್ಪಡುವ ವಸ್ತು, ಸ್ತೋತ್ರಮಾಡುವ ಭಕ್ತ, ಸ್ತುತಿಸುವ ಶಕ್ತಿ ಇವೆಲ್ಲವೂ ಬೇರೆಬೇರೆಯಾಗಿ ತೋರುತ್ತಿದ್ದರೂ ಇವೆಲ್ಲವೂ ನಿನ್ನ ಸ್ವರೂಪಗಳೇ ಹೊರತು ಬೇರೆಯಲ್ಲ.

ಸ್ತುತಿಃ ಸ್ತುತ್ಯಾ ಚ ಸ್ತೋತ್ರೀ ಚ ಸ್ತುತಿಶಕ್ತಿಸ್ತ್ವಮೇವ ಚ
ತ್ವಾಮಹಂ ಕಿಂ ನು ಸ್ತೋಷ್ಯಾಮಿ ಪ್ರಸೀದ ಪರಮೇಶ್ವರಿ ॥ ೪೦ ॥

ನಮಸ್ತುಭ್ಯಂ ಜಗನ್ಮಾತಃ ಪ್ರಬೋಧಯ ಜನಾರ್ದನಂ ।
ಏವಂ ಸ್ತುತಾ ಮಹಾಮಾಯಾ ಬ್ರಹ್ಮಣಾ ಲೋಕಕಾರಿಣಾ ॥ ೪೧ ॥

ನೇತ್ರಾಸ್ಯನಾಸಿಕಾಬಾಹುಹೃದಯಾನ್ನಿರ್ಗತಾ ಹರೇಃ
ರಾಜಸೀಂ ಮೂರ್ತಿಮಾಶ್ರಿತ್ಯ ಸಾ ತಸ್ಥೌ ಬ್ರಹ್ಮದರ್ಶನೇ ॥ ೪೨ ॥

ತತೋ ಜನಾರ್ದನೋ ಭೋಗಿಶಯನಾನ್ನಿದ್ರಯಾ ಕ್ಷಣಾತ್ ।
ಪರಿತ್ಯಕ್ತೇ ಸಮುತ್ತಸ್ಥೌ ಸೃಷ್ಟಯೇ ಚಾಕರೋನ್ಮತಿಂ ॥ ೪೩ ॥

ತತೋ ವರಾಹರೂಪೇಣ ನಿಮಗ್ನಾಂ ಪೃಥಿವೀಂ ಜಲೇ ।
ಮಗ್ನಾಂ ಸಮುದ್ಧಧಾರಾಶು ನ್ಯಧಾಚ್ಚ ಸಲಿಲೋಪರಿ ॥ ೪೪ ॥

ತಸ್ಯೋಪರಿ ಜಲೌಘಸ್ಯ ಮಹತೀ ನೌರಿವ ಸ್ಥಿತಾ ।
ವಿತತತ್ವಾಚ್ಚ ದೇಹಸ್ಯ ಮಹೀ ಯಾತಿ ನ ಸಂಪ್ಲವಂ ॥ ೪೫ ॥

---

೪೦. ಇಂತಹ ನಿನ್ನನ್ನು ನಾನೆಂತು ಸ್ತುತಿಸಲಿ ? ಓ ಪರಮೇಶ್ವರಿಯೇ ! ಪ್ರಸನ್ನಳಾಗು. ಓ ಜಗನ್ಮಾತೆಯೇ ! ಇದೋ ನಿನಗೆ ನಮಿಸುವೆನು, ನಾರಾಯಣನನ್ನು ಬೇಗನೆ ಎಚ್ಚರಗೊಳಿಸು.

೪೧-೪೨. ಹೀಗೆ ಸೃಷ್ಟಿಕರ್ತನಾದ ಬ್ರಹ್ಮನು ಸ್ತುತಿಸಲು, ಆದಿಮಾಯೆಯು ವಿಷ್ಣುವಿನ ಕಣ್ಣು, ಮುಖ, ಮೂಗು, ಬಾಹು, ಹೃದಯ ಇವುಗಳಿಂದ ಹೊರಹೊರಟು ರಜೋಗುಣಮಯವಾದ ಮೂರ್ತಿಯನ್ನು ಧರಿಸಿ, ಬ್ರಹ್ಮನಿಗೆ ಗೋಚರಳಾದಳು.

೪೩-೪೪. ಬಳಿಕ ವಿಷ್ಣುವು ನಿದ್ರೆಯಿಂದ ಎಚ್ಚತ್ತು ಸರ್ಪಶಯನದಿಂದ ಎದ್ದು, ಸೃಷ್ಟಿಸಲು ಇಚ್ಛಿಸಿ, ವರಾಹರೂಪವನ್ನು ಧರಿಸಿ, ಜಲದಲ್ಲಿ ಮುಳುಗಿಹೋಗಿರುವ ಭೂಮಿಯನ್ನು ನೀರಿನಿಂದ ಮೇಲಕ್ಕೆ ತಂದು ನಿಲ್ಲಿಸಿದನು.

೪೫. ಆ ಜಲರಾಶಿಯಮೇಲೆ ದೊಡ್ಡ ಹಡಗಿನಂತೆ ಆ ಭೂಮಿಯು ನಿಂತಿತು. ಅದರ ಶರೀರವು ವಿಶಾಲವೂ, ದೊಡ್ಡದೂ ಆದುದರಿಂದ ನೀರಿನಮೇಲೆ ಚಲಿಸದೆ ಸ್ಥಿರವಾಗಿ ನಿಂತಿತು.

ತತೋ ಹರಿಃ ಕ್ಷಿತಿಂ ಗತ್ವಾ ತೋಯರಾಶಿಂ ಸ್ವಮಾಯಯಾ ।
ಸಂಹೃತ್ಯ ಜಂತುಸ್ಥಿತಯೇ ಪ್ರವೃತ್ತಸ್ಸ್ವಯಮೇವ ಹಿ ॥ ೪೬ ॥

ಅನಂತೋಽಪಿ ಯಥಾಪೂರ್ವಂ ತಥಾ ಗತ್ವಾ ಕ್ಷಿತೇಸ್ತಲಂ ।
ಪೃಥಿವೀಂ ಧಾರಯಾಮಾಸ ಕೂರ್ಮಸ್ಯೋಪರಿ ಸಂಸ್ಥಿತಃ ॥ ೪೭ ॥

ತತೋ ಬ್ರಹ್ಮಾ ಸಮುತ್ಪಾದ್ಯ ಸರ್ವಾನೇವ ಪ್ರಜಾಪತೀನ್ ।
ಜಗದುತ್ಪಾದಯಾಮಾಸ ಸರ್ವಲೋಕಪಿತಾಮಹಃ ॥ ೪೮ ॥

ಬ್ರಹ್ಮಾ ವಾ ಕುರುತೇ ಸೃಷ್ಟಿಂ ಯದಾನ್ಯೇ ವಾಪಿ ಕುರ್ವತೇ ।
ದಕ್ಷಾದ್ಯಾಸ್ತು ಪ್ರಜಾಪಾಲಾಃ ಸ್ವಯಮೇವ ತದಿಚ್ಛಯಾ ॥ ೪೯ ॥

ಪರಬ್ರಹ್ಮಸ್ವರೂಪೀ ಯಃ ಸೋಽನುಗೃಹ್ಣಾತಿ ಸಂತತಂ ।
ಪ್ರಕೃತಿಶ್ಚಾನುಗೃಹ್ಣಾತಿ ಮಹಾಭೂತಾನಿ ಪಂಚ ನೈ ॥ ೫೦ ॥

---

೪೬. ಅನಂತರ ವಿಷ್ಣುವು ಭೂಮಿಗೆ ಹೋಗಿ ಜಲರಾಶಿಯನ್ನು ತನ್ನ ಮಾಯಾ ಶಕ್ತಿಯಿಂದ ಉಪಸಂಹರಿಸಿ ಭೂಮಿಯ ಪ್ರಾಣಿಗಳನ್ನು ಸಲಹುವ ಕಾರ್ಯದಲ್ಲಿ ತಾನೇ ಸ್ವಯಂ ಪ್ರವೃತ್ತನಾದನು.

೪೭. ಆದಿಶೇಷನೂ ಸಹ ಮೊದಲಿನಂತೆ ಭೂಮಿಯ ಕೆಳಭಾಗಕ್ಕೆ ಹೋಗಿ ಕೂರ್ಮನ ಬೆನ್ನಿನಮೇಲೆ ನಿಂತು, ಭೂಮಿಯನ್ನು ತನ್ನ ಪೆಡೆಗಳಿಂದ ಧರಿಸಿ ನಿಂತನು.

೪೮. ಅನಂತರ ಸರ್ವಲೋಕಕ್ಕೆ ಪಿತಾಮಹನಾದ ಬ್ರಹ್ಮನು, ದಕ್ಷನೇ ಮೊದಲಾದ ಪ್ರಜಾಪತಿಗಳೆಂಬ ಸೃಷ್ಟಿಕರ್ತರನ್ನು ಸೃಷ್ಟಿಸಿ ಅವರ ಮೂಲಕ ಸಕಲ ಜಗತ್ತನ್ನೂ ಸೃಷ್ಟಿಸಿದನು.

೪೯. ಬ್ರಹ್ಮನೂ ಸೃಷ್ಟಿಸುವನು, ಅವನ ಇಚ್ಛೆಯಂತೆ ದಕ್ಷನೇ ಮೊದಲಾದ ನವಬ್ರಹ್ಮರೂ ಸೃಷ್ಟಿಸುವರು.

೫೦. ಪರಬ್ರಹ್ಮನ ಅನುಗ್ರಹದಿಂದಲೇ ಪ್ರಕೃತಿಯೂ, ಐದು ಮಹಾಭೂತಗಳೂ ಈ ಸೃಷ್ಟಿಯಲ್ಲಿ ಪ್ರೇರಿತಗಳಾಗಿರುವುವು.

ಪುರುಷಾಂಶ್ಚಾನುಗೃಹ್ಣಾತಿ ತಥೈವ ಮಹದಾದಯಃ ।
ಈಶ್ವರೇಚ್ಛಾನ್ವಧಿಷ್ಠಾನಾತ್ಪುರುಷಾದಪ್ಯಸಂಚಯಾತ್ ॥ ೫೧ ॥

ಪುರುಷಾಣಾಮಧಿಷ್ಠಾನಾನ್ಮಹಾಭೂತಗಣಸ್ಯ ಚ ।
ತಥೈವ ಮಹದಾದೀನಾಂ ಕಾಲಸ್ಯ ಚ ಮಹಾತ್ಮನಃ ॥ ೫೨ ॥

ಅಧಿಷ್ಠಾನಾತ್ಪ್ರಧಾನಸ್ಯ ಯಚ್ಚ ಕಿಂ ಚ ನ ಜಾಯತೇ ।
ಸ್ಥಾವರಂ ಜಂಗಮಂ ವಾಪಿ ಸ್ಥಿರಂ ವಾಪ್ಯಥ ವಾದ್ಭುತಂ ।
ಸರ್ವಮೇಷಾಮಧಿಷ್ಠಾನಾಜ್ಜಾಯತೇ ದ್ವಿಜಸತ್ತಮಾಃ ॥ ೫೩ ॥

ಇತಿ ವಃ ಕಥಿತಂ ಸರ್ವಂ ಯಥೈವಾದರ್ಶಯತ್ಪುರಾ
ಹರಾಯ ಸೃಷ್ಟಿಸಂಹಾರಕಲ್ಪಾಂತಾನ್ ಭಗವಾನ್ ಹರಿಃ ॥ ೫೪ ॥

---

೫೧. ಪುರುಷನೂ, ಮಹತ್ತತ್ತ್ವವೇ ಮೊದಲಾದವುಗಳೂ ಸೃಷ್ಟಿಗೆ ಸಹಾಯ ಕರುಗಳು. ಹೀಗೆ ಈಶ್ವರೇಚ್ಛೆಯಿಂದಲೂ, ಪ್ರೇರಣೆಯಿಂದಲೂ, ಪುರುಷನಿಂದಲೂ (ಪ್ರಧಾನ) ಸಹ ಪ್ರಕೃತಿ, ಮಹತ್ತತ್ತ್ವ, ಅಂತಃಕರಣ, ಐದು ಭೂತಗಳೂ ಎಂಬ ಈ ಎಂಟು ವಸ್ತುಗಳಿಂದಲೂ ಸೃಷ್ಟಿಯಾಗುವುದು

೫೨-೫೩. ಮೇಲೆ ಹೇಳಿದಂತೆ, ಪುರುಷಾಧಿಷ್ಠಾನ, ಐದು ಮಹಾಭೂತಗಳು, ಮಹದಾದಿತತ್ತ್ವಗಳು, ಕಾಲ, ಪ್ರಕೃತಿಯು ಇವುಗಳ ಅಧಿಷ್ಠಾನದಿಂದ ಸೃಷ್ಟಿಯಾಗದೇ ಇರುವ ಇತರ ಸಮಸ್ತ ಚರಾಚರಪ್ರಪಂಚ ಇವೆಲ್ಲವೂ ತತ್ತ್ವಗಳ ಒಟ್ಟಿನಿಂದ ಕೂಡಿ ಸೃಷ್ಟಿಸಲ್ಪಡುವುವು.

೫೪. ಎಲೈ ಬ್ರಾಹ್ಮಣೋತ್ತಮರೇ ! ಮೇಲೆ ಹೇಳಿದ ವಸ್ತುಗಳ ಆಧಾರ ಮತ್ತು ಪ್ರಭಾವಗಳಿಂದಲೇ ಸಕಲ ಜಗತ್ತೂ ಜನಿಸುವುದು. ಈರೀತಿಯಾಗಿ ನಿಮಗೆ ಭಗವಂತನಾದ ವಿಷ್ಣುವು ಶಂಕರನಿಗೆ ಜಗತ್ತಿನ ಸೃಷ್ಟಿ, ಸಂಹಾರ, ಪ್ರಳಯಗಳನ್ನು ತೋರಿಸಿದಂತೆಯೇ ಹೇಳಿರುವೆನು.

ಯಥಾ ಜಗತ್ಪ್ರಪಂಚಸ್ಯಾಸಾರತಾ ದರ್ಶಿತಾ ಪರಾ ।
ಯಚ್ಚ ಸಾರಂ ದರ್ಶಿತಂ ತನ್ಮತ್ತಃ ಶೃಣ್ವಂತು ವೈ ದ್ವಿಜಾಃ ॥ ೫೫ ॥

॥ ಇತಿ ಶ್ರೀ ಕಾಲಿಕಾಪುರಾಣೇಽಷ್ಟವಿಂಶೋಽಧ್ಯಾಯಃ ॥

---

೫೫. ಅಲ್ಲದೆ ಪ್ರಪಂಚವು ಅಸಾರವೆಂಬುದನ್ನೂ, ಸಾರವಾದ ವಸ್ತು ಯಾವುದೆಂಬುದನ್ನೂ, ಅದನ್ನು ಶಂಕರನಿಗೆ ಹೇಗೆ ತೋರಿಸಿದನೆಂಬುದನ್ನೂ ಹೇಳುವೆನು, ಎಲ್ಲೆ ಬ್ರಾಹ್ಮಣೋತ್ತಮರೇ! ಸಾವಧಾನದಿಂದ ಕೇಳಿರಿ.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀ ಕಾಲಿಕಾಪುರಾಣೇ ಏಕೋನತ್ರಿಂಶೋಽಧ್ಯಾಯಃ

ಇಪ್ಪತ್ತೊಂಭತ್ತನೆಯ ಅಧ್ಯಾಯವು

॥ ಮಾರ್ಕಂಡೇಯ ಉವಾಚ ॥

ಜಗತ್ಸರ್ವಂ ತು ನಿಃಸಾರಮನಿತ್ಯಂ ದುಃಖಭಾಜನಂ ।
ಉತ್ಪದ್ಯತೇ ಕ್ಷಣಾದೇತತ್ಕ್ಷಣಾದೇತದ್ವಿಪದ್ಯತೇ ॥ ೧ ॥

ತಥೈವೋತ್ಪದ್ಯತೇ ಸಾರಾನ್ನಿಸ್ಸಾರಂ ಜಗದಂಜಸಾ ।
ಪುನಸ್ತಸ್ಮಿನ್ವಿಲೀಯಂತೇ ಮಹಾಪ್ರಲಯಸಂಗಮೇ ॥ ೨ ॥

॥ ಇಪ್ಪತ್ತೊಂಭತ್ತನೆಯ ಅಧ್ಯಾಯವು ॥

೧. ಮಾರ್ಕಂಡೇಯನು ಹೇಳಿದನು :—ಈ ಜಗತ್ತೆಲ್ಲವೂ ಅಸಾರವಾದುದು. ದುಃಖಕ್ಕೆ ನೆಲೆಯು. ಅನಿತ್ಯವು ಎಂದರೆ ಒಂದು ಕ್ಷಣಕಾಲದಲ್ಲಿ ಹುಟ್ಟಿ, ಕ್ಷಣಕಾಲ ಎಂದರೆ ಸ್ವಲ್ಪಕಾಲ ಮಾತ್ರವಿದ್ದು ಪುನಃ ನಾಶವಾಗುವುದು.

೨. ಅಸಾರವಾದ ಈ ಜಗತ್ತು ಸಾರವಾದ ಬ್ರಹ್ಮವಸ್ತುವಿನಿಂದ ಜನಿಸುವುದು. ತಿರುಗಿ ಮಹಾಪ್ರಳಯಕಾಲದಲ್ಲಿ ಸಾರವಾದ ಆ ಬ್ರಹ್ಮವಸ್ತುವಿನಲ್ಲಿಯೇ ಲಯವನ್ನು ಹೊಂದುವುದು.

ಉತ್ಪತ್ತಿಪ್ರಲಯಾಭ್ಯಾಂ ತು ಜಗನ್ನಿಃಸಾರತಾಂ ಹರಿಃ ।
ಶಂಭವೇ ದರ್ಶಯಾಮಾಸ ಭಾವೇನ ಜಗತಾಂ ಪತಿಃ ॥ ೩ ॥

ಏಕಂ ಶಿವಂ ಶಾಂತಮನಂತಮಚ್ಯುತಂ
ಪರಾತ್ಪರಂ ಜ್ಞಾನಮಯಂ ವಿಶೇಷಂ ।
ಅದ್ವೈತಮನ್ಯಕ್ತಮಚಿಂತ್ಯರೂಪಂ
ಸಾರಂ ತ್ವೇಕಂ ನಾಸ್ತಿ ಸಾರಂ ತದನ್ಯತ್ ॥ ೪ ॥

---

೩. ಉತ್ಪತ್ತಿ ಪ್ರಳಯಗಳಿಂದ ಜಗತ್ತು ಅಸಾರವೆಂದು ಜಗದೊಡೆಯನಾದ ವಿಷ್ಣುವು ಶಂಕರನಿಗೆ ತತ್ತ್ವತಃ ತೋರಿಸಿದನು.

೪. ಜಗತ್ತು ನಿಸ್ಸಾರವಾದರೆ ಸಾರವಾದ ವಸ್ತುವಾವುದು ? ಎಂದರೆ, ಮಂಗಳಕರವೂ, ಶಾಂತವೂ ಆದ ಪರಬ್ರಹ್ಮವಸ್ತುವೊಂದೇ ಸಾರಭೂತವಾದುದು. ಅದಕ್ಕೆ ಯಾವವಿಧವಾದ ನಾಶವೂ ಇಲ್ಲ, ಆದ್ಯಂತಗಳಿಲ್ಲ ಎಂದರೆ ದೇಶಕಾಲಾಪರಿಚ್ಛಿನ್ನವಾದುದು. ಆದುದರಿಂದಲೇ ಅದು ಅನಂತವೆಂದು ಹೇಳಲ್ಪಡುವುದು. ದೃಶ್ಯಾದೃಶ್ಯ ಪ್ರಪಂಚಕ್ಕಿಂತಲೂ ಬೇರೆಯಾದ ಸ್ವರೂಪದಿಂದ ಪ್ರಕಾಶಿಸುತ್ತಿರುವುದು. ಜ್ಞಾನ ಸ್ವರೂಪವಾಗಿರುವುದು. ಅದಕ್ಕೆ ಸದೃಶವಾದ ವಸ್ತುವು ಮತ್ತೊಂದಿಲ್ಲ. ಅಲ್ಲದೆ ಸಮಸ್ತ ವಸ್ತುಗಳೂ ಬ್ರಹ್ಮಸ್ವರೂಪವೇ ಆಗಿರುವುದರಿಂದ ಬ್ರಹ್ಮವಸ್ತುವು ಹೊರತು ಬೇರೆ ವಸ್ತುವೇ ಇಲ್ಲ. ಆದುದರಿಂದ ಇದು ಅದ್ವಿತೀಯವೆಂದು ಹೇಳಲ್ಪಡುವುದು. ನಾಮರೂಪಭೇದಗಳೂ, ಗುಣಗಳೂ ಸ್ಥೂಲಸೂಕ್ಷ್ಮಾದಿಭೇದಗಳೂ, ಆಕಾರವೂ ಇವಾವೂ ಇಲ್ಲದೆ ಅವ್ಯಕ್ತರೂಪದಿಂದ ಇರುವುದು. ಆದಕಾರಣವೇ ಇದು ಹೀಗೆಯೇ ಇರುವುದೆಂದು ಮನಸ್ಸಿನಲ್ಲಿ ಚಿಂತಿಸಲು ಸಹ ಆಗುವುದಿಲ್ಲ. ಈ ವಿಷಯದಲ್ಲಿ ಶ್ರುತಿಯು ಹೀಗೆ ಹೇಳುವುದು.—" ಯತೋ ವಾಚೋ ನಿವರ್ತಂತೆ । ಅಪ್ರಾಪ್ಯಮನಸಾಸಹ ॥" ಎಂದರೆ ಪರಬ್ರಹ್ಮನನ್ನು ವಾಕ್ಯಗಳಿಂದ ತಿಳಿಯುವಂತೆ ವರ್ಣಿಸಲು ಸಾಧ್ಯವಿಲ್ಲ. ಮನಸ್ಸು ಸಹ ಇದರ ಸ್ವರೂಪವನ್ನು ಗ್ರಹಿಸಲಾರದು. ಇಂತಹ ಸ್ವರೂಪದಿಂದಿರುವ ವಸ್ತುವು ಇಂದ್ರಿಯಾದಿಗಳಿಗೆ ಗೋಚರವಾಗುವುದಿಲ್ಲ. ಆದುದರಿಂದ ಬ್ರಹ್ಮವೊಂದೇ ಸಾರವು. ಅದು ಹೊರತು ಬೇರೊಂದು ಸಾರವಾದ ವಸ್ತುವೇ ಇಲ್ಲ.

ಯಸ್ಮಾದೇತಜ್ಜಾಯತೇ ವಿಶ್ವಮಗ್ರ್ಯಂ
ಯಸ್ಮಾ ಲ್ಲೀನಂ ಸ್ಯಾತ್ತು ಪಶ್ಚಾತ್ಸ್ಥಿತಂ ಚ ।
ಆಕಾಶವನ್ಮೇಘಜಾಲಸ್ಯ ವೃತ್ತ್ಯಾ
ಯದ್ವಿಶ್ವಂ ವೈ ಧ್ರಿಯತೇ ತತ್ಸಾರಂ ॥ ೫ ॥

ಅಷ್ಟಾಂಗಯೋಗೈರ್ಯದವಾಪ್ತುಮಿಚ್ಛ-
ನ್ಯೋಗೀ ಪುನಾತ್ಯಾತ್ಮರೂಪಂ ಸದೈವ ।
ನಿವರ್ತತೇ ಪ್ರಾಪ್ಯ ಯನ್ನೇಹ ಲೋಕೇ
ತದ್ವೈ ಸಾರಂ ಸಾರಮನ್ಯನ್ನ ಚಾಸ್ತಿ ॥ ೬ ॥

ಸಾರೋ ದ್ವಿತೀಯೋ ಧರ್ಮಸ್ತು ಯೋ ನಿತ್ಯಪ್ರಾಪ್ತಯೇ ಭವೇತ್ ।
ಯೋ ವೈ ನಿವರ್ತಕೋ ನಾಮ ತನ್ನಾಸಾರಃ ಪ್ರವರ್ತಕಃ ॥ ೭ ॥

---

೫. ಆ ಸಾರವಾದ ಬ್ರಹ್ಮವಸ್ತುವಿನಿಂದಲೇ ಈ ಜಗತ್ತು ಜನಿಸುವುದು. ಪ್ರಳಯಕಾಲದಲ್ಲಿ ಆ ವಸ್ತುವಿನಲ್ಲಿಯೇ ಲೀನವಾಗುವುದು. ಮಧ್ಯದಲ್ಲಿ ಆ ಬ್ರಹ್ಮವಸ್ತುವಿನಲ್ಲಿಯೇ ಇರುವುದು ಎಂದರೆ, ಆ ಬ್ರಹ್ಮವಸ್ತುವೇ ಪ್ರಪಂಚರೂಪವಾಗಿ ಕಾಣುವುದು. ಆಕಾಶವು ಮೇಘಸಮೂಹವನ್ನು ಧರಿಸುವಂತೆ ಈ ಜಗತ್ತನ್ನು ಬ್ರಹ್ಮವಸ್ತುವು ಧರಿಸುವುದು.

೬. ಯಾವ ಬ್ರಹ್ಮವಸ್ತುವನ್ನು ಪಡೆಯಲಿಚ್ಛಿಯಿಂದ ಯೋಗಿಯು ಯಮ ನಿಯಮ ಮೊದಲಾದ ಎಂಟು ಯೋಗಾಂಗಗಳ ಅನುಷ್ಠಾನದಿಂದ ಚಿತ್ತವನ್ನು ಶುದ್ಧವಾಗಿ ಮಾಡಿಕೊಳ್ಳುವನೋ ಮತ್ತು ಮುಂದೆ ಅದೇ ಯೋಗಮಾರ್ಗದಿಂದ ಆ ಬ್ರಹ್ಮವನ್ನು ಪಡೆದು ತಿರುಗಿ ಜನಿಸುವುದಿಲ್ಲವೋ ಅಂತಹ ಬ್ರಹ್ಮವಸ್ತುವೊಂದೇ ಸಾರವಾದುದು. ಇನ್ನಾವುದೂ ಅಲ್ಲ.

೭. ಸಂಸಾರದಲ್ಲಿ ನಿವೃತ್ತಿಯನ್ನು ಹುಟ್ಟಿಸಿ, ಮನುಷ್ಯನಿಗೆ ಮುಂದೆ ನಿತ್ಯವೂ ಬ್ರಹ್ಮವಸ್ತುವನ್ನು ಪಡೆಯುವುದಕ್ಕೆ ಸಾಧಕವಾಗುವಂತಹ ಧರ್ಮವೂ ಎರಡನೆಯ ಸಾರವಾದ ವಸ್ತುವು. ಸಂಸಾರದಲ್ಲಿ ಪ್ರವೃತ್ತಿಯನ್ನು ಹುಟ್ಟಿಸುವ ಧರ್ಮವು ಸಾರವಾದುದಲ್ಲ.

ಧರ್ಮಂ ಶನೈಃ ಸಂಚಿನುಯಾದ್ವಲ್ಮೀಕೋ ಮೃತ್ತಿಕಾಂ ಯಥಾ ।
ಸಹಾಯಾರ್ಥಂ ಪರೇ ಲೋಕೇ ಪೂರ್ವಪಾಪವಿಮುಕ್ತಯೇ ॥ ೮ ॥

ಏಕೋ ಧರ್ಮಃ ಪರಂ ಶ್ರೇಯಃ ಸರ್ವಸಂಸಾರಕರ್ಮಸು ।
ಇತರೇ ತು ತ್ರಯೋ ಧರ್ಮಾ ಜಾಯಂತೇಽರ್ಥಾದಯೋಽಪರೇ ॥ ೯ ॥

ವರಂ ಪ್ರಾಣಪರಿತ್ಯಾಗಃ ಶಿರಸೋ ವಾಽಥ ಕರ್ತನಂ ।
ನ ತು ಧರ್ಮಪರಿತ್ಯಾಗೋ ಲೋಕೇ ವೇದೇ ಚ ಗರ್ಹಿತಃ ॥ ೧೦ ॥

ಧರ್ಮೇಣ ಧ್ರಿಯತೇ ಲೋಕೋ ಧರ್ಮೇಣ ಧ್ರಿಯತೇ ಜಗತ್ ।
ಧರ್ಮೇಣೈವ ಸುರಾಃ ಸರ್ವೇ ಸುರತ್ವಮಗಮನ್ಪುರಾ ॥ ೧೧ ॥

---

೮. ಹುತ್ತವು ಮಣ್ಣನ್ನು ಸಂಗ್ರಹಿಸುವಂತೆ ಧರ್ಮವನ್ನು ಸಾಧ್ಯವಾದಷ್ಟು ಸಂಗ್ರಹಿಸಬೇಕು. ಆ ಧರ್ಮವು ಪರಲೋಕಪ್ರಾಪ್ತಿಗೆ ಸಾಧನವಾಗುವುದಲ್ಲದೆ ಈ ಜನ್ಮದಲ್ಲಿ ಪಾಪನಾಶವನ್ನೂ ಮಾಡುವುದು.

೯. ಸಂಸಾರದಲ್ಲಿ ಧರ್ಮವೊಂದೇ ಶ್ರೇಷ್ಠವಾದುದು. ಮಿಕ್ಕ ಅರ್ಥ, ಕಾಮ, ಮೋಕ್ಷಗಳು ಧರ್ಮದಿಂದಲೇ ಜನಿಸುತ್ತವೆ.

೧೦. ಪ್ರಾಣವನ್ನಾದರೂ ಬಿಡಬಹುದು, ತಲೆಯನ್ನಾದರೂ ಕತ್ತರಿಸಿಕೊಳ್ಳ ಬಹುದು. ಆದರೆ ತನ್ನ ಧರ್ಮವನ್ನು ಮಾತ್ರ ಬಿಡಬಾರದು. ಆ ಧರ್ಮತ್ಯಾಗವು ಲೋಕದಲ್ಲಿಯೂ, ವೇದದಲ್ಲಿಯೂ ಬಹು ನಿಂದಿತವಾಗಿರುವುದು.

೧೧. ಧರ್ಮದಿಂದಲೇ ಲೋಕವೂ, ಜಗತ್ತೂ ನಿಂತಿರುವುವು. ಧರ್ಮದಿಂದಲೇ ದೇವತೆಗಳು ಹಿಂದೆ ದೇವತ್ವವನ್ನು ಪಡೆದರು. ಈ ಅರ್ಥದಲ್ಲಿ ಶ್ರುತಿಯು ಹೀಗೆ ಹೇಳುತ್ತಿರುವುದು—" ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ । (ತೈ. ಉ.) ಎಂದರೆ ಧರ್ಮವೇ ಸಮಸ್ತ ಪ್ರಪಂಚಕ್ಕೂ ಆಧಾರವಾಗಿರುವುದು.

ಧರ್ಮಶ್ಚತುಷ್ಪಾದ್ಭಗವಾನ್ ಜಗತ್ಪಾಲಯತೇಽನಿಶಂ ।
ಸ ಏವ ಮೂಲಂ ಪುರುಷೋ ಧರ್ಮ ಇತ್ಯಭಿಧೀಯತೇ ॥ ೧೨ ॥

ಸರ್ವಂ ಕ್ಷರತಿ ಲೋಕೇಽಸ್ಮಿನ್ ಧರ್ಮೋ ನೈವ ಚ್ಯುತೋ ಭವೇತ್ ।
ಧರ್ಮಾದ್ಯೋ ನ ವಿಚಲತಿ ಸ ಏವಾಕ್ಷರ ಉಚ್ಯತೇ ॥ ೧೩ ॥

ಏತದ್ವಃ ಕಥಿತಂ ಸಾರಂ ನಿಃಸಾರಂ ಸಕಲಂ ಜಗತ್ ।
ಯಥಾ ಸ್ವಯಂ ದದರ್ಶಾಸೌ ಶಂಭುರ್ಜ್ಞಾನೇನ ಸ್ವೇಽನ್ತರೇ ॥ ೧೪ ॥

ಏತದ್ವೈ ದರ್ಶಯಾಮಾಸ ಸ ವಿಷ್ಣುರ್ಜಗತಾಂ ಪತಿಃ ।
ಸ್ವಯಂ ಜಗ್ರಾಹ ಮನಸಾ ಧ್ಯಾನೇನಾತ್ಮನಿ ಶಂಕರಃ ॥ ೧೫ ॥

---

೧೨. ಧರ್ಮಪುರುಷನು ಸಾಕ್ಷಾತ್ ಭಗವಂತನೇ ಆಗಿರುವನು. ಅವನಿಗೆ ನಾಲ್ಕು ಪಾದಗಳಿರುವುವು, ಜಗತ್ತನ್ನು ಪಾಲಿಸುವವನು ಅವನೇ. ಅವನೇ ಜಗತ್ತಿಗೆ ಮೂಲವು.

೧೩. ಲೋಕದಲ್ಲಿರುವುದೆಲ್ಲವೂ ನಷ್ಟವಾಗುವುದು. ಆದರೆ ಧರ್ಮವು ಮಾತ್ರ ಎಂದಿಗೂ ನಷ್ಟವಾಗುವುದಿಲ್ಲ. ಯಾವನು ನಿತ್ಯವಾದ ಧರ್ಮವನ್ನು ಬಿಡದೆ ಪಾಲಿಸುವನೋ ಅವನಿಗೆ ನಾಶವೆಂಬುದಿಲ್ಲ.

೧೪. ಎಲ್ಲಿ ಮುನಿಗಳೇ ! ಹೀಗೆ ಸಾರವಾದ ವಸ್ತು ಯಾವುದೆಂಬುದನ್ನೂ ಎಲ್ಲಾ ನಿಸ್ಸಾರವೆಂಬುದನ್ನೂ ಶಂಕರನು ತನ್ನ ಹೃದಯದಲ್ಲಿ ಹೇಗೆ ತಿಳಿದನೋ ಅದರಂತೆಯೇ ನಿಮಗೆ ಎಲ್ಲವನ್ನೂ ವಿವರಿಸಿ ಹೇಳಿರುವೆನು.

೧೫. ಇದನ್ನೇ ಜಗದೊಡೆಯನಾದ ನಾರಾಯಣನು ಶಂಕರನಿಗೆ ತೋರಿಸಿದನು. ಆ ಶಂಕರನೂ ಸಹ ಅದೆಲ್ಲವನ್ನೂ ತನ್ನಲ್ಲಿ ಮನಸ್ಸಿನಿಂದಲೂ, ಧ್ಯಾನದಿಂದಲೂ ತಿಳಿದುಕೊಂಡನು.

ಸಾರಂ ತತ್ತ್ವಂ ಪರಮಂ ನಿಷ್ಕಲಂ ಯ-
ನ್ನೈತಾರ್ಯ ಹೀನಂ ಮೂರ್ತಿಮಾನ್ಧರ್ಮ ಏಷಃ ।
ಸಾರೋಽನ್ಯೋಽಸೌ ಸಾರಹೀನಂ ತದನ್ಯ-
ಜ್ಞಾಜ್ಞತ್ವೈವೇತ್ಥಂ ಯಾತಿ ನಿತ್ಯಂ ಮಹಾಧೀಃ ॥ ೧೬ ॥

॥ ಇತಿ ಶ್ರೀ ಕಾಲಿಕಾಪುರಾಣೇ ಏಕೋನತ್ರಿಂಶೋಽಧ್ಯಾಯಃ ॥

---

೧೬. ಆ ಬ್ರಹ್ಮತತ್ತ್ವವು ಶರೀರಾದ್ಯಾಕಾರವಿಲ್ಲದುದು. ಅವಯವರಹಿತವಾದುದು ಯಾವಾಗಲೂ ನಾಶವಿಲ್ಲದ, ಶ್ರೇಷ್ಠವಾದ ಸಾರವಸ್ತುವು ಅದೊಂದೇ ಆಗಿರುವುದು. ಅದನ್ನು ಬಿಟ್ಟು ಬೇರೆ ಸಾರವಾದ ವಸ್ತುವಿಲ್ಲ. ಧರ್ಮವೂ (ಧರ್ಮ ಪುರುಷನು) ಸಹ ಆ ಸಾರವಸ್ತುವಾದ ಪರಬ್ರಹ್ಮನ ಮೂರ್ತಿಮತ್ತಾದ ಸ್ವರೂಪವಾಗಿರುವುದರಿಂದ ಬ್ರಹ್ಮದಂತೆ ಅದೂ ಸಾರವಸ್ತುವೇ ಆಗಿರುವುದು. ಇವು ಹೊರತು ಸಾರವಾದ ಬೇರೆ ವಸ್ತುವು ಈ ಜಗತ್ತಿನಲ್ಲಿಲ್ಲ. ಈರೀತಿ ಇದರ ರಹಸ್ಯವನ್ನು ತಿಳಿದವನು ನಿತ್ಯವಾದ ಬ್ರಹ್ಮವಸ್ತುವನ್ನು ಪಡೆಯುವನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

Printed by G. BASAPPA, proprietor,
SREE BASAVESWARA ELECTRIC PRESS,
Devaraj Market Buildings, Mysore.